ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೯



ಸಂಪಾದಕರು

ಡಾ. ಸಿ.ಜಿ. ಬೆಟಸೂರಮಠ
ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು
೨೦೧೪

ವಿಜಯನಗರ ಅಧ್ಯಯನ

ಸಂಪುಟ – ೧೯

ಸಂಪಾದಕರು

ಡಾ. ಸಿ.ಜಿ. ಬೆಟಸೂರಮಠ

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ವಸ್ತುಪ್ರದರ್ಶನ ಆವರಣ, ಮೈಸೂರು – 570 010

2014

ವಿಜಯನಗರ ಅಧ್ಯಯನ

ಸಂಪುಟ – 19

ಪ್ರಕಾಶಕರು:

ಆಯುಕ್ತರು

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – 570 010. ದೂರವಾಣಿ – 0821–2424673, 2424674

ಮೊದಲ ಮುದ್ರಣ 2014

ಪುಟಗಳು 282

ಪ್ರತಿಗಳು 500

ಬೆಲೆ: ₹ 248.00

ಮುಖಪುಟ : ಅಚ್ಯುತರಾಯ ದೇವಾಲಯ

ಮುಖಪುಟ ವಿನ್ಯಾಸ: ಮೇಲುಕೋಟೆ ಎನ್. ಮುರಳೀಧರ್
ಅಕ್ಷರ ಜೋಡಣೆ: ಹೇಮಲತಾ
ಮುದ್ರಣ: ಸುಹಾಸ್ ಗ್ರಾಫಿಕ್ಸ್, ಬೆಂಗಳೂರು

✦✦✦✦✦✦✦

VIJAYANAGARA ADHYAYANA

Vol - 19

Publisher:

Commissioner

Department of Archaeology, Museums and Heritage
Exhibition Complex, Mysore - 570 010 Ph: 0821-2424673, 2424674

First Edition 2013

Copies: 500

Pages: 282

Price: ₹ 248.00

Cover Photo: Achyutaraya Temple

Cover Page Design: Melukote N. Muralidhar
DTP & Page Layout: Hemalatha
Printed at: Suhaas Graphics, Bangalore

ಶ್ರೀಮತಿ ಉಮಾಶ್ರೀ
ಕನ್ನಡ ಮತ್ತು ಸಂಸ್ಕೃತಿ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

ಕರ್ನಾಟಕ ಸರ್ಕಾರ

ದೂರವಾಣಿ ಕಛೇರಿ : 22255282
22033469
ಕೊಠಡಿ ಸಂಖ್ಯೆ : 252, 2ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂದೇಶ

ವಿಜಯನಗರ ಸಾಮ್ರಾಜ್ಯ ಅಂದಿನ ಕಾಲಘಟ್ಟದಲ್ಲಿ ಕೇವಲ ಭಾರತಖಂಡದಲ್ಲಿ ಅಲ್ಲದೆ ಸಿಲೋನ್, ಮಧ್ಯ ಏಷಿಯಾ ರಾಷ್ಟ್ರಗಳಲ್ಲಿ ಮತ್ತು ಯೂರೋಪಿನ ರಾಷ್ಟ್ರಗಳಲ್ಲಿ ಹೆಸರುವಾಸಿಯಾದ ಮಹತ್ವದ ಸಾಮ್ರಾಜ್ಯವಾಗಿತ್ತು. ವಿಜಯನಗರ ಸಾಮ್ರಾಜ್ಯದ ವಿವಿಧ ಅರಸರುಗಳ ಆಳ್ವಿಕೆಯಲ್ಲಿ ಸಾಮ್ರಾಜ್ಯವನ್ನು ಸಂದರ್ಶಿಸಿದ ಪ್ರವಾಸಿಗರು, ನಮ್ಮ ನಾಡಿನ, ವೈಭವ, ಕಲೆ, ಸಂಪ್ರದಾಯ, ಹಬ್ಬ ಹರಿದಿನಗಳು, ರಾಜನ ವ್ಯಕ್ತಿತ್ವ, ಆಡಳಿತ ಕ್ರಮ, ಸೈನ್ಯ, ಅದರ ಚಲನವಲನಗಳು ಇತ್ಯಾದಿ ಹತ್ತು ಹಲವು ವಿಷಯಗಳ ವಿವರಗಳನ್ನು ದಾಖಲಿಸಿದ್ದಾರೆ.

ನಮ್ಮ ಸರ್ಕಾರದ ಕನ್ನಡ ಸಂಸ್ಕೃತಿ ಸಚಿವಾಲಯದ ಇಲಾಖೆಗಳಲ್ಲಿ ಒಂದಾದ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಕಳೆದ ಹತ್ತೊಂಬತ್ತು ವರ್ಷಗಳಿಂದ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಗಳನ್ನು ಆಯೋಜಿಸಿಕೊಂಡು ಬರುತ್ತಿದೆಯಲ್ಲದೆ, ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳನ್ನು ಗ್ರಂಥರೂಪದಲ್ಲಿ ಸಂಪಾದಿಸಿ, ಅದನ್ನು ನಿರಂತರವಾಗಿ ಹೊರತರುವುದು ಹೆಮ್ಮೆಯ ಸಂಗತಿ.

ಈ ಬಗೆಯ ಸಂಶೋಧನಾ ಕಾರ್ಯ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದ ಮತ್ತಾವ ರಾಜ್ಯದ ರಾಜ್ಯಗಳಲ್ಲಿ ನೆರವೇರದಿರುವುದನ್ನು ನಮ್ಮ ಇಲಾಖೆ ಸಾಧ್ಯವಾಗಿಸಿ ತೋರಿಸಿರುವುದು ಪ್ರಶಂಸನೀಯ. ಇದಕ್ಕಾಗಿ ವಿಶೇಷವಾಗಿ ವಿಚಾರ ಸಂಕಿರಣದ ಆಯೋಜಕರಾದ ಡಾ. ಸಿ.ಜಿ. ಬೆಟಸೂರಮಠ, ಆಯುಕ್ತರು ಮತ್ತು ಇಲಾಖೆಯ ಸಿಬ್ಬಂದಿಗಳನ್ನು ಹಾಗೂ ಸಂಪುಟದ ಎಲ್ಲಾ ಸಂಪಾದಕರುಗಳನ್ನು ಅಭಿನಂದಿಸುತ್ತೇನೆ.

ಈ ಸಂಪುಟವನ್ನು ಓದುಗರು ಹಾಗೂ ಇತಿಹಾಸಜ್ಞರು ಮತ್ತು ಅಧ್ಯಯನಿಗಳು ಆದರದಿಂದ ಸ್ವಾಗತಿಸುತ್ತಾರೆಂದು ಭಾವಿಸಿದ್ದೇನೆ.

Uma

(ಉಮಾಶ್ರೀ)

ಪ್ರಸ್ತಾವನೆ

ಒಂದು ಸಾಮ್ರಾಜ್ಯ ಎಷ್ಟು ವಿಸ್ತಾರವಾಗಿತ್ತು, ಎಷ್ಟು ವರ್ಷಗಳ ಕಾಲ ಅಧಿಕಾರದಲ್ಲಿತ್ತು, ಎಷ್ಟು ಅಧಿಕಾರ ಸಾಧಿಸಿತ್ತು ಎಂದೆಲ್ಲಾ ಇತಿಹಾಸ ಗ್ರಂಥಗಳಲ್ಲಿ ಓದುತ್ತೇವೆ. ಆದರೆ, ಅದೇ ಸಾಮ್ರಾಜ್ಯದ ಅಳಿವಿನ ನಂತರ ಆ ಸಾಮ್ರಾಜ್ಯದ ಕುರಿತಾದ ಅಧ್ಯಯನ ಎಷ್ಟು ನಡೆದಿದೆ, ಅದರ ಆಯಾಮಗಳೇನು, ಅಧ್ಯಯನ ಸಾಗಿಸುವ ಮಾರ್ಗ ಸರಿಯಿದೆಯೇ ಅಥವಾ ಅದನ್ನು ಹೇಗೆ ಸರಿಪಡಿಸಿಕೊಂಡು ಸಂಶೋಧನೆಯನ್ನು ಮುನ್ನಡೆಸಿಕೊಂಡು ಹೋಗಬೇಕೆನ್ನುವ ವಿಷಯ ಕುರಿತಾದ ಅರಿವು ಈವರೆಗೆ ಅಧ್ಯಯನನಿರತ ಸಂಶೋಧಕರ ನಡುವೆ ನಡೆಯದಿರುವುದು ಒಂದು ಕೊರತೆಯಾಗಿ ಕಂಡುಬರುತ್ತಿದೆ. ಕರ್ನಾಟಕ ಸಾಮ್ರಾಜ್ಯ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ಕೇರಳ, ತಮಿಳುನಾಡು, ಪಾಂಡಿಚೇರಿ ಹಾಗೂ ಆಂಧ್ರಪ್ರದೇಶದ ಬಹುಭಾಗವನ್ನು ಒಳಗೊಂಡಿದ್ದರಿಂದ ಕರ್ನಾಟಕ ಸಾಮ್ರಾಜ್ಯದ ಬಗೆಗಿನ ಅಧ್ಯಯನಗಳು ಈ ಎಲ್ಲಾ ಪ್ರಾದೇಶಿಕ ಪ್ರಾಂತ್ಯಗಳಲ್ಲಿ ಪ್ರಾದೇಶಿಕ ಭಾಷಾ ಮಟ್ಟದಲ್ಲಿ ಸಹ ನೆರವೇರುತ್ತಿದೆ. ಇದಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆಂಗ್ಲಭಾಷೆಯಲ್ಲಿ ಸಾಮ್ರಾಜ್ಯದ ಬಗೆಗಿನ ಅಧ್ಯಯನ ನಡೆಯುತ್ತಲೇ ಇದೆ. ಇದೆಲ್ಲವನ್ನು ಗಮನಿಸುವ ಮತ್ತು ಇತರ ಪ್ರದೇಶಗಳಲ್ಲಿ ನಡೆಯುತ್ತಿರುವ ಸಂಶೋಧನೆಯನ್ನು ಗಮನದಲ್ಲಿ ಇಟ್ಟುಕೊಂಡು ಸಂಶೋಧನೆಯನ್ನು ಮುಂದುವರಿಸುವ ಅವಶ್ಯಕತೆ ಸಂಶೋಧಕ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಎದುರಾಗುತ್ತಿವೆ. ವಿಜಯನಗರ ಅಧ್ಯಯನ ಮಾಲಿಕೆಯನ್ನು ಗಮನಿಸಿದಾಗ ಈ ಮೇಲೆ ಹೇಳಿದ ಸಮಷ್ಟಿಯ, ತುಲನಾತ್ಮಕ ದೃಷ್ಟಿಯ ಕೊರತೆ ಎದ್ದು ಕಾಣುತ್ತವೆ. ಇವೆಲ್ಲಾ ಒಂದು ವರ್ಷದಲ್ಲಿ ಅಥವಾ ಒಂದೇ ಸಂಚಿಕೆಯ ಕಾಲವ್ಯಾಪ್ತಿಯಲ್ಲಿ ಬದಲಾಗಬೇಕೆಂದು ಬಯಸುವುದು ಅತಿಯಾಸೆ ಎನಿಸುತ್ತದೆ. ಅದು ಒಂದು ತಲೆಮಾರಿನ, ವಿದ್ವಾಂಸರು ಕ್ರಮೇಣ ನೇಪತ್ಯಕ್ಕೆ ಸರಿಯುತ್ತಿದ್ದು ಯುವ ವಿದ್ವಾಂಸರು ಈ ಸ್ಥಾನವನ್ನು ತುಂಬುತ್ತಿರುವುದರಿಂದ ಈ ಅಪೇಕ್ಷೆ ಅನಿವಾರ್ಯವೆಂದು ಭಾವಿಸಿ ಅಭಿಪ್ರಾಯಪಡಲಾಗಿದೆ. ಅಲ್ಲದೆ ಕಲಿಯುವ ವಿದ್ವಾಂಸರ ಹಿರಿಯ ವಿದ್ವಾಂಸರ, ಅದರಲ್ಲಿ ಮಹತ್ವದ ಸಂಶೋಧನೆ ಕೈಗೊಂಡ ಮೇರು ವಿದ್ವಾಂಸರ ಕೃತಿಗಳನ್ನು ವಿಮರ್ಶೆ ಮಾಡುವ ಪ್ರಯತ್ನಗಳು ಕಂಡುಬರುತ್ತಿವೆ. ಇದು ಸಲ್ಲದೆಂಬ ಅಭಿಪ್ರಾಯವಲ್ಲ. ಅಂತಹ ಮಹನೀಯರ ಸಾಧನೆಗಳನ್ನು ವಿಮರ್ಶೆಗೆ ಒಳಪಡಿಸುವ ಪೂರ್ವದಲ್ಲಿ ನಾವು ನಿಂತ ನೆಲೆ ಮತ್ತು ಅದರ ದೃಢತೆ, ನಮ್ಮ ಪಕ್ವತೆ, ನಾವು ಸಾಧಿಸಿರುವ ಪ್ರಗತಿ ಮತ್ತು ಸಂಶೋಧನಾ ನೆಲೆಯಲ್ಲಿ ನಮ್ಮ ಸ್ಥಾನ ಮಾನಗಳನ್ನು ಅರ್ಥಮಾಡಿಕೊಂಡು ಈ ಬಗೆಯ ಕಾರ್ಯಕ್ಕೆ ಇಳಿಯುವುದು ಸೂಕ್ತವೆಂದು ಭಾವಿಸಲಾಗಿದೆ.

ವಿಜಯನಗರ ಅಧ್ಯಯನ ಮಾಲಿಕೆ ಪ್ರಾರಂಭವಾಗಿ 19 ಸಂಚಿಕೆಗಳು ಈವರೆಗೆ ಪ್ರಕಟವಾಗಿದೆ. ಪ್ರತಿ ಸಂಪುಟದಲ್ಲೂ ಹೊಸ ಹೊಸ ವಿಚಾರಗಳು ನೂತನ ಶೋಧಗಳು ವಿಮರ್ಶೆಗಳು ಕಂಡುಬರುತ್ತಲೇ ಇವೆ. ಈ ಸಂಪುಟದಲ್ಲಿ ನಲವತ್ನಾಲ್ಕು ಲೇಖನಗಳನ್ನು ಅಳವಡಿಸಲಾಗಿದೆ. ಈ ಸಂಪುಟವು ಹಿಂದಿನಂತೆ, ನೂತನ ಶಾಸನಗಳು, ಸಾಮ್ರಾಜ್ಯದ ಸಾಮಾಜಿಕ ಆರ್ಥಿಕ ಸ್ಥಿತಿಯ ಬಗೆಗೆ ಸ್ಥಾನಿಕ ಪ್ರದೇಶಗಳ ಮೇಲೆ ಕೇಂದ್ರದ ನೀತಿಯ ಪ್ರಭಾವ ಇತ್ಯಾದಿ ಹಲವಾರು ವಿವರಗಳನ್ನು ಒಳಗೊಂಡಿವೆ. ಇವುಗಳನ್ನು ಆಧರಿಸಿ ವಿಜಯನಗರ ಸಾಮ್ರಾಜ್ಯದ ಬಗೆಗೆ ಹೊಸ ವಿಚಾರಗಳನ್ನು ಅರಿಯಲು ಸಹಾಯಕವಾಗುತ್ತದೆಂದು ಭಾವಿಸಬಹುದಾಗಿದೆ. ಸಂಪುಟವು ಒಳಗೊಂಡಿರುವ ಲೇಖನಗಳು ವಿಚಾರಪ್ರದವೂ ಬೋಧಪ್ರದವೂ, ನೂತನ ಆವಿಷ್ಕಾರಗಳನ್ನು ಒಳಗೊಂಡವುಗಳೂ ಆಗಿ ಮೂಡಿಬಂದಿರುವುದು ಮಹತ್ವದ ವಿಷಯವಾಗಿದೆ.

ಈ ಮಾಲಿಕೆ ಪ್ರಾರಂಭವಾಗಿ 19 ವಸಂತಗಳು ಕಳೆದಿದ್ದರೂ ವಿದ್ವಾಂಸರಲ್ಲಿ ಮತ್ತು ಸಂಶೋಧಕರಲ್ಲಿ ಈ ಮಾಲಿಕೆಯ ಬಗೆಗಿನ ಒಲವು ಅಧಿಕವಾಗುತ್ತಿದೆಯೇ ಹೊರತು ಕಡಿಮೆಯಾಗಿಲ್ಲ. ಮಾಲಿಕೆಯ ಪ್ರಾರಂಭದ

ದಿನಗಳಲ್ಲಿ ಇಪ್ಪತ್ತಕ್ಕೂ ಕಡಿಮೆ ಲೇಖನಗಳು ಮಂಡನೆಯಾಗುತ್ತಿದ್ದರೆ, ಇತ್ತೀಚಿನ ದಿನಗಳಲ್ಲಿ ಮಾಲಿಕೆಯ ವಿಚಾರ ಸಂಕಿರಣದಲ್ಲಿ 50ಕ್ಕೂ ಹೆಚ್ಚು ಪ್ರಬಂಧಗಳು ಮಂಡನೆಯಾಗಿ ಸುದೀರ್ಘವಾದ ಹಾಗೂ ಮಹತ್ವಪೂರ್ಣವಾದ ವೈಚಾರಿಕ ಚರ್ಚೆಗೆ ಈ ಲೇಖನಗಳು ಒಳಗಾಗುತ್ತವೆ. ಅಂತಹ ಲೇಖನಗಳನ್ನು ಅತ್ಯಂತ ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಂಡು ಪ್ರಕಾಶನಕ್ಕೆ ಸಿದ್ಧಪಡಿಸುವ ಕಾರ್ಯ, ಕತ್ತಿಯ ಅಲುಗಿನ ನಡಿಗೆಯಂತೆ. ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಸಂಪಾದಕರು ಕೆಲವೊಂದು ವಿಚಾರಗಳಲ್ಲಿ ಸಾಮಾನ್ಯ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಗ್ರಂಥ ಸಂಪಾದನೆಯ ಮೂಲಭೂತ ಚೌಕಟ್ಟಿನಲ್ಲಿ, ಮಾಲಿಕೆಯ ಮೂಲ ಉದ್ದೇಶಕ್ಕೆ ಪೂರಕವಾಗಿ ಸಂಪಾದನಾ ಕಾರ್ಯ ನಿರ್ವಹಿಸಿದ್ದೇವೆ.

ಇಲಾಖೆಯು ಈ ಮಾಲಿಕೆಯ ವಿಚಾರ ಸಂಕಿರಣಕ್ಕೆ ಆಮಂತ್ರಣ ನೀಡಿದಾಗ, ಅಪಾರವಾದ ಪ್ರೀತಿಯಿಂದ ವಿದ್ವಾಂಸರು ನಮ್ಮ ಕರೆಗೆ ಓಗೊಟ್ಟು ವಿಚಾರ ಸಂಕಿರಣದಲ್ಲಿ ಭಾಗವಹಿಸಿ, ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಅವರೆಲ್ಲರ ಪ್ರೀತಿ ಆದರಗಳಿಗೆ, ಇಲಾಖೆಯ ಪ್ರಕಟಣೆಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಾವು ಋಣಿಗಳಾಗಿದ್ದೇವೆ.

ಸಂಪಾದನೆಯ ಕಾರ್ಯವಾದ ನಂತರ ಸಂಪುಟದ ಅಚ್ಚಿನ ಹಂತದಲ್ಲಿ ಹಲವರು ಸಹಕರಿಸಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ.

ಪ್ರಸ್ತುತ ಸಂಪುಟಕ್ಕೆ ಶುಭ ಹಾರೈಸಿ, ಇಲಾಖೆಯ ಕಾರ್ಯಚಟುವಟಿಕೆಗಳಿಗೆ ಅಪಾರವಾದ ಪ್ರೋತ್ಸಾಹಕೊಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಉಮಾಶ್ರೀಯವರಿಗೂ ನಾವು ಆಭಾರಿಯಾಗಿದ್ದೇವೆ. ಇಲಾಖೆಯ ಸಂಶೋಧನಾ ಮತ್ತು ಪ್ರಕಟಣಾ ಕಾರ್ಯಕ್ಕೆ ನಮಗೆ ಒತ್ತಾಸೆಯಾಗಿ ಬೆಂಬಲಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರಿಮತಿ ಶಾಲಿನಿ ರಜನೀಶ್, ಐ.ಎ.ಎಸ್. ಅವರಿಗೂ ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

ಕರಡು ಪ್ರತಿ ತಿದ್ದಲು ನಮ್ಮೊಂದಿಗೆ ಸಹಕರಿಸಿದ ಮೈಸೂರಿನ ಇತಿಹಾಸ ಪ್ರಾಧ್ಯಾಪಕ ಡಾ. ಲ.ನ.ಸ್ವಾಮಿ ಹಾಗೂ ಕನ್ನಡ ಪ್ರಾಧ್ಯಾಪಕ ಡಾ. ಎಸ್. ಚಂದ್ರಮೋಹನ್‌ರವರುಗಳಿಗೆ ಇಲಾಖೆಯು ಆಭಾರಿಯಾಗಿದೆ. ಅಕ್ಷರ ಜೋಡಣೆ ಶ್ರೀಮತಿ ಹೇಮಲತಾ ಹೆಚ್.ಎಸ್.ರವರು ನಿರ್ವಹಿಸಿರುತ್ತಾರೆ. ಮುಖಪುಟ ವಿನ್ಯಾಸ ಮತ್ತು ಮುದ್ರಣ ಜವಾಬ್ದಾರಿಯನ್ನು ಬೆಂಗಳೂರಿನ ಸುಹಾಸ್ ಗ್ರಾಫಿಕ್ಸ್‌ನ ಶ್ರೀ ಎಂ.ಎನ್. ಮುರಳೀಧರ ಅವರು ನಿರ್ವಹಿಸಿ, ಸಂಪುಟ ಸುಂದರವಾಗಿ ಮೂಡಿಬರುವಂತೆ ಕಾರ್ಯ ನಿರ್ವಹಿಸಿರುತ್ತಾರೆ. ಇವರೆಲ್ಲರಿಗೂ ಒಟ್ಟಾರೆಯ ಶ್ರಮದ ಪ್ರತಿಫಲವಾಗಿ ಸಂಪುಟ ತಮ್ಮ ಕೈಸೇರುತ್ತಿದೆ. ಹಾಗಾಗಿ ಅವರೆಲ್ಲರೂ ಅಭಿನಂದನಾರ್ಹರು. ಅವರೆಲ್ಲರ ಸಹಕಾರದಿಂದಾಗಿ ನಮ್ಮ ಸಂಪಾದನ ಕಾರ್ಯ ಸಹ ಸುಲಭವಾಯಿತು.

ಇಲಾಖೆಯ ಈ ಕಾರ್ಯದಲ್ಲಿ ಸಹಕರಿಸಿದ ಹಂಪಿಯ ಉಪನಿರ್ದೇಶಕರ ಕಛೇರಿಯ ಹಾಗೂ ಇಲಾಖೆಯ ಮೈಸೂರಿನ ಕೇಂದ್ರ ಕಛೇರಿಯ ಎಲ್ಲಾ ಸಿಬ್ಬಂದಿಗಳಿಗೂ ಅಭಿನಂದನೆಗಳು.

ಅತ್ಯಂತ ಸುಂದರವಾಗಿ ಹಾಗೂ ಬೋಧಪ್ರದವಾಗಿ ಮೂಡಿಬಂದಿರುವ ವಿಜಯನಗರ ಅಧ್ಯಯನ ಮಾಲಿಕೆಯ 19ನೆಯ ಸಂಪುಟವನ್ನು ಓದುಗರು ಹಾಗೂ ಸಂಶೋಧಕರುಗಳು ಪ್ರೀತಿಯಿಂದ ಸ್ವಾಗತಿಸುವರೆಂದು ಆಶಿಸುತ್ತೇವೆ.

ಸಂಪುಟದ ಸಂಪಾದಕರುಗಳು

ಡಾ. ಸಿ. ಜಿ. ಬೆಟಸೂರಮಠ

ಡಾ. ಆರ್. ಗೋಪಾಲ್

ಶ್ರೀ ಟಿ. ಎಸ್. ಗಂಗಾಧರ

ಪರಿವಿಡಿ

1. ಅಧ್ಯಕ್ಷ ಭಾಷಣ

ಡಾ. ಎಂ. ಎಸ್. ಕೃಷ್ಣಮೂರ್ತಿ

ವಿಜಯನಗರ ವಿಚಾರ ಸಂಕಿರಣಕ್ಕೆ ನನ್ನನ್ನು ಸಮ್ಮೇಳನಾಧ್ಯಕ್ಷನನ್ನಾಗಿ ಆಯ್ಕೆ ಮಾಡಲು ತೀರ್ಮಾನಿಸಿದ್ದಾರೆ ಎಂಬ ವಾರ್ತೆ ನನಗೆ ನನ್ನ ಉತ್ತಮ ಶಿಷ್ಯರಲ್ಲೊಬ್ಬರಾದ ಡಾ॥ ಆರ್. ಗೋಪಾಲ್ ಅವರು ದೂರವಾಣಿಯಲ್ಲಿ ತಿಳಿಸಿದಾಗಿನಿಂದ, ನಾನು ಸಮ್ಮೇಳನಾಧ್ಯಕ್ಷನಾಗಿ ವಿದ್ವಜ್ಜನರಿಗೆ, ವಿಜಯನಗರದ ಬಗ್ಗೆ ಯಾವ ಹೊಸ ವಿಚಾರವನ್ನು ಹೇಳುವುದು ಸೂಕ್ತ ಎಂಬ ಪ್ರಶ್ನೆ ನನ್ನ ಮನಸ್ಸನ್ನು ಕೊರೆಯಲು ಪ್ರಾರಂಭಿಸಿತು. ಅದಕ್ಕಾಗಿ ಇಲ್ಲಿಯವರೆಗು ಪ್ರಕಟವಾಗಿರುವ ವಿಜಯನಗರದ ವಿಷಯಕ್ಕೆ ಸಂಬಂಧಿಸಿದ ವಿಚಾರ ಸಂಕಿರಣಗಳ ಸಮ್ಮೇಳನಾಧ್ಯಕ್ಷರ ಭಾಷಣಗಳು, ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಅಥವಾ ವಿಚಾರ ಸಂಕಿರಣದ ಸಂಪುಟಗಳಲ್ಲಿ ಪ್ರಕಟವಾಗಿರುವ ಲೇಖನಗಳು, ಇವುಗಳೆಲ್ಲವುಗಳ ಒಂದು ಸ್ಥೂಲ ಅವಲೋಕನವನ್ನು ಮಾಡಿದೆ. ಎಲ್ಲಾ ಭಾಷಣಗಳೂ, ಲೇಖನಗಳು ವಿಜಯನಗರದ ವಿವಿಧ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ ವಸ್ತು-ವಿಷಯಗಳನ್ನು ಹೆಚ್ಚಾಗಿ ಹೇಳುತ್ತವೆಯೇ ಹೊರತು, ಕಲೆ, ವಾಸ್ತುಶಿಲ್ಪದ ಬಗ್ಗೆ ಲೇಖನಗಳು ಬಹಳ ಕಡಿಮೆ ಎಂದು ತಿಳಿಯಿತು. ಈ ಅಲ್ಪ-ಸ್ವಲ್ಪ ಬರವಣಿಗೆಗಳೂ ಕೂಡ ವಾಸ್ತು-ಶಿಲ್ಪ ವರ್ಣನೆ, ಅವುಗಳ ಗಾತ್ರ, ವಿಸ್ತೀರ್ಣ, ಸೌಂದರ್ಯ, ಭಗ್ನಾವಸ್ಥೆ, ಇತ್ಯಾದಿಗಳ ಬಗ್ಗೆ ವಿವರಣೆ ಅಥವಾ ಪ್ರಶಂಸೆ ಮುಂತಾದವುಗಳಿಂದ ಕೂಡಿವೆಯೇ ಹೊರತು ವಿಜಯನಗರ ಕಾಲದ ವಾಸ್ತು ಹಾಗೂ ಶಿಲ್ಪಕಲೆಗಳ ನಿರ್ಮಾಣತಂತ್ರ, ನಿರ್ಮಾಣ ವಿಧಾನ, ತಾಂತ್ರಿಕ ಕುಶಲತೆ, ವಿಶೇಷತೆ, ವೈಜ್ಞಾನಿಕತೆ; ಆ ಕಾಲದಲ್ಲಿ ನಡೆದ ಹೊಸ ಆವಿಷ್ಕಾರಗಳು, ಅವುಗಳಿಗೆ ಕಾರಣ; ವಿಶೇಷ ಬದಲಾವಣೆಗಳು, ಹಳೆಯ ತಂತ್ರ, ವಿಧಾನ, ರೂಪಗಳ ಬೆಳವಣಿಗೆ; ಹಾಗೂ ಇವುಗಳೆಲ್ಲವುಗಳ ವೈಜ್ಞಾನಿಕ ತಳಹದಿ, ಸಮಕಾಲೀನ ಧಾರ್ಮಿಕ ಸಮಾಜಿಕ ಪ್ರಜ್ಞೆ ಇತ್ಯಾದಿ ವಿಷಯಗಳನ್ನು ತಿಳಿಯಪಡಿಸುವಲ್ಲಿ ವಿಫಲವಾಗಿವೆ ಎಂಬ ವಿಚಾರ ಸ್ಪಷ್ಟವಾಯಿತು.

ಹೀಗಾಗಿ ನನ್ನ ಅಧ್ಯಕ್ಷ ಭಾಷಣದಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಆಗದಿದ್ದರೂ, ಕನಿಷ್ಠಪಕ್ಷ ಹಲವು ಅಂಶಗಳ ಬಗ್ಗೆಯಾದರು ನನಗೆ ತಿಳಿದಮಟ್ಟಿಗೆ ಸತ್ಯಾಂಶಗಳನ್ನು ವಿದ್ವಲ್ಲೋಕಕ್ಕೆ ತಿಳಿಯಪಡಿಸುವ ಪ್ರಯತ್ನ ಮಾಡಲು ಹೊರಟಿದ್ದೇನೆ.

ಸಾಮಾನ್ಯವಾಗಿ ಭಾರತೀಯ ವಾಸ್ತು ಪರಂಪರೆಯ ವಿಚಾರ, ವಿಧಾನ, ಬೆಳವಣಿಗೆ, ಶೈಲಿ, ಮುಂತಾದವುಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವಾಗ ನಾವು ಈ ಹಿಂದೆ ಪ್ರಸಿದ್ಧರಾಗಿದ್ದ ಪಾಶ್ಚಾತ್ಯ ವಿದ್ವಾಂಸರುಗಳಾದ ಹೆನ್ರಿ ಕಸಿನ್ಸ್, ಪರ್ಸಿಬ್ರೌನ್, ವಿನ್ಸೆಂಟ್ ಸ್ಮಿತ್, ಫರ್ಗ್ಯುಸನ್, ಅಲೆಕ್ಸಾಂಡರ್ ರೀ ಮುಂತಾದವರ ಕೃತಿಗಳನ್ನು ಹೆಚ್ಚಾಗಿ ಆಧರಿಸಿ ಪಾಠ ಮಾಡುವುದು ಸಾಮಾನ್ಯ. ಈ ವಿದ್ವಾಂಸರುಗಳು ವಿಜಯನಗರ ವಾಸ್ತುವಿನಲ್ಲಿ ಕಾಣಬರುವ ಹಲವಾರು ವಾಸ್ತು ಅಂಗಗಳು, ಅಂದರೆ ಪೋತಿಕೆಗಳು, ಸ್ತಂಭಗಳು, ಕಪೋತಗಳು, ಅಮ್ಮನವರ ಗುಡಿ, ಮಹಾಮಂಟಪ, ರಂಗಮಂಟಪ, ರಾಯಗೋಪುರಗಳು, ಹಾಗೂ ಇನ್ನು ಅನೇಕ ವಾಸ್ತು ರೂಪಗಳು ವಿಜಯನಗರ ಕಾಲಕ್ಕೆ ವಿಶೇಷವಾದ ಹೊಸ ಹೊಸ ವಾಸ್ತು ರೂಪಗಳು ಎಂಬ ಅಭಿಪ್ರಾಯವನ್ನು ಮಂಡಿಸಿದ್ದರು. ಈ ಅಭಿಪ್ರಾಯವನ್ನೇ ನಾವುಗಳೂ ಸಹ ಒಪ್ಪಿ ಅದನ್ನು ಬೋಧಿಸುತ್ತಿದ್ದೆವು. ಪಾಶ್ಚಾತ್ಯ ವಿದ್ವಾಂಸರುಗಳು ತಮ್ಮ ಕೃತಿಗಳನ್ನು ರಚಿಸಿದಾಗ, ಆ ಕಾಲದ ಜ್ಞಾನದ ಮಟ್ಟಿಗೆ ಹೇಳುವುದಾದರೆ ಇವೆಲ್ಲವೂ ಸತ್ಯವೆನಿಸಿತ್ತು. ಅಲ್ಲದೆ ಈ ವಿದ್ವಾಂಸರ ತೀರ್ಮಾನಗಳು ಈ ವಾಸ್ತು ಪರಂಪರೆಯ ಪ್ರಧಾನ ಹಾಗೂ ಕೇಂದ್ರ ಭಾಗಗಳ ಸ್ಮಾರಕಗಳನ್ನು ಆಧರಿಸಿ ಹೇಳಿದಂತಹ ಮಾತುಗಳು. ಆದರೆ ಭಾರತೀಯ ವಾಸ್ತು ಪರಂಪರೆಯ ಅಧ್ಯಯನ

ಈಗ ಅನೇಕ ದಶಕಗಳಷ್ಟು ಮುಂದುವರೆದಿದೆ. ಹೊಸ ಹೊಸ ವಾಸ್ತು ಮಾದರಿಗಳು ಅಧ್ಯಯನದ ವ್ಯಾಪ್ತಿಯಲ್ಲಿ ಬಂದಿವೆ. ಹಲವಾರು ರೀತಿಯ ಸೂಕ್ಷ್ಮ ಹಾಗೂ ವಿಸ್ತಾರವಾದ ಅಧ್ಯಯನಗಳಾಗಿವೆ. ಈ ಅಧ್ಯಯನ ಫಲಿತಾಂಶಗಳ ನವಸಂಶೋಧನೆಗಳ, ವಿಚಾರಧಾರೆಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ವಾಸ್ತು ನಿರ್ಮಾಣಗಳ ಬಗ್ಗೆ ಹೊಸ ತೀರ್ಮಾನಗಳನ್ನೂ ಹೊಸದಾದ ವಿಮರ್ಶೆಗಳನ್ನು ಮಾಡುವುದು ಸೂಕ್ತ. ಈ ಹೊಸ ಪ್ರಯತ್ನದಿಂದ ವಿಜಯನಗರ ವಾಸ್ತುವಿನ ಬಗ್ಗೆ ಸಮಗ್ರ ಜ್ಞಾನ ಬರುವುದಲ್ಲದೆ, ಸತ್ಯಾಸತ್ಯತೆಗಳ ಅರಿವೂ ಸಹ ನಮಗೆ ಉಂಟಾಗುತ್ತದೆ.

ಮೊಟ್ಟಮೊದಲಿಗೆ ದೇವಾಲಯದ ತಳವಿನ್ಯಾಸಕ್ಕೆ ಬರುವುದಾದರೆ, ದೇವಾಲಯ ಸಂಕೀರ್ಣದಲ್ಲಿ ಅಮ್ಮನವರ ಗುಡಿಯ ನಿರ್ಮಾಣ, ವಿಜಯನಗರ ಕಾಲದ ವಾಸ್ತುವಿನಲ್ಲಿ ಆದ ಒಂದು ಪ್ರಮುಖ ಬದಲಾವಣೆ ಎಂದು ಹಿಂದಿನವರು ಗುರುತಿಸುತ್ತಿದ್ದರು. ಆದರೆ ಈ ಸಂಪ್ರದಾಯ ಹೊಯ್ಸಳ ಕಾಲದ ಪ್ರಾರಂಭದಲ್ಲೇ ಇತ್ತೆಂಬುದು ಸತ್ಯ. ಅಮ್ಮನವರಿಗೆ ಪ್ರತ್ಯೇಕ ಗುಡಿ ನಿರ್ಮಾಣ ಮಾಡುವ ಸಂಪ್ರದಾಯ ಶ್ರೀವೈಷ್ಣವ ಪಂಥದಲ್ಲಿ ಪ್ರಾರಂಭವಾಯಿತೆನ್ನಬಹುದು. 'ಶ್ರೀವೈಷ್ಣವ ಪಂಥ' – ಹೆಸರೇ ಸೂಚಿಸುವಂತೆ, 'ಶ್ರೀ', ಅಂದರೆ ಲಕ್ಷ್ಮೀ ಮತ್ತು ವಿಷ್ಣು ಇವರಿಬ್ಬರಿಗೂ ಸಮಾನ ಸ್ಥಾನ, ಶ್ರೇಷ್ಠತೆ. ಅದರಲ್ಲೂ ಯತಿಗಳಾದ ಶ್ರೀರಾಮಾನುಜರ ನಂತರದ ಕೆಲವು ಶತಮಾನಗಳಲ್ಲಿ ವಿಷ್ಣುವಿಗಿಂತ ಲಕ್ಷ್ಮೀಗೇ ಪ್ರಾಧಾನ್ಯ ಹೆಚ್ಚುತ್ತದೆ. ಶ್ರೀಲಕ್ಷ್ಮಿಗಾಗಿ ಪ್ರತ್ಯೇಕ ಗುಡಿ ನಿರ್ಮಾಣ ಕ್ರಿ.ಶ. ಸುಮಾರು 1120ರ ತೊಣ್ಣೂರಿನ ನಂಬಿನಾರಾಯಣ ದೇವಾಲಯ ಸಂಕೀರ್ಣದಲ್ಲಿ ಖಚಿತವಾಗಿ ಕಾಣಬರುತ್ತದೆ. ಒಂದು, ಎರಡು ಮತ್ತು ಮೂರನೆಯ ಆವರಣದಲ್ಲಿ, ಪ್ರಧಾನ ದೇವರ ಪತ್ನಿಗೆ ಗುಡಿ ನಿರ್ಮಿಸಬಹುದೆಂದು ಈಶ್ವರ ಸಂಹಿತೆಯು ಹೇಳುತ್ತದೆ. ಈ ಹೇಳಿಕೆಯಂತೆ ನಂಬಿನಾರಾಯಣ ಗುಡಿಯ ಹೊರ ಪ್ರಾಕಾರದಲ್ಲಿ, ಮೂಲ ಗುಡಿಯ ಬಲಭಾಗದಲ್ಲಿ, ಪ್ರತ್ಯೇಕವಾಗಿ, ಸಣ್ಣದಾದರೂ ಷಡ್ವರ್ಗಗಳಿಂದ ಕೂಡಿದ, ಲಕ್ಷ್ಮೀ ಗುಡಿಯನ್ನು ನಿರ್ಮಿಸಲಾಗಿದೆ. ಈ ಆವರಣ ಮತ್ತು ಈ ಗುಡಿ ಎರಡೂ ನಂತರದ ಸೇರ್ಪಡೆ ಇರಬಹುದು ಎಂದು ಅನುಮಾನಿಸುವಂತಿಲ್ಲ. ಏಕೆಂದರೇ ಈ ಗುಡಿಗೆ ಸೇರಿದಂತೆ ಮುಂಭಾಗದಲ್ಲಿ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ, ಅಂದರೆ ಕ್ರಿ.ಶ. 1140ರಲ್ಲಿ ಒಂದು ತೆರೆದ ಮಂಟಪವನ್ನು ನಿರ್ಮಿಸಿದನೆಂದು ತಿಳಿಸುವ ಶಾಸನ ಅದೇ ಮಂಪಟದ ಒಂದು ಕಂಬದ ಮೇಲಿದೆ. ಹೀಗಾಗಿ ಅಮ್ಮನವರಿಗೆ ಪ್ರತ್ಯೇಕ ಗುಡಿ ನಿರ್ಮಿಸುವ ಸಂಪ್ರದಾಯ ವಿಜಯನಗರಕ್ಕಿಂತ ಎರಡು ಶತಮಾನಗಳಷ್ಟು ಹಿಂದೆಯೇ ಇತ್ತು ಎಂಬುದು ಖಚಿತವಾಗುತ್ತದೆ.

ದೇವಾಲಯದ ಮುಂಭಾಗದಲ್ಲಿ ಮಹಾಮಂಟಪದ ರಚನೆ ವಿಜಯನಗರ ಕಾಲದಲ್ಲಿ ಪ್ರಾರಂಭವಾದ ವಾಸ್ತು ವಿನ್ಯಾಸವೆಂದು ಹೇಳುವುದು ರೂಢಿ. ಮಹಾಮಂಟಪವೆಂದರೆ, ಗುಡಿಗೆ ಸೇರಿದಂತೆ, ಮುಂಭಾಗದಲ್ಲಿ ಮಾನಸೂತ್ರಕ್ಕೆ ಹೊಂದಿಕೊಂಡಂತೆ ನಿರ್ಮಾಣವಾದ, ವಿಶಾಲವಾದ, ಸುತ್ತಲೂ ತೆರವಾದ, ಕಂಬಗಳಿಂದ ಕೂಡಿದ ಹಜಾರ. ಈ ಹಜಾರದ ಮಧ್ಯದಂಕಣದ ನೆಲವನ್ನು (ಕೆಲವೊಮ್ಮೆ) ಸ್ವಲ್ಪ ಎತ್ತರಿಸಿ, ಅದರ ಮೇಲೆ ಸ್ವಲ್ಪ ಉಬ್ಬಿದಂತೆ ವೃತ್ತಾಕಾರವಾಗಿ ಮಾಡಿರುತ್ತಾರೆ. ಇದು ರಂಗ ಅಥವಾ ವೇದಿಕೆ. ಸುತ್ತಲಿನ ಅಂಕಣಗಳಲ್ಲಿ ಜನರು ಕೂಡಲು ಅವಕಾಶವಿರುತ್ತದೆ. ಮಂಟಪದ ಹೊರ ಅಂಚಿನಲ್ಲಿ ಕುಳಿತುಕೊಳ್ಳಲು ಆಸನ (ಕಕ್ಷಾಸನ) ವ್ಯವಸ್ಥೆ ಇರುತ್ತದೆ. ಇದು ದೇವಾಲಯದಲ್ಲಿ ದೇವರಿಗೆ ನಡೆಯುವ ರಂಗಭೋಗ ಸೇವೆಗಳಿಗಾಗಿ ನಿರ್ಮಿಸಲಾದ ವಿಶಾಲ ಹಜಾರ. ಈ ರೀತಿಯ ಹಜಾರಗಳು ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಹಲವಾರು ಪ್ರಧಾನ ದೇವಾಲಯಗಳಲ್ಲಿ ಕಾಣಬರುತ್ತವೆ. ಇಂತಹ ಪ್ರಧಾನ ದೇವಾಲಯಗಳಲ್ಲಿ, ಮುಸಲ್ಮಾನರ ದಾಳಿಯ ಭೀತಿಯಿಂದಾಗಿ, ಈ ತೆರೆದ ಹಜಾರಗಳನ್ನು ಸುತ್ತಲೂ ಜಾಲಂಧ್ರಗಳಿಂದ ರಕ್ಷಣಾರ್ಥವಾಗಿ ಮುಚ್ಚಲಾಯಿತು. ಹೀಗೆ ಮುಚ್ಚಲ್ಪಟ್ಟ ಮಹಾಮಂಟಪಗಳು ನವರಂಗಗಳಾಗಿ ಪರಿವರ್ತನೆಗೊಂಡವು. (ಆದರೆ ಬೆಳವಾಡಿ, ಹರಿಹರ ಮುಂತಾದ ದೇವಾಲಯಗಳಲ್ಲಿ ಇವುಗಳು ಹಾಗೆ ತೆರೆದ ಮಹಾಮಂಟಪಗಳಾಗಿಯೇ

ಮುಂದುವರೆದವು). ಈ ರೀತಿಯ ಹಜಾರಗಳೇ ವಿಜಯನಗರ ಕಾಲದ ಮಹಾಮಂಟಪಗಳು. ವಿಜಯನಗರ ಕಾಲದಲ್ಲಿ ಶತ್ರುದಾಳಿಯ ಭೀತಿ ಕಡಿಮೆ ಇದ್ದುದ್ದರಿಂದ ಮಹಾಮಂಟಪಗಳನ್ನು ವಿಶಾಲವಾಗಿ ತೆರವಾಗಿಯೇ ನಿರ್ಮಿಸುತ್ತಿದ್ದರು. ಸಾಮಾನ್ಯವಾಗಿ ಭದ್ರತೆಗಾಗಿ ನವರಂಗಗಳಿಗೆ ಮರದ ಬಾಗಿಲುಗಳನ್ನು ಕೂಡಿಸುತ್ತಿದ್ದರು.

ದೇವಾಲಯದ ಸುತ್ತಲಿನ ವಿಶಾಲ ಅಂಗಳ ಮತ್ತು ಪ್ರಾಕಾರ, ಪ್ರಾಕಾರದ ಒಳಮುಖದಲ್ಲಿ ಮಾಲಿಕೆ; ಪ್ರಾಕಾರಕ್ಕೆ ಮಹಾದ್ವಾರ, ಮಹಾದ್ವಾರದ ಮೇಲೆ ಗೋಪುರ, ಒಂದಕ್ಕಿಂತ ಹೆಚ್ಚು ಪ್ರಾಕಾರ/ಆವರಣಗಳು ಇವೆಲ್ಲವೂ ವಿಜಯನಗರ ಕಾಲಕ್ಕೆ ಮುಂಚೆಯೇ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಬಳಕೆಯಲ್ಲಿದ್ದವು. ಪ್ರಾಕಾರ ನಿರ್ಮಾಣ ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯಲ್ಲೇ (ಕ್ರಿ.ಶ. ಸು. 735) ನಾವು ಕಾಣುತ್ತೇವೆ. ಅದಕ್ಕಿಂತ ಪೂರ್ವದಲ್ಲಿ (ಕ್ರಿ.ಶ. ಸು. 4–5ನೆಯ ಶತಮಾನ) ಪ್ರಾಕಾರದ ನಿರ್ಮಾಣವು, ರಾಜಘಟ್ಟದ ಬೌದ್ಧ ಚೈತ್ಯ–ವಿಹಾರ ಸಂಕೀರ್ಣದಲ್ಲಿ ಕಂಡು ಬಂದಿದೆ. ಪ್ರಾಕಾರದ ಒಳಮುಖದ ಮಾಲಿಕೆಯ ನಿರ್ಮಾಣಕ್ಕೆ ಹೊಯ್ಸಳ ಕಾಲದ ಬೇಲೂರು, ಸೋಮನಾಥಪುರದ ದೇವಾಲಯಗಳು ಉತ್ತಮ ಉದಾಹರಣೆಗಳು. ಒಂದರೊಳಗೊಂದರಂತೆ ಎರಡು ಪ್ರಾಕಾರ ನಿರ್ಮಾಣದ ನಿದರ್ಶನವನ್ನು ತೊಣ್ಣೂರಿನ ನಂಬಿನಾರಾಯಣ ದೇವಾಲಯದಲ್ಲಿ (ಕ್ರಿ.ಶ. ಸು. 1120) ಕಾಣುತ್ತೇವೆ.

ಪ್ರಾಕಾರದ ಮುಖ್ಯದ್ವಾರದ ಮೇಲೆ ಗೋಪುರ ನಿರ್ಮಾಣ ಪದ್ಧತಿ ತಮಿಳು ದೇಶದಲ್ಲಿ ಮತ್ತು ಕರ್ನಾಟಕದಲ್ಲಿ, ವಿಜಯನಗರ ಕಾಲಕ್ಕೆ ಶತಮಾನಗಳಷ್ಟು ಹಿಂದೆಯೇ ಇತ್ತು. ಚೋಳ ಒಂದನೆಯ ರಾಜರಾಜ ನಿರ್ಮಿಸಿದ ತಂಜಾವೂರಿನ ಬೃಹದೀಶ್ವರ ದೇವಾಲಯದ ಮೊದಲ ಪ್ರಾಕಾರದ ಗೋಪುರವು ತಮಿಳು ಉದಾಹರಣೆಯಾದರೆ, ಬೇಲೂರಿನ ಚೆನ್ನಕೇಶವ ದೇವಾಲಯದ ಮಹಾದ್ವಾರಕ್ಕೆ ಹೊಯ್ಸಳರ ಕಾಲದಲ್ಲೇ ಗೋಪುರ ನಿರ್ಮಿಸಲಾಗಿದ್ದುದಕ್ಕೆ ಶಾಸನಾಧಾರಗಳುಂಟು. ಅಲ್ಲಿಯ ಶಾಸನವೊಂದು 'ಕಲಬುರುಗಿಯ ತುರುಕ ಗಂಗಸಲಾರನು ಸುಡಿಸಿ ಕೆಡಸಿದ ಗೋಪುರವನ್ನು' ಕ್ರಿ.ಶ. 1397ರಲ್ಲಿ, ಹರಿಹರನ ಕಾಲದಲ್ಲಿ ಪುನರ್ನಿರ್ಮಾಣ ಮಾಡಲಾಯಿತು ಎಂದು ದಾಖಲಿಸಿದೆ. ಇದೇ ರೀತಿ ಹೊಯ್ಸಳ ವೀರಸೋಮೇಶ್ವರನು ತಮಿಳುನಾಡಿನ ತಿರುವಾನೈಕ್ಕಾವಲ್‌ನ ಜಂಬುಕೇಶ್ವರ ದೇವಾಲಯಕ್ಕೆ, ಇಟ್ಟಿಗೆ ಗಾರೆಯಿಂದ ಏಳು ತಲಗಳುಳ್ಳ ಗೋಪುರವನ್ನು ನಿರ್ಮಿಸಿದನೆಂಬ ಶಾಸನೋಲ್ಲೇಖವಿರುವುದು. ಎತ್ತರವಾದ ದ್ವಾರಗೋಪುರಗಳ ನಿರ್ಮಾಣ ಪದ್ಧತಿ ಹೊಯ್ಸಳರ ಕಾಲದಲ್ಲೇ ಇದ್ದರೂ ಈ ಸಂಪ್ರದಾಯದ ಬಳಕೆ ವಿಜಯನಗರ ಕಾಲದಲ್ಲಿ ಹೆಚ್ಚಾದುದರಿಂದ, ಈ ಗೋಪುರಗಳು ರಾಯಗೋಪುರಗಳೆಂದು ಪ್ರಖ್ಯಾತವಾದವು.

ದೇವಾಲಯದ ಸ್ತಂಭಗಳ ವಿಚಾರಕ್ಕೆ ಬರುವುದಾದರೆ ವಿಜಯನಗರ ಕಾಲಕ್ಕೆ ವಿಶಿಷ್ಟವಾದುವೆಂದು ಹೇಳಲಾಗುವ ಚಿತ್ರಖಂಡ, ಕೋಷ್ಠಕಾಂತ, ವ್ಯಾಳಕಾಂತ, ಸಿಂಹಕಾಂತ ಹಾಗೂ ಶಿಲ್ಪಕಾಂತ ಸ್ತಂಭಗಳು, ಹೊಯ್ಸಳರ ಕಾಲದಲ್ಲಿಯೇ ಪ್ರಚಲಿತದಲ್ಲಿದ್ದ, ಅದೇ ಮಾದರಿಗಳ ಅಲಂಕಾರಿಕ ಸ್ತಂಭಗಳ ಬೃಹದ್ರೂಪಗಳಷ್ಟೆ. ಚಿತ್ರಖಂಡ ಮಾದರಿಯ ಚಿಕಣಿ ಕಂಬಗಳು ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಾಲಯದ (ಕ್ರಿ.ಶ. 1114), ಭಿತ್ತಿ ತೋರಣದ ಮೇಲಿನ ಶಿಖರದ ಚಿಕಣಿ ಉಪ್ಪರಿಗೆಗಳಲ್ಲಿ ಕಾಣಬರುತ್ತವೆ. ಇದೇ ಮಾದರಿಯ ಸ್ತಂಭಗಳು ಪೂರ್ಣರೂಪದಲ್ಲಿ, ಹೊಯ್ಸಳ ನಿರ್ಮಿತ ಕುರುಡುಮಲೆಯ ಸೋಮೇಶ್ವರ ದೇವಾಲಯದ ನವರಂಗದಲ್ಲಿ ಕಾಣುತ್ತೇವೆ.

ಕೋಷ್ಠಕಾಂತ ಸ್ತಂಭಕ್ಕೆ ಉತ್ತಮ ಹೊಯ್ಸಳ ಉದಾಹರಣೆಯೆಂದರೆ ಬೇಲೂರಿನ ಚೆನ್ನಕೇಶವ ದೇವಾಲಯದ ನವರಂಗದ ಪ್ರಸಿದ್ಧ ನರಸಿಂಹ ಸ್ತಂಭ. ವ್ಯಾಳಕಾಂತ/ಸಿಂಹಕಾಂತ ಸ್ತಂಭಗಳ ಚಿಕಣಿ ರೂಪಗಳು ಬೇಲೂರು, ಹಳೇಬೀಡಿನ ದೇವಾಲಯಗಳ ಪ್ರವೇಶ ಸೋಪಾನಗಳ ಪಾರ್ಶ್ವದ ಚಿಕಣಿ ಗುಡಿಗಳ (ದೇವಖುಲ್ಲಕಗಳು) ದ್ವಾರದ ಇಕ್ಕೆಲಗಳಲ್ಲಿ ಕಾಣಸಿಗುತ್ತವೆ. ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಶಿಲ್ಪರೂಪಗಳನ್ನುಳ್ಳ ಚಿಕಣಿ ಸ್ತಂಭಗಳೂ ಸಹ ಇದೇ ಸ್ಥಳದಲ್ಲಿವೆ.

ಅಲ್ಲದೆ ಬೇಲೂರಿನ ಚೆನ್ನಕೇಶವ ದೇವಾಲಯದ ನವರಂಗದಲ್ಲಿರುವ ಪ್ರಸಿದ್ಧ ಮೋಹಿನಿ ಸ್ತಂಭ ಈ ವರ್ಗಕ್ಕೆ ಸೇರುವ ಉತ್ತಮ ಹೊಯ್ಸಳ ಉದಾಹರಣೆ. ಈ ಮಾದರಿಯ ಶಿಲ್ಪಯುತ ಸ್ತಂಭಗಳ ಪ್ರಾಚೀನತೆ ಬಾದಾಮಿ ಚಾಳುಕ್ಯ ಕಾಲದ ಪಟ್ಟದಕಲ್ಲಿನ ಪಾಪನಾಥ ದೇವಾಲಯದಷ್ಟು ಹಿಂದಕ್ಕೆ ಹೋಗುತ್ತದೆ.

ದೇವಾಲಯದ ಸ್ತಂಭಗಳ ಮೇಲಿನ ಪೋತಿಕೆಗಳು, ವಿಜಯನಗರ ಕಾಲದಲ್ಲಿ ಸಂಪೂರ್ಣ ಬದಲಾದ ರೂಪದಲ್ಲಿ ಪ್ರಕಟವಾಗುತ್ತದೆ ಎಂಬುದು ಎಲ್ಲರೂ ಗ್ರಹಿಸಿರುವ ವಿಚಾರ. ವಿಜಯನಗರದ ಪೋತಿಕೆಗಳನ್ನು ಪುಷ್ಪಪೋತಿಕೆಗಳೆನ್ನಲಾಗುವುದು. ಈ ಪೋತಿಕೆಗಳು ಪ್ರಧಾನವಾಗಿ ಮುಂಚಾಚಿದ ಬಾಹುಗಳನ್ನು ಹೊಂದಿರುತ್ತವೆ. ಈ ಬಾಹುಗಳು ಮೇಲೆಕ್ಕೆತ್ತಿ ಮುಂದಕ್ಕೆ ಬಾಗಿಸಿದ ಆನೆಯ ಸೊಂಡಿಲಿನಂತೆ ಕಾಣುತ್ತವೆ. ತುದಿಯಲ್ಲಿ ಕಮಲ ಪುಷ್ಪ ಮತ್ತು ಮೊಗ್ಗಿನ ರೀತಿಯ ಅಲಂಕರಣವಿರುವುದರಿಂದ ಈ ಪ್ರಕಾರದ ಪೋತಿಕೆಯನ್ನು ಪುಷ್ಪ ಪೋತಿಕೆ ಎಂದು ಕರೆಯುತ್ತಾರೆ.

ಪುಷ್ಪಪೋತಿಕೆಯೂ ಸಹ ವಿಜಯನಗರದ ಕಾಲದಲ್ಲಿ ಬಳಕೆಗೆ ಬಂದ ವಿನ್ಯಾಸವಲ್ಲ. ಹೊಯ್ಸಳ ಕಾಲದಲ್ಲಿ ಈ ಪೋತಿಕೆಗಳ ಬಳಕೆಯನ್ನು ಕಾಣಬಹುದು. ಹೊಯ್ಸಳ ನಿರ್ಮಿತ ಕುರುಡುಮಲೆಯ ಸೋಮೇಶ್ವರ ದೇವಾಲಯದ ನವರಂಗದಲ್ಲಿ ಚಿತ್ರಖಂಡ ಸ್ತಂಭಗಳ ಮೇಲ್ಭಾಗದಲ್ಲಿ ಅಚ್ಚುಕಟ್ಟಾಗಿ ಕಡೆದ ಪುಷ್ಪಪೋತಿಕೆಗಳು ಕಾಣಬರುತ್ತವೆ. ಈ ದೇವಾಲಯ ನಿರ್ಮಾಣ ಕಾಲ ಕ್ರಿ.ಶ. ಸು. 1317.

ವಿಶಾಲವಾಗಿ ಮುಂಚಾಚಿದ ಎರಡು ಬಾಗುಗಳನ್ನುಳ್ಳ ಕಪೋತಗಳು ವಿಜಯನಗರ ಕಾಲದ ತೆರೆದ ಮಂಟಪಗಳ ಪ್ರಸ್ತರದಲ್ಲಿ ಒಂದು ಪ್ರಧಾನ ಅಂಗ. ಈ ರೀತಿಯ ಕಪೋತದ ಬಳಕೆ ವಿಜಯನಗರ ಕಾಲದಲ್ಲಿ ಪ್ರಾರಂಭವಾಯಿತೆಂದು ಹೇಳುವುದು ವಾಡಿಕೆ. ಆದರೆ ಇದೇ ರೀತಿಯ ಎರಡು ಬಾಗುಗಳುಳ್ಳ ವಿಶಾಲ ಕಪೋತಗಳು ಮೇಲೆ ಹೇಳಿದ ಹೊಯ್ಸಳ ಕಾಲದ ಕುರುಡುಮಲೆಯ ಸೋಮೇಶ್ವರ ದೇವಾಲಯದಲ್ಲಿ ಕಂಡು ಬರುತ್ತದೆ.

ವಿಜಯನಗರ ಕಾಲದಲ್ಲಿ ಬಳಕೆಯಾಗಿರುವ ಮೇಲೆ ಉಲ್ಲೇಖಿಸಿದ ಸಮಸ್ತ ವಾಸ್ತು ಅಂಗಗಳು ವಿಜಯನಗರ ಪೂರ್ವ ಕಾಲದಲ್ಲಿ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಬಳಕೆಯಲ್ಲಿದ್ದವು ಎಂದು ತಿಳಿದುಬರುತ್ತದೆ. ಇವುಗಳಲ್ಲಿ ಕೆಲವು ಸಂಕ್ಷಿಪ್ತ ರೂಪದಲ್ಲೂ ಇನ್ನು ಕೆಲವು ಪೂರ್ಣರೂಪದಲ್ಲು ಕಂಡು ಬರುವುದರಿಂದ, ವಿಜಯನಗರ ಪೂರ್ವ ಕಾಲದಲ್ಲಿ, ಹೊಯ್ಸಳರಲ್ಲಿ ಹಾಗೂ ತಮಿಳುನಾಡಿನಲ್ಲಿ ಪ್ರಚಲಿತವಿದ್ದ ದೇವಾಲಯ ವಾಸ್ತು ಪರಂಪರೆ, ವಿಜಯನಗರ ಕಾಲದಲ್ಲಿ ಮುಂದುವರೆಯಿತು ಎನ್ನಬಹುದೇ ವಿನಃ, ಈ ವಾಸ್ತು ಅಂಗಗಳು, ಭಾಗಗಳು, ಅವುಗಳ ವಿನ್ಯಾಸಗಳು ಯಾವುವೂ ವಿಜಯನಗರ ವಾಸ್ತು ತಜ್ಞರ ಆವಿಷ್ಕಾರಗಳಲ್ಲ, ಇದಂತೂ ಸತ್ಯ.

ಅಂದಮೇಲೆ, ವಿಜಯನಗರ ಕಾಲದ ವಾಸ್ತುವಿನಲ್ಲಿ ಯಾವುದೇ ಹೊಸತನವಿರಲಿಲ್ಲವೇ, ಆವಿಷ್ಕಾರಗಳಿರಲಿಲ್ಲವೆ, ನಾವೀನ್ಯತೆಗಳಿರಲಿಲ್ಲವೆ, ಹೆಮ್ಮೆ-ಹೆಚ್ಚಿನ ವಿಚಾರಗಳಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಇದಕ್ಕೆ ಉತ್ತರವೆಂದರೆ ವಿಜಯನಗರ ಕಾಲದ ವಾಸ್ತುವಿನಲ್ಲಿ ಪೂರ್ವಪರಂಪರೆಯ ಮುಂದುವರಿಕೆಯೂ, ಜೊತೆಗೆ ಹೊಸ ಹೊಸ ವಾಸ್ತು ಅಂಗಗಳು, ಆವಿಷ್ಕಾರಗಳು, ನಿರ್ಮಾಣ ವಿಧಾನಗಳು, ವಿನ್ಯಾಸಗಳು, ರೂಪುಗೊಂಡವೆಂದು ಹೇಳಬೇಕಾಗುತ್ತದೆ. ಪೂರ್ವ ಪರಂಪರೆಯ ಕೆಲವಂಶಗಳು ಹಾಗೆಯೇ ಬಳಕೆಯಾದವು, ಇನ್ನು ಕೆಲವಂಶಗಳು ಬೆಳೆದು ಬೃಹದಾಕಾರದ್ದಾದವು, ಇದರೊಂದಿಗೆ ಇನ್ನೂ ಕೆಲವು ಹೊಸ ಅಂಶಗಳು ಇವುಗಳಿಗೆ ಸೇರಿಕೊಂಡವು. ಇವುಗಳ ಜೊತೆಗೆ ಸಮಕಾಲೀನ ವೈಜ್ಞಾನಿಕ ಬೆಳವಣಿಗೆಯಿಂದಾಗಿ ನಿರ್ಮಾಣ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಾದವು, ಸಾಮಾಜಿಕ, ಧಾರ್ಮಿಕ ಆಚರಣೆಯ ಫಲವಾಗಿ ವಾಸ್ತು ಕ್ಷೇತ್ರದಲ್ಲಿ ಬದಲಾವಣೆಗಳಾದವು, ಶಿಲ್ಪಿಗಳ ಕುಶಲತೆಯಿಂದಾಗಿ ಹೊಸ ಹೊಸ ವಿನ್ಯಾಸಗಳು ಉದ್ಭವವಾದವು. ನಿರ್ಮಾಣ ಮಾಧ್ಯಮದ ಬದಲಾವಣೆಯಿಂದ ವಿಶಿಷ್ಟ ವಾಸ್ತು ವಿನ್ಯಾಸಗಳು ರೂಪುಗೊಂಡವು. ಈ ಎಲ್ಲಾ ಅಂಶಗಳು

ಕೂಡಿ ವಿಜಯನಗರ ವಾಸ್ತು ಪರಂಪರೆ ದಕ್ಷಿಣ ಭಾರತದ ವಾಸ್ತು ಕ್ಷೇತ್ರದಲ್ಲೇ ಅಪ್ರತಿಮ ವಾಸ್ತು ವಿಧಾನವೆಂಬ ಖ್ಯಾತಿಗಳಿಸಿತು. ಜೊತೆಗೆ ಈ ಬೆಳವಣಿಗೆಗಳಿಂದಾಗಿ ವಿಜಯನಗರ ಕಾಲದಲ್ಲಿ ದ್ರಾವಿಡ ವಾಸ್ತು ಪರಂಪರೆ, ತನ್ನ ಬೆಳವಣಿಗೆಯ ಪರಾಕಾಷ್ಠತೆಯನ್ನು ತಲುಪಿತು ಎಂದು ಹೇಳುವಷ್ಟರ ಮಟ್ಟಿಗೆ, ವಿಜಯನಗರ ಶಿಲ್ಪಿಗಳು ತಮ್ಮ ವಾಸ್ತು ಕೃತಿಗಳಿಗೆ ಗಾತ್ರ, ವಿಸ್ತೀರ್ಣ, ಪ್ರಮಾಣ, ಸೌಂದರ್ಯ, ಆಕರ್ಷಣೆ ಮತ್ತು ವೈವಿಧ್ಯತೆಗಳನ್ನು ನೀಡಿದರು.

ಇನ್ನು ಮುಂದೆ ವಿಜಯನಗರ ಕಾಲದ ವಾಸ್ತುವಿದ್ಯೆಯ ಪ್ರಗತಿಪರ ಅಂಶಗಳು ಯಾವುವು, ನಾವೀನ್ಯತೆಗಳಾವುವು, ಆವಿಷ್ಕಾರಗಳಾವುವು ಎಂಬತ್ತ ಗಮನಹರಿಸೋಣ.

ವಿಜಯನಗರ ಪೂರ್ವದಲ್ಲಿ ದೇವಾಲಯ ವಾಸ್ತುವಿನ ತಳವಿನ್ಯಾಸದಲ್ಲಿ ಇದ್ದ ಕೆಲವು ಲಕ್ಷಣಗಳ ಬಗ್ಗೆ ಆಗಲೇ ಗಮನ ಹರಿಸಿದ್ದೇವೆ. ವಿಜಯನಗರ ಕಾಲದಲ್ಲಿ ಪ್ರಾಶಸ್ತ್ಯಕ್ಕೆ ಬಂದ ಭಕ್ತಿಪಂಥದ ಪ್ರಭಾವದಿಂದಾಗಿ ದೇವಾಲಯ ತಳವಿನ್ಯಾಸದಲ್ಲಿ ಬಹಳಷ್ಟು ಮಾರ್ಪಾಟುಗಳಾದವು. ರಾಜಾಶ್ರಯದಲ್ಲಿ ಎಲ್ಲೆಲ್ಲಿ ಬೃಹದ್ದೇವಾಲಯಗಳು ನಿರ್ಮಾಣವಾದವೋ ಅವುಗಳಲ್ಲಿ ಸಾಮಾನ್ಯವಾಗಿ ಈ ಅಂಶಗಳನ್ನು ಕಾಣಬಹುದು. ಮೂಲ ದೇಗುಲದ ಗರ್ಭಗೃಹ, ಅಂತರಾಳ, ನವರಂಗ, ಮಹಾಮಂಟಪಗಳಲ್ಲದೆ ಕಲ್ಯಾಣಮಂಟಪ, ರಂಗಮಂಟಪ, ವಸಂತಮಂಟಪ, ಡೋಲೋತ್ಸವಮಂಟಪ, ಮಣಿಮಂಟಪ, ಉತ್ಸವಮಂಟಪ, ಇತ್ಯಾದಿಗಳ ನಿರ್ಮಾಣವಾದವು.

ಕಲ್ಯಾಣಮಂಟಪದ ನಿರ್ಮಾಣದ ಉದ್ದೇಶ ತಮಗೆಲ್ಲರಿಗೂ ತಿಳಿದಿರುವುದೇ. ವಿಜಯನಗರದ, ಅದರಲ್ಲೂ ರಾಜಧಾನಿಯಾದ ಹಂಪಿಯಲ್ಲಿ ಕಲ್ಯಾಣಮಂಟಪಗಳು, ಅವುಗಳ ನಿರ್ಮಾಣ ಕೌಶಲದಲ್ಲಿ, ವಿಸ್ತೀರ್ಣದಲ್ಲಿ ಮತ್ತು ಅಲಂಕರಣೆಯಲ್ಲಿ ಬಹಳ ಶ್ರೇಷ್ಠವಾದವೆನಿಸಿವೆ. ಸಮಕಾಲೀನ ಶ್ರೀವೈಷ್ಣವ ಹಾಗೂ ಶೈವ ಪಂಥಗಳ ಪೂಜಾವಿಧಿಗಳಿಗೂ ಇತರ ಉತ್ಸವಗಳಿಗೂ ಅನುಕೂಲವಾಗುವಂತೆ ವಸಂತಮಂಟಪ, ಡೋಲೋತ್ಸವಮಂಟಪ, ತೆಪ್ಪೋತ್ಸವಮಂಟಪ, ಮಣಿಮಂಟಪ, ಉತ್ಸವಮಂಟಪ, ಮುಂತಾದ ಮಂಟಪಗಳ ನಿರ್ಮಾಣವಾಯಿತು. ವಸಂತಕಾಲದಲ್ಲಿ ವಿಶೇಷ ತಳಿರು ತೋರಣಗಳ ಅಲಂಕರಣದಲ್ಲಿ ಬಣ್ಣದ ನೀರಿನ ಎರಚಾಟವೂ ಕೂಡಿದಂತೆ ನಡೆಸುವ ಹಬ್ಬಕ್ಕಾಗಿ ನಿರ್ಮಿಸಲಾದದ್ದೇ ವಸಂತಮಂಟಪ. ಈಗಿನ ಹೋಳಿ ಹಬ್ಬಕ್ಕೆ ಇದು ಸಮ. ಉತ್ಸವ ಸಮಯದಲ್ಲಿ ದೇವರ ಉತ್ಸವಮೂರ್ತಿಯನ್ನು ಈ ಮಂಟಪದಲ್ಲಿ ಕೂರಿಸಿ ಸಂಭ್ರಮದಿಂದ ಹಬ್ಬವನ್ನು ಆಚರಿಸುತ್ತಿದ್ದರು. ಡೋಲೋತ್ಸವ ಮಂಟಪದಲ್ಲಿ ಉತ್ಸವಮೂರ್ತಿಯನ್ನು ಉಯ್ಯಾಲೆಯಲ್ಲಿ ಕೂಡಿಸಿ ತೂಗಲಾಗುತ್ತಿತ್ತು. ತೆಪ್ಪೋತ್ಸವಮಂಟಪ, ದೇವಾಲಯದ ಪುಷ್ಕರಣಿಯ ಮಧ್ಯದಲ್ಲಿ ನಿರ್ಮಿತವಾಗುತ್ತಿದ್ದ ಮಂಟಪ. ದೇವರ ಜಲವಿಹಾರಾರ್ಥವಾಗಿ ನಡೆಸುವ ಈ ಉತ್ಸವದಲ್ಲಿ ದೇವರನ್ನು ವಿಶ್ರಾಂತಿಗಾಗಿ ಸ್ವಲ್ಪಕಾಲ ನೀರಿನ ಮಧ್ಯದ ಈ ಮಂಟಪದಲ್ಲಿ ಇರಿಸುವುದು ಪರಿಪಾಠ. ಉತ್ಸವ ಮಂಟಪಗಳು ನಗರದ/ಗ್ರಾಮದ, ನದೀತೀರದ ಅಥವಾ ಇನ್ನಿತರ ಅನುಕೂಲ ಸ್ಥಳಗಳಲ್ಲಿ, ರಥೋತ್ಸವದ ವೇಳೆ ಉತ್ಸವಮೂರ್ತಿಯನ್ನು ಕೆಳಗಿಳಿಸಿ ಪುರಜನರಿಗೆ ದೇವರ ದರ್ಶನ, ಪೂಜೆ ಇತ್ಯಾದಿ ಕೈಂಕರ್ಯಗಳಿಗೆ ಅನುವುಮಾಡಲು ಕಟ್ಟಿದ ಮಂಟಪ.

ಮಣಿಮಂಟಪ ಮಾತ್ರ ಶ್ರೀವೈಷ್ಣವ ಪಂಥದ ದೊಡ್ಡ ದೇವಾಲಯಗಳಲ್ಲಿ ಅಪರೂಪವಾಗಿ ಕಾಣಬರುವ ವಿಶೇಷ ನಿರ್ಮಾಣ. ಸುಸ್ಥಿತಿಯಲ್ಲಿರುವ ಇಂತಹದೊಂದು ಮಂಟಪ, ಹಂಪಿಯ ಬಾಲಕೃಷ್ಣ ದೇವಾಲಯದ ಮಹಾಮಂಟಪಕ್ಕೆ ಸೇರಿಕೊಂಡಂತೆ ನಿರ್ಮಾಣವಾಗಿದೆ. ಇದರ ಮಹತ್ವ ಮತ್ತು ವಾಸ್ತು ಲಕ್ಷಣಗಳನ್ನು ಬೇರೆಡೆ ಲೇಖನವೊಂದರಲ್ಲಿ ನಾನು ವಿವರವಾಗಿ ಹೇಳಿದ್ದೇನೆ.

ರಂಗಮಂಟಪ ಹಂಪಿಯ ಪ್ರಸಿದ್ಧ ದೇವಾಲಯಗಳಲ್ಲಿ ಕೆಲವೆಡೆ ಕಾಣಬರುತ್ತದೆ. ದೇವಾಲಯದ ಮೊದಲ ಹಾಗೂ ಎರಡನೆಯ ಪ್ರಾಕಾರದಲ್ಲಿ ಇದರ ನಿರ್ಮಾಣವಾಗಿದೆ. ಅನೇಕ ಕಂಬಗಳಿರುವ ಈ ಹಜಾರದ ಮಧ್ಯದಲ್ಲಿ

ವಿಶಾಲವಾದ ಆಯತಾಕಾರದ ಅಂಕಣವಿರುತ್ತದೆ. ಸಭಾಕಾರದ ತಳವಿನ್ಯಾಸದಲ್ಲಿ ಕಟ್ಟಲ್ಪಟ್ಟ ಈ ಹಜಾರದ ಹಿನ್ನುದಿಯಲ್ಲಿ ಎತ್ತರವಾದ ವಿಶಾಲವಾದ ವೇದಿಕೆಯಿರುತ್ತದೆ. ದೇವಾಲಯಕ್ಕೆ ಸಂಬಂಧಿಸಿದ ರಂಗಭೋಗವನ್ನು ಹಾಗು ಇನ್ನಿತರ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ಹಜಾರದಲ್ಲಿ ನಡೆಸುತ್ತಿದ್ದರು.

ದೇವಾಲಯದ ಗರ್ಭಗೃಹದ ತಳವಿನ್ಯಾಸವನ್ನು ರೂಪಿಸುವಲ್ಲಿ ವಿಜಯನಗರ ಶಿಲ್ಪಿಗಳು ಸ್ವಂತಿಕೆಯನ್ನು ಸಹ ನಿರೂಪಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದುದೆಂದರೆ ವೃತ್ತಾಯತ ತಳವಿನ್ಯಾಸ. ವೃತ್ತಾಯತ ತಳವಿನ್ಯಾಸವುಳ್ಳ ಗರ್ಭಗೃಹವನ್ನು ಚಿಕ್ಕಬಳ್ಳಾಪುರದ ಸಮೀಪದ ರಂಗಸ್ಥಳದ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ನೋಡಬಹುದು. ಇಡೀ ಗರ್ಭಗೃಹದ ತಳವಿನ್ಯಾಸದ ಹೊರವಲಯ ಅಂಡಾಕಾರವಾಗಿದೆ. ಇಂತಹ ಅಪರೂಪದ ಆಕೃತಿ ಇಡೀ ದಕ್ಷಿಣಭಾರತದಲ್ಲಿಯೇ ಮೊದಲಿನದು, ಅಲ್ಲದೆ ಅಪ್ರತಿಮವಾದದು.

ಆಯತವೃತ್ತಾಕಾರ ತಳವಿನ್ಯಾಸದ ಪ್ರಾಸಾದವನ್ನು ನಾವು ಹೊಸಪೇಟೆಯ ಬಳಿಯ ಅನಂತಶಯನ ಗುಡಿಯಲ್ಲಿ ಕಾಣಬಹುದು. ಈ ಗುಡಿಯ ಗರ್ಭಗೃಹದ ತಳವಿನ್ಯಾಸ ಆಯತಾಕಾರವಾಗಿದೆ. ಆದರೆ ಮೇಲಿನ ಪ್ರಾಸಾದ ಮಾತ್ರ ಆಯತವೃತ್ತಾಕಾರವಾಗಿದೆ. ಇಟ್ಟಿಗೆ–ಗಾರೆಯಿಂದ ನಿರ್ಮಿತವಾದ ಈ ಪ್ರಾಸಾದದ ವಿನ್ಯಾಸದಲ್ಲಿ ದೀರ್ಘವಾದ ಭಾಗಗಳು ಸಮನಾಂತರದಲ್ಲಿದ್ದು, ಎರಡು ತುದಿಗಳು ಮಾತ್ರ ಅರ್ಧವೃತ್ತಾಕಾರವಾಗಿದೆ. ಈ ಪ್ರಾಸಾದದ ಶಿಖರ, ಮಧ್ಯದಲ್ಲಿ ಕಮಾನಿನಾಕಾರವಾಗಿದ್ದು ಎರಡೂ ತುದಿಗಳು ಗಜಪೃಷ್ಠಾಕಾರವಾಗಿವೆ. ಈ ಆಕೃತಿಯೂ ಸಹ ವಿಜಯನಗರ ಶಿಲ್ಪಿಗಳ ಆವಿಷ್ಕಾರವೆಂಬುದು ಸತ್ಯ.

ದೇವಾಲಯದ ಏರುವಿನ್ಯಾಸದಲ್ಲೂ ಸಹ ಹಲವು ವಿಶೇಷ ಮಾರ್ಪಾಡುಗಳನ್ನು ವಿಜಯನಗರ ವಾಸ್ತುವಿನಲ್ಲಿ ಕಾಣಬಹುದು. ಅತ್ಯಂತ ಕೆಳಗಿನಿಂದ ವಿವರಿಸುವುದಾದರೆ ನಾವು ಕಾಣುವುದು ಅಧಿಷ್ಠಾನಕ್ಕೆ ನಿರ್ಮಿಸಿರುವ ಉಪಪೀಠ. ದೇವಾಲಯದ ಎತ್ತರವನ್ನು ಹೆಚ್ಚಿಸುವುದಕ್ಕೆ ಉಪಪೀಠವನ್ನು ನಿರ್ಮಿಸುವುದು ವಾಡಿಕೆ. ಈ ಸಂಪ್ರದಾಯ ಪ್ರಾಚೀನವಾದರೂ ಅಪರೂಪವಾಗಿತ್ತು. ವಿಜಯನಗರ ಶಿಲ್ಪಿಗಳು ಈ ವಿಧಾನವನ್ನು ಬಹಳ ಧಾರಾಳವಾಗಿ ಬಳಸಿದರು. ಬೃಹದಾಕಾರದ ದೇವಾಲಯ ಗೋಪುರಗಳಿಗೆ ಎತ್ತರದ ಪರಿಮಾಣವನ್ನು ತೂಗಿಸಲು ಇದು ಬಹಳ ಉಪಯೋಗವಾಯಿತು. ಅಧಿಷ್ಠಾನದ ಹಲವಾರು ಅಂಗಗಳನ್ನು ಹೊಂದಿರುವ ಈ ಉಪಪೀಠಗಳನ್ನು ವೈವಿಧ್ಯಮಯ ರೀತಿಯಲ್ಲಿ ಹಂಪಿಯ ಹಾಗೂ ಇನ್ನಿತರ ಸ್ಥಳಗಳ ಗುಡಿಗಳಲ್ಲಿ ಕಾಣಬಹುದು. ಹಂಪಿಯ ವಿರೂಪಾಕ್ಷ ದೇವಾಲಯದ ಮಹಾದ್ವಾರದ ಗೋಪುರಕ್ಕೆ, ಎತ್ತರವನ್ನು ಹೆಚ್ಚಿಸಲು, ಎರಡು ಅಂತಸ್ತಿನ ಉಪಪೀಠವನ್ನು ನಿರ್ಮಿಸಿದ್ದಾರೆ.

ದೇವಾಲಯ ಅಧಿಷ್ಠಾನಕ್ಕೆ ವಿಜಯನಗರ ಶಿಲ್ಪಿಗಳು ಪ್ರಚಲಿತವಾಗಿದ್ದ ಮಂಚಬಂಧ, ಪಾದಬಂಧ, ಪ್ರತಿಬಂಧ ಮತ್ತು ಕಪೋತಬಂಧ ಅಧಿಷ್ಠಾನಗಳನ್ನೇ ನಿರ್ಮಿಸಿದರಾದರೂ, ಆ ಕಾಲದಲ್ಲಿ ಆದ ಬದಲಾವಣೆಗಳಿಂದಾಗಿ, ಶ್ರೀಮಂತ ಪೋಷಣೆಯಿಂದಾಗಿ, ಹೊಸ ಅಭಿರುಚಿಗಳಿಂದಾಗಿ, ಆರ್ಥಿಕ ಪ್ರಗತಿಯಿಂದಾಗಿ ಈ ವಿಧದ ಅಧಿಷ್ಠಾನಗಳನ್ನೇ ಹೆಚ್ಚು ಹೆಚ್ಚು ಕೆತ್ತನೆಗಳಿಂದ ಶ್ರೀಮಂತಗೊಳಿಸಿದರು. ಇದರ ಫಲವಾಗಿ ವಿಶೇಷಾಲಂಕಾರ, ಕೆತ್ತನೆಗಳಿಂದ ಕೂಡಿದ ಪದ್ಮಪುಷ್ಕಳ, ಶ್ರೀಬಂಧ, ಶ್ರೀಭೋಗ ರೀತಿಯ ಅಧಿಷ್ಠಾನಗಳು ಅಧಿಕ ಸಂಖ್ಯೆಯಲ್ಲಿ ರಚನೆಗೊಂಡವು.

ಅಧಿಷ್ಠಾನದ ಅಲಂಕರಣದಲ್ಲಿ ಕಾಣುವ ವಿಶೇಷ ಬದಲಾವಣೆಗಳಿಗೆ ಸಮಕಾಲೀನವಾಗಿ ರಚಿತವಾದ ವಾಸ್ತುವಿದ್ಯಾ ಗ್ರಂಥಗಳು ಸಹ ಕಾರಣವೆನ್ನಬಹುದು. ಕ್ರಿ.ಶ. 12–13 ಶತಮಾನದ್ದೆಂದು ಹೇಳಬಹುದಾದ ಅಂಶುಮದ್ಭೇದಾಗಮಾಂತರ್ಗತ ಕಾಶ್ಯಪ ಶಿಲ್ಪಶಾಸ್ತ್ರ, ತದನಂತರದಲ್ಲಿ ರಚಿತವಾದ ಮಾನಸಾರ, ಶಿಲ್ಪರತ್ನ, ತಂತ್ರಸಮುಚ್ಚಯ ಮುಂತಾದ ವಾಸ್ತುವಿದ್ಯಾ ಗ್ರಂಥಗಳು ವಿಜಯನಗರ ಕಾಲದ ದೇಗುಲಗಳಲ್ಲಿ ಕಾಣುವ ಅನೇಕ ವಾಸ್ತು ಭಾಗಗಳ ಅಲಂಕರಣೆ, ಕಂಡರಣಾ

ವಿಧಾನ, ಹೊಸ ಹೊಸ ಮಾದರಿಗಳು, ವಿನ್ಯಾಸಗಳು ಮುಂತಾದವುಗಳ ಬಗ್ಗೆ ವಿವರಣೆಗಳನ್ನು ಹೊಂದಿವೆ. ಕ್ರಿ.ಶ. 10ನೆಯ ಶತಮಾನದ್ದೆಂದು ಹೇಳಲಾಗುವ ಮಯಮತದಲ್ಲಿ ಕಾಣದಿರುವ ಅನೇಕ ಹೊಸ ಅಂಶಗಳು ಈ ಗ್ರಂಥಗಳಲ್ಲಿವೆ. ಇದರಿಂದಾಗಿ ವಿಜಯನಗರ ದೇವಾಲಯ ವಾಸ್ತುವಿನ ಮೇಲೆ ಸಮಕಾಲೀನ ವಾಸ್ತುಗ್ರಂಥಗಳ ಪ್ರಭಾವವಿದೆ ಎನ್ನಬಹುದು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಈ ಕಾಲದ ಶ್ರೀಬಂಧ, ಶ್ರೀಭೋಗ ಅಧಿಷ್ಠಾನಗಳು ಮತ್ತು ಕೆಲವು ರೀತಿಯ ಸಂಯುಕ್ತ ಸ್ತಂಭಗಳು. ಈ ವಿಧದ ಅಧಿಷ್ಠಾನಗಳಿಂದಾಗಿ, ಸ್ತಂಭಗಳಿಂದಾಗಿ ದೇವಾಲಯದ ಸೌಂದರ್ಯ ವರ್ಧಿಸಿ, ಅಕರ್ಷಕ ಕೆತ್ತನೆಗಳಿಂದ ಅವು ವಿಜೃಂಭಿಸುವಂತೆ ಆಯಿತು. ಹಂಪಿಯ ವಿಜಯವಿಠಲ, ಅಚ್ಯುತರಾಯ, ಬಾಲಕೃಷ್ಣ, ಮಾಲ್ಯವಂತ ರಘುನಾಥ ಮತ್ತು ವಿರೂಪಾಕ್ಷ ದೇವಾಲಯಗಳು ಈ ವ್ಯಾಪ್ತಿಗೆ ಬರುವ ಕೆಲವು ದೇವಾಲಯಗಳಾಗಿವೆ.

ವಿಜಯನಗರ ದೇವಾಲಯ ಸ್ತಂಭಗಳ ರೂಪ ಹಲವಾರು ವಿಧಗಳದ್ದು. ಇವುಗಳಲ್ಲಿ ಕೆಲವು, ಅಂದರೆ ಚಿತ್ರಖಂಡ, ಕೋಷ್ಠಸ್ತಂಭ, ಸಿಂಹಕಾಂತ, ವ್ಯಾಳಕಾಂತ, ಶಿಲ್ಪಕಾಂತ ಸ್ತಂಭಗಳ ಪೂರ್ವ/ಸಂಕ್ಷಿಪ್ತ ರೂಪಗಳು ಹಾಗೂ ನಿಜಗಾತ್ರದ ರೂಪಗಳು ನಮಗೆ ದೊರಕುತ್ತವೆ ಎಂದು ಆಗಲೇ ತಿಳಿಸಿದೆ. ಇವಿಷ್ಟೂ ರೀತಿಯ ಸ್ತಂಭಗಳು ವಿಜಯನಗರ ಕಾಲದ ದೇಗುಲಗಳಲ್ಲಿ ವ್ಯಾಪಕವಾಗಿ ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ಕಾಣಬರುತ್ತವೆ. ಈ ವಿಧವಾದ ಸ್ತಂಭಗಳಲ್ಲಿ ವ್ಯಾಳಕಾಂತ, ಸಿಂಹಕಾಂತ ಮತ್ತಿತರ ಸ್ತಂಭಗಳಿಗೆ ಶಾಸ್ತ್ರಗಳಲ್ಲಿ ನಿರೂಪಣೆ ಇದೆ. (ಶಿಲ್ಪಕಾಂತ ಎಂಬ ಹೆಸರಿಗೆ ಶಾಸ್ತ್ರಾಧಾರವಿಲ್ಲ. ಉಳಿದ ಕಂಬಗಳ ಹೆಸರಿನ ಮಾದರಿಯಲ್ಲಿ ಶಿಲ್ಪಕಾಂತ ಎಂಬುದು ನಮ್ಮ ಕಪೋಲ ಕಲ್ಪನೆಯಷ್ಟೆ.) ವ್ಯಾಳ, ಸಿಂಹಕಾಂತ ಸ್ತಂಭಗಳು ಶಾಸ್ತ್ರೋಕ್ತ ಸಂಯುಕ್ತ ಸ್ತಂಭಗಳ ಸಾಲಿಗೆ ಸೇರುತ್ತವೆ. ಇದೇ ಸಂಯುಕ್ತ ಸ್ತಂಭಗಳ ಸಾಲಿಗೆ ವಿಜಯನಗರ ಶಿಲ್ಪಿಗಳು ತಮ್ಮ ಕೌಶಲದಿಂದ ಹೊಸ ಹೊಸ ವಿಧಗಳನ್ನು ಸೇರಿಸಿದ್ದಾರೆ. ಅವುಗಳೆಂದರೆ ಅಶ್ವಕಾಂತ ಸ್ತಂಭಗಳು ಮತ್ತು ಭದ್ರಕಾಂತ ಸ್ತಂಭಗಳು. ಈ ಕಾಲದಲ್ಲಿ ಕಂಡುಬರುವ ಮತ್ತೊಂದು ಬಗೆಯ ಶಾಸ್ತ್ರೋಕ್ತ ಸಂಯುಕ್ತ ಸ್ತಂಭವೆಂದರೆ, ಉಪಸ್ತಂಭಗಳನ್ನುಳ್ಳ ಸ್ತಂಭಗಳು. ಈ ಪ್ರಕಾರದ ಸ್ತಂಭಗಳಲ್ಲೂ ಹಲವಾರು ಪ್ರಭೇದವನ್ನು, ಅದಕ್ಕೆ ಪ್ರತ್ಯೇಕ ಹೆಸರುಗಳನ್ನು ಕಾಣುತ್ತೇವೆ. ಈ ಸಾಲಿನ ಸ್ತಂಭಗಳಿಗೆ ವಿಜಯನಗರ ಶಿಲ್ಪಿಗಳು ಚತುರತೆಯಿಂದ ರೂಪಿಸಿರುವ ಸ್ತಂಭಗಳೆಂದರೆ ಸಂಗೀತ ಸ್ತಂಭಗಳು ಅಥವಾ ಸುನಾದ ಸ್ತಂಭಗಳು. ಈ ಎಲ್ಲಾ ಸ್ತಂಭ ವಿಧಗಳ ವಿವರಣೆ ತಿಳಿದಲ್ಲಿ ಅವುಗಳ ಹೆಚ್ಚುಗಾರಿಕೆಯ ಅಂಶವೂ ಸಹ ನಮಗೆ ಮನವರಿಕೆಯಾಗುತ್ತದೆ.

ಚಿತ್ರಖಂಡ ಸ್ತಂಭಗಳು: ವಿಜಯನಗರ ವಾಸ್ತುವಿನಲ್ಲಿ ಅತ್ಯಂತ ಹೇರಳವಾಗಿ ಬಳಸಲಾಗಿರುವ ಸ್ತಂಭಗಳೆಂದರೆ ಚಿತ್ರಖಂಡ ಸ್ತಂಭಗಳು. ಇವುಗಳು ಕಂಡರಣೆಯಲ್ಲಿ, ತಯಾರಿಕೆಯಲ್ಲಿ, ಸಾಗಣೆಯಲ್ಲಿ, ಖರ್ಚಿನಲ್ಲಿ ಸುಲಭ ಸಾಧ್ಯವಾದವು. ಹೀಗಾಗಿ ಇವುಗಳ ಬಳಕೆ ಹೆಚ್ಚು ಕಂಡುಬರುತ್ತದೆ. ಚೌಕಟ್ಟಾಗಿ, ಉದ್ದವಾದ ದಿಂಡನ್ನು ಐದು ಭಾಗಗಳಾಗಿ ವಿಭಜಿಸಿ, ಕೆಳಗಿನ, ಮಧ್ಯದ ಮತ್ತು ಮೇಲ್ಭಾಗವನ್ನು ಚೌಕವಾಗಿ ಉಳಿಸಿಕೊಂಡು, ಇವುಗಳ ನಡುವಣ ಭಾಗವನ್ನು ಅಷ್ಟಮುಖ ಅಥವಾ ಹದಿನಾರು ಮುಖವನ್ನಾಗಿ ಮಾಡಿದರೆ ಈ ಕಂಬದ ದಿಂಡು ಸಿದ್ಧವಾದಂತೆ. ಈ ಸ್ತಂಭಕ್ಕೆ ಪೀಠವಿರಬಹುದು, ಇಲ್ಲದೆಯೂ ಇರಬಹುದು. ಮೇಲೆ ಒಂದು ಪುಷ್ಪಪೋತಿಕೆಯನ್ನು ಭದ್ರತೆಗಾಗಿ ಕೂಡಿಸಿರುತ್ತಾರೆ. ಸ್ತಂಭಗಳ ಉಪಯೋಗಕ್ಕೆ, ಸಂದರ್ಭಕ್ಕೆ ಅನುಗುಣವಾಗಿ ಚೌಕದಿಂಡಿನ ವಿವಿಧ ಮುಖಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದ್ದು ಕೆಲವೊಮ್ಮೆ ಹೊಳಪು ಬರುವಂತೆ ನುಣುಪು ಮಾಡಲಾಗಿರುತ್ತದೆ.

ಕೋಷ್ಠಕಾಂತ ಸ್ತಂಭಗಳು: ಇದೂ ಸಹ ಚೌಕಟ್ಟಾದ ದಿಂಡನ್ನು ಹೊಂದಿರುತ್ತದೆ. ಇದರ ಮುಖ್ಯ ಅಲಂಕರಣೆ ಷಡ್ವರ್ಗ ದೇವಾಲಯದ ಚಿಕಣಿ ಮಾದರಿಯ ಸರಣಿ ಕೆತ್ತನೆ. ಇದನ್ನೇ ಅವಶ್ಯಕತೆಗೆ ಬೇಕಾದಷ್ಟು ತಲಗಳಲ್ಲಿ ಕೆತ್ತನೆ ಮಾಡಿರುತ್ತಾರೆ. ಈ ಕಂಬಗಳೂ ಸಹ ಸಾಧಾರಣ ಪೀಠ ಮತ್ತು ಪುಷ್ಪಪೋತಿಕೆಗಳನ್ನು ಹೊಂದಿರುತ್ತವೆ.

ಭದ್ರಕಾಂತ ಸ್ತಂಭಗಳು: ಎತ್ತರವಾದ, ಚೌಕಟ್ಟಾದ ಸ್ತಂಭದ ದಿಂಡಿಗೆ ಬೇಕಾದ ಮುಖಗಳಲ್ಲಿ ಅಥವಾ ಎಲ್ಲಾ ಮುಖಗಳಲ್ಲಿ ಭದ್ರಕಗಳ ರೀತಿಯಲ್ಲಿ ಮುಂಚಾಚುಗಳನ್ನು ಕೆತ್ತನೆ ಮಾಡಿರುತ್ತಾರೆ. ಈ ಭದ್ರಕಗಳು ಲಂಬವಾಗಿ, ಮೂಲ ಸ್ತಂಭದ ಮಧ್ಯಾರ್ಧವನ್ನು ಮಾತ್ರ ಆವರಿಸಿರುತ್ತದೆ. ಈ ಭದ್ರಕಗಳು ಸಾವಯವವಾಗಿರಬಹುದು ಅಥವಾ ನಿರವಯವವಾಗಿರಬಹುದು.

ಉಪಸ್ತಂಭಯುತ ಸಂಯುಕ್ತ ಸ್ತಂಭಗಳು: ಪ್ರಧಾನ ಚಿತ್ರಖಂಡ ದಿಂಡಿಗೆ ಹೊಂದಿಕೊಂಡಂತೆ, ಅವಶ್ಯಕತೆಗನುಗುಣವಾಗಿ, ಉಪಸ್ತಂಭಗಳನ್ನು ಕೆತ್ತನೆ ಮಾಡಿರುತ್ತಾರೆ. ಈ ಉಪಸ್ತಂಭಗಳ ಸಂಖ್ಯೆಗಳಿಗನುಗುಣವಾಗಿ ಶಾಸ್ತ್ರಗ್ರಂಥಗಳು ಇವುಗಳಿಗೆ ಪ್ರತ್ಯೇಕ ಹೆಸರುಗಳನ್ನು ಕೊಟ್ಟಿವೆ. ಅವುಗಳೆಂದರೆ:

1. **ಸುಪ್ರತೀಕಾಂತ:** ಸ್ತಂಭದ ಒಂದು ಮುಖದಲ್ಲಿ ಮಾತ್ರ ಒಂದು ಉಪಸ್ತಂಭವಿರುತ್ತದೆ.
2. **ಸೂರ್ಯಕಾಂತ:** ಸ್ತಂಭದ ಎರಡು ವಿರುದ್ಧ ಮುಖಗಳಲ್ಲಿ ಒಂದೊಂದು ಉಪಸ್ತಂಭವಿರುತ್ತದೆ.
3. **ತಿಳಿದಿಲ್ಲ:** ಸ್ತಂಭದ ಮೂರು ಮುಖಗಳಲ್ಲಿ ಒಂದೊಂದು ಉಪಸ್ತಂಭವಿರುತ್ತದೆ.
4. **ಬ್ರಾಹ್ಮಣಕಾಂತ:** ಸ್ತಂಭದ ನಾಲ್ಕು ಮುಖಗಳಲ್ಲಿ ಒಂದೊಂದು ಉಪಸ್ತಂಭವಿರುತ್ತದೆ.
5. **ನಂದೀಶಕಾಂತ:** ಸ್ತಂಭದ ಎರಡು ಮುಖಗಳಲ್ಲಿ ಮಾತ್ರ ಜೋಡಿ ಉಪಸ್ತಂಭಗಳಿರುತ್ತವೆ.
6. **ಮೇರುಕಾಂತ:** ಸ್ತಂಭದ ನಾಲ್ಕು ಮುಖಗಳಲ್ಲಿ ಜೋಡಿ ಉಪಸ್ತಂಭಗಳಿರುತ್ತವೆ.

ಸುನಾದ (ಸಂಗೀತ) ಸ್ತಂಭಗಳು: ಈ ಕಂಬಗಳು ಅವುಗಳ ಗಾತ್ರದಲ್ಲಿ ವಿಪರೀತ ಭಾರಿಯಾದವು. ಇವುಗಳ ದಿಂಡು ಮೂಲತಃ ಚೌಕವಾದದ್ದು. ಈ ಸ್ತಂಭದಲ್ಲಿ ಮೂರು ಮುಖ್ಯ ಅಲಂಕಾರಿಕ ಭಾಗಗಳನ್ನು ಕಾಣಬಹುದು. ಸ್ತಂಭದ ದಿಂಡೇ ಭಾರಿಯಾಗಿರುವುದರಿಂದ ಇದು ಪೀಠರಹಿತವಾಗಿದ್ದು, ಇದರ ಬುಡಭಾಗದಲ್ಲಿ ಪೀಠವನ್ನು ಹೋಲುವ ಅಲಂಕರಣವನ್ನು ಕಾಣಬಹುದು. ಸಾಮಾನ್ಯವಾಗಿ ಉಪಪೀಠ, ಅಧಿಷ್ಠಾನ, ಶಿಲ್ಪಸಾಲು, ಶಿಲ್ಪಪಟ್ಟಿಕೆಗಳು, ಇತ್ಯಾದಿ ಕೆತ್ತನೆಗಳನ್ನು ಹೊಂದಿರುತ್ತವೆ. ಮಧ್ಯದ ಭಾಗ ಹೆಚ್ಚು ಎತ್ತರವಿರುತ್ತದೆ. ಈ ಭಾಗದಲ್ಲಿ ದಿಂಡಿನ ಸುತ್ತಲೂ, ಅಥವಾ ಬೇಕಾದ ಮುಖಗಳಲ್ಲಿ ಉಪಸ್ತಂಭಗಳನ್ನು ಬಿಡಿಸಿರುತ್ತಾರೆ. ಈ ಉಪಸ್ತಂಭಗಳು ಒಂದೇ ಸಾಲಿನಲ್ಲಿರುತ್ತವೆ. ಅಪರೂಪವಾಗಿ ಎರಡು ಸಾಲನ್ನೂ ಸಹ ಕಾಣಬಹುದು. ಈ ಉಪಸ್ತಂಭಗಳು ಸಾಮಾನ್ಯ ಸ್ತಂಭಗಳ ಎಲ್ಲಾ ಅವಯವಗಳನ್ನು ಹೊಂದಿರುತ್ತವೆ. ಇವುಗಳ ಕೇಂದ್ರಭಾಗದಲ್ಲಿ ಸ್ತಂಭದ ಪ್ರಧಾನ ದಿಂಡು ದಪ್ಪವಾಗಿ ಇರುತ್ತದೆ. ಇದು ಸಾಮಾನ್ಯವಾಗಿ ಚಿತ್ರಖಂಡ ವರ್ಗದ್ದಾಗಿರುತ್ತದೆ. ಸ್ತಂಭದ ದಿಂಡಿನ ಮೇಲ್ಭಾಗದಲ್ಲಿ ವಾಸ್ತು–ಶಿಲ್ಪ ಮತ್ತು ಅಲಂಕಾರಿಕ ಕೆತ್ತನೆಗಳು ಕಾಣಬರುತ್ತವೆ. ಸ್ತಂಭದ ದಿಂಡಿನ ಮೇಲೆ ನೇರವಾಗಿ ಪುಷ್ಪಪೋತಿಕೆಗಳು ಕುಳಿತಿರುತ್ತವೆ.

ಈ ಪ್ರಕಾರದ ಸ್ತಂಭಗಳಿಗೆ 'ಸುನಾದ' ಅಥವಾ ಸಂಗೀತ ಸ್ತಂಭಗಳೆಂದು ಈಗಿನವರು ಕರೆಯುವುದು ವಾಡಿಕೆ. ಕಾರಣ, ಈ ಸ್ತಂಭದ ಉಪಸ್ತಂಭಗಳನ್ನು ಮೃದುವಾಗಿ ಕುಟ್ಟಿದಾಗ ಮಧುರವಾದ ನಾದ ಹೊರಡುವುದು. ಈ ನಾದಗಳು ಪ್ರತಿಯೊಂದು ಉಪಸ್ತಂಭದ ಗಾತ್ರ, ಉದ್ದ ಹಾಗೂ ಶಿಲೆಯ ಗುಣಕ್ಕೆ ಅನುಗುಣವಾಗಿರುತ್ತದೆ. ಇವುಗಳ ಗಾನಮಾಧುರ್ಯವನ್ನು ಸರಿಯಾಗಿ ಗ್ರಹಿಸಿ, ಅವುಗಳನ್ನು ಹಗುರವಾಗಿಯೂ ಕ್ರಮವಾಗಿಯು ಕುಟ್ಟುತ್ತಾ ಹೋದಲ್ಲಿ ಸಂಗೀತದ ಸಪ್ತಸ್ವರಗಳನ್ನು, ಆರೋಹಣ–ಅವರೋಹಣಗಳಲ್ಲಿ ಹೊರಡಿಸಬಹುದು. ಈ ರೀತಿಯ ಸ್ತಂಭಗಳನ್ನು ಪಾಶ್ಚಾತ್ಯ ವಿದ್ವಾಂಸರು 'ಮ್ಯೂಸಿಕಲ್–ಪಿಲ್ಲರ್ಸ್' ಎಂದು ಕರೆದಿದ್ದಾರೆ. ಸುನಾದ/ಸಂಗೀತ ಸ್ತಂಭವೆನ್ನುವುದು ಶಾಸ್ತ್ರೋಕ್ತವಲ್ಲ. ಅಲ್ಲದೇ ಈ ರೀತಿಯ ಸ್ತಂಭಗಳ ವ್ಯಾಖ್ಯೆಯು ಶಾಸ್ತ್ರಗ್ರಂಥಗಳಲ್ಲಿಲ್ಲ. ಆದ್ದರಿಂದ ಈ ಪ್ರಕಾರದ ಸ್ತಂಭಗಳು ಕೇವಲ ವಿಜಯನಗರ ಶಿಲ್ಪಿಗಳ ಹೆಮ್ಮೆಯ ಚಮತ್ಕಾರಿಕ ಆವಿಷ್ಕಾರವೆನ್ನಬಹುದು.

ಮಿಶ್ರಜಾತಿಯ ಸಂಯುಕ್ತ ಸ್ತಂಭಗಳು: ಹೆಸರೇ ಸೂಚಿಸುವಂತೆ ಇದು ಸಂಯುಕ್ತ ಸ್ತಂಭದ ಒಂದು ಪ್ರಭೇದ. ಇವನ್ನು ಮಿಶ್ರಜಾತಿಯವುಗಳೆಂದು ಇಲ್ಲಿ ಪರಿಗಣಿಸಲಾಗಿದೆ. ಈ ಜಾತಿಯ ಸಂಯುಕ್ತ ಸ್ತಂಭಗಳನ್ನೂ ಸಹ ಶಾಸ್ತ್ರಗ್ರಂಥಗಳು ಉಲ್ಲೇಖಿಸುವುದಿಲ್ಲ. ಆದರೆ ವಿಜಯನಗರ ಶಿಲ್ಪಿಗಳು ಈ ರೀತಿಯ ಸ್ತಂಭಗಳನ್ನು ಅವುಗಳ ಸೌಂದರ್ಯದ ಉತ್ಕೃಷ್ಟತೆಗೆ ಕೊಂಡೊಯ್ದು ಬಳಸಿರುವುದರಿಂದ, ಇವೂ ಸಹ ವಿಜಯನಗರ ಶಿಲ್ಪಿಗಳ ಚತುರ ಕಲ್ಪನೆಗಳೆಂದೇ ಹೇಳಬಹುದು. ಈ ಸ್ತಂಭ ವಿಧದಲ್ಲಿ ಅನೇಕ ಬಗೆಗಳಿವೆ. ಅವುಗಳೆಂದರೆ:

1. ಚಿತ್ರಖಂಡ ದಿಂಡಿಗೆ ಸಿಂಹಕಾಂತ ಮತ್ತು ವ್ಯಾಳಕಾಂತಗಳನ್ನು ಹೊಂದಿಸಿರುವುದು.
2. ಚಿತ್ರಖಂಡ ದಿಂಡಿಗೆ ಉಪಸ್ತಂಭ ಮತ್ತು ಅದಕ್ಕೆ ಹೊಂದಿಕೊಂಡಂತೆ ಮೂರ್ತಿಶಿಲ್ಪ
3. ಚಿತ್ರಖಂಡ ದಿಂಡಿಗೆ ಎರಡು ಮುಖಗಳಲ್ಲಿ ಉಪಸ್ತಂಭಗಳು ಇನ್ನೆರಡು ಮುಖಗಳಲ್ಲಿ ವ್ಯಾಳಕಾಂತ/ಸಿಂಹಕಾಂತ ಸ್ತಂಭ
4. ಚಿತ್ರಖಂಡ ದಿಂಡು ಮತ್ತು ಉಪಸ್ತಂಭಗಳ ನಡುವೆ ಜಾಲಕ
5. ಚಿತ್ರಖಂಡ ದಿಂಡಿಗೆ ಒಂದು ಕಡೆ ಭದ್ರಕ ಮತ್ತು ಅದಕ್ಕೆ ಹೊಂದಿಕೊಂಡಂತೆ ಮೂರ್ತಿಶಿಲ್ಪ

ಹೆಚ್ಚಿನ ಕ್ಷೇತ್ರಕಾರ್ಯ ನಡೆಸಿದಲ್ಲಿ, ಈ ಮೇಲೆ ಹೇಳಿದ ಮಿಶ್ರವಿಧಗಳಲ್ಲದೆ ಇನ್ನೂ ಹೊಸ ಹೊಸ ಪ್ರಭೇದಗಳು ಕಾಣಬರುವ ಸಾಧ್ಯತೆಗಳೂ ಇಲ್ಲದಿಲ್ಲ.

ವ್ಯಾಳಕಾಂತ, ಸಿಂಹಕಾಂತ, ಅಶ್ವಕಾಂತ ಮತ್ತು ಶಿಲ್ಪಕಾಂತ ಸ್ತಂಭಗಳು: ಬೃಹದಾಕಾರದ ಸ್ತಂಭಗಳ ಮಾದರಿಗಳಾಗಿದ್ದು, ಇವೂ ಸಂಯುಕ್ತ ಸ್ತಂಭಗಳ ಸಾಲಿಗೆ ಸೇರುತ್ತವೆ. ಚಿತ್ರಖಂಡ ಪ್ರಕಾರದ ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಒಂದು ಮುಖದಲ್ಲಿ, ಹಿಂಗಾಲಿನ ಮೇಲೆ ನೆಟ್ಟಗೆ ನಿಂತಿರುವ (ಜಿಗಿಯುತ್ತಿರುವ) ವ್ಯಾಳ, ಸಿಂಹ ಅಥವಾ ಅಶ್ವದ ಶಿಲ್ಪವಿರುತ್ತದೆ. ಈ ಪ್ರಾಣಿಗಳ ಬೆನ್ನಿನ ಮೇಲೆ ಕುಳಿತಿರುವ ವೀರ ಸವಾರರ ಶಿಲ್ಪಗಳು ಸಾಮಾನ್ಯ ದೃಶ್ಯ. ಕೆಲವು ಉದಾಹರಣೆಗಳು ವೀರಯೋಧ ರಹಿತವಾಗಿಯೂ ಉಂಟು. ಆಸೀನ ವೀರ ರಹಿತ ವ್ಯಾಳ, ಸಿಂಹಕಾಂತ ಸ್ತಂಭಗಳು ಸಂಕ್ಷಿಪ್ತ ಗಾತ್ರದಲ್ಲಿ ಹೊಯ್ಸಳ ಶಿಲ್ಪಕಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಬರುತ್ತವೆ. ವಿಜಯನಗರ ಶಿಲ್ಪಿಗಳು ಇದೇ ಪ್ರಕಾರವನ್ನೇ ವಿಸ್ತರಿಸಿ, ವೈಭವೀಕರಿಸಿ, ಗಾತ್ರವನ್ನು ಹೆಚ್ಚಿಸಿ ಸ್ವತಂತ್ರ ಸ್ತಂಭಗಳನ್ನಾಗಿ ಮಾರ್ಪಡಿಸಿದರು. ಇದರ ಸಾಲಿಗೆ ಆಸೀನ ವೀರ ಸಹಿತವಾದ ಅಶ್ವಗಳನ್ನು ಕಂಡರಣೆ ಮಾಡಿ ಅಶ್ವಕಾಂತ ಸ್ತಂಭಗಳೆಂಬ ಹೊಸ ವಿಧವನ್ನು ವಿಜಯನಗರ ಶಿಲ್ಪಿಗಳು ಪರಿಚಯಿಸಿದರು. ಶಿಲ್ಪಕಾಂತ ಸ್ತಂಭಗಳಿಗೆ ಸುದೀರ್ಘ ಪರಂಪರೆಯನ್ನು ಇದೆ ಎಂದು ಆಗಲೇ ತಿಳಿದಿದ್ದೇವೆ. ಬಾದಾಮಿ ಚಾಲುಕ್ಯರ ಕಾಲದಿಂದ ಪ್ರಾರಂಭವಾಗುವ ಈ ಪರಂಪರೆ ಹೊಯ್ಸಳರ ಕಲೆಯಲ್ಲೂ ಕಾಣುತ್ತೇವೆ. ವಿಜಯನಗರ ಶಿಲ್ಪಿಗಳು ಈ ಸ್ತಂಭದ ವಿಧವನ್ನು ಮತ್ತಷ್ಟು ವೈಭವೀಕರಿಸಿದರು. ಬೃಹದಾಕಾರದ ಕಂಬದ ದಿಂಡಿನ ಮುಖಗಳಲ್ಲಿ ಆಳೆತ್ತರದ ಮೂರ್ತಿಶಿಲ್ಪಗಳನ್ನು ಕೆತ್ತನೆ ಮಾಡಿ ಶಿಲ್ಪಕಾಂತ ಸ್ತಂಭಗಳನ್ನು ರೂಪಿಸಿದರು.

ವಿಜಯನಗರ ವಾಸ್ತು ಶೈಲಿಯಲ್ಲಿ ಸ್ತಂಭದ ದಿಂಡಿನ ಮೇಲೆ ಪೋತಿಕೆಗಳು ನೇರವಾಗಿ ಕುಳಿತಿರುವುದು ಕಾಣಬರುತ್ತವೆ. ವಿಜಯನಗರ ಪೂರ್ವ ಕಾಲದಲ್ಲಿನ ಕಂಬಗಳಿಗಿರುವಂತೆ, ಈ ಸ್ತಂಭಗಳಿಗೆ ಕುಂಭ, ತಡಿ, ಮಂಡಿ, ಫಲಕ, ಇತ್ಯಾದಿ ಅವಯವಗಳಿರುವುದಿಲ್ಲ. ಕಾರಣ ಕಟ್ಟಡದ ಭದ್ರತೆ. ಸೇರಿಕೆಗಳು (ಜಾಯಿಂಟ್ಸ್) ಹೆಚ್ಚಾದಂತೆಲ್ಲಾ ಕಂಬದ ಭದ್ರತೆ ಕಡಿಮೆಯಾಗುತ್ತಾ ಹೋಗುತ್ತದೆ ಎಂಬ ವಿಚಾರ ಸರ್ವಮಾನಿತ. ವಿಜಯನಗರ ಕಾಲದ ದೇವಾಲಯಗಳು ವಿಶಾಲವಾದ ಕಟ್ಟಡಗಳು. ಎತ್ತರ, ಅಗಲ ಮತ್ತು ಪ್ರಮಾಣದಲ್ಲಿ ಹಿಂದಿನ ದೇವಾಲಯಗಳಿಗಿಂತ ಹೆಚ್ಚು ವಿಸ್ತೀರ್ಣವುಳ್ಳಂತಹವು.

ಹೀಗಾಗಿ ಭದ್ರತೆಗಾಗಿ ಅತೀ ಕಡಿಮೆ ಸೇರಿಕೆಗಳುಳ್ಳ ಕಂಬಗಳನ್ನು ಅವರು ರಚಿಸಿದರು. ಎತ್ತರವಾದ ಏಕಶಿಲೆಯ ಕಂಬದ ದಿಂಡಿನ ಮೇಲೆ ನೇರವಾಗಿ ಪೋತಿಕೆಗಳನ್ನು ಯೋಜಿಸಿದರು. ವಿಜಯನಗರ ಕಾಲದಲ್ಲಿ ಕಂಡುಬರುವ ಪೋತಿಕೆಗಳೆಲ್ಲವೂ ನೋಟದಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯವು. ಇವುಗಳನ್ನು ಪುಷ್ಪಪೋತಿಕೆಗಳೆಂದು ಕರೆಯುವರು. ಉದ್ದವಾದ ಏಕಶಿಲಾ ಪೋತಿಕೆಯ ಎರಡೂ ತುದಿಗಳು, ಮೇಲಕ್ಕೆತ್ತಿ ಮುಂದೆ ಬಾಗಿಸಿದ ಆನೆಯ ಸೊಂಡಿಲಿನಂತೆ ಕಾಣುತ್ತದೆ. ಬಾಗಿದ ಭಾಗದ ತುದಿಗಳಲ್ಲಿ ಪುಷ್ಪದಳ, ಪುಷ್ಪ ಮತ್ತು ಮುಕುಳದ ರೀತಿಯಲ್ಲಿ ಕೆತ್ತನೆ ಮಾಡಿರುತ್ತಾರೆ. ಈ ವಿನ್ಯಾಸದ ಪೋತಿಕೆಗಳು ವಿಜಯನಗರ ಕಾಲಕ್ಕೆ ಹಿಂದೆಯೇ ಕರ್ನಾಟಕದಲ್ಲಿ ದೊರೆಯುತ್ತವೆ ಎಂದು ಆಗಲೇ ಹೇಳಿದೆ. ಈ ಪೋತಿಕೆಗಳು ಒಂದೇ ಹಂತದಲ್ಲಿ ಇರಬಹುದು ಅಥವಾ ಒಂದರ ಮೇಲೊಂದರಂತೆ 3–4 ಹಂತಗಳಲ್ಲೂ ಮುಂಚಾಚುತ್ತಾ ಮೇಲೇರಿ ಸ್ತಂಭದ ಎತ್ತರವನ್ನು ಹೆಚ್ಚಿಸುತ್ತಾ, ಸ್ತಂಭಗಳ ಅಂತರವನ್ನು ಕಡಿಮೆ ಮಾಡಿ ಛಾವಣಿಗೆ ಹೆಚ್ಚು ಆಧಾರವನ್ನು ನೀಡುತ್ತವೆ.

ವಿಜಯನಗರ ದೇವಾಲಯಗಳ ವಿಶಾಲ ರಂಗಮಂಟಪಗಳ, ಮಹಾಮಂಟಪಗಳ, ಕಲ್ಯಾಣಮಂಟಪಗಳ ವಿತಾನದ ಒಳಮುಖದಲ್ಲಿ, ಪ್ರಸ್ತರ ಭಾಗದಲ್ಲಿ ಅಗಲವಾದ ಗೂಡುಗಳನ್ನು ಸಾಮಾನ್ಯವಾಗಿ ಕಾಣುತ್ತೇವೆ. ಕಂಬದ ಎತ್ತರಕ್ಕೆ ಯಾವಾಗಲೂ ಒಂದು ಮಿತಿ ಇರುತ್ತದೆ. ಮಂಟಪದ ಮಧ್ಯದ ಅಂಕಣದ ಒಳ ಎತ್ತರವನ್ನು ಹೆಚ್ಚಿಸಿ, ತಲೆಜಾಗವನ್ನು (ಹೆಡ್ ರೂಂ) ಹೆಚ್ಚಾಗಿಸಲು, ಕಂಬದ ತೊಲೆಗಳ ಮೇಲೆ ನಿರ್ಮಾಣ ಮಾಡುವ ಗೋಡೆಯ ರೀತಿಯ ಕಟ್ಟಡಕ್ಕೆ ಪ್ರಸ್ತರವೆಂದು ಕರೆಯುತ್ತಾರೆ. ಎತ್ತರವಾದ ಪ್ರಸ್ತರಗಳು ಬಾದಾಮಿ ಚಾಳುಕ್ಯರ ಗುಡಿಯಲ್ಲೇ ಕಾಣಬರುತ್ತವೆ. ಇದೇ ವಿಧಾನವನ್ನು ಹೆಚ್ಚು ವೈಭವೀಕರಿಸಲು, ವಿಜಯನಗರ ಶಿಲ್ಪಿಗಳು ಪ್ರಸ್ತರದ ಒಳಮುಖದಲ್ಲಿ ಆಳವಾದ ಗೂಡುಗಳನ್ನು ನಿರ್ಮಿಸಿ ಅಲ್ಲಿ ಗಾರೆ ಗಚ್ಚಿನ ಶಿಲ್ಪಗಳ ಅಲಂಕರಣವನ್ನು ಮಾಡುವ ಪದ್ಧತಿಯನ್ನು ಬಳಕೆಗೆ ತಂದರು. ಇದರಿಂದಾಗಿ ವಿಶಾಲ ಮಂಟಪಗಳ ಮಧ್ಯದ ಅಂಕಣದ ಮೇಲ್ಛಾವಣಿಯನ್ನು ಎತ್ತರಿಸಿದಂತೆಯೂ ಆಯಿತು ಅಲ್ಲದೆ ಮೇಲ್ಛಾವಣಿಗೆ ಹೊಂದಿಕೊಂಡಂತೆ ಸುರಲೋಕ ಸೃಷ್ಟಿಯ ಕಲ್ಪನೆಯು ಕೈಗೂಡಿದಂತೆ ಆಯಿತು.

ರಂಗಮಂಟಪಗಳ ಮೇಲ್ಛಾವಣಿ ದೀರ್ಘಾಯತಾಕಾರವಾದ ವಿಶಾಲ ಅಂಕಣ. ಈ ವಿಶಾಲ ಪ್ರದೇಶದ ಮೇಲ್ಮೈಯನ್ನು ಮಟ್ಟವಾದ ನುಣುಪಾದ ಪ್ರದೇಶವನ್ನಾಗಿ ಪರಿವರ್ತಿಸಿ, ಇಡೀ ಛಾವಣಿಯನ್ನು ಸುಂದರವಾದ ಪೌರಾಣಿಕ/ ಚಾರಿತ್ರಿಕ ವರ್ಣ ಚಿತ್ರಗಳಿಂದ ಅಲಂಕರಿಸುವ ಕಲೆ ವಿಜಯನಗರ ಕಲಾವಿದರ ಚತುರಮತಿಯ ಒಂದು ಕೊಡುಗೆ. ಇಂತಹ ವಿಶಾಲವಾದ, ಸಮತಟ್ಟಾದ ವಿತಾನ ಪ್ರದೇಶವನ್ನು ನಿರ್ಮಿಸಲು ಬೃಹತ್ತಾದ, ಉದ್ದವಾದ ಕಲ್ಲಿನ ಚಪ್ಪಡಿಗಳನ್ನು ಅವರು ಬಳಸಿದರು. ವಿಜಯವಿಠಲ ದೇವಾಲಯದಲ್ಲಿ ಇಂತಹ ಬೃಹತ್ತಾದ ಚಪ್ಪಡಿಯನ್ನು ವಿತಾನಕ್ಕೆ ಬಳಸಿರುವುದು, ಮತ್ತು ಕೆಲವೆಡೆ ಅವು ಇಂದು ಭಗ್ನಾವಸ್ಥೆಯಲ್ಲಿ ಇರುವುದನ್ನು ಕಾಣಬಹುದಾಗಿದೆ.

ಉದ್ದವಾದ, ಭಾರವಾದ ಚಪ್ಪಡಿಗಳನ್ನು ಬಳಸಿ ನಿರ್ಮಿಸಿದ ಈ ರೀತಿಯ ಮೇಲ್ಛಾವಣಿ, ಭದ್ರತೆಯ ದೃಷ್ಟಿಯಿಂದ ಸ್ವಲ್ಪ ಅನುಮಾನಿಸುವಂತಹ ವಾಸ್ತುವೇ ಆಗಿರುತ್ತದೆ. ಅಲ್ಲದೆ ಈ ರೀತಿಯ ಛಾವಣಿಯ ವೈಶಾಲ್ಯಕ್ಕೂ ಒಂದು ಮಿತಿ ಇರುತ್ತದೆ. ಈ ನಿರ್ಮಾಣ ವಿಧಾನಕ್ಕೆ ಬದಲಾಗಿ ಇನ್ನೂ ಹೆಚ್ಚು ದೃಢವಾದ ವಿತಾನ ಮಾದರಿಯನ್ನು ವಿಜಯನಗರ ವಾಸ್ತುತಜ್ಞರು ರೂಪಿಸಿದರು, ಅಲ್ಲದೇ ಅದನ್ನು ಯಶಸ್ವಿಯಾಗಿ ಕಾರ್ಯಗತವೂ ಮಾಡಿದ್ದಾರೆ. ಅದೇ ತೂಗುಛಾವಣಿಯ ವಿಧಾನ. ಈ ವಿಧದ ನಿರ್ಮಾಣದಲ್ಲಿ ಉದ್ದುದ್ದವಾದ ಚಪ್ಪಡಿಗಳ ಬದಲು ಅವುಗಳಿಗಿಂತ ಉದ್ದವಾದ ಬೃಹದಾಕಾರದ ಕಲ್ಲಿನ ತೊಲೆಗಳು ಬಳಕೆಯಾಗಿವೆ. ಕಂಬದ ಸಾಲಿನ ಮೇಲೆ ನಿಂತಿರುವ ಈ ಬೃಹತ್ ಕಲ್ಲಿನ ತೊಲೆಗಳ ಅಂತರವನ್ನು ಮುಚ್ಚಲು ಸಣ್ಣ ಸಣ್ಣ ಚಪ್ಪಡಿಗಳು ಬಳಕೆಯಾಗಿವೆ. ನಿರ್ಮಾಣ ಮತ್ತು ಜೋಡಣೆಯ ವಿಧಾನ ಬದಲಾಗಿರುವುದಲ್ಲದೆ

ಹೆಚ್ಚು ಕೌಶಲಪೂರಿತವೂ ಆಗಿದೆ. ಈ ವಿಧಾನದಲ್ಲಿ ಭದ್ರತೆಯೂ ಹೆಚ್ಚುತ್ತದೆಯಲ್ಲದೆ ಜೀರ್ಣೋದ್ಧಾರ ಕೆಲಸವೂ ಸುಲಭ. ಈ ವಿಧಾನದ ನಿರ್ಮಾಣದಲ್ಲಿ ಶ್ರೇಷ್ಠಮಟ್ಟದ ತಾಂತ್ರಿಕ ಜ್ಞಾನ, ಕೌಶಲ, ನಿರ್ಮಾಣ ಜ್ಞಾನದ ಬೆಂಬಲ ಅತ್ಯಗತ್ಯ ಎಂಬುದಂತೂ ಸತ್ಯ. ವಿಜಯನಗರ ಕಾಲದ ವಾಸ್ತುತಂತ್ರ ಜ್ಞಾನಿಗಳು, ಶಿಲ್ಪಿಗಳು ಆ ಕಾಲಕ್ಕೆ ಅತ್ಯಂತ ಶ್ರೇಷ್ಠವೆನಿಸುವಂತಹ ಕಟ್ಟಡ ನಿರ್ಮಾಣ ತಂತ್ರಜ್ಞಾನವನ್ನು ಹೊಂದಿದ್ದರೆಂಬ ಅಂಶವನ್ನು ಈಗಲೂ ಸುಸ್ಥಿತಿಯಲ್ಲಿರುವ ಈ ಛಾವಣಿಗಳು ನಿರೂಪಿಸುತ್ತವೆ. ಭಾರತೀಯ ಶಿಲಾ ವಾಸ್ತುತಂತ್ರಜ್ಞಾನದ ಬೆಳವಣಿಗೆಯ ಪರಾಕಾಷ್ಠತೆಯನ್ನು ಈ ವಿಧದ ಛಾವಣಿಗಳು ನಿರೂಪಿಸುತ್ತವೆ ಎಂಬುದಂತು ಅಕ್ಷರಶಃ ಸತ್ಯವಾಗಿದೆ.

ಈ ವಿಧದ ಛಾವಣಿಯ ನಿರ್ಮಾಣದಲ್ಲಿ ಸುಮಾರು 35–40 ಅಡಿ ಉದ್ದ, ನಾಲ್ಕು ಅಡಿ ಎತ್ತರ, ಐದಡಿ ದಪ್ಪದ ಏಕಶಿಲಾ ತೊಲೆಗಳು ಬಳಕೆಯಾಗಿವೆ. ಇಷ್ಟು ಗಾತ್ರದ, ಭಾರವಾದ ತೊಲೆಗಳನ್ನೂ ಖನಿಮಾಡಿ, ಕತ್ತರಿಸಿ, ಸಾಗಿಸಿ, ಕನಿಷ್ಠ ಹದಿನೈದು ಅಡಿ ಎತ್ತರಕ್ಕೆ ಏರಿಸಿ, ಸ್ತಂಭ ಸಾಲಿನ ಮೇಲೆ ನಿಖರವಾಗಿ ಸ್ಥಾಪಿಸಿರುವ ಕಾರ್ಯ ನಿಜಕ್ಕೂ ಶ್ಲಾಘನೀಯವಾದದ್ದು, ಅಪ್ರತಿಮವಾದದ್ದು. ಇಷ್ಟು ಬೃಹದಾಕಾರದ ಕಲ್ಲಿನ ತೊಲೆಗಳ ಹೇರಳವಾದ ಬಳಕೆ ಭಾರತೀಯ ವಾಸ್ತುವಿನ ಯಾವುದೇ ಕಾಲದ ಶೈಲಿಯಲ್ಲಿ ಕಂಡು ಬಂದಿಲ್ಲವೆಂದೇ ಹೇಳಬೇಕು.

ಅಗಾಧವಾದ ಈ ತೊಲೆಗಳನ್ನು ಒಂದು ವಿಶೇಷ ರೀತಿಯಲ್ಲಿ ಕತ್ತರಿಸಿ ತಯಾರಿಸಿದ್ದಾರೆ. ತೊಲೆಗಳ ಕೆಳಭಾಗವನ್ನು ಅಚ್ಚುಕಟ್ಟಾಗಿ ಸಮಮಾಡಿದ್ದಾರೆ. ತೊಲೆಯ ಎರಡೂ ಪಾರ್ಶ್ವಗಳ ಕೆಳಭಾಗದಲ್ಲಿ ಸಾಕಷ್ಟು ದಪ್ಪ, ಅಗಲದ ಚಾಚನ್ನು ಬಿಟ್ಟು ಮೇಲ್ಭಾಗವನ್ನು ನೀಟಾಗಿ ತೆಗೆದಿದ್ದಾರೆ. ಇದರಿಂದ ತೊಲೆಗೆ ತಲೆಕೆಳಕಾದ ಆಂಗ್ಲ ಅಕ್ಷರ 'ಟಿ' (T) ಖಂಡ ಭಾಗ ಬಂದಿದೆ. ನಿರ್ದಿಷ್ಟ ಅಂತರಗಳಲ್ಲಿ ಕಂಬಗಳ ಮೇಲೆ ಈ ತೊಲೆಯನ್ನು ಕೂಡಿಸಿ ಮಧ್ಯಂತರದಲ್ಲಿ ಇಡೀ T ಅಕ್ಷರದಾಕಾರದ ಖಂಡವುಳ್ಳ ಚಪ್ಪಡಿಗಳನ್ನು ತೊಲೆಯ ಕೆಳಭಾಗದ ಚಾಚಿನ ಮೇಲೆ ಕೂಡಿಸಿದ್ದಾರೆ. ತೊಲೆಯ ಚಾಚಿನ ದಪ್ಪಕ್ಕೆ ಅನುಗುಣವಾಗಿ ಚಪ್ಪಡಿಗಳ ದಪ್ಪವಿರುವುದರಿಂದ, ತೊಲೆಯ ಕೆಳಭಾಗ ಮತ್ತು ಚಪ್ಪಡಿಗಳ ಕೆಳಭಾಗ ಒಂದೇ ಮಟ್ಟದಲ್ಲಿರುತ್ತದೆ. ಛಾವಣಿಯನ್ನು ಗಾರೆಯಿಂದ ಲೇಪನ ಮಾಡಿದರೆ ಚಪ್ಪಡಿ–ತೊಲೆಗಳ ಜೋಡಣೆಯೇ ಮರೆಯಾಗಿ ಸಮತಟ್ಟಾದ, ವಿಶಾಲವಾದ ಪಟದಂತೆ ಛಾವಣಿ ಕಾಣಿಸುತ್ತದೆ. ಹಾಗೆಯೇ ತೊಲೆಗಳು ಸಂಪೂರ್ಣ ಮರೆಯಾಗಿ ಹಜಾರಕ್ಕೆ ಹೆಚ್ಚು ತಲೆಜಾಗ (ಹೆಡ್ ರೂಂ) ದೊರೆಯುತ್ತದೆ.

ಈ ವಿಧಾನದಲ್ಲಿ ನಿರ್ಮಿತವಾದ ರಂಗಮಂಟಪಗಳನ್ನು ಹಂಪೆಯ ವಿರೂಪಾಕ್ಷ, ವಿಜಯವಿಠಲ, ಅಚ್ಯುತರಾಯ, ಪಟ್ಟಾಭಿರಾಮ ಮತ್ತು ಮಾಲ್ಯವಂತ ರಘುನಾಥ ದೇವಾಲಯ ಸಂಕೀರ್ಣದಲ್ಲಿ ನಾನು ಗಮನಿಸಿದ್ದೇನೆ. ಈ ಎಲ್ಲಾ ರಂಗಮಂಟಪಗಳೂ ಕ್ರಿ.ಶ. ಸು. 1550ರ ಆಸುಪಾಸಿನಲ್ಲಿ ನಿರ್ಮಾಣವಾಗಿವೆ. ಹೀಗಾಗಿ ಈ ಮಾದರಿಯ ತಾಂತ್ರಿಕ ಜ್ಞಾನವನ್ನು ವಿಜಯನಗರ ಶಿಲ್ಪಿಗಳು ಆ ಕಾಲದಲ್ಲಿ ಕಲಿತು ಆಚರಣೆಗೆ ತಂದಿರಬೇಕು. ದುರಾದೃಷ್ಟವಶಾತ್ ಈ ನಿರ್ಮಿತಿಗಳ ನಂತರದ ಕೆಲವೇ ವರ್ಷಗಳಲ್ಲಿ ವಿಜಯನಗರ ಸಾಮ್ರಾಜ್ಯ ನಾಶವಾಯಿತು. ಇಂತಹ ಅತೀ ಮುಂದುವರೆದ ತಾಂತ್ರಿಕ ನೈಪುಣ್ಯತೆ ಪೋಷಣೆ ಇಲ್ಲದೆ ನಾಶವಾಯಿತು.

ವಿಜಯನಗರ ಕಾಲದ ವಾಸ್ತುವಿಶೇಷತೆ ಬಹುರೂಪಿಯಾಗಿದ್ದು, ಹಲವಾರು ಪ್ರಧಾನ ಹಾಗೂ ಸಣ್ಣ ಪುಟ್ಟ ವಿಧಾನಗಳಲ್ಲಿ ವಿಜಯನಗರ ಶಿಲ್ಪಿಗಳು ಸಾಕಷ್ಟು ಪ್ರಮುಖ ಬದಲಾವಣೆಗಳನ್ನು ಹೊಸ ಹೊಸ ವಿಧಾನಗಳನ್ನೂ ಬೆಳಕಿಗೆ ತಂದರು. ಅವುಗಳಲ್ಲಿ ಕೆಲವನ್ನು ಹೆಸರಿಸಿ, ಇನ್ನು ಕೆಲವು ವಿಧಾನಗಳ ಸಂಕ್ಷಿಪ್ತ ವಿವರಗಳನ್ನು ನೀಡ ಬಯಸುತ್ತೇನೆ. ಮೊದಲನೆಯದಾಗಿ ವಿಜಯನಗರ ಶಿಲ್ಪಿಗಳು ಹಲವಾರು ಬೃಹತ್ ಶಿಲಾಮೂರ್ತಿಗಳನ್ನು ಕೆತ್ತನೆ ಮಾಡಿ ಅವುಗಳಿಗೆ ಸೂಕ್ತ ಗುಡಿ, ಆವರಣ, ಮಂಟಪಗಳನ್ನು ಕಟ್ಟುವ ಪದ್ಧತಿಯನ್ನು ರೂಢಿಸಿಕೊಂಡರು. ಸಾಸಿವೆಕಾಳು ಗಣಪತಿ, ಕಡಲೇಕಾಳು

ಗಣಪತಿ, ಬಡವಿಲಿಂಗ, ವಿರೂಪಾಕ್ಷ ಬಜಾರಿನ ಬೃಹನ್ನಂದಿ ಶಿಲ್ಪ, ಲಕ್ಷ್ಮೀನರಸಿಂಹ, ಇತ್ಯಾದಿ, ಈ ವಿಧದ ವಾಸ್ತು ರೂಪಗಳ ಉದಾಹರಣೆಗಳು. ಇವುಗಳಲ್ಲಿ ಲಕ್ಷ್ಮೀನರಸಿಂಹ ಆವರಣ ಒಂದು ರೀತಿಯಲ್ಲಿ ವಿಶಿಷ್ಟವಾದ ವಾಸ್ತು ಕೃತಿ.

ಬೃಹದಾಕಾರದ ಬಂಡೆಯನ್ನು ಆಕರ್ಷಕ ಲಕ್ಷ್ಮೀನರಸಿಂಹನ ಶಿಲ್ಪವನ್ನಾಗಿ ಕಂಡರಿಸಿ, ಸುತ್ತಲೂ ಕಲ್ಲಿನ ಆವರಣವನ್ನು ನಿರ್ಮಿಸಿದ್ದಾರೆ. ಕ್ರಿ.ಶ. 1528ರಲ್ಲಿ, ಶ್ರೀಕೃಷ್ಣದೇವರಾಯನ ಕಾಲದಲ್ಲಿ ಬ್ರಾಹ್ಮಣ ಶಿಲ್ಪಿಯೊಬ್ಬನು ಈ ಶಿಲ್ಪವನ್ನು ರಚಿಸಿದನೆಂಬುದಕ್ಕೆ ಶಾಸನಾಧಾರ ದೊರಕಿದೆ. ಈ ಶಿಲ್ಪದ ಆವರಣಕ್ಕೆ ಮೇಲ್ಛಾವಣಿಯಿಲ್ಲ. ಮೂಲತಃ ಇದಕ್ಕೆ ಮರದ ಕಟ್ಟಿನ ಜಾಲದ ಮೇಲೆ ನಿರ್ಮಿಸಿದ, ಪ್ರಾಯಶಃ ಹೆಂಚಿನ ಛಾವಣಿ ಇತ್ತೆಂದು ತೋರುತ್ತದೆ. ಆವರಣದ ವಿಸ್ತೀರ್ಣಕ್ಕೆ ಹೊಂದುವಂತಹ ಕಲ್ಲಿನ ಛಾವಣಿ ನಿರ್ಮಾಣ ಕಷ್ಟಸಾಧ್ಯದ ಕೆಲಸವಾಗಿತ್ತು. ಅದಕ್ಕಾಗಿ ಅವರು ಅನುಸರಿಸಿದ ವಿಧಾನ ಈ ಗುಡಿಗೇ ವಿಶಿಷ್ಟವಾದದ್ದು.

ಹಗುರವಾದ ಹೆಂಚು ಅಥವ ಮರದ ಹಲಗೆಯ ಛಾವಣಿಯನ್ನು ಇದಕ್ಕಾಗಿ ನಿರ್ಮಿಸಿದರು. ಛಾವಣಿಯ ಮರದ ಕಟ್ಟಿನ ಜಾಲಕ್ಕೆ ಆಧಾರವಾಗಿ ಆವರಣದ ಅಂಚಿನಲ್ಲಿ ಸುತ್ತಲೂ ಊರೆ ಕಟ್ಟುಗಳನ್ನು ನಿರ್ಮಿಸಿದ್ದರು. ಊರೆ ಕಟ್ಟುಗಳನ್ನು ಭದ್ರವಾಗಿ ನೆಲದಮೇಲೆ ಕೂರಿಸಲು ಬೃಹದ್ಗಾತ್ರದ, ಘನಾಕೃತಿಯ ಕಲ್ಲುಗಳನ್ನು ಬಳಸಿದರು. ಆ ಕಲ್ಲುಗಳು ಈಗಲೂ ಆ ಆವರಣದಲ್ಲಿ ಸ್ವಸ್ಥಾನದಲ್ಲಿಯೇ ಇವೆ. ಕಲ್ಲುಗಳ ಮೇಲ್ಭಾಗದಲ್ಲಿ ಚೌಕಾಕೃತಿಯ ಜೋಡಿಗುಳಿಗಳನ್ನು ಮಾಡಿ ಈ ಗುಳಿಗಳೊಳಗೆ ಆ ಮರದ ಊರೆಕಟ್ಟುಗಳನ್ನು ಭದ್ರವಾಗಿ ನಿಲ್ಲಿಸಿದ್ದರು.

ತಾಳಿಕೋಟೆಯ ಯುದ್ಧದ ನಂತರ ಹಂಪಿಯಲ್ಲಿ ಶತ್ರು ಸೈನ್ಯದಿಂದ ತೀವ್ರವಾದ ಅಗ್ನಿಕಾಂಡವೆ ನಡೆಯಿತು. ಎಲ್ಲಾ ಧಾರ್ಮಿಕ ಕೇಂದ್ರಗಳೂ, ಗುಡಿಗಳು ಅಗ್ನಿಸ್ಪರ್ಶಕ್ಕೆ ಒಳಗಾದವು. ಪ್ರಸ್ತುತ ಲಕ್ಷ್ಮೀನರಸಿಂಹ ದೇವಾಲಯವು ಸುಟ್ಟು ಭಸ್ಮವಾದುದಕ್ಕೆ ಸ್ಥಳದಲ್ಲೆ ಪ್ರತ್ಯಕ್ಷ ಸಾಕ್ಷಿಗಳಿವೆ. ಅಪಾರವಾದ ಮರದ ಸಾಮಗ್ರಿಗಳ ಬಳಕೆಯಾಗಿದ್ದುದರಿಂದ ಈ ಗುಡಿ ಸುಲಭವಾಗಿ ಅಗ್ನಿಗಾಹುತಿಯಾಯಿತು. ಭಾರವಾದ ಮರದ ಜಾಲದ ಛಾವಣಿ ಬೆಂಕಿಯಿಂದ ಬೆಂದು ಕುಸಿಯಿತು. ಅಗಾಧವಾದ ಬೆಂಕಿಯ ಕಾವಿನಿಂದ ಲಕ್ಷ್ಮೀನರಸಿಂಹ ವಿಗ್ರಹ ಸಂಪೂರ್ಣವಾಗಿ ಕೆಳಭಾಗದಲ್ಲಿ ಸಿಡಿದು ಚೂರಾಯಿತು. ಮೇಲಿನ ಭಾಗಗಳು ಕಡಿಮೆ ಕಾವಿನಿಂದಾಗಿ ಬಹಳಷ್ಟು ಮೂಲ ರೂಪದಲ್ಲಿ ಉಳಿಯಿತು. ಈ ಎಲ್ಲಾ ಅಂಶಗಳನ್ನು ಅಲ್ಲಿರುವ ಪ್ರತ್ಯಕ್ಷ ಸಾಕ್ಷಿಗಳಿಂದ ತಿಳಿಯಬಹುದಾಗಿದೆ.

ಕಟ್ಟಡ ನಿರ್ಮಾಣದಲ್ಲಿ ಹಗುರ ಮಾಧ್ಯಮವನ್ನು ಬಳಸುವ ಬಗೆಯನ್ನು ವಿಜಯನಗರ ಶಿಲ್ಪಿಗಳು ಕರಗತ ಮಾಡಿಕೊಂಡಿದ್ದರು. ಈ ಹಗುರ ಮಾಧ್ಯಮವನ್ನು ಅವರು ಹೆಚ್ಚಿಗೆ ದೇವಾಲಯ ವಾಸ್ತುವಿನ ಮೇಲ್ಭಾಗದ ರಚನೆಯಲ್ಲಿ ಬಳಸಿದ್ದಾರೆ. ದೇವಾಲಯದ ಕೈಪಿಡಿ ಗೋಡೆ, ಗರ್ಭಗೃಹದ ಮೇಲಿನ ಪ್ರಾಸಾದ, ಮಹಾದ್ವಾರದ ಮೇಲಿನ ಗೋಪುರ ಇವುಗಳನ್ನು ರಚಿಸಲು ಸುಟ್ಟ ಇಟ್ಟಿಗೆ, ಮರ, ಗಾರೆ ಮುಂತಾದವುಗಳನ್ನು ಹೆಚ್ಚಾಗಿ ಬಳಸಿದರು. ಇಟ್ಟಿಗೆ ಗಾರೆಯ ನಿರ್ಮಾಣಗಳಿಗೆ ಗಾರೆಗಚ್ಚಿನ ವಾಸ್ತು ಮತ್ತು ಶಿಲ್ಪ ಅಲಂಕರಣಗಳನ್ನು ಒದಗಿಸಿ, ಆ ವಾಸ್ತು ಅಂಶಗಳು ಹೆಚ್ಚು ಆಕರ್ಷಕವಾಗುವಂತೆ ಮಾಡಿದರು.

ಕಲ್ಲಿನಿಂದ ನಿರ್ಮಿತವಾದ ಗುಡಿಗಳನ್ನೂ ಮಂಟಪಗಳನ್ನು ಗಾರೆಯಿಂದ ಗಿಲಾವ್‌ಮಾಡಿ, ಗಾರೆಗಚ್ಚಿನ ಶಿಲ್ಪಗಳಿಂದ ಅಲಂಕರಿಸಿ, ಖರ್ಚು ಉಳಿಸುವ ವಿಧಾನವೂ ವಿಜಯನಗರ ಕಲೆಯಲ್ಲಿ ಪ್ರಚಲಿತದಲ್ಲಿತ್ತು. ಕಲ್ಲಿನಲ್ಲಿ ದೇವಾಲಯ ನಿರ್ಮಾಣ ಮಾಡಿ ಕೆತ್ತನೆ ಕಾರ್ಯ ಮಾಡುವ ವಿಧಾನ ಬಹಳ ಶ್ರಮಭರಿತವಾದದ್ದು, ಈ ವಿಧಾನದಲ್ಲಿ ಖರ್ಚು ಹೆಚ್ಚು. ಇದಕ್ಕೆ ಬದಲು ಕಲ್ಲಿನಲ್ಲಿ ಗುಡಿ ನಿರ್ಮಿಸಿ, ಅವುಗಳ ಒಳ–ಹೊರ ಭಾಗಗಳನ್ನು, ಕಂಬಗಳನ್ನು ಗಾರೆಯಿಂದ ಗಿಲಾವ್‌ಮಾಡಿ ಅಲಂಕರಿಸುವ ವಿಧಾನವನ್ನು ಅವರು ಬಳಸಿದರು. ವಿಜಯನಗರದ ಹಜಾರ ರಾಮಸ್ವಾಮಿ ದೇವಾಲಯದ ಮುಂದಿನ

ಪಾನ್ ಸುಪಾರಿ ಬಜಾರ್ ಪ್ರಾರಂಭದಲ್ಲೆ ಒಂದು ಪಾಳುಗುಡಿಯಿದ್ದು, ಅಲ್ಲಿ ಈ ವಿಧಾನದ ಬಳಕೆಯ ಶೇಷಮಾತ್ರವನ್ನು ಕಾಣಬಹುದಾಗಿದೆ.

ಹೊಸಪೇಟೆಯ ಬಳಿಯ ಅನಂತಶಯನ ಗುಡಿಯ ಗರ್ಭಗೃಹದ ಕಲ್ಲಿನ ಗೋಡೆಯೊಂದರ ಒಳ-ಹೊರ ಮುಖಗಳಲ್ಲಿ ಈ ವಿಧಾನ ಕಾಣಬರುತ್ತದೆ. ಕಲ್ಲಿನ ಗೋಡೆಯ ಮೇಲೆ, ಗಾರೆಗಚ್ಚಿನಲ್ಲಿ ಬೃಹದಾಕಾರದ ತೋರಣಗಳನ್ನು ಮಾಡಿ ಭಿತ್ತಿಯ ಅಲಂಕರಣ ಮಾಡಿದ್ದಾರೆ. ಹೀಗೆ ಹುಡುಕುತ್ತಾ ಹೋದಲ್ಲಿ ಇನ್ನು ಅನೇಕ ಉದಾಹರಣೆಗಳು ಸಿಗುವುದರಲ್ಲಿ ಸಂದೇಹವಿಲ್ಲ. ವಿಜಯನಗರದ ಜೆನಾನಾ ಆವರಣದಲ್ಲಿ ಕಮಲ ಮಹಲು, ಆನೆಲಾಯ, ರಾಣಿಯರ ಸ್ನಾನಗೃಹದ ಒಳಭಾಗ ಇವೆಲ್ಲವೂ ಆ ಕಾಲದ ಇಟ್ಟಿಗೆ – ಗಾರೆಯ ನಿರ್ಮಾಣ ವಿಧಾನಕ್ಕೆ, ಅಲಂಕರಣಗಳಿಗೆ, ಉತ್ತಮ ಉದಾಹರಣೆಗಳು.

ವಿಜಯನಗರ ಸಮಾಜ ಪ್ರಗತಿಪರ ವ್ಯಕ್ತಿಗಳಿಂದ ಕೂಡಿತ್ತು. ಈ ಗುಣ ಆ ಕಾಲದ ಅನೇಕ ಪೌರವಾಸ್ತುವಿನ ನಿರ್ಮಾಣದಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ. ವಿಜಯನಗರ ಕಾಲಕ್ಕಾಗಲೇ ಮುಸ್ಲಿಂ ವಾಸ್ತು ವಿಧಾನಗಳ ಅನೇಕ ಲಕ್ಷಣಗಳು ಹಂಪೆಯ ನಿರ್ಮಾಣಗಳಲ್ಲಿ ಬಳಕೆಯಲ್ಲಿದ್ದವು. ಮುಸ್ಲಿಂ ವಾಸ್ತು ಲಕ್ಷಣಗಳಲ್ಲಿ ಬಹಳ ಮುಖ್ಯವಾದ ಒಂದು ನಿರ್ಮಾಣವಿಧಾನವೆಂದರೆ ಕಮಾನು ಮತ್ತು ಗುಮ್ಮಟಗಳ ಬಳಕೆ. ಕಮಾನು ಮತ್ತು ಗುಮ್ಮಟ ಪ್ರಧಾನವಾದ ಮುಸ್ಲಿಂ ವಾಸ್ತು ಕೃತಿಗಳು ಕೇವಲ ಹೊರನೋಟದಿಂದಲೇ ಅವುಗಳನ್ನು ಮುಸ್ಲಿಂ ಕಟ್ಟಡಗಳು ಎಂದು ಗುರುತಿಸುವಷ್ಟರ ಮಟ್ಟಿಗೆ ವಿಶೇಷವಾಗಿರುತ್ತದೆ. ಹಿಂದೂ ವಾಸ್ತು ವಿನ್ಯಾಸದಲ್ಲಿ ಕಮಾನು ಮತ್ತು ಗುಮ್ಮಟಗಳ ಬಳಕೆ ಅಪರೂಪವೆನ್ನಬಹುದು. ಹಿಂದೂ ವಾಸ್ತು ನಿರ್ಮಾಣಗಳಲ್ಲಿ ತೊಲೆ-ಚಪ್ಪಡಿಗಳ ಬಳಕೆಯೇ ಪ್ರಧಾನವಾಗಿ ಕಾಣುತ್ತವೆ. ವೈಜ್ಞಾನಿಕವಾಗಿ ನೋಡುವುದಾದರೆ, ಕಮಾನು ಮತ್ತು ಗುಮ್ಮಟ ಹೊಂದಿರುವ ಕಟ್ಟಡಗಳು ಹೆಚ್ಚು ಬಾಳಿಕೆ ಬರುವಂತಹ ನಿರ್ಮಾಣಗಳು. ಇವುಗಳ ನಿರ್ಮಾಣವೂ ಸಹ ತೊಲೆ-ಚಪ್ಪಡಿ ನಿರ್ಮಾಣಕ್ಕಿಂತ ಸುಲಭಸಾಧ್ಯ ಮತ್ತು ಕಡಿಮೆ ವೆಚ್ಚದ್ದು. ಹೀಗಾಗಿ ಪೌರವಾಸ್ತು ನಿರ್ಮಾಣಗಳಲ್ಲಿ ವಿಜಯನಗರ ಶಿಲ್ಪಿಗಳು, ಮುಸ್ಲಿಂ ವಾಸ್ತು ರೀತಿಯಂತೆ ಕಮಾನು-ಗುಮ್ಮಟಗಳ ಬಳಕೆಯನ್ನು ಮಾಡಿದರು. ಕಮಾನು-ಗುಮ್ಮಟಗಳ ನಿರ್ಮಾಣ ಸುಲಭಸಾಧ್ಯವಾದರೂ, ಕಡಿಮೆ ವೆಚ್ಚದ್ದಾದರು ಅವುಗಳನ್ನು ಹಿಂದೂ ವಾಸ್ತು ಶಿಲ್ಪಿಗಳು ದೇವಾಲಯಗಳಲ್ಲಿ ಬಳಸಲಿಲ್ಲ. ಕಾರಣ ಸ್ಪಷ್ಟವಾಗಿ ತಿಳಿಯದಿದ್ದರು, ಹಿಂದೂ ಶಿಲ್ಪಿಗಳ ಮಡಿವಂತಿಕೆ ಕಾರಣವಿದ್ದರೂ ಇರಬಹುದು. ದೇವಾಲಯ ನಿರ್ಮಾಣವಿರಲಿ, ಕೋಟೆ ಬಾಗಿಲುಗಳ ನಿರ್ಮಾಣದಲ್ಲೂ ಹಿಂದುಗಳು ಕಮಾನು ಬಳಸಲಿಲ್ಲ. ಬದಲಿಗೆ ಅವರಿಗೆ ಚೆನ್ನಾಗಿ ಪರಿಚಯವಿದ್ದ ಚಾಚು-ಚಪ್ಪಡಿಯ ಭಾವಣಿಯನ್ನೇ ವಿಜಯನಗರ ಶಿಲ್ಪಿಗಳು, ಹಂಪಿಯ ಕೋಟೆಯ ಮಹಾದ್ವಾರ ನಿರ್ಮಾಣಗಳಲ್ಲಿ ಬಳಸಿದ್ದಾರೆ.

ಇಲ್ಲಿಯವರೆಗೆ ನನಗೆ ತಿಳಿದ ವಾಸ್ತುಜ್ಞಾನದ ಮಟ್ಟಿಗೆ, ನನ್ನ ಕ್ಷೇತ್ರಕಾರ್ಯ ಮಾಹಿತಿಗಳ ವ್ಯಾಪ್ತಿಗೆ ಒಳಪಟ್ಟಂತೆ, ವಿಜಯನಗರ ವಾಸ್ತು ವಿಜ್ಞಾನದ ಹಲವಾರು ಅಂಶಗಳನ್ನು ವಿದ್ವತ್ಸಭೆಯ ಮುಂದಿಟ್ಟಿದ್ದೇನೆ. ಇನ್ನೂ ಹೆಚ್ಚು ಕ್ಷೇತ್ರಕಾರ್ಯ ಹಾಗೂ ಅಧ್ಯಯನಗಳನ್ನು ನಡೆಸಿದ್ದಲ್ಲಿ ಇನ್ನೂ ಹೆಚ್ಚಿನ ವಿಶಿಷ್ಟ ಮಾಹಿತಿಗಳು, ವಿಜಯನಗರ ವಾಸ್ತುವಿನ ಬಗ್ಗೆ ಹೊರತರಬಹುದು ಎಂದು ನನ್ನ ಅನಿಸಿಕೆ.

2. ಭಾನುವಳ್ಳಿಯ ಹರಿಹರನ ಶಾಸನ

ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಡಾ. ಉತ್ತಂಗಿ ಕೊಟ್ರೇಶ

ಭಾನುವಳ್ಳಿ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಒಂದು ಗ್ರಾಮ. ಹರಿಹರದ ದಕ್ಷಿಣಕ್ಕೆ ಸುಮಾರು ಹನ್ನೆರಡು ಕಿ.ಮೀ. ದೂರದಲ್ಲಿ ಇರುವ ಇದು ಪೂರ್ವಕ್ಕೆ ಹರಿದ್ರಾವತಿ ನದಿ, ಯಕ್ಕೆಗುಂದಿ ಮತ್ತು ಬ್ಯಾಲದಹಳ್ಳಿ ಗಡಿ, ಪಶ್ಚಿಮಕ್ಕೆ ಕಮಲಾಪುರ ಮತ್ತು ಲಕ್ಕಶೆಟ್ಟಿಹಳ್ಳಿ ಗಡಿ, ಉತ್ತರಕ್ಕೆ ಹೊಸಹಳ್ಳಿ ಮತ್ತು ರಾಯಾಪುರ ಗಡಿ ಹಾಗೂ ದಕ್ಷಿಣಕ್ಕೆ ಯಲವಟ್ಟಿ, ನಂದಿತಾವರೆ ಮತ್ತು ಕುಂಬಳೂರ ಗಡಿಗಳ ಮಧ್ಯದಲ್ಲಿ ಇದೆ. ಈ ಗ್ರಾಮದ ಪ್ರಾಚೀನತೆಯನ್ನು ಅನೇಕ ಶಾಸನಗಳು ಸಾಕ್ಷೀಕರಿಸುತ್ತವೆ.

1. ಹರಿಹರದ ಶಾಸನದಂತೆ (ಎ.ಕ., ಸಂ. XI, ದಾ.ಶಾ.–25, ಹ.ಹ.ಶಾ.–64) ಹೊಯ್ಸಳ ಚಕ್ರವರ್ತಿ ಇಮ್ಮಡಿ ನರಸಿಂಹನ ಮೊಮ್ಮಗ ವೀರಸೋಮೇಶ್ವರನ ಪ್ರಧಾನ ಅಮಾತ್ಯನೂ ಆಂಧ್ರಪ್ರದೇಶದ ನಾರಾಯಣ ಪುರದ ಅತ್ತಿರಾಜ ಮತ್ತು ನವಿಲಾಡೆಯಕ್ಕರ ಪುತ್ರನೂ ಆದ ಪೊಲಾಳ್ವ ದಂಡನಾಥನು ಕ್ರಿ.ಶ. 1223ರಲ್ಲಿ ಹರಿಹರ ದೇವಾಲಯ ಕಟ್ಟಿಸಿ, ಲಕ್ಷ್ಮೀನಾರಾಯಣಪುರ ಹೆಸರಿನ ಬಾನವಳ್ಳಿಯನ್ನು ನಿರ್ಮಿಸಿ ಲಕ್ಷ್ಮೀನಾರಾಯಣ ದೇಗುಲ ಕಟ್ಟಿಸಿ, ಎಲೆವಳ್ಳಿ, ಜಿಗುಳಿ, ಹೇಳೆಹಾಳುಗಳೊಂದಿಗೆ ಇಲ್ಲಿನ ನೂರಾನಾಲ್ಕು ಬ್ರಾಹ್ಮಣರಿಗೆ ಕೊಟ್ಟಿದ್ದಾಗಿ ತಿಳಿದುಬರುತ್ತದೆ. ಅಂದರೆ ಈ ಗ್ರಾಮದ ಮೂಲ ಹೆಸರು ಲಕ್ಷ್ಮೀನಾರಾಯಣಪುರವಾಗಿದ್ದು, ಪೊಲಾಳ್ವ ದಂಡನಾಥನು ನಿರ್ಮಿಸಿದ ಗ್ರಾಮ ಇದಾಗಿದೆ. ಇಲ್ಲಿನ ಇನ್ನೊಂದು ಮಾತಿನಂತೆ, ಆ ಪೊಲಾಳ್ವನ ಮಗಳು ಬಾನುಮತಿ ಇಲ್ಲಿ ವಾಸವಾಗಿದ್ದಳೆಂದೂ, ಆಕೆಗಾಗಿ ಲಕ್ಷ್ಮೀನಾರಾಯಣ ದೇಗುಲ ಕಟ್ಟಿಸಿ ಮೇಲೆ ತಿಳಿಸಿದ ಗ್ರಾಮಗಳನ್ನು ನೀಡಿದ್ದನೆಂದೂ ಅದರಿಂದ ಬಾನಾಮತಿ ಪಟ್ಟಣ ಎಂದು ಹೆಸರಾಯಿತೆಂದೂ ಹೇಳಲಾಗುತ್ತದೆ.

2. ಭಾನುವಳ್ಳಿ ಗ್ರಾಮದ ಪಟೇಲ ಅಬ್ಬಲೂರಪ್ಪನ ಕಿಲ್ಲೇದಲ್ಲಿನ ಶಾಸನದಂತೆ (ಎ.ಕ., ಸಂ. XI, ದಾ.ಶಾ.–70, ಹ.ಹ.ಶಾ.–32), ಯಾದವ ಶ್ರೀ ವೀರರಾಮಚಂದ್ರರಾಯರ ಆಳ್ವಿಕೆ ಕಾಲದಲ್ಲಿ ಅವನ ಸರ್ವಾಧಿಕಾರಿಯಾಗಿದ್ದ ತಿಪ್ಪರಸರು ಕ್ರಿ.ಶ. 1275ರಲ್ಲಿ ಶ್ರೀಮದ್ ಆದಿಅಗ್ರಹಾರ ಶ್ರೀ ಲಕ್ಷ್ಮೀನಾರಾಯಣಪುರವಾದ ಬಾನವಳ್ಳಿ ಬ್ರಾಹ್ಮಣರಿಗೆ ಹಣ ಹಾಗು ಹೇಳಿಹಾಳು, ಎಲೆವಟ್ಟ, ಜಿಗಿಲಿಗಳ ಸುಂಕವನ್ನು ಬಿಟ್ಟುಕೊಡುತ್ತಾನೆ. ಅಂದರೆ ಈ ಅವಧಿಯಲ್ಲೂ ಇದರ ಹೆಸರು ಲಕ್ಷ್ಮೀನಾರಾಯಣಪುರ ಎನ್ನುವುದು ಪುನರಾವರ್ತಿತವಾಗಿದೆ.

3. ಹರಿಹರದಲ್ಲಿನ ದೇವಗಿರಿಯ ಯಾದವರಿಗೆ ಸೇರಿದ ಇನ್ನೊಂದು ಶಾಸನದಂತೆ (ಎ.ಕ., ಸಂ. XI, ದಾ.ಶಾ.–59, ಹ.ಹ.ಶಾ.–74), ಯಾದವ ರಾಮಚಂದ್ರನು ದೇವಗಿರಿಯಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಅವನ ಚಿಕ್ಕಪ್ಪ ಮಹಾದೇವರಾಯನ ಸೇನಾಪತಿಯಾಗಿದ್ದ ಸಾಳುವ ತಿಕ್ಕಮನು ಮಹಾದೇವರಾಯನ ಹೆಸರಿನಲ್ಲಿ ಹರಿಹರ ದೇಗುಲದ ಪಕ್ಕದಲ್ಲಿ ಲಕ್ಷ್ಮೀನಾರಾಯಣ ದೇಗುಲವನ್ನು ಕಟ್ಟಿಸಿ ಕ್ರಿ.ಶ. 1279 ಜನವರಿ 18ರಲ್ಲಿ ಮಹಾದೇವರಾಯ ಲಕ್ಷ್ಮೀನಾರಾಯಣನನ್ನು ಪ್ರತಿಷ್ಠಾಪಿಸಿ, ಕ್ರಿ.ಶ. 1281 ಫೆಬ್ರವರಿ 6ರಂದು ಬಂಗಾರದ ಕಳಸವನ್ನು ಇಡಿಸಿ ಭೂದಾನ ನೀಡಿರುವುದು ತಿಳಿಯುತ್ತದೆ. ಅದರಲ್ಲಿ "ಹರಿಹರಪುರದ ಅಶೇಷ ಮಹಾಜನಂಗಳುಂ ನೊಣಂಬವಾಡಿ–32000 ಸಮಸ್ತ ಪಟ್ಟಣಕ್ಕೆ ಸಿರೋಮಣಿ ಉಚ್ಚಂಗಿ, ಬೇತೂರು, ಲೊಕೆಯಕೆರೆ, ಬನವಳ್ಳಿ ಮೊದಲಾದ ಪಟ್ಟಣಿಗರು" ಎನ್ನುವ ಉಲ್ಲೇಖದಲ್ಲಿ ಬನವಳ್ಳಿ(ಬಾನುವಳ್ಳಿ)ಯೂ ಇದೆ. ಇದರ ಪ್ರಕಾರ ವನ ಅಥವಾ ಕಾಡಿನಿಂದ ಕೂಡಿದ ಪ್ರದೇಶದಲ್ಲಿನ ಹಳ್ಳಿ ಅಥವಾ ವನ(ಬನ)ದ ಮಧ್ಯದಲ್ಲಿನ ಹಳ್ಳಿಯಾಗಿತ್ತೆಂದು ಕಾಣುತ್ತಿದ್ದು, ಅದರಿಂದಾಗಿ ಬನದಹಳ್ಳಿ ಎಂದು ಹೆಸರು ಇದ್ದಿರಬೇಕಾಗಿ ತೋರುತ್ತದೆ.

4. ಹರಿಹರದಲ್ಲಿನ ಮತ್ತೊಂದು ಶಾಸನವು (ಎ.ಕ., ಸಂ. XI, ದಾ.ಶಾ.–25, ಹ.ಹ.ಶಾ.–91), ವಿಜಯನಗರದ ಶ್ರೀ ವೀರಪ್ರತಾಪ ಸದಾಶಿವರಾಯನ ಕಾಲದ್ದಾಗಿದ್ದು, ಅವನ ಸಾಮಂತ ದೊರೆ ಮಣಿನಾಗಪುರದ ಬೈಯಪನಾಯಕರ ಮಕ್ಕಳಾದ ಕೃಷ್ಣಪ್ಪನಾಯಕರು ಕ್ರಿ.ಶ. 1555ರಲ್ಲಿ ಬಾನವಳ್ಳಿಯನ್ನು ಹರಿಹರದೇವರ ಧರ್ಮಛತ್ರಕ್ಕೆ ಕಾಮರಸರ ಮಕ್ಕಳು ದಾನಪ್ಪಗೆ ನೀಡುತ್ತಾರೆ. ಈ ಶಾಸನದಲ್ಲಿ ಬಾನ ಅಳಿಸಿದ್ದು, 'ವಳ್ಳಿ' ಮಾತ್ರ ಕಾಣುತ್ತಿದ್ದು, ಅದನ್ನು ಬಾನವಳ್ಳಿ ಎಂದು ಪರಿಗಣಿಸಲಾಗಿದೆ.

5. ಮಲೆಬೆನ್ನೂರಿನ ಶಾಸನದ (ಎ.ಕ., ಸಂ. XI, ದಾ.ಶಾ.–108, ಹ.ಹ.ಶಾ.–36) 10ನೇ ಸಾಲಿನಲ್ಲಿ ಉಲ್ಲೇಖಗೊಂಡಿರುವ ಬಾನುಮತಿ ಪಟ್ಟಣವು ಈ ಗ್ರಾಮದ ಮೊದಲ ಹೆಸರಾಗಿದ್ದು, ಜನಪದರ ಮನದಲ್ಲಿ ಈಗಲೂ ಹಸಿರಾಗಿದೆ.

ಈ ಶಾಸನಗಳನ್ನು ಅವಲೋಕಿಸಿದರೆ ಬಾನವಳ್ಳಿಯ ಹಿನ್ನೆಲೆಯಾಗಿ ಅನೇಕ ಅಂಶಗಳನ್ನು ಗುರುತಿಸಬಹುದಾಗಿದೆ. ವನದ ಅಂಗಳದಲ್ಲಿ ಇದ್ದ ಈ ಪಟ್ಟಣದಲ್ಲಿ ಪೊಲಾಳ್ವನು ತನ್ನ ಮೂಲ ಗ್ರಾಮವಾದ ನಾರಾಯಣಪುರ ಹೆಸರನ್ನು ಸ್ಥಾಪಿಸುವ ಉದ್ದೇಶದಿಂದ ಇಲ್ಲಿ ಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠಾಪಿಸಿ, ಗ್ರಾಮಕ್ಕೆ ಲಕ್ಷ್ಮೀನಾರಾಯಣಪುರ ಎಂದು ಕರೆಯುತ್ತಾನೆ. ಶಾಸನದಲ್ಲಿ ಲಕ್ಷ್ಮೀನಾರಾಯಣಪುರವಾದ ಬಾನವಳ್ಳಿ ಎಂದು ಉಲ್ಲೇಖಿಸಿರುವುದನ್ನು ನೊಡಿದರೆ ಬಾನವಳ್ಳಿ ಎನ್ನುವ ಹೆಸರು ಮೊದಲೇ ಇದ್ದುದನ್ನು ಲಕ್ಷ್ಮೀನಾರಾಯಣಪುರ ಎಂದು ನಾಮಕರಣ ಮಾಡಿದಂತೆ ತೋರುತ್ತದೆ. ಇದು ಬಾನವಳ್ಳಿಯಲ್ಲಿನ ಶಾಸನದಲ್ಲಿಯೂ ಪುನರಾವರ್ತಿತವಾಗಿದ್ದು, ಅದರಲ್ಲಿ ಈ ಗ್ರಾಮವು ಆದಿ ಅಗ್ರಹಾರವಾಗಿತ್ತೆಂದೂ ಹಾಗೂ ಇಲ್ಲಿ ನೂರಾನಾಲ್ಕು ಬ್ರಾಹ್ಮಣರ ವಾಸಕೇಂದ್ರವಾಗಿತ್ತೆಂದೂ ತಿಳಿಯುತ್ತದೆ. ಆದರೆ ಸಾಳುವ ತಿಕ್ಕಮನ ಲಕ್ಷ್ಮೀನಾರಾಯಣ ದೇಗುಲವನ್ನು ಹರಿಹರದಲ್ಲಿ ಕಟ್ಟಿಸಿ ಮೂರ್ತಿ ಪ್ರತಿಷ್ಠಾಪಿಸಿದಾಗಲೂ ಈ ಗ್ರಾಮವು ಬನವಳ್ಳಿಯಾಗಿಯೇ ಉಳಿದುಕೊಂಡಿದೆ. ಅಲ್ಲದೆ ವಿಜಯನಗರದ ಸದಾಶಿವರಾಯರ ಕಾಲದಲ್ಲಿ ಬನವಳ್ಳಿಯು ಬಾನವಳ್ಳಿ ಆಗಿರುವಂತೆ ತೋರುತ್ತದೆ. ಒಟ್ಟಿನಲ್ಲಿ ಅನ್ನಛತ್ರಕ್ಕಾಗಿ (ಬಾನಛತ್ರ) ದಾನ ನೀಡಲಾಗಿದ್ದರಿಂದಾಗಿ ಈ ಗ್ರಾಮವು ಬಾನವಳ್ಳಿ ಆಗಿರುವುದು ಎಂದು ಹೇಳಬಹುದಾಗಿದೆ.

ಇಲ್ಲಿನ ಜನಪದರ ಮನದಾಳದಲ್ಲಿ ಮನೆಮಾಡಿಕೊಂಡಿರುವಂತೆ ಇದು ಹಿಂದೆ ಬಾನಾವತಿಪಟ್ಟಣ ಆಗಿದ್ದಾಗಿ ಹೇಳಲಾಗುತ್ತದೆ. ಹಳವರ ಹೇಳಿಕೆ ಪ್ರಕಾರ, ನವಾಬರ ದುರಾಡಳಿತ ವಿರೋಧಿಸಿದ ವಿಜಾಪುರ ಹತ್ತಿರದ ಕೊಡತಿ ಕೊಲ್ಲಾಪುರ ಗ್ರಾಮದ ಗೌಡ್ರು ಅಲ್ಲಿನ ಕಂದಾಯ ಅಧಿಕಾರಿಯನ್ನು ಕೊಲೆಗೈದು ಊರು ಬಿಟ್ಟು ಕೃಷ್ಣಾನದಿ ದಾಟಿ ಈ ಭಾಗಕ್ಕೆ ಬಂದಾಗ ಈ ಪಟ್ಟಣದಲ್ಲಿ ದೊರೆತ ಆತಿಥ್ಯದ ಬಾನದಿಂದ (ಅನ್ನ) ಆನಂದಿತರಾಗಿ ಇಲ್ಲಿಯೇ ನೆಲೆ ಕಂಡುಕೊಳ್ಳುತ್ತಾರೆ. ದೂರದಿಂದ ಓಡಿಬಂದು ದಣಿವು ಮತ್ತು ಹಸಿವಿನಿಂದ ಕಂಗೆಟ್ಟಿದ್ದ ಗೌಡ್ರ ಪರಿವಾರವು ಇಲ್ಲಿನ ಬಾನದಿಂದ ಸಂತುಷ್ಟರಾಗಿ ಇದನ್ನು ಬನದಹಳ್ಳಿ ಎಂದು ಕರೆದರು ಎನ್ನಲಾಗುತ್ತಿದೆ. ನಂತರದಲ್ಲಿ ಬಾನವಳ್ಳಿಯಾಗಿ ಉಳಿದುಕೊಂಡಿದೆ. ಇಲ್ಲಿ ನೆಲೆಕಂಡುಕೊಂಡ ಗೌಡರು ಇಲ್ಲಿನ ಗೌಡಕಿಯನ್ನು ಮಾಡುತ್ತಿದ್ದುದಾಗಿಯೂ, ಅವರನ್ನು ಹುಡುಕುತ್ತಾ ಬಂದ ನವಾಬರ ಸೇನಾಳುಗಳಿಂದ ತಲೆಮರೆಸಿಕೊಳ್ಳಲು ಕೆಲಕಾಲ ಬೇರೆಡೆಗೆ ಹೋಗಿ, ನಂತರ ಪುನಃ ಬಂದು ನೆಲೆಸುತ್ತಾರೆ. ಅಷ್ಟುಹೊತ್ತಿಗೆ ಇಲ್ಲಿನ ಗೌಡಕಿಯನ್ನು ನೋಡಿಕೊಳ್ಳುತ್ತಿದ್ದ ಕುರುಬರ ಕುಟುಂಬವನ್ನು ಗೌಡಿಕೆ ಬಿಟ್ಟುಕೊಡಲು ಕೇಳಿದ್ದಾಗಿಯೂ, ಅವರ ಷರತ್ತಿನಂತೆ ತಲೆಯ ಮೇಲೆ ದೀಪ ಹಚ್ಚಿದ ಪಣತಿಯನ್ನು (ಹಣತಿ) ಇಟ್ಟುಕೊಂಡು ಅದು ಆರದಂತೆ ಊರು ಸುತ್ತು ಹಾಕಿ, ಪುನಃ ಗೌಡಕಿ ಪಡೆದುಕೊಳ್ಳುತ್ತಾರೆ ಎಂದೂ ಹಳವರ ಹೇಳಿಕೆಯನ್ನು ಇಲ್ಲಿನ ಜನಪದರು ಸ್ವಾರಸ್ಯವಾಗಿ ಹೇಳುತ್ತಾರೆ. ನಂತರದಲ್ಲಿ ಬಾದಾಮಿ, ಹೊನ್ನಾಳಿ ತಾಲ್ಲೂಕು ದಿಡಗೂರು, ಕೋಣನತಲೆ, ಅಂತ್ರವಳ್ಳಿ, ಕೋಟ್ಯಾಳು, ಕಡೂರು, ಕದಡಿ, ರಾಜನಹಳ್ಳಿ, ಬಿರೇಬಿದರಿ, ಹೊಸಪೇಟೆ, ಕಂಚಿಕೇರಿ, ಕೋಟಾ, ಬಸಾಪುರ, ಹೊಸಳ್ಳಿ, ಬಿಸಲೇರಿ, ಬನ್ನಿಕೊಡು, ಬೇವಿನಹಳ್ಳಿ, ಸಿದ್ನಾಳ, ದೇವರಗುಡ್ಡ, ಉಕ್ಕಡಗಾತ್ರಿ ಮುಂತಾದ ಕಡೆಗಳಿಂದ ಬಂದ ಜನರು ಇಲ್ಲಿ ವಾಸಿಸುತ್ತಾರೆ.

ಜನಪದರ ಮತ್ತೊಂದು ಮಾತಿನಂತೆ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಆತನ ಅಳಿಯ ಚಲುವರಂಗಪ್ಪ ನಾಯಕನು ಹೊನ್ನಾಳಿ ಸೀಮೆಯ ಬೆಳಗುತ್ತಿ ಪ್ರಾಂತದಲ್ಲಿ ದೌರ್ಜನ್ಯ, ದರೋಡೆ, ದಬ್ಬಾಳಿಕೆ, ದುಷ್ಕೃತ್ಯಗಳನ್ನು ಮಾಡುತ್ತಿದ್ದ ಚನ್ನನಾಯಕನನ್ನು ಮಟ್ಟಹಾಕಲು ರಾಜನ ಆಣತಿಯಂತೆ ಇತ್ತ ಬರುತ್ತಾನೆ. ಆ ರಂಗಪ್ಪನಾಯಕನು ಕೆಲಕಾಲ ಈ ಬಾನವಳ್ಳಿಯಲ್ಲಿದ್ದು, ಆಡಳಿತ ನಡೆಸಿ, ನಂತರ ದಿಡಗೂರು ಪಟ್ಟಣಕ್ಕೆ ಸಾಗುತ್ತಾನೆ ಎನ್ನುವುದು ತಿಳಿದುಬರುತ್ತದೆ. ಆದರೆ ಆತನು ಇಲ್ಲಿ ಇದ್ದುದಕ್ಕೆ ಯಾವುದೇ ಕುರುಹುಗಳು ಕಂಡುಬರುವುದಿಲ್ಲ.

ವಿಜಯನಗರ ಕಾಲದ ಶಾಸನ ಶೋಧ

ಈಗ ನಾವು ಶೋಧಿಸಿದ ಈ ಶಾಸನವು ವಿಜಯನಗರದಲ್ಲಿ ಶ್ರೀ ವೀರಹರಿಹರರಾಯರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ "ಶಕವರ್ಷ 1314ನೆಯ (ಕ್ರಿ.ಶ. 1392) ಆಂಗಿರಸ ಸಂವತ್ಸರ ಶ್ರಾವಣ ಶುದ್ಧ-5 ಗುರುವಾರದಂದು" ಬರೆಸಿದೆ. ಬಹುಶಃ ಇಲ್ಲಿನ ಆಂಜನೇಯ ಮೂರ್ತಿಯನ್ನು ಹೊರಡಿಸಿದ ನಿರೂಪವಿದು. ಆಂಜನೇಯನ ಮೂರ್ತಿಯ ಮೇಲ್ಭಾಗದಲ್ಲಿ ಈ ಶಾಸನವನ್ನು ಕಂಡರಿಸಲಾಗಿದೆ. 13 ಸಾಲಿನ ಈ ಶಾಸನದ ಆರಂಭದಲ್ಲಿ ದೇವನಾಗರಿ ಲಿಪಿಯಲ್ಲಿ ಓಂನಮೋ ಎಂದು ಆರಂಭವಾಗುತ್ತದೆ. ನಂತರದಲ್ಲಿ ಶಾಸನದ ಪಾಠ ಈ ಕೆಳಗಿನಂತಿದೆ:

ಓಂ ನಮೋ

1 ಸ್ವಸ್ತಿಶ್ರೀಮತು ಸಕವರುಷ 1314ನೆಯ ಆಂಗಿರಸ ಸಂವತ್ಸರದ ಶ್ರಾವಣ ಶು
2 ಧ 5 ಮಂನ್ಮಹಾರಾಜಾಧಿರಾಜ ರಾಜಪರಮೇಶ್ವರಂ ಶ್ರೀ ವೀರಹರಿಹರರಾಯರು ವಿ
3 ಜಯಾನಗರಿಯಲು ಸುಖಸಂಕಥಾ ವಿನೋದದಿಂದ ರಾಜ್ಯಂಗೆಯುತ್ತಮಿರೆ ತತ್ಪಾ
4 ದ ಪದ್ಮೋಪಜೀವಿ ॥ ಹೊರವಾಳ್ವತಿ ತಲೆದೂಗೆ ತನ್ನ ಕುಲದೈಯ್ವಂ ಮೆಚ್ಚೆ ವಿದ್ವ
5 ಜನಂ ಖರಮುತ್ಸಾಹದೊಳಿದು ಕೀರ್ತಿಯ ಸಮಸ್ತ ಕೂಡಿಕೊಂಡಾಡೆ ಭೀಕರಮಹಾ
6 ಜಿಯೊಳಾ ತುರಲ್ಕ[ಷ್ಕ] ಬಲಮಂ ಪಂಪಾಕ್ಷೇತ್ರದೊಳಿಲ್ದು ವಿಸ್ತರುಮಪ್ಪಪ್ರತಿಮ ಪ್ರತಾಪಗುಣಮಂ ಪೊನ್ನಂಗಡಂ
7 ಸಾದ್ರ್ದುದೊ ॥ ಭಕ್ತರಭಾಗ್ಯವಾದಿಜವಕಲ್ಪ ಕುಜಂ ಶಿವಪಾದಶೇಖರಂ ಮುಕ್ತಿನಿವತನ್ನನೆರೆನಂ[ಜಿ]ದೇವರ್ಗ್ಗೆಯ
8 ತಿ[ೀ]ಶ್ವರಮ ಕಳಾಯುಕ್ತನ ಶಿಕ್ಷರಕ್ಷಕನೆನಿಪನದಾವನ ಲೋಕದೊಳ್ಕ್ರಿಯಾಶಕ್ತಿ ಗುರುಪ್ರಸನ್ನ ಮಲ್ಲಿಯಂನ್ನಿಸಂಕ
9 ನು ಪೊಂನ ಭೂಪನಂ ॥ ಪೊಂನ ನೃಪಾಳ ನಿಂಜನೆಯ ಕೀರ್ತಿ ವಿಳಾಸಿನಿ ಕಂಚಿಡ್ತಿಳಿಗೋಕರ್ಂರ್ಣದೊಳಾರು
10 ಗಲೊಳೆಸದಿಪ್ಪಳು ತಂನಯ ರಾಜ್ಯದಲ್ಲಿಯೂ ಚಿಂನ ತಟಾಕ ಕೂಪನದಿಯಂಬಿವಂ ಕಟ್ಟಿ
11 ಸಿ ವ್ರತ್ತಿಗೊಟ್ಟು ಸಂಪಂನತೆ ತೆಂಗುಪೂಗಿಫಳ ಮಾಮರ ನೇರಿಲುಯೆತ್ತನೊರ್ಪ್ಪಡೆಂ ॥ ಶ್ರೀ ಮಂ
12 ನ್ಮಹಾ ಪ್ರಧಾನಂ ಪೊಂನಂಣ ವಡೆಯರ ನಿರೂಪದಿಂ ಹರಿಯಗವುಡರ ಗವುರಪಂ
13 ಗಳು ಲಕ್ಷುಮ್ರಿ ನ[ನಾ]ರಾಯಣಪುರದ ಹನುಮಂತಂಗೆ ಮಂಗಳಮಹಾಶ್ರೀಶ್ರೀಶ್ರೀಶ್ರೀಶ್ರೀ



3. ಮಂಗರಸ ಒಡೆಯನ ಮಂಗಳೂರು ಶಾಸನ

ಪ್ರೊ. ಟಿ. ಮುರುಗೇಶಿ

ಮಂಗಳೂರಿನ ನಂದಿಗುಡ್ಡೆ ಸಮೀಪವಿರುವ ಜೆಪ್ಪು-ಬಪ್ಪಾಲ್‌ನ ಶ್ರೀಮತಿ ಮಾಲತಿ ಕುರುಪ್‌ರವರ ಮನೆಯ ಎದುರಿನ ಖಾಲಿ ನಿವೇಶನದಲ್ಲಿ ಈ ಶಾಸನವನ್ನು ಸಂಶೋಧಿಸಿದೆವು. ಪ್ರಸ್ತುತ ಈ ಶಾಸನವನ್ನು ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ.

ಶಾಸನ ಚೌಕಾಕಾರದ ಚಿಕ್ಕ ಕಲ್ಲಿನ ಸ್ಥಂಭವಾಗಿದ್ದು, ಅದರ ಎರಡು ಮುಖಗಳಲ್ಲಿ ಶಾಸನವನ್ನು ಬರೆಯಲಾಗಿದೆ. ಮುಮ್ಮುಖದಲ್ಲಿ 27 ಸಾಲುಗಳಿವೆ, ಹಿಮ್ಮುಖದಲ್ಲಿ 26 ಸಾಲಿನ ಬರಹವಿದ್ದು ಒಟ್ಟು 53 ಸಾಲಿನಲ್ಲಿ ಬರೆಯಲಾಗಿದೆ. ಶಾಸನ ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ. ಶಾಸನದ ಮುಮ್ಮುಖದ ಮೇಲ್ಭಾಗದಲ್ಲಿ ನಂದಿ, ಖಡ್ಗ ಮತ್ತು ದೀಪದ ಶಿಲ್ಪ ಚಿತ್ರಣವಿದೆ.

ಶಾಸನದ ಕಾಲ:

ಶಾಸನವನ್ನು ಶಕಾಬ್ದ 1305ನೇ ದುಂದುಭಿ ಸಂವತ್ಸರದ ಮಾಘ ಮಾಸ 5ರಲ್ಲಿ ಬರೆಯಿಸಲಾಗಿದೆ. ಅಂದರೆ, ಕ್ರಿ.ಶ. 1383ರ ಕಾಲಕ್ಕೆ ಇದು ಸರಿಹೊಂದುತ್ತದೆ.

ಶಾಸನದ ಐತಿಹಾಸಿಕ ಮಹತ್ವ

ತುಳುನಾಡಿನ ಶಾಸನಗಳ ಅಧ್ಯಯನ ಅತ್ಯಂತ ರೋಚಕವಾಗಿ ಇರುವಂತೆ, ಸಂಕೀರ್ಣವೂ ಆಗಿದೆ. ವಿಜಯನಗರದ ಕಾಲಾವಧಿಯಲ್ಲಿ ತುಳುನಾಡನ್ನು ಆಡಳಿತದ ಅನುಕೂಲಕ್ಕಾಗಿ ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದು 2 ಆಡಳಿತ ವಿಭಾಗಗಳನ್ನಾಗಿ ವರ್ಗಿಕರಿಸಲಾಗಿತ್ತು. ಈ ಎರಡೂ ಆಡಳಿತ ಘಟಕಗಳಿಗೆ ರಾಜ್ಯಪಾಲರನ್ನು ನೇಮಕ ಮಾಡಲಾಗುತ್ತಿತ್ತು. ಅನೇಕ ಸಂಧರ್ಭಗಳಲ್ಲಿ ಎರಡೂ ಆಡಳಿತ ಘಟಕಗಳ ಆಳ್ವಿಕೆಯನ್ನು ಒಬ್ಬನೇ ರಾಜ್ಯಪಾಲ ನಿರ್ವಹಿಸಿದ ಉದಾಹರಣೆಗಳೂ ಇವೆ. ಪ್ರಸ್ತುತ ಅಧ್ಯಯನಕ್ಕೊಳಪಡಿಸಿರುವ ಶಾಸನವು ಮಂಗಳೂರು ರಾಜ್ಯಪಾಲನನ್ನು ಉಲ್ಲೇಖಿಸುತ್ತದೆ.

ಮಂಗಳೂರು ರಾಜ್ಯವನ್ನು ವಶಿಷ್ಠ ಗೋತ್ರದ ಚೌಡರಸ ಮಂತ್ರಿಯ ಕುಮಾರ ಮಲಗರ್ಸ ಒಡೆಯರು ಆಳ್ವಕೆ ನಡೆಸುತ್ತಿದ್ದರೆಂದು ಶಾಸನದಲ್ಲಿ ಹೇಳಲಾಗಿದೆ. ಆದರೆ, ಶಾಸನದಲ್ಲಿ ವಿಜಯನಗರ ಸಾಮ್ರಾಜ್ಯದ ಮತ್ತು ಸಾಮ್ರಾಟನ ಉಲ್ಲೇಖವಿಲ್ಲದಿರುವುದು ಗಮನೀಯ ಅಂಶವಾಗಿದೆ.

ಮಂಗಳೂರು ರಾಜ್ಯವನ್ನು ಆಳ್ವಿಕೆ ಮಾಡಿದ ರಾಜ್ಯಪಾಲರುಗಳಲ್ಲಿ ಮಲಗರ್ಸ ಎಂಬ ವ್ಯಕ್ತಿಯ ಉಲ್ಲೇಖವಿರುವ ಯಾವ ರಾಜ್ಯಪಾಲನೂ ಕಂಡು ಬರುವುದಿಲ್ಲ. ಆದರೆ, ಕ್ರಿ.ಶ. 1389ರ ಶಾಸನದಲ್ಲಿ ಮಲ್ಲರಸ ಹೆಸರಿನ ವ್ಯಕ್ತಿ ಮಂಗಳೂರು ರಾಜ್ಯಪಾಲನಾಗಿದ್ದಂತೆ ಕಂಡು ಬರುತ್ತದೆ. ಈ ಮಲ್ಲರಸನನ್ನೇ ಮಲಗರ್ಸನೆಂದು ಕರೆಯಲಾಗಿದೆ ಎಂದು ಖ್ಯಾತ ಶಾಸನ ವಿದ್ವಾಂಸರಾದ ಡಾ. ಬಿ. ರಾಜಶೇಖರಪ್ಪನವರು ಅಭಿಪ್ರಾಯಪಟ್ಟಿರುತ್ತಾರೆ. ಇದು ನಿಜವಾದಲ್ಲಿ, ಮಲಗರ್ಸ ಕ್ರಿ.ಶ. 1383 ಮತ್ತು 1389ರಲ್ಲಿ ಎರಡು ಬಾರಿ ಮಂಗಳೂರಿನ ರಾಜ್ಯಪಾಲನಾಗಿದ್ದನೆಂದು ತಿಳಿಯಬಹುದಾಗಿದೆ. ಇದೊಂದು ದತ್ತಿ ಶಾಸನವಾಗಿದ್ದು, ಅರ್ಧೋದಯ ಪುಂಣ್ಯ ಕಾಲದಲಿ ಕಾಶ್ಯಪ ಗೋತ್ರದ ಮಾಇ ದೀಕ್ಷಿತರ ಮಗ ಮುರಾರಿ ಭಟ್ಟರಿಗೆ ಧಾರೆಯರೆದು ಕೊಟ್ಟ ಉತ್ತಿಯೆಂದು ಹೇಳಲಾಗಿದೆ. ಶಾಸನೋಕ್ತ ಅರ್ಧೋದಯ ಪುಂಣ್ಯ ಕಾಲ ಉಡುಪಿಯ ಕ್ರಿ.ಶ.

1359 ಮತ್ತು 1441ರ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಸಮೃದ್ಧವಾದ ಪುಣ್ಯವು ಉದಿಸುವ ಕಾಲಕ್ಕೆ ಅರ್ಧೋದಯ ಪುಣ್ಯ ಕಾಲವೆಂದು ಹೆಸರು. ಪುಷ್ಯ ಅಥವಾ ಮಾಘ ಮಾಸದಲ್ಲಿ ಅಮವಾಸ್ಯೆ ಭಾನುವಾರದಂದು ಶ್ರವಣ ನಕ್ಷತ್ರ ಮತ್ತು ವ್ಯತಿಪಾತ ಇವುಗಳು ಸೇರಿದರೆ ಅರ್ಧೋದಯ ಪುಣ್ಯಕಾಲವೆಂದು ತಿಳಿಯಬೇಕು ಎಂಬ ಮಾಹಿತಿಯನ್ನು ಉಡುಪಿಯ ಸಂಸ್ಕೃತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಸುರೇಶ್ವರಾಚಾರ್ಯರು ಸಹೃದಯತೆಯಿಂದ ನನಗೆ ಒದಗಿಸಿರುತ್ತಾರೆ, ಅವರಿಗೆ ನಾನು ಅಭಾರಿಯಾಗಿದ್ದೇನೆ.

ಶಾಸನ ಕೂವಲಂ ಬಳಿಯ ಗರಿಗಂಗ ಹೆಗಡೆ ಎಂಬ ಸ್ಥಳೀಯ ಅಧಿಕಾರಿಯನ್ನು ಹೆಸರಿಸುತ್ತದೆ. ಗರಿಗಂಗ ಹೆಗಡೆಯ ಬ್ರಹ್ಮಾದಾಯದ ಮೂಲ ಆಲಂತಿ ಮರೆ ಬರಾಉ 1, ಪಾಲಿಯ ಬೆಟ್ಟು ಬರಾಉ 1. ಈ ಎರಡೂ ಸ್ಥಳವನ್ನು ಕಾಳಿ ಪಡಿಹಾರನು ಕಿಚ್ಚು ಹಾಯಿದ್ದಕ್ಕೆ ದೇತಿ ಪಡಿಹಾರನ ಸಂತತಿಗೆ ಮೂಲವ ಕೊಟ್ಟಿದ್ದನ್ನು ಶಾಸನ ದಾಖಲಿಸುತ್ತದೆ


ನಂತರ ಶಾಸನ ಭೂಮಿಯ ಚತುಸ್ಸೀಮೆಯನ್ನು ಹೆಸರಿಸುತ್ತದೆ. ಚತುಸ್ಸೀಮೆ ಎಂದು ಹೇಳುವಾಗ 'ಮ' ಅಕ್ಷರವನ್ನು ಯಾವುದೋ ಅಪರಿಚಿತ ಲಿಪಿಯಲ್ಲಿ ಬರೆಯಲಾಗಿದೆ. ಭೂಮಿಯ ಗಡಿಯನ್ನು ಹೇಳುವಾಗ ಶಾಸನ ಬಡಗ ಮೈಲಾರ ದೇವರಿಂ ಎಂದು ಮೈಲಾರ ದೇವರನ್ನು ಹೆಸರಿಸುತ್ತದೆ. ಇದರಿಂದ ಮೈಲಾರ ಪಂಥದ ದೇವಾಲಯವೊಂದು ಕರ್ನಾಟಕದ ದಕ್ಷಿಣದಲ್ಲಿ ಮಂಗಳೂರಿನಲ್ಲಿ ವಿಜಯನಗರ ಪೂರ್ವದಲ್ಲಿಯೇ ಇತ್ತೆಂಬ ಅಚ್ಚರಿಯ ಮಾಹಿತಿಯನ್ನು ಈ ಶಾಸನ ನೀಡುತ್ತದೆ. ಕರಾವಳಿ ಕರ್ನಾಟಕದಲ್ಲಿ ಮೈಲಾರ ದೇವರನ್ನು ಉಲ್ಲೇಖಿಸುವ ಏಕೈಕ ಶಾಸನವಿದು.

ಈ ಶಾಸನದ ಪಠ್ಯವನ್ನು ಸಿದ್ದ ಪಡಿಸುವಲ್ಲಿ ಖ್ಯಾತ ಶಾಸನ ವಿದ್ವಾಂಸರಾದ ಡಾ. ಬಿ. ರಾಜಶೇಖರಪ್ಪ ಮತ್ತು ಎಚ್. ಎಸ್. ಗೋಪಾಲ್ ರಾವ್ ರವರು ನನಗೆ ನೆರವಾಗಿದ್ದಾರೆ. ಅವರಿಗೆ ನಾನು ಅಭಾರಿಯಾಗಿದ್ದೇನೆ. ಈ ಶಾಸನವನ್ನು ಮಂಗಳೂರಿನಿಂದ ಶಿರ್ವದ ಕಾಲೇಜಿಗೆ ತರುವಲ್ಲಿ ಸಹಾಯವನ್ನು ಮಾಡಿದ ಡಾ. ವೈ.ಎನ್. ಶೆಟ್ಟಿಯವರಿಗೆ ಈ ಲೇಖಕ ಅಭಾರಿಯಾಗಿದ್ದಾನೆ.

ಮಂಗರಸ ಒಡೆಯನ ಮಂಗಳೂರು ಶಾಸನ

ಚಿತ್ರಿಕೆಗಳು: (ನಂದಿ) (ಕತ್ತಿ) (ಶಿವಲಿಂಗ) (ದೀಪಸ್ತಂಭ)

ಶಾಸನದ ಮುಮ್ಮುಖ




1 ಸ್ವಸ್ತಿಶ್ರೀ ಜಯಾಭ್ಯುದಯ ಶ
2 ಕಾ ಬ 1205ನೆ ದುಂದುಭಿ ಸಂ
3 ವತ್ಸರದ ಮಾಘ ಶುದ 5ಲೂ
4 ಶ್ರೀಮತು ವಸಿಷ್ಟ ಗೋತ್ರದ ಚೌಡರಸ
5 ಮಂತ್ರಿಯ ಕುಮಾರ ಮಲಗರ್ಸ
6 ಒಡೇರೂ ಮಂಗಲೂರು ರಾಜ್ಯವ
7 ನಾಳುವಾಗ ಕಾಶ್ಯಪ ಗೋತ್ರದ ಮಾ
8 ಇ ದೀಕ್ಷಿತರ ಮಗ ಮುರಾರಿ ಭಟ್ಟ
9 ರಿಗೆ ಆರ್ದೋದಯ ಪುಂಣ್ಯಕಾಲ
10 ದಲಿ ಧಾರೆ ಎಱದು ಕೊಟ್ಟ ಉತ್ರ್ತಿ
11 [. ಜಬನೊಳಗೆ ?] ಕೂವಲಂ** ಬಳಿಯ
[ವೋಜ ಬಚ್ಚಂದಗೆ]. ** ತೂವಲಂ ಬಳಿಯ (ತುಳು ಬಳಿ?)
12 ಮಂತ್ರಿ ಗರಿಗಂಗ ಹೆಗಡೆಯ ಬ್ರಹ್ಮಾ
13 ದಾಯ ಮೂಲ ಆಲಂತಿಮರೆ ಬರಾ
14 ಉ 1 ಆ ಈಶಾನ್ಯದಲಿ ಪಾಲಿಯ ಬೆ
15 ಟ್ಟುಂ ಬರಾಉ 1 ಇ 2 ಠಾವನೂ ಕಾಳಿ
16 ಪಡಿಹಾರನು ಕಿಚ ಹಾಇದಕೆ ಇ2
17 ಭೂಮಿಯನೂ ದೇತಿ ಪಡಿಹರನ ಸ [ಂ*]
18 ತತಿಗೆ ಮೂಲವ ಕೊಟ್ಟನು ಆವರು ಈ
19 2 ಸ್ಥಳವನೂ ಮೂಲಾಕೊಂಡು ಬಾಳಿದ 2
20 ಸ್ಥಳ ಕೊಡಿ ತತ್ ಕಾಲೋಚಿತ ಕ್ರಯ [22 ?] ನಾಳಿ
21 ಬ್ಬರದ287 ಹೊಂನ್ನೂ ಕೊಟು ನಾಳಿ
22 ಮಂಜು ಪಡಿಹಾಱಗೆ ಕ್ರೆಯ ಮೂಲ
23 ವ ಕೊಂಡ ಭೂಮಿಯ ಚತು ಸಿಮೆ
24 ಸೋಪಾನ ತಿಮರಿಂ ಪಡುವ ತಿಮಿ
25 ತ್ರ್ತಿಲದಿಂ ಬಡಗ ಕಾಣೆಯ ಬೆಟು
26 ಆಮನೆ ಬಾದಣಗುಡೆ ಇ ಮೂಡಲು
27 ನೆಕರೆ ಇಂ ತೆಂಕ ಇಂತೀ ಚತುಸಿಮೆ()

ಶಾಸನದ ಹಿಮ್ಮುಖ

ಚಿತ್ರಗಳು: (?) (ಗಣಪತಿ ?) (?)

28 ಯೋಲಗಣ ಆಲಂತಿಮರೆಂಬ
29 ಬಯಲಗದೆ 2ಕೆ ಬಿತುವ ಮೂ
30 ಡೆ6 ಆ ಬಾಗಿಲ ಗದೆ 1 ಕೊಣಬೆ
31 2 ಸಹ ಬಿತು ಯು ಉಭಯ 8 ಬೂ
32 ಲಿಯಂ ಬೆಟಲಿ ಕೊಡಗೆ ಇದ
33 ಪಡುವ ಠಕುರ್ರ ಠಾವಿಂ ಬಡಗ ಮೈ
34 ಲಾರ ದೇವರಿಂ ಮೂಡ ಬೆಟದಿಂ
35 ತೆ[ಂ*]ಕ ಇ ಚತುಸಿಮೆ ಬೆಟಿನ ಗ
36 ದೆ 3ಕೆ ಬಿತ್ತು ಯಾ 6 ಉಭೈ ಸ್ಥಳ 2ಕೆ
37 ಬಿತುವ ಯಾ 14 ಇವುರಡರ ಕರೆ
38 ಮರ ಪಲ ಮನೆ ಬಾವಿ ಕೆಱ ನಿಧಿ
39 ನ್ನಿಕ್ಷೇಪ ಸಹಿತ ನಾವು ನಿಮಗೆ
40 ಧಾರೆವೆ ದು ಕೊಟ್ಟೆಲು ಇಲ್ರು
41 ತಿಯನೂ ನಿಂಮ ಸಂತಾನ ಪರಂ
42 ಪರೆಯಾಗಿ ಭೋಗಿಸಿಕೊಂಡು ಇ
43 ಹಿರಿ ಭೂಮಿಗೆ ಸಿಧಾಯ ಸ್ಸಿಮೆ ()
44 ನಟ್ಟು ಬೇಡು ದುಖ ಒಸಗೆ ಆಲು
45 ದೊಂದೂ ಸಲದು ಎಂದು ಬರ
46 ಸಸಿಕೊಟ್ಟ ಶಿಲಾಶಾಸನ ಈ ಧ
47 ರ್ಮವನಾವನೊಬನು ಆಳುಪಿದರೆ
48 ವಾರಣಾಸಿಯಲಿ ಸಾವಿರ ಕಪಿಲೆ
49 ಯ ಸ್ವಹಸ್ತದಿಂದ ವಧಿಸ್ತ ದೋ
50 ಷಕೆ ಹೋಹರು ನಿಉ ಬಿಟು ಹೋ
51 ದರೆ ಸೋಮನಾ[ಥ*] ದೇವರು ಮತೊಬರಿ [ಗೆ*]ಕೊ
52 ಟ್ಟು ಬಾಳಿಸುವರು ಶುಭಮಸ್ತು ಶ್ರೀ
53 ಮಂಗಳ ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ



4. ವಿಜಯವಿಠ್ಠಲ ದೇವಾಲಯದ ವ್ಯಾಸರಾಯರ ಶಾಸನದ ಪರಿಷ್ಕೃತ ಪಾಠ ಮತ್ತು ವಿಶ್ಲೇಷಣೆ

ಶ್ರೀ ಎಸ್. ಕಾರ್ತಿಕ್

ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಯುಗವೆಂದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲವೇ ಆಗಿದೆ. ಇದಕ್ಕೆ ರಾಜರೂ, ಪಾಳೆಯಗಾರರು, ಜನಸಾಮಾನ್ಯರು, ಅಧಿಕಾರಿಗಳು ಎಷ್ಟರಮಟ್ಟಿಗೆ ಕಾರಣರೋ ಅದೇ ರೀತಿ ವಿದ್ಯಾರಣ್ಯರು, ವ್ಯಾಸತೀರ್ಥರು ಮುಂತಾದ ಯೋಗಿಗಳೂ ಕೂಡ ಕಾರಣರು ಎಂಬಂತಹ ಅಂಶವನ್ನು ನೆನಪಿನಲ್ಲಿಡಬೇಕು. ವ್ಯಾಸತೀರ್ಥರು ಕೃಷ್ಣದೇವರಾಯ, ಅಚ್ಯುತರಾಯ ಇವರ ಆಳ್ವಿಕೆಯ ಕಾಲದಲ್ಲಿದ್ದವರು. ಇವರ ಹಲವಾರು ಶಾಸನಗಳು ಕರ್ನಾಟಕದಲ್ಲಿ ದೊರಕುತ್ತವೆ. ಅಂತಹ ಶಾಸನಗಳಲ್ಲಿ ಹಂಪಿಯ ವಿಜಯ ವಿಠ್ಠಲ ದೇವಾಲಯದ ಪ್ರಾಕಾರದಲ್ಲಿರುವ ಶಾಸನವೂ ಒಂದಾಗಿದೆ. ಇದರ ಸಾರಾಂಶ ಮತ್ತು ಪೂರ್ಣಪಾಠ ಈಗಾಗಲೇ ಅನೇಕ ಬಾರಿ ಪ್ರಕಟವಾಗಿದ್ದರೂ ಅನೇಕ ಗೊಂದಲಗಳಿಂದ ಕೂಡಿದೆ. ಸರಿಯಾದ ಪಾಠ ಈ ವರೆಗೂ ಪ್ರಕಟವಾಗಿಲ್ಲ. ಆದ ಕಾರಣ ಹಂಪೆಗೆ ಕ್ಷೇತ್ರಕಾರ್ಯವನ್ನು ಕೈಕೊಂಡು ಮೂಲ ಶಾಸನವನ್ನೇ ಮತ್ತೊಮ್ಮೆ ನೇರವಾಗಿ ಪರೀಕ್ಷಿಸಿ ಪರಿಷ್ಕೃತ ಶಾಸನಪಾಠವನ್ನು ತೃಪ್ತಿಕರವಾಗಿ ದಾಖಲಿಸಲು ಪ್ರಯತ್ನಿಸಲಾಗಿದೆ. ಪ್ರಕೃತ ಲೇಖಕನು ನೀಡಿರುವ ಪಾಠಕ್ಕೂ ಇತರ ಸಂಶೋಧಕರು ನೀಡಿರುವ ಪಾಠಕ್ಕೂ ಅನೇಕ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ಆಯಾ ಸಂಪಾದಕರ ಹೆಸರಿನ ಮುಂದೆ ಶಾಸನಪಾಠದ ಅಡಿಯಲ್ಲಿಯೇ ಸೂಚಿಸಲಾಗಿದೆ. ಅಲ್ಲಿಯೇ ಶಬ್ದಗಳ ಶುದ್ಧರೂಪಗಳನ್ನೂ ಅಗತ್ಯವಿರುವೆಡೆಗಳಲ್ಲಿ ಚರ್ಚೆಗಳನ್ನೂ ಕಿರುಟಿಪ್ಪಣಿಗಳನ್ನೂ ಕೊಡಲಾಗಿದೆ. ಹೆಚ್ಚಿನ ವಿಶ್ಲೇಷಣೆಗೆ ಹೋಗದೇ ಸಮರ್ಪಕ ಮಾಹಿತಿಯನ್ನು ನೀಡುವುದೇ ಪ್ರಕೃತ ಲೇಖನದ ಪ್ರಮುಖ ಉದ್ದೇಶವಾಗಿದ್ದು, ಶಾಸನಪಾಠದಲ್ಲಿ ಬಳಸಿರುವ ಸಂಪಾದನ ಚಿಹ್ನೆಗಳ ವಿವರ ಇಂತಿದೆ.

- [॥*] ಶಾಸನದ ಆರಂಭದಲ್ಲಿ ಶುಭಮಸ್ತು, ಅಥವಾ ಇಡೀ ಶಾಸನದಲ್ಲಿ ವಾಕ್ಯ ಮುಗಿದ ಕೂಡಲೆ ಬಳಸಿರುವ ಚಿಹ್ನೆ
- [।*] ಪದ್ಯದ ಮೊದಲನೆಯ ಮತ್ತು ತೃತೀಯ ಪಾದ ಅಥವಾ ಶ್ಲೋಕದ ಒಂದು ಪಾದ ಮುಗಿದ ನಂತರ ಬಳಸಿರುವ ಚಿಹ್ನೆ
- [॥] ವೃತ್ತ ಪದ್ಯದ ಎರಡು ಪಾದಗಳು ಮುಗಿದ ಕೂಡಲೆ ಹಾಕಿರುವ ಚಿಹ್ನೆ
- [॥*॥] ವೃತ್ತಪದ್ಯದ ನಾಲ್ಕು ಪಾದಗಳೂ ಶ್ಲೋಕದ ದ್ವಿತೀಯ ಪಾದ ಪೂರ್ಣವಾದ ನಂತರ ಬಳಸಿರುವ ಚಿಹ್ನೆ
- [ ] ಶಾಸನಪಾಠದೊಳಗೆ ಪಾಠ ಸಂಪೂರ್ಣವಾಗಿ ತ್ರುಟಿತವಾದೆಡೆ ಸಂಪಾದಕ ನಿಯೋಜಿತ ಊಹಾಪಾಠವನ್ನು ಸೂಚಿಸಲು ಬಳಸಲಾದ ಚಿಹ್ನೆ

ಶಾಸನ ಲಭ್ಯವಾದ ಸ್ಥಳ : ವಿಜಯ ವಿಠ್ಠಲ ದೇವಾಲಯದ ರಂಗಮಂಟಪದ ವಾಯವ್ಯ ಮೂಲೆಯಲ್ಲಿ ಅಥವಾ ವಿಠ್ಠಲ ದೇವಾಲಯದ ಗರ್ಭಗೃಹದ ವಾಯವ್ಯ ಮೂಲೆಯಲ್ಲಿ (ವಿಜಯವಿಠ್ಠಲ ದೇವಾಲಯ ಸಂಕೀರ್ಣದ ನಕ್ಷೆ ನೋಡಿ).

ಶಾಸನ ಪ್ರಕಟಣೆಯ ವಿವರಗಳು

(ಅ) *Annual Report of Indian Epigraphy,* 1922, B-710 (ಸಾರಾಂಶ ಮಾತ್ರ).

(ಆ) Pierre-Sylvain Filliozat & Vasundhara Filliozat, *Hampi Vijayanagara The Temple of Vittala,* Sitaram Bhartia Institute of Scientific Research, New Delhi, 1981, No. 7, pp. 58.

(ಇ) Channabasappa S. Patil and Vinoda C. Patil, *Inscriptions at Vijayanagara* (Hampi), Directorate of Archaeology and Museums, Mysore, 1995, No. 196, pp. 57 (summary only)

(ಈ) ಚನ್ನಬಸಪ್ಪ ಎಸ್. ಪಾಟೀಲ, ವಿನೋದ ಸಿ. ಪಾಟೀಲ (ಸಂ), *ವಿಜಯನಗರದ (ಹಂಪೆಯ) ಶಾಸನಗಳು,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–1996, ಸಂಖ್ಯೆ–196, ಪುಟ 56 (ಸಾರಾಂಶ ಮಾತ್ರ)

(ಉ) ಶ್ರೀನಿವಾಸ ರಿತ್ತಿ, ಕೆ.ಟಿ. ಪಾಂಡುರಂಗಿ (ಸಂ), *ಸೋಮನಾಥ ಕವಿಯ ವ್ಯಾಸಯೋಗಿ ಚರಿತಮ್,* Dvaita Vedanta Studies and Research Foundation, Bangalore, ಶಾಸನ ಸಂಖ್ಯೆ–15, ಪು. 242–243.

(ಊ) ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 (ಹಂಪಿ ಶಾಸನಗಳು), ಕನ್ನಡ ವಿಶ್ವವಿದ್ಯಾಲಯ, ಹಂಪಿ–2000, ಸಂಖ್ಯೆ–213, ಪು. 170.

ಶಾಸನದ ಲಿಪಿ ಮತ್ತು ಇತರ ವಿವರಗಳು : ಈ ಶಾಸನವನ್ನು ನಂದಿನಾಗರೀ ಲಿಪಿಯಲ್ಲಿ ಕೆತ್ತಲಾಗಿದೆ (ವಸುಂಧರಾ ಫಿಲಿಯೋಜಾ ಅವರು ನಂದಿನಾಗರೀ ಲಿಪಿ ಎಂದು ಹೇಳಿದ್ದು, ಎ.ಆರ್.ಐ.ಇ. ಮತ್ತು ಶ್ರೀನಿವಾಸ ರಿತ್ತಿ ಅವರ ಕೃತಿಯಲ್ಲಿ ನಾಗರೀ ಎಂದಿದೆ. ಹಂಪಿ ಶಾಸನ ಸಂಪುಟದಲ್ಲಿ ಲಿಪಿಯ ವಿವರವೇ ಇಲ್ಲ). ಲಿಪಿಯ ಕಂಡರಣೆ ಚೆನ್ನಾಗಿದೆ. ಈಗ ಒಂದೆರಡು ಕಡೆ ಅಕ್ಷರಗಳು ತ್ರುಟಿತವಾಗಿದ್ದರೂ ಎ.ಆರ್.ಐ.ಇ. ವರದಿಯಲ್ಲಿ ದಾಖಲಾಗುವ ಕಾಲಕ್ಕೆ ಯಾವುದೇ ತ್ರುಟಿತವೂ ಇರಲಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಶಾಸನದಲ್ಲಿ ಒಟ್ಟು ನಾಲ್ಕು ಸಾಲುಗಳಿದ್ದು ಒಂದೆರಡು ಕಡೆ ಲಿಪಿಕಾರ ಸ್ಖಾಲಿತ್ಯಗಳೆಂದು ಹೇಳಬಹುದಾದ ಶಬ್ದಗಳಿವೆ. ಶಾಸನವಿರುವ ಸ್ಥಳ ವಿಗ್ರಹವೊಂದರ ಯೋನಿಪೀಠದ ಅಧಿಷ್ಠಾನವಾಗಿದ್ದು ಅದರ ವಿನ್ಯಾಸವು ಕ್ರಮವಾಗಿ ಕೆಳಗಿನಿಂದ ಉಪಾನ, ಪದ್ಮ, ಗಳ ಮತ್ತು ಮೇಲ್ಭಾಗದಲ್ಲಿ ಕೂಡು ಕಪೋತ ಹೊಂದಿದ್ದು, ಇದರೊಂದಿಗೆ ಕಮಲ ದಳಗಳ ಸರಪಣಿ ವಿನ್ಯಾಸವಿದೆ. ಗಳದ ಭಾಗದಲ್ಲಿ ನಾಲ್ಕು ಸಾಲಿನ ಶಾಸನಪಾಠವಿದ್ದು ಮಧ್ಯದಲ್ಲಿ ಪುಷ್ಪದ ಚಿತ್ರವಿದೆ. ಪುಷ್ಪದ ಎಡ, ಬಲಗಳಲ್ಲಿ ಶಾಸನವಿದ್ದು ಎಡಭಾಗದಲ್ಲಿ 3 ಸಾಲುಗಳು, ಬಲಭಾಗದಲ್ಲಿ 4 ಸಾಲುಗಳು ಕೆತ್ತಲ್ಪಟ್ಟಿವೆ (ಹೆಚ್ಚಿನ ಮಾಹಿತಿಗೆ ಪ್ರಕೃತ ಲೇಖನದಲ್ಲಿ ನೀಡಿರುವ ಛಾಯಾಚಿತ್ರಗಳನ್ನು ಮತ್ತು Vijayanagara Architectural Inventory of The Sacred Centre (3 Volumes) by Phillip B. Wagoner, George Michell , Monohar American Institute of Indian Studies, New Delhi-2001 ಗ್ರಂಥವನ್ನು ನೋಡಬಹುದು)

ಶಾಸನದ ಕಾಲ : ಈ ಶಾಸನದ ಕಾಲವನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಬರೆದಿದ್ದು ಅವುಗಳ ವಿವರವನ್ನು ನಮ್ಮ ಮಾತುಗಳಲ್ಲಿ ಕೆಳಗೆ ದಾಖಲಿಸಿ ವಿಮರ್ಶಿಸಲಾಗಿದೆ.

1. ಎ.ಆರ್.ಐ.ಇ. ವರದಿಯಲ್ಲಿ ಶಕ 1454, ನಂದನ ಸಂವತ್ಸರ, ವ್ಯೋಮ (=ಶ್ರಾವಣ) ಬಹುಳ 2 (=ದ್ವಿತೀಯಾ), ವೈಷ್ಣವ ನಕ್ಷತ್ರ, ಇಂದ್ರಯೋಗ, ತಿಷ್ಯ, ಬಾಲವ, ಕನ್ಯಾ ಲಗ್ನ ಎಂದು ನಮೂದಾಗಿದ್ದು, ಇದು ಜುಲೈ 18, ಗುರುವಾರ 1532 ಕ್ಕೆ ಸರಿಹೊಂದುತ್ತದೆ. ಆದರೆ ಶ್ರವಣ ನಕ್ಷತ್ರವಿರದೆ ಧನಿಷ್ಠ ನಕ್ಷತ್ರವಿರುತ್ತದೆ ಎಂದು ದಾಖಲಾಗಿದೆ. ಇದು ಚಾಂದ್ರಮಾನ ಪಂಚಾಂಗದಂತೆ ವಿಶ್ಲೇಸಿರುವ ಕಾಲವಾಗಿದ್ದು ತೃಪ್ತಿಕರವಾಗಿದೆ.
2. ವಸುಂಧರಾ ಫಿಲಿಯೋಜಾ ಅವರು ಶಾಸನದಲ್ಲಿನ ವ್ಯೋಮ ಎಂಬುದನ್ನು ಜ್ಯೇಷ್ಠ ಎಂದು ಓದಿರುವ ಕಾರಣ ಅನೇಕ ಗೊಂದಲಗಳುಂಟಾಗಿ ಕಾಲನಿರ್ಣಯ ಸಮರ್ಪಕವಾಗಿಲ್ಲ.
3. ಶ್ರೀನಿವಾಸ ರಿತ್ತಿಯವರು ಕ್ರಿ.ಶ. 1532 ಜುಲೈ 2 ಶುಕ್ರವಾರ ಎಂದು ದಾಖಲಿಸಿದ್ದಾರೆ. ಆದರೆ ಈ ದಿನ ನಂದನ ಸಂವತ್ಸರ ಆಷಾಢ ಬಹುಳ ಅಮಾವಾಸ್ಯೆಯಾಗಿತ್ತು. ಆದ ಕಾರಣ ಇದನ್ನು ಒಪ್ಪಲು ಸಾಧ್ಯವೇ ಇಲ್ಲ.
4. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಸಿ. ಪಾಟೀಲ ಅವರು ಕ್ರಿ.ಶ. 1532, ಜುಲೈ 19, ಶುಕ್ರವಾರ (ಗುರುವಾರ ಅಲ್ಲ) ಎಂದು ದಾಖಲಿಸಿದ್ದಾರೆ. ಆದರೆ ಶಾಸನೋಕ್ತ ತೇದಿ ಗುರುವಾರಕ್ಕೆ ಸ್ಪಷ್ಟವಾಗಿ ಸರಿಹೊಂದುತ್ತದೆ.
5. ಹಂಪಿ ವಿಶ್ವವಿದ್ಯಾಲಯದ ಶಾಸನ ಸಂಪುಟದಲ್ಲಿ ನಂದನ ಸಂವತ್ಸರ ಜ್ಯೇಷ್ಠ ಬಹುಳ 2 ಬುಧವಾರ ಕ್ರಿ.ಶ. 21–5–1532 ಮಂಗಳವಾರಕ್ಕೆ (ಗುರುವಾರವಲ್ಲ) ಸಮನಾಗುತ್ತದೆ ಎಂದು ಬರೆಯಲಾಗಿದೆ. ಈ ದಿನ ಜೇಷ್ಠ ಬಹುಳ ತೃತೀಯೆಯಾಗಿತ್ತು. ವಸುಂಧರಾ ಫಿಲಿಯೋಜಾ ಅವರ ಪಾಠವನ್ನು ಅನುಸರಿಸಿರುವ ಕಾರಣ ಈ ದೋಷ ಸಂಭವಿಸಿದೆ. ಆದ ಕಾರಣ ಈ ದಿನಾಂಕವೂ ಸಮರ್ಥನೀಯವಲ್ಲ.

ಶಾಸನದಲ್ಲಿ ಕಾಲವನ್ನು ಅತ್ಯಂತ ಸ್ಪಷ್ಟವಾಗಿ ದಾಖಲಿಸಲಾಗಿದ್ದು ಅದರ ವಿವರಗಳನ್ನು ಕೆಳಗಿನಂತೆ ಪಟ್ಟಿಮಾಡಿ ವಿಶ್ಲೇಸಲಾಗಿದೆ :

1. **ಭೌಮೇಭೂಪೇ** – ಇದು ಕಟಪಯಾದಿ ಸಂಖ್ಯಾವಾಚಕ ಶಬ್ದವಾಗಿದ್ದು ಶಕ 1454ಕ್ಕೆ ಸರಿಹೊಂದುತ್ತದೆ (ಭೌ–4, ಮೇ–5, ಭೂ–4, ಪೇ–1)
2. **ನಂದನಾಹ್ವೇ** – ನಂದನ ಸಂವತ್ಸರ
3. **ವ್ಯೋಮ ಮಾಸ ಕೃಷ್ಣದ್ವಿತೀಯಾ** – ವ್ಯೋಮ ಮಾಸವೆಂದರೆ ಶ್ರಾವಣ ಮಾಸ. ಕೃಷ್ಣ ದ್ವಿತೀಯಾ ಎಂದರೆ ಕೃಷ್ಣಪಕ್ಷದ ಬಿದಿಗೆ
4. **ಸುರಗುರು ದಿವಸೇ** – ಗುರುವಾರ
5. **ವೈಷ್ಣವರ್ಕ್ಷೈಂದ್ರಯೋಗೇ** – ವೈಷ್ಣವ ನಕ್ಷತ್ರವೆಂದರೆ ಶ್ರವಣ ನಕ್ಷತ್ರ, ಇಂದ್ರ ಯೋಗವೆಂಬುದು 27 ಯೋಗಗಳಲ್ಲಿ ಕೊನೆಯದು (ಶ್ರವಣ ನಕ್ಷತ್ರವು ಗುರುವಾರದಂದು ಇರುವುದೇ ಇಲ್ಲ. ಬುಧವಾರದ ಹೊತ್ತಿಗೆ ಧನಿಷ್ಠಾ ನಕ್ಷತ್ರ ಬಂದು ಗುರುವಾರದವರೆಗೂ ಇರುತ್ತದೆ)
6. **ತಿಥ್ಯರ್ಧೇ** – ತಿಥಿಯ ಪ್ರಮಾಣ ಅರ್ಧದಿನ ಮಾತ್ರ ಇರುವುದು. ಶಾಸನೋಕ್ತ ದ್ವಿತೀಯಾ ತಿಥಿಯು ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಆರಂಭವಾಗುತ್ತದೆ. ಮಿಕ್ಕ ಅರ್ಧ ದಿನ ಬೆಳಗ್ಗೆ ಪಾಡ್ಯಮಿ ತಿಥಿಯೇ ಇರುವುದರಿಂದ ತಿಥ್ಯಾರ್ಧೇ ಎಂದು ಹೇಳಲಾಗಿದೆ.

7. **ವಾಲವಾಖ್ಯೇ** – ವಾಲವ ಅಥವಾ ಬಾಲವ ಎಂಬ ಹೆಸರಿನ ಕರಣ (ಗುರುವಾರದಂದು ಈ ಕರಣ ಇರುವುದೇ ಇಲ್ಲ).
8. **ರವಿ ವೃಷಭಯುತೇ** – ಸೂರ್ಯನು ವೃಷಭ ರಾಶಿಯಲ್ಲಿರುವನೆಂದು ಹೇಳಲಾಗಿದ್ದರೂ ಇದನ್ನು ಒಪ್ಪಲು ತೊಡಕುಗಳಿವೆ. ಏಕೆಂದರೆ ಶ್ರಾವಣ ಮಾಸದಲ್ಲಿ ಸೂರ್ಯನು ಸಿಂಹ ರಾಶಿಯಲ್ಲಿರುತ್ತಾನೆ. ಬೇರೆ ರೀತಿಯಲ್ಲಿ ಅರ್ಥೈಸಲು ಸದ್ಯದಲ್ಲಿ ಸಾಧ್ಯವಾಗುತ್ತಿಲ್ಲ.
9. **ಕನ್ಯಾಲಗ್ನೇ** – ಕನ್ಯಾ ಲಗ್ನದಲ್ಲಿ. ಕನ್ಯಾ ಲಗ್ನವು ಬೆಳಗ್ಗೆ 11. 30ರ ಸುಮಾರಿಗೆ ಇರುತ್ತದೆ.

ಈ ಎಲ್ಲ ಅಂಶಗಳ ಕಾರಣದಿಂದ ಈ ಶಾಸನದ ಕಾಲವನ್ನು ಎ.ಆರ್.ಐ.ಇ. ವರದಿಯಲ್ಲಿ ಸೂಚಿಸಿರುವಂತೆ ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. 18–7–1532, ಗುರುವಾರ ಎಂದು ಗ್ರಹಿಸುವುದೇ ಸದ್ಯದಲ್ಲಿ ಸೂಕ್ತವಾದ ಕ್ರಮವಾಗಿದೆ. ಆದರೆ ಕೆಲವು ಅಂಶಗಳು ಸರಿಹೊಂದುವುದಿಲ್ಲ ಎಂಬ ಅಂಶ ಚಿಂತನೀಯ. ವ್ಯಾಸತೀರ್ಥರಂತಹ ಯೋಗಿಗಳು ಇಂತಹ ಸಂದಿಗ್ಧವಾಗಿರುವ ಕಾಲದಲ್ಲಿ ವರದ ಯೋಗನರಹರಿಯ ಪ್ರತಿಷ್ಠೆಯನ್ನು ಮಾಡಿರುವರೆಂಬ ಅಂಶವನ್ನು ಒಪ್ಪಲು ಸಾಧ್ಯವೇ ಇಲ್ಲ. ಈ ಶಾಸನದ ಕಾಲದಲ್ಲಿ ಬಳಕೆಯಲ್ಲಿದ್ದ ಕಾಲಗಣನೆಯ ವಿವರಗಳು ತಿಳಿದುಬಂದರೆ ಹೆಚ್ಚಿನ ಅಧ್ಯಯನ ಸಾಧ್ಯವಾಗುತ್ತದೆ. ಸದ್ಯದಲ್ಲಿ ಇದರ ಬಗೆಗೆ ವಿಶ್ಲೇಸಲು ಆಧಾರ ಸಾಮಗ್ರಿಗಳ ಕೊರತೆ ವ್ಯಾಪಕವಾಗಿ ಇದೆ. ಭಾರತೀಯ ಕಾಲಗಣನೆಯನ್ನು ಪಾಶ್ಚಾತ್ಯ ಕಾಲಗಣನೆಯ ಆಧಾರದ ಮೇಲೆ ಮಾಡುತ್ತಿರುವುದೇ ಇದಕ್ಕೆ ಪ್ರಮುಖ ಕಾರಣವೆಂದು ಹೇಳಬೇಕಾಗಿದೆ. ಆದ ಕಾರಣ ಇದರ ಬಗೆಗೆ ಹೆಚ್ಚಿನ ವಿಶ್ಲೇಷಣೆ ಅಗತ್ಯ ಬಹಳವಾಗಿದೆ.

ಶಾಸನದ ಛಂದಸ್ಸು : ಶುಭಮಸ್ತು ಎಂಬುದನ್ನು ಹೊರತುಪಡಿಸಿ ಈ ಶಾಸನವು ಒಂದು ಸ್ರಗ್ಧರಾ ವೃತ್ತ ಮತ್ತು ಶ್ಲೋಕ ಛಂದಸ್ಸಿನಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದೆ. ಸ್ರಗ್ಧರಾ ವೃತ್ತದ ಪದ್ಯದ ಪ್ರತಿಪಾದದಲ್ಲಿಯೂ 7.7.7ನೆಯ ಸ್ಥಾನಗಳಲ್ಲಿ ಯತಿ ಸ್ಪಷ್ಟವಾಗಿ ಪಾಲಿತವಾಗಿದೆ. ಇದನ್ನು ವಸುಂಧರಾ ಫಿಲಿಯೋಜಾ ಅವರು ಗುರುತಿಸಿದ್ದರೂ ಸ್ಪಷ್ಟವಾಗಿ ಶಾಸನದ ಸಂಪಾದನೆಯಲ್ಲಿ ಬಳಸಿಲ್ಲ. ಶ್ರೀನಿವಾಸ ರಿತ್ತಿ ಮತ್ತು ಹಂಪಿ ಶಾಸನ ಸಂಪುಟದಲ್ಲಿ ಇದರ ಬಗೆಗೆ ಸೂಚನೆಯೇ ಇಲ್ಲ. ಹಂಪಿ ಶಾಸನ ಸಂಪುಟದಲ್ಲಿ ವಸುಂಧರಾ ಫಿಲಿಯೋಜಾ ಅವರ ಪಾಠವನ್ನೇ ಅನುಸರಿಸಲಾಗಿದೆ. ಆದರೂ ಕೂಡ ಅಚ್ಚಿನ ತಪ್ಪುಗಳು, ಸಂಪಾದಕರಿಂದಾಗಿರುವ ತಪ್ಪುಗಳಿಂದಾಗಿ ಪಾಠವೇ ದೋಷಪೂರ್ಣವಾಗಿದೆ. ಛಂದಸ್ಸಿನ ಆಧಾರದ ಮೇಲೆ ಶಾಸನದ ಪಾಠವನ್ನು ಅತ್ಯಂತ ಸ್ಪಷ್ಟವಾಗಿ ಸಂಪಾದಿಸಬಹುದು. ಇದನ್ನು ಛಂದಸ್ಸಿಗನುಗುಣವಾಗಿ ಪದ್ಯರೂಪದಲ್ಲಿ ಶುದ್ಧಪಾಠದೊಡನೆ ಕೆಳಗೆ ನೀಡಲಾಗಿದೆ :

ಸ್ರಗ್ಧರೆ ॥ ಭೌಮೇಭೂಪೇ ಶಕಾಬ್ದೇ ಸಕಲ ಸುಖಕರೇ ನಂದನಾಹ್ವೇ ಚ ಮಾಸೇ
ವ್ಯೋಮೇ ಕೃಷ್ಣದ್ವಿತೀಯಾ ಸುರಗುರುದಿವಸೇ ವೈಷ್ಣವರ್ಕ್ಷೈಂದ್ರಯೋಗೇ
ತಿಥ್ಯರ್ಧೇ ವಾಲವಾಖ್ಯೇ ರವಿ ವೃಷಭಯುತೇ ವಿಠ್ಠಲಸ್ಯಾಂಗಣಾ[ಂ]ತೇ
ಕನ್ಯಾಲಗ್ನೇ ಸ ಯೋಗೀ ವರದನರಹರಿಃ ಸ್ಥಾಪಿತೋ ವ್ಯಾಸತೀರ್ಥೈಃ

ಅನುಷ್ಟುಪ್ ಶ್ಲೋಕ ॥ ವಿಘ್ನವಾರಣ ಪಂಚಾಸ್ಯಂ ಸದಭೀಷ್ಟಫಲ [ಪ್ರ]ದ[ಂ]
ವರದಯೋಗನೃಹರಿಂ ವಂದೇ ಸಜ್ಜನ ಪೂಜಿತಂ

ಶಾಸನದ ಅರ್ಥ : ಶಕ 1454 ರ ನಂದನ ಸಂವತ್ಸರದ ಶ್ರಾವಣ ಮಾಸ, ಕೃಷ್ಣಪಕ್ಷದ ಗುರುವಾರದಂದು ಶ್ರವಣ ನಕ್ಷತ್ರ, ಇಂದ್ರಯೋಗ, ಅರ್ಧತಿಥಿ, ವಾಲವ ಕರಣ, ಸೂರ್ಯನು ವೃಷಭರಾಶಿಯಲ್ಲಿರುವ ಸಮಯದಲ್ಲಿ, ಕನ್ಯಾಲಗ್ನದಲ್ಲಿ ವಿಠ್ಠಲದೇವರ ಅಂಗಣದಲ್ಲಿ ವ್ಯಾಸತೀರ್ಥರಿಂದ ವರದಯೋಗ ನರಹರಿಯ ಸ್ಥಾಪನೆಯಾಯಿತು.

ವಿಘ್ನಗಳೆಂಬ ಆನೆಗಳಿಗೆ ಸಿಂಹರೂಪನಾದ, ಬೇಡಿದವರಿಗೆ ವರಗಳನ್ನು ನೀಡುವ, ಸಜ್ಜನರಿಂದ ಪೂಜಿತನಾದ ವರದಯೋಗ ನರಹರಿಗೆ ನಮನಗಳು

ವರದ ಯೋಗನರಹರಿ : ವ್ಯಾಸರಾಯರು ಪ್ರತಿಷ್ಠಾಪಿಸಿದ ವರದ ಯೋಗನರಹರಿಯ (=ವರದ ಯೋಗನರಸಿಂಹ) ವಿಗ್ರಹ ಈ ಸುತ್ತಲಿನ ಪರಿಸರದಲ್ಲಿ ದೊರಕುತ್ತಿಲ್ಲ. ನಮ್ಮ ಗಮನಕ್ಕೆ ಬಂದಂತೆ ಯೋಗನರಸಿಂಹನ ಪ್ರತಿಮಾ ಲಕ್ಷಣಗಳನ್ನು ಬಹುತೇಕ ಕೃತಿಗಳಲ್ಲಿ ದಾಖಲಿಸಲಾಗಿದೆಯೇ ಹೊರತು ವರದ ಯೋಗನರಹರಿಯ ವಿವರವನ್ನು ಎಲ್ಲಿಯೂ ದಾಖಲಿಸಿರುವಂತೆ ತೋರದು. ಯೋಗನರಹರಿಯ ಲಕ್ಷಣವನ್ನು ಮುಮ್ಮಡಿ ಕೃಷ್ಣರಾಜರ ಶ್ರೀತತ್ತ್ವನಿಧಿಯ ವಿಷ್ಣುನಿಧಿಯಲ್ಲಿ ವರ್ಣಚಿತ್ರಸಹಿತ ಅಥರ್ವಣಸಾರದಲ್ಲಿರುವಂತೆ ದಾಖಲಿಸಿದ್ದು ಅದನ್ನು ಕೆಳಗೆ ನೀಡಲಾಗಿದೆ (ನೋಡಿ : ಶ್ರೀತತ್ತ್ವನಿಧಿ (ದ್ವಿತೀಯ ಸಂಪುಟ, ವಿಷ್ಣುನಿಧಿ) ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ–2002, ಪು. 24. ಈ ಶ್ಲೋಕದ ಅನುವಾದ ವಿಷ್ಣುನಿಧಿಯಲ್ಲಿ ಸಮರ್ಪಕವಿಲ್ಲದ ಕಾರಣ ಹೊಸದಾಗಿ ಅನುವಾದಿಸಿ ಕೊಡಲಾಗಿದೆ. ಇದನ್ನು ಅನುವಾದಿಸಿ ಕೊಟ್ಟವರು ಮೈಸೂರು ಎಸ್. ಜಗನ್ನಾಥ ಅವರು. ಆದರೂ ಕೆಲವು ಕಡೆ ಪಾಠದೋಷಗಳಿಂದ ಅನುವಾದ ಪೂರ್ಣ ಸಮರ್ಪಕವಾಗಿಲ್ಲ).

ನಿತ್ಯಾನನ್ದಮಯಂ ನಿರಞ್ಜನಮಯಂ ನಿರ್ವಾಣಸನ್ದಾಯಕಂ
ನಿರ್ವ್ಯಾಜಂ ನಿಖಿಲಕ್ಷಮಾದಿಸುಗುಣಂ ನೀರೇಜಪತ್ರೇಕ್ಷಣಮ್ ।
ಜಾನ್ವೋರ್ಬದ್ಧಭುಜಂ ಸುದರ್ಶನ[ಧ]ರಾತ್ಯುಗ್ರಾಯುಧೋದ್ಯದ್ದ್ವಯಂ
ಯೋಗಾರೂಢನೃಸಿಂಹಮೀಶಮನಿಶಂ ಧ್ಯಾಯೇತ್ ತ್ರಿಣೇತ್ರಂ ಹರಿಮ್ ॥

[ಯಾವಾಗಲೂ ಆನಂದದಿಂದ ತುಂಬಿರುವ, ಮಲರಾಹಿತ್ಯವೆಂಬ ಗುಣದಿಂದ ತುಂಬಿರುವ, ಮೋಕ್ಷಪ್ರದನಾದ, ನೈಸರ್ಗಿಕ ಅಸ್ತಿತ್ವವನ್ನುಳ್ಳ (ತನ್ನ ಅಸ್ತಿತ್ವಕ್ಕೆ ಬಾಹ್ಯ ಸಾಧನವಾವುದೂ ಬೇಕಿಲ್ಲದ), ಎಲ್ಲರನ್ನೂ ಕ್ಷಮಿಸುವುದೇ ಮುಂತಾದ ಸದ್ಗುಣಗಳುಳ್ಳ, ತಾವರೆದಳದಂತಹ ಕಣ್ಣುಳ್ಳ, ಭುಜಗಳನ್ನು ಮಂಡಿಯ ಮೇಲೆ ಗಟ್ಟಿಯಾಗಿ ಊರಿರುವ, ಸುದರ್ಶನ ಚಕ್ರವನ್ನು ಧರಿಸಿರುವ, ಭಯಂಕರವಾದೆರಡು ಆಯುಧಗಳನ್ನು ಎತ್ತಿ ಹಿಡಿದಿರುವ (?), ಎಲ್ಲಕ್ಕೂ ಒಡೆಯನಾದ, ಮುಕ್ಕಣ್ಣನಾದ ಹರಿಯೆಂಬ ಹೆಸರಿನ ಹಾಗೂ ಯೋಗನಿಮಗ್ನನಾಗಿರುವ ನರಸಿಂಹನನ್ನು ಸತತವಾಗಿ ಧ್ಯಾನಿಸುತ್ತೇನೆ (ಧ್ಯಾಯೇ ಎಂದು ಮೂಲಪಾಠವಿರಬಹುದೆಂಬ ಸಾಧ್ಯತೆಯ ಮೇಲೆ ಅನುವಾದಿಸಲಾಗಿದೆ. ಧ್ಯಾಯೇತ್ ಎಂದರೆ ಧ್ಯಾನಿಸಬೇಕು ಎಂಬ ಅರ್ಥವನ್ನು ಹೇಳಬೇಕಾಗುತ್ತದೆ)].

ಮೇಲಿನ ಲಕ್ಷಣವನ್ನು ಅನುಸರಿಸಿ ವಿಗ್ರಹವಿಲ್ಲದೇ ಇದ್ದರೂ ಹೆಸರಿನ ಸಾಮ್ಯದ ಮೇಲೆ ತರ್ಕಿಸಿ ವರದ ಯೋಗನರಹರಿಯ ವಿಗ್ರಹದ ಪ್ರತಿಮಾ ಲಕ್ಷಣಗಳನ್ನು ಕೆಳಗೆ ನೀಡಿರುವಂತೆ ತಕ್ಕಮಟ್ಟಿಗೆ ಹೇಳಬಹುದಾಗಿ ತೋರುತ್ತದೆ. ಇದೇನೂ ಪೂರ್ಣವಾಗಿ ಸರಿಯೆಂದು ಹೇಳಲು ಸಾಧ್ಯವಿಲ್ಲದಿದ್ದರೂ ಸಂಭಾವ್ಯವೆಂದು ಮಾತ್ರ ಸೂಚಿಸಬಹುದು, (ವರದ ಯೋಗನರಹರಿ ಎಂದು ಶಾಸನದಲ್ಲಿ ಸ್ಪಷ್ಟವಾಗಿ ಸೂಚಿಸಿರುವುದರಿಂದ ಇದು ಬಲುಮಟ್ಟಿಗೆ ಯೋಗಲಕ್ಷ್ಮೀನರಸಿಂಹ ಮೂರ್ತಿ ಆಗಿರಲಾರದೆಂದು ತೋರುತ್ತದೆ).

* ಚತುರ್ಭುಜನಾದ ನರಸಿಂಹನು ಯೋಗ ಭಂಗಿಯಲ್ಲಿ ಕುಳಿತು ಮಂಡಿಗಳನ್ನು ಮಡಚಿಕೊಂಡು ಮಂಡಿಗಳ ಮೇಲೆ ಹಸ್ತಗಳನ್ನು ಇಳಿಬಿಟ್ಟಿರುವುದು.
* ಮೂರ್ತಿಯ ಕೆಳಗಿನ ಬಲಗೈ ಇಳಿಬಿಟ್ಟಿರುವ ವರದ ಹಸ್ತ
* ಮೂರ್ತಿಯ ಮೇಲಿನ ಬಲಗೈಯಲ್ಲಿ ಸುದರ್ಶನ ಚಕ್ರ

* ಮೂರ್ತಿಯ ಕೆಳಗಿನ ಎಡಗೈಯನ್ನು ಇಳಿಬಿಟ್ಟಿರುವುದು
* ಮೂರ್ತಿಯ ಮೇಲಿನ ಎಡಗೈಯಲ್ಲಿ ಶಂಖ ಮತ್ತು ಮೂರು ಕಣ್ಣುಗಳು

ಈ ಶಾಸನ ಮತ್ತು ವರದ ಯೋಗನರಹರಿಯ ಬಗೆಗೆ ಎಂ.ವಿ. ವಿಶ್ವೇಶ್ವರ ಅವರು ಬರೆದಿರುವುದನ್ನು ಕೆಳಗೆ ನೀಡಲಾಗಿದೆ.

This temple forms part of the Vijaya Vithala Temple Complex. Adjoining the north-western corner of the western gallery there are remnants of a basement, the plan and elevation of which cannot be fully discerned. A four lined Sanskrit inscription in two stanzas engraved in Nandinagari script on the two in-situ slabs, probably forming the entrance sill of the shrine (or more probably the Pitha for installing a deity) records that Vyasatirtha established there the deity Yoga-Varada Narasimha. The first verse informs about the installation of the image of Varadanarahari on 21st May 1532. The second is in praise of the deity installed, the text of which reads :

Vighna Varana Panchasyam Sadabhistaphala (pra)dam |
Varadayoganrihari(m) Vamde sajjana pujitam ||

Significant aspect of the epigraph is that it refers to the deity as Varadayoga-nrihari. Unfortunately the image installed in the temple is not to be found now. But by the very name of the deity the probable form could be apprehended. Further, there is a strong belief amongst the Hindu Brahmins of the Madhva sect that Vyasatirtha, the renowned saint, himself was an incarnation of Prahlada. In the light of this popular belief, the image of Varadayoga Nrihari may be considered to have represented Yogalakshminrisimha in the syncretistic form which is quite popular during the period. It is interesting to note that the famous Lakshmi Narasimha image referred earlier (=colossal Lakshmi Narasimha, at present called Ugra Narasimha) was installed just three years before the installation of the present image [M.V.Visveswara in Vishnu in Art, Thought and Literature (Ed) G. Kamalakar, Birla Archaeological and Cultural Research Institute, Hyderabad-1993, pp 310].

ವಿಶ್ವೇಶ್ವರ ಅವರ ವಿಶ್ಲೇಷಣೆ ಸಾಮಗ್ರಿಯ ಅಭಾವವನ್ನು ಸ್ಪಷ್ಟವಾಗಿ ಸೂಚಿಸುತ್ತದೆ ಮತ್ತು ಲಭ್ಯ ಮಾಹಿತಿಯನ್ನು ವಿವೇಚಿಸುವಲ್ಲಿ ಸಫಲವಾಗಿದೆ. ಆದರೆ ಶಾಸನದ ಕಾಲವನ್ನು ದಾಖಲಿಸುವಾಗ ವಸುಂಧರಾ ಫಿಲಿಯೋಜಾ ಅವರ ಪಾಠವನ್ನು ಅನುಸರಿದ್ದಾರೆ. ಇದರಿಂದಾಗಿ ಕಾಲದ ವಿವರ ಮಾತ್ರ ದೋಷಪೂರ್ಣವಾಗಿದೆ. ಉಳಿದಂತೆ ಇದೊಂದು ಶ್ರೇಷ್ಠ ಪರಿಶೀಲನಾರ್ಹ ಬರಹವಾಗಿದೆ.

ಪ್ರಕೃತ ಬರಹದಲ್ಲಿ ಹಂಪೆಯ ವಿಜಯ ವಿಠ್ಠಲ ದೇವಾಲಯದ ಪ್ರಾಕಾರದಲ್ಲಿರುವ ವ್ಯಾಸರಾಯರ ಶಾಸನದ ಪರಿಷ್ಕೃತ ಪಾಠವನ್ನು ದಾಖಲಿಸಿ, ಶಾಸನದ ಅರ್ಥವನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ ಮತ್ತು ಶುದ್ಧಪಾಠವನ್ನು ದಾಖಲಿಸಲಾಗಿದೆ. ವರದ ಯೋಗನರಸಿಂಹನ ಬಗೆಗೂ ವಿಮರ್ಶಿಸಲು ಪ್ರಯತ್ನಿಸಲಾಗಿದೆ. ನಮ್ಮ ವಿಶ್ಲೇಷಣೆಯಲ್ಲಿ ಲೋಪದೋಷಗಳೂ

ಇರಬಹುದು. ಬಲ್ಲವರು ಇದನ್ನು ತಿದ್ದಬೇಕಾಗಿ ವಿನಂತಿ. ಶಾಸನೋಕ್ತ ಕಾಲಗಣನೆಯ ಬಗೆಗೆ ಸಮರ್ಪಕವಾಗಿ ಕೆಲಸ ಇದುವರೆಗೂ ನಡೆದಿಲ್ಲ. ಇಂದಿನ ದಿನ ಅಂತರ್ಜಾಲದಲ್ಲಿ ಹಲವು ತಂತ್ರಾಂಶಗಳು ಲಭ್ಯವಿವೆ. ಇವುಗಳನ್ನು ಬಳಸಿಕೊಳ್ಳಬೇಕು. ನಾವು ಇಂದು ಸ್ವಾಮಿ ಕಣ್ಣು ಪಿಳ್ಳೆ ಅವರ ಇಂಡಿಯನ್ ಎಫಿಮೆರೀಸ್ ಕೃತಿಯನ್ನು ಬಳಸುತ್ತಿದ್ದರೂ ಇದರಲ್ಲಿ ಅನೇಕ ಸಮಸ್ಯೆಗಳಿವೆ. ಇವುಗಳ ಬಗೆಗೆ ಸಮಗ್ರ ಅಧ್ಯಯನ ನಡದು ಗೊಂದಲಗಳು ಬಗೆಹರಿಯಬೇಕಾದ ಅಗತ್ಯವಿದೆ. ರಾಜಕೀಯ ಇತಿಹಾಸದ ದೃಷ್ಟಿಯಿಂದ ಈಗ ಪರಿಷ್ಕೃತವಾಗಿರುವ ಶಾಸನ ಪ್ರಮುಖವಲ್ಲದ್ದಿರಬಹುದು. ಆದರೆ ಆರ್ಥಿಕ, ಸಾಮಾಜಿಕತೆಯ ದೃಷ್ಟಿಯಿಂದ ಪ್ರಮುಖವೆಂದು ಹೇಳಬಹುದು. ಇಂತಹ ಶಾಸನಗಳನ್ನು ಕೂಡ ಪರಿಷ್ಕರಿಸಿ ಪ್ರಕಟಿಸಬೇಕಾದ್ದು ಶಾಸನತಜ್ಞರ ಕರ್ತವ್ಯವಾಗಿದೆ. ಇದು ಆದಷ್ಟು ಬೇಗ ಕೈಗೂಡಲೆಂದು ಹಾರೈಸುತ್ತೇವೆ.

[ಈ ಶಾಸನ ಪಾಠವನ್ನು ಮರುಪರಿಶೀಲಿಸಲು ಮತ್ತು ಲೇಖನವನ್ನು ಸಿದ್ಧಪಡಿಸಲು ನೆರವು ನೀಡಿರುವ ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ಬೆಂಗಳೂರು ವಲಯದ ಅಧೀಕ್ಷಕ ಪುರಾತತ್ತ್ವವಿದರಾದ ಟಿ.ಎಂ. ಕೇಶವ ಅವರಿಗೂ, ವಿಶೇಷವಾಗಿ ಹೆಚ್ಚಿನ ನೆರವು ನೀಡಿರುವ ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ಕಾಮಲಾಪುರ ಹಂಪಿ ಕಿರುವಲಯದ ಉಪ ಅಧೀಕ್ಷಕ ಪುರಾತತ್ತ್ವವಿದರಾದ ಎಸ್.ಸಿ. ಪ್ರಕಾಶ್ ಅವರಿಗೂ, ಅದೇ ಇಲಾಖೆಯ ನಿವೃತ್ತ ಉಪಅಧೀಕ್ಷಕ ಪುರಾತತ್ತ್ವವಿದರಾದ ಎಂ.ವಿ. ವಿಶ್ವೇಶ್ವರ ಅವರಿಗೂ, ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಸ್ವತಂತ್ರ ಚಿಂತಕ ಎಸ್. ಜಗನ್ನಾಥ ಅವರಿಗೂ ಅನೇಕ ರೀತಿಯ ನೆರವನ್ನು ನೀಡಿರುವ ಇತರ ಸಂಶೋಧಕ ವಿದ್ವಾಂಸರಿಗೂ ನಮ್ಮ ಕೃತಜ್ಞತೆಗಳನ್ನು ಸೂಚಿಸುತ್ತೇವೆ]

ಶಾಸನದ ಪರಿಷ್ಕೃತ ಪಾಠ

1 ಶುಭಮಸ್ತು [॥*] ಭೌಮೇಭೂಪೇ[1] ಶಕಾಬ್ದೇ ಸಕಲ ಸುಖಕರೇ[2] ನಂದನಾಹ್ವೇ[3] ಚ ಮಾಸೇ [।*] ವ್ಯೋಮೇ[4] ಕೃಷ್ಣದ್ವಿತೀಯ್ಯಾ[5] ಸುರ

2 ಗುರುದಿವಸೇ ವೈಷ್ಣವರ್ಕ್ಷ್ಯೆಂದ್ರಯೋಗೇ[6] [॥] ತಿಥ್ಯಾರ್ದ್ಧೇ[7] ವಾಲವಾಖ್ಯೇ ರವಿ ವೃಷಭೆ[8]ಯುತೇ ವಿಠ್ಠಲಸ್ಯಾಂಗಣಾ[ಂ]ತೇ [।*] ಕನ್ಯಾ[9]

3 ಲಗ್ನೇ ಸ ಯೋಗೀ ವರದನರಹರಿಃ[10] ಸ್ಥಾಪಿತೋ ವ್ಯಾಸತೀರ್ಥ್ಯೆಃ [॥*॥] ವಿಘ್ನವಾರಣ ಪಂಚಾಸ್ಯಂ ಸದಭೀಷ್ಟ ಫಲ [ಪ್ರ]

4 ದ[ಂ][11] [।*] ವರದ[12]ಯೋಗನೃಹರಿಂ ವಂದೇ ಸಜ್ಜನ ಪೂಜಿತಂ ಶ್ರೀ [॥*॥]

ಅಡಿಟಿಪ್ಪಣಿಗಳು

1. ಹಂಪಿ : ಚಾಮೇಭೂಪೇ (ಶಾಸನ ಸಂಪುಟದಲ್ಲಿ ಇದು ಕಟಪಯಾದಿ ಸಂಖ್ಯಾಸೂಚಕ ಎಂಬುದನ್ನು ಗುರುತಿಸಿಲ್ಲ)
2. ಹಂಪಿ : ಸುಖರೇ
3. ಫಿಲಿಯೋಜಾ : ನಂದನಾಹ್ವೇ; ರಿತ್ತಿ : ನಂದನಾ(ಖ್ಯೇ); ಹಂಪಿ : ನಂದನಾಹ್ವಯೇ
4. ಫಿಲಿಯೋಜಾ : ಮಾಸೇ ಜ್ಯೇಷ್ಠೇ; ರಿತ್ತಿ : (ಮಾಸೇ) (ವ್ಯೋಮೇ); ಹಂಪಿ : ಮಾಸೇ ಜ್ಯೇಷ್ಠೇ (ಇಲ್ಲಿ ವ್ಯೋಮೇ ಎಂಬುದು ವ್ಯಾಕರಣರೀತ್ಯಾ ಸರಿಯಲ್ಲ. ಇದು ವ್ಯೋಮ್ನಿ ಎಂದಾಗಬೇಕು. ಮ್ನಿ ಎಂಬುದು ಲಘುವಾಗಿರುವುದರಿಂದ ಇದು ಗುರುವಾಗಬೇಕಾದಲ್ಲಿ ಮುಂದೆ ಸಂಯುಕ್ತಾಕ್ಷರವನ್ನು ಛಂದಸ್ಸಿಗಾಗಿ ಅಳವಡಿಸಬೇಕು. ಕೃಷಿ ಎನ್ನುವುದು ಸಂಯುಕ್ತಾಕ್ಷರವಲ್ಲ. ಆದರೂ ಇದನ್ನು ಒತ್ತಿ ಸಂಯುಕ್ತಾಕ್ಷರದಂತೆ ಉಚ್ಚರಿಸದೇ ಬೇರೆ ದಾರಿಯಿಲ್ಲ).
5. ರಿತ್ತಿ : ಕೃಷ್ಣದ್ವಿತೀಯಾಂ (ಕೃಷ್ಣದ್ವಿತೀಯ್ಯಾ ಎಂಬೆಡೆ ಯ ಒತ್ತಕ್ಷರ ಅನಗತ್ಯ)

6. ವೈಷ್ಣವರ್ಕ್ಷೈಂದ್ರಯೋಗೇ ಎನ್ನುವಲ್ಲಿ ಐತ್ವವಿದೆ. ಇದನ್ನು ವೈಷ್ಣವರ್ಕ್ಷ + ಐಂದ್ರಯೋಗೇ ಎಂದು ಬಿಡಿಸಬೇಕು. ಐಂದ್ರಯೋಗವೆಂದರೆ ಇಂದ್ರನಿಗೆ ಸಂಬಂಧಿಸಿದ ಯೋಗ. ವೈಷ್ಣವರ್ಕ್ಷೇ + ಇಂದ್ರಯೋಗೇ ಎಂದು ಬಿಡಿಸಲು ಹೋದರೆ ವೈಷ್ಣವರ್ಕ್ಷ ಇಂದ್ರಯೋಗೇ ಎಂದಾಗಿ ಛಂದೋದೋಷ ಉಂಟಾಗುತ್ತದೆ.

7. ತಿಥ್ಯಾರ್ಧೇ ಎನ್ನುವುದು ತಿಥ್ಯರ್ಧೇ ಎಂದಿರಬೇಕು. ತಿಥಿ + ಅರ್ಧೇ. ಥ್ಯಾ ಎಂದು ದೀರ್ಘ ಬರುವುದಕ್ಕೆ ಕಾರಣವಿಲ್ಲ.

8. ರಿತ್ತಿ : . . . . (ತ್ರುಟಿತವೆಂದು ತೋರಿಸಲಾಗಿದೆ)


9. ಫಿಲಿಯೋಜಾ : ವಿಠ್ಠಲಸ್ಯಾಂ ಗಣಾ[ಂ]ತೇ / ಕ [?]; ರಿತ್ತಿ : ವಿಟ್ಠಲ(ಸ್ಯಾಂ) ಗಣಾನ್ತೇ । ಕ(ನ್ಯಾ); ಹಂಪಿ : ವಿಠಲಸ್ಯಾಂ ಗಣಾಂತೇಕ ಲಗ್ನೇ (ವಿಠ್ಠಲಸ್ಯಾಂಗಣಾಂತೇ= ವಿಠ್ಠಲದೇವರ ಅಂಗಣದಲ್ಲಿ, ಪ್ರಾಕಾರದಲ್ಲಿ)


10. ಯೋಗೀ ವರದನರಹರಿ ಎನ್ನುವುದಕ್ಕೆ ವರದಯೋಗನರಹರಿ ಎಂದು ಅರ್ಥ ಮಾಡಿಕೊಳ್ಳಬೇಕು. ವರದ ಯೋಗನರಸಿಂಹ ಎಂದು ಸ್ರಗ್ಧರಾ ಛಂದಸ್ಸಿನಲ್ಲಿ ತರುವುದು ಅಸಾಧ್ಯವಾದದ್ದರಿಂದ ಶಾಸನ ಪದ್ಯಕರ್ತೃ ಈ ರೀತಿ ಬರೆದಿದ್ದಾನೆ. ಸ ಎನ್ನುವುದು ಛಂದೋನಿರ್ವಾಹಕ್ಕಾಗಿ ಬಂದಿದೆ. ಕರ್ತೃವು ಆರ್ಯಾಛಂದಸ್ಸಿನಲ್ಲಿ ಈ ಪದ್ಯವನ್ನು ರಚಿಸಿದ್ದರೆ ವರದಯೋಗನರಸಿಂಹವೆಂಬ ಶಬ್ದವನ್ನು ಅದರಲ್ಲಿರುವ ವರ್ಣಗಳ ಆನುಪೂರ್ವಿ ಕೆಡದಂತೆ ಹಾಗೆಯೇ ರಚಿಸಬಹುದಾಗಿತ್ತು. ಆದರೆ ಮಿಕ್ಕ ವಿವರಗಳನ್ನು ತರಲು ಆರ್ಯಾಛಂದಸ್ಸಿನ ವ್ಯಾಪ್ತಿ ಸಾಲದಾಗುವುದರಿಂದ ವಿಧಿಯಿಲ್ಲದೇ ಅನಿವಾರ್ಯವಾಗಿ ಸ್ರಗ್ಧರಾಛಂದಸ್ಸಿನಲ್ಲಿ ಇದನ್ನು ತಂದು ವರದಯೋಗ ನರಸಿಂಹವೆಂಬ ಶಬ್ದವನ್ನು ನಿರ್ವಹಿಸಲು ಈ ಸಾಹಸ ಮಾಡಿದ್ದಾನೆ. ಇಂತಹ ಹಲವು ಉದಾಹರಣೆಗಳು ಸಂಸ್ಕೃತ ಸಾಹಿತ್ಯದಲ್ಲಿ ಕಾಣಸಿಗುತ್ತವೆ.


11. ರಿತ್ತಿ : ಫ(ಲಪ್ರ)ದಂ; ಹಂಪಿ : ಫಲಪ್ರದಂ

12. ರಿತ್ತಿ : ವರದಂ









Vijaya Vittala Temple Complex, Hampi

5. ದಾವಣಗೆರೆ ಜಿಲ್ಲೆಯ ಇಮ್ಮಡಿ ಹರಿಹರನ ಶಾಸನಗಳು

ಶ್ರೀ ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ವಿಜಯನಗರ ಸಾಮ್ರಾಜ್ಯ ಆಳಿದ ಸಂಗಮ ವಂಶದ ದೊರೆಗಳಲ್ಲಿ ಇಮ್ಮಡಿ ಹರಿಹರನು ಒಬ್ಬನು. ಇವನ ಆಡಳಿತ ಕಾಲವನ್ನು ಇತಿಹಾಸಕಾರರು ಕ್ರಿ.ಶ. 1377–1404 ಎಂದು ಗುರುತಿಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಸ್ಥಾಪಕರೆನ್ನಲಾದ ಹರಿಹರ (ಹಕ್ಕ), ಬುಕ್ಕರಾಯ(ಬುಕ್ಕ)ರಾದ ನಂತರ ಈ ಸಾಮ್ರಾಜ್ಯದ ಅಧಿಕಾರ ಪಡೆದುಕೊಂಡವನು ಇಮ್ಮಡಿ ಹರಿಹರರಾಯ. ಇವನು ಬುಕ್ಕರಾಯನ ಮೊದಲ ಮಗನಾಗಿದ್ದು, ತಂದೆಯ ನಿಧನಾನಂತರ ಉತ್ತರಾಧಿಕಾರಿಯಾಗಿ ಆಡಳಿತಸೂತ್ರ ವಹಿಸಿಕೊಂಡನು. ಇವನಿಗೆ ಐದು ಜನ ಸಹೋದರರು ಇದ್ದರು. ತಂದೆಯ ಕಾಲದಲ್ಲಿಯೇ ಯುವರಾಜನಾಗಿ ನಾಮಕರಣಗೊಂಡ ಕಾರಣ ಇವನ ಪಟ್ಟಾಭಿಷೇಕ ಯಾವ ಗೊಂದಲ, ಅಡಚಣೆಗೆ ಒಳಗಾಗದೆ ಶಾಂತಿಯುತವಾಗಿ ನಡೆಯಿತು. ಆದರೆ ತಂದೆಯ ನಿಧನದ ನಂತರ ಇವರ ಸಾಮಾಂತರಾಗಿದ್ದು ಚೋಳ, ಪಾಂಡ್ಯ, ಕೊಂಕಣ ಮುಂತಾದ ಅರಸರು, ಹಾಗೂ ನೆರೆಯ ಬಹುಮನೀ ಸುಲ್ತಾನರು ವಿಜಯನಗರ ಸಾಮ್ರಾಜ್ಯದ ಮೇಲೆ ದಂಗೆ ಎದ್ದರು. ತನ್ನ ಸ್ವಸಾಮರ್ಥ್ಯದಿಂದಲೂ, ತನ್ನ ಸಹೋದರರ ಸಹಾಯದಿಂದಲೂ ಅವರನ್ನು ಹತ್ತಿಕ್ಕುವಲ್ಲಿ ಇಮ್ಮಡಿ ಹರಿಹರರಾಯ ಯಶಸ್ವಿಯಾದನು. ಇವನು ಆಳಿದ 28 ವರ್ಷಗಳಲ್ಲಿ ತನ್ನ ಸಾಮ್ರಾಜ್ಯದ ಎಲ್ಲೆಯನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತರಿಸಿ ಮಹಾಸಾಮ್ರಾಜ್ಯವನ್ನಾಗಿ ವಿಜಯನಗರವನ್ನು ಮಾಡಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಅದಕ್ಕಾಗಿಯೇ ವಿಜಯನಗರದ ಪ್ರಥಮ ಚಕ್ರವರ್ತಿ ಎಂದು ಕರೆಸಿಕೊಂಡನು. ಈತನಿಗೆ ಪಂಪಾದೇವಿ ಮತ್ತು ಮಲ್ಲಾದೇವಿ ಎಂಬ ಇರ್ವರು ಪತ್ನಿಯರು. ಬುಕ್ಕ–2, ವಿರೂಪಾಕ್ಷ–3, ದೇವರಾಯ–1 ಮತ್ತು ಚಿಕ್ಕರಾಯ ಎಂಬ ಮಕ್ಕಳಿದ್ದರೆಂದು, ಇವನಿಗೆ ಮುದ್ದಣ್ಣ, ಗುಂಡ, ವಸಂತಮಾಧವ ಮತ್ತು ಇರುಗಪ್ಪ ಎಂಬ ದಂಡನಾಯಕರಿದ್ದರೆಂದು ಇವನ ಕಾಲದಲ್ಲಿ ಬರೆದ ಶಾಸನಗಳಿಂದ ತಿಳಿದುಬರುತ್ತದೆ.

ದಾವಣಗೆರೆ ಜಿಲ್ಲೆಯಲ್ಲಿ ಈವರೆಗೆ ವಿಜಯನಗರ ಅರಸರ ಕಾಲಕ್ಕೆ 50ಕ್ಕೂ ಹೆಚ್ಚು ಶಾಸನಗಳು ದೊರೆತಿದ್ದು ಅವುಗಳಲ್ಲಿ ಇಮ್ಮಡಿ ಹರಿಹರರಾಯನ ಕಾಲದ್ದೇ 10 ಶಾಸನಗಳಾಗಿವೆ. ಅವುಗಳಲ್ಲಿ ಎರಡು ತಾಮ್ರ ಶಾಸನಗಳು, ಉಳಿದ ಎಂಟು ಶಿಲಾಶಾಸನಗಳಾಗಿವೆ. ಇವುಗಳಲ್ಲಿ ಈ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿ ಮೂರು, ಚನ್ನಗಿರಿ ತಾಲ್ಲೂಕಿನಲ್ಲಿ ಎರಡು, ಹೊನ್ನಾಳಿ ತಾಲ್ಲೂಕಿನಲ್ಲಿ ಐದು ದೊರೆತಿವೆ. ಇವನ ಕಾಲದ ಶಾಸನಗಳು ಜಿಲ್ಲೆಯ ದಾವಣಗೆರೆ, ಜಗಳೂರು, ಹರಪನಹಳ್ಳಿ ತಾಲ್ಲೂಕಿನಲ್ಲಿ ಈವರೆಗೆ ದೊರೆತಿಲ್ಲ. ದೊರೆತ ಇಮ್ಮಡಿ ಹರಿಹರರಾಯನ ಶಾಸನಗಳಲ್ಲಿ ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸರು ತಮ್ಮ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲಾ ಶಾಸನ ಸಂಪುಟಗಳಲ್ಲಿ 10ನ್ನು ಗುರುತಿಸಿ ಪ್ರಕಟಿಸಿದ್ದಾರೆ. ಹರಿಹರದ ಸಂಶೋಧಕ ಪ್ರೊ॥ ಶಂಕರನಾರಾಯಣರಾಯರು ಒಂದು ಶಾಸನವನ್ನು ತಮ್ಮ ಶ್ರೀ ಹರಿಹರ ದೇವಾಲಯದ ಪುಸ್ತಕದಲ್ಲಿ, ಮೈಸೂರು ಪ್ರಾಚ್ಯ ಇಲಾಖೆ ತನ್ನ ವಾರ್ಷಿಕ ವರದಿಯಲ್ಲಿ ಎರಡು ಶಾಸನಗಳನ್ನು ಪ್ರಕಟಿಸಿವೆ. ಇವನ ಕಾಲದ ಶಾಸನಗಳು ಈ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಹೆಚ್ಚಾಗಿ ದೊರೆಕಿವೆ.

ಹರಿಹರ ತಾಲ್ಲೂಕಿನ ಶಾಸನಗಳು

ಹರಿಹರದ ಹರಿಹರೇಶ್ವರ ದೇವಸ್ಥಾನದ ಬಳಿಯಿರುವ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿರುವ 80 ಸಾಲುಗಳ ಸುಧೀರ್ಘವಾದ ಒಂದು ಶಿಲಾಶಾಸನ (ದಾವಣಗೆರೆ–34) ಇಮ್ಮಡಿ ಹರಿಹರನ ಮಂತ್ರಿಯಾಗಿದ್ದ ಮುದ್ದಣ್ಣ ದಂಡಾಧೀಶ ಶಕವರ್ಷ 1301ನೇ (ಕ್ರಿ.ಶ. 1379) ಸಿದ್ಧಾರ್ಥಿ ಸಂವತ್ಸರದ ಕಾರ್ತೀಕ ಶುದ್ಧ ದ್ವಾದಶಿ ಅಂದರೆ ಉತ್ಥಾನ ದ್ವಾದಶಿಯಂದು

ತನ್ನ ರಾಜ ಹರಿಹರರಾಯನಿಗೆ ಒಳಿತಾಗಲಿ ಎಂದು ಉಚ್ಚಂಗಿ ಪ್ರದೇಶದ ಚಿಕ್ಕಹದಡಿ ಎಂಬ ಹೆಸರುಳ್ಳ ಗ್ರಾಮವನ್ನು ಮುದ್ದದಂಡನಾಯಕಪುರ ಎಂದು ನಾಮಕರಣಮಾಡಿ ಅದನ್ನು ಅಗ್ರಹಾರವಾಗಿ ಮಾಡಿ ಅದನ್ನು 31 ವೃತ್ತಿಗಳಾಗಿ ವಿಂಗಡಿಸಿ 12 ಹರಿಹರದ ಹರಿಹರ ದೇವರಿಗೆ 24 ವೃತ್ತಿಗಳನ್ನು 24 ಬೇರೆ ಬೇರೆ ಗೋತ್ರದ ಬ್ರಾಹ್ಮಣರಿಗೆ 1 ವೃತ್ತಿಯನ್ನು ಪ್ರಖ್ಯಾತ ವಿದ್ವಾಂಸರಾದ ಶ್ರೀಧರಭಟ್ಟನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಆ 24 ಬ್ರಾಹ್ಮಣರ ಹೆಸರನ್ನು ಅವರ ಹೆಸರು ಗೋತ್ರ ಸಹಿತ ಉಲ್ಲೇಖಿಸಿದ್ದು, ಈ ಶಾಸನ ಬರೆದವನು ಧರಣೋಜನೆಂದು ಉಲ್ಲೇಖಿಸಲಾಗಿದೆ. ದಾನಕೊಟ್ಟ ಭೂಮಿಯ ಗಡಿ ಮೇರೆಗಳನ್ನು ಮಾತ್ರ ಕನ್ನಡದಲ್ಲಿ ಬರೆಯಲಾಗಿದೆ.

ಇದೇ ಹರಿಹರದ ತುಂಗಭದ್ರಾ ನದಿಯ ಬಲದಂಡೆಯಲ್ಲಿರುವ ಇಮ್ಮಡಿ ಹರಿಹರನ ಮತ್ತೊಂದು ಶಾಸನವನ್ನು ಶಾಸನತಜ್ಞ ಬಿ.ಆರ್. ಗೋಪಾಲ್‌ರವರು ಗುರುತಿಸಿದ್ದು ಇದನ್ನು ಪ್ರೊ॥ ಶಂಕರನಾರಾಯಣರಾಯರು ತಮ್ಮ ಶ್ರೀ ಹರಿಹರದೇವಾಲಯದ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಈ ಶಾಸನವನ್ನು ಬರೆದವನು ಧರಣೋಜ. ಶಾಸನ ಕ್ರಿ.ಶ. 1387 ಅಂದರೆ ಶಕ 1306ನೇ ಪ್ರಭವ ಸಂವತ್ಸರ ಕಾರ್ತಿಕ ಶುದ್ಧ ಪ್ರತಿಪದ ಮಂಗಳವಾರ ಬರೆದಿದ್ದು ಹರಿಹರವನ್ನು ಕೂಡಲಿಪುರ ಎಂದು ಉಲ್ಲೇಖಿಸಲಾಗಿದೆ. 45 ಸಾಲುಗಳ ಈ ಶಾಸನ ಕನ್ನಡ ಲಿಪಿಯಲ್ಲಿದ್ದು ಸಂಸ್ಕೃತ ಭಾಷೆಯಲ್ಲಿದೆ. ಶಾಸನದಲ್ಲಿ ಹರಿಹರವನ್ನು ಅಚ್ಯುತ ಶಂಕರನೆಂದು ಹೇಳಿದೆ. ಇಮ್ಮಡಿ ಪ್ರತಾಪ ಹರಿಹರರಾಯನ ಬಿರುದನ್ನು ಅವನ ಷೋಡಶ ದಾನಗಳನ್ನು ತಿಳಿಸಿ, ಅಲ್ಲಿರುವ ಏಕನಾಥೇಶ್ವರಿ ದೇವಿಯನ್ನು ಸ್ತುತಿಸಿ, ಆ ದೇವರಿಗೆ ಪ್ರತಿ ತಿಂಗಳು ನಡೆಯುವ ಪಂಚಪರ್ವಗಳಲ್ಲಿ ಮಹಾನವಮಿಯಲ್ಲಿ ನಡೆಯಬೇಕಾದ ಸೇವಾ ವಿವರ ನಮೂದಿಸಿ ಅದಕ್ಕಾಗಿ ಈ ಶಾಸನದಲ್ಲಿ ಉಲ್ಲೇಖಿಸಿದ ಭೂಮಿ ದಾನ ಕೊಟ್ಟಿದ್ದಾಗಿ ತಿಳಿಸುತ್ತದೆ.

ಬಿ.ಎಲ್. ರೈಸರು ತಮ್ಮ ಶಾಸನ ಸಂಪುಟದಲ್ಲಿ (ದಾವಣಗೆರೆ 68) ಇಲ್ಲಿನ ಶಾನುಭೋಗರ ವಶದಲ್ಲಿದ್ದ ಒಂದು ತಾಮ್ರ ಶಾಸನ ನಕಲು ಪ್ರಕಟಿಸಿದ್ದಾರೆ. ಅದರಂತೆ ಈ ಶಾಸನವನ್ನು ಶ್ರೀ ಹರಹರೇಶ್ವರ ಸ್ವಾಮಿ ಆದೇಶದಂತೆ ಶ್ರೀ ಪಂಪಾಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯಲ್ಲಿ ಶ್ರೀ ಮನ್‌ಮಹಾರಾಜಾಧಿರಾಜ ಪರಮೇಶ್ವರ ಧರ್ಮಮೂರ್ತಿ ಹರಿಹರರಾಯರು ವಿಶ್ವಾಮಿತ್ರಗೋತ್ರದ ಆಶ್ವಾಲಾಯನ ಸೂತ್ರದ ಋಕ್‌ಶಾಖೆಯ ರಾಮದೇವಯ್ಯನ ಮಕ್ಕಳು ಲಿಂಗಾಭಟ್ಟರಿಗೆ ಕೊಟ್ಟೂರು ಚಾವಡಿ ಕೆಳಗಿನ ಹುಚ್ಚಂಗಿ ವೇಂಟಿಗೆ ಸಲ್ಲುವ ಹರಿಹರ ಸೀಮೆ ಒಳಗಣ ಶಂಕರಿಪುರ ಗ್ರಾಮವನ್ನು ಹಿಂದಿನ ಸ್ವಾಸ್ತಿಯೊಂದಿಗೆ ಮಹಾಜನರಿಗೆ ಎರಡು ವೇದ ಪಾರಾಯಣ ವೃತ್ತಿಯನ್ನು ಅನುಭವಿಸಿಕೊಂಡು ಬರುವಂತೆ ಕೊಟ್ಟಿದ್ದಾಗಿ ತಿಳಿಸುತ್ತದೆ. ಶಾಸನದ ಕಾಲ ಶಕ 1183ನೇ (ಕ್ರಿ.ಶ. 1261) ದುಂಧುಬಿ ಸಂವತ್ಸರದ ವೈಶಾಖ ಬಹುಳ 30 ಅಮಾವಾಸ್ಯೆ ಭಾನುವಾರ ಎಂದು ಉಲ್ಲೇಖಿಸಿದ್ದರು. ಈ ಶಾಸನ ನಕಲಾಗಿರುವುದರಿಂದ ಕಾಲ ನಮೂದನೆ ತಪ್ಪಾಗಿರುವ ಸಾಧ್ಯತೆ ಇದೆ. ಶಾಸನದಲ್ಲಿ ಉಲ್ಲೇಖಿತ ಗ್ರಾಮ ಈಗ ಕರೆಯುತ್ತಿರುವ ಸಂಕಲೀಪುರ ಆಗಿರುವ ಸಾಧ್ಯತೆ ಇದೆ. ಶ್ರೀ ವಿರೂಪಾಕ್ಷ ಎಂಬ ಒಪ್ಪ ಶಾಸನದ ಕಡೆಯಲ್ಲಿ ಹಾಕಲಾಗಿದೆ.

ಚನ್ನಗಿರಿ ತಾಲ್ಲೂಕಿನ ಶಾಸನಗಳು

ಚನ್ನಗಿರಿ ತಾಲ್ಲೂಕಿನ ನೀತಿಗೆರೆ ಗ್ರಾಮದ ವೀರಭದ್ರ ದೇವಾಲಯದ ಒಳಭಾಗದಲ್ಲಿರುವ ಕಾಲ (ಕ್ರಿ.ಶ. 1403?) ತ್ರುಟಿತವಾಗಿರುವ ಒಂದು ಶಿಲಾಶಾಸನ (ಚನ್ನಗಿರಿ–28) ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪರಮಭಟ್ಟಾರಕ ದ್ವಾರವತಿಪುರವರಾಧೀಶ್ವರ ವೀರಬುಕ್ಕರಾಯನ ಕುಮಾರ ವಿಜಯನಗರ ಹಸ್ತಿನಾವತಿಯ ಪ್ರತಾಹ ಹರಿಹರರಾಯರ ಕಾಲದಲ್ಲಿ ಅವರ ಅಮರ ನಾಯಕರಾಗಿದ್ದ ದುಂಮಿಯ ಗಂಗನಾಯಕರ ಮಗ ಸಿರಂಗನಾಯಕರು ಸುಖಸಂಕಥಾ ವಿನೋದದಿಂರಾಜ್ಯಂಗೆಯುತ್ತಿರೆ ಆ ನೀತಿಗೆರೆಯ ವೀರಭದ್ರದೇವರ ಅಮೃತಪಡಿಗೆ ಬಿಟ್ಟ ಗದ್ದೆಯನ್ನು ಉಲ್ಲೇಖಿಸುತ್ತದೆ.

ಈ ಶಾಸನದಿಂದ ನೀತಿಗೆರೆಯ ಶ್ರೀ ವೀರಭದ್ರ ದೇವಾಲಯದ ಪ್ರತಿಷ್ಠೆ ಇಮ್ಮಡಿ ಹರಿಹರನ ಕಾಲದಲ್ಲಿ ಆಯಿತೆಂದು, ಆ ದೇವಾಲಯ ಮಾಡಿದವನು ಮಲ್ಲೋಜ ಎಂದು ತಿಳಿದುಬರುತ್ತದೆ. ದಾನ ಕೊಟ್ಟ ಪ್ರದೇಶ ಉಲ್ಲೇಖಿಸುತ್ತಾ ಉಡ ಮೊರಡಿಯ ಮೂಡುಗಡೆಯ ತುಂಬರಿಗನ ಹಳ ಎಂಬ ಪ್ರಸ್ತಾಪ ಬಂದಿದೆ. ಉಡುಮೊರಡಿ ಈಗಿನ ದೇವರಹಳ್ಳಿಯಾಗಿದೆ. ತುಂಬರಿಗನ ಹಳ್ಳವನ್ನು ಈಗ ತುಂಬ್ರಿಹಳ್ಳ ಎಂದು ಕರೆಯಲಾಗುತ್ತಿದ್ದು ಅಲ್ಲಿನ ಸ್ಥಳೀಯ ಪೌರಾಣಿಕ ದಾಖಲೆಯಂತೆ ಅದನ್ನು ಹರಿದ್ರಾ ನದಿ ಎಂದು ಕರೆಯಲಾಗುತ್ತದೆ.

ಇಮ್ಮಡಿ ಹರಿಹರನ ಕಾಲದ ಈ ತಾಲ್ಲೂಕಿನಲ್ಲಿ ದೊರೆತ ಇನ್ನೊಂದು ಶಾಸನ, ತಾಮ್ರ ಶಾಸನವಾಗಿದ್ದು (ಚನ್ನಗಿರಿ 13) ಅದು ಸಂತೇಬೆನ್ನೂರು ನಾಡಿಗ ಮನೆತನಕ್ಕೆ ಬರೆದುಕೊಟ್ಟ ದಾನ ಶಾಸನವಾಗಿದೆ. ಆ ಶಾಸನದಂತೆ ಕ್ರಿ.ಶ. 1401ರಲ್ಲಿ ಅಂದರೆ ಶಕ 1316ನೇ ಯುವ ಸಂವತ್ಸರದ ವೈಶಾಖ ಶುದ್ಧ ಪೂರ್ಣಿಮೆ ಇಮ್ಮಡಿ ಹರಿಹರರಾಯ ಮದಕರಿ ಸ್ಥಳದ ಶ್ರೀವತ್ಸ ಗೋತ್ರದ ಯಜುಶಾಕೆಯ ಇಂದ್ರಕಂಠಿ ಮನೆತನದ ಆವಲ ನರಸಿಂಹಭಟ್ಟಗೆ ಜ್ಯೋತಿಷ್ಯ, ಪುರೋಹಿತ ವೃತ್ತಿ, ಅಪರಾಲೇಖನ, ವೆಂಕಟೇಶಾಲಯ ಪೂಜೆ ಇತ್ಯಾದಿಗಳಿಗೆ ಬ್ರಹ್ಮನಾಮಕ ಸದ್ಗ್ರಾಮ ಅಂದರೆ ಈಗಿನ ಬೊಮ್ಮೇನಹಳ್ಳಿ ಗ್ರಾಮವನ್ನು ದಾನ ಕೊಟ್ಟಿದ್ದನ್ನು ಸೂಚಿಸುತ್ತದೆ. ಈ ದಾನವನ್ನು ಹರಿಹರದ ತುಂಗಾ ಭದ್ರಾ ನದಿ ದಡದಲ್ಲಿ ಕೊಟ್ಟಿರುವುದಾಗಿ ಉಲ್ಲೇಖಿಸಲಾಗಿದೆ. ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನಕ್ಕೆ ಶ್ರೀ ವಿರೂಪಾಕ್ಷ ಎಂಬ ಒಪ್ಪ ಇದೆ.

ಹೊನ್ನಾಳಿ ತಾಲ್ಲೂಕಿನ ಶಾಸನಗಳು

ಈ ತಾಲ್ಲೂಕಿನ ಈಸಲಾಪುರ ಗ್ರಾಮದಲ್ಲಿ ಒಂದು ಶಾಸನ (ಹೊನ್ನಾಳಿ 48) ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪಶ್ಚಿಮ ದಕ್ಷಿಣ ಸಮುದ್ರಾಧಿಪತಿ ಅರಿರಾಯ ವಿಭಾಂಡ ಅಷ್ಟಾಧಿಪ ಮನೋಭಯಂಕರ ಭಾಷೆಗೆ ತಪ್ಪುವರಾಯರ ಗಂಡ ಶ್ರೀ ಹರಿಹರರಾಯರು ಹಸ್ತಿನಾವತಿಯೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಿರಲಾಗಿ ಅವರ ಕುಮಾರ ಶ್ರೀ ಮನ್ಮಹಾಮಂಡಲೇಶ್ವರನಾಗಿ ಚಿಕ್ಕರಾಯ ವಡೆಯರು ಆರಗದ 36 ಕಂಪಣ ಆಳುತ್ತಿರುವಾಗ ಅವನ ಮಹಾಪ್ರಧಾನ ವೀರವಸಂತ ಮಾಧವರಾಯ ಶಕ 1301ನೇ (ಕ್ರಿ.ಶ. 1379) ಸಿದಾರ್ಥಿ ಸಂವತ್ಸರದ ಭಾದ್ರಪದ ಬಹಳ ಷಷ್ಠಿ ಮಂಗಳವಾರ ಒಂದು ದಾನ ನೀಡಿದ್ದನ್ನು ಸೂಚಿಸುತ್ತಿದ್ದು ಶಾಸನ ತೃಟಿತವಾಗಿರುವುದರಿಂದ ಹೆಚ್ಚಿನ ವಿವರ ತಿಳಿದುಬರುತ್ತಿಲ್ಲ.

ಇದೇ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕುರುವ ಗಡ್ಡೆಯ ಶ್ರೀ ರಾಮೇಶ್ವರ ದೇವಾಲಯ ಬಳಿಯಿರುವ ಒಂದು ಶಾಸನ (ಹೊನ್ನಾಳಿ–6) ಶ್ರೀ ವೀರಹರಿಹರರಾಯರು ವಿಜಯನಗರವನ್ನಾಳುತ್ತಿದ್ದಾಗ ಶಕ ವರ್ಷ 1312ನೇ (ಕ್ರಿ.ಶ. 1390) ಪ್ರಮಾದಿ ಸಂವತ್ಸರದ ಕಾರ್ತಿಕ ಶುದ್ಧ 1 ಸೋಮವಾರ ಹರಿಹರರಾಯರಿಗೆ ಧರ್ಮವಾಗಲೆಂದು ಅವನ ಸಾಮಂತಗೌಡರು ಅಂಕಲಗುಂಟೆ ಎಂಬ ಸ್ಥಳವನ್ನು ರಾಮಾಪುರ ಎಂಬ ಹೆಸರಿಟ್ಟು ಶ್ರೀ ರಾಮೇಶ್ವರ ದೇವರ ನಂದಾದೀಪ ನೈವೇದ್ಯಕ್ಕೆ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.

ಇದೇ ತಾಲ್ಲೂಕಿನ ಸುರಹೊನ್ನೆ ಗ್ರಾಮದಲ್ಲಿರುವ ಒಂದು ಶಿಲಾ ಶಾಸನ (ಹೊನ್ನಾಳಿ 31) ವೀರಹರಿಹರರಾಯರು ವಿಜಯನಗರಿ ನೆಲವೀಡಿನಲ್ಲಿ ಸುಖಸಂಕಥಾವಿನೋದದಿಂದ ರಾಜ್ಯಂಗೆಯುತ್ತಿದ್ದಾಗ ಅವರ ತತ್ಪಾದಪದ್ಮೋಪಜೀವಿ ಗೋವಾಪುರಾಧೀಶ್ವರ ಶ್ರೀ ವಸಂತ ಮಾಧವ ರಾಯರ ಕುಮಾರ ಶ್ರೀ ಮನ್ಮಹಾಮಂತ್ರೀಶ್ವರ ಗಿರಿದುರ್ಗ ಮಲ್ಲ ಕೊಂಕಣ ಪ್ರತಿಷ್ಠಾಚಾರ್ಯ ಆತ್ರೇಯಕುಲ ಬಚ್ಚಣ ರಾಯ ಗೋವಾಪುರಾದೀಶ್ವರ ಕದಂಬರಾಜ ಸಿಂಹಾಸನಾಧೀಶ್ವರ ಚಂದ್ರಗುತ್ತಿ, ಬನವಾಸೆ, ಕೊಂಕಣ, ತೆಲಗಿಣಿ ಮೊದಲಾದ ಸಮಸ್ತ ರಾಜ್ಯ ಪ್ರತಿಪಾದಿಸುತ್ತಿದ್ದಾಗ ವಿಶ್ವಾಮಿತ್ರಗೋತ್ರದ ನಂದಾಉರದ ಸುಂಕದ ಮೊಲ್ಲರಸರ ಮಗ ಅನಂತಪ್ಪಗಳು ಪಾಂಡ್ಯನಾಡೊಳಗಣ ಹೊಳಗುಂಡಿಪುರದ ಬಾಳಿನಾಥದೇವರ ಅಮೃತಪಡಿಗೆ

ರಾಜಗುರು ಖಂಡೇರಾಯರ ಬಳೇಶ್ವರ ದೇವರ ಪಾದಪ್ರಕ್ಷಳನಮಾಡಿ ಸಹಿರಣ್ಯೋದಕ ದಾನ ಮಾಡಿ ಮಗ್ಗದ ತೆರಿಗೆ, ಮದುವೆ ತೆರಿಗೆ ಮುಂತಾದ ಸುಂಕವನ್ನು ಬಿಟ್ಟಿದ್ದನ್ನು ತಿಳಿಸುತ್ತದೆ. ಶಾಸನದ ಉಲ್ಲೇಖಿತ ಕಾಲ ಶಕ 1319 (ಕ್ರಿ.ಶ. 1397) ಧಾತು ಸಂವತ್ಸರದ ಆಶಾಢ ಶುದ್ಧ 15 ಸೋಮವಾರ ಸೋಮಗ್ರಹಣ.

ಇದೇ ತಾಲ್ಲೂಕಿನ ಸಿಂಗಟಗೆರೆಯ ಬಸವನಗುಡಿ ಬಳಿ ಇರುವ ಶಾಸನ (ಹೊನ್ನಾಳಿ 96) ತೃಟಿತವಾಗಿದ್ದು ಶಾಸನದಲ್ಲಿ ಶಕ 1323ರಲ್ಲಿ (ಕ್ರಿ.ಶ. 1401) ವೀರಪ್ರತಾಪ ಹರಿಹರರಾಯರ ಅಧೀನ ನಾಯಕನೋರ್ವ ದಾನ ನೀಡಿದ್ದಾಗಿ ಕಂಡುಬರುತ್ತದೆ. ಶಾಸನ ಸವೆದು ಹೆಚ್ಚಿನ ವಿವರ ತಿಳಿದುಬರುತ್ತಿಲ್ಲ.

ಮೈಸೂರು ಪ್ರಾಚ್ಯವಸ್ತು ಇಲಾಖೆ 1942ರಲ್ಲಿ ಪ್ರಕಟಿಸಿದ ತನ್ನ ವಾರ್ಷಿಕ ವರದಿಯಂತೆ (ಶಾಸನ 32) ಈ ತಾಲ್ಲೂಕಿನ ಸೌಳಂಗ ಪೋಲಿಸ್ ಠಾಣೆ ಎದುರಿನಲ್ಲಿ ಒಂದು ಶಾಸನ ಇದ್ದು ಇದೊಂದು ವೀರಗಲ್ಲು ಶಾಸನವಾಗಿದೆ. ಅದರಂತೆ ವೀರಹರಿಹರ ರಾಯ ಆಳುತ್ತಿದ್ದಾಗ ಶಕ 1314 (ಕ್ರಿ.ಶ. 1392 ವಿಶು ಸಂವತ್ಸರದ ಶ್ರಾವಣ ಶುದ್ಧ 10ರಂದು ಮಲಪ್ಪನ ಕಾಳಗದಲ್ಲಿ ತುರಬಗೌಡನೆಂಬುವನು ಮಡಿದಿದ್ದನ್ನು ದಾಖಲಿಸಿ ಅವನ ನೆನಪಿಗೆ ಈ ವೀರಗಲ್ಲು ಆರಗದ ಜಂನರ್ಸನ ಅಧೀನನಾದ ಹಾಡಿಯ ಹರಿಗೆ ನಾಯಕ ಮಾಡಿಸಿದ ವೀರಗಲ್ಲು ಎಂದು ಉಲ್ಲೇಖಿಸಲಾಗಿದೆ.

ಈ ಎಲ್ಲಾ ಶಾಸನಗಳಿಂದ ಈ ಕೆಳಕಂಡ ಅಂಶಗಳನ್ನು ಗಮನಿಸಬಹುದಾಗಿದೆ.

1. ಈ ಶಾಸನಗಳಲ್ಲಿ ಇಮ್ಮಡಿ ಹರಿಹರರಾಯನನ್ನು ವೀರರಾಯ ಹರಿಹರರಾಯ, ವೀರಪ್ರತಾಪ ಹರಿಹರರಾಯ ಎಂದು ಉಲ್ಲೇಖಿಸಲಾಗಿದೆ. ವೀರ ಎಂಬ ಸಾಮಾನ್ಯ ಬಿರುದಿಗೆ ವೀರಪ್ರತಾಪ ಎಂಬ ಬಿರುದು ಸೇರಿಸಿರುವುದು ಗಮನಾರ್ಹ. ಹಾಗೆಯೇ ಇವನ ಕಾಲದಲ್ಲಿ ಪ್ರತಾಪ ಹೆಸರಿನ ಬಂಗಾರದ ವರಾಹ ನಾಣ್ಯ ಟಂಕಿಸಿರುವುದು ಇತರೆ ದಾಖಲೆಗಳಿಂದ ಗೊತ್ತಾಗುತ್ತದೆ.

2. ಇಮ್ಮಡಿ ಹರಿಹರರಾಯ ಮೂಲತಃ ಶೈವಧರ್ಮಾವಲಂಬಿಯಾಗಿದ್ದರೂ ತನ್ನ ಹೆಸರಿಗೆ ತಕ್ಕಂತೆ ಶೈವ–ವೈಷ್ಣವ ಎರಡೂ ಧರ್ಮದ ದೇವಾಲಯಗಳಿಗೆ ಸಮನಾಗಿ ದತ್ತಿದಾನ ನೀಡಿದ್ದಾನೆ.

3. ಹೊನ್ನಾಳಿ–6 ಶಾಸನದಲ್ಲಿ ಇಮ್ಮಡಿ ಹರಿಹರನನ್ನು ಶ್ರೀ ಮನ್ಮಹಾಮಂಡಲೇಶ್ವರನೆಂದು ಕರೆಯಲಾಗಿದ್ದರೆ ಅದೇ ಹೊನ್ನಾಳಿ 84ರಲ್ಲಿ ಸಮಸ್ತಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪೂರ್ವ, ಪಶ್ಚಿಮ, ದಕ್ಷಿಣ ಸಮುದ್ರಾಧಿಪತಿ ಇತ್ಯಾದಿಯಾಗಿ ಬರೆದುಕೊಂಡಿರುವುದು ಅಷ್ಟರಲ್ಲಾಗಲೇ ಅವನು ಚಕ್ರಾಧಿಪತಿಯಾದ ಸೂಚನೆಯಾಗಿದೆ.

ಆಧಾರ ಗ್ರಂಥಗಳು

1. *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*, 1979, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
2. *ಎಪಿಗ್ರಾಫಿಯಾ ಕರ್ನಾಟಿಕ*, ಶಿವಮೊಗ್ಗ ಜಿಲ್ಲೆ, ಸಂ. 7, ಭಾಗ 2, 1902.
3. ಅದೇ, ಚಿತ್ರದುರ್ಗ ಜಿಲ್ಲೆ, ಸಂ. 11, 1903, ಮೈಸೂರು ಸರ್ಕಾರ, ಬೆಂಗಳೂರು.
4. ಪ್ರೊ. ಹೆಚ್.ಎಂ. ಶಂಕರನಾರಾಯಣ, *ಶ್ರೀ ಹರಿಹರ ದೇವಾಲಯ*, 1982, ಶಾರದ ಮಂದಿರ, ಮೈಸೂರು.
5. ಡಾ॥ ನಾ. ಕೊಟ್ರೇಶ್ ಉತ್ತಂಗಿ, *ಹೊನ್ನೆಲೆಗಳು*, 2004, ಸಹನಾದ್ರಿ ಪ್ರಕಾಶನ, ಹೊನ್ನಾಳಿ.
6. *ವಿಜಯನಗರ ಅಧ್ಯಯನ*, ಸಂ. 12, 2007, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

6. ಹರಿಹರನಿಂದ ವಿದ್ಯಾನಗರಿ ಸಾಮ್ರಾಜ್ಯ ಸ್ಥಾಪನೆ, ಹಿನ್ನೆಲೆ ಹಾಗೂ ಮುನ್ನಡೆಗಳು

ಶ್ರೀಗಣಪತಿ ಕೆರೆಮನೆ

ಉತ್ತರಕನ್ನಡ ಜಿಲ್ಲೆಯ ಹಿರೇಗುತ್ತಿಯ ಬ್ರಹ್ಮಜಟಕ ದೇವಾಲಯ, ಶ್ರೀ ಮಹಾಲಿಂಗೇಶ್ವರ ದೇವಾಲಯ ಮತ್ತು ಭೋಜರ ಬೌದ್ಧಭಿಕ್ಕು ಅನ್ನಧಾನ ಧರ್ಮಶಾಲೆ ಇವುಗಳು 1500 ವರ್ಷಗಳಷ್ಟು ಪುರಾತನವಾದವುಗಳೆಂದು ಇಲ್ಲಿರುವ ಶಿಲಾಶಾಸನ ಮತ್ತು ತಾಮ್ರಶಾಸನಗಳಿಂದ ಗುರುತಿಸಿಕೊಂಡು ರಾಜ್ಯ ಐತಿಹಾಸಿಕ ಸ್ಮಾರಕಗಳೆನಿಸಿಕೊಂಡಿವೆ. ಈ ಪ್ರದೇಶವನ್ನು ನಾಲ್ಕುನೂರು ವರ್ಷ ಆಳಿದ ಭೋಜರ ಅವನತಿಯ ನಂತರದಲ್ಲಿ ಮಾಂಡಲಿಕರು, ಸೇನಾಪತಿಗಳು ಅಲ್ಲಲ್ಲಿ ತುಂಡರಸರಾಗಿ ಆಳತೊಡಗಿದರು.

ಶ್ರೀ ಮಹಾಲಿಂಗೇಶ್ವರ ದೇವಾಲಯದ ಆವಾರದಲ್ಲಿ ಸ್ಥಾಪಿತ ಶಿಲಾಶಾಸನವು ವಿಜಯನಗರ ಸಾಮ್ರಾಟ ಪ್ರತಾಪದೇವರಾಯನ ಶಾಸನವಾಗಿದೆ. ಇವರ ಅಜ್ಜಂದಿರಾದ ಹರಿಹರ ಮತ್ತು ನಾಲ್ಕು ಸಹೋದರರ ಒಗ್ಗಟ್ಟಿನ ನೀತಿ, ಧೈರ್ಯ, ಸಾಹಸಗಳಿಂದ ಅಂದು ಅಲ್ಲಾವುದ್ದೀನ ಖಿಲ್ಜಿ, ಮಲ್ಲಿಕಾಫರ್, ತುಘಲಕ್, ಮಹಮ್ಮದರಂತಹ ಮೂರ್ತಿಭಂಜಕ ವಿನಾಶಕಾರಿ ದಾಳಿಕೋರರನ್ನು ದಕ್ಷಿಣಭಾರತದಿಂದ ಹೊಡೆದಟ್ಟಿದ್ದರು. ತೈಮೂರ್ 1338ರಲ್ಲಿ ಉತ್ತರಭಾರತಕ್ಕೆ ಧಾಳಿಯಿಟ್ಟು ಗಂಟೆಗೆ 10,000 ಹಿಂದುಗಳ ತಲೆ ಕಡಿಸಿದ್ದನು. ದೆಹಲಿಯಲ್ಲಿ ಹಿಂದುಗಳು ಇಲ್ಲದಂತೆ ಮಾಡಿದ್ದ ತೈಮೂರ್ ದಕ್ಷಿಣಭಾರತವನ್ನಾಳುತ್ತಿದ್ದ ಹರಿಹರ ಸಹೋದರರ ಒಗ್ಗಟ್ಟಿನ ಸೈನ್ಯದ ಕಾರಣದಿಂದ ದಕ್ಷಿಣ ಭಾರತಕ್ಕೆ ಬರಲಿಲ್ಲ. ಇಂತಹ ಐತಿಹಾಸಿಕ ಶಕ್ತಿಸ್ಥಳವು ಹಿರೇಗುತ್ತಿಯ ನಾಡಗುತ್ತಿ ರಾಜ್ಯವಾಗಿತ್ತು.

1. ನಾಡಗುತ್ತಿ ಅರಮನೆಯ ಸ್ಥಳದಲ್ಲಿ ವಿಜಯನಗರ ಸಾಮ್ರಾಟ ಪ್ರತಾಪ ದೇವರಾಯ ಸ್ಥಾಪಿಸಿದ ದಾನ ಶಾಸನ ಶಿಲೆ ಇದೆ. ಇದರಲ್ಲಿ ಹರಿಹರನ ಮೊದಲಿನ ರಾಜ್ಯ ನಾಡಗುತ್ತಿ–12ರ ಅರಮನೆಯನ್ನು ಮತ್ತು ಚಿಕ್ಕಗುತ್ತಿಯಲ್ಲಿ ಹರಿಹರನ ಕುಟುಂಬವು ಬಾಳಿದ ಮನೆಯನ್ನು ಅವರ ರಾಜಗುರುಗಳಾದ ವಿದ್ಯಾತೀರ್ಥರಿಗೆ, ನಾಗೇಂದ್ರತೀರ್ಥರಿಗೆ ದಾನಮಾಡಿದ್ದನ್ನು ದಾಖಲಿಸಿದ್ದಂತೆ ಶಾಸನ ಇಲ್ಲಿದೆ.

2. ಚಿಕ್ಕಗುತ್ತಿಯ ಶ್ರೀ ಆದಿನಾಥ ತೀರ್ಥಂಕರ ಕ್ಷೇತ್ರದಲ್ಲಿ ಸಲ್ಲೇಖನ ಮರಣ ವ್ರತಾಚರಣೆಯಿಂದ ನಿರ್ವಾಣ ಹೊಂದಿದ್ದರ ಕುರಿತು ಲಭ್ಯವಿರುವ ನಾಲ್ಕು ಶಿಲಾಫಲಕಗಳು ಇಲ್ಲಿಯ ವಿಜಯನಗರ ಮತ್ತು ಸೋಂದೆಯ ಸಂಬಂಧದ ಇತಿಹಾಸಕ್ಕೆ ಆಧಾರವಾಗಿವೆ.

ಮಹಾಲಿಂಗೇಶ್ವರ ದೇವಾಲಯ ಹಾಗೂ ನಾಡಗುತ್ತಿ ರಾಜ್ಯದ ಅರಮನೆ ಶಾಸನ

ಸುಮಾರು 40 ವರ್ಷಗಳ ಹಿಂದೆ ಈ ದೇವಾಲಯದ ಮೂರು ದಿಕ್ಕಿಗೆ ಹಳೆಯದಾದ ಆದರೆ ಭದ್ರವಾದ ಭಾವಣಿಯ ಊರಹಂಚಿನ ವಿಶಾಲ ಕಟ್ಟಡವಿತ್ತು. (ಈ ಕಟ್ಟಡದಲ್ಲಿ ಹಿರೇಗುತ್ತಿ ಪ್ರೌಢಶಾಲೆ ನಡೆಯುತ್ತಿತ್ತು.) ಈ ಕಟ್ಟಡಕ್ಕೆ ತಾಗಿಕೊಂಡಂತೆ ಸಾಗುವ ಕಿರಿಯ ಅಗಲದ ರಸ್ತೆಯಿದ್ದು ರಸ್ತೆಯ ಇನ್ನೊಂದು ಪಕ್ಕದಲ್ಲಿ ಲೆಟರೈಟ್ ಕಲ್ಲಿನಿಂದ ನಿರ್ಮಾಣವಾಗಿದ್ದ ಬಹು ಪುರಾತನ ಪುಷ್ಕರಣಿಯಿತ್ತು. ಇದು ದೇವಾಲಯ ಮತ್ತು ಬೌದ್ಧ ಬಿಕ್ಕುಗಳಿಗೆ, ಧರ್ಮಶಾಲೆಗೆ ನೀರೊದಗಿಸುತ್ತಿತ್ತು. ಈ ದೇವಾಲಯದ ಆವರಣದಲ್ಲಿ ವಿಜಯನಗರ ಸಾಮ್ರಾಟ ಪ್ರತಾಪದೇವರಾಯನ ದಾನ ಶಾಸನ

ಶಿಲೆಯಿದೆ. ಜೊತೆಗೆ ಇನ್ನೂ ಕೆಲವು ಶಿಲಾಶಾಸನ ಫಲಕಗಳಿವೆ. ಇಲ್ಲಿ ಸ್ಥಾಪಿತವಾಗಿರುವ ದಾನಶಾಸನ ಶಿಲೆಯು ಇಂದು ಐತಿಹಾಸಿಕವಾಗಿ ಬಹು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ 6–8 ಶಾಸನ ಶಿಲೆಗಳು ಕಳ್ಳರ ಪಾಲಾಗಿವೆ ಎನ್ನಬಹುದು. ಇದರಿಂದ ಪೂರಕವಾದ ಇತಿಹಾಸವು ಕುಂಠಿತವಾಗಿದೆ.

ಪ್ರತಾಪ ದೇವರಾಯನ ಶಾಸನದಿಂದ ಮಹಾಲಿಂಗೇಶ್ವರ ದೇವಸ್ಥಾನದ ಮೂರು ದಿಕ್ಕಿಗೆ ಇದ್ದ ವಿಶಾಲ ಕಟ್ಟಡವು ಹರಿಹರನ ಮೊದಲ ರಾಜ್ಯ "ನಾಡಗುತ್ತಿ-12" ರಾಜ್ಯದ ಅರಮನೆಯಾಗಿದೆಯೆಂದು ಅರ್ಥವಾಗುತ್ತದೆ. [(Buchanan (Mysore, III-110) mentions a revenue accountant in Canara whose records went back the conquest by Harihara in 1335... In support Sir, T. Munro (Report 31 May, 1800...)] ಉತ್ತರಕನ್ನಡದಲ್ಲಿ (ಕೆನರಾ) ಹರಿಹರನ ಗೆದ್ದ ರಾಜ್ಯದ ಅರಮನೆ ಇರುವ ಕುರಿತು ಬೇರೆಲ್ಲಿಯೂ ಶಾಸನಗಳಲ್ಲಿ ಇಲ್ಲದ್ದರಿಂದ ಕ್ರಿ.ಶ. 1225ರಲ್ಲಿ ಹರಿಹರನು ಗೆದ್ದುಕೊಂಡ ರಾಜ್ಯ ನಾಡಗುತ್ತಿ–12 ಅರಮನೆಯು ಶಾಸನ ನಿಲ್ಲಿಸಿರುವ ಸ್ಥಳವೇ ಆಗಿರುವ ಸಾಧ್ಯತೆ ಇದೆ. ಈ ಕಟ್ಟಡವು ನಾಗೇಂದ್ರತೀರ್ಥ, ವಿದ್ಯಾತೀರ್ಥರ ಮಠವಾಗಿತ್ತೆಂದು ತಿಳಿದುಬರುತ್ತದೆ. ನಾಡಗುತ್ತಿ–12 ರಾಜ್ಯವು ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಬೇರೆಲ್ಲಿಯೂ ಇಲ್ಲ.

ಕ್ರಿ.ಶ. 1219ರಲ್ಲಿ (ಹಿರೇಗುತ್ತಿ) ಗುತ್ತಿಯನ್ನು ಮಲ್ಲಿದೇವನಾಯಕ ಆಳುತ್ತಿದ್ದನು ಮತ್ತು ಮೊಗಟಾವನ್ನು 1287ರಲ್ಲಿ ನಾರಾಯಣನಾಯಕ ಆಳುತ್ತಿದ್ದನು. ಗುತ್ತಿಯ ಶಲ್ಯಾನಾಯಕನನ್ನು 1219ರಲ್ಲಿ ಚಂದಾವರದ ಬೀರದೇವರಾಜನು ಸೂಳಗೆರೆಯಲ್ಲಿ (ಕಾರವಾರ ತಾಲ್ಲೂಕು) ಯುದ್ಧದಲ್ಲಿ ಕೊಲ್ಲುತ್ತಾನೆ. ಕಾರವಾರದಲ್ಲಿ ಗುತ್ತಿಂಬೀರ ಮೂರ್ತಿ ಇರುತ್ತದೆ. ಹಿರೇಗುತ್ತಿ, ಚಿಕ್ಕಗುತ್ತಿ, ನಾಡಗುತ್ತಿ ಈ ಹೆಸರುಗಳಿಗೆ 'ಗುತ್ತಿ' ಎಂಬುದು ಮೂಲ ಹೆಸರು.

ಇಲ್ಲಿಯ ಶಾಸನ ಪಾಠದ ಮುಖ್ಯಾಂಶಗಳು

ಶಾಸನದ 7ನೇ ಸಾಲಿನಲ್ಲಿ: 'ವಿಜಯನಗರ ಸಾಮ್ರಾಜ್ಯದಭ್ಯುದಯದಲ್ಲಿ ...... ತಾ ದೀಕ್ಷಿತರಹ ವಿದ್ಯಾತಿರತ ಶ್ರೀಪಾದಂಗಳ ಶಿಷ್ಯರು ನಾಗೇಂದ್ರತೀರ್ಥ ಶ್ರೀಪಾದಂಗಳಿಗೆ ಕೊಟ್ಟ ಸಾಸನ ಪತ್ರ'

ಶಾಸನದ 9ನೇ ಸಾಲಿನಲ್ಲಿ: 'ನಾಡಗುತ್ತಿ–12ರ ವೊಳಗೆ ಉಳ್ಳ ಅರಮನೆ.'

ಶಾಸನದ 14ನೇ ಸಾಲಿನಲ್ಲಿ: 'ಅದಕ್ಕೆ ಬಂದ ಹಿರಿಯಗುತ್ತಿ ಚಿಕ್ಕಗುತ್ತಿಯ ಬಾಳಸ್ಥಮನೆ ಮುಂತಾದವನ್ನು ದಾರೆಯನಿಕ್ಕಿ

ಶಾಸನದ 17ನೇ ಸಾಲಿನಲ್ಲಿ: 'ಪುಣ್ಯಕಾಲದಲಿ ವಿದಲ್ಥರಿ ಶ್ರೀಪಾದಂಗಳ ಶಿಷ್ಯ ಶ್ರೀ ನಾಗೇಂದ್ರತೀರ್ಥ ಶ್ರೀಪಾದಂಗಳಿಗೆ'

ಶಾಸನದ 18ನೇ ಸಾಲಿನಲ್ಲಿ : 'ರಾಯರ ಸ್ವಹಸ್ತದಿಂ ಯಿಚ್ಚೊಪ್ಪೊಡೆಯರು ದಾರಪುರಕ ಮೂಲವಾಗಿ ಅಚಂದ್ರಾರ್ಕ ಸ್ಥಾಯಿಯಾಗಿ ಕೊಟ್ಟರು.'

ಅಂದರೆ ವಿಜಯನಗರ ಸಾಮ್ರಾಟ ಪ್ರತಾಪದೇವರಾಯನು ಅವರ ನಾಡಗುತ್ತಿ ಮಠದ ಗುರುಗಳಾದ ವಿದ್ಯಾತೀರ್ಥರಿಗೆ, ಅವರ ಶಿಷ್ಯ ನಾಗೇಂದ್ರತೀರ್ಥರಿಗೆ ಸ್ವಹಸ್ತದಿಂದ 'ನಾಡಗುತ್ತಿ–12' ಅರಮನೆಯನ್ನು ಮತ್ತು ಚಿಕ್ಕಗುತ್ತಿಯಲ್ಲಿರುವ ಹರಿಹರನ ಕುಟುಂಬ ಬಾಳಿದ ಮನೆ ಸ್ಥಳವನ್ನು ನೀರೆರೆದು ದಾನಶಾಸನ ಮಾಡಿಕೊಟ್ಟಿದ್ದನು. ಹೊನ್ನಾವರದ ರಾಜ್ಯಾಧಿಕಾರಿ–ಯಿಚ್ಚಪ್ಪೊಡೆಯರು ಸಾಮ್ರಾಟ ಪ್ರತಾಪದೇವರಾಯನು ದಾನ ಕೊಡುವ ಕಾರ್ಯಕ್ಕೆ ನೀರೆರೆದರು – ಎಂದು ಈ ಶಾಸನದಲ್ಲಿ ಉಲ್ಲೇಖವಿದೆ.

ಈ ಶಾಸನವನ್ನು ಡಾ॥ ಎಸ್.ಡಿ. ಶೆಟ್ಟಿಯವರು ನಿಖರವಾಗಿ ಓದಿದ್ದರಿಂದ ಇಲ್ಲಿಯ ಜಾನಪದರ ಬಾಯಲ್ಲಿದ್ದ ಇತಿಹಾಸವು ಶಾಸನವಾಗಿ ಬೆಳಕಿಗೆ ಬಂದಿದೆ.

ಹರಿಹರಬುಕ್ಕರು ಎಲ್ಲಿಯವರು? ಎನ್ನುವ ಕುರಿತಂತೆ ಶಾಸನಾಧಾರವಿಲ್ಲದ ತಾರ್ಕಿಕ ಹೇಳಿಕೆಗಳಿಗೆ ತೆರೆಯೆಳೆದಿದೆ ಮತ್ತು ಹರಿಹರಬುಕ್ಕರು ಹಿರೇಗುತ್ತಿಯ ಚಿಕ್ಕಗುತ್ತಿಯವರು, ಅವರು ಬಾಳ್ವೆಮಾಡಿದ ಮನೆಯ ಸ್ಥಳವು ಚಿಕ್ಕಗುತ್ತಿಯೆಂದು ಈ ಶಾಸನವು ನಿಖರವಾಗಿ ಉತ್ತರಿಸಿರುತ್ತದೆ.

ಶ್ರೀ ವಿದ್ಯಾತೀರ್ಥರು, ನಾಗೇಂದ್ರತೀರ್ಥರು ಮತ್ತು ಕ್ರಿಯಾಶಕ್ತಿ ಹಿರೇಗುತ್ತಿಯ ನಾಡಗುತ್ತಿಯಲ್ಲಿಯೇ ಹರಿಹರನ ಕುಟುಂಬದ ದೀಕ್ಷಿತರಾಗಿದ್ದರು ಎಂಬುದು ಕೂಡ ನಾಡಗುತ್ತಿಯ ಶಾಸನದಿಂದ ತಿಳಿಯುತ್ತದೆ. ನಾಡಗುತ್ತಿ 12 ರಾಜ್ಯದ ಅಂಕೋಲೆ ನಾಡು ವಿಭಾಗದ ಭಾವಿಕೇರಿಯಲ್ಲಿ ಕಾಳಮುಖ ಗುರು ಕ್ರಿಯಾಶಕ್ತಿಯ ದಾನಶಾಸನವಿದೆ. ಹರಿಹರ–ಬುಕ್ಕರಿಗೆ ಕ್ರಿಯಾಶಕ್ತಿಯು ಗುರುವಾಗಿದ್ದು ಗೋಕರ್ಣದ ಶ್ರೀ ಮಹಾಬಲೇಶ್ವರನಿಗೆ ಗ್ರಾಮದತ್ತಿ ಬಿಟ್ಟ ಶಾಸನವಿದೆ. ಇದರಿಂದಾಗಿ ಕ್ರಿಯಾಶಕ್ತಿ ಗುರುಗಳೂ ಕೂಡಾ ವಿದ್ಯಾತೀರ್ಥರಂತೆ ಉನ್ನತಾಧಿಕಾರದ ಗುರುಗಳಾಗಿದ್ದರೆಂದು ತಿಳಿಯಬಹುದಾಗಿದೆ.

ಪ್ರತಾಪದೇವರಾಯನು ಬುಕ್ಕನ ಮೊಮ್ಮಗನು, ಮಧುರೆಯ ಅರಸ ವೀರಕಂಪಣ್ಣ ಮತ್ತು ಗಂಗಾದೇವಿಯರ ಮಗನು. ಇವನ ತಾಯಿ ಕವಿಯಿತ್ರಿ ಗಂಗಾದೇವಿಯು "ವೀರ ಕಂಪಣ್ಣ ಚರಿತ್ರೆ – ಮಧುರಾ ವಿಜಯಂ" ಸಂಸ್ಕೃತ ಕಾವ್ಯ ರಚಿಸಿದ ಇತಿಹಾಸ ಪ್ರಸಿದ್ಧ ಕವಿಯಿತ್ರಿಯಾಗಿದ್ದಾಳೆ. ಯುದ್ಧದಲ್ಲಿ ಗಾಯಗೊಂಡ ಕಂಪಣ್ಣನು 1374ರಲ್ಲಿ ಮಡಿದ ನಂತರ ಪ್ರತಾಪ ದೇವರಾಯನು ಮಧುರೆಯ ಅರಸನಾದನು. ಅನಂತರದಲ್ಲಿ ವಿಜಯನಗರ ಸಾಮ್ರಾಟದ ಹಕ್ಕುದಾರನಾಗಿ 1404–22ರ ವರೆಗೆ ವಿಜಯನಗರ ಸಾಮ್ರಾಜ್ಯಾಧಿಪತಿಯಾದನು. ಈ ಮಧ್ಯೆ ಬುಕ್ಕನ ಮಗ 2ನೇ ಹರಿಹರನು 1379–99ರ ವರೆಗೆ ವಿಜಯನಗರದ ಸಾಮ್ರಾಟನಾಗಿದ್ದನು.

ಸಾಮ್ರಾಟ ಪ್ರತಾಪದೇವರಾಯನು ಕೂಸಾಗಿದ್ದಾಗ ನಾಮಕರಣ ಮಾಡಿದ ಹೆಸರುಗಳು ಬೊಮ್ಮಣ್ಣ ನಾಯಕ. ಬೊಮ್ಮಣ್ಣ ನಾಯಕನ ಅಜ್ಜಿ ಸಾಮ್ರಾಟ ಬುಕ್ಕನ ಹೆಂಡತಿ. ಇವರ ಹೆಸರು ಬೊಮ್ಮಿದೇವಿ ನಾಯಕಿ. ಬೊಮ್ಮದೇವಿ ನಾಯಕಿ ಎಂದಿರುವುದರಿಂದ ಅಜ್ಜಿಯ ಹೆಸರನ್ನು ಮೊಮ್ಮಗನಿಗೆ ಬೊಮ್ಮಣ್ಣನೆಂದು, ಬೊಮ್ಮಯ್ಯನೆಂದು ಇಟ್ಟಿರಬಹುದು.

ಹರಿಹರನ ಬಾಳ್ವೆಯ ಮನೆಯ ಸ್ಥಳ ಚಿಕ್ಕಗುತ್ತಿಯ ಆದಿನಾಥ ತೀರ್ಥಂಕರ ಸನ್ನಿಧಿಯಲ್ಲಿ ಮರಣ ವ್ರತಾಚರಣೆ ಮಾಡಿ ಸಲ್ಲೇಖನ ನಿರ್ವಾಣ ಹೊಂದಿದ್ದರ ಲಭ್ಯ ಶಾಸನ ಫಲಕ ಒಂದರಿಂದ ಬೊಮ್ಮಿದೇವಿ ನಾಯಕಿಯು ತನ್ನ ಗಂಡನ ಮನೆ, ಸ್ವಂತ ಊರು ಚಿಕ್ಕಗುತ್ತಿಯಲ್ಲಿ ನಿರ್ವಾಣ ಹೊಂದಿದ್ದಾಳೆಂದು ಹೇಳಬಹುದಾಗಿದೆ.

ಅಜ್ಜ ಹರಿಹರ ಮತ್ತು ಸೋದರರು ಪ್ರತಾಪ ದೇವರಾಯನ ಕುಟುಂಬದ ಬಾಳ್ವೆಮನೆ ಚಿಕ್ಕಗುತ್ತಿಯ ಕುರಿತ ಇತಿಹಾಸವನ್ನು ಇಲ್ಲಿ ಲಭ್ಯವಾಗಿರುವ ಸಲ್ಲೇಖನ ಶಿಲಾಫಲಕಗಳು ತಿಳಿಸುತ್ತವೆ. ಚಿಕ್ಕಗುತ್ತಿಯು ಕ್ರಿ.ಶ. ಪೂರ್ವದಿಂದಲೇ ಜೈನಧರ್ಮೀಯರಿಗೆ ಪುಣ್ಯಕ್ಷೇತ್ರವಾಗಿತ್ತೆಂದು ಇಲ್ಲಿ ಲಭ್ಯವಾಗಿರುವ ನಾಲ್ಕು ಫಲಕಗಳಿಂದ ಅರ್ಥವಾಗುತ್ತದೆ.

ಇಲ್ಲಿ ಕುಳಿತಿರುವ ಭಂಗಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ತೀರ್ಥಂಕರ ಮೂರ್ತಿಯಿದೆ. ತೀರ್ಥಂಕರ ಮೂರ್ತಿಯ ತಲೆಯ ಮೇಲೆ ಜುಟ್ಟು ಇದೆ. ಆದ್ದರಿಂದ ಈ ಮೂರ್ತಿಯನ್ನು ಆದಿನಾಥ ತೀರ್ಥಂಕರ ಮೂರ್ತಿಯೆಂದು ಜೈನಧರ್ಮೀಯರು ಹೇಳುತ್ತಾರೆ. ಈ ಮೂರ್ತಿಯು ಆದಿನಾಥ ತೀರ್ಥಂಕರ ಮೂರ್ತಿಯೆಂಬುದನ್ನು ಇಲ್ಲಿರುವ ಸಲ್ಲೇಖನ ವ್ರತದ ಶಿಲಾಫಲಕದಲ್ಲಿ ಬರೆಯಲಾಗಿದೆ.

ಕ್ರಿ.ಶ. 1311ರಲ್ಲಿ ದೆಹಲಿ ಸುಲ್ತಾನನ ಸೇನೆಯು ಮಲಿಖಾಫರ್ ನೇತೃತ್ವದಲ್ಲಿ ದ್ವಾರಸಮುದ್ರವನ್ನು ಮುತ್ತಿತ್ತು. 1326ರಲ್ಲಿ ಮಹಮ್ಮದ್ ತುಘಲಕ್ ಸೇನೆ ಆಕ್ರಮಣ ಮಾಡಿತು. ಈ ವೇಳೆಗೆ ದಕ್ಷಿಣ ಭಾರತದ ಹಿಂದು ರಾಜಮನೆತನಗಳೆಲ್ಲವು ನಾಶವಾಗಿ ಮೂರನೇ ಹೊಯ್ಸಳ ಬಲ್ಲಾಳನು ಮಹಮ್ಮದಿಯರಿಗೆ ಪುನಃ ಪುನಃ ಕಪ್ಪಕೊಟ್ಟು ಅಭಲನಂತೆ ಉಳಿದುಕೊಂಡಿದ್ದನು.

ಬಲ್ಲಾಳನಿಗೆ ಆಗ ವಯಸ್ಸಾಗಿತ್ತು. ಬಲ್ಲಾಳನ ಮಗ ವಿರೂಪಾಕ್ಷ ಬಲ್ಲಾಳನು ಮಹಮ್ಮದೀಯ ಸೇನೆ ಎದುರಿಸಲಾರದಂತಿದ್ದನು. ಬಲ್ಲಾಳನ ರಾಣಿ ಕೃಷ್ಣೇಯಿ ತಾಯಿಯು ಸೇನಾಪತಿಗಳಾದ ಹರಿಹರ ಸಹೋದರರ ಸಾಮರ್ಥ್ಯವನ್ನು ಅರಿತಿದ್ದಳು. ಹರಿಹರನ ಮಗಳನ್ನು ತನ್ನ ತಮ್ಮ ಬಲ್ಲಪ್ಪನಿಗೆ ಮದುವೆ ಮಾಡಿಕೊಂಡಿದ್ದಳು. ಬಲ್ಲಾಳನು ದೋರಸಮುದ್ರದಿಂದ ತನ್ನ ರಾಜಧಾನಿಯನ್ನು ಭಟ್ಕಳಕ್ಕೆ ಬದಲಾಯಿಸಿದ್ದನು. ಕೃಷ್ಣೇಯಿ ತಾಯಿ ಬಲ್ಲಾಳನ ಸಾಮ್ರಾಜ್ಯದ ಸಾಮಂತಿಕೆಯನ್ನು ನಾಡಗುತ್ತಿಯ ರಾಜ ಹರಿಹರ ಬುಕ್ಕ ಸಹೋದರರಿಗೆ ಒಪ್ಪಿಸಿದಳು.

"ಮಾಡಗುತ್ತಿ-12" ರಾಜ್ಯದ ಒಂದೇ ಕುಟುಂಬದ ಒಗ್ಗಟ್ಟಿನಲ್ಲಿ ಹರಿಹರ - ಹಂಪೆ-ಆನೆಗುಂದಿಯನ್ನು, ಕಂಪಣ್ಣ - ತಿರುಪತಿ, ಮುದ್ದಣ್ಣ - ಮುಳಬಾಗಿಲು, ಮಾದಣ್ಣ - ಚಂದ್ರಗುತ್ತಿ, ಬುಕ್ಕ - ದೋರಸಮುದ್ರವನ್ನು ಕೃಷ್ಣೆಯೀ ತಾಯಿಯ ಆಶೀರ್ವಾದದ ಹಿರಿತನದಲ್ಲಿ ವಿಭಾಗ ಮಾಡಿಕೊಂಡು 1336ರಲ್ಲಿ ಆಳ್ವಿಕೆ ಪ್ರಾರಂಭಿಸಿದರು. 1345ರಲ್ಲಿ ಹರಿಹರನ ರಾಜಕುಟುಂಬವೆಲ್ಲ ಶೃಂಗೇರಿಗೆ ಬಂದು ಶ್ರೀ ಭಾರತೀತೀರ್ಥರಿಗೆ ದಾನ-ಧರ್ಮ ಸಲ್ಲಿಸಿದ್ದರು. ಆಗಲೂ ಕೃಷ್ಣೇಯಿ ತಾಯಿ ಹರಿಹರನ ಕುಟುಂಬದ ಜೊತೆಗಿದ್ದರೆಂದು ಶೃಂಗೇರಿ ಶಿಲಾಶಾಸನದಿಂದ ತಿಳಿದುಬರುತ್ತದೆ.

ಕ್ರಿ.ಶ. 1336ರಲ್ಲಿ ಹಿರೇಗುತ್ತಿಯ ರಾಜಾ ಹರಿಹರ - ಬುಕ್ಕ ಸಹೋದರರು ವಿಜಯನಗರದಲ್ಲಿ ರಾಜ್ಯ ಸ್ಥಾಪನೆ ಮಾಡಿದಾಗ ಅವನ ಸೈನ್ಯ ಮತ್ತು ಸೇನಾಪತಿಗಳಾಗಿ ಹೋದವರಲ್ಲಿ ಸ್ಥಳೀಯ ನಾಡಗುತ್ತಿ ರಾಜ್ಯದ ಮತ್ತು ಸೋಂದೆ ರಾಜ್ಯದ ಸೈನ್ಯ ಮತ್ತು ಸೇನಾಪತಿಗಳಿದ್ದರೆಂಬ ಬಗ್ಗೆ ಇತಿಹಾಸ ದಾಖಲೆಗಳು ಲಭ್ಯವಿರುತ್ತದೆ. ಇವರಲ್ಲಿ ಸೋಂದೆಯ ಮಂಗಮಹಾಪ್ರಭು ಮತ್ತು ಗೋಪಣ್ಣ ಪ್ರಮುಖರಾಗಿದ್ದರು. ಮಂಗಮಹಾಪ್ರಭುವು ಹರಿಹರನ ತಮ್ಮ ಕಂಪಣ್ಣನ ಸೇನಾಪತಿಯಾಗಿ ಚಂದ್ರಗಿರಿಗೆ (ತಿರುಪತಿ) ಹೋಗಿದ್ದನು. ಚಂದ್ರಗಿರಿಯ ಸೇನಾಪತಿ ಮಂಗಮಹಾಪ್ರಭುವು ತನ್ನ ಮಗಳನ್ನು ಸೋಂದೆಯ ರಾಜ ಅರಸಪ್ಪ ನಾಯಕನಿಗೆ ಮದುವೆ ಮಾಡಿಕೊಟ್ಟಿದ್ದನು. ಅಳಿಯನಾದ ಸೋಂದೆ ರಾಜ ಅರಸಪ್ಪ ನಾಯಕನು ಯುದ್ಧದಲ್ಲಿ ಮಡಿದಾಗ ಮಂಗಮಹಾಪ್ರಭು ಸೇನಾಪತಿಯು ತಿರುಪತಿಯಿಂದ ಸೋಂದೆಗೆ ಬಂದು ರಾಜಪ್ರತಿನಿಧಿಯಾಗಿ ಸೋಂದೆಯನ್ನು ಆಳಿದ್ದರ ಕುರಿತು ದಾಖಲೆಗಳಿವೆ ಮತ್ತು ಮುಂದೆ ಅಳಿಯ ಅರಸಪ್ಪ ರಾಜನ ಪೀಳಿಗೆಗೆ (ಮೊಮ್ಮಕ್ಕಳಿಗೆ) ರಾಜ್ಯಭಾರವನ್ನು ಒಪ್ಪಿಸಿದ್ದಾನೆ. ಸೋಂದೆ ರಾಜ್ಯದ ಅರಸಪ್ಪನು ಯುದ್ಧದಲ್ಲಿ ಮಡಿದಾಗ ಅವನ ಒಂಬತ್ತು ರಾಣಿಯರು ಚಿತೆ ಏರಿ ಸತಿ ಹೋದ ಸಚಿತ್ರ ಶಿಲೆಯನ್ನು ಕುಲಸಂಬಂಧಿಗಳಾದ್ದರಿಂದ ಹರಿಹರನ "ನಾಡಗುತ್ತಿ-12" ಅರಮನೆ ಆವರಣದಲ್ಲಿ ನಿಲ್ಲಿಸಲಾಗಿದೆ.

ಚಂದ್ರಗಿರಿಯ (ತಿರುಪತಿ) ಅರಸನಾಗಿ ನರಸಿಂಹನಾಯಕನು ಆಳುತ್ತಿದ್ದ ಕಾಲವು ವಿಜಯನಗರ ಸಾಮ್ರಾಜ್ಯವನ್ನು ಕ್ರಾಂತಿಕಾರಿಯಾಗಿ ರಕ್ಷಿಸದಿದ್ದರ ಕಾಲಘಟ್ಟವಾಗಿದೆ. ನರಸಿಂಹನಾಯಕನ ಗುರುಗಳಾಗಿ ಪಂಡಿತ ತಾತಾಚಾರ್ಯರು ತಿರುಪತಿ ತಿಮ್ಮಪ್ಪನ ಮುಖ್ಯ ಅರ್ಚಕರಾಗಿದ್ದರು. ಆಗ ವಿಜಯನಗರ ಸಾಮ್ರಾಟನಾಗಿ (1465-85) ವಿರೂಪಾಕ್ಷನು ಆಳ್ವಿಕೆ ಮಾಡುತ್ತಿದ್ದನು. ವಿರೂಪಾಕ್ಷನು ಮಂತ್ರ-ತಂತ್ರಗಳಲ್ಲಿ ವಿಪರೀತ ವಿಶ್ವಾಸಿಕನಾಗಿದ್ದನು. ಇದನ್ನರಿತ ಮಾಂತ್ರಿಕ ಪಂಡಿತನೊಬ್ಬ ವಿರೂಪಾಕ್ಷನ ಆಸ್ಥಾನಕ್ಕೆ ಆಗಮಿಸಿ ಅಲ್ಲಿಯೇ ನೆಲೆಯಾಗಿದ್ದನು. ಆಸ್ಥಾನ ಪಂಡಿತರನ್ನೆಲ್ಲ ವಾದಕ್ಕೆ ಆಹ್ವಾನಿಸಿ ಅವರ ಮುಖಬಂಧನ ಮಾಡಿ ವಾದದಲ್ಲಿ ಸೋಲಿಸಿ ಪಣಕ್ಕಿಟ್ಟ ಸಂಪತ್ತನ್ನೆಲ್ಲ ದೋಚುತ್ತಿದ್ದನು. ತಿರುಪತಿಯ ನರಸಿಂಹನಾಯಕನ ಆಸ್ಥಾನ ಗುರುಗಳಾದ ತಾತಾಚಾರ್ಯರು ಈ ಮಾಂತ್ರಿಕ ಪಂಡಿತನನ್ನು ವಾದದಲ್ಲಿ ಸೋಲಿಸಿದರು. ತಾತಾಚಾರ್ಯರಿಗೆ "ಪಂಚಮತಭಂಜಕ"ನೆಂದು ಆಸ್ಥಾನದ ಬಿರುದನ್ನು ಕೊಡಲಾಯಿತು. ಆದರೆ ತಾತಾಚಾರ್ಯರನ್ನು ದಂಡಿಸಬೇಕೆಂದು ಅವಮಾನಿತನಾದ ಮಾಂತ್ರಿಕನು ವಿರೂಪಾಕ್ಷನನ್ನು ಹೆದರಿಸಿ ಪೀಡಿಸುತ್ತಿದ್ದನು. ಇದನ್ನರಿತ ತಾತಾಚಾರ್ಯರು ತಿರುಪತಿಗೆ ತಿರುಗಿ ಬಂದು ವಿರೂಪಾಕ್ಷನ ಅಬಲತೆಯ ಬಗ್ಗೆ ರಾಜಾ ನರಸಿಂಹನಾಯಕರಿಗೆ ದೂರಿಕೊಂಡರು.

ಇದೇ ವೇಳೆಗೆ ಬಹಮನಿ ಸುಲ್ತಾನನ ಮಂತ್ರಿ ಮಹಮ್ಮದ್ ಗವಾನ್ ನೇತೃತ್ವದಲ್ಲಿ ಬೆಳಗಾಂವ್, ಗೋವಾ, ಅಂಕೋಲಾ, ಕೊಂಕಣ, ಕರಾವಳಿಯ ಮಿರ್ಜಾನವರೆಗಿನ ಪ್ರದೇಶವು ವಿಧ್ವಂಸಕ ದಾಳಿಗೊಳಗಾಗಿ ಹಿಂದೂ ಪವಿತ್ರ ಸ್ಥಳಗಳು ಬಹುಮಟ್ಟಿಗೆ ನಾಶವಾದವು. ಚಿಕ್ಕಗುತ್ತಿಯ ಆದಿನಾಥ ಜೈನಬಸದಿ, ವಸತಿಗಳೆಲ್ಲ ಆಗಲೇ ನಾಶವಾಗಿರಬಹುದು. ಇದನ್ನರಿತು ಬೇಸರಗೊಂಡ ಚಂದ್ರಗಿರಿಯ ಅರಸ ನರಸಿಂಹನಾಯಕನು ತನ್ನ ಗುರುಗಳಾದ ತಾತಾಚಾರ್ಯರನ್ನು ತಕ್ಷಣ ನಾಡಗುತ್ತಿಯ ನಾಗೇಂದ್ರತೀರ್ಥ ಮಠಕ್ಕೆ ಕಳುಹಿಸಿದ್ದನು. ಇದೇ ಕಾಲಕ್ಕೆ ಈ ಮಠವನ್ನು ತಾತಾಚಾರ್ಯ ವೆಂಕಟರಮಣ ಮಠವೆಂದು ತಾತಾಚಾರ್ಯ ಗುರುಗಳು ಗೋಕರ್ಣದಲ್ಲಿ ಸ್ಥಾಪನೆ ಮಾಡಿದರು.

ಅಸಮರ್ಥ ನಡವಳಿಕೆಯ ವಿರೂಪಾಕ್ಷನ ಆಳ್ವಿಕೆಯಿಂದ ಮತ್ತು ಮಹಮ್ಮದ್ ಗವಾನನ ಸೇನೆಯು ತಮ್ಮ ನೆಲವಾದ ಕರಾವಳಿಯನ್ನು ಆಕ್ರಮಿಸಿದ್ದರಿಂದ ನರಸಿಂಹನಾಯಕನು ಕ್ರೋಧಿತನಾಗಿದ್ದನು. ನರಸಿಂಹನಾಯಕನು ನಾಡಗುತ್ತಿಗೆ ತಾತಾಚಾರ್ಯ ಗುರುಗಳನ್ನು ಕಳಿಸಿ, ತಾನು ವಿಜಯನಗರ ರಾಜಧಾನಿಗೆ ಕೇವಲ ಬೆಂಗಾವಲು ಪಡೆಯೊಂದಿಗೆ ಧಾವಿಸಿ ಬಂದು, ಮೊದಲು ಮಂತ್ರವಾದಿಯ ತಲೆಯನ್ನುರುಳಿಸಿದಾಗ, ಅಬಲ ಸಾಮ್ರಾಟ ವಿರೂಪಾಕ್ಷನು ಅರಮನೆಯಿಂದ ತಲೆತಪ್ಪಿಸಿಕೊಂಡು ಪಲಾಯನಗೈದನು. ಯುದ್ಧದ ರಕ್ತಪಾತವಿಲ್ಲದೆಯೇ ನರಸಿಂಹನಾಯಕನು ವಿಜಯನಗರದ ಸಾಮ್ರಾಟನಾದನು. ಮುಂದಿನ ಬಲಿಷ್ಠ ಸಾಮ್ರಾಜ್ಯಕ್ಕೆ ಕಾರಣನಾದನು.

ನರಸಿಂಹನಾಯಕನ ಅಪ್ಪಣೆಯಂತೆ ತಾತಾಚಾರ್ಯರು ಗೋಕರ್ಣದಲ್ಲಿ ಮಠವನ್ನು ಸ್ಥಾಪಿಸಿದ್ದರು. ತಾತಾಚಾರ್ಯರು ಮುಂದೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕೃಷ್ಣದೇವರಾಯನ ಮನೆಗುರುಗಳೂ ಹಾಗೂ ಆಸ್ಥಾನ ಗುರುಗಳೂ ಕೂಡಾ ಆಗಿದ್ದರು.

ಸೋಂದೆ ಮತ್ತು ವಿಜಯನಗರದ ವೈವಾಹಿಕ ಸಂಬಂಧವು ಹರಿಹರನ ಕಾಲದಿಂದ ಕೃಷ್ಣದೇವರಾಯನ ಕಾಲದವರೆಗೆ ಮುಂದುವರೆಯುವುದನ್ನು ಕಾಣಬಹುದಾಗಿದೆ. ಕೃಷ್ಣದೇವರಾಯನ ತಂದೆ ನರಸನಾಯಕನ ತಂಗಿ ಸೋಂದೆಯ ಎರಡನೆಯ ಅರಸಪ್ಪನ ರಾಣಿಯಾಗಿರುತ್ತಾಳೆ. ಅಂದರೆ ಸಾಮ್ರಾಟ ಕೃಷ್ಣದೇವರಾಯನ ಸೋದರತ್ತೆಯ ಮನೆ ಸೋಂದೆ. ನರಸನಾಯಕನ ಮಗಳು ಸೋಂದೆಯ ವೆಂಕಟಪತಿಯ ಮಡದಿಯಾಗಿದ್ದಳು. ರಾಜಾ ವೆಂಕಟಪತಿ ನಾಯಕನು ಕೃಷ್ಣದೇವರಾಯನಿಗೆ ಭಾವನಾದ ಹಿರಿತನದಿಂದ ಕೃಷ್ಣದೇವರಾಯನ ಪಟ್ಟಾಭಿಷೇಕವನ್ನು ನೆರವೇರಿಸಿದನು ಎನ್ನಲಾಗಿದೆ.

"ಬೊಂಬೈ ಗೆಜಟಿಯಾರ್" ಕೊಂಕಣ (ಕೆನರಾ)

ತಾಳಿಕೋಟ ಯುದ್ಧದಲ್ಲಿ ವಿಜಯನಗರಕ್ಕೆ ಸೋಲಾಗಿತ್ತು. 1570ರಲ್ಲಿ ಸದಾಶಿವರಾಯನ ಕೊಲೆಯಾಯಿತು. ಈ ಸೋಲಿನ ಸಂಕಟದ ಸಮಯದಲ್ಲಿ ವಿಜಯನಗರದ (ಕೃಷ್ಣದೇವರಾಯನ) ರಾಜಕುಟುಂಬವು ಸೋಂದೆಯ ನೆಂಟರ ಮನೆಯಲ್ಲಿ ಆಶ್ರಯ ಪಡೆದಿತ್ತು.

ಕೃಷ್ಣದೇವರಾಯನ ಅಣ್ಣ ನರಸಿಂಹ ನಾಯಕನು ಕೃಷ್ಣದೇವರಾಯನ ಕಣ್ಣು ಕೀಳಿಸಲು ರಾಜಾದೇಶ ಮಾಡಿದಾಗ ಕೃಷ್ಣದೇವರಾಯನು ತಲೆತಪ್ಪಿಸಿಕೊಂಡು ಅಡಗಿಕೊಂಡಿದ್ದು ಗೋಕರ್ಣದಲ್ಲಿ ಮತ್ತು ಆಗ ಬೀರಣ್ಣ ನಾಯಕನನ್ನು ತನ್ನ ರಕ್ಷಣಾ ಸೇನಾಪತಿಯಾಗಿ ಮಾಡಿಕೊಂಡಿದ್ದನು.

1. Krishna's father who was long childless, promised the succession to his sister's son Arsappa Naik. Afterwards, when sons were born Krishna made Arsappa ruler of Sonde.

2. The Sonda Chiefs as a branch of the Vijayanagar kings who settled at Sonda after the downfall of the Vijayanagar kings about 1580.

ಹೀಗಿದ್ದರಿಂದ ಹಿರೇಗುತ್ತಿಯ ಶ್ರೀ ಮಹಾಲಿಂಗೇಶ್ವರ ದೇವಾಲಯ ಸಮುಚ್ಚಯ ಸನ್ನಿಧಿಯಲ್ಲಿ, ವಿದ್ಯಾತೀರ್ಥ, ನಾಗೇಂದ್ರತೀರ್ಥ ಪ್ರಭಾವದಲ್ಲಿ, ಭೋಜನ 400 ವರ್ಷಗಳ ಇತಿಹಾಸದ ಹಿನ್ನೆಲೆಯಲ್ಲಿ ಸೋಂದೆ ನಾಯಕರ ಇತಿಹಾಸ ಕಾಲ ಮತ್ತು ಹರಿಹರ ಬುಕ್ಕ ಸಹೊದರರ 'ನಾಡಗುತ್ತಿ-12' ರಾಜ್ಯ ಸ್ಥಾಪನೆ ಇತಿಹಾಸ ಕಾಲದವರೆಗೆ ತನ್ನದೆ ಆದ ಯೋಧ ಪರಂಪರೆಯು ಇಲ್ಲಿ ಬೆಳೆದು ಬಂದಿತ್ತೆಂದು ತಿಳಿಯಬಹುದಾಗಿದೆ.

ಹಿರೇಗುತ್ತಿಯಲ್ಲಿ "ನಾಡಗುತ್ತಿ-12" ರಾಜ್ಯವು ಚಿಕ್ಕಗುತ್ತಿಯ ಹರಿಹರನಿಂದ ಕ್ರಿ.ಶ. 1335ರಲ್ಲಿ ಚಿಕ್ಕ ರಾಜ್ಯವಾಗಿ ಸ್ಥಾಪನೆಯಾಯಿತು. ಮುಂದೆ ಈ ರಾಜ್ಯವು ಇಲ್ಲಿರುವ ಶಿಲಾಶಾಸನ ನಿಲ್ಲಿಸಿರುವ ಸಾಮ್ರಾಟ ಪ್ರತಾಪದೇವರಾಯನ ತಾಯಿ ಗಂಗಾದೇವಿಯು ತನ್ನ "ಮಧುರಾ ವಿಜಯಂ" ಕಾವ್ಯದಲ್ಲಿ ವರ್ಣಿಸಿದಂತೆ ಗೋಕರ್ಣ ಕಡಲಿನಿಂದ ಮಧುರೆಯ ಕಡಲವರೆಗೆ ದಕ್ಷಿಣ ಭಾರತವನ್ನೆಲ್ಲಾ ಗೆದ್ದಿರುವ ಸಾಮ್ರಾಜ್ಯವಾಗಿ ಬೆಳೆದು, ಹಿಂದು ದೇವಾಲಯಗಳನ್ನು ಮತ್ತು ಹಿಂದು ಶಕ್ತಿಯನ್ನು ಪೋಷಣೆ ಮಾಡಿ ಕನ್ನಡ ನಾಡಿನ ವಿಜಯ ಪತಾಕೆ ನೆಟ್ಟಂತಹ ರಾಜ್ಯ "ನಾಡಗುತ್ತಿ-12" ರಾಜ್ಯವಾಗಿದೆ.

ಗ್ರಂಥಸೂಚಿ

1. *Hireguti*, pp. 70-75, EI, XIII.
2. ಡಾ. ಎಸ್.ಡಿ. ಶೆಟ್ಟಿ, *ಹಿರೇಗುತ್ತಿ ಮಹಾಲಿಂಗೇಶ್ವರ ಮಠ/ಅರಮನೆ ಶಾಸನ ಪಠ್ಯ* (ಕ್ರಿ.ಶ. 1333).
3. *ಸಲ್ಲೇಖನ ಶಾಸನಗಳು-4.*
4. Bhavikeri, *ESI*-XIII, 1986, pp. 87-90.
5. *Chandawar Inscription of Biradev,* IESRS, Vol. XI, M.D. Sampat, pp. 88-91.
6. No. 27, Kuntkani Plate of Kadamba Ravivarma, *EI,* XXXII, pp. 217-219.
7. *Bombay Gazetteer,* p. 120, Chapter VII.
8. Agra Copper Plate Inscription, *EI.*
9. *Bombay Gazeteer Konkana,* Kanara District, p. 98.
10. ಎಮ್.ಜಿ. ವಾರಿ, *ಸೋದೆ ಅರಸು ಮನೆತನ,* ಪು. 32-33.
11. ಸೂರ್ಯನಾಥ ಕಾಮತ, *ಕರ್ನಾಟಕ ಸಂಕ್ಷಿಪ್ತ ಇತಿಹಾಸ,* ಪು. 149.

7. ಆನೆಗೊಂದಿ ಬಡೇರಾಮರಾಜನ ತಾಮ್ರ ಶಾಸನ

ಡಾ. ಎಂ.ಕೆ. ದುರುಗಪ್ಪ

ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಆನೆಗೊಂದಿಯ ಇತಿಹಾಸ ತಿಳಿದುಕೊಳ್ಳಲು ಕೆಲವು ತಾಮ್ರ ಶಾಸನಗಳು ಸಹಾಯಕವಾಗಿವೆ. ಬಡೇರಾಮರಾಜರ (ಕ್ರಿ.ಶ. 1733–1780) ಕಾಲಕ್ಕೆ ಸೇರಿದ ತಾಮ್ರಶಾಸನವು ಕನಕಗಿರಿಯ ವಾಲೇಕಾರ ಹನುಮೇಶ ಅವರ ಸಂಬಂಧಿಕರ ಮನೆಯಲ್ಲಿದೆ. ಈ ಅಪ್ರಕಟಿತ ತಾಮ್ರ ಶಾಸನದ ಮುಖಪುಟದಲ್ಲಿ 38 ಸಾಲುಗಳು ಮತ್ತು ಹಿಂಬದಿಯಲ್ಲಿ 34 ಸಾಲುಗಳಿದ್ದು ಒಟ್ಟು 72 ಸಾಲುಗಳನ್ನು ಹೊಂದಿದ್ದು ಕನ್ನಡ ಭಾಷೆಯಲ್ಲಿದೆ. ಇದು ಹಂಪಿ, ಆನೆಗೊಂದಿ, ಕನಕಗಿರಿ ಹಾಗೂ ಜರಿಮಲೆ ನಾಯಕರ ಇತಿಹಾಸ ತಿಳಿದುಕೊಳ್ಳಲು ಸಹಾಯಕವಾಗಿದೆ. ಆನೆಗೊಂದಿಯ ರಾಜರು ಕನಕಗಿರಿ–ಆನೆಗೊಂದಿಗೆ ರಾಜಗುರುಗಳಾಗಿದ್ದರೆಂದು ಈ ಶಾಸನದಿಂದ ತಿಳಿಯುವುದು.

ಈ ಶಾಸನದ ಸಾರಾಂಶ ಇಂತಿದೆ. ಕನಕಗಿರಿ–ಆನೆಗೊಂದಿ ಸಂಸ್ಥಾನದ ರಾಜಗುರುಗಳಾದ ಬಡೇರಾಮರಾಜರು ತನ್ನ ಭಂಟರು ಮತ್ತು ಆಯಾ ಭಾಗದವರ ಆನೆ, ಒಂಟೆ, ಕುದುರೆ ಮತ್ತು ಸೈನಿಕರು ಹಾಗೂ ನಾನಾ ವಾದ್ಯಗಳೊಂದಿಗೆ ಹಂಪಿಯ ವೈಭವವನ್ನು ನೋಡಲು ಪಟ್ಟಣಕ್ಕೆ ಹೊರಟರು. ಅವರು ಹಂಪಿಯ ರಾಮದೇವರು, ಉದ್ಧಾನವೀರಭದ್ರ ಮತ್ತು ಸರ್ವ ಲಿಂಗಗಳಿಗೆ ಪೂಜೆಯನ್ನು ಮಾಡಿ ನಂತರ ಭೋಜನ ಮಾಡಿ ತಾಂಬೂಲ ಸವಿದರು. ಆನಂತರ ಅವರು ಬರುವ ವೇಳೆಯಲ್ಲಿ ವಿಠಲರಾಯ ಗುಡಿ ಬೀದಿಯಲ್ಲಿ ಜರಿಮಲೆ(?)ರಾಜನ ದಂಡು ಕದನಕ್ಕೆ ಇಳಿಯಿತು. ಇದರಿಂದ ಕನಕಗಿರಿ ಹಿರೆನಾಯಕನಿಗೆ ಕೋಪ ಬಂದಿತು. ಗುರಿಕಾರ ಕರೆಸಕ್ರಪ್ಪನ ಮಗ ಟೋಪಿ ಬಸವಂತಪ್ಪನ ತಮ್ಮ ಚನ್ನಬಸಪ್ಪ ಮತ್ತು ಮುತ್ತೋಟಿ ಸಿದ್ಧನಗೌಡ, ಮೆಣದಾಳ ದೇಸಾಯಿಗಳು ಮತ್ತು ತಳವಾರಗಟ್ಟಿ ತಿಮ್ಮನಾಯಕ ಇವರು ತಮ್ಮಲ್ಲಿದ್ದ ಕತ್ತಿ ಇತ್ಯಾದಿ ಅಸ್ತ್ರಗಳೊಂದಿಗೆ ಹೋರಾಡಿ ಜರಿಮಲೆ ರಾಜನ ದಂಡನ್ನು ಎದುರಿಸಿ ಸಂಹಾರ ಮಾಡಿದರು. ತಳವಾರಗಟ್ಟಿ ಮುಂಬಾಗಲಿಗೆ ಬಂದ ದಂಡನ್ನು ಟೋಪಿ ಬಸಪ್ಪನು ಸಾಹಸದಿಂದ ಸಂಹಾರ ಮಾಡಿದನು. ಜರಿಮಲೆ ರಾಜನ ದಂಡಿಗೆ ಭಯಗೊಂಡ ಅಂಬಿಗರು ಹೊರಗುಳಿದರು. ಇದರಿಂದ ರಾಜನು ಸಿಟ್ಟಾದನು. ಆಗ ಟೋಪಿಬಸಪ್ಪ, ಅವನ ತಮ್ಮ ಚನ್ನಬಸಪ್ಪ, ತಳವಾರಗಟ್ಟಿ ವೀರನಾಯಕ ಮತ್ತು ತಿಮ್ಮನಾಯಕ ಈ ನಾಲ್ಕು ಜನರು ದಂಡು ದಾಟಲು ಹರಿಗೋಲನ್ನು ಸುಳಿಯಿಂದ ರಕ್ಷಿಸಿದರು. ನಂತರ ಇವರೆಲ್ಲಾ ಅರಮನೆಯ ಮುಂದೆ ಸೇರಿ ತಮ್ಮ ಸಾಹಸದ ಟೋಪಿಗಳನ್ನು ರಾಜನ ಮುಂದೆ ಹಾಕಿದರು. ದೊರೆಗಳು ಇದರಿಂದ ಸಂತೋಷಗೊಂಡು ಬಹುಮಾನವಾಗಿ ಕುರಗೋಡು ಸರನಾಡಿನ 33 ಹಳ್ಳಿಗಳನ್ನು ಹಿರೆನಾಯಕನಿಗೆ, ಕನಕಗಿರಿಯ ಗುರಿಕಾರ ಕರೆಸಕ್ರಪ್ಪನ ಮಗ ಟೋಪಿ ಬಸಪ್ಪನ ತಮ್ಮ ಚನ್ನಬಸಪ್ಪನಿಗೆ 12 ಕೂರಿಗೆ (ಈಶಾನ್ಯ ದಿಕ್ಕಿಗೆ, ವೆಂಕಟಪತಿಬಾವಿ ಕೆಳಗೆ) ಭೂಮಿಯನ್ನು ಹಾಗೂ ವಿಳ್ಯೆ ಮತ್ತು ಇತರ ಬಾಬುತ್ತುಗಳನ್ನು ನೀಡಿದನು. ಆನೆಗೊಂದಿಯಲ್ಲಿ 9 ಮಳ ಮನೆ ಜಾಗ ಹಾಗೂ ಕಟ್ಟೆಮನೆಯ ತಪ್ಪು ತಿಪ್ಪಾಟು, ವಿಳ್ಯೆ ತಾಂಬೂಲ, ಗುರುದಕ್ಷಿಣೆ ಇತರ ಬಾಬುತ್ತಗಳಿಗೆ ಇತನೇ ಬಾದ್ಯಸ್ತನೆಂದು. ಟೋಪಿ ಬಸಪ್ಪನಿಗೆ ಯಾರೂ ಪ್ರತಿವಾದಿ ಮಾಡಕೂಡದೆಂದು ಈ ಬಹುಮಾನಗಳು ಸೂರ್ಯ ಚಂದ್ರವಿರುವವರೆಗೂ ನಡೆಸಬೇಕು, ಮುಂದೆ ಹುಟ್ಟಿದಂತಹ ದೊರೆಗಳೂ ಇದನ್ನು ನಡೆಸಬೇಕು, ನಡೆಸದಿದ್ದರೇ ಹಿರೇಮಗನ ಕೊರಳು ಕೊಯ್ದಂಗೆ ಎಂದು ಈ ಶಾಸನದಲ್ಲಿ ಹೇಳಲಾಗಿದೆ.

ಶಾಸನದ ಕೊನೆಯಲ್ಲಿ ಸಾಕ್ಷಿಗಳಾಗಿ ಹಿರೆನಾಯಕ, ಮೆಣದಾಳು ದೇಸಾಯಿ ತಮ್ಮ, ತಳವಾರಗಟ್ಟಿ ಗೋಸಲ ಹಿರೆನಾಯಕ ಮತ್ತು ತಿಮ್ಮನಾಯಕನ ಖುದ್ದು ಸಹಿ ಎಂದು ಬರೆಯಲಾಗಿದೆ.

ಬಲಭಾಗದಲ್ಲಿ ಶಾಸನ ಬರೆದ ಬೊಳರಾಯ ಮತ್ತು ಶಾಸನದ ಎಡಕ್ಕೆ ಕೃಷ್ಣೇಂದ್ರ ಬಡೇರಾಮರಾಜರು ಸಹಿ ಹಾಕಿದ್ದಾರೆ.

ಈ ಶಾಸನದಿಂದ ಕನಕಗಿರಿ ಆನೆಗೊಂದಿಯ ನಡುವಿನ ಸಂಬಂಧ ಹಾಗೂ ಆನೆಗೊಂದಿಯ ಬಡೇರಾಮರಾಜನ ಬಿರುದುಗಳನ್ನು ತಿಳಿಯಬಹುದು. ಹಂಪಿಯ ದೇವರುಗಳಿಗೆ ಪೂಜೆ ಹಾಗೂ ಇತ್ಯಾದಿ ಕಾರ್ಯಗಳನ್ನು ಆನೆಗೊಂದಿ ನಾಯಕರು ಈ ಹಿಂದಿನಿಂದ ನಡೆಸಿಕೊಂಡು ಬಂದಿರುವ ಮಾಹಿತಿ ಇದರಿಂದ ತಿಳಿಯುತ್ತದೆ. ಶಾಸನದ ಕೆಲವು ಸಾಲುಗಳು ಓದಲು ಸಾಧ್ಯವಾಗಿಲ್ಲದ್ದರಿಂದ ಇನ್ನೂ ಕೆಲವು ಮಾಹಿತಿಗಳು ತಿಳಿಯುತ್ತಿಲ್ಲ.

ಶಾಸನದ ಮುಖಪುಟ



ಚಂದ್ರ ಶಂಖ ಚಕ್ರ ಸೂರ್ಯ

ಬಾ।ರಾ॥
ತಾ॥
1012

1. 1012 ವ ಶಿಲಬಾಬತ್ತ ರತ್ತಾಕ್ಷಿ ನಾಮ ಸಂವತ್ಸರದ ಪಾಲ್ಗುಣ ಶು 91 ಶು 10 ಯಲ್ಲೂ
2. ಶ್ರಿ ನರಪತಿ ಪಾಲು ಕುರುವಂಶ ಅಮ್ಮ ರಿಸಿಯಾದ ರಾಜಮಾನ್ಯ ರಾಜ ಶ್ರೀ
3. ಕನಕಚಲಕ್ಷಿಮಿ ನರಶಿಂಹ್ಮ ಪ್ರಶಿದ ಶ್ರೀ ಮದ್ವದ ಮಾರ್ಗ ಪ್ರತಿಷ್ಠ
4. ಪನದ ಉಬಯ ವೆದಂತ ತುರುಗ ಚತ್ರ ಚಾಮರಂಗದೂಳಾಕಲಿ ಮ
5. ದಸ್ತ ತಿರುಮಾಲು ಯೆಟೂರು ಲಕ್ಷಿಮಿ ಕುಮಾರ ಯಿಂಮಡಿ ಮುಂಮೂತಿ ಆನಿಗೊ
6. ಂದಿ ಕನಕಗಿರಿ ಸಮಸ್ತಾನ ರಾಜಗುರುವು ಕ್ಕಿಂದ ಬಡೆರಾಮರಾಜರು ಲೊಕಯಂ
7. ಮ ರಾಜರು ಯಿವರು ಯಿಬ್ಬರು ಕಲತು ಮಾತನಾಡಿಕುಂಡಿದ್ದಯೇನು ಅಂದರೆ ಹಂ
8. ಪಿ ಪಟ್ಟಣ ಸೃಂಗಾರು ಯಾವತ್ತು ನೊಡತಕ್ಕದಂದು ಅಲೊಚನೆ ಮಾಡಿದರು ಅ
9. ದು ಯಾಗಂದರೆ ಕನಕಗಿರಿ ಯಿರನಾಯಿಕನು ಮುತೊಟಿ ಶಿದ್ದನಗೌಡ ಮೆಣದಾ
10 ಳುದ ದೆಸಾಯಿಳ ಮನೆತನದವರು ಕನಕಗಿರಿ ಗುರಿಕಾರ ಕರೆ ಸಕ್ರಪ್ಪನ ಯಿತನ ವ
11. ಂಶಾವಳಿ ಅಯಭಾಗದವರು ಯಿಂತಿಷ್ಟು ಭಂಟರಿಗೆ ವಂದು ಪತ್ರಲೆ ಬರೆದು ಕರೆ
12. ಕಳಿಯಿಸಿಗೊಂಡರು ಯಿ ಭಂಟರು ಯೆನು ಮಾಡಿದರೆಂದರೆ ತಂಮ ಆಯುಧಂಗ
13. ಳು ಸಹಿತ ತಗೆದುಕೊಂಡು ಹೊರಟಬಂದರು ತರುವಾತ ದೊರಿಗಳಿಗೆ ಶಿರಬಾಗಿ

14. ಸಲಾಮು ಕೊಟ್ಟು ನಿಂತರು ಭಂದಂತ ಭಂಟರಿಗೆ ಭೋಜನ ವಂಗೈಶಿ ತಾಂಬೂ
15. ಲ ಮಲಿಶಿ ಯಿನ್ನು ಯಲಾ ಭಂಟರೆ ನಾ ಅದರ ಹಂಪಿ ಪಟ್ಟಣ ಸ್ಯುಂಗಾರ ಯಾ
16. ವತ್ತು ನೊಡುವುದಕ್ಕೂ ಪ್ರಯಾಣವಂ ಗೈದು ಯಿರುವೆವು ನೀವು ಜಾಗ್ರ ಲಿ
17. ಆನೆ ವಂಟಿ ಕುದುರೆ ಮಂದಿಯಬಲ ಯಾವತ್ತು ಶಿದ್ದ ಮಾಡಿರಿಯೆಂದು ಧೊ
18. ರಿಗಳು ಸುತ್ತುಮತ್ತುವರು ಆದ ಬತುವಸಿಂದ ಆನೆಗ್ರ ಅಂಬರವಂ ಆತಿ
19. ಅಗಲಾಚತ್ರಿಗಿಯಿರಿಸಿ ಅಗಲು ದಿವಿಟಿಗಿ ಬಿರಂನಗಾಳಿಯೆದ್ದಾಳಿ ಭರಗಾ
20. ಳಿ ನಾನಾ ವಾದ್ಯಂಗಳು ಸಂಗಾತ ದಂಡು ದಾಬಲ ಯಾವತ್ತು ಕೂಡಿ ಹಂಪಿ ಪ
21. ಟ್ಟಣಕ್ಕೆ ಹೊರಟರು ಬಂದ್ರು ಆವಾಗ ಯೆನು ಮಾಡಿದನಂದರೆ ಕಂವತಿಗೆ ರಾಮ
22. ದೇವರಿಗೆ ವುದ್ದಾನ ವಿರಬದ್ರ ದೇವರಿಗೆ ಸರ್ವ ಲಿಂಗಕ್ಕೆ ಪೂಜೆಯಂಗೈದು ತರು
23. ವಾತ ತಾವು ಯಿಳ ಸ್ಥಳಕ್ಕೆ ಬಂದು ದ್ಯಾನವಂ ಮಾಡಿ ಭೋಜನವಂಗೈದರು
24. ತಂಬೂಲವಂ ಮೆಲಿದು ತರುವಾತ ತಂಮ ಗ್ರಾಮಕ್ಕೆ ವರಟು ಬರೊ ಆದಿ
25. ಯಲಿ ವಿಟ್ಲರಾಯನ ಗುಡಿ ಬಿದಿಯಲ್ಲಿ ಬರುವಾಗ ಮತ್ತು ಜರಮಾನ(ಲೆ?) ರಾಜು
26. ನ ದಂಡು ಕಂಡರು ಕಂಡು ತರುವಾತ ಆವಾಗ ಕನಕಗಿರಿ ನಾಯಕ ಹಿರೇನಾಯಕ
28. ಗೆ ಬಾಳ ಕೊಪದಿ ಪಿತನಗಿಶಿಲ ಭಕ್ತರದ ಅಂಗಿಯಲೆ ಮಾನದ ಕತ್ತಿಯಿಂಂದ್ರೆ
29. ಜಿತಾಲು ಗುರಿಕಾರದ ಕರೆಸಕ್ರಮ್ಮನ ಮಗ ಟೊಪಿ ಬಸವಂತ ತಂಮ ಚನ್ನಬಸ
30. ವ ಯಿವರ ಕೈವಳಗೆ ಕತ್ತಿ ಡಾಲು ನಡಿವಿನೊಳಗೆ ಜನಮದಂಡಿವು ಮುತೊಟಿ ಶಿ
31. ದ್ದನಗೌಡ ಮೆಣದಾಳು ದೆಸಾಯಿಗಳ ಮನೆತನದವರು ತಳವಾರಗಟ್ಟಿ ಯಿರೆ
32. ನಾಯಕ ತಿಂಮನಾಯಕ ಯಿವರು ಸಹಿತವಾಗಿ ಲಡಾಯಕ್ಕೆ ಸಿದ್ದವಾದರು ತ
33. ರುವತ ಜರಮಲೆ ರಾಜನ ದಂಡು ಯವತ್ತು ಕಡಿದು ಸಂಹಾರ ಮಾಡಿದರು ಆ
34. ವಾಗ ಜರಮಾಲೆ ರಾಜನ ದಂಡು ವೊಡಿ ಮುರುದು ವೊಯಿತು ತಳವಾರ ಗಟ್ಟಿ
35. ಯ ಬಾಗಿಲಗೆ ದಂಡು ಮುರುದು ವೊಯಿತು ಆವಾಗ ಟೊಪಿ ಬಸಪ್ಪನು ಸಹಾಸ
36. ದ ದಂಡು ಸಂಹಾರ ಮಾಡಿ ಸಹಾಸದ ಟೊಪಿಗಳು ತೆಗೆದುಕೊಂಡು ಬಂದನು ಬಂ
37. ದು ತರುವಾಯ ನದಿ ದಾಟೂ ವ್ಯಾಳ್ಯದಲ್ಲಿ ಜರಮಲೆ ರಾಜನ ದಂಡಿನ ಭಯಕ್ಕೆ
38. ಅಂಬಿಗರು ಹೊರಗಿದ್ದರು ರಾಜನ ಬಂದನು ಆವಗ ಯಿ ಟೊಪಿ ಬ

ಶಾಸನದ ಹಿಂಭಾಗ

39. ಸಪ್ಪನ ತಂಮ ಚನ್ನಬಸಪ್ಪ ತಳವಾರಗಟ್ಟಿ ಯಿರನಾಯಕ ತಿಂಮನಾಯಕ ಯೆಳ
40. ಮಂದಿ ಕೂಡಿ ದಂಡು ದಾಟುವಾಗ ಅರಗೊಲು ತುಂಬಿ ನದಿ ಹೊರಾಗುವ ವ್ಯಾಳಕ್ಕೆ
41. ನಡುಮದ್ಯದಲ್ಲಿ ರಕ್ಷಿತೆರೆ ಬೆಳ್ಳಮರದಲೆ ಕರಡು ಮದ್ಯ ಸುಸುತ್ರವಾಗಿ ಆಯು
42. ವುತಿ ತಪ್ಪಿಸಿ ನದಿ ಹೊರಾದರು ಆವಾಗ ದಂಡು ದುರ್ಬಲ ಮಾಡುತ್ತಾ ತಂಮ ಅರಮ
43. ನಿ ಮುಂದು ಶೆರಿದರು ಮತ್ತು ಟೊಪಿನ ಬಸಪ್ಪನು ಹಿರೆನಾಯಕನು ಯವರಿಬ್ಬ
44. ರು ಸಹಾಸ ಟೊಪಿಗಳು ತೆಗೆದುಕೊಂಡು ಬಂದು ದಿಬ್ಬಣ ಮುಂದೆ ತಂದು ಹಾ
45. ಕಿದರು ಮತ್ತು ಯಿತ್ತಲಾಗಿ ಧೊರಿಗಳು ಬಂದುಕಂಣಿಲಿ ನೊಡಿ ಬಳ ಸಂತೋಷವ
46. ಪಟ್ಟರು ಬಾಳ ಮನಸ್ಸಿಗೆ ತಂದುಕೊಂಡು ಯಿಂತ ಭಂಟರಿಗೆ ಬಹುಮಾನಂಗಳು
47. ಕೊಡುಬೇಕುಯೆಂದು ಅಲೋಚನೆ ಮಾಡಿದರು ಕುರುಗೊಡು ಸರನಾಡಿಗೆ 33
48. ಹಳ್ಳಿಗಳು ಹಿರೆನಾಯಕಗೆ 33 ಹಳ್ಳಿಗಳು ಗುರಿಕಾರ ಕರೆಸಕ್ರಮ್ಮನ ಮಗ
49. ಟೊಪಿ ಬಸಪ್ಪ ತಂಮ ಚನ್ನಬಸಪ್ಪ ಕನಕಗಿರಿ ಗುರಿಕಾರ ಮತ್ತು 12 ಕೂರಿಗೆ
50. ಮಾನ್ಯ ಯಿಶಾನ್ಯ ದಿಕ್ಕಿಗೆ ಯಂಕಟಪತಿ ಬಾವಿ ಕೆಳಗೆ ಮಡಿ ಭೂಮಿ ಮಾನ್ಯ
51. ಅಂಗ ವಿಳ್ಯವು ಅಡಿದಿಶಿರಿ ಬಜಾರದ ವಳಗಿಯಿದು 1 ನೆಕಲಮು ಮತ್ತು ಆನೆ
52. ಗೊಂದಿಗೆ ತಳವಾರಗಟ್ಟಿಗೆ ವಂಬತ್ತು 1 ಭಾಗ ಹೊಳೆದಾಟು ಉಬಾಬು ಅಂ
53. ಬಿಗರು ವರಾರಿ ಆದ ಕಾರಣ ಯಿ ಬಾಬುಯಿವರಿಗೆ ಕೊಟ್ಟಯಿರುತ್ತವಿಯಿದ್ದುನ
54. ಕಲಮು ಮತ್ತು ಯಾವಂದರೆ ಕಟ್ಟೆಮನೆ ಗೌಡರುಲಕ್ಕೆ ಹಿರಿಯರಿಗೆ ಯಿಂ
55. ನು ಕುಲದಲ್ಲಿ ತಪ್ಪು ತಿಪಾಟು ಕೊಡುವುದಕ್ಕೆ ಲಗ್ನ ಆದರೆ ವಿಳ್ಯ ತಾಂಬೂಲ ತೆಗೆ
56. ದು ಕೊಂಬುವದಕ್ಕೆ ಗುರುದಕ್ಷಿಣೆ ತೆಗೆಂಬುವದಕ್ಕೆ ಯಿಂನು ಹಿರಿಯರ ಬಾಬತ್ತಿ
57. ಗೆ ತಿರುಪಾಟು ಮಾಡುವುದಕ್ಕೆ ಸರ್ವಕಾರ್ಯಕ್ಕೆ ಯಿತ್ತನೇ ಭಾದ್ಯಸ್ತನು ಯಿ ಅಯಿ
58. ಭಾಗದವರಿಗೆ ಮನೆ ಜಾಗ 2 ಸಂಕಲಿಯಿರುವದು ಹೊತ ವಳ ದಾರಿಯಲ್ಲಿ
59. ಬರುತ ಬಲಕ್ಕೆ ಹೊಗುತ ಯಡಕ್ಕೆ ಯಿರುವದು ಮನೆ ಜಾಗ ಯಿನ್ನು ವಂಬತ್ತು ಮ
60. ಳ ಗಾಟು ಬ ಗೂಡಿಕಟ್ಟೆ ಮನೆ ಕಡೆಗೊಡಿ ಆನೆಗೊಂದಿವಳಿಗೆ ಶೆರಿರುವುದು ಯಿಂ
61. ನು ತಂಮ ಯಂತ ಯಂತ ಕುಲದವರು ಅಂದರೆ ತಂ ದೇವರು ಅಗದವರು ಆ

62. ಮರದವರು ಶಿಗಡೆವರು ಅಕ್ಕಲವರು ಯಿಂತಿಷ್ಟ ಕುಲದವರು ಯಿ ಆಯ್ದು ಬಾ

63. ಗದವರು ಆದ ಟೊಪಿನ ಬಸಪ್ಪಗೆ ಪ್ರತಿವಾದಿ ಮಾಡಕೂಡದು ಯಿಂದು ಯಿ ಬಡೆ

64. ರಾಮರಜರು ಹೊರೆಪಾಟಿರಾಜರು ಯಿವರು ಕೊಟ್ಟಂತ ಬಹುಮಾನಂಗಳು

65. ಮುಂದೆ ಸೂರ್ಯ ಚಂದ್ರಯ ಮಳುಣುಗೊವರಿಯಿಗೆ ಯಿರಬೇಕು ನಾವು

66. ಬರಕೊಟ್ಟಂತ ಬಹುಮಾನಂಗಳ ಯಿ ಕಂಚಿನ ಶಾಸನದಲ್ಲಿ ಯಿರುವ ವಚನ

67. ಗಳು ಮುಂದೆ ಹುಟ್ಟಿದಂತ ಧೊರಿಗಳು ನಡಿಸಿಕೊಡಬೇಕು ನಿವು ನಡಸಿ ಕೊಡ

68. ವವುದಿರೆ ನಂಮ ಹಿರೆ ಮಗುವಿನ ಕೊರಳು ಕುಯಿದಾಗೆಯೆಂದು ಯಿತ ಕಂಚಿನ

69. ಶಾಸನದಲ್ಲಿ ಬರಕೊಟ್ಟುರುತಿವಿ ಯಿ ಕಂಚಿನ ಶಾಸನಕ್ಕೆ ಸಾಕ್ಷಿಗಳು ದಾ

70. ರದಾರರು ಅಂದರೆ ಕನಕಗಿರಿ ಹಿರೆನಾಯಕ ದಸ್ತೂರಿಕದ್ದವು ಮುತ್ತೊಟಿನಾಡ

71. ಗೌಡ ದಸ್ತೂರಿ ಕುದ್ದು ಮೆಣದಾಳು ದೆಸಾಯಿಗಳ ತಮ್ಮನವರು ದಸ್ತೂರಿ ಕು

72. ದ್ದು ತಳವಾರಗಟ್ಟಿ ಗೊಸಲು ಹಿರೆನಾಯಕ ತಿಂಮನಾಯಕರ ದಸ್ತೂರಿ ಕುದ್ದು


ಬಿಕ್ಕಂತ್ರಿಣಾಮದವರು
ಆದಬೊಳರಾಯರ ಬರಹಾ

ಯಿಗಟು ಗುರ್ತು ಕಿಷ್ಕಿಂದ ಬಡೆರಾಮ
ರಾಜರುಸ್ವ ದಸ್ತೂರಿ ಬರಹ
ಯಿಗಿಟು ಗುರ್ತು ದೊರೆ ಕಂದರಾಜು
ರು ಸ್ವ ದಸತೂರಿ ಬರಹಾ

ಶಾಸನದ ಮುಖಪುಟ



ಶಾಸನದ ಹಿಂಬದಿ



8. ತುಳುನಾಡಿನ ನೀಲಾವರದ ಶಾಸನಗಳು – ಒಂದು ಅಧ್ಯಯನ

ಡಾ. ಬಿ. ಜಗದೀಶ ಶೆಟ್ಟಿ

ವಿಜಯನಗರ ಕಾಲದ ಇತಿಹಾಸದಲ್ಲಿ ಕರಾವಳಿ ಕರ್ನಾಟಕದ ತುಳುನಾಡಿನಲ್ಲಿ ನೀರುವಾರ ಅಥವಾ ನೀಲಾವರ ಮುಖ್ಯ ಪಾತ್ರವನ್ನು ವಹಿಸಿತ್ತು. ಆಳುಪ ಹಾಗೂ ಹೊಯ್ಸಳ ಆಳ್ವಿಕೆಯ ಕಾಲಕ್ಕೆ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿಗೆ ಬಂದಿದ್ದ ನೀಲಾವರ ವಿಜಯನಗರ ಆಡಳಿತ ಕಾಲದಲ್ಲಿಯೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿತ್ತು. ವಿಜಯನಗರ ಕಾಲದ ಐದು ಶಾಸನಗಳು ಇಲ್ಲಿ ದೊರೆತಿವೆ. ಈ ಶಾಸನಗಳಲ್ಲಿ ನೀಲಾವರ ಗ್ರಾಮ "ನೀರುವಾರ ಪಂಚಮಿ ಗ್ರಾಮ"ವೆಂದು ಉಲ್ಲೇಖಿಸಲ್ಪಟ್ಟಿದೆ. ಈ ರೀತಿ ಉಲ್ಲೇಖಿತವಾಗಿರುವುದಕ್ಕೆ ಮುಖ್ಯ ಕಾರಣ ಇಲ್ಲಿನ ಪಂಚಮಿಕಾನಿನ ಸುಬ್ರಹ್ಮಣ್ಯನ ಆರಾಧನೆ ಮತ್ತು ವೃಶ್ಚಿಕ ಮಾಸದಲ್ಲಿ ನಡೆಯುವ ಪಂಚಮಿ ತೀರ್ಥ ಸ್ನಾನ. 'ನೀರುವಾರ' ಎಂಬ ಹೆಸರು ಬರಲು ಕಾರಣವನ್ನು ವಿಶ್ಲೇಷಿಸಿದರೆ ಇಲ್ಲಿ ಹರಿಯುವ ಸೀತಾ ನದಿಯ ನೀರಿನಿಂದ ಸ್ಥಳ ಆವರಿಸಿರುವುದೇ ಆಗಿದೆ.

ತುಳುನಾಡಿನಲ್ಲಿ ಆರಂಭವಾದ ವಿಜಯನಗರದ ಆಳ್ವಿಕೆ ಈ ಭಾಗದಲ್ಲಿ ಅನೇಕ ಧಾರ್ಮಿಕ ಕೇಂದ್ರಗಳು ಬೆಳೆಯುವುದಕ್ಕೆ ಕಾರಣವಾಯಿತು. ನೀಲಾವರದಲ್ಲಿ ದೊರೆಯುವ ವಿಜಯನಗರ ಆಳ್ವಿಕೆಯ ಮೊದಲ ಶಾಸನವೆಂದರೆ ಇಮ್ಮಡಿ ಹರಿಹರನ ಕ್ರಿ.ಶ. 1387ನೇ ಇಸವಿ ಮೇ 3 ಶುಕ್ರವಾರದಂದು ಬರೆಸಿದ ಶಿಲಾಶಾಸನ.[1] ಆಗ ಹೊನ್ನಾವರದ ಮಲ್ಲಪ್ಪ ಒಡೆಯರು ಬಾರಹಕನ್ಯಾಪುರದ ನಗರವನ್ನು ಆಳುತ್ತಿದ್ದರು. ಬಾರಕೂರು ಬಾರಹಕನ್ಯಾಪುರ ಎಂದು ಉಲ್ಲೇಖಿಸಲ್ಪಟ್ಟಿದೆ. ಅದು ಪ್ರಾಂತೀಯ ರಾಜಧಾನಿಯಾಗಿತ್ತು. ಆದರೆ ಬಾರಹಕನ್ಯಾಪುರ ನಗರ ಎಂಬುದಾಗಿ ಕರೆಯಲಾಗಿದೆ. ಆಗ ರಾಜಕುಮಾರ ಇಮ್ಮಡಿ ಬುಕ್ಕರಾಯನು ನೀರವಾರ ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಯುವರಾಜ ಬುಕ್ಕ ಎಲ್ಲಾ ಪ್ರಮುಖ ಬಿರುದುಗಳನ್ನು ಹೊಂದಿದ್ದ. ಆಗ ದುರ್ಗಾಭಗವತಿ ದೇವಾಲಯದ ಜೀರ್ಣೋದ್ಧಾರದ ವ್ಯವಸ್ಥೆ ಮಾಡಿ ವಿವಿಧ ಪೂಜೆಗಳಿಗೆ ದತ್ತಿ ಬಿಟ್ಟ ವಿವರ ಶಾಸನದಲ್ಲಿದೆ.

ಈ ಶಾಸನ ಆ ಕಾಲದಲ್ಲಿನ ಸುತ್ತಮುತ್ತಲಿನ ಊರುಗಳನ್ನು ಹೆಸರಿಸುತ್ತದೆ. ಉದಾ: ಕರಂದಾಡಿ (ಈಗ ಕರ್ದಾಡಿ), ಯಳುದಂತಳಿ (ಈಗಿನ ಯಳ್ಳೂಂಪಳ್ಳಿ), ಚೇರ್ಕಾಡಿ ಹಂನಿಹಳಿಮಂ (ಈಗಿನ ಹನೆಹಳ್ಳ) ಇತ್ಯಾದಿ. ಆಡಳಿತದ ಅಧ್ಯಯನದ ದೃಷ್ಟಿಯಿಂದ ಈ ಶಾಸನ ಬಹಳ ಗಮನಾರ್ಹವಾದುದು. ವಿಜಯನಗರ ಅರಸರು ರಾಜಕುಮಾರರಿಗೆ ರಾಜ್ಯದ ವಿವಿಧ ಭಾಗಗಳಲ್ಲಿ ಆಡಳಿತದಲ್ಲಿ ತರಬೇತಿ ನೀಡುತ್ತಿದ್ದರೆಂಬುದು ಈ ಶಾಸನದಿಂದ ನಮಗೆ ತಿಳಿದುಬರುತ್ತದೆ.

ಇನ್ನೊಂದು ಶಾಸನ ಕ್ರಿ.ಶ. 1407 ಸೆಪ್ಟೆಂಬರ್ 18ರಂದು ಹೊರಡಿಸಲಾದ ಒಂದನೇ ದೇವರಾಯನ ಶಾಸನ.[2] ಆಗ ಬಾರಕೂರಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದವನು ಬಾಚಣ್ಣ ಒಡೆಯ. ಅವನ ನಿರೂಪದಿಂದ ಶಿವದಾಸ ದೇವ ಅಯ್ಯಗಳು ನೀರನಾರದ ಅಧಿಕಾರಿಯಾಗಿದ್ದನು. ಈ ಅಧಿಕಾರಿ ಮತ್ತು ನೀಲಾವರದ ಗ್ರಾಮ ಪಟ್ಟೆಯಾದ ಜಗತ್ತ ಮುನ್ನೂರು ದೇವಿಗೆ ನೀಡಿದ ದಾನವನ್ನು ಶಾಸನ ದಾಖಲಿಸುತ್ತದೆ. ಸೇನಬೋವ ಹಾಗೂ ಕುಡುತೆಯ ಉಲ್ಲೇಖ ಶಾಸನದಲ್ಲಿದೆ.

ಸಂಗಮ ವಂಶದ ದೊರೆ ಮಲ್ಲಿಕಾರ್ಜುನನ ಶಾಸನ ನೀಲಾವರದ ಇನ್ನೊಂದ ಶಾಸನ. ಕ್ರಿ.ಶ. 1465ರ ಶಾಸನ ಇದು.[3] ಬಾರಕೂರಿನಲ್ಲಿ ಪಂಚರಿದೇವನ ಆಳ್ವಿಕೆಯಿರುವಾಗ ಮಹಾ ಮರುಳೇಶ್ವರ ರಾಮಚಂದ್ರ ದಣ್ಣಾಯಕರ ಆಜ್ಞೆಯ ಮೇರೆಗೆ ನೀರುವಾರದ ದುರ್ಗಾಭಗವತಿಗೆ ನೀಡಿದ ದಾನದ ಉಲ್ಲೇಖ ಇಲ್ಲಿದೆ. ಶಾಸನವನ್ನು ಬರೆದವನನ್ನು ಶರಣೇಶ

ಬಾಯಪ್ಪ. ಇದು ಹದಿನಾರು ಗ್ರಾಮ ಜಗತ್ತ ಮುನ್ನೂರು, ಪ್ರಧಾನಿ ವಿಠರಸ ಒಡೆಯ, ಕರಣಿಕ ಬಾಯಪ್ಪರನ್ನೂ ಹೆಸರಿಸುತ್ತದೆ.

ವಿಜಯನಗರ ಆಳ್ವಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕ್ರಿ.ಶ. 1528ರಲ್ಲಿ ಹೊರಡಿಸಿದ ಇನ್ನೊಂದು ಶಾಸನ ನೀಲಾವರದಲ್ಲಿದೆ.[4] ವಿಜಯನಗರ ಆಳ್ವಿಕೆಯ ದಿನಗಳಲ್ಲಿ ಎಲ್ಲವೂ ಸರಿಯಾಗಿರಲಿಲ್ಲ ಎಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ. ಇಲ್ಲಿ ಬರುವ ಒಂದು ಉಲ್ಲೇಖ ಇಂತಿದೆ. "ನಾಲು ನಿಂಮ ಗ್ರಾಮವನು ಸ್ಥಾನವನು ಹಾನಿ ಮಾಡಿದ ಸಂಬಂಧ" ಅಂದರೆ ಆಗ ರಾಜ್ಯಪಾಲನಾಗಿದ್ದವನಿಂದ ಅಧಿಕಾರದ ದುರುಪಯೋಗ ನಡೆದಿರಬೇಕು. ಜನರಿಗೆ ತೊಂದರೆಯಾಗಿರಬೇಕು. ಅದಕ್ಕೆ ಪರಿಹಾರ ಕಾರ್ಯದಲ್ಲಿ ಊರಿನ ದೇವಾಲಯಕ್ಕೆ ದಾನ ನೀಡಿದ ವಿವರ ಶಾಸನದಲ್ಲಿದೆ. ನೀಲಾವರ ಗ್ರಾಮದಿಂದ ರಾಜ್ಯದ ಭಂಡಾರಕ್ಕೆ ಬರುವ ತೆರಿಗೆ, ಸಿದ್ಧಾಯದಲ್ಲಿ ಏಳುವರೆ ಕಾಟಿ ಗದ್ಯಾಣಗಳನ್ನೂ ದುರ್ಗಾಭಗವತಿಗೆ ಅಲ್ಲಿ ನಡೆಯುವ ವಿಶೇಷ ಪೂಜೆಯಾದ ನವರಾತ್ರಿ ಪೂಜೆಗೆ ದಾನವಾಗಿ ನೀಡಲಾಗಿತ್ತು. ಈ ಶಾಸನ ಕರಣಿಕ ತಿರುವನರಸನ ಬರಹ. ಇಲ್ಲಿ ಹಲವು ಬ್ರಾಹ್ಮಣ ಉಪನಾಮಗಳಾದ ಕಾರಂತ, ಕಲುಪುರ, ಉಪಾಧ್ಯ ಉಲ್ಲೇಖಿಸಲ್ಪಟ್ಟಿದೆ. ತೆರಿಗೆಯಾದ ಸಿದ್ಧಾಯದ ಉಲ್ಲೇಖವಿದೆ.

ನೀಲಾವರದ ಕೋಡಿ ಎಂಬಲ್ಲಿ ಹೊಸದಾಗಿ ದೊರೆತ ಶಾಸನವೊಂದು ಇಮ್ಮಡಿ ನರಸಿಂಹನ ಶಾಸನ.[5] ಬಾರಕೂರಿನ ರಾಜ್ಯಪಾಲ ಬಸವರಸ ಒಡೆಯ. ಇದರಲ್ಲಿ ಶಂಕರನಾರಾಯಣ ದೇವಸ್ಥಾನಕ್ಕೆ ನೀಡಿದ ದಾನವನ್ನು ಉಲ್ಲೇಖಿಸುವುದರಿಂದ ಆಗ ನೀಲಾವರದಲ್ಲಿ ಶಂಕರನಾರಾಯಣ ದೇವಸ್ಥಾನವಿತ್ತೆಂದು ದೃಢವಾಗುತ್ತದೆ.

ಒಟ್ಟಿನಲ್ಲಿ ಈ ಶಾಸನಗಳ ಅಧ್ಯಯನದಿಂದ ತಿಳಿಯುವಂತೆ ವಿಜಯನಗರಕಾಲಕ್ಕೆ ಹೆಚ್ಚು ಹೆಚ್ಚು ಜನರು ಭೂಮಾಲೀಕರಾಗಿ ಕಂಡುಬರುತ್ತಾರೆ. ಭೂಮಾಲಿಕರು ನಗರದಲ್ಲಿ ಹೆಚ್ಚಳವಾದಂತೆ ಅಧಿಕಾರಿ ವರ್ಗದಲ್ಲಿಯೂ ಹೆಚ್ಚಳವನ್ನು ಕಂಡುಕೊಳ್ಳಬಹುದು. ನೀಲಾವರದ ವಿಜಯನಗರ ಶಾಸನಗಳು ಜನನಗಳ ಬಗ್ಗೆ ಉಲ್ಲೇಖಿಸುತ್ತವೆ.[6] ಅವರು ಭೂಮಾಲಿಕರಾಗಿದ್ದರು. ಜನನ ಎಂಬುದು ಭೂಮಿ ಎಂಬ ಅರ್ಥದಲ್ಲಿ ತುಳುನಾಡಿನ ಶಾಸನಗಳಲ್ಲಿ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ಭೂದಾನಕ್ಕೆ ಒಪ್ಪಿಗೆ ನೀಡುವ ವ್ಯಕ್ತಿಗಳಾಗಿ ಉಲ್ಲೇಖಿಸಲ್ಪಟ್ಟಿದ್ದಾರೆ. ಆರುವಾರದ ಉಲ್ಲೇಖವನ್ನು ವಿಜಯನಗರ ಶಾಸನಗಳಲ್ಲಿ ಕಾಣಬಹುದು. ಆರುವಾರ ಎಂದರೆ ಭೂ ಅಡವು ಪದ್ಧತಿ.[7] ಇದರನ್ವಯ ಹಣ ನೀಡಿದವನಿಗೆ ಭೂಮಿಯನ್ನು ಪರಭಾರೆ ಮಾಡುವ ಪದ್ಧತಿಯಿತ್ತು. ಅಂದರೆ ಕೊಟ್ಟ ಹಣಕ್ಕೆ ಪೂರ್ಣ ಭದ್ರತೆಯನ್ನು ಕಾಣಬಹುದು. ಕೆಲವು ವಿದ್ವಾಂಸರು ಹಿಂದೆ ಅಭಿಪ್ರಾಯಪಟ್ಟಂತೆ ಅದು ತೆರಿಗೆ ಅಲ್ಲ. ತೆಖ ತೆರಿಗೆಯಾಗಿ ವಿಜಯನಗರ ಶಾಸನಗಳಲ್ಲಿ ಪ್ರಸ್ತಾಪವಾಗಿದೆ. ಆದರೆ ತೆಖ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತಿತ್ತು.[8] ಅದು ವಿಸ್ತಾರದಲ್ಲಿ ವ್ಯತ್ಯಾಸ, ಅಳತೆಯ ವಿವಿಧ ನೂತನಗಳು, ಫಲವತ್ತತೆಯ ವ್ಯತ್ಯಾಸ, ನೀರಾವರಿ ಸೌಲಭ್ಯ ಇವುಗಳನ್ನು ಅವಲಂಬಿಸಿತ್ತು. ತೆಖವನ್ನೂ ಕೆಲವೊಮ್ಮೆ ಬಿತ್ತುವ ಬೀಜದ ಆಧಾರದ ಮೇಲೆ ಕೆಲವು ಬಾರಿ ಸಿಗುವ ಗೇಣಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.

ಎರಡೂ ಸಂದರ್ಭಗಳಲ್ಲಿ ಭೂಮಿಯ ಹಣ ಮತ್ತು ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ತೆಖವನ್ನು ನಗದು ರೂಪದಲ್ಲಿ ಹಾಗೂ ವಸ್ತುವಿನ ರೂಪದಲ್ಲಿ ಸಂಗ್ರಹ ಮಾಡುವ ಕ್ರಮವಿತ್ತು. ತೋಟದ ಮೇಲೂ ತೆಖ ಸಂಗ್ರಹಿಸುವ ಕ್ರಮವಿತ್ತು. ಅಂತಹ ಸಂದರ್ಭದಲ್ಲಿ ನಗದಾಗಿ ಸಂಗ್ರಹ ಮಾಡಲಾಗುತ್ತಿತ್ತು.

ಒಟ್ಟಿನಲ್ಲಿ ವಿಜಯನಗರ ಶಾಸನಗಳು ನೀಲಾವರ ಮಧ್ಯಯುಗೀನ ಕಾಲದಲ್ಲಿ ವಹಿಸಿದ ಪಾತ್ರ ಅಲ್ಲಿನ ಮಹಿಷಮರ್ದಿನಿ ದೇವಾಲಯದ ಮಹತ್ವ, ಸ್ಥಳೀಯ ಆಡಳಿತದ ವಿವರಗಳು ಇತ್ಯಾದಿಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

ಟಿಪ್ಪಣಿಗಳು

1. *SII,* Vol. XXVII, No. 64.
2. *Ibid.,* No. 85.
3. *Ibid.,* No. 141.
4. *Ibid.,* No. 174.
5. ಬಿ. ವಸಂತಶೆಟ್ಟಿ, ಶಾಸನಗಳು ಹೇಳುವ ನೀಲಾವರದ ಇತಿಹಾಸ, ಲೇಖನ (ಉದಯವಾಣಿಯಲ್ಲಿ ಪ್ರಕಟಿತ).
6. Gururaja Bhat P., *Studies in Tuluva History and Culture,* Kallianpur, 1975, p. 169.
7. B. Jagadesha Shetty, *The Agro-Economic Relations and Social Structure in Dakshina Kannada,* A.D. 100-1600, Ph.D. Thesis, Mangalore University, p. 121.
8. *Ibid.,* p. 145.

No. 64
(A.R. No. 497 of 1928-29)
Nīlāvara, Udipi Taluk, South Kanara District

Slab (No. 8) set up in the *prākāra* of Mahishāsuramardini temple

Harihara II, 1387 A.D.

This record is dated Śaka 1310, Prabhava, Vaiśākha śu. 15, Friday, corresponding to 1387 A.D., May 3. The Śaka year was current.

It registers an assignment of income from lands to the temple of Durgā-Bhagavati by Bayiraṇṇa-voḍeya, son of Malla-gauḍa, a servant (?) of Irugappa-voḍeya, son of *mahāpradhāna* Bāyicheya-daṇṇāyaka, the residents of the village Niruvāra and the servants of the temple, for the worship and offerings to goddess Durgādēvi and for the repairs to the temple. The record states that the king was ruling from his *nelevīḍu* at Dōrasamudra and that Mallappa-oḍeya of Honnāvura was administering the city of Bāraha-Kanyāpura (modern Bārakūr) and *mahāmaṇḍalēśāvara, vīra-pratāpa, kumāra* Bukkarāya was in-charge of the administration of the town of Niruvāra-paṁchami.

TEXT

1 ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ । ತ್ರೈಲೋಕ್ಯ ನಗರಾರ[ಂಭ] ಮೂಲಸ್ತಂಭಾಯ ಶಂಭವೇ [॥]
2 ಶ್ರೀಗಣಾಧಿಪತಯೇ ನಮ[ಃ*] । ದುರ್ಗಾಯೈ ನಮ[ಃ*] ॥ ಸ್ವಸ್ತಿಶ್ರೀ ಜಯಾಭ್ಯುದಯ ಶಕವರು –
3 ಷ ೧೩೧೦ನೆಯ ಪ್ರಭವ ಸಂವಛರದ ವಯಶಾಖ ಶು ೧೫ ಶು ಶ್ರೀ
4 ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪೂರ್ವ್ವ ದಕ್ಷಿಣ ಪಶ್ಚಿಮ ಸಮು–
5 ದ್ರಾದೀಶ್ವರಂ ಅರಿರಾಯ ವಿಭಾಡ ಭಾಷೆಗೆ ತಪ್ಪುವರಾಯರಗಂಡ ಶ್ರೀ ವೀ –
6 ರ ಹರಿಹರ ಮಹಾರಾಯನು ದೋರಸಮುದ್ರದ ನೆಲೆ ವೀಡಿಸಲು ಸುಖಸಂಕ –
7 ಥಾ ವಿನೋದದಿಂ ರಾಜ್ಯಂಗೆಯ್ಯುತ್ತಂ ಯಿಹಕಾಲದಲು ಹೊನಾವುರ–
8 ದ ಮಲ್ಲಪ್ಪ ಒಡೆಯರು ಬಾರಹ ಕಂನ್ಯಾಪುರದ ನಗರಮಂ ಪ್ರತಿಪಾಲಿಸು –
9 ತ್ತಂ ವಿದ್ದಂದು ಶ್ರೀಮಂನ್ಮಹಾಮಂಡಳೇಶ್ವರಂ ಅರಿರಾಯವಿಭಾಡ ಭಾ–
10 ಷೆಗೆ ತಪ್ಪುವರಾಯರಗಂಡ ಶ್ರೀ ವೀರಕುಮಾರ ಪ್ರತಾಪ ಬುಕ್ಕರಾಯ[ರು] ನಿರುವಾರ –
11 ಪಂಚಮಿಯ ಗ್ರಾಮವಾ[ಳಿ]ದ್ದಲ್ಲಿ ಅನ[ಂ*]ತರಸ ಒಡೆಯರ ನಿರೂಪದಿಂ ಶ್ರೀ ಮಂ
12 ನ್ಮಹಾಪ್ರಧಾನಂ ಬಯಿಚೆಯದಂಣಾಯಕರು ಕುಮಾರ ಇರುಗಪ್ಪ ಒಡೆಯ –
13 ರ ಮನೆಯ ಮಲ್ಲಗೌಡೆಯರ ಮಗ ಬಯಿರಂಣಗಳು ಆ ನಿರುವಾರದ ದುರ್ಗ್ಗಾ –
14 ಭಗವತಿ ಸ್ಥಾನವನು ನಾಲ್ವರು ಮುಕಾಲು ವಡ್ಡಿಗ[ಳುಂ] ಗ್ರಾಮವೂ ಒಪ್ಪಿ ಆರ –

15 ಸಿನವಾಕ ಕೊಂಡು ಆ ಮುಕಾಲು ವಡ್ಡಿಗಳು ಗ್ರಾಮವೂ ಬರಸಿದ ಶಿಲಾಶಾಸನದ
16 ಕ್ರಮವೆಂತೆಂದಡೆ ಆ ಭಗವತಿಯ ಸ್ಥಾನವನು ಜೀರ್ನ್ನೋರ್ದ್ಧಾರವ ಮಾಡಿಸಿ ಆ ದುರ್ಗ್ಗಾ ಭಗ–
17 ವತಿಗೆ ಆ ಪಂಚಮಿಯ ನಾಗರಿಗೆವೂ ಆಂಗರಂಗಭೋಗ ಆ[ಗ್ರ] ಶ್ರೀ ಬಲಿ ಆಯನ ನ –
18 ಯಿವೇದ್ಯ ಮುಂತಾದವಕ್ಕೆ ಆ ಚಂದ್ರಾರ್ಕ್ಕಸ್ಥಾಯಿಯಾಗಿ ನಡವಂಥಾ ಕಟಳಿಯ
19 ವಿವರ ಆದೇವಿಯ ಕುಳಾ[ಗ್ರ] ಶಿವಡಿ ಪ್ರಮಾ[ಣ] ನಿರುವಾರ ಗ್ರಾಮದಿಂ ಭತ್ತ ಅಕ್ಕಿ ಸಹ
20 ಭತ್ತಮೂ ೬೮೮ ಹಾ ೧೩[೦] . ಕಾಟಿ . . ತೆಂಗಿನೆಂಣೆಹಾ ೧೩೩ ಕರಂದಾಡಿ–
21 ಯಿಂ ಭತ್ತಮೂ ೧೨೮ ಹಾ ೩೫ ಯೆಂಣೆ ಹಾ ೩೮೧ ಉದಂಪಾಡಿ ಪೂಣಬೆ – ಭಡಿ
22 ಬಾಳಿಂ ಭ ಮೂ ೧೫[೨] ಹಾ ೩೩ ಎಳ್ಳೆಣ್ಣೆ ಹಾ ೩೨ . . ದಂಪಳಿಯ[೦] ಮೂ ೨೦೫ ಹಾ ೩೪ ॥ ತುಪ್ಪ
23 ಹಾ ೧ ॥ [ಬೀ]ಜ [ಮೊ]ಗರಿಂ ಮೂ ೩೧ ಕಾಗ ೧೮೨ ಚೆಕಾಡಿಯೊಳಗೆ ದೇವಸ್ವದಿಂ ಬಹ ಮು ೬೫
ಹ ೨ ॥
24 ಚಿತಾರಿಂ ಕಾಗ ೮೮೨ ಹಂನಿಹಳಿಯಂ ಭತ್ತಮೂ ೧೨ ಭಂಡಿಯವರ ದಿಂ – ಎಂಣೆ ಹಾ –
25 ೧೬ ಆಲೆಯದಿಂಗಂ [ಮೂ]೨ ಭತ್ತಮೂ ೨೪ . . ವೊ . ೦ಎಂಣೆ ಹಾ ೩ ಪೆರುಪಾಡಿಯಿಂ ಭ–
26 ತ್ತಮೂ ೬ ಆಂತು ನಾನಾಬಗೆಯಂ ಬ[ಹ] ಆದಾಯ ಕಾಹಿನ ಭತ್ತಸಹ ಭತ್ತ ಮೂ
27 ಹಾನಿ ೪೦ ಬಿಲು ಕದ ಮೂ ೧೩೨೩ ಹಾ ೩೮ । ರೊಕ್ಕಗ ೧೯೮೨ ತೆಂಗಿನೆಂಣೆ ಹಾನಿ ೧೭೭
28 ತುಪ್ಪ ಹಾನಿ ೧॥ ಯಿ ಭತ್ತ ಬಹರಾ[ಶಿ] ಒಕ್ಕಲುಗಳ ಸೀಮೆ ಸಾಂಮ್ಯ ಅಲ್ಲಲ್ಲಿಯ [ಆ ಕಡ] –
29 ಗ್ರಾಮಣಿಗೆವೂ ನಾಲ್ವರು ಮುಕ್ಕಾಲು ವಡಿಗಳಿಗೆ ಆಸ್ಥಾನಕೆ ನಡೆವಂಥಾ ವ ಭದವಿವರ –
30 ತಟ್ಟಗ ಬಾಳುಗಳಿಂದ ನಯಿ[ವೇ*]ದ್ಯಕ್ಕೆ ಶೂಲಪಾಣಿ ನಡಸುವರು ದೇವಿಯ ಕಂಚಿನ ಹಾನೆ –
31 ಯ್ಯಲು ಹಾನಿ [೫।] ನಾಡ ಹಾ ೨। ಉಭಯಂ ಹ ೭॥ ಗೆ ಆತನು ದಿನಂಪ್ರತಿ ಹಾ ೪॥ ಗೆ
32 ನಡಸುವ ಮಾಲೆ ೫೦ ಹಾ ೩ ಕ್ಕೆ ಹ ೧ ಪತ್ರೆಯ ನಡಸುವನು ಆ ಉಪಾರದ ಒಗರವ ಕೊಂಡು
33 ಹೋಹನು ಶ್ರೀರಾಮ ನಡಸುವದು ಆ[ಕ್ಕಿ] ಹಾ ೨ . . ರಾಘವ ನಡಸುವ ಅಕ್ಕಿ ಹಾ ೧
34 ಭರತ ನಡಸುವ ಅಕ್ಕಿಹಾ . ಉಂಣಿ ೫ ನಡಸುವ ಅಕ್ಕಿ ಮಾನ [೨] ಆಂನ್ತು ತಟ್ಟಿನ ಬಾಳು
35 ಗಳಿ . [ಡೆ] ನಡವದು ಪಯಿ . ಕಂ ಅಕ್ಕಿ . ೪ತಿಗೆ ಹಾನೆ ೧೪ ಕು ೭ ಯಿ ಅಕ್ಕಿಯ ನಿಕ್ಕಿ ಒಗ್ಗರ –
36 ವನುಕೊಂಡು ಹೋಗಿ ಎಂಣೆ ನಿಲಿತ . . ಉಳಿದಂಥಾ ಕಳಗದವರು ಮೂಜು ಹೊತ್ತಿನ .
37 ದೇವಿಯ ಶ್ರೀಕಾರ್ಯವ ನಡಸುವರು ಮು[ಟಿ]ನ ಬಾಳುಗಳಿಂದ ಕಾಂತು೧ ನಡಸುಮುಟು ೪ [ಕಾಣ] –
38 ಸು ನಡಸುವ [ಮು]ಟ್ಟು ೩ ಉಭಯಂ ೭ [ನ]ಡಿಸ[ದೆ] ವಡಿಗರು ನಡಸಿ ದಿನಂ ಪ್ರತಿ ನೈವೇ–
39 ದ್ಯಕ್ಕೆ ಕಂಚಿನ ಹಾನಿಯಲಿ ಅಕ್ಕಿ ಹಾನಿ ೩॥ ಯನೂ ಇಕ್ಕಿ ಒಗರವನು ಕೊಂಡು ಮೂಜು ಹೊ –
40 ತ್ತಿನ ಶ್ರೀ ಬಲಿಯನೂ ಪೂರ್ವದಲಾ ಮಾಡುವಂಥಾ ಕೆಲಸವನು ನಡಸಿ ಬಹರು ಉ –
41 ಭಯಂ ನೈವೇದ್ಯಕ್ಕೆ ದಿನಂ ಪ್ರತಿ ನಡವ ಅಕ್ಕಿ ಕಂಚಿನ ಹಾನಿ ೧೯ [ಕಾ] ೩ ಯನು ಕೊಟ್ಟು ಆ ಉಪಾ –
42 [ರ]ದ ಒಗರವನು ಉಂಡು ದೇವಿಯ ಶ್ರೀಕಾರ್ಯವ ನಡಸ ಬಹರು ದೇವಿಯ ಕೂತಾರ –
43 [ದಿಂದೆ] ಬೆಸುವರು ಒಕಲುಗಳ . ಲೆ . ತ್ತಿದಹ ಯೆಂಣೆಯಂ ನಡವ ನಂದಾದೀವಿಗೆ [ಉ] ನೈವೇ –
44 ದ್ಯಕ್ಕೆ [ತಪ್ಪದೆ] ವರುಷ ೧ ಕಂ ಭತ್ತ ಮೂ ೧೨ ಗಂಧ ಧೂಪಕ್ಕೆ ವರು[ಷ*] ೧ ಕಂ ಮೂ ೧೪ ಆ
45 . . . ಗೆ ವರುಷ ೧ ಕಂ ಮೂ ೪ ದೀವ[ಳಿ]ಗೆಯ ಪರ್ವ್ವದಲು ಆವಲಿಂಗೆ ಮೂ ೪॥ ಆ[ವ]ಲ

46 . ದೇವರಿ[ಗೆವೂ] . ದಿಯ ತಹವರಿಗೆ ಮೂ ೧ ಹಾ ೧೦ ಹಬಕೆ [ಭಂ]ಡಿಯವರದ
47 ಹಾ ೧[೩] . . ದಿಯ [ಪಟಿ]ಪಳಲಿನಾಯಕನ ತೋಟದಿಂ ನಡವ [ಎ]ಂಣೆ ಹಾ [೩] ಶಿವರಾತ್ರಿ-
48 ಯ ಪರ್ವ್ವದಲು ಮೂಱು[ತ]ರ ಶದಪೂಜೆ ಊ ಭೂತಬಲಿ ಪಂಚಾಮೃತದ ಬಾಳೆ -
49 ಹಾ ಹಂಣು ತೆಂಗಿನಕಾಯ ಅಡಕೆಲೆಗಳಿಗೆ ಭತ್ತಮೂ ೩। ಕೊಠಾರದೀ ಎಂಣೆ
50 ಹಾ ೨೬ ಕುಂಭಮಾಸದಾಷ್ಟಮಿ ನವಮಿಯಲು ಮಾಡುವ ಆಯನಕ್ಕೆ ಯೆಂಣೆ ಎ -
51 ಲೆ ಅಡಿಕೆ ಫಲವ[ನ]ಂಗಳಿಗೆ ಆ[ಱಾ]ಟ ಸಹಿತ ಬಾಕಾಡಿ ಗ ೩೦ ವೆಚ್ಚಕ್ಕೆ ಭತ್ತಮೂ ೪ . -
52 ದೇವಾಲ್ಯದಲು ದಿನಂ ಪ್ರತಿ ನಡವ ಅಗ್ರದಲು ಉಂಬ ಬ್ರಾಹ್ಮರ ಜನ ೬ ಆಡುವ ಜನ ೧
53 ಉಭಯಂ ಜನ ೭ಕಂ ಮೇಲು ವೆಚ್ಚ ಸಹ ಭತ್ತಮೂ ೧೩೪ ಹಾ ೩೦ ಆ ಸ್ರಂಣಂ .
54 . . ಕೀಳು ಶಾಂತಿಗೆ ವೂ ಮೂ 52 ತಂತ್ರಿಗೆ ಮೂ 24 ಮಲ್ಲೂರ ನೀಲ ಕಂಠ ಪಾ -
55 ಟಾಳಿಗೆ ಮೇಲುವೆಚ್ಚ ಉಡುಗೋಱಿ ಸಹ ಮೂ ೬೪ ಕಣಕಂಗೆ ಮೂ ೪೦ ಭತ್ತವನೆತ್ತಿ[ಂ] ತ -
56 ಹ ಮನುಷ್ಯಂಗೆ ಮೂ[೩೨] ಕೊಠಾರದವಂಗೆ ಮೂ ೩೨ ರಾಜಾಂಗಣವನೂ ಕೆ -
57 ಱೆಯನು ಕಸವನುಡುವರಿಗೆ ಮೂ ೧೮ ಕೆಱೆಯ ವುತ್ಸಂಗಳ [ಗ್ರಾ]ಸಕೆ ಮೂ-
58 ಡೆ ೨೦ ಅಂನ್ತು ನಯಿವೇದ್ಯ ಧೂಪ ತುಪ್ಪ ಅಡಕೆಲೆ ದೀವಳಿಗೆ ಶಿವರಾತ್ರಿಯ ಪ -
59 ಕ್ಷ ಅಯನ ಆಗ ನಡವ ಮನುಷ್ಯರ ಗ್ರಾಸ ಸಹಿತ ಸರ್ವವೆಚ್ಚ ಅಕ್ಕಿ ಭತ್ತ . ಉತಿಬ
60 ಸಹ ಭತ್ತ ದೇವಿಯ ಹಾಳಿಂಜಿಲು . . . [ರದ] ಮೂಡೆ ೯೯೭ ಹಾ ೨[೩]ಂ ಗ್ರಾಮಸಂದ ಮ -
61 ರಿಯಾದೆಯ ದೇವಿ ತಿಱುವ ಹೊಂನು ತೆತ್ತು ದೇವಾಲ್ಯಹಜಿಲು ಮ[ಜೆ]ವಿನ ಕೆಲಸ ಕಂಬೆ
62 ಮು . ಂಗೆ ಹತ್ತಿ . . . ತೆ . . [ಮಿಳಲಿ] ಆದವಸ್ತುವನು ವರುಷ ವರುಷ ತಪ್ಪ -
63 ದೆ ಆ ಗ್ರಾಮವು ಕಾಲು[ವ]ಪ್ಪಗಳು ಲೆಕವ ಮಾಡಿಸಿ ದೇವಿಯ ಭಂಡಾರಕೆ ಆದಾಯವ ಮಾ -
64 ಡುವರು ಯೀ ಧಂ[ರ್ಮ]ಕ್ಕೆ ಆರೊಬ್ಬರು ಕಂಟಕರಾದಾರು[ಜಿ]ವರವರು ವಾರಣಾಸಿಯ -
65 ಸಾವಿರ ಕವಿಲೆಯ ಕೊಂದ ದೋಷದಲು ಹೋಹರು ಯಿ ಧಂರ್ಮ್ಮವನಾರು ಕೆಲಬರು
66 ಪಾಲಿಸಿದವರಿಗೆ ವಾರಣಾಸಿಯಲು ಸಾವಿರ ಕವಿಲೆಯನು ಸಬ್ರಾಹ್ಮರಿಗೆ ಕೊಟ್ಟ ಫ -
67 ಲವಹುದು ಸವದತ್ತಂ ಪರದತ್ತಂ ವಾ ಯೋ ಹರೇತಿ ವಸಂಧರಾ ಷಷ್ಟಿವರುಷ ಸಹ -
68 ಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ [॥*] ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

No. 85
(A.R. No. 498 of 1928-29)
Nīlāvara, Udipi Taluk, South Kanara District

Slab (No. 8) set up in the *prākāra* of Mahishāsuramardini temple (second side)

Dēvarāya I, 1407 A.D.

This record is dated Śaka 1330, Sarvajit Āśvayuja ba. 1 Sunday, corresponding regularly to 1407 A.D., September 18. The Śaka year was current.

It registers a grant of provisions made for the offerings to goddess Durgādēvī of Nīruvāra by Śivadāsidēva-ayagaḷ, with the consent of the sixteen of the village, Jagattu-300, Pādāḷi and Sūlapāṇi. Bāchaṇṇa-voḍeya, under whose command Śivadāsidēva was in-charge of the administration of that village, was governing Bārakūru-rājya.

TEXT

1 ೦ ಶ್ರೀ ಗಣಾಧಿಪತಯೇ ನಮಃ [॥*] ನಿರ್ವಿಘ್ನಮಸ್ತು [॥*] ಸ್ವಸ್ತಿಶ್ರೀ ಜಯಾ
2 ೦ ಭ್ಯುದಯ ಶಕವರುಷ ೧೩೩೦ನೆಯ ವರ್ತಮಾನ ಸರ್ವಜಿತು ಸಂವಛರದ
3 ಆಸ್ವಯಿಜ ಬ ೧ ಆ ಶ್ರೀ ಮಂನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾ –
4 ಪ ದೇವರಾಯ ಮಹಾರಾಯರು ಸುಖರಾಜ್ಯಂ ಗೆಯುವ . ಕಾಲದಲು ಆ ದೇ –
5 ವರಾಯನ ನಿರೂಪದಿಂ ಬಾಚಂಣ ಒಡೆಯರು ಬಾರಕುರ ರಾಜ್ಯವನು
6 ಪ್ರತಿಪಾಲಿಸುತಿರ್ದ್ದಲ್ಲಿ ಬಾಚಂಣ ಒಡೆಯರ ನಿರೂಪದಿಂ ಸಿವದಾಸಿ –
7 ದೇವ ಆಯಗಳು ನೀರುವಾರದ ಅಧಿಕಾರವ ಮಾಡುವಲ್ಲಿ ಆ ಸಿವದಾಸಿದೇವ ಆ –
8 ಯಗಳೂ ನಿರವಾರದಗ್ರಾಮ ಹದಿನಾಱು ಜಗತ್ತ[೦] ಮುನೂಱು ಪಾದಾ –
9 ಳಿ ಸೂಲಪಾಣಿ ಸಹಿತವಾಗಿ ಒಡಂಬಟ್ಟು ಬರಸಿದ ಸಿಲಶಾಸನದ ಕ್ರಮವೆ –
10 ತಂದೆರೆ ನಿರುವಾರದ ದುರ್ಗ್ಗಾದೇವಿಯರ ನಯಿವೇದ್ಯಕ್ಕೆ . . . . . .
11 . . . . . . ಮುಂದೆ ಯಿಸ್ಥಾನಕ್ಕೆ ಆರಸೂಗ್ರಾಮ [ಹ]ದಿನಾಱೂ ಪಾ –
12 ದಾಳಿ ಸೇನಬೋವ ಸಹಿತವಾಗಿ ಮುಂದಕ್ಕೆ ಆಕ್ಕಿಯ ನಿಕ್ಕುವುದಕ್ಕೆ ಮಾ –
13 ಡಿದ ಕಳಗದವರು ಉಂಣಿಗೆಲ್ಲಿಯ ಮಗ ಉಳತ್ರಂ[ನ]ಗೆ ಹಾ[ನೆ]
14 ಅವನ ತಂಮ ಕ್ರಿಷ್ಣನ ಮಗ ಸೂಲಪಾಣಿಗೆ ಹಾನೆ ೧ ಕುಡುತೆ ೭ [ಉ] . .
15 ಲಯಮಗ ಕ್ರಿಷ್ಣಂಗೆ ಅಕ್ಕಿಮಾನ ೨ ಯಿ ಬ –
16 ರದ ಶಾಸನಕ್ಕೆ ಗ್ರಾಮ ಹದಿನಾಱಱೊಳಗೆ ಆರೊಬ್ಬರು ತಪ್ಪಿದರೆ ಆರ –
17 ಸಿಂಗೆ ಗ ೧೨೦ ಹೊಂನು ತಪ್ಪು ಆ ಚನಸ[ಪ್ಪ] ಸೆ[ಟ್ಟಿ] ಮಲೆದೇವನಿಗೆ ಹಂನೆರ –
18 ಡು [ಮು]ಡಿ ಭತ್ತವನೂ ತೆತ್ತು ಯಿ ಶಾಸನ ಪ್ರಮಾಣಂಗೆ ನಿಲುವರು ಎಂದು
19 ಆತ[ನೂ] ಗ್ರಾಮ ಹದಿನಾಱೂ ಒಡಂಬಟ್ಟು ಬರಸಿದ ಶಿಲಾಶಾಸನ ಯಿ –
20 ತಪ್ಪುದಕೆ ಅರಸಿನ ಸುಹಸ್ತದೊಪ್ಪ । ತ್ರಿಯಂಬಕ ದೇವರು ॥ ಗ್ರಾಮ
21 ಹದಿನಾಱಱ ಸುಹಸ್ತದೊಪ್ಪ ಜಗತಿ[ಸು]ತ[ನ]ವೊಪ್ಪ ಶ್ರೀ ದುರ್ಗ್ಗಾದೇವಿ
22 [ಕಂ] ಶ್ರೀ ಶ್ರೀ ಶ್ರೀ [॥*]

No. 141
(A.R. No. 495 of 1928-29)
Nīlāvara, Udipi Taluk, South Kanara District

Slab set up in the *prākāra* of Mahishāsuramardini temple

Mallikārjuna (1464 A.D.)

This is dated Śaka 1975, Tāraṇa, Phālguṇa, ba. Pañchami. The given Śaka year is a mistake for 1386 which corresponds to 1464 A.D.

It registers a gift of taxes made in the presence of the goddess Durgā-Bhagavatī at Niruvāra by Paṇḍaridēva-oḍeya under the orders of *mahāmaṇḍalēśvara* Rāmachandra-daṇṇāyaka when the king was stated to be ruling from the capital of Dōra-samudra. It also mentions the *hadināru* of Malla-grāma and three hundred *jagattu* and pradhāni Viṭharasa-oḍeya, *karaṇika* Bāyappa and the sixteen of the village as signatories.

TEXT

1 . . . .
2 . . . .
3 [ಭ್ಯು]ದಯ ಶಕವರುಷ ೧೯೭೫ ನೆಯ ತಾರಣ ಸಂವತ್ಸರದ ಫಾಲ್ಗುಣ ಬಹುಳ ಪ -
4 ಂಚಮಿಯಲು ಶ್ರೀ ಮಹಾರಾಜಾಧಿರಾಜ ರಾಜ ಪರಮೇಶ್ವರ ಪೂರ್ವ ದಕ್ಷಿಣ ಪಶ್ಚಿಮ
5 ಸಮುದ್ರಾಧೀಶ್ವರಂ ಅರಿರಾಯವಿಭಾ[ಡ] ಭಾಷೆಗೆ ತಪ್ಪುವರಾಯರ ಗಂ–
6 ಡ ಶ್ರೀ ವೀರಮಲ್ಲಿಕಾರ್ಜುನರಾಯರು ದೋರ ಸಮುದ್ರದ ನೆಲೆ ವೀಡಿನಲು ಸುಕ
7 ಸಂಕತಾ ವಿನೋದದಿಂ ರಾಜ್ಯವನು ಪ್ರತಿಪಾಲಿಸುವಕಾಲದಲು ಶ್ರೀ–
8 ಮಂನ್ಮಹಾಮಂಡಳೇಶ್ವರ ಆರಿರಾಯವಿಭಾ[ಡ] ಭಾಷಗೆ ತಪ್ಪುವರಾಯರಗ–
9 ಂಡ ಶ್ರೀ ರಾಮಚಂದ್ರ ದಣಾಯಕರ ನಿರೂಪದಿಂದ ನಿರುವಾರದ ದುರ್ಗಾಭಗ–
10 ವತಿಯ ಸಂನಿಧಿಯಲು ಬರಸಿದ ಶಿಲಾಶಸನದ ಕ್ರಮವೆಂತೆಂದರೆ ಪಂಡರಿದೇ–
11 ವ ಒಡೆಯರು ನಿರುವಾರದ ಹದಹಾಳಿಯ ನಿರಿಸಿ ಸುದನಷ್ಟವಾಗಿ ಕೆಟ್ಟದಕ್ಕೆ ಮಾ–
12 ಡಿದ [ಮಾ]ಳಗ್ರಾಮ ಹದಿನಾಱು ಜಗತ್ತು ಮೂನೂಱಿಕ್ಕೆ ಕಾರತಿಂಗಳಿಗೆ ಆಣಿ[ಕು]–
13 ಡಿ ಯೆಂ . . . . ಸಲ್ಲದೆಂದು ದುಶಾಸನವನು ದುರ್ಗಾಭಗವತಿಯ ಸ್ತಾನದ–
14 ಲಿ ನಾಲಕುಮುಕಾಲು ವಟಿ ನ . ಮುಂದಿಟ್ಟು ಒ[ಪ್ಪಿ] ಬರಸಿದ ಶಿಲಾಶಾಸನ
15 ಯಿ ಶಾಸನ ಪ್ರಮಾಣದಲಿ ಅರಸಿನ ಹಣ ಹಡಿಕೆಯನು ಬೆಳೆಯ ಮೇಲೆ ತಿದ್ದು–
16 ವರು ಯಿದಕ್ಕೆ ಆ ಗ್ರಾಮ ಹದಿನಾಱು ಜಗತು ಮೂನೂರರೊಳಗೆ ಆರೊಬರು ಆರಸಿ–
17 ನ ಹಣ ಹಡಿಕೆಗೆ ಆಡಬಿದ್ದು ಯೆಱುತೊಣಿಂಗೆ ಒಯಿದರೆ ಆರಸಿಂಗೆ

18 ನೂಱಿಯಿಪ್ಪತ್ತು ಹೊನ್ನತೆತ್ತು ಮ[ಠ]ಕೆ ಯಿ ಶಾಸನ ಪ್ರಮಾಣಕ್ಕೆ ನಿಲುವರು ನಿಲದೆ
19 . . ವರ ಬಾಳು ಸಮಸ್ತ ಅರಸಿಂಗೆ ಹರವರಿ ಯಿಶಾಸನಕೆ ಅರಸು ಅಳುಪಿ– ,
20 ದರೆ ಸಾವಿರದ ಒಂದು ಕವಿಲೆಯ ಕೊಂದದೋಷ ಆಗಮದದೋಷ ಅ ಬ್ರಂಹ್ಮರ
21 ದೋಷ ಗ್ರಾಮಜಗತಿ ಒಳಗೆ ಆರೊಬರಳುಪಿದರೆ ಸಾವಿರದ ಒಂದು ಕವಿಲೆ –
22 ಯ ಕೊಂದ ದೋಷ ತಂಮ ಪಿತ್ರುಗಳ ನರಕಕ್ಕೆ ಯೆತ್ತುವರು ಯಿಶಾಸನಕ್ಕೆ [ಪಂ]–
23 ಡರುದೇವ ಒಡೆಯರು ಒಪ್ಪ ಪ್ರಧಾನಿ ವಿಠರಸ ಒಡೆಯರ ಒಪ್ಪ ಕರಣಿಕ ಬಾಯ–
24 ಪ್ಪಗಳ ಒಪ್ಪ ಗ್ರಾಮ ಹದಿನಾಱ ಒಪ್ಪ ಯಿ ಶಾಸನಕ್ಕೆ ತ್ರಿಪುರುಷರು ಬಾಳಿ
25 ಯ ಶಿರಿಯ ಅಯಿವರು ಹಲರ ಒಪ್ಪ ಬರದಾತ ಕರಣಿಕ ಬಯಪ್ಪಗಳು
27 ದಾನಪಾಲನಯೋರ್ಮಧ್ಯೇ ದಾನಾನಾಂಜೇಯೋನುಪಾಲ ಪಾಲನಾದಚುತಂ
27 ಪದಂ [॥*] ಸ್ವದತ್ತಂ ಪರದತ್ತಂ ವಾ ಹೆರೇತು ವಸುಂಧರಂ ವಿಷ್ಟಾಯಾಂ ಜಾಯ–
28 ತೇ ಕ್ರಿಮಿ [॥*] ಯಿ ಧರ್ಂಮ . . . . ಂಗೆ ಅಚುತಪದವಿ ಯಿ ಧಂ[ರ್ಮ]–
29 ವನು ಕೆಡಿಸಬೇಕೆಂದು ಆಳು . . ವರಿಗೆ ವಾರಣಾಸಿಯಲಿ ಸಾವಿರ ಕವಿಲೆಯ
30 ಕೊಂದ ದೋಷ
31 ಯಿ ಶಾಸನಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

No. 174
(A.R. No. 494 of 1928-29)
Nīlāvara, Udipi Taluk, South Kanara District

Slab (No. 5) set up in the *prākāra* of Mahishāsuramardini temple

Kṛishṇadēvarāya, 1528 A.D.

This record is dated Śaka 1450 (expired), (1451 current), Sarvadhāri Jyēshṭha śu. 10, The *tithi* corresponds to 1528 A.D., May 28 Thursday. The details however, cannot be verified.

It registers a gift of 7½ *kāti* out of the *siddāya* tax due from the village Niruvāra for conducting a special worship on Navarātri days in the temple of Durgādēvi of the place, by Vijayaṇṇa-voḍeya, who was governing Bārakūru-rājya under the seal of Timmaṇa-voḍeya to whom it was made over by Kṛishṇarāya-Nāyaka who had himself obtained it from the king. Timmarasa, the *karaṇika* of Bārakūru wrote the record with the approval of Sūrapa-adhikāri.

TEXT

1 ಸ್ವಸ್ತಿ ಶ್ರೀ ಗಣಾಧಿಪತಯೇಂ ನಮ[ಃ।*] ಶ್ರೀ ಸರಸ್ವತ್ಯಾಯೇಂ ನಮ[ಃ।*]
2 ನಿರ್ವಿಘ್ನಮಸ್ತು [।*] ನಮಸ್ತುಂಗ ಸಿರತ್ಸುಂಬಿ ಚಂದ್ರಚಾಮರ ಚಾ–

3 ರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ [॥*] ಸ್ವಸ್ತಿ
4 ಶ್ರೀ ಜಯಾಭ್ಯುದಯ ಶಾಲಿವಾಹನಶಕ ೧೪೩೦ ಸಂದು ಆಯಿವ–
5 ತ್ತ ವೊಂದನೆಯ ವರ್ತ್ತಮಾನ ಸರ್ವ್ವಧಾರಿ ಸಂವತ್ಸರದ ಜೇಷ್ಟ ಶು ೧೮
6 ಲು ಶ್ರೀಮಂ ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ–
7 ಕುಷ್ಣರಾಯ ಮಹಾರಾಯರು ವಿಜಯನಗರಿಯ ಸಿಂಹಾಸನದಲು
8 ಚಿತ್ತಯಿಸಿ ಸಮಸ್ತ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನೆಯಾಗಿ ಸಕಲವರ್ನ –
9 ಧಂರ್ಮಾಶ್ರಮವನ್ನು ಪ್ರತಿಪಾಲಿಸುತಂ ಯಿಹಲಿ ಶ್ರೀ ಕುಷ್ಣರಾಯ ಮಹಾ –
10 ರಾಯರು ಬಾರಕೂರ ರಾಜ್ಯವನು ಕುಷ್ಣರಾಯ ನಾಯಕರಿಗೆ ಪಾಲಿಸಿ ಅವ –
11 ರು ಬಾರಕೂರು ರಾಜ್ಯವನು ತಿಂಮಂಣವೊಡೆಯರಿಗೆ ಪಾಲಿಸಿ ಅವರ ಮುದ್ರಧಾರ –
12 ಕರುಮಪ್ಪ ವಿಜೆಯಂಣ ವೊಡೆಯರು ಬಾರಕೂರ ರಾಜ್ಯವನಾಳುವ ಕಾ –
13 ಲದಲ್ಲಿ ವಿಜೆಂಯಂಣ ವೊಡೆಯರು ನಿರುವಾರದ ಗ್ರಾಮದ ದುರ್ಗ್ಗದೇವಿಗೆ
14 ಕೊಟ್ಟದಾನಪಟ್ಟೆಯ ಕ್ರಮವೆಂತೆಂದರೆ ನಾಉ ನಿಂಮ ಗ್ರಾಮವನು ಸ್ಥಾನವನು
15 ಹಾಸಿ ಮಾಡಿದಸಂಮಂದ ದುರ್ಗ್ಗಾದೇವಿಗೆ ನವರಾತ್ರೆಯ ಪೂಜೆಗೆ ನಿಂಮ ಗ್ರಾಮ –
16 ದ ಸಿದ್ಧಾಯದ ಹೊಂನಿನ ವೊಳಗೆ ಕುಳವಕಡಿದು ಧಾರೆಯನೆಱದು ಕೊಟ್ಟಕಾಟಿ
17 ೭॥ ಅಕ್ಷರದಲಿ ಏಳುವರೆ ಕಾಟಿಯನು ವಿಜಯಂಣೂಡೆಯರು ಕುಳವಕ –
18 ಡಿದು ಧಾರೆಯ ನೆಱದು ಕೊಟರು ಯೀ ಹೊಂನಿನ ಬಾಳವಿವರ ಮೂಡಣ ಆ –
19 ಧಿವಾಸದ ಗ್ರಾಮಿಣಿ ನಾರತರ ಮೂಲದ ಬಾಳು ತಂಣಿರ್ಕುಡೆಯೆಂಬ ಗದೆ ಬಿತ್ತು –
20 ವ ಬೆದೆಗಣಗಿಲು ನಾಘಂಡುಗದಲು ಮು. ೩ ಗ ಆ ಗದೆಮೇಲೆ ನಡವ ದೆವಸ ಕ ೧ ಕ್ಕೆ
21 ನಡವ ಅಕ್ಕಿ ಮು ೩ ಹಾನೆ ೫ ನಡುವಣ ಆಧಿವಾಸದ ಜಂನಿತುಂಬಿ ಕಲನ ಮೂಲದ
22 ಬಾಳು ಮಾವಿನ[ಗ*]ದ್ದೆಮನೆಯ ತೆಂಕ ಮಲ್ಲಗದೆ ಬಿತ್ತುವ ಬೆದೆಗಣನಿಲು ನಾಘಂಡುಗದ –
23 ಲು ಮು ೩ ಗದೆ ಆ ಗದೆ ಮೇಲೆ ಕಾ ೧ ಕೆ ಅಕಿಮು ೩ ಹಾನೆ ೫ ಪಡುವಣಧಿವಾಸದ ಬಾಚು
24 ಕಲುಕುರನಮಗ ಶಿವಕಲುಕುರನ ಮೂಲದ ಬಾಳುನೆಲ್ಲಿಯ ಅಯಿದಾಳ ಗದೆ ಕೆ[ಶ್ಯ]
25 ಉಪಾಧ್ಯನ ಗದೆಯ ಎರಡು ಗದೆಯ ಮೇಲೆ ನಡವ ದವಸ ಕಾ ೧ ಕೆ ನಡವ ಅಕ್ಕಿಮು ೩ ಹಾ –
26 ನೆ ೫ ಅಂತು ವೊಂಭತ್ತು ಮುಡಿಹಾನೆ ೧೫೩ ಅಕ್ಕಿಯಲು ಕಾಲಕಾಲಕೆ ತಪದೆ ನಡಸಿ –
27 ಕೊಂಡು ನವರಾತ್ರೆಯ ಪೂಜೆಯನು ಕಾಲಕಾಲ ತಪದೆ ನಡಸಿಕೊಂಡು ಆ ಚಂ–
28 ದ್ರಾರ್ಕ್ಕಸ್ಥಾಯಿಗಳಾಗಿ ಸುಖದಲು ಬಾಳುವಿರಿಯೆಂದು ವಿಜೆಯಂಣ ವೊಡೆಯರು ದು–
29 ರ್ಗ್ಗಾ ದೇವಿಗೆ ಧಾರೆಯ ನೆಱೆದು ಕೊಟ ಶಿಲಾಶಾಸನಂ ವಿಜಯಂಣ ವೊಡೆಯರ
30 ವೊಪ ಬಾರಕೂರ ಕರಣಿಕ ತಿಂಮರಸರ ಬರಹ ಸೂರಪ ಆಧಿಕಾರಿಗಳ ವೊಪು
31 ಧಾನಪಾಲನಯೋರ್ಮ್ಮಧ್ಯೇ ದಾನಾತ್ಸ್ರೆಯೋನ್ರುಪಾಲನಂ [।*] ದಾನಾಸ್ವರ್ಗ್ಗ ಮವಾಪ್ನೋ–
32 ತಿ ಪಾಲನಾದಚುತಂ ಪದಂ [॥*]

9. ಕೂಡ್ಲಿಗಿ ತಾಲ್ಲೂಕಿನ ವಿಜಯನಗರ ಕಾಲದ ಶಾಸನಗಳು

ಶ್ರೀ ಮಂಜನಾಯ್ಕ ಆರ್.

ದಖ್ಖನ್ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿಯೂ ಕರ್ನಾಟಕದ ಮಧ್ಯಭಾಗದ ಬಯಲು ಸೀಮೆಯಲ್ಲಿಯೂ ನೆಲೆಗೊಂಡಿರುವ ಕೂಡ್ಲಿಗಿ ತಾಲ್ಲೂಕಿನ ಸುತ್ತ ಉತ್ತರಕ್ಕೆ ಸೊಂಡೂರು, ಪಶ್ಚಿಮಕ್ಕೆ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ತಾಲ್ಲೂಕುಗಳು, ಪೂರ್ವಕ್ಕೆ ಮೊಣಕಾಲ್ಮೂರು ಹಾಗೂ ದಕ್ಷಿಣಕ್ಕೆ ಜಗಲೂರು ತಾಲ್ಲೂಕುಗಳಿವೆ. ಗುಡೇಕೋಟೆ ಹಾಗೂ ಕೂಡ್ಲಿಗಿ ಹೋಬಳಿಗಳಲ್ಲಿ ಕೆಲವು ಕಲ್ಲುಗುಂಡು ಬಂಡೆಗಳ ಗುಡ್ಡಗಳಿವೆ. ಆ ಭಾಗದಲ್ಲಿಯೇ ಅಷ್ಟೇನೂ ದಟ್ಟವಲ್ಲದ ಅರಣ್ಯ ಪ್ರದೇಶವಿದೆ. ಉಳಿದಂತೆಲ್ಲಾ ಬಯಲು ಸೀಮೆಯೇ. ಇಲ್ಲಿ ಯಾವ ನದಿಯೂ ಇಲ್ಲ. ಹಿರೇಹಗರಿ ಎಂಬ ಹೊಳೆಯು ತಾಯಕನಹಳ್ಳಿ, ಚಿನ್ನೋಬನಹಳ್ಳಿ ಭಾಗದಲ್ಲಿ ಹರಿದು ಮೊಣಕಾಲ್ಮೂರು ತಾಲ್ಲೂಕಿನ ಮಾರ್ಗವಾಗಿ ಸಾಗಿ ಹೋಗಿ ಮುಂದೆ ಆಂಧ್ರದಲ್ಲಿ ಹಗರಿಗೆ ಕೂಡಿಕೊಂಡು ತುಂಗಾಭದ್ರಾ ನದಿಗೆ ಸೇರಿಕೊಳ್ಳುತ್ತದೆ.[1]

ಜರ್ಮಲಿ ಹಾಗೂ ಗುಡೇಕೋಟೆ ಗುಡ್ಡಗಳ ಸಮೂಹಗಳನ್ನು ಬಿಟ್ಟರೆ ಈ ತಾಲ್ಲೂಕಿನ ಉಳಿದೆಲ್ಲ ಭಾಗವು ಬಯಲು ಸೀಮೆಯೇ ಆಗಿದೆ. ಇದರ ಸುತ್ತಮುತ್ತಲಿನ ಹಂಪಿ, ಸಂಗನಕಲ್ಲು, ಕುರುಗೋಡು, ಕಪ್ಪಗಲ್ಲು, ಮೊಣಕಾಲ್ಮೂರು, ಚಿತ್ರದುರ್ಗ ಮೊದಲಾದ ಗುಡ್ಡಗಳ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಪುರಾತತ್ವ ಅವಶೇಷಗಳು ದೊರೆತಿವೆ. ಈ ತಾಲ್ಲೂಕಿನ ಗುಡೇಕೋಟೆ, ಅಪ್ಪಯ್ಯನಹಳ್ಳಿ, ಕುಮತಿ, ತಿಮ್ಮಾಪುರ, ಬೆಳಗಟ್ಟಿ, ರಾಮದುರ್ಗ, ಹಳಸಗ್ರಾಮ (ಹಳಸಾಗರ), ಹುಲಿಕುಂಟೆ ಮುಂತಾದ ಕಡೆ ಶಿಲಾಯುಗದ ಮಾನವನ ಕುರುಹುಗಳು ದೊರೆತಿವೆ.[2]

ಕೂಡ್ಲಿಗಿ ಸ್ಥಳನಾಮದ ಕುರಿತು ಎರಡು ಐತಿಹ್ಯಗಳಿವೆ. ಮೊದಲನೆಯದು ರಾಮಾಯಣದ ಕಾಲದಲ್ಲಿ ವಾನರ ಸೇನೆಯು ಹಂಪಿಯ ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ಹಾಗಾಗಿ ಆ ಭಾಗಕ್ಕೆ ಕಿಷ್ಕಿಂಧೆ ಎಂದು ಹೆಸರಾಗಿತ್ತು. ಆಗ ವಾಲಿ, ಸುಗ್ರೀವ ಮುಂತಾದ ರಾಜರ ಆಳ್ವಿಕೆಗೆ ಈ ಭಾಗ ಒಳಪಟ್ಟಿರಬೇಕೆನಿಸುತ್ತದೆ. ಈ ವಾನರ ಸೇನೆಯು ಶ್ರೀರಾಮನ ಸಹಾಯಕ್ಕಾಗಿ ದಕ್ಷಿಣ ಲಂಕೆಯ ಕಡೆಗೆ ಅನ್ವೇಷಣೆ ನಂತರ ದಂಡೆಯಾತ್ರೆಗೆ ಹೋಗುವಾಗ ನಾನಾ ಕಡೆಯಿಂದಲೂ ವಾನರ ಸೇನೆಯು ಇಲ್ಲಿ ಕೂಡುತ್ತಿತ್ತಂತೆ. ಆದ್ದರಿಂದ ಈ ಸ್ಥಳಕ್ಕೆ ಕೂಡಲಿಗಿ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತಿದೆ. ಎರಡನೆಯ ಐತಿಹ್ಯದ ಪ್ರಕಾರ ವಿಜಯನಗರ ಕಾಲದಲ್ಲಿ ಇದೊಂದು ಮ್ಯಾಸರ ಹಟ್ಟಿಯಾಗಿದ್ದು ರಾಜಧಾನಿ ಹಂಪೆಗೆ ಜರ್ಮಲಿ, ಬೀರಲಗುಡ್ಡ, ಗುಡೇಕೋಟೆ, ಹರಪನಹಳ್ಳಿ, ಚಿತ್ರದುರ್ಗ, ಉಚ್ಚಂಗಿದುರ್ಗದ ಪಾಳೇಗಾರರು ವಿಜಯನಗರ ಅರಸರನ್ನು ಭೇಟಿಯಾಗಲು ಹೊಗುವ ಮುನ್ನ ಇಲ್ಲಿ ಸೇರಿ ಗುಪ್ತ ಸಮಾಲೋಚನೆ ನಡೆಸುವ ಸಲುವಾಗಿ ತಾವು ಕೂಡುವ ಸ್ಥಳವು ಅನ್ಯರಿಗೆ ತಿಳಿಯದಿರಲೆಂದು ಸನ್ನೆಯಾಗಿ ಕೂಡಲಿ ಇಲ್ಲಿಗೆ ಎಂದು ಕರೆಯುತ್ತಿದ್ದರಂತೆ. ಮುಂದೆ ಕಾಲಕ್ರಮೇಣವಾಗಿ ಕೂಡಲಿಗೆ ಎಂದು ಕರೆಯಲ್ಪಟ್ಟಿತು ಎಂಬುದಾಗಿ ತಿಳಿದುಬಂದಿದೆ ಹಾಗೂ ಬೇರೆ ಬೇರೆಯ ಕಡೆಯ ದಾರಿಗಳು ಬಂದು ಕೂಡಿ ಬೇರೆ ಬೇರೆ ಕಡೆ ಹೊಗುವ ಕೇಂದ್ರಸ್ಥಳದಂತಿರುವ ಈ ಸ್ಥಳಕ್ಕೆ ಕೂಡ್ಲಿಗಿ ಎಂದು ಹೆಸರು ಬಂದಿದೆ ಎಂದು ಸಹ ಹೇಳುತ್ತಾರೆ.[3]

ಪ್ರಾಚೀನ ಚರಿತ್ರೆಯಲ್ಲಿ ದಖ್ಖನ್ ಪ್ರಸ್ಥಭೂಮಿಯ ಭಾಗವನ್ನು ಕುಂತಲದೇಶ ಎಂದು ಕರೆಯುತ್ತಿದ್ದರು. ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಆಳಿದ ನಂದರು ಕುಂತಲ ದೇಶಕ್ಕೂ ಒಡೆಯರಾಗಿದ್ದರು. ಕ್ರಿಪೂ. ಮೂರನೆಯ ಶತಮಾನದಲ್ಲಿದ್ದ ಅಶೋಕನ ಸಾಮ್ರಾಟನು ಈ ಭಾಗವನ್ನೆಲ್ಲಾ ಆಳಿದನು. ಇಡೀ ಭರತಖಂಡದಲ್ಲಿ ಶಾಂತಿ, ಅಹಿಂಸೆ, ನ್ಯಾಯಗಳ ಪ್ರಚಾರ

ಮಾಡಿದನು ಎಂಬುದಕ್ಕೆ ಈ ತಾಲ್ಲೂಕಿಗೆ ಹೊಂದಿಕೊಂಡಿರುವ ಸಿದ್ಧಾಪುರ, ಜಟಂಗಿರಾಮೇಶ್ವರ, ಬ್ರಹ್ಮಗಿರಿ ಮುಂತಾದವುಗಳಲ್ಲಿ ದೊರೆತಿರುವ ಆತನು ಕೆತ್ತಿಸಿದ್ದ ಶಿಲಾಶಾಸನಗಳೇ ಸಾಕ್ಷಿಯಾಗಿವೆ. ಈಗಿನ ಕೂಡ್ಲಿಗಿ, ಮೊಣಕಾಲ್ಮೂರು, ಜಗಳೂರು, ಚಳ್ಳಕೆರೆ, ರಾಯದುರ್ಗ ಮೊದಲಾದುವನ್ನು ಒಳಗೊಂಡಿದ್ದ ಭಾಗವನ್ನು 'ಇಸಿಲ' ಪ್ರಾಂತ್ಯವೆಂದು ಕರೆಯುತ್ತಿದ್ದರು. ಅಶೋಕನ ಪ್ರತಿನಿಧಿಯಾದ ಮಹಾಮಾತ್ರನು ಈ ಪ್ರಾಂತ್ಯವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[4]

ಕುಡ್ಲಿಗಿ ತಾಲ್ಲೂಕಿನಲ್ಲಿ ಈವರೆಗೆ ಒಟ್ಟು 30 ಶಾಸನಗಳು ದೊರೆತಿವೆ. ಅವುಗಳಲ್ಲಿ ವಿಜಯನಗರ ಕಾಲದ ಏಳು ಶಾಸನಗಳ ಕುರಿತು ಈ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

ರಾಜಭಾವನಹಳ್ಳಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯದ ಬಳಿ ನಿಲ್ಲಿಸಿರುವ ಶಾಸನ ಕ್ರಿ.ಶ. 1419ರ ವಿಜಯನಗರ ದೇವರಾಯ ಮಹಾರಾಜನ ಕಾಲದಲ್ಲಿ ಲಖಪನ ಮಗ ಹರಿಯಣನು ಪಾಂಡ್ಯನಾಡ ನೊಣಬನರಸಿಯ ಕೆರೆಯನ್ನು ಆಳುತ್ತಿದ್ದಾಗ ಹರಿಯಣ್ಣನು ಹರಿಯ ಸಮುದ್ರ ಗ್ರಾಮವನ್ನು ಶ್ರೋತ್ರಿಯ ಅಗ್ರಹಾರವಾಗಿ ದಾನ ನೀಡುತ್ತಾನೆ. ಅಲ್ಲಿಯ ಬ್ರಾಹ್ಮಣರು ಆ ಗ್ರಾಮದ ಭೂಮಿಯನ್ನು ಸರಿಪಡಿಸಿ ಕೆರೆಯನ್ನು ಕಟ್ಟಿಸುತ್ತಾರೆ. ಈ ಕೆರೆಯ ಕೆಳಗೆ ಬೆಳೆಯುವ ಗದ್ದೆ, ಬೆದ್ದಲು, ಅಡಿಕೆ, ತೆಂಗು, ಹಲಸು, ಮಾವು, ಕಬ್ಬು, ಬಾಳೆ, ಎಲೆಯಬಳ್ಳಿ, ಅಲ, ಹರಸಿನ, ಕುಂಮರಿ, ಕಾಡಾರಂಬ, ಉಪ್ಪಿನಮೋಳೆ, ಸಿದ್ದಾಯ, ದಣಾಯಕರ ಸಾಮ್ಯ ಮುಂತಾದವುಗಳ ಮೇಲೆ ತೆರಿಗೆಯನ್ನು ತೆಗೆದು ಹಾಕುತ್ತಾನೆ. ಮಹಾಜನರು ಇತರೆ ಬ್ರಾಹ್ಮಣರಿಗೆ ತೆರಿಗೆ ರಹಿತವಾದ ಭೂಮಿಯನ್ನು ಬಿಟ್ಟರು ಎಂದು ತಿಳಿಸುತ್ತದೆ.[5]

ಮಾನನೂರು ಗ್ರಾಮದ ಗೊಂಬೆಗಾರ ಈರಣ್ಣನ ಮನೆಯ ಹಿಂಭಾಗದಲ್ಲಿನ ಕ್ರಿ.ಶ. 14ನೇ ಶತಮಾನದ ಶಾಸನದಲ್ಲಿ ಹರಿಹರದೇವ, ಮುದರಸ, ಪೆಗ್ಗಡೆಗುಲಗರಸ, ಸೇನಬೋವಮಾಳಪನು ಇದ್ದು ಮಾಲನೂರು ಮತ್ತು ಮಲ್ಲನಹೊಳೆಯ ಹೊಲಗಳ ಗಡಿಯನ್ನು ನಿರ್ಧರಿಸಿ ಕಲ್ಲು ನೆಟ್ಟರು[6] ಎಂಬುದಾಗಿ ತಿಳಿಸುತ್ತದೆ.

ಮೊರಬ ಗ್ರಾಮದ ಹೊಲವೊಂದರಲ್ಲಿ ನೆಟ್ಟಿರುವ ಕ್ರಿ.ಶ. 1528ರ ಶಾಸನ ವಿಜಯನಗರ ಕೃಷ್ಣದೇವರಾಯನ ಕಾಲದಲ್ಲಿ ಎಲಬರಿಗೆಯ ಮಲ್ಲಪಂಣನು ತನ್ನ ತಾಯಿ ವೀರಮ್ಮಳಿಗೆ ಪುಣ್ಯವಾಗಲೆಂದು ಒಂದು ಮಳಿಗೆಯನ್ನು ಕಟ್ಟಿಸಿ, ಅದನ್ನು ಮಲಪುರದಲ್ಲಿ ನಡೆಯುವ ಜಾತ್ರೆಯಿಂದ ಬಂದ ಸುಂಕದ ಜೊತೆಗೆ ಮತ್ತು ಪಾಂಡ್ಯನಾಡಿನಲ್ಲಿರುವ ಮೊರಬದಲ್ಲಿ ಭೂಮಿಯನ್ನು ಸೂರ್ಯನಾರಾಯಣ ದೇವರಿಗೆ(?) ದಾನ ನೀಡಿದ್ದನ್ನು ತಿಳಿಸುತ್ತದೆ.[7]

ಉಜ್ಜಿನಿ ಗ್ರಾಮದ ಸಿದ್ಧೇಶ್ವರ ದೇವಾಲಯದ ಗರ್ಭಗೃಹದ ಗೋಡೆಯ ಪಕ್ಕದಲ್ಲಿ ಬಿದ್ದಿರುವ ಕ್ರಿ.ಶ. 1539ರ ಶಾಸನ ವಿಜಯನಗರ ಅಚ್ಯುತರಾಯನು ಬ್ರಾಹ್ಮಣರಿಗೆ ನೀಡಿದ ಆನಂದನಿಧಿ[8] ದಾನದ ಬಗ್ಗೆ ತಿಳಿಸುತ್ತದೆ.

ಕೊಟ್ಟೂರು ಗ್ರಾಮದ ಕರಣಕನ ಮನೆಯ ಮುಂದಿನ ಗೋಡೆಗೆ ಸೇರಿಸಿರುವ ಕ್ರಿ.ಶ. 1548ರ ಶಾಸನ ವಿಜಯನಗರ ಸದಾಶಿವರಾಯನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ರಾಜರಾಜನು ಕೊಟ್ಟೂರು ಸೀಮೆಯ ನಾವಿದರಿಗೆ ತೆರಿಗೆ ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ. ದಾನಕ್ಕೆ ಸಂಬಂಧಿಸಿದ ಆಜ್ಞೆಯು ತಿಮ್ಮೋಜ, ಭದ್ರೋಜ, ಕೊಂಡೋಜ ಮತ್ತು ಇತರೆ ಪ್ರತಿನಿಧಿಗಳಿಗೆ ಸಂಬಂಧಿಸಿದುದಾಗಿದೆ.[9]

ಗಜಾಪುರದ ಉಪಗ್ರಾಮವಾದ ದೇವಲಾಪುರದ ಪಾಳು (ಶಿಥಿಲವಾದ) ವಸಂತ ಮಲ್ಲಿಕಾರ್ಜುನ ದೇವಾಲಯದ ಮುಂದೆ ಬಿದ್ದಿರುವ ಮುರಿದ ಕಂಬದಲ್ಲಿನ ಕ್ರಿ.ಶ. 1552ರ ಶಾಸನ ವಿಜಯನಗರ ಸದಾಶಿವರಾಯನ ಆಳ್ವಿಕೆಯಲ್ಲಿ ಬಯಪ್ಪನಾಯಕನ ಮಗ ಕೃಷ್ಣಪ್ಪನಾಯಕನ ಕಾರ್ಯಕರ್ತನು ಮತ್ತು ವೇಲೂರಿನ ತಿಮ್ಮಪ್ಪನಾಯಕನ ಮಗನಾದ ರಾಮಪ್ಪ ನಾಯಕನು ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ಪನ್ನುಲ-ಸುಂಕನಹಳ್ಳಿಯನ್ನು ದಾನ ನೀಡಿದ್ದನ್ನು

ಉಲ್ಲೇಖಿಸುತ್ತದೆ. ಈ ಗ್ರಾಮವನ್ನು ಕೋನಯ್ಯರಾವುತನ ಮಗ ಮುಖವೇಣಿಯ ಮುಸಿಯ ರಾವುತನು ದೇವಸ್ಥಾನದಲ್ಲಿ ಎರಡು ನಾಗಸ್ವರ ಮತ್ತು ಎರಡು ಡೋಳುಗಳನ್ನು ನುಡಿಸುವುದಕ್ಕೆ ಅನುಭೋಗಿಸುವುದೆಂದು ತಿಳಿಸುತ್ತದೆ. ಈ ಶಾಸನವನ್ನು ಕೆತ್ತಿದ ಅಕ್ಕಸಾಲಿಕ ಸಿರಿಯಣ್ಣನಿಗೆ ಗ್ರಾಮದಲ್ಲಿ ಒಂಗು ಮಾನ್ಯದ ಭೂಮಿಯನ್ನು ದಾನ ನೀಡಲಾಯಿತು ಎಂದು ತಿಳಿಸುತ್ತದೆ.[10]

ಹುಲಿಗುಂಟ ಗ್ರಾಮದ ಕೆರೆಯ ಕಟ್ಟೆಗೆ ಸೇರಿಸಿರುವ ಕ್ರಿ.ಶ. 1556ರ ಶಾಸನದಲ್ಲಿ ಬಯಕಾರ ರಾಮಪ್ಪಯ್ಯನು ತನ್ನ ಮಗಳು ಅಚ್ಯುತಮ್ಮಳ ನೆನಪಿನಲ್ಲಿ ಕಟ್ಟಿಸಿದ ಬಾಲಕೃಷ್ಣ ದೇವರ ಗುಡಿ ಮತ್ತು ಅಚ್ಚುತಂಮಾಪುರ ಗ್ರಾಮದ ಉಲ್ಲೇಖವಿದೆ.[11]

ಕೊಟ್ಟೂರು ಗ್ರಾಮದ ಕರಣಿಕರ ಮನೆಯ ಮುಂದೆ ಬಿದ್ದಿರುವ ಕ್ರಿಶ. 1580ರ ಶಾಸನ ವಿಜಯನಗರ ರಾಮರಾಜಯ್ಯನ ಮಗನಾದ ತಿಮ್ಮರಾಜನು ಮಹಾ ಅರಸು ಆನೆಗೊಂದಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ರಾಜನ ಕಾರ್ಯಕರ್ತನಾದ ಬಾಗುಳಿಯ ಮಾಚೆನಾಯಕನ ಮಗನಾದ ವಾದಿನಾಯಕನು ಕೊಟ್ಟೂರು ಸೀಮೆಯ ಕುರುಬರಿಗೆ ಕುರಿಗಳ ಮೇಲಿನ ತೆರಿಗೆಯ ವಿನಾಯಿತಿ ನೀಡಿದ್ದನ್ನು ತಿಳಿಸುತ್ತದೆ ಹಾಗೂ ಕೊಟ್ಟೂರು ಸೀಮೆಯು ಹಸ್ತಿನಾವತಿವಳಿತದ ಪಾಂಡ್ಯ ನಾಡಿನ ಕೋಗಳಿವೇಂಠೆಗೆ ಸೇರಿತ್ತು ಎಂದಿದೆ.[12]

ಶಾಸನದ ಗ್ರಾಮಗಳು

ಕ್ರ.ಸಂ.	ರಾಜವಂಶ	ಗ್ರಾಮದ ಹೆಸರು	ದೊರೆತಿರುವ ಶಾಸನಗಳ ಸಂಖ್ಯೆ
01	ವಿಜಯನಗರ	ರಾಜಬಾವನಹಳ್ಳಿ	01
02	ವಿಜಯನಗರ	ಮಾಲನೂರು	01
03	ವಿಜಯನಗರ	ಮೊರಬ	01
04	ವಿಜಯನಗರ	ಕೊಟ್ಟೂರು	02
05	ವಿಜಯನಗರ	ಗಜಾಪುರ	01
06	ವಿಜಯನಗರ	ಹುಲಿಗುಂಟ	01
	ಒಟ್ಟು	–	07

ಪ್ರಸ್ತುತ ಪ್ರದೇಶಕ್ಕೆ ಸಂಬಂಧಪಟ್ಟಂತೆ 225 ಗ್ರಾಮಗಳಿದ್ದು ಇವುಗಳ ಪೈಕಿ 20 ಗ್ರಾಮಗಳಲ್ಲಿ ಶಾಸನಗಳಿರುವುದನ್ನು ಇದುವರೆಗೆ ಗುರುತಿಸಲಾಗಿದೆ. ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಶಾಸನಗಳು ಕೊಟ್ಟೂರು ಗ್ರಾಮದಲ್ಲಿ ದೊರಕಿವೆ. ಹಾಗೂ ರಾಜವಂಶಗಳಲ್ಲಿ ವಿಜಯನಗರ ಕಾಲದ ಶಾಸನಗಳೇ ಹೆಚ್ಚು ಎಂದು ಅಧ್ಯಯನದಿಂದ ತಿಳಿಯಬಹುದು.

ಅಡಿಟಿಪ್ಪಣಿಗಳು

1. ರವಿಕುಮಾರ್ ಎನ್.ಎಂ. ಮತ್ತು ವೃಷಭೇಂದ್ರಾಚಾರ್ ಎ. (ಸಂ.), 1998, *ಮುನ್ನಡೆಯ ಕೂಡ್ಲಿಗಿ*, ಪು. 1.
2. ಶಿವತಾರಕ್, ಕೆ.ಬಿ., 2001, *ಕರ್ನಾಟಕದ ಪುರಾತತ್ವ ನೆಲೆಗಳು*, ಪು. 352–354.
3. ಕರಿಬಸಪ್ಪ ಎ., 2003, *ಬಳ್ಳಾರಿ ಜಿಲ್ಲೆಯ ಐತಿಹ್ಯಗಳು*, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 92–93.
4. ರವಿಕುಮಾರ್ ಎನ್.ಎಂ. ಮತ್ತು ವೃಷಭೇಂದ್ರಾಚಾರ್ ಎ. (ಸಂ.), 1998, *ಪೂರ್ವೋಕ್ತ*, ಪು. 8–9.
5. ದೇವರಕೊಂಡಾರೆಡ್ಡಿ (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸುರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ. (ಸಂ.), *ಪೂರ್ವೋಕ್ತ*, ಶಾ.ಸಂ.–19, ಪು. 239.
6. ಅದೇ, ಶಾ.ಸಂ.–22, ಪು. 244.
7. ಚನ್ನಬಸಪ್ಪ ಎಸ್. ಪಾಟೀಲ್ ಮತ್ತು ವಿನೋದಾ ಪಾಟೀಲ್ (ಸಂ.), *ಪೂರ್ವೋಕ್ತ*, ಶಾ.ಸಂ. 479, ಪು. 156.
8. ಅದೇ, ಶಾ.ಸಂ.–487, ಪು. 159.
9. ಅದೇ, ಶಾ.ಸಂ.–473, ಪು. 154.
10. ಅದೇ, ಶಾ.ಸಂ.–467, ಪು. 152.
11. ದೇವರಕೊಂಡಾರೆಡ್ಡಿ (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ. (ಸಂ.), *ಪೂರ್ವೋಕ್ತ*, ಶಾ.ಸಂ.–1, ಪು. 220.
12. ಅದೇ, ಶಾ.ಸಂ.–10, ಪು. 230.

10. ಹಂಪಿಯ ಶಾಸನಗಳಲ್ಲಿ ಶಾಪಾಶಯಗಳು

ಡಾ. ಎನ್.ಎಸ್. ವೀರೇಶಉತ್ತಂಗಿ ಮತ್ತು ಶ್ರೀ ಎಂ. ಪ್ರಭಾಕರ

ಶಾಸನಗಳು ಕರ್ನಾಟಕ ಸಂಸ್ಕೃತಿಯ ಮೂಕ ಸಾಕ್ಷಿಗಳು. ಹಿಂದೆ ರಾಜ ಮಹಾರಾಜರು ತಮ್ಮ ಶಕ್ತಿ, ಸಾಮರ್ಥ್ಯ, ರಾಜ್ಯ ವಿಸ್ತರಣೆ, ಪ್ರಶಸ್ತಿ, ದಾನ, ದತ್ತಿ ಧರ್ಮಕಾರ್ಯಗಳನ್ನು ಶಾಸನಗಳ ಮೂಲಕ ದಾಖಲಿಸಿದ್ದಾರೆ. ಅವರು ನೀಡಿದ ದಾನ ವ್ಯರ್ಥವಾಗಬಾರದೆಂದು ಅಥವಾ ಅದನ್ನು ಬೇರೆ ಯಾರಾದರೂ ಅಪಹರಿಸಬಾರದೆಂಬ ಆಶಯವನ್ನು ಹೊಂದಿ ಈ ಶಾಸನ ಹಾಕಿಸಿರುತ್ತಾರೆ. ಶಾಸನಗಳು ನಾಡಿನ ಎಲ್ಲ ಜನರಿಗೂ ಆದರ್ಶವನ್ನು ಸಾರುವಂತವಾಗಿರುತ್ತವೆ. ಹಾಗಾಗಿ ಶಾಸನಗಳು ಮನುಷ್ಯನ ಬದುಕಿನ ನಾನಾ ಆಯಾಮಗಳನ್ನು ಸಹ ಕುರಿತು ಹೇಳುತ್ತವೆ. ಇವುಗಳು ಶಾಶ್ವತವಾಗಿ ಉಳಿಯಲೆಂಬ ಸದುದ್ದೇಶದಿಂದ 'ಶಾಪಾಶಯಗಳನ್ನು' ಹಾಕಿಸಿದ್ದಾರೆ. ಇವುಗಳಲ್ಲಿ ಕೊನೆಯ ಭಾಗದಲ್ಲಿ ಈ ಶಾಪಾಶಯಗಳನ್ನು ಹೇಳಿರುತ್ತಾರೆ. ಶಾಸನಗಳನ್ನು ಕಾಪಾಡಿದವರಿಗೆ ಲಭಿಸುವ ಪುಣ್ಯ ಮತ್ತು ಅದನ್ನು ಅಪಹರಿಸಿದರೆ, ನಾಶಗೊಳಿಸಿದರೆ ಒದಗುವ ಪಾಪ ಇವುಗಳನ್ನು ಕುರಿತಿವೆ. ದಾನದ, ಧರ್ಮದ ಕೆಲಸ ಕಾರ್ಯಗಳು ಬಹುಕಾಲ ಅಥವಾ ಚಿರಕಾಲ ಉಳಿಯಲೆಂಬ ಉದ್ದೇಶದಿಂದ ಈ ಪದ್ದತಿ ನಡೆದುಕೊಂಡು ಬಂದಂತೆ ತೋರುತ್ತದೆ. ಶಾಸನಗಳಲ್ಲಿ ಶಾಪಾಶಯಗಳು ಅನೇಕ ರೀತಿಯಲ್ಲಿರುತ್ತವೆ. ಇವುಗಳನ್ನು ನಾನಾ ಆಯಾಮಗಳಲ್ಲಿ ಗುರುತಿಸಬಹುದಾಗಿದೆ. ಅವುಗಳನ್ನು ಈ ರೀತಿ ವಿಂಗಡಿಸಬಹುದು.

1) ಬ್ರಾಹ್ಮಣಕೇಂದ್ರಿತ ಶಾಪಾಶಯಗಳು.
2) ಪ್ರಾಣಿಕೇಂದ್ರಿತ ಶಾಪಾಶಯಗಳು.
3) ತೀರ್ಥಕ್ಷೇತ್ರಕೇಂದ್ರಿತ ಶಾಪಾಶಯಗಳು.
4) ತಂದೆ-ತಾಯಿಕೇಂದ್ರಿತ ಶಾಪಾಶಯಗಳು.
5) ಇತರೆ ಶಾಪಾಶಯಗಳು.

ಈ ರೀತಿಯಲ್ಲದೆ ಮತ್ತೊಂದು ರೀತಿಯಲ್ಲಿಯೂ ಶಾಪಾಶಯಗಳನ್ನು ವರ್ಗೀಕರಿಸಬಹುದಾಗಿದೆ.

1) ದೇವರುಕೇಂದ್ರಿತ ಶಾಪಾಶಯಗಳು.
2) ವ್ಯಕ್ತಿಕೇಂದ್ರಿತ ಶಾಪಾಶಯಗಳು.
3) ನದಿ ಕೇಂದ್ರಿತ ಶಾಪಾಶಯಗಳು.
4) ಪ್ರಾಣಿಕೇಂದ್ರಿತ ಶಾಪಾಶಯಗಳು.
5) ಇತರೆ ಶಾಪಾಶಯಗಳು.

ಪ್ರಸ್ತುತ ಪ್ರಬಂಧದಲ್ಲಿ 1) ದೇವರುಕೇಂದ್ರಿತ, 2) ವ್ಯಕ್ತಿ ಪ್ರಾಣಿಕೇಂದ್ರಿತ, 3) ನದಿ ತೀರ್ಥಕ್ಷೇತ್ರಕೇಂದ್ರಿತ, 4) ತಂದೆತಾಯಿಕೇಂದ್ರಿತ ಶಾಪಾಶಯಗಳು ಎಂದು ವಿಭಜಿಸಿ ಅಧ್ಯಯನಿಸಲಾಗಿದೆ.

1) ದೇವರುಕೇಂದ್ರಿತ ಶಾಪಾಶಯಗಳು

ವ್ಯಕ್ತಿ ತಾನು ನೀಡಿದ ದಾನ ನಿರ್ದಿಷ್ಟ ಉದ್ದೇಶಕ್ಕೆ ವಿನಿಯೋಗವಾಗಲೆಂಬ ಹಂಬಲದಿಂದ ಆ ದಾನ ಹಾಳಾಗಬಾರದೆಂದು ಪ್ರಸಿದ್ದ/ಉಗ್ರದೇವರ ಶಾಪ ತಟ್ಟುತ್ತದೆಂಬ ಶಾಪಾಶಯದೊಂದಿಗೆ ದಾನ ನೀಡಿರುವುದನ್ನು ನಾವು

ಕಾಣಬಹುದಾಗಿದೆ. ಹೊಯ್ಸಳರ ಕ್ರಿ.ಶ. 1236ರ ಹಂಪಿ ಶಾಸನವು "ಯಾಚತೇರಾಮಚಂದ್ರ : ಸ್ವದತ್ತಂ ಪರದತ್ತಂ ವಾಯೋಹರೇತಿ ವಸುಂಧರಾ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇಕ್ರಿಮಿಃ ಶ್ರೀ ಸೋಮೇಶ್ವರದೇ ...... ಮಂಗಳ ಮಹಾಶ್ರೀ"[1] ಎಂದು ಉಲ್ಲೇಖಿಸಿದೆ. ಈ ಶಾಸನವು ವಿರೂಪಾಕ್ಷದೇವರಿಗೆ ಹೊಯ್ಸಳ ಸೋಮೇಶ್ವರ ನೀಡಿದ ದಾನವನ್ನು ಕುರಿತು ಹೇಳುತ್ತದೆ. ಇದು ಕೊನೆಯಲ್ಲಿ ಈ ದಾನವನ್ನು ತಮ್ಮ ಸ್ವಂತದೆಂದು ತಿಳಿದು ಕಾಪಾಡಿಕೊಂಡು ಹೋಗಬೇಕು ಪರರ ಸ್ವತ್ತು ಪಾಷಾಣಕ್ಕಿಂತ ಕಡೆ ಅದನ್ನು ಅಪಹರಿಸಿದರೆ ಅಪಹರಿಸಿದವರು ಭೂಮಿಯಲ್ಲಿ ಸಹಸ್ರಾರು ವರ್ಷಗಳ ಕಾಲ ಕ್ರಿಮಿಯಾಗಿ ಜನಿಸುತ್ತಾರೆ ಎಂದು ಹೇಳುತ್ತದೆ. ಅದಕ್ಕೆ ಸೋಮೇಶ್ವರ ದೇವರನ್ನು ಸಾಕ್ಷಿಯಾಗಿ ನೀಡಲಾಗಿದೆ. ಹಂಪಿಯ ಕ್ರಿಶ 1529ರ ಶಾಸನವು "ಶ್ರೀ ವಿರೂಪಾಕ್ಷದೇವರಿಗೆ ಏಕಾಂತದ ಪರಮಾಂನಂಕೆ ಸಮರ್ಪಿಸಿದುಯಿದಕೆ ಆರುತಪಿದರೂ ಸಿವದ್ರೋಹಿಗಳೂ ಶ್ರೀ ವಿರೂಪಾಕ್ಷ ಗತಿ"[2] ಎಂದು ದಾಖಲಿಸಿದೆ. ಈ ಶಾಸನವು ವಿರೂಪಾಕ್ಷದೇವರಿಗೆ ದಾನ ನೀಡಿದ್ದಾಗಿದೆ. ಈ ದಾನವನ್ನು ಯಾರಾದರೂ ಅಪಹರಿಸಿದರೆ ಅವರು ಶಿವದ್ರೋಹಿಗಳಾಗುತ್ತಾರೆ ಅವರಿಗೆ ಶ್ರೀ ವಿರೂಪಾಕ್ಷನೇ ಗತಿಯೆಂದು ಶಾಸನ ಹೇಳುತ್ತದೆ.

ಕ್ರಿ.ಶ 1534ರ ಅಚ್ಚುತದೇವರಾಯನ ಕಾಲದ ಶಾಸನವು "ತಮ್ಮ ವೊಡೆಯಅಚುತದೇವರಾಯ ಮಹಾರಾಯರಿಗೆ ಪುಂಣ್ಯವಾಗಿ ಮಾಡಿದಧರ್ಮ ಇ ಧರ್ಮಕ್ಕೆ ಆರುತಪ್ಪಿದರೂ ಶ್ರೀ ವಿಠಲದೇವರ ಪಾದಕ್ಕೆ ತಪ್ಪಿದವರು ಗೋಹತ್ಯ ಬ್ರಂಹ್ಮಹತ್ಯ ಬ್ರೂಣಹತ್ಯಾದಿ ಮಹಾಪಾತಕವ ಮಾಡಿದ ಪಾಪಕ್ಕೆ ಹೋಹರು"[3] ಎಂದು ದಾಖಲಿಸಿದೆ. ಈ ಶಾಸನದ ಪ್ರಕಾರ ಅಚ್ಯುತದೇವರಾಯನ ಕಾಲದಲ್ಲಿ ತಿರುವೇಂಗಳ ನಾಯಕನ ಮಗ ವರದಪ್ಪ ನಾಯಕನು ಅಚ್ಯುತದೇವರಾಯನಿಗೂ ಚಿಕ್ಕರಾಯನಿಗೂ ಪುಣ್ಯವಾಗಲೆಂದು ಶ್ರೀ ವಿಠಲದೇವರಿಗೆ ದಾನ ನೀಡುತ್ತಾನೆ. ಈ ಶಾಸನದ ಕೊನೆಯಲ್ಲಿ ಈ ದಾನವನ್ನು ಹಾಳುಮಾಡಿದವರಿಗೆ ಶಾಪವಿಧಿಸಿದ್ದಾನೆ. ಧರ್ಮಕಾರ್ಯಕ್ಕಾಗಿ ನೀಡಿದ ದಾನವನ್ನು ದುರುಪಯೋಗಪಡಿಸಿಕೊಂಡರೆ ಅವರು ಶ್ರೀ ವಿಠಲ ದೇವರ ಪಾದಕ್ಕೆ ತಪ್ಪಿದವರು ಎಂದು ಶಾಸನದ ಕೊನೆಯಲ್ಲಿ ಹೇಳಲಾಗಿದೆ.

ಇದಾದ ನಂತರ ಕ್ರಿ.ಶ. 1543ರ ಹಂಪಿಯ ಸದಾಶಿವರಾಯನ ಆಳ್ವಿಕೆಯ ಕಾಲದ ಹಂಪಿ ಶಾಸನವು "ನೈವೇದ್ಯ ಪ್ರಸಾದವನು ಯೀಪ್ರಾಪ್ತಿ ತೆಗೆದುಕೊಂಡು ಆಚಂದ್ರಾರ್ಕ್ಕವಾಗಿ ನಡೆಯಲುಳದು ಎಂದು ಸಮರ್ಪಿಸಿದ ಧರ್ಮಶಾಸನ ಯೀ ಧರ್ಮಕ್ಕೆ ಆರುತಪ್ಪಿದರು ಶ್ರೀ ವಿಠಲದೇವರ ಶ್ರೀ ಪಾದಕೆ ತಪಿದವರು ......"[4] ಎಂದು ಉಲ್ಲೇಖಿಸಿದೆ. ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಔಕು ತಾತಾಚಾರ್ಯನ ಮಗ ತಿರುವೆಂಗಳಾಚಾರ್ಯ ತನಗೆ ಸದಾಶಿವರಾಯನಿಂದ ಬಂದ ದಾನದಲ್ಲಿ ವಿಠಲದೇವರಿಗೆ ನೀಡಿದ ದಾನದ ವಿವರ ನೀಡಿ ಈ ದಾನವನ್ನು ಸೂರ್ಯಚಂದ್ರರಿರುವತನಕ ಕಾಪಾಡಿಕೊಂಡು ಹೋಗಬೇಕು ಈ ಧರ್ಮವನ್ನು ಪಾಲಿಸದಿದ್ದರೆ ಅಥವಾ ಇದಕ್ಕೆ ತಪ್ಪಿನಡೆದರೆ ಅವರು ವಿಠಲದೇವರ ಪಾದಕ್ಕೆ ತಪ್ಪಿ ನಡೆದವರು ಎಂದರ್ಥವೆಂದು ಶಾಪಾಶಯ ಹಾಕಿಸುತ್ತಾನೆ.

ಹಾಗೆಯೇ ಹಂಪಿಯ ಸದಾಶಿವ ದೇವರಾಯನ ಕಾಲದ ಕ್ರಿ.ಶ. 1560ರ ಶಾಸನವು "ಶ್ರೀ ವಿಠಲ ಸ್ವದತ್ತಾ ದ್ವಿಗುಣಂಪುಣ್ಯಂ ಪರದತ್ತಾನುಪಾಲನಂ, ಪರದತ್ತಾಪಹರೋಣ ಸ್ವದತ್ತಂ ನಿಷ್ಫಲಂ ಭವೇತ್"[5] ಎಂದು ದಾಖಲಿಸಿದೆ. ಇಲ್ಲಿ ವಿಜಯವಿಠಲ ದೇವರಿಗೆ ದಾನ ನೀಡಿದ ವಿಜಯನಗರ ಚಕ್ರವರ್ತಿ ಸದಾಶಿವರಾಯನ ಆಳ್ವಿಕೆಯಲ್ಲಿ ವಿಠಲ ಸ್ವಾಮಿಯ ಪಾದಸೇವಕನಾದ ಮೂರ್ತಿರಾಜು ವಿಠಲರಾಜು ಎಂಬುವವನು ಶಾಸನದ ಕೊನೆಗೆ ತಾನು ನೀಡಿದದಾನ ಅಪಹರಣಕ್ಕೆ ಒಳಗಾಗಬಾರದೆಂದು ಶ್ರೀ ವಿಠಲ ದೇವರ ಸಾಕ್ಷಿ ನೀಡಿ ಸ್ವತಃ ದುಡಿದು ಸಂಪಾದಿಸಿದ ಸಂಪತ್ತು ದ್ವಿಗುಣಗೊಳ್ಳುತ್ತದೆ, ಪುಣ್ಯ ಪ್ರದವಾಗುತ್ತದೆ. ಪರರಸ್ವತ್ತನ್ನು ಅಪಹರಿಸಿದರೆ ಅದು ನಿಷ್ಪ್ರಯೋಜನ ಒದಗಿಸುತ್ತದೆ ಎಂದು ಹೇಳಿದ್ದಾನೆ.

ಇದಲ್ಲದೆ ಇದೇ ಸದಾಶಿವರಾಯನ ಆಳ್ವಿಕೆಯ ಕಾಲದ ಕ್ರಿ.ಶ. 1561ರ ಹಂಪಿ ಶಾಸನವು "........ಯೀ ಧರ್ಮಕ್ಕೆ ಆರೊಬರು ತಪಿದರೂ ಶ್ರೀ ವಿಠಲದೇವರ ಶ್ರೀ (ಚ) ರಣಕ್ಕೆ ತಪಿದರೂ ಎಂದು ಬರೆದಧರ್ಮ ಸಿಲಾಶಾಶನಕ್ಕೆ

ಮಂಗಳಮ್ಮಹಾಶ್ರೀ"[6] ಎಂದು ಉಲ್ಲೇಖಿಸಿದೆ. ಈ ಶಾಸನವನ್ನು ಕೋನೇಟಿ ಕೊಂಡರಾಜಯ್ಯನು ತಮ್ಮ ತಂದೆಗೆ ಪುಣ್ಯವಾಗಬೇಕೆಂದು ಕೆಲವು ದತ್ತಿಗಳನ್ನು ಬಿಟ್ಟು ಇದನ್ನು ಬರೆಸುತ್ತಾರೆ. ಈತ ತಾನು ಬಿಟ್ಟದಾನ ಹಾಳಾಗಬಾರದೆಂದು ಹೀಗೆ ಶಾಪಾಶಯ ಹಾಕಿಸಿದ್ದಾನೆ, ಇದು ಧರ್ಮಾರ್ಥವಾಗಿ ಬಿಟ್ಟ ದಾನವಾಗಿದೆ. ಇದನ್ನು ಯಾರೂ ದುರುಪಯೋಗಪಡಿಸಿಕೊಳ್ಳಬಾರದು ಹಾಗೊಂದು ವೇಳೆ ಈ ಧರ್ಮಕ್ಕೆ ಯಾರಾದರೂ ತಪ್ಪಿನಡೆದರೆ ಅವರು ವಿಠಲದೇವರ ಪಾದಕ್ಕೆ ತಪ್ಪಿ ನಡೆದವರು ಎಂದು ನಿರ್ಧರಿಸಲಾಗುವುದೆಂದೂ ಈ ದಾನವನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಬೇಕೆಂಬ ಆಶಯ ವ್ಯಕ್ತಪಡಿಸಲಾಗಿದೆ. ಅಪಹರಿಸುವವರು ದೇವರಿಗೆ ವಿರುದ್ಧ ನಡೆದಂತೆ ಎಂಬ ಅರ್ಥದಲ್ಲಿ ಶಾಪಾಶಯ ಹಾಕಿಸಲಾಗಿದೆ.

ಹೀಗೆ ದೇವರನ್ನು ಸಾಕ್ಷೀಕರಿಸಿ ಶಾಪಾಶಯ ಹಾಕಿಸಿರುವುದನ್ನು ನೋಡಬಹುದು. ಸಾಮಾನ್ಯ ಜನರೂ ಸಹಿತ ದೇವರ ಬಗ್ಗೆ ಭಯ ಮತ್ತು ಭಕ್ತಿಯನ್ನು ಹೊಂದಿರುವುದರ ಮುಖೇನ ಸಾರ್ವತ್ರಿಕ ಸ್ವತ್ತನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂಬ ಮೂಲ ಉದ್ದೇಶ ಹಾಗೂ ನಂಬಿಕೆಯಿಂದ ಈ ಶಾಪಾಶಯಗಳು ರಚನೆಯಾಗಿವೆ.

2. ವ್ಯಕ್ತಿ/ಪ್ರಾಣಿಕೇಂದ್ರಿತ ಶಾಪಾಶಯಗಳು

ಮಾನವರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ವರ್ಗಗಳಾಗಿ ಮನುಋಷಿ ವಿಂಗಡಿಸುತ್ತಾನೆ. ಅದರಲ್ಲಿ ಬ್ರಾಹ್ಮಣ ವರ್ಗವು ಮನುಷ್ಯ ಕುಲದಲ್ಲೇ ಸರ್ವಶ್ರೇಷ್ಟವಾದ ವರ್ಗವೆಂದೂ ಅವರು ಭೂಲೋಕದ ಜೀವಂತದೇವತೆಗಳೆಂದು ನಂಬಿಕೆ ಹುಟ್ಟಿಸಲಾಗಿದೆ. ಹಾಗೇಯೇ ಪ್ರಾಣಿ ವರ್ಗದಲ್ಲಿ ಹಸು/ಕಪಿಲೆ ಭೂಲೋಕದ ಕಾಮಧೇನು, ಸರ್ವಶ್ರೇಷ್ಟ ಪ್ರಾಣಿದೇವತಾ ಸ್ವರೂಪಿ ಎಂದು ಪುರಾಣಗಳ ಕಾಲದಿಂದಲೂ ಬಿಂಬಿಸುತ್ತಾ ಬರಲಾಗಿದೆ. ಬ್ರಾಹ್ಮಣ ಮತ್ತು ಹಸು ಈ ಎರಡೂ ದೇವರ ಸ್ವರೂಪ. ಇವನ್ನು ಕೊಂದರೆ ಪಾಪ ಬರುತ್ತದೆ. ಆ ಪಾಪದಿಂದ ವ್ಯಕ್ತಿ ನರಕಕ್ಕೆ ಹೋಗುತ್ತಾನೆ ಎಂಬ ನಂಬಿಕೆಯನ್ನು ಸೃಷ್ಟಿಸಲಾಯಿತು. ಅದಕ್ಕಾಗಿ ವ್ಯಕ್ತಿ ಈ ಎರಡು ವಿಷಯಗಳಲ್ಲಿ ದಾರಿತಪ್ಪದಂತೆ ನಡೆದುಕೊಳ್ಳಲೆಂದು ಶಾಪಾಶಯಗಳನ್ನು ಶಾಸನಗಳ ಕೊನೆಯಲ್ಲಿ ಪ್ರಸ್ತಾಪಿಸಲಾಗಿದೆ.

ವಿರೂಪಾಕ್ಷ ದೇವಾಲಯದ ರಂಗಮಂಟಪದ ಪ್ರವೇಶದ ಎಡಗಡೆಗೆ ನಿಲ್ಲಿಸಿರುವ ಕ್ರಿ.ಶ. 1510ರ ಕೃಷ್ಣದೇವರಾಯನ ಕಾಲದ ಶಾಸನವು "ಯೀ ಧರ್ಮಕೆತಪ್ಪಿದವರುಗಳು ಗೋಹತ್ಯೆ ಬ್ರಹ್ಮಹತ್ಯಾದಿ, ಮಹಾ ಪಾತಕಗಳ ಮಾಡಿದ ಪಾಪಕ್ಕೆ ಹೋಗಲುಳ್ಳವರು....."[7] ಎಂದು ಉಲ್ಲೇಖಿಸಿದೆ. ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ದಿನ ವಿರೂಪಾಕ್ಷದೇವರ ಅಮೃತಪಡಿ ಮತ್ತು ನೈವೇದ್ಯ ಸೇವೆಗಾಗಿ ಸಿಂಗನಾಯಕನ ಹಳ್ಳಿಯನ್ನು ನೀಡುತ್ತಾನೆ. ಈ ದಾನ ಕುರಿತು ಹಾಕಿಸಿದ ಶಾಸನದ ಕೊನೆಯಲ್ಲಿ ವಿರೂಪಾಕ್ಷದೇವರಿಗೆ ನೀಡಿದ ದಾನವನ್ನು ಯಾರಾದರೂ ಸ್ವಂತಕ್ಕೆ ಉಪಯೋಗಿಸಿದರೆ ಅವರು ಧರ್ಮಕ್ಕೆ ತಪ್ಪಿದವರು ಅಲ್ಲದೆ ಹಸು ಮತ್ತು ಬ್ರಾಹ್ಮಣನನ್ನು ಹತ್ಯೆ ಮಾಡಿದ ಮಹಾಪಾಪಕ್ಕೆ ಹೋಗುವರು ಎಂದು ಶಾಪಾಶಯ ಹಾಕಿಸಿದ್ದಾನೆ.

ಕ್ರಿ.ಶ. 1513ರ ಕೃಷ್ಣದೇವರಾಯನ ಹಂಪಿಯ ಶಾಸನವು "........ ಗೋಹತ್ಯ ಬ್ರಹ್ಮಹತ್ಯಾಪಾತಕಗಳ ಮಾಡಿದ ಪಾಪಕ್ಕೆ ಹೋಹರು........"[8] ಎಂದು ಉಲ್ಲೇಖಿಸಿದರೆ ಇದೇ ಕಾಲದ ಮತ್ತೊಂದು ಶಾಸನವು "ಗೋಹತ್ಯಾ ಪಾತಕಗಳೂ ಬ್ರಂಹ್ಮಹತ್ಯಾ ಪಾತಕ ಸ್ತ್ರೀಹತ್ಯಾಪಾತಕ ಬ್ರೂಣಹತ್ಯಾ ಪಾತಕಗಳೂ ಮೊದಲಾಗಿ ಅಶ್ವೇತಿ ಮೊದಲಾದ ಮಹಾಪಾಪಕ್ಕೆ ಹೋಹರು"[9] ಎಂದು ದಾಖಲಿಸಿದೆ. ಕ್ರಿ.ಶ 15-16ನೇ ಶತಮಾನದ ಇನ್ನೊಂದು ಶಾಸನವು "ಗೋಹತ್ಯ ಬ್ರಂಹ್ಮಹತ್ಯ ಶಿಶುಹತ್ಯ ಮಾಡಿದ ಪಾತಕ್ಕೆ ಹೋಗಲುಳವರು"[10] ಎಂದು ದಾಖಲಿಸಿದೆ. ಕ್ರಿ.ಶ 1534ರ ಅಚ್ಯುತದೇವರಾಯನ ಕಾಲದ ಹಂಪಿಯ ಶಾಸನವು "........ ನಡೆಸು[ವ] ಧರ್ಮಕೆಆರುತಪಿದರೂಗೋಹತ್ಯ ಬ್ರಂಹ್ಮಹತ್ಯ ಮಹಾಪಾತಕ ಮಾಡಿದ ಪಾಪಕೆ ಪೋಗಲುಳವರು."[11] ಎಂದು ದಾಖಲಿಸುತ್ತದೆ.

ಈ ಮೂರು ಶಾಸನಗಳು ನೀಡಿದ ದಾನವನ್ನು ಸ್ವಂತಕ್ಕೆ ಬಳಸಿಕೊಂಡರೆ ಅಥವಾ ಉಪಯೋಗಿಸಿದರೆ ಅಂಥವರು ಕುದುರೆ, ಗೋವು, ಸ್ತ್ರೀ, ಶಿಶು ಮತ್ತು ಬ್ರಾಹ್ಮಣರನ್ನು ಕೊಂದ ಪಾಪಕ್ಕೆ ಹೋಗುವರು, ಈ ಕಾರಣಕ್ಕಾಗಿ ದಾನಮಾಡಿದ ವಿಷಯ ಕುರಿತ ಶಾಸನವನ್ನು ರಕ್ಷಿಸಿಕೊಂಡು ಹೋಗಬೇಕೆಂದು ಈ ಶಾಸನಗಳು ನಿರ್ದೇಶಿಸುತ್ತವೆ.

ಹಾಗೆಯೇ ಇದೇ ಅಚ್ಯುತರಾಯನ ಕಾಲದ ಹಂಪಿಯ ಕ್ರಿ.ಶ. 1534ರ ಮತ್ತೊಂದು ಶಾಸನವು ಒಂದು ಹೆಜ್ಜೆ ಮುಂದೆ ಹೋಗಿ "...........ಇ ಧರ್ಮಕ್ಕೆಆರುತಪ್ಪಿದರೂಬ್ರಂಹ್ಮ ಹತ್ಯ ಬ್ರೂಣ ಹತ್ಯಾದಿ ಮಹಾಪಾತಕ ಮಾಡಿದ ಪಾಪಕ್ಕೆ ಹೋಹರು"[12] ಎಂದು ದಾಖಲಿಸಿದೆ. ಅಲ್ಲದೆ ಇದೇ ಹಂಪಿಯ ಕ್ರಿ.ಶ. 1535ರ ಶಾಸನವು "ಅಶೇತಿ ಬ್ರಹ್ಮೇತಿ ಶ್ರೀಹತೆ ಬ್ರೂಣಹತ್ಯೆಗಳ ಮಾಡಿದ ದೋಷದಲ್ಲಿ ಹೋಹರು"[13] ಎಂದೂ ಕ್ರಿ.ಶ. 1556ರ ಸದಾಶಿವದೇವರಾಯನ ಕಾಲದ ಹಂಪಿ ಶಾಸನವು ಯೀ ಧರ್ಮಾನಕಯವ್ವರುಗನಕತಪ್ಪಿನಾನು ಗೋಹತ್ಯ ಬ್ರಹ್ಮತ್ಯ ಸ್ತ್ರೀ ಹತ್ಯ ಮೊದಲೈನ ಪಾಪಾಲು ಚೇಸಿನ ದೋಷಾನಂ"[14] ಎಂದು ಶಾಸನಗಳು ದಾಖಲಿಸಿವೆ.

ಈ ಮೇಲಿನ ಶಾಸನಗಳಲ್ಲಿ ಗೋವು ಬ್ರಾಹ್ಮಣ ಹತ್ಯದ ಜೊತೆಗೆ ಸ್ತ್ರೀ, ಶಿಶು, ಭ್ರೂಣ, ಅಶ್ವ ಹತ್ಯಗಳ ಪ್ರಸ್ತಾಪ ಮಾಡಲಾಗಿದೆ. ಸ್ತ್ರೀ ಅಬಲೆ, ಮುಗ್ದಳು. ಬ್ರೂಣ ಮತ್ತು ಶಿಶು ಈ ಲೋಕದ ಪರಿಯನ್ನು ತಿಳಿಯದವು ಮತ್ತು ಪಾಪ ಪುಣ್ಯಮೋಸ, ಕಪಟ ಅರಿಯದವು. ಇನ್ನು ಅಶ್ವ ಸಕಲ ಸವಾರಿಗೆ ಅತ್ಯಂತ ಪ್ರಮುಖ ಪ್ರಾಣಿ, ಯಾರಿಗೂ ತೊಂದರೆ ನೀಡಲಾರದ್ದು, ಆದ್ದರಿಂದ ದಾನ ಮಾಡಿದವರು ತಮ್ಮ ದಾನ ಶಾಸನಗಳಲ್ಲಿ ಈ ಪ್ರಾಣಿ ಮತ್ತು ವ್ಯಕ್ತಿಗಳನ್ನು ಬಳಸಿ ಶಾಪಾಶಯ ಹಾಕಿಸಿರುವುದನ್ನು ಕಾಣಬಹುದು. ಇವುಗಳು ಸಹ ದೇವತಾ ಸ್ವರೂಪಿಗಳು ಇವುಗಳನ್ನು ಕೊಂದರೆ ಮನುಷ್ಯನಿಗೆ ನರಕ ಪ್ರಾಪ್ತಿಯಾಗುತ್ತದೆಂಬ ಭ್ರಮೆಯಿಂದ ಶಾಪಾಶಯಗಳಲ್ಲಿ ಇವುಗಳನ್ನು ಸೇರಿಸಿದಂತೆ ತೋರುತ್ತದೆ.

3. ನದಿ, ತೀರ್ಥಕ್ಷೇತ್ರ, ತಂದೆ-ತಾಯಿಕೇಂದ್ರಿತ ಶಾಪಾಶಯಗಳು

ಪ್ರಾಚೀನಕಾಲದಲ್ಲಿ ನದಿ, ತೀರ್ಥ ಕ್ಷೇತ್ರಗಳು ಅಮೂಲ್ಯ ಹಾಗೂ ಪಾವಿತ್ರ್ಯತೆಯ ತಾಣಗಳಾಗಿದ್ದವು. ಜೀವನಾಡಿಯಾದ ನದಿಗಳು ಮನುಷ್ಯ ಬದುಕಿನ ಜೀವಸಂಕುಲಗಳ ಅವಿಭಾಜ್ಯ ಅಂಗ, ತೀರ್ಥಕ್ಷೇತ್ರವೂ ಸಹ ಬದುಕಿನಲ್ಲಿ ವಿದ್ಯೆ ಹಾಗೂ ಶ್ರದ್ಧಾಕೇಂದ್ರವಾಗಿದೆ. ಅಷ್ಟೇ ಅಲ್ಲ ಭಕ್ತಿಯ ನೆಲೆಯೂ ಹೌದು. ಮನುಷ್ಯ ತನ್ನ ಮನಸ್ಸಿನ ದುಗುಡ ಕಳೆದುಕೊಳ್ಳಲು ಈ ಶ್ರದ್ಧಾ ಕೇಂದ್ರಗಳನ್ನು ನಿರ್ಮಿಸಿಕೊಂಡಿದ್ದಾನೆ. ಈ ಎರಡೂ ದೈವೀ ಸ್ವರೂಪವಾಗಿವೆ. ಹಾಗೆಯೇ ತಂದೆ ತಾಯಿಗಳು ಜನ್ಮ ನೀಡುವುದರ ಮೂಲಕ ಹೊಸ ಜೀವ ಸೃಷ್ಟಿಗೆ ಕಾರಣೀಭೂತರಾಗಿ ದೈವೀ ಸ್ವರೂಪರಾಗಿದ್ದಾರೆ. ಈ ಎಲ್ಲಾ ಕಾರಣದಿಂದ ದಾನಿಗಳು ದಾನವನ್ನು ಕುರಿತು ಶಾಸನವನ್ನು ಹಾಕಿಸುವಾಗ ನದಿ, ತೀರ್ಥಕ್ಷೇತ್ರ ಹಾಗೂ ತಂದೆತಾಯಿಗಳನ್ನು ಸಾಕ್ಷೀಕರಿಸುತ್ತಿದ್ದರೆಂದು ತಿಳಿದು ಬರುತ್ತದೆ. ಹಾಗೆಯೇ ವಿದ್ಯೆ ಕಲಿಸಿದ, ಬದುಕಿಗೆ ಸನ್ಮಾರ್ಗತೋರಿದ ಗುರು ಬ್ರಹ್ಮನಿಗೆ ಅಥವಾ ತ್ರಿಮೂರ್ತಿಗಳಿಗೆ ಸಮಾನ. ಆದ್ದರಿಂದ ಶಾಪಾಶಯಗಳಲ್ಲಿ ಗುರುವನ್ನು ಸಹ ಸೇರಿಸಲಾಗಿದೆ.

ಹಂಪಿಯ ಕೆಲವು ಶಾಸನಗಳು ಅಶ್ಲೀಲ ರೀತಿಯ ಶಾಪಾಶಯ ದಾಖಲಿಸಿರುವುದನ್ನು ಕಾಣಬಹುದು. ಕ್ರಿ.ಶ. 1420ರ ಪ್ರೌಢದೇವರಾಯನ ಕಾಲದ ಮುಸ್ಲಿಂ ಗೋರಿಗಳ ಬಳಿ ಇರುವ ಬೆಟ್ಟದ ಮೇಲಿನ ಶಾಸನವು ".........ಆರೊಬಯಿದಕೆ ಅಳುಪಿದವರಿಗೆ ಆತನತಾಯಿಗೆ ಅವನ ಹೆಂಡತಿಗೆ ಕತೆತುಂಣಿ......."[15] ಎಂದೂ ಅಲ್ಲೇ ಇರುವ ಕ್ರಿ.ಶ. 1472ರ ಶಾಸನವು "........ಯಿದು ತಪಿದರೆ ಅವನ ಹೆಂಡತಿಯ ಮೇಲೆ ಕತೆಯೇರುವುದು ನಾಯಿ ಜಲ್ಮವನು ಹಂದಿ ಬಸುರಲಿ ಬ(ಹನು) ಹಂದಿ ತಿಂದ ಪಾಪಕೆ ಹೋಹರೂ........"[16] ಎಂದು ದಾಖಲಿಸಿದೆ. ಈ ಶಾಸನಗಳ ಪ್ರಕಾರ ನೀಡಿದ ದಾನವನ್ನು ಹಾಳು ಮಾಡಿದರೆ ಅಥವಾ ಸ್ವಂತಕ್ಕೆ ಬಳಸಿಕೊಂಡರೆ ನಾಯಿ ಜನ್ಮ ಪಡೆಯುವನು ಮತ್ತು ಹಂದಿ ತಿಂದ ಪಾಪಕ್ಕೆ ಹೋಗುವನು.

ಇಲ್ಲಿ ಹಂದಿ ನಾಯಿಗಳನ್ನು ಕೀಳು ಪ್ರವೃತ್ತಿ ಹೊಂದಿರುವವು ಎಂದು ದಾಖಲಾಗಿದೆ. ಒಳ್ಳೆಯ ಉದ್ದೇಶಕ್ಕೆ ನೀಡಿದ ದಾನ ಒಳ್ಳೆಯದಕ್ಕೆ ಬಳಕೆಯಾಗಬೇಕು, ಇಲ್ಲವಾದರೆ ಕೀಳು ಪ್ರಾಣಿಗಳ ಜನ್ಮವೆತ್ತುತ್ತಾನೆ ಎಂಬ ಎಚ್ಚರಿಕೆಯನ್ನು ಸೂಚಿಸುತ್ತದೆ.

ಕ್ರಿ.ಶ. 1505ರ ಇದೇ ಹಂಪಿಯ ಶಾಸನವು "........ತಮ್ಮ ಗುರುವಿಗೆ ತಪಿದವರ"[17] ಎಂದು ದಾಖಲಿಸಿದರೆ, ಕ್ರಿ.ಶ 1513ರ ಹಂಪೆಯ ಕೃಷ್ಣದೇವರಾಯನ ಕಾಲದ ಶಾಸನವು ".........ಯೀ ಧರ್ಮಕೆಆರುತಪ್ಪಿದವರುತ[ಂ]ಮ್ಮತಂದೆ ತಾಯಿಗಳನೂ ವಾರಣಾಸಿಯಲಿ ಕೊಂದ ಪಾಪದಲಿ ಹೋಹರು"[18] ಎಂದು ಉಲ್ಲೇಖಿಸಿದೆ. ಕ್ರಿ.ಶ 1515ರ ಇದೇ ರಾಜನ ಕಾಲದ ಹಂಪಿಯ ಶಾಸನವು "......... ಈ ಧರ್ಮಕೆಆರೊಬ್ಬರು ಆಳುಪಿದವರು ತಂಮಗುರುತಂಮ ಮಾತಾ ಪಿತೃಗಳನೂ .... ಕಾಶಿಯೊಳಗೆ ವದಿಸ್ತ ಪಾಪಕೆ (ಹೋ)ಹರು.........."[19] ಎಂದೂ ನಾನಾ ವಿಧವಾಗಿ ಶಾಪಾಶಯಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಕ್ರಿ.ಶ 1521ರ ಹಜಾರರಾಮಸ್ವಾಮಿ ದೇವಾಲಯದ ಕೃಷ್ಣ ದೇವರಾಯನ ಕಾಲದ ಶಾಸನವು "........... ಇ ಧರ್ಮವನು ಪರಿಪಾಳಿಸಿ ನಡಸದವರು ಗಂಗಾತೀರದಲಿ ಕಪಿಲೆಯಕೊಂದ ಪಾಪದಲಿ ಹೋಹರು......."[20] ಹಾಗೆಯೇ ಅದೇ ದೇವಾಲಯದ ಗರ್ಭಗೃಹದ ದಕ್ಷಿಣ ಅಧಿಷ್ಠಾನದಲ್ಲಿರುವ ಶಾಸನವು "........ಗಂಗಾ ತೀರ್ಥದಲಿ ಗೋ ಬ್ರಾಹ್ಮಣರನು ಹತ್ಯ ತಂದೆ ತಾಯಿಗಳನು...... ಪಾಪದಲಿ ಹೋಹರು ಕೊಟಧರ್ಮ ಶಾಸನ........"[21] ಎಂದು ದಾಖಲಿಸಿದೆ. ಈ ಶಾಸನಗಳು ಇಲ್ಲಿ ನೀಡಿದದಾನವನ್ನು ಧರ್ಮಮಾರ್ಗದಲ್ಲಿ ಸಂರಕ್ಷಿಸದಿದ್ದರೆ ಅಥವಾ ಕಾಪಾಡದಿದ್ದರೆ ಅಥವಾ ಅದನ್ನು ಅಪಹರಿಸಿದರೆ ಅಂಥವರು ನದಿ ತೀರಗಳಲ್ಲಿ ತಮ್ಮ ತಂದೆ ತಾಯಿ ಗುರು ಗೋವು ಬ್ರಾಹ್ಮಣರನ್ನು ಕೊಂದ ಪಾಪಕ್ಕೆ ಗುರಿಯಾಗುತ್ತಾರೆಂದು ದಾಖಲಿಸಿವೆ.

ಕ್ರಿ.ಶ. 1534ರ ಅಚ್ಯುತದೇವರಾಯನ ಕಾಲದ ಹಂಪಿಯ ಅಚ್ಯುತ ನಾರಾಯಣ ಸ್ವಾಮಿದೇವಾಲಯದ ಹತ್ತಿರವಿರುವ ಶಾಸನವು "ಯೀ ಧರ್ಮಕೆ ಆರುತಪಿದರೂ ತಂಮತಂದೆ ತಾಯಿಗಳನು ವಾರಣಾಸಿಯಲು ವಧಿಸಿದ ಪಾಪಕೆ ಹೋಗಲುಳುವರು......"[22] ಎಂದು ದಾಖಲಿಸಿದೆ. ಅಲ್ಲದೇ ಈ ಶಾಸನಗಳು ದಾನಿಗಳ ದಾನ ಸ್ವಾರ್ಥಿಗಳ ಕೈವಶವಾಗಬಾರದು, ಸ್ವಂತಕ್ಕೆ ಉಪಯೋಗಿಸಿಕೊಂಡರೆ ಅಂಥವರು ಕಾಶಿ ಅಥವಾ ವಾರಣಾಸಿ ಪುಣ್ಯಕ್ಷೇತ್ರದಲ್ಲಿ ತಂದೆತಾಯಿ ಗುರುವನ್ನು ಕೊಂದಂತಹ ಪಾಪಬರುತ್ತದೆ ಎಂದು ಶಾಪಾಶಯ ಹಾಕಿಸಿರುವುದನ್ನು ನಾವು ಕಾಣಬಹುದು.

ಯಾವುದೇ ಒಳ್ಳೆಯ ಕಾರ್ಯದ ಹಿಂದೆ ಅನೇಕ ವಿಘ್ನಗಳು ಎಡಬಿಡದೆ ಕಾಡುತ್ತಿರುತ್ತವೆ. ದಾನವೆಂಬ ಮಹತ್ತರ ಕಾರ್ಯವನ್ನು ಕೈಗೊಂಡು ಸಮಾಜದ ಉನ್ನತಿಗೆ ಆದರ್ಶ ವ್ಯಕ್ತಿಗಳ ಪ್ರಗತಿಗೆ ಪೂರಕವಾಗಿ ದಾಖಲೆಯ ರೂಪದಲ್ಲಿ ಶಾಸನಗಳು ಅಸ್ತಿತ್ವಕ್ಕೆ ಬಂದಿವೆ. ಧರ್ಮಪೂರಕವಾದ ಕಾರ್ಯವನ್ನು ಶಾಶ್ವತವಾಗಿ ಮುಂದಿನ ಪೀಳಿಗೆಗೆ ಸಾರುವ ಸದುದ್ದೇಶದಿಂದ ಹಾಗೂ ದುಷ್ಟರಿಂದ ಸಂರಕ್ಷಿಸುವ ತಂತ್ರಗಳಾಗಿ ಶಾಪಾಶಯಗಳು ಶಾಸನದ ಕೊನೆಯ ಭಾಗದಲ್ಲಿ ಪ್ರಾತಿನಿಧ್ಯ ಪಡೆದುಕೊಂಡಿವೆ. ಶಾಪಾಶಯಗಳ ಭಯವಿಲ್ಲದಿದ್ದರೆ ಮನುಷ್ಯ ಎಂತಹ ಕಾರ್ಯವನ್ನು ಮಾಡಲೂ ಅಂದರೆ ಕೆಟ್ಟ ಕೆಲಸ ಮಾಡಲು ಹಿಂಜರಿಯುವುದಿಲ್ಲ. ಹಾಗಾಗಿ ಪೀಳಿಗೆಯಿಂದ ಪೀಳಿಗೆಗೆ ಶಾಸನಗಳ ಸಂರಕ್ಷಣೆಗಾಗಿ ಶಾಪಾಶಯ ಭಾಗಗಳು ಪ್ರಮುಖವಾಗಿವೆ.

ಅಡಿ ಟಿಪ್ಪಣಿ

1. ಡಾ. ದೇವರಕೊಂಡರೆಡ್ಡಿ ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-3*, ಶಾಸನ ಸಂ. 54, ಪು. 42 .
2. ಅದೇ, ಶಾಸನ ಸಂ. 27 ಪು. 12.
3. ಅದೇ, ಶಾಸನ ಸಂ. 193, ಪು. 149.
4. ಅದೇ, ಶಾಸನ ಸಂ. 196, ಪು. 152.
5. ಅದೇ, ಶಾಸನ ಸಂ. 138, ಪು. 112.
6. ಅದೇ, ಶಾಸನ ಸಂ. 183, ಪು. 139.
7. ಅದೇ, ಶಾಸನ ಸಂ. 34, ಪು. 22.
8. ಅದೇ, ಶಾಸನ ಸಂ. 181, ಪು. 132.
9. ಅದೇ, ಶಾಸನ ಸಂ. 33, ಪು. 17.
10. ಅದೇ, ಶಾಸನ ಸಂ. 286, ಪು. 272.
11. ಅದೇ, ಶಾಸನ ಸಂ. 189, ಪು. 144.
12. ಅದೇ, ಶಾಸನ ಸಂ. 193, ಪು. 149.
13. ಅದೇ, ಶಾಸನ ಸಂ. 211, ಪು. 169.
14. ಅದೇ, ಶಾಸನ ಸಂ. 209, ಪು. 166.
15. ಅದೇ, ಶಾಸನ ಸಂ. 210, ಪು. 224.
16. ಅದೇ, ಶಾಸನ ಸಂ. 215, ಪು. 227.
17. ಅದೇ, ಶಾಸನ ಸಂ. 228, ಪು. 178.
18. ಅದೇ, ಶಾಸನ ಸಂ. 182, ಪು. 134.
19. ಅದೇ, ಶಾಸನ ಸಂ. 74, ಪು. 75.
20. ಅದೇ, ಶಾಸನ ಸಂ. 260, ಪು. 200.
21. ಅದೇ, ಶಾಸನ ಸಂ. 257, ಪು. 199.
22. ಅದೇ, ಶಾಸನ ಸಂ. 132, ಪು. 107.

ಆಕರಗ್ರಂಥ

1. ಡಾ. ದೇವರಕೊಂಡರೆಡ್ಡಿ ಮತ್ತು ಇತರರು (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : 3, ಹಂಪಿ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.

11. ಗದಗ ತಾಲೂಕಿನ ವಿಜಯನಗರಕಾಲದ ಶಾಸನಗಳು

ಪ್ರೊ. ಶಕುಂತಲಾ ಸಿಂಧೂರ

ತಿರುಳ್ಗನ್ನಡ ನಾಡಿನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪುರೋಗಾಮಿ ಪಾತ್ರವನ್ನಾಡುತ್ತ ಬಂದಿರುವ ಮಹತ್ವದ ನಗರಗಳಲ್ಲಿ ಗದಗ ನಗರವು ಪ್ರಮುಖವಾಗಿದೆ. ಕಲೆಯ ಬೀಡಾಗಿ, ಕವಿಗಳ ನೆಲೆವೀಡಾಗಿ, ಶೈಕ್ಷಣಿಕ ಕೇಂದ್ರವಾಗಿ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಲಿದೆ. ವಿಜಯನಗರ ಕಾಲದ ಕನ್ನಡ ಸಂಸ್ಕೃತಿಗೆ ಗದಗದ ಕೊಡುಗೆ ಅಮೂಲ್ಯವಾಗಿದೆ.

ಪುರಾಣ ಪ್ರಸಿದ್ಧವಾದ ಪ್ರಮುಖನಗರ ಗದಗದ ಇತಿಹಾಸವನ್ನು ಸಂಸ್ಕೃತ ಮತ್ತು ಕನ್ನಡ ಶಿಲಾಶಾಸನಗಳು ಸಾರಿ ಸಾರಿ ಹೇಳುತ್ತವೆ. ಗದಗದ ಮೂಲ ಹೆಸರು ಕೃತುಪುರ. ಕೃತು ಎಂದರೆ, ಸಂಸ್ಕೃತದಲ್ಲಿ 'ಯಜ್ಞ' ಎಂದರ್ಥ. ಜನಮೇಜಯ ಮಹಾರಾಜನು ಸರ್ಪಯಜ್ಞವನ್ನು ಇಲ್ಲಿ ಮಾಡಿದ್ದರಿಂದ ಗದಗಕ್ಕೆ ಕೃತುಪುರ ಎಂಬ ಹೆಸರು ಬಂತೆಂದು 'ಕೃತುಪುರ ಮಹಾತ್ಮೆಯಿಂದ ತಿಳಿದು ಬರುತ್ತದೆ. 'ಕೃತುಪುರ ಮಹಾತ್ಮೆ' ಈ ಕೃತಿಯು ಗದಗದ ಸ್ಥಳಪುರಾಣವಾಗಿದೆ. ಇಲ್ಲಿನ ವೀರನಾರಾಯಣ ಮಂದಿರದ ಪ್ರಾಕಾರದಲ್ಲಿಯೇ 'ಸರ್ಪೇಶ್ವರ' ದೇವಸ್ಥಾನವಿದೆ. ಇದು ಜನಮೇಜಯನ ಸರ್ಪಯಾಗದ ಕುರುಹಿನಂತೆ ಸಾಕ್ಷಿಯಾಗಿದೆ. 'ಕೃತುಪುರ'ವು ಅಗ್ರಹಾರವಾಗಿತ್ತು ಎಂಬುದಕ್ಕೆ ಸಂಸ್ಕೃತ ಶಾಸನವೊಂದು ಲಕ್ಷ್ಯದಂತಿದೆ.

"ಅಸ್ತಿ ದಕ್ಷಿಣಾಪಥೇ ಬೆಲ್ವಲತ್ರಿಶತಮಧ್ಯೇ ಕೃತುಕೋನಾಮ ಮಹಾಗ್ರಹಾರಃ ಯಃ ಕಿಲ-ಸಕಲ ಭೂಪಾಲ ಚೂಡಾಮಣಿನಾ ಪಾಂಡುಕುಲತಿಲಕೇನ ಮಹಾರಾಜ ಜನಮೇಜಯನ ಸರ್ಪಯಾಗೇ ತಪೋ ವಿದ್ಯಾವೃತ್ತ ಸಂಪನ್ನೇಭ್ಯಃ ನಾನಾ ಗೋತ್ರೇಭ್ಯಃ ದ್ವಾಸಪ್ತ ತ್ರ್ಯೈ ಬ್ರಾಹ್ಮಣೇಭ್ಯಃ ದತ್ತಃ"

ಕೃತಕು ಅಂದರೆ ಗದುಗು 'ಬೆಳ್ವಲ' ದೇಶದ ದೊಡ್ಡ ಅಗ್ರಹಾರ (ವಿದ್ಯಾ ಕೇಂದ್ರ)ವಾಗಿದ್ದು ಪಾಂಡುಕುಲತಿಲಕನಾದ ಮಹಾರಾಜ ಜನಮೇಜಯನು ಸರ್ಪಯಾಗಗೈದು ತಪೋನಿಷ್ಠರೂ, ವಿದ್ಯಾಸಂಪನ್ನರೂ ಆಗಿದ್ದ ಬೇರೆ ಬೇರೆ ಗೋತ್ರದ 72 ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟಿರುವದಾಗಿ ಈ ಸಂಸ್ಕೃತ ಶಿಲಾಶಾಸನವು ಸ್ಪಷ್ಟಪಡಿಸುತ್ತದೆ.

ದ್ವಾಪರ ಯುಗದ ಅಂತ್ಯ ಕಾಲದಲ್ಲಿ ಜನಮೇಜಯ ಮಹಾರಾಜನು ಗದಗನಲ್ಲಿ ಕೈಗೊಂಡ ಸರ್ಪಯಾಗಕ್ಕೆ ಸಕಲ ವೇದ-ವೇದಾಂಗ ಪರಿಣಿತಋತ್ವಿಜರು ಭಾಗವಹಿಸಿದ್ದ ವಿಷಯ ಮತ್ತು ಶ್ರೀ ತ್ರಿಕೂಟೇಶ್ವರ ಹಾಗೂ ಶ್ರೀ ವೀರನಾರಾಯಣ ದೇವರ ದೇಗುಲಗಳು ಅಸ್ತಿತ್ವದಲ್ಲಿದ್ದ ವಿಷಯವನ್ನು ಇನ್ನೊಂದು ಸಂಸ್ಕೃತ ಶಿಲಾಲೇಖನವು ತಿಳಿಸುತ್ತದೆ. ಶತಮಾನಗಳಾಚೆ ಗದಗ ಸಂಸ್ಕೃತ ವಿದ್ಯೆಯ ತವರುಮನೆಯಾಗಿತ್ತು.

ವಿಜಯನಗರ ಕಾಲದ ಗದಗದ ಶಾಸನಗಳು ಅತ್ಯಂತ ಮಹತ್ವದ ಇತಿಹಾಸ ಪರಂಪರೆಯನ್ನು ದಾಖಲಿಸಿರುತ್ತವೆ. ಕಣವಿ ಗ್ರಾಮದ ಮೈಲಾರಲಿಂಗನ ದೇವಸ್ಥಾನದಲ್ಲಿರುವ ವೀರಗಲ್ಲು ಕ್ರಿ.ಶ. 1408, *ARSIE*, 1934-35, 71 ಕಾಲಾವಧಿಯನ್ನೊಳಗೊಂಡಿದ್ದು ಅರಸ ಹರಿಹರನು "ದುವೆ ನಾಯಕ ಮತ್ತು ಆತನ ಹೆಂಡತಿ ನಾಗಾಯಿದೇಮಾಯಿಯರ ಮರಣ" ವಿಷಯವನ್ನು ದಾಖಲಿಸಿರುವದು ತಿಳಿದು ಬರುತ್ತದೆ.

ಗದಗ ವೀರನಾರಾಯಣ ಮಂದಿರದ ಪ್ರಾಕಾರದ ಹೊರಗಿನ ಶಾಸನವು ಶ್ರೀ ಕೃಷ್ಣದೇವರಾಯನ ಕ್ರಿ.ಶ. 1520, *ARSIE*, 1926-27, 186 ಕಾಲಾವಧಿಯದಾಗಿದ್ದು ತಿಮ್ಮಪ್ಪನಾಯಕ ಅಯ್ಯನವರಿಂದ ಅರವಟ್ಟಿಗೆಗಳಿಗಾಗಿ ನಾಯನಪ್ಪ ನಾಯಕನಿಗೆ ಭೂದಾನಗೈದಿರುವದನ್ನು ತಿಳಿಸುತ್ತದೆ.

ಗದಗದ *ARSIE*, 1926–27, 7 ಈ ಶಾಸನವು ತ್ರಿಕೂಟೇಶ್ವರ ದೇವಾಲಯದಲ್ಲಿರುತ್ತದೆ. ಕ್ರಿ.ಶ. 1539, *SII*, xv, 252ರ ಅಚ್ಯುತರಾಯ ಅರಸನು ಬ್ರಾಹ್ಮಣರಿಗೆ ಕೊಟ್ಟ ಆನಂದನಿಧಿ (ಅಕ್ಷಯನಿಧಿ) ದಾನದ ವಿಷಯವನ್ನೊಳಗೊಂಡಿರುತ್ತದೆ.

ಗದಗದ ವೀರನಾರಾಯಣ ಮಂದಿರದ ಭಾವಿಯ ಹತ್ತಿರವಿರುವ *ARSIE*, 1926–27, 14, ಈ ಶಾಸನವು ಕ್ರಿ.ಶ. 1539, *SII*, xv, 253ರ ಅಚ್ಯುತರಾಯ ಅರಸನಿಂದ ಬ್ರಾಹ್ಮಣರಿಗೆ ಆನಂದನಿಧಿಯ ದಾನ ಹಾಗೂ ಕುಮಾರವ್ಯಾಸನ ಉಲ್ಲೇಖವನ್ನೊಳಗೊಂಡಿದೆ.

ಗದಗದ ವೀರನಾರಾಯಣ ಗುಡಿಯ ಪೂರ್ವ ದಿಕ್ಕಿನ ಪ್ರಾಕಾರದಲ್ಲಿರುವ *ARSIE*, 1926–27, 181 ಈ ಶಾಸನವು ಕ್ರಿ.ಶ. 1540ರ ಕಾಲಾವಧಿಯದಾಗಿದ್ದು ಅಚ್ಯುತರಾಯ ಅರಸನಿಂದ ಬ್ರಾಹ್ಮಣರಿಗೆ ಆನಂದನಿಧಿಯ ದಾನವಿತ್ತಿರುವುದನ್ನು ತಿಳಿಸುತ್ತದೆ.

ಸೊರಟೂರು ಗ್ರಾಮದ ಗಂಡುಮಕ್ಕಳ ಶಾಲೆಯ ಹತ್ತಿರವಿರುವ *ARSIE*, 1926–27, 70, ಈ ಶಾಸನವು *SII*, xv, 262 ಪುಟದಲ್ಲಿ ದಾಖಲಾಗಿದ್ದು ಸದಾಶಿವರಾಯ ಅರಸನು ತಿರುಮಲೋಜನಿಗೆ ದಾನಿವಿತ್ತುದನ್ನು ವ್ಯಕ್ತಪಡಿಸುತ್ತದೆಯಲ್ಲದೆ ಇದು ತ್ರುಟಿತವಾಗಿದ್ದರಿಂದ ಏನು ದಾನ ಕೊಟ್ಟಿರಬಹುದೆಂಬುದು ಅಸ್ಪಷ್ಟವಾಗಿಯೇ ಉಳಿಯುತ್ತದೆ.

ಹೊಂಬಳ ಗ್ರಾಮದ *ARSIE*, 1926–27, 48 ಹಡಪದವರ ಓಣಿಯಲ್ಲಿರುವ ಕ್ರಿ.ಶ. 1547ರ ಶಾಸನವು ಸದಾಶಿವರಾಯ ಅರಸನು ಮಲ್ಲೋಜ ಮತ್ತು ಚಂದೋಜರ ವಿನಂತಿಯ ಮೇರೆಗೆ ತೊರಗಲಿ ಸೀಮೆಯಲ್ಲಿ ಹಡಪಿಗರ ಸುಂಕ ವಿನಾಯಿತಿ ಮಾಡಿದುದನ್ನು ಉಲ್ಲೇಖಿಸಿರುತ್ತದೆ.

ಆಡಳಿತ ವ್ಯವಸ್ಥೆಯ ಅನುಕೂಲಕ್ಕಾಗಿ ಹಲವಾರು ಹಳ್ಳಿಗಳನ್ನೊಳಗೊಂಡಿರುವ ರಾಜಕೀಯ ವಿಭಾಗಗಳನ್ನು ರಚಿಸಿ ಅವುಗಳನ್ನು ಸಾಮಂತರು, ಮಾಂಡಲಿಕರು ಇಲ್ಲವೆ, ಗೌಡರ ಆಧೀನದಲ್ಲಿರಿಸುವುದು ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ಮುಂದುವರಿದಿರುವುದು ಕರ್ನಾಟಕದಲ್ಲಿ ಕಂಡುಬರುತ್ತದೆ. ಕಲ್ಯಾಣದ ಚಾಲ್ಯುಕರ ಕಾಲದಲ್ಲಿ ಗದಗ ಬೆಳವಲ 300 ಭಾಗದ ಮುಳಗುಂದ 12ರ ಒಂದು ಸಣ್ಣ ಆಡಳಿತ ವಿಭಾಗದಲ್ಲಿ ಸೇರಿಕೊಂಡಿತ್ತು. ಆದರೆ ವಿಜಯನಗರ ಕಾಲಕ್ಕಾಗಲೇ ಇಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ಗಮನಾರ್ಹ ಸ್ಥಿತ್ಯಂತರವಾದುದನ್ನು ಅವಲೋಕಿಸಬಹುದಾಗಿದೆ.

ವಿಜಯನಗರದ ಇಮ್ಮಡಿ ಹರಿಹರನ ಕ್ರಿ.ಶ. 1379ರ ತಾಮ್ರ ಶಾಸನವೊಂದರಲ್ಲಿ ಗದಗ ಪಂಪಾಹಸ್ತಿನಾವತಿ ಪ್ರಾಂತಕ್ಕೆ ಸೇರಿದ ಲಕ್ಕುಂಡಿ ಪೇಂಠೆ ಎಂಬ ರಾಜಕೀಯ ವಿಭಾಗದಲ್ಲಿನ ತೊರಗಲ್ಲು ನಾಡಿನ 66 ಹಳ್ಳಿಗಳಿಗೆ ರಾಜಧಾನಿಯಾಗಿತ್ತು. 66 ಹಳ್ಳಿಗಳ ಈ ವಿಭಾಗಕ್ಕೆ ಆಗ "ಗದುಗು ದೇಶ" ಎಂಬ ಹೆಸರಿತ್ತು.

ಗದಗಿನ ಸ್ಥಾನಿಕ ಆಡಳಿತದ ವಿಷಯಕವಾಗಿಯೂ ಕೆಲವೊಂದು ಅಂಶಗಳು ತಿಳಿದುಬರುತ್ತವೆ. ಗದಗ ಒಂದು ಅಗ್ರಹಾರವಾಗಿತ್ತು. ಅಗ್ರಹಾರಗಳು ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಅವುಗಳ ಆಡಳಿತದಲ್ಲಿ ಕೇಂದ್ರಸರ್ಕಾರವು ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅವುಗಳ ಆಡಳಿತವನ್ನು 'ಮಹಾಜನಗಳು' ಎಂಬ ಒಂದು ಸಂಸ್ಥೆ ನಿರ್ವಹಿಸಿಕೊಂಡು ಹೋಗುತ್ತಿತ್ತು. ಗದಗ ಅಗ್ರಹಾರದಲ್ಲಿ ದ್ವಾಸ್ತಪತ್ರೈ 72 ಮಹಾಜನರು ಅದರ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರೆಂದು ಶಾಸನಗಳಿಂದ ವಿದಿತವಾಗುತ್ತದೆ.

ಗದಗ ತಾಲೂಕಿನಲ್ಲಿ ವಿಜಯನಗರ ಕಾಲದ ಏಳು ಶಾಸನಗಳು ಲಭಿಸಿರುತ್ತವೆ. ಬುಕ್ಕರ ದೊರೆ ಮುಸಲ್ಮಾನರ ದಾಳಿಯಿಂದ ಕಳೆದುಕೊಂಡದ್ದನ್ನು ಪುನಃ ದೊರಕಿಸಿಕೊಂಡು ಮುಸಲ್ಮಾನರನ್ನು ಕೃಷ್ಣಾನದಿಯ ದಕ್ಷಿಣ ಪ್ರದೇಶದಿಂದಾಚೆ

ಬಲತ್ಕಾರದಿಂದ ಹೊರದಬ್ಬಿದನು. ಇದೇ ಸಂದರ್ಭದಲ್ಲಿ ಗದಗ ಪ್ರಾಂತಕ್ಕೆ ಸೇರಿದ ಡಂಬಳದಲ್ಲಿಯ ಕ್ರಿ.ಶ. 1379–80 ಶಾಸನವು ವಿಜಯನಗರದ ಇಮ್ಮಡಿ ಹರಿಹರನು 1377–1404ರ ಅವಧಿಯಲ್ಲಿ ಗದಗನ್ನು ಸ್ವಾಧೀನಪಡಿಸಿಕೊಂಡಿದುದನ್ನು ಸೂಚಿಸುತ್ತದೆಯಲ್ಲದೆ ಇದೇ ಸಮಯದಲ್ಲಿ ವಿಜಯನಗರದಲ್ಲಿ ಆಚರಿಸುವ ವಸಂತೋತ್ಸವ ಹಬ್ಬ (Spring Festival)ವನ್ನು "ವಿರೂಪಾಕ್ಷ ವಸಂತೋತ್ಸವ ಚಂಪೂ" ಎಂಬ ಕಾವ್ಯವು ತುಂಬಾ ಚೆನ್ನಾಗಿ ವರ್ಣಿಸುತ್ತದೆ, ಈ ವಸಂತೋತ್ಸವಕ್ಕೆ ಧಾರವಾಡದಿಂದ ಅನೇಕ ನಾಯಕರು ಪ್ರಮುಖವಾಗಿ ಭುಜಂಗನಗರದ ನಾಯಕ (ಹಾವನೂರ ನಾಯಕ), ಲಕ್ಷ್ಮಸನೇಶ್ವರದ (ಲಕ್ಷ್ಮೇಶ್ವರ) ನಾಯಕ ಹಾಗೂ ಡಂಬಳಪುರ ದೇಶದ ನಾಯಕರುಗಳು ಉಪಸ್ಥಿತರಿದ್ದರೆಂದು ಈ "ವಿರುಪಾಕ್ಷ ವಸಂತೋತ್ಸವ ಚಂಪೂ" ಕಾವ್ಯವು ನಿರೂಪಿಸುತ್ತದೆ.

ವಿಜಯನಗರದ ಇಮ್ಮಡಿ ಹರಿಹರನ ಕ್ರಿ.ಶ. 1379ರ ತಾಮ್ರ ಫಲಕದ ಪಟ್ಟಿಯೊಂದು ಗದಗ ದೇಶದ 22 ಗಾಮ್ರಗಳನ್ನು ಗದಗದ ದೇವತೆಗಳಾದ ತ್ರಿಕೂಟೇಶ್ವರ ಹಾಗೂ ವೀರನಾರಾಯಣ ದೇವರಿಗೆ ಉಂಬಳಿಯಾಗಿ ಕೊಟ್ಟಿರುವುದನ್ನು ವಿವರಿಸುತ್ತದೆ. ಈ ಕಾಲಕ್ಕೆ ಗದಗ ದೇಶವು ಪಂಪಾ–ಹಸ್ತಿನಾವತಿ ಪ್ರಾಂತಕ್ಕೆ ಸೇರಿದ ಲಕ್ಕುಂಡಿ ಪೇಂಠೆ ಎಂಬ ರಾಜಕೀಯ ವಿಭಾಗದಲ್ಲಿನ ತೊರಗಲ್ಲು ನಾಡಿನ 66 ಗ್ರಾಮಗಳನ್ನು ತನ್ನ ಮೇಲ್ವಾಳಿಕೆಯಲ್ಲಿ ಒಳಗೊಂಡಿತ್ತೆಂದು ಈ ತಾಮ್ರ ಫಲಕವು ವರ್ಣಿಸುತ್ತದೆ.

ಇಮ್ಮಡಿ ಹರಿಹರನ ಕ್ರಿ.ಶ. 1378ರ ದತ್ತಿ ಕೊಡುಗೆಗಳನ್ನು ಹೇಳುವ ತಾಮ್ರಶಾಸನವೊಂದು ಕ್ರಿಯಾಶಕ್ತಾಚಾರ್ಯರು ದೊರೆಗಳ ಕುಲಗುರುಗಳಾಗಿದ್ದರೆಂದು ಸಾರುತ್ತದೆ. ಇದೇ ಇಮ್ಮಡಿ ಹರಿಹರ ದೊರೆಯ ಗದಗದ 1379ರ ಫಲಕಗಳು ಅಥವಾ ಶಾಸನಗಳು ರಾಜಗುರುವಾದ ಶ್ರೀಮದ್ ರಾಜಗುರು ಮಹಾಮಂಡಲಾಚಾರ್ಯ ವಾಣೀವಿಲಾಸ ಕ್ರಿಯಾಶಕ್ತಿಯವರ ಸೂಚನೆಯ ಮೇರೆಗೆ ಇಮ್ಮಡಿ ಹರಿಹರನು ಕೊಟ್ಟ ದಾನದ ಬಗ್ಗೆ ಉಲ್ಲೇಖಿಸುತ್ತದೆ.

ತನ್ನ ಕುಲಗುರುವಾದ ಕ್ರಿಯಾಶಕ್ತಿಯ ಅಪ್ಪಣೆಯ ಮೇರೆಗೆ ಇಮ್ಮಡಿ ಹರಿಹರನು ಗದಗ ಪ್ರಾಂತವನ್ನು 66 ಗ್ರಾಮಗಳನ್ನಾಗಿ ವಿಭಜಿಸಿ ಪಂಡಿತ ವಿದ್ವಾಂಸರಿಗೆ ಉಂಬಳಿಕೊಟ್ಟನೆಂದು ಡಂಬಳದ ತಾಮ್ರಶಾಸನದಿಂದ ಶ್ರುತವಾಗುತ್ತದೆ. ಈ ಉಂಬಳಿ ಪಡೆದವರಲ್ಲಿ ಸೋಮಭಟ್ಟ, ಶ್ರೀರಂಗಭಟ್ಟ, ಹನುಮಾನ್ ಮೊದಲಾದವರು ಉದ್ದಾಮ ಕವಿಗಳಾಗಿದ್ದರೆಂದೂ ಶ್ರೇಷ್ಠ ಜೋತಿಷ್ಯಕ್ಕೆ ವಿರೂಪಾಕ್ಷ ಎಂಬುವವನು ಪ್ರಖ್ಯಾತನಾಗಿದ್ದನೆಂದು "ಜ್ಯೋತಿರ್ವಿದಾಭೋಗ" ಎಂಬ ಗ್ರಂಥದ ಕರ್ತೃ ಹರಿ ಎಂಬುವನೂ, ನರಸಿಂಹನೆಂಬುವವನು ಸಾಮವೇದವನ್ನು ಚೆನ್ನಾಗಿ ಅರಗಿಸಿಕೊಂಡವನೆಂದೂ ವೆಂಕಟನು ಶಾಸ್ತ್ರಜ್ಞನೆಂದೂ ಕಾಶೀನಾಥನು ಶಾಸ್ತ್ರಪಾರವಾರ ಪಾರಂಗತನೆಂದೂ ಇದೇ ಡಂಬಳ ತಾಮ್ರಶಾಸನದಲ್ಲಿ ದಾಖಲಾಗಿದೆ. ಶೃಂಗೇರಿ ಮಠಕ್ಕೆ ಸೇರಿದ ಶೃಂಗೇರಿ ಭಟ್ಟ, ವಿದ್ಯಾಶಂಕರ ಭಟ್ಟರಿಬ್ಬರಿಗೂ ವೃತ್ತಿಗಳು ಕೊಡಲ್ಪಟ್ಟಿವೆಯಂದು ಇದೇ ಡಂಬಳ ಶಾಸನದಿಂದ ಗೋಚರವಾಗುತ್ತದೆ.

ಅಚ್ಯುತರಾಯ ಮಹಾರಾಜನ ಕಾಲದ ಮೂರೂ ಶಾಸನಗಳಲ್ಲಿ ಗದಗದಲ್ಲಿರುವ ತ್ರಿಕೂಟೇಶ್ವರ ದೇವಾಲಯದಲ್ಲಿ ಒಂದು ಹಾಗೂ ವೀರನಾರಾಯಣ ದೇವರ ದೇವಸ್ಥಾನದಲ್ಲಿ ಎರಡು ಇರುತ್ತವೆ. ಈ ಶಾಸನಗಳು ಕ್ರಿ.ಶ. 1539–40ರಲ್ಲಿ ರಚಿಸಲ್ಪಟ್ಟವುಗಳಾಗಿವೆ. ಅಚ್ಯುತರಾಯ ಮಹಾರಾಯನು ಬ್ಯಾಹ್ಮಣರಿಗೆ ಆನಂದನಿಧಿ ಎಂಬ ಮಹಾದಾನವನ್ನು ವಿಜೃಂಭಣೆಯಿಂದ ನೆರೆವೇರಿಸಿದ ವಿಷಯವನ್ನು ಕುರಿತು ಈ ಮೂರು ಶಾಸನಗಳು ದಾಖಲಿಸಿರುತ್ತವೆ. ಒಂದು ಶಾಸನದಲ್ಲಿ ಕುಮಾರವ್ಯಾಸನ ಉಲ್ಲೇಖವಿದೆ. ಅಚ್ಯುತರಾಯನು ಅನಂದನಿಧಿ ಎಂಬ ದಾನ ಕೊಟ್ಟಿರುವ ಕುರಿತ ಕ್ರಿ.ಶ. 1539ರ ಶಾಸನವು ಹೀಗಿದೆ.

ಶಕವರ್ಷ 1461ನೆಯ ವಿಕಾರಿ ಸಂವತ್ಸರದ ಭಾದ್ರಪದ ಶುದ್ಧ ಶ್ರವಣ 12 ಮಂಗ[ಳ]ವಾರ ಪುಣ್ಯಕಾಲದೊಳು ಭಾಸ್ಕರಕ್ಷೇತ್ರ ತುಂಗಭದ್ರಾ ತೀರವಿ(ಠ)ಲೇಶ್ವರನ ಸನ್ನಿಧಿಯಲಿ ಮಾಧವ ಪ್ರೀತ್ಯರ್ಥವಾಗಿ ಆನಂದನಿಧಿಯೆಂಬ ದಾನವನ್ನು ಕೊಟ್ಟು ಸಮಸ್ತ ಭೂಸುರರನೂ ಸಂತೋಷಂಬಡಿಸಿ–ಪ್ರಶಸ್ತಿಯನು ಸಂಸ್ಕೃತಭಾಷಾ ಕವಿತ್ವದಲ್ಲಿ ಶಾರ್ದೂಲವಿಕ್ರೀಡಿತವೆಂಬ ವೃತ್ತಂಗಳನು ಗದಗಿನ ಶ್ರೀ ತ್ರಿಯಂಬಕದೇವರ ಸಂನಿಧಾನದಲ್ಲಿ ಶಿಲಾಶಾಸನಕ್ಕೆ ಬರಸಿದ ಧಂರ್ಮ್ಮಕೀರ್ತಿ ಪ್ರ–ಶೈಕ್ಷಣಿಕ ಕೇಂದ್ರ–ಅಗ್ರಹಾರ ಎಂದು ಉಲ್ಲೇಖಿತವಾಗಿದೆ.

ಅಗ್ರಹಾರ ಎಂದರೆ ಭೂಮಿ ಅಥವಾ ಗ್ರಾಮಗಳನ್ನು ಧಾರ್ಮಿಕ ಉದ್ದೇಶದ ಸಲುವಾಗಿ ಮತ್ತು ವಿದ್ಯಾಕೇಂದ್ರವನ್ನಾಗಿಸಲು ಬ್ರಾಹ್ಮಣರಿಗೆ ದತ್ತಿ ಅಥವಾ ಉಂಬಳಿಯಾಗಿ ಬಿಟ್ಟುಕೊಡುವುದೇ ಆಗಿದೆ. ಕರ್ನಾಟಕದಲ್ಲಿ ಶಿಕ್ಷಣದ ಸಲುವಾಗಿ ಅಧ್ಯಾಪಕರಿಗೆ ಅವರ ಉಪಜೀವನದ ಸಲುವಾಗಿ ಹಾಗೂ ಶಿಕ್ಷಣವೃತ್ತಿ ನಿರರ್ಗಳವಾಗಿ ಸಾಗುವ ನಿಮಿತ್ತ ಗ್ರಾಮಗಳನ್ನು ಉಂಬಳಿ ಹಾಕಿಕೊಡುವ ಒಂದು ರೂಢಿಯಿತ್ತು. ಹೀಗೆ ಉಂಬಳಿಯಾಗಿ ಕೊಡಲ್ಪಟ್ಟಿರುವ ಗ್ರಾಮಗಳೇ ಅಗ್ರಹಾರಗಳು. ಈ ಗ್ರಾಮಗಳನ್ನು ಉಂಬಳಿಯಾಗಿ ಪಡೆದವರು ಮಹಾಜನರು. ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರ, ಘಟಿಕಾ, ಮಠಗಳು ವಿದ್ಯಾಸಂಸ್ಥೆಗಳಿದ್ದವು. ಇವು ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ತಮ್ಮ ಪಾತ್ರವನ್ನು ನಿಭಾಯಿಸುತ್ತಿದ್ದವು.

ಗದಗ ವಿಜಯನಗರ ಕಾಲದ ಒಂದು ಸುಪ್ರಸಿದ್ಧ ಶೈಕ್ಷಣಿಕ ಕೇಂದ್ರವಾಗಿತ್ತು ಎಂಬುದು ಅದು ಆಗಿನ ಕಾಲದಲ್ಲಿಯೂ ಅಗ್ರಹಾರವಾಗಿ ಮುಂದುವರಿದುದರಿಂದ ವ್ಯಕ್ತವಾಗುತ್ತದೆ. ಚಾಲುಕ್ಯರ ಕಾಲದಲ್ಲಿಯಂತೆ ವಿಜಯನಗರ ಕಾಲದಲ್ಲಿಯೂ ಅಗ್ರಹಾರಗಳು ವೈದಿಕ ವಿದ್ಯೆಯ ಕೇಂದ್ರಗಳಾಗಿದ್ದವು. ಮಹಾಜನರು ವೈದಿಕ ವಿದ್ಯೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದರು. ಸಮೀಪದ ಹಳ್ಳಿಗಳಿಂದ ವಿದ್ಯಾರ್ಥಿಗಳು ಬಂದು ಅಂತಹ ಕೇಂದ್ರಗಳಲ್ಲಿ ಶಿಕ್ಷಣವನ್ನು ಮುಂದುವರಿಸುತ್ತಿದ್ದರು. ಇಂತಹ ಕೇಂದ್ರಗಳಲ್ಲಿ ವೇದಾಧ್ಯಯನದಲ್ಲಿ ಉಚ್ಚ ತರಗತಿಯ ಶಿಕ್ಷಣವನ್ನು ಕೊಡಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಮಾಣಿಗಳೆಂದು ಕರೆಯುತ್ತಿದ್ದರು. ಅವರಿಗೆ ಶಿಷ್ಯವೇತನವನ್ನು ಕೊಡಲಾಗುತ್ತಿತ್ತು. ಗದಗ ಅಗ್ರಹಾರವು ಅಂದಿನಿಂದ ಇಲ್ಲಿಯವರೆಗೂ ಇಂದಿಗೂ ಮುಂದುವರಿದುಕೊಂಡು ಬಂದಿದೆ. ಸರಸ್ವತಿ ಮಂದಿರದ ಸುತ್ತಲಿನ ಪ್ರದೇಶಕ್ಕೆ ಇಂದಿಗೂ ಅಗ್ರಹಾರವೆಂಬ ಹೆಸರು ಇದೆ. ಸಂಸ್ಕೃತ ಭಾಷೆ ಗದಗದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿತ್ತು. ಈ ಅಗ್ರಹಾರದ ವಿಷಯವಾಗಿ ಇನ್ನೂ ಹೆಚ್ಚಿನ ಮಾಹಿತಿ ಲಭ್ಯವಿರುವುದಿಲ್ಲ. ಹೀಗಾಗಿ ಸಂಶೋಧಕರು ಈ ನಿಟ್ಟಿನಲ್ಲಿ ಪ್ರಯತ್ನಿಸುವುದು ಅತ್ಯವಶ್ಯ.

ಕೋಟುಮಚಗಿಯು 11ನೆಯ ಶತಮಾನದಲ್ಲಿ ಖ್ಯಾತಿ ಪಡೆದ ಒಂದು ಅಗ್ರಹಾರವಾಗಿತ್ತು. ವಿಜಯನಗರ ಕಾಲದ ಒಂದು ಶಾಸನದ ಪ್ರಕಾರ ಈ ಕೋಟುಮಚಗಿ ಗ್ರಾಮದ ಅಗ್ರಹಾರಕ್ಕೆ ಸದಾಶಿವರಾಯ ಸಮುದ್ರ ಎಂದು ಪ್ರತಿನಾಮ ಅಥವಾ ಇನ್ನೊಂದು ಹೆಸರು ಇತ್ತೆಂದು ವಿದಿತವಾಗುತ್ತದೆ. ವಿಜಯನಗರದ ಅರಸ ಸದಾಶಿವರಾಯನು ಈ ಕೋಟುಮಚಗಿಯಲ್ಲಿ 'ಸದಾಶಿವರಾಯ ಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದ್ದನು. ಈ ಕೆರೆಯು ಇಂದಿಗೂ ಗ್ರಾಮೀಣರಿಗೆ ವರದಾನವಾಗಿದೆ. ಈ ಅಗ್ರಹಾರವು ಪ್ರಸಿದ್ಧ ಶಿಕ್ಷಣ ಕ್ಷೇತ್ರವಾಗಿತ್ತು. ಇದರ ಆಡಳಿತ ಕ್ರಮಬದ್ಧವಾಗಿತ್ತು. ಆದರೆ ವಿವರವಾದ ಮಾಹಿತಿ ಸಿಗದಿರುವದರಿಂದ ಹೆಚ್ಚಿನ ಆಕರಕ್ಕಾಗಿ ಸಂಶೋಧಕರು ಆಳವಾಗಿ ಅಧ್ಯಯನನಿರತರಾಗಬೇಕಾದ ಅಗತ್ಯತೆ ಕಂಡುಬರುತ್ತದೆ.

ವಿಜಯನಗರ ಕಾಲದಲ್ಲಿಯ ಗದುಗಿನ ಕನ್ನಡ ಸಾರಸ್ವತ ಪ್ರಪಂಚಕ್ಕೆ ಒಂದು ಭವ್ಯ ಐತಿಹ್ಯವಿದೆ. ವೈಭವದ ಪರಂಪರೆಯಿದೆ. ಸಾಹಿತ್ಯ ಪ್ರಪಂಚಕ್ಕೆ ಗದುಗಿನ ಕಾಣಿಕೆ ಗಾತ್ರದಲ್ಲಿ ಮತ್ತು ಸತ್ವದಲ್ಲಿಯೂ ಹಿರಿದಾಗಿದೆ. ಭವ್ಯ ಐತಿಹಾಸಿಕ ಪರಂಪರೆವುಳ್ಳದ್ದಾಗಿದೆ. ಈ ತಿರುಳ್ಗನ್ನಡದ ನಡುನಾಡಿನಲ್ಲಿ ಅದೆಷ್ಟೋ ಕವಿಗಳು ಶಾಸನ ಸಾಹಿತ್ಯವನ್ನು ಸೃಷ್ಟಿಸಿರುವರು. ಇದು ಶಾಸನ ಕವಿಗಳ ತವರೂರು.

ಕರ್ನಾಟಕ ಸಂಸ್ಕೃತಿಗೆ ಅಷ್ಟೇ ಅಲ್ಲ ಸಮಸ್ತ ಭಾರತೀಯ ಸಂಸ್ಕೃತಿಗೇ ಕೀರ್ತಿ ಹಾಗೂ ಹಿರಿಮೆ-ಗರಿಮೆಯನ್ನು ತಂದು ಕೊಟ್ಟು ಗೌರವ, ಮಹಿಮಾನ್ವಿತ ಕವಿಗಳ ನೆಲೆವೀಡಾದ ಕೀರ್ತಿ ಗದಗಕ್ಕೆ ಸಲ್ಲುತ್ತದೆ.

ಕವಿ ಸಾರ್ವಭೌಮ ಪಟ್ಟ ಹಾಗೂ ತನ್ನ ಕವಿತ್ವದಿಂದ ಶ್ರೇಷ್ಠ ಕವಿ ಎಂದು ಹೆಸರಾದ ಕುಮಾರವ್ಯಾಸನಿಗೆ ಗದಗ ಸಾರಸರ್ವಸ್ವವಿದ್ದಂತೆ, ಗದಗದ ವೀರನಾರಾಯಣ ಕುಮಾರವ್ಯಾಸನ ಜೀವವಿದ್ದಂತೆ, ಗದಗದ ವೀರನಾರಾಯಣನಲ್ಲಿ ಕುಮಾರವ್ಯಾಸನು ತನ್ನನ್ನು ತಾನು ಸಂಪೂರ್ಣ ಸಮರ್ಪಿಸಿಕೊಳ್ಳುತ್ತ ವೀರನಾರಾಯಣನನ್ನು ಹೀಗೆ ಬಣ್ಣಿಸಿದ್ದಾನೆ:-

"ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ
ರಾವಣಾಸುರ ಮಥನ ಶ್ರವಣ ಸು
ಧಾ ವಿನೂತನ ಕಥನ ಕಾರಣ
ಕಾವುದಾತನ ಜನವ ಗದುಗಿನ ವೀರನಾರಾಯಣ"

ಕನ್ನಡದ ವ್ಯಾಸ ಬ್ರಾಹ್ಮಣ ಕವಿ ಗದುಗಿನ ಕುಮಾರವ್ಯಾಸನು ಗದಗನ್ನು ಕನ್ನಡಿಗರ ಮನದಾಳದಲ್ಲಿ ಹೃದಯಾಂತರಾಳದಲ್ಲಿ ಚಿರನೂತನವಾಗಿ ಉಳಿಯುವಂತೆ ಮಾಡಿದ್ದಾನೆ. ಕುಮಾರವ್ಯಾಸನ ಕೀರ್ತಿ-ಗೌರವ ಮಹತಿಗಳೆಂದರೆ ಗದುಗಿನ ಕೀರ್ತಿ-ಗೌರವ ಮಹತಿ ಎಂದು ಕುಮಾರವ್ಯಾಸನೇ ಹೆಮ್ಮೆಯಿಂದ ತನ್ನ ಮನದಾಳದ ಭಾವನೆಗಳನ್ನು ಅಭಿವ್ಯಕ್ತಪಡಿಸಿದ್ದಾನೆ. ಗದಗಿನಿಂದಾಗಿಯೇ ಆತ 'ಮಹಾಭಾರತ'ವನ್ನು ಸೃಷ್ಟಿಸಿದ್ದಲ್ಲದೆ ಅದಕ್ಕೆ 'ಗದುಗಿನ ಭಾರತ' ಎಂದೂ ಕರೆಯುವಂತಾಗಿದೆ.

ಕುಮಾರವ್ಯಾಸ ಗದುಗಿನ ಭಾರತದ ಕೇವಲ ಹತ್ತು ಪರ್ವಗಳನ್ನಷ್ಟೇ ಬರೆದಿದ್ದು ಈತ ರಚಿಸದೇ ಬಿಟ್ಟಿರುವ ಇನ್ನುಳಿದ ಇತರ ಪರ್ವಗಳನ್ನು ತಿಮ್ಮಣ್ಣ ಕವಿಯು ಬರೆದು ಪೂರ್ಣಗೊಳಿಸಿರುವನೆಂಬ ಪ್ರತೀತಿ ಇದೆ.

ವಿಜಯನಗರದ ಕೃಷ್ಣದೇವರಾಯನ (1509-29) ಆಜ್ಞೆಯಂತೆ ತಿಮ್ಮಣ್ಣ ಕವಿಯು ಗದುಗಿನ ಭಾರತದ ಉಳಿದ ಪರ್ವಗಳನ್ನು ರಚಿಸಿದನೆಂಬುದು ವಿದಿತವಾಗುತ್ತದೆ. ಇದರಿಂದ ಕುಮಾರವ್ಯಾಸನು ಕ್ರಿ.ಶ. 1500ಕ್ಕಿಂತ ಮುಂಚಿನವನಾಗಿರಬೇಕೆಂದು ಗೊತ್ತಾಗುತ್ತದೆ. ಕುಮಾರವ್ಯಾಸನ ಹೆಸರು ಹಿರಿಮೆ ಕೀರ್ತಿ ಘನತೆ ಗದಗದ ಶ್ರೀ ವೀರನಾರಾಯಣನೊಂದಿಗೆ ಬೆರೆತು ನಿರಂತರವಾಗಿ ವಿಜಯನಗರ ಸಾಮ್ರಾಜ್ಯಕ್ಕೂ ಪಸರಿಸಿದ್ದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇಲ್ಲಿನ ಇನ್ನೂ ಹಲವಾರು ಕವಿಗಳ ಕೊಡುಗೆಯು ಅನನ್ಯವಾಗಿದೆ.

ವಿಜಯನಗರ ಅರಸರು ವೀರನಾರಾಯಣ ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡಿದ್ದರಿಂದ ಈ ದೇಗುಲದ ಗೋಪುರವು ವಿಜಯನಗರದ ಶಿಲ್ಪಕಲೆಯ ಮಾದರಿಯನ್ನು ಹೋಲುತ್ತದೆ.

ಹೀಗೆ ತಿರುಳ್ಗನ್ನಡ ನಾಡೆಂದೇ ಖ್ಯಾತಿ ಪಡೆದಿರುವ ಗದಗ ಕರ್ನಾಟಕದಲ್ಲಿ ವಿಶಿಷ್ಟವಾದ ಸ್ಥಾನಮಾನ ಗಳಿಸಿ ಪ್ರಾಚೀನಕಾಲದ ಸಾಂಸ್ಕೃತಿಕ ಕೇಂದ್ರವೆನಿಸಿ ತನ್ನದೇ ಆದ ಅಪೂರ್ವ ಐತಿಹಾಸಿಕ ಪರಂಪರೆಯನ್ನು ವಿಜಯನಗರ ಅರಸರ ಆಡಳಿತದಲ್ಲಿ ಪಡೆದಿರುವುದು ತಿಳಿಯುತ್ತದೆ.

12. ವಿಜಯನಗರದ ಆಡಳಿತದಲ್ಲಿ ನಾಯಂಕರ ಪದ್ಧತಿ

ಶ್ರೀ ಎಸ್. ಕೆ. ವಾಸುದೇವ

ಪ್ರಾಚೀನ ಭಾರತದಲ್ಲಿ ರಾಜನ ಕರ್ತವ್ಯಗಳಲ್ಲಿ ಪ್ರಮುಖವಾದುದು ತನ್ನ ರಾಜ್ಯದ ಪ್ರಜೆಗಳ ಪರಿಪಾಲನೆ. ಅಂದರೆ, ರಾಜನು ತನ್ನ ರಾಜ್ಯದ ಎಲ್ಲೆಯ ಒಳಗಿರುವ ಎಲ್ಲಾ ಪ್ರಜೆಗಳ ಪ್ರಾಣ ಮತ್ತು ಆಸ್ತಿಯನ್ನು ರಕ್ಷಿಸಬೇಕಾಗಿತ್ತು. ಭಾರತದ ಅರಸು ಮನೆತನಗಳು ತಮ್ಮ ಸಾಮ್ರಾಜ್ಯದ ರಕ್ಷಣೆಗಾಗಿ ಸೈನ್ಯವನ್ನು ಹೊಂದಿರುತ್ತಿದ್ದರು. ಸೈನ್ಯದ ಖರ್ಚಿನ ನಿರ್ವಹಣೆಗಾಗಿ ಮತ್ತು ಇತರ ಖರ್ಚುಗಳನ್ನು ನಿರ್ವಹಿಸಲು ರಾಜನು ತನ್ನ ಪ್ರಜೆಗಳಿಂದ ವಸೂಲು ಮಾಡುತ್ತಿದ್ದ ಅಲ್ಪ ತೆರಿಗೆಯನ್ನು ಕಂದಾಯವೆಂದು ಕರೆಯುತ್ತಿದ್ದರು.

ಭಾರತೀಯ ಅರಸರುಗಳು ತಮ್ಮ ಆದಾಯವನ್ನು ನಾಲ್ಕು ಭಾಗವನ್ನಾಗಿ ವಿಭಾಗಿಸಿಕೊಂಡು ಒಂದು ಭಾಗವನ್ನು ಪ್ರಜೆಗಳ ಯೋಗಕ್ಷೇಮ, ಅಭಿವೃದ್ಧಿ ಹಾಗೂ ಮನೋರಂಜನೆಗೆ ವ್ಯಯಿಸಬಹುದು ಎರಡು ಭಾಗವನ್ನು ಸೈನ್ಯದ ಖರ್ಚಿಗಾಗಿ ವ್ಯಯಿಸಬೇಕು. ಒಂದು ಭಾಗವನ್ನು ರಾಜ್ಯದ ಕೋಶದಲ್ಲಿ ಸಂರಕ್ಷಿಸಿಡಬೇಕಾಗಿತ್ತು. ಇದೇ ನೀತಿಯನ್ನು ಕೃಷ್ಣದೇವರಾಯನ ಅಮುಕ್ತಮೌಲ್ಯದ ಕೃತಿಯು ಸಹ ಅನುಮೋದಿಸುತ್ತದೆ. ಇದರಿಂದ ತೆರಿಗೆಯ ಸಂಗ್ರಹಣೆ, ಸೈನ್ಯ, ಸಂಘಟನೆ ಅದರ ಪರಿಪಾಲನೆ ರಾಜನ ಆದ್ಯ ಕರ್ತವ್ಯವಾಗಿತ್ತೆಂದು ತಿಳಿದುಬರುತ್ತದೆ. ಇದು ಪರಂಪರಾನುಗತವಾದ ರಾಜನ ಕರ್ತವ್ಯಗಳಲ್ಲಿ ಸಹ ಒಂದಾಗಿತ್ತು.

ಗುಪ್ತಯುಗ ಆಡಳಿತ ಮಾದರಿಯ ತಳಹದಿಯ ಮೇಲೆ ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ರೂಪುಗೊಂಡಿತ್ತೆಂದು ತಿಳಿದುಬರುತ್ತದೆ. ಅಂದರೆ ಧರ್ಮ, ಧರ್ಮಶಾಸ್ತ್ರ ಮತ್ತು ಪರಂಪರೆಯನ್ನು ಆಧರಿಸಿ ರಾಜ್ಯಾಡಳಿತ ನೆರವೇರುತ್ತಿತ್ತು. ರಾಜ್ಯದಲ್ಲಿ ಸಾಮಾನ್ಯವಾಗಿ ಒಂದು ಬಗೆಯ ಗಣರಾಜ್ಯ ವ್ಯವಸ್ಥೆಯ ಅಧಿಕಾರ ಚಲಾವಣೆಯಲ್ಲಿತ್ತು. ಇಲ್ಲಿ ನಾಯಂಕರರ ಪಾತ್ರವನ್ನು ಅಧ್ಯಯನ ಮಾಡುವ ಮುನ್ನ ರಾಜ್ಯದ ಆಡಳಿತ ಕ್ರಮವನ್ನು ಸೂಕ್ಷ್ಮವಾಗಿ ಅರಿಯಬೇಕಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ಅರಸರು ಚಕ್ರವರ್ತಿ ಎನಿಸಿಕೊಂಡು ಬಹು ವಿಸ್ತಾರವಾದ ಸಾಮ್ರಾಜ್ಯವನ್ನು ತನ್ನ ಅಧಿಪತ್ಯದಲ್ಲಿ ಹೊಂದಿದ್ದರೂ ಬುಕ್ಕ ಹರಿಹರ ಇತ್ಯಾದಿ ಅರಸರು ತಮ್ಮನ್ನು ಮಹಾಮಂಡಲೇಶ್ವರರೆಂದು ಕರೆದುಕೊಂಡರೂ ಅವರು ಅತಿವಿಸ್ತಾರವಾದ ಭೂಪ್ರದೇಶದ ಮೇಲೆ ತಮ್ಮ ಪ್ರಭುತ್ವ ಹೊಂದಿದ್ದರು. ಆದರೂ ಅವರುಗಳು ತಮ್ಮ ಸಾಮ್ರಾಜ್ಯದ ಇತರ ಭಾಗಗಳನ್ನು ಆಳ್ವಿಕೆ ಮಾಡಲು ತಮ್ಮ ಸಹೋದರರನ್ನು ಅಥವಾ ರಾಜಮನೆತನದವರನ್ನು ರಾಜ್ಯಗಳ ಅಥವಾ ವಿಶಾಲವಾದ ಪ್ರಾಂತ್ಯಗಳ ಪ್ರಾಂತ್ಯಾಧಿಪತಿಗಳಾಗಿ ನೇಮಿಸುತ್ತಿದ್ದರು. ಅವರುಗಳು "ಒಡೆಯ" ಬಿರುದಿನೊಂದಿಗೆ ತಮ್ಮ ರಾಜ್ಯದ ಪರಿಪಾಲನೆಯನ್ನು ಮಾಡುತ್ತಿದ್ದರು. ಇವರುಗಳಿಗೆ ತಮ್ಮ ರಾಜ್ಯದ ಆಂತರಿಕ ವ್ಯವಹಾರದಲ್ಲಿ ಸಂಪೂರ್ಣ ಸ್ವಾತಂತ್ರವಿತ್ತಲ್ಲದೆ ಅವರುಗಳು ಸ್ವತಂತ್ರವಾಗಿ ದಾನಕೊಡುವ ಅಧಿಕಾರವನ್ನೂ ರಾಜತ್ವದ ಲಾಂಛನಗಳನ್ನೂ ಹೊಂದುವ ಅಧಿಕಾರ ಉಳ್ಳವರಾಗಿದ್ದರು. ಅಂದಮೇಲೆ ವಿಜಯನಗರದ ಚಕ್ರವರ್ತಿಗಳು ಹಲವಾರು ಮಂಡಲಾಧಿಪತಿಗಳ ಒಡೆಯರಾಗಿದ್ದರು. ಮಂಡಲಾಧಿಪತಿಗಳು ಮಹಾರಾಜ, ರಾಜರ, ಪಾಳೆಯಗಾರ ಎಂದು ಕರೆಸಿಕೊಳ್ಳುವ ಇತರ ಕೆಳವರ್ಗದ ಆಡಳಿತಗಾರರ ಮೇಲೆ ಪ್ರಭುತ್ವ ಹೊಂದಿದ್ದರು. ಪ್ರಾಂತ್ಯಾದಿಕಾರಿಗಳ ಕೆಳಗೆ ಕಾರ್ಯನಿರ್ವಹಿಸುತ್ತಿದ್ದವರು. ಪ್ರಾಂತ್ಯಾಧಿಕಾರಿಗಳಿಗೆ ನಿಷ್ಠರಾಗಿರುತ್ತಿದ್ದರೆ ವಿನಃ ಚಕ್ರವರ್ತಿಗಳಿಗಲ್ಲ. ಈ ಬಗೆಯ ರಾಜಕೀಯ ನೀತಿಯನ್ನು ಉಮ್ಮತ್ತೂರಿನ ದಂಗೆ, ಮುಂತಾದ ಸ್ಥಾನಿಕ ಅರಸರು ವಿಜಯನಗರ ಸಾಮ್ರಾಜ್ಯದ ವಿವಿಧ ಕಾಲಘಟ್ಟಗಳಲ್ಲಿ ಕೇಂದ್ರಸರ್ಕಾರದ ವಿರುದ್ಧ ಕೈಗೊಂಡ ವಿಪ್ಲವಗಳಲ್ಲಿ ಕಾಣಬಹುದಾಗಿದೆ.

ಪ್ರಾಂತ್ಯಾಧಿಕಾರಿ, ಅಥವಾ ರಾಜಪ್ರತಿನಿಧಿಯು ಸೈನಿಕ ಅಧಿಕಾರ ಮತ್ತು ನಾಗರೀಕ ಅಧಿಕಾರವನ್ನು ಹೊಂದಿದ್ದನು. ಅವನು ನಿಷ್ಠನಾಗಿರುವಷ್ಟು ದಿನಗಳು ಅವನು ಸಾಮ್ರಾಜ್ಯದ ಅಧಿಕಾರಿಯಾಗಿರುತ್ತಿದ್ದನು. ಇಲ್ಲವೆ ಚಕ್ರವರ್ತಿಗೆ ಪ್ರತಿಸ್ಪರ್ಧಿಯಾಗುತ್ತಿದ್ದನು. ಈ ಹಂತದಲ್ಲಿ ವಿಜಯನಗರ ಸಾಮ್ರಾಜ್ಯದ ಕೆಳವರ್ಗದ ಸೈನಿಕ ಮತ್ತು ನಾಗರೀಕ ಅಧಿಕಾರಿಗಳೊಂದಿಗೆ ಪ್ರಾಂತ್ಯಾಧಿಪತಿಗಳು ಅಪಾರವಾದ ಸ್ನೇಹ ಅಥವಾ ಸಲುಗೆ ಹೊಂದದಿರಲೆಂದು ಅವರುಗಳನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಾವಣೆ ಮಾಡುವ ಪದ್ಧತಿ ಚಾಲ್ತಿಯಲ್ಲಿತ್ತು. ಆದರೆ ಈ ಪದ್ಧತಿ ಕೃಷ್ಣದೇವರಾಯನ ಮರಣದ ತರುವಾಯ ಕ್ಷಯಿಸಿ ವಂಶಪಾರಂಪರ್ಯವಾಗಿ ಮುಂದುವರಿಯಲಾರಂಭಿಸಿತು. ಈ ಕಾಲದ ಮತ್ತೊಂದು ವಿಶೇಷತೆ ಎಂದರೆ ದಂಡನಾಯಕರುಗಳು ಬಹಳಷ್ಟು ಪ್ರದೇಶಗಳ ಮೇಲೆ ಪ್ರಭುತ್ವವನ್ನು ಹೊಂದಿದ್ದರು. ಉದಾಹರಣೆಯಾಗಿ, ಮಹಾಪ್ರಧಾನ ಸಿಂಗಣ ದಂಡನಾಯಕನು ಬಾರಿಕೂರು ರಾಜ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದುದನ್ನು ಕ್ರಿ.ಶ. 1475ರ ಉಡುಪಿ ತಾಲ್ಲೂಕಿನ ಶಾಸನ ಖಚಿತಪಡಿಸುತ್ತವೆ.[1] ಹಾಗಾಗಿ, ರಾಜಪ್ರತಿನಿಧಿಗಳು ಬಹಳವಾಗಿ ದಂಡನಾಯಕರಾಗಿ ಸಹ ಕಾರ್ಯನಿರ್ವಹಿಸುತ್ತಿದ್ದರು. ಶ್ರೀರಂಗಪಟ್ಟಣ 1565ರ ರಕ್ಕಸದಂಗಡಿ ಯುದ್ಧದ ನಂತರ ರಾಜ್ಯವಾಗಿ ಪರಿವರ್ತಿತವಾದ ಮೇಲೆ ಎರಡನೆ ವೆಂಕಟನು ಚಕ್ರವರ್ತಿಯಾದನು. ಅವನ ತಮ್ಮ ತಿರುಮಲನು ಶ್ರೀರಂಗಪಟ್ಟಣದ ರಾಜಪ್ರತಿನಿಧಿಯಾಗಿದ್ದರೂ ಚಕ್ರವರ್ತಿಯ ಆಜ್ಞೆಗಳನ್ನು ಸಾಮ್ರಾಜ್ಯದ ಹಿತದೃಷ್ಟಿಗೆ ಪೂರಕವಾಗಿ ಪಾಲಿಸದೆ ಬಂಡಾಯವೆದ್ದುದನ್ನು ಕಾಣಬಹುದು. ರಾಜಪ್ರತಿನಿಧಿ ತಿರುಮಲ ಮತ್ತು ಚಕ್ರವರ್ತಿ ವೆಂಕಟಪತಿಯ ಮನಸ್ತಾಪ ಮೈಸೂರು ಸಂಸ್ಥಾನದ ಉದಯಕ್ಕೆ ಕಾರಣವಾಯಿತು. ಅದೇನೇ ಇದ್ದರೂ ನಾಯಂಕರ ಪದ್ಧತಿಯು, ವಿಜಯನಗರ ಸಾಮ್ರಾಜ್ಯದ ಆರಂಭದಿಂದಲೂ ಇದ್ದಿತಾದರೂ ಅದು ಅತ್ಯಂತ ವ್ಯವಸ್ಥಿತ ಹಂತ ತಲುಪಿದುದು ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ.

ಮಹಾದಂಡನಾಯಕ ಅಥವಾ ದಂಡನಾಯಕರುಗಳ ಅಧೀನದಲ್ಲಿ ಕಂಡುಬರುವ ಅಧಿಕಾರ ವರ್ಗವೇ ನಾಯಕರು, ಅಮರನಾಯಕರು ಮತ್ತು ಪಟ್ಟಿಯ ನಾಯಕರು. ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಬಗೆಗೆ ಅಧ್ಯಯನ ಮಾಡಿದರು. ಡಾ. ಬಿ.ಎ. ಸಾಲೆತೊರೆಯವರು[2] ಮಹಾದಂಡನಾಯಕರ ಅಡಿಯಲ್ಲಿ ಕಾರ್ಯನಿರ್ವಹಿಸುವ ನಾಯಕರು, ಅಮರನಾಯಕರು ಮತ್ತು ಪಟ್ಟಿಯ ನಾಯಕರ ನಿರ್ಧಿಷ್ಟವಾದ ಕಾರ್ಯವ್ಯಾಪ್ತಿಯನ್ನು ನಿರ್ಧರಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ನಾಯಕರು, ಅಮರ ನಾಯಕರು, ರಾಜ್ಯದ ರಾಜ್ಯಪಾಲ ಹುದ್ದೆಯಿಂದ ಆಡಳಿತ ವರ್ಗದ ಸಾಮಾನ್ಯ ಅಧಿಕಾರಿಯವರೆಗೆ ವಿವಿಧ ಸ್ತರದ ಅಧಿಕಾರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ಅಮರನಾಯಕರುಗಳು ಮಿಲಿಟರಿ ಆಡಳಿತದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದೂ ಅಭಿಪ್ರಾಯಪಡುತ್ತಾರೆ.[3]

ಫ್ಲೀಟರು ಅಮರನಾಯಕತನದ ಬಗ್ಗೆ ಹೀಗೆ ಅಭಿಪ್ರಾಯ ಪಡುತ್ತಾರೆ. "ಅಮರನಾಯಕತನ ಅಥವಾ ಅಮರನಾಯಕ ಪದ್ಧತಿಯ ಬಗ್ಗೆ ನಿಖರವಾಗಿ ಏನನ್ನೂ ಹೇಳಲಾಗುವುದಿಲ್ಲ ಅಮರನಾಯಕ ಎಂಬುದು ಇಂದ್ರನ ಬಿರುದುಗಳಲ್ಲಿ ಒಂದು. ಅಂದರೆ ಅಳಿವಿಲ್ಲದವರ ನಾಯಕ ಎಂಬ ಅರ್ಥ ಬರುತ್ತದೆ ಎಂದು ಭಾವಿಸುತ್ತಾರೆ.[4] ಇದಕ್ಕೆ ಸಾಕ್ಷಿಯಾಗಿ ಸದಾಶಿವರಾಯರು ಮಹಾಮಂಡಲೇಶ್ವರ ರಾಮರಾಜು ತಿರುಮಲದೇವ ಮಹಾರಾಜಯ್ಯನ ಮಗ ರಾಮ ರಾಜು ಗಾರುವಿಗೆ ಪೆನುಗೊಂಡೆ ಸೀಮೆಯ ರಾಜಪ್ರತಿನಿಧಿಯ ಅಧಿಕಾರವನ್ನು ಅಂದರೆ ಅಮರನಾಯಕತನವನ್ನು ನೀಡಿದ್ದನ್ನು ನೋಡಬಹುದು.[5] ಪ್ರಾಂತ್ಯದ ಪ್ರಾಂತ್ಯಾಧಿಪತಿಗಳನ್ನು ಅಥವಾ ರಾಜಪ್ರತಿನಿಧಿಗಳನ್ನು ದಂಡನಾಯಕರೆಂದು ಕರೆಯುವ ಪದ್ಧತಿ ಸಹ ಚಾಲ್ತಿಯಲ್ಲಿತ್ತು. ಸಾಳುವ ಗೋವಿಂದರಾಜನಿಗೆ ಕೃಷ್ಣದೇವರಾಯನು 1522ರಲ್ಲಿ ಕುಡುಗುನಾಡಿನ ತೆಂಕಣಾಂಬಿ ಸ್ಥಳದ ಕೋಡಿಹಳ್ಳಿ ಮತ್ತು ಅದರ ಉಪಗ್ರಾಮಗಳನ್ನು ಅಮರನಾಯಕತನಕ್ಕೆ ತನ್ನ ನೀಡಿರುವುದನ್ನು ಸಹ ಇಲ್ಲಿ ದಾಖಲಿಸಬಹುದು.[6]

ಕ್ರಿ.ಶ. 1495ರಿಂದ ಪ್ರಾರಂಭಮಾಡಿ, 1565ರ ವರೆಗೆ ಅಮರನಾಯಕತನಕ್ಕೆ ನೀಡಿದ ಹಲವಾರು ದಾನಗಳನ್ನು ಹೆಸರಿಸಬಹುದು. ಆದರೆ ಇವುಗಳಲ್ಲಿ ಅಮರನಾಯಕತನದ ನಿರ್ಧಿಷ್ಟವಾದ ವೃತ್ತಿಯಾಗಲೀ, ಕರ್ತವ್ಯಗಳಾಗಲಿ ಆಡಳಿತದಲ್ಲಿ ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳಾಗಲಿ ಖಚಿತವಾಗುವುದಿಲ್ಲ.

ಟಿ. ವಿ. ಮಹಾಲಿಂಗಂ ಅವರನ್ನು ಆಧರಿಸಿ ಅಭಿಪ್ರಾಯ ಪಡುವುದಾದರೆ[7] "ಅಮರನಾಯಕರುಗಳು ತಮ್ಮ ಆಂತರಿಕ ಆಡಳಿತದಲ್ಲಿ ಬಹಳಷ್ಟು ಸ್ವಾತಂತ್ರ್ಯವನ್ನು ಹೊಂದಿರುತ್ತಿದ್ದರು. ಅಮರನಾಯಕರ ಆಂತರಿಕ ಆಡಳಿತದಲ್ಲಿ ಚಕ್ರವರ್ತಿ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಚಕ್ರಾಧಿಕಪತ್ಯಕ್ಕೆ ಸಲ್ಲಬೇಕಾದ ಅವರ ಜವಾಬ್ದಾರಿಗಳನ್ನು ಅವರು ಸರಿಯಾಗಿ ನಿರ್ವಹಿಸುತ್ತಿರುವವರೆಗೆ ಅವರು ತಮ್ಮ ಕ್ಷೇತ್ರದಲ್ಲಿ ಪ್ರಶ್ನಾತೀತರಾಗಿರುತ್ತಿದ್ದರು. ಅವರುಗಳು ತಮ್ಮದೇ ಆದ ಆಸ್ಥಾನ, ಆಸ್ಥಾನಿಕರು, ಮಂತ್ರಿಮಂಡಲ, ತಮ್ಮ ಆಡಳಿತ ಪ್ರದೇಶದ ಆಡಳಿತ ಮತ್ತು ರಕ್ಷಣೆಗೆ ಸೇನೆಯನ್ನು ಮತ್ತು ಇತರ ಅಧಿಕಾರಗಳನ್ನು ನೇಮಿಸಿಕೊಳ್ಳಲು ಸಂಪೂರ್ಣ ಸ್ವಾತಂತ್ರರಾಗಿದ್ದರು. ಈ ಎಲ್ಲಾ ಸ್ವಾತಂತ್ರ್ಯ ಮತ್ತು ಅಧಿಕಾರಗಳು ಪ್ರತಿ ರಾಜ್ಯಪಾಲನ ಅಥವಾ ದಂಡನಾಯಕನ ಸ್ಥಾನ, ಆತನ ಸಾಮರ್ಥ್ಯಶಕ್ತಿ, ಯುಕ್ತಿ ರಾಜನು ಆತನ ಮೇಲೆ ಹೊಂದಿರುವ ವಿಶ್ವಾಸ ಮತ್ತು ಆತನು ಸಾಮ್ರಾಟನಿಗೆ ತೋರಿಸುವ ನಿಷ್ಠೆಯನ್ನು ಅನುಸರಿಸಿದ್ದಿತು. ಕೆಲವೊಂದು ದಂಡನಾಯಕರುಗಳು ನಾಣ್ಯಗಳನ್ನು ಹೊರಡಿಸುವಷ್ಟು ಸ್ವತಂತ್ರರಾಗಿದ್ದರೂ ಅಮರನಾಯಕರಾಗಿದ್ದವರು, ರಾಜನ ಅನುಮತಿ ಇಲ್ಲದೆ ನಾಣ್ಯಗಳನ್ನು ಹೊರಡಿಸಿದರೆ ಅಂಥಹವರನ್ನು ಚಕ್ರವರ್ತಿಗಳು ಶಿಕ್ಷಿಸುತ್ತಿದ್ದುದು ಸಹ ಸಾಮ್ರಾಜ್ಯದಲ್ಲಿ ಚಲಾವಣೆಯಲ್ಲಿತ್ತು. ಯಲಹಂಕನಾಡ ಪ್ರಭುಗಳ ಮನೆತನದ ಮೊದಲನೆ ಕೆಂಪೇಗೌಡನು ಸಾಮ್ರಾಟನ ಅನುಮತಿ ಇಲ್ಲದೆ ಭೈರವ ನಾಣ್ಯಗಳನ್ನು ಟಂಕಿಸಿದ್ದರಿಂದ ರಾಮರಾಯನು ಆತನನ್ನು ರಾಜಧಾನಿಗೆ ಕರೆಸಿಕೊಂಡು ಆತನನ್ನು ಬಂಧನದಲ್ಲಿರಿಸಿದ್ದನೆಂದೂ, ಆತನ ಬಂಧುಮಿತ್ರರೂ ಹಾಗೂ ಹಿತೈಷಿಗಳು ದಂಡ ತೆತ್ತು ಒಂದನೇ ಕೆಂಪೇಗೌಡನನ್ನು ಬಂಧನದಿಂದ ಬಿಡುಗಡೆ ಗೊಳಿಸಿದ್ದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ.[8]

ಅಮರನಾಯಕರುಗಳಾಗಿದ್ದ ರಾಜಪಾಲರುಗಳು ತಮ್ಮ ರಾಜ್ಯದ ಮೇಲಾಗುವ ಧಾಳಿಗಳನ್ನು ಎದುರಿಸಿ ಸಾಮ್ರಾಜ್ಯವನ್ನು ರಕ್ಷಿಸುವ ಮತ್ತು ರಾಜ್ಯವನ್ನು ಸಂರಕ್ಷಿಸುವ ಕಾರ್ಯವನ್ನು ನೆರವೇರಿಸಬೇಕಾಗಿದ್ದಿತು. ಆತನೆ ರಾಜ್ಯದ ಕಂದಾಯ ನಿರ್ವಹಿಸುವ ಅಧಿಕಾರ ಹೊಂದಿದ್ದನಲ್ಲದೆ, ಆ ಪ್ರಾಂತ್ಯದ ಪ್ರಮುಖ ನ್ಯಾಯಾಧೀಶನಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದನು.[9] ನ್ಯೂಜಿಜ್‌ನು ತನ್ನ ವಿವರಣೆಯಲ್ಲಿ ಸಾಮ್ರಾಜ್ಯದ ರಾಜ್ಯಪಾಲರುಗಳು ಮತ್ತು ಅವರುಗಳು ಹೊಂದಿದ್ದ ಸೇನೆ, ಅವರ ವರಮಾನ ಮತ್ತು ಅವರು ರಾಜ್ಯಕ್ಕೆ ಸಲ್ಲಿಸಬೇಕಾಗಿದ್ದ ರಾಜಸ್ವನಿಧಿಯ ಪ್ರಮಾಣವನ್ನು ವಿವರವಾಗಿ ದಾಖಲಿಸಿದ್ದಾನೆ. ಈ ವಿವರಗಳನ್ನು ಡಾ. ಎ.ವಿ. ವೆಂಕಟರತ್ನಂರವರ ಕೃತಿಯಲ್ಲಿ ಮತ್ತು ಕರ್ನಾಟಕ ಚರಿತ್ರೆ ಮಾಲಿಕೆಯ ಮೂರನೆ ಸಂಪುಟದಲ್ಲಿ ವಿವರವಾಗಿ ದಾಖಲಿಸಿದ್ದಾರೆ.[10] ಈ ಅಮರನಾಯಕರುಗಳು ಹೊಂದಿದ್ದ ಆದಾಯವನ್ನು ಗಮನಿಸಿದಾಗ ಅತಿ ಕಡಿಮೆ ಎಂದರೆ 15,000 ಪರ್ದಾವೋಗಳ ಆದಾಯವನ್ನು ಹೊಂದಿದ್ದ ಅಮರನಾಯಕರು ಇದ್ದರು. ಅಲ್ಲದೆ ಅತಿ ಹೆಚ್ಚು ಆದಾಯ ಹೊಂದಿದ್ದ ಅಂದರೆ ವಾರ್ಷಿಕವಾಗಿ ಹನ್ನೆರಡು ಲಕ್ಷ ಚಿನ್ನದ ಪರ್ದಾವೋಗಳ ವರಮಾನ ಹೊಂದಿದ ಅಮರನಾಯಕನಿದ್ದನು. ಈ ಅಮರ ನಾಯಕರು ಹೊಂದಿರಬೇಕಾಗಿದ್ದ ಸೈನ್ಯದ ಸಂಖ್ಯೆ ಹಾಗೂ ಅವರು ಹೊಂದಿರುತ್ತಿದ್ದ ಕಂದಾಯದ ವರಮಾನದಲ್ಲಿ ಏಕರೂಪತೆಯಿರಲಿಲ್ಲ.

	ರಾಜ	ವರಮಾನ	ಸೈನ್ಯ	ರಾಜಸ್ವ
1.	ಮುದಗಲ್ಲಿನ ರಾಜ ಬಾಜಪ್ಪ ನಾಯಕ	4,00,100 ಪರ್ಡಾವೋ	10,000 ಪದಾತಿ 8,000 ಕುದುರೆ 50 ಆನೆ	1,50,000 ಪರ್ಡಾವೋ
2.	ಬಂದಗರಾದ ರಾಜನರವರ	4,00,000 ಪರ್ಡಾವೋ	12,000 ಪದಾತಿ 600 ಕುದುರೆ 20 ಆನೆ	2,00,000 ಪರ್ಡಾವೋ
3.	ಗುತ್ತಿಯ ಆದಪ್ಪನಾಯಕ	3,00,000 ಪರ್ಡಾವೋ	8,000 ಪದಾತಿ 800 ಕುದುರೆ 30 ಆನೆ	40,000 ಪರ್ಡಾವೋ
4.	ಅರಸಬಾಜಪನಾಯಕ ಬೂದಿಹಾಳ	3,00,000 ಪರ್ಡಾವೋ	10,000 ಪದಾತಿ 800 ಕುದುರೆ 15 ಆನೆ	10,000 ಪರ್ಡಾವೋ
5.	ಬೆನಪ್ಪನಾಯಕ ಕಳಲೆ	3,00,000 ಪರ್ಡಾವೋ	10,000 ಪದಾತಿ 800 ಕುದುರೆ	1,00,000 ಪರ್ಡಾವೋ

(ವಿವರಗಳಿಗೆ ಬಿ. ಷೇಕ್ ಅಲಿ (ಪ್ರ.ಸಂ.) ಕೆ. ಎಸ್. ಶಿವಣ್ಣ ಸಂಪುಟ ಸಂಪಾದಕರು 1997, *ಕರ್ನಾಟಕ ಚರಿತ್ರೆ*, ಸಂಪುಟ ಮೂರು, ಪು. 66–67, ಸಮೀಕ್ಷಿಸಿ)

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಅದರಲ್ಲಿ ಎರಡು ಬಗೆಯ ಅಮರನಾಯಕರುಗಳನ್ನು ಪಟ್ಟಿ ಮಾಡಲಾಗಿದೆ. ಅವರುಗಳಲ್ಲಿ ಇರುವ ಏಕೈಕ ಸಮಾನತೆ ಅಂದರೆ ಅವರುಗಳ ಪ್ರದೇಶದಿಂದ ಬರುತ್ತಿದ್ದ ಕಂದಾಯ. ಪಟ್ಟಿಯ ಮೊದಲ ಎರಡು ಅಮರನಾಯಕರು ಹೊಂದಿದ್ದ ಕಂದಾಯ ನಾಲ್ಕು ಲಕ್ಷ ಪರ್ಡಾವೋಗಳಾಗಿದ್ದರೂ ಅವರು ಹೊಂದಿರಬೇಕಿದ್ದ ಸೈನ್ಯದ ಸಂಖ್ಯೆಯಲ್ಲಿ ರಾಜ್ಯಕ್ಕೆ ಸಲ್ಲಿಸಬೇಕಾಗಿದ್ದ ರಾಜಸ್ವ ಮೊತ್ತದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಅದೇ ರೀತಿ ಕ್ರಮಸಂಖ್ಯೆ, ಮೂರರಿಂದ ಐದನೇ ಅಮರನಾಯಕರ ಕಂದಾಯ ಮೂರು ಲಕ್ಷ ಪರ್ಡಾವೋಗಳಿದ್ದರೂ ಅವರುಗಳು ಹೊಂದಿದ್ದ ಸೈನ್ಯದ ಸಂಖ್ಯೆಯಲ್ಲಿ ಸಲ್ಲಿಸಬೇಕಾಗಿದ್ದ ರಾಜಸ್ವ ಮೊತ್ತದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಬಗೆಯ ವ್ಯತ್ಯಾಸಗಳನ್ನು ಈವರೆಗೆ ಪ್ರಕಟವಾಗಿರುವ ಮಾಹಿತಿಗಳನ್ನು ಆಧರಿಸಿ ಅವುಗಳಿಗೆ ಕಾರಣಗಳನ್ನು ಕಂಡುಹಿಡಿಯಲಾಗುವುದಿಲ್ಲ.

ಕರ್ನಾಟಕ ಚರಿತ್ರೆ ಸಂಪುಟ ಮೂರರಲ್ಲಿ ಅಮರನಾಯಕರ ಬಗೆಗೆ ಬರೆಯುತ್ತಾ ಕೆ.ಎಸ್. ಶಿವಣ್ಣರವರು ಅಮರನಾಯಕರನ್ನು ಎರಡು ವಿಭಾಗವಾಗಿ ವರ್ಗೀಕರಿಸುತ್ತಾರೆ.[11] ಪ್ರಥಮ ಶ್ರೇಣಿ ಅಮರನಾಯಕರುಗಳು ರಾಜನ ಅನುಮತಿಯಿಲ್ಲದೆ ಭೂಮಿಯನ್ನು ಅಥವಾ ಹಳ್ಳಿಗಳನ್ನು ಪರಭಾರೆ ಮಾಡುವ ಅಧಿಕಾರ ಹೊಂದಿದ್ದರು. ಇವರು ತಮ್ಮ

ಕೈಕೆಳಗೆ ನಾಯಕರುಗಳನ್ನು ಹೊಂದಬಹುದಾಗಿತ್ತು. ಕೋಟೆ ಕಟ್ಟಲು, ಸ್ವಂತ ಸೈನ್ಯ ಹೊಂದಲು ಅವಕಾಶ ಹೊಂದಿದ್ದರೆಂದು ತಿಳಿಸುತ್ತಾರಾದರೂ ಈ ವರ್ಗೀಕರಣಕ್ಕೆ ಯಾವ ಆಧಾರವನ್ನು ನೀಡಲಾಗಿಲ್ಲ.

ಆದರೆ ಈ ಅಮರನಾಯಕತ್ತ್ವ ಒಂದು ಬಗೆಯಲ್ಲಿ ರಾಜನು ತನಗೆ ನಿಷ್ಠರಾದ ವರ್ಗವನ್ನು ಸೃಷ್ಟಿಸಿಕೊಳ್ಳಲು ಅನುವು ಮಾಡಿತಲ್ಲದೆ ಆತನು ತನ್ನ ನಿಷ್ಠೆಯನ್ನು ಶ್ರದ್ಧೆಯನ್ನು ರಾಜನಿಗೇ ಹೊಂದಿದ್ದನೇ ಹೊರತು ಅದು ಎಂದೂ ಆಳಲ್ಪಡುವವರ ಪರವಾಗಿ ಇರಬೇಕಾಗಿರಲಿಲ್ಲವೆಂದು ಖಚಿತವಾಗುತ್ತದೆ. ಆದರೆ ಇವರೂ ಆಳರಸರೇ ಆಗಿದ್ದುದರಿಂದ ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಜಾಪರಿಪಾಲನೆಯನ್ನು ಧರ್ಮ, ಶಾಸ್ತ್ರ, ಮತ್ತು ಪೂರ್ವಮರ್ಯಾದೆಗೆ ಅನುಸಾರವಾಗಿ ಅವರೂ ನಿರ್ವಹಿಸಬೇಕಾಗಿದ್ದರಿಂದ ತಮ್ಮ ಜ್ಞಾನ ಮತ್ತು ಪರಿಮಿತಿಯಲ್ಲಿ ತಮಗೆ ಸಾಧ್ಯವಾದ ಮಟ್ಟಿಗೆ ಜನಹಿತ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ತೆರಬೇಕಾದ ಅಧಿಕ ಕರಭಾರವನ್ನು ಹೊಸದಾಗಿ ಸಾಗುವಳಿಗೆ ಭೂಮಿಯನ್ನು ಈಡು ಮಾಡುವ ಮೂಲಕ ಸಾಧಿಸಿದ್ದನ್ನು ಆ ಕಾಲದಲ್ಲಿ ನಿರ್ಮಾಣಗೊಂಡ ಕೆರೆಗಳು ಮತ್ತು ಕೆರೆಗಳ ನಿರ್ವಹಣೆಗೆ ಅವರು ಕೋರಿದ ಅಪಾರ ಆಸಕ್ತಿ ಇತ್ಯಾದಿ ಜನಹಿತ ಕಾರ್ಯಗಳು ಸಾಕ್ಷಿಯಾಗುತ್ತವೆ. ಹಾಗಾಗಿ ನಾಯಂಕರ ಪದ್ದತಿಯನ್ನು ಅನುಸರಿಸಿ ವಿಜಯನಗರ ಸಾಮ್ರಾಜ್ಯವು ಸಾಮ್ರಾಜ್ಯವು ಓರ್ಟನ್ ಸ್ಟೀನ್ ಉದ್ಗರಿಸುವಂತೆ ಯೂರೋಪಿನ ಮಧ್ಯಯುಗದ ಊಳಿಗಮಾನ್ಯ ಪದ್ದತಿಯ ಅನುಕರಣೆಯಾಗಿತ್ತೆಂಬ ವಾದವನ್ನು ಹೇಗೆ ಅಲ್ಲಗಳೆಯಲಾಗಿದೆ ಎಂದು ಡಾ.ರಾಜರಾಮ ಹೆಗ್ಡೆಯವರು[12] ತಮ್ಮ ಇತ್ತೀಚಿನ ಲೇಖನದಲ್ಲಿ ತಿಳಿಸಿದ್ದಾರೆ.

ಇದು ಯೋರೋಪಿನ ಊಳಿಗಮಾನ ಪದ್ಧತಿಯ ಕೆಲವು ಲಕ್ಷಣಗಳನ್ನು ಹೊಂದಿದೆಯಾದರೂ ಅದು ಸಂಪೂರ್ಣವಾಗಿ ಅದರಂತೆ ಕಾರ್ಯ ನಿರ್ವಹಿಸಲಿಲ್ಲ. ಕಾರಣ ಕ್ರಿ.ಶ. 1600ರ ನಂತರದಲ್ಲಿ ಊಳಿಗಮಾನ್ಯ ಪದ್ದತಿಯಲ್ಲಿ ಬೆಳೆದ ಕೆಲವು ಮನೆತನಗಳು ಸ್ವತಂತ್ರ ರಾಜ್ಯಗಳಾಗಿ ಬೆಳೆದುಬಂದವು. ಇಕ್ಕೇರಿಯ ಸಂಸ್ಥಾನ, ಮೈಸೂರು ಸಂಸ್ಥಾನ, ಮಧುರೆಯ ನಾಯಕರು ಇತರ ಹಲವಾರು ದಕ್ಷಿಣ ಭಾರತದ ಸಂಸ್ಥಾನಗಳು ವಿಜಯನಗರ ಸಾಮ್ರಾಜ್ಯಾನಂತರ ಸ್ವತಂತ್ರವಾಗಿ ಬೆಳೆದು ವಿಜಯನಗರ ಬಿರುದುಗಳು, ಅದರ ಲಾಂಛನ ಇತ್ಯಾದಿಗಳನ್ನು ತಮ್ಮ ಪರಂಪರೆಯಲ್ಲಿ ಉಳಿಸಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರಿದವು. ಅಂದರೆ ಇದು ಯೂರೋಪಿನ ಊಳಿಗಮಾನ್ಯ ಪದ್ದತಿಯಲ್ಲಿ ಸಾಧ್ಯವಾಗದ ಒಂದು ಪದ್ಧತಿ. ರಾಜನಾದವನು ಎಂದಿಗೂ ರಾಜನೆ. ಸೇವಕನಾದವನು ಎಷ್ಟೇ ಸಮರ್ಥನು ಶಕ್ತಿಶಾಲಿಯಾಗಿದ್ದರೂ ಅವನು ರಾಜತ್ವವನ್ನು ಸಾಧಿಸುವ ಅಥವಾ ಗಳಿಸುವ ಪರಿಸ್ಥಿತಿ ಎದುರಾಗುತ್ತಿರಲಿಲ್ಲ.

ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ದಿನಗಳಲ್ಲಿ ರಾಜಮನೆತನದ ಅರಸು ಕುಮಾರರೆ ರಾಜ ಪ್ರತಿನಿಧಿಗಳಾಗಿ ದಂಡನಾಯಕರಾಗಿ, ರಾಜ್ಯಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಳುವ ಮತ್ತು ತುಳುವ ರಾಜಮನೆತನದಲ್ಲಿ ಈ ಪರಿಸ್ಥಿತಿ ಇಲ್ಲವಾದ್ದರಿಂದ ನಾಯಂಕರ ಪದ್ಧತಿಯನ್ನು ಸಾಮ್ರಾಜ್ಯ ರಕ್ಷಣೆಗೆ ಮತ್ತು ಹಿತರಕ್ಷಣೆಗೆ ನಿಯೋಜಿಸಿದ್ದನ್ನು ಕಾಣಬಹುದಾಗಿದೆ. ಅಲ್ಲದೆ ವಿಜಯನಗರದ ಸೈನಿಕ ವ್ಯವಸ್ಥೆಯನ್ನು ಗಮನಿಸಿದಾಗ ರಾಜನು ಎರಡು ಬಗೆಯ ಸೈನಿಕ ವ್ಯವಸ್ಥೆಯನ್ನು ಹೊಂದಿದ್ದನು. ಒಂದು ಸೈನ್ಯವನ್ನು ಆತನು ತನ್ನ ಅಧೀನ ನಾಯಕರಿಂದ ಸಂಗ್ರಹಿಸಿದರೆ ಮತ್ತೊಂದು ಸೇನೆ ಆತನ ನೇರ ನಿಗಾದಲ್ಲಿ ನೇಮಕಗೊಂಡು ಆತನ ಅಂಕೆಯಲ್ಲಿರುತ್ತಿತ್ತು. ತಾನು ಕೈಗೊಳ್ಳಬೇಕಾದ ಸೈನಿಕ ಕಾರ್ಯಾಚರಣೆಯ ಮಾರ್ಗದಲ್ಲಿ ಬರುವ ನಾಯಕರು ಅರಸನಿಗೆ ತಮ್ಮ ನಿಗದಿತ ಸೈನ್ಯವನ್ನು ನೀಡಿ ಸೇನೆಯ ಬಲವನ್ನು ವೃದ್ಧಿ ಪಡಿಸಬೇಕಾಗಿದ್ದಿತು. ಇದು ಸೈನ್ಯವು ಅತಿ ವೇಗವಾಗಿ ಪ್ರಯಾಣದ ಸಾವು ನೋವುಗಳಿಲ್ಲದೆ ತೊಂದರೆಗಳನ್ನು ಶೀಘ್ರವಾಗಿ ನೆರವೇರಿಸಿಕೊಳ್ಳಲು ಸಹಾಯಕವಾಗುತ್ತಿತ್ತು. ವಿವರಗಳಿಗೆ ಕೃಷ್ಣರಾಯನ ಉಮ್ಮತ್ತು ಧಾಳಿಯ ವಿವರಗಳನ್ನು ನೋಡುವುದು.

ಈ ಎಲ್ಲಾ ವ್ಯವಸ್ಥೆಯ ಆಧಾರದ ಮೇಲೆ ನಾಯಂಕರ ಪದ್ದತಿಯು ವಿಜಯನಗರ ಸಾಮ್ರಾಜ್ಯದಲ್ಲಿ ಕಂದಾಯ ಸೈನ್ಯ ಮತ್ತು ನಾಗರೀಕ ಆಡಳಿತದಲ್ಲಿ ಅತ್ಯುತ್ತಮ ವ್ಯವಸ್ಥೆಯಾಗಿ ಪ್ರಾರಂಭವಾಯಿತೆಂದು ತಿಳಿಯಬಹುದು.

ಪರಾಮರ್ಶನಗಳು

1. *SII,* VII, No. 194
2. ಸಾಲೆತೊರೆ, 1933, *Social and Political Life in Vijayanagara Empire,* p. 146 and 267ff.
3. ಅದೇ
4. *I.A.,* IV. p. 329
5. *MAR,* 1925, p. 76
6. ಸಾಲೆತೊರೆ, 1933 ಪೂರ್ವೋಕ್ತ, ಪು. 265.
7. T.V.Mahalingam, 1967, *South Indian Polits, Madras,* p. 317.
8. ಡಾ. ಕೆ. ಜಿ. ಗೋಪಾಲಕೃಷ್ಣರಾವ್, 2010, *ಯಲಹಂಕ ನಾಡಿನ ದಂಗೆಗಳು ಕೆಲವು ಹೊಸ ವಿಚಾರಗಳು, ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳು,* ಆರ್. ಗೋಪಾಲ್(ಸಂ), ಮೈಸೂರು ಪು. 131–134.
9. ಎ.ವಿ.ವೆಂಕಟರತ್ನಂ, 1972, *Local Government in the Vijayanagara Empire,* Mysore, p. 11 ff.
10. ಅದೇ, ಮತ್ತು ಬಿ.ಷೇಕ್‌ಅಲಿ (ಪ್ರ.ಸಂ.), ಕೆ.ಎಸ್.ಶಿವಣ್ಣ (ಸಂಪುಟ ಸಂಪಾದಕರು), 1997, *ಕರ್ನಾಟಕ ಚರಿತ್ರೆ,* ಸಂ. 3, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು. 66ರ ನಂತರ.
11. ಅದೇ.
12. ರಾಜರಾಮ ಹೆಗ್ಡೆ, Burton Steins, *Vijayanagara: The New Cambridge History of India,* I. 2, Cambridge, Cambridge University Press, 1994, *ಪುಸ್ತಕದ ವಿಮರ್ಶೆ,* 2005, *Journal of Karnataka Studies,* November 2004, April, 2005, p. 1-5.

13. ವಿಜಯನಗರದ ಶಾಸನಗಳಲ್ಲಿ ಗುಜ್ಜಲವಂಶ

ಡಾ. ಅಮರೇಶ ಯತಗಲ್

ವಿಜಯನಗರ ಸಾಮ್ರಾಜ್ಯದ ಶಾಸನಗಳಲ್ಲಿ ಅನೇಕ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ಶೈಕ್ಷಣಿಕ ಇನ್ನೂ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳಿವೆ. ಜೊತೆಗೆ ಕೆಲವು ಶಾಸನಗಳು ಜನಾಂಗ, ವಂಶ, ಬೆಡಗು ಹಾಗೂ ಗೋತ್ರ ಇತ್ಯಾದಿ ಅಂಶಗಳ ಕುರಿತಾಗಿ ಮಾಹಿತಿಯನ್ನು ನೀಡುತ್ತವೆ. ಅದರಲ್ಲಿ 'ಗುಜ್ಜಲ' ಎಂಬ ಬೆಡಗು[1] ಒಂದು. ಬೆಡಗುಗಳನ್ನು ಬಳಕೆಯಲ್ಲಿ ಕುಳಿಗಳೆಂದು, ಬಳಿಗಳೆಂದು, ಗೋಪುಗಳೆಂದು[2] ಕರೆಯುವರು. ಬೆಡಗು ಪ್ರತಿಯೊಂದು ಕುಟುಂಬವು ಗುರುತಿಸಿಕೊಳ್ಳುವ ವಿಶಿಷ್ಟ ಸಂಕೇತ. ಜಾತಿಯೊಳಗೆ ಇರುವ ಒಂದು ಉಪವಿಭಾಗ ಬಣ; ಪಂಗಡವೂ ಹೌದು.

'ಗುಜ್ಜಲ' ಎಂಬುದು ಬೇಡ ಜನಾಂಗದಲ್ಲಿರುವ ಒಂದು ಬೆಡಗು. ಈ ಜನಾಂಗದಲ್ಲಿ 500ಕ್ಕೂ ಹೆಚ್ಚು ಬೆಡಗುಗಳಿವೆ. 'ಗುಜ್ಜಲ' ಎಂದರೆ ಕುಳ್ಳ, ಗಿಡ್ಡ, ಕುಬ್ಜ ಎಂಬರ್ಥಗಳಿವೆ. 'ಗುಜ್ಜಲ' ಪದವು ತೆಲುಗು ಭಾಷೆಯ ಪ್ರಭಾವವನ್ನು ಹೊಂದಿದೆ. ತೆಲುಗಿನಲ್ಲಿ 'ಗುಜ್ಜಲ'ಕ್ಕೆ (ಗುಜ್ಜ) ಗುಡ್ಡ ಎಂಬ ಅರ್ಥ ಬರುತ್ತದೆ. ಮೂಲತಃ ಬೇಡರು ಆಂಧ್ರದ ಗುಡ್ಡಗಾಡು ಪ್ರದೇಶದಿಂದ ಕರ್ನಾಟಕಕ್ಕೆ ಬಂದು ನೆಲೆಸಿದವರಾಗಿರುವುದರಿಂದ ಇವರ ಬೆಡಗುಗಳಲ್ಲಿ ತೆಲುಗು ಭಾಷೆಯ ಪ್ರಭಾವವನ್ನು ಕಾಣಬಹುದಾಗಿದೆ. ತೆಲುಗಿನಲ್ಲಿಯೂ ಈ ಹೆಸರಿನ ಅನೇಕ ಬೆಡಗುಗಳಿವೆ. ಅಲ್ಲದೆ ಈ ಬೆಡಗನ್ನು ಹೊಂದಿರುವವರ ಮನೆದೇವರು ಶ್ರೀಶೈಲದ ಮಲ್ಲಿಕಾರ್ಜುನ, ಕೆಲವರು ತಿರುಪತಿಯ ವೆಂಕಟೇಶ್ವರನನ್ನು ಪೂಜಿಸುವರು. ಹೀಗಾಗಿ ಇವರು ಆಂಧ್ರಭಾಗದವರೆಂಬುದನ್ನು ದೃಢಪಡಿತ್ತವೆ. ಕನಕಗಿರಿಯ ಗುಜ್ಜಲವಂಶದ ನಾಯಕರ ಮೂಲಪುರುಷ ಪರಸಪ್ಪ ಉಡಿಚನಾಯಕನ ವಂಶಸ್ಥರು ಮೂಲತಃ ಶ್ರೀಶೈಲದ ಕಡೆಯಿಂದ ಕನಕಗಿರಿಗೆ ಬಂದು ನೆಲೆಸಿದರು ಎಂಬುದು ಸಹ ಇದಕ್ಕೆ ಪುಷ್ಟಿ ನೀಡುತ್ತದೆ.

ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ 'ಗುಜ್ಜಲ' ಬೆಡಗನ್ನು ಹೊಂದಿದ ಅನೇಕ ಮನೆತನಗಳಿವೆ. ಗುಜ್ಜಲ ಎಂಬುದನ್ನು ಕೆಲವರು ಅಡ್ಡ ಹೆಸರನ್ನಾಗಿಯೂ ಬಳಸಿಕೊಳ್ಳುತ್ತಾರೆ. ಇದು ಹೆಚ್ಚಾಗಿ ಬೇಡ ಜನಾಂಗದಲ್ಲಿ ಕಂಡು ಬರುವ ಬೆಡಗಾಗಿದೆ. ಈಗಲೂ ಈ ಬೆಡಗಿನವರು ಹೆಚ್ಚಾಗಿ ರಾಯಚೂರು, ಯಾದಗಿರಿ, ಕಲಬುರ್ಗಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಈ 'ಗುಜ್ಜಲ' ಬೆಡಗನ್ನು 'ಗುಜ್ಜಲಾ' 'ಗುಜ್ಜಲೋರು', 'ಗುಜ್ಜಲವರು',[3] 'ಗೂಜಲೋರು', 'ಗುಜ್ಜಾಲಾ'[4] ಹೀಗೆ ಬೇರೆ ಬೇರೆ ಹೆಸರುಗಳಿಂದ ವ್ಯವಹಾರದಲ್ಲಿ ಸಂಬೋಧಿಸುವುದುಂಟು. 'ಹೊನ್ನಗುಜ್ಜಲ'ವೆಂಬ ಉಪ ಬೆಡಗೂ ಇದೆ. ನೆಂಟಸ್ತಿಕೆಯನ್ನು ಬೆಳೆಸಲು ಬೆಡಗುಗಳನ್ನು ಬಳಸುತ್ತಾರೆ. ಒಂದೇ ಬೆಡಗಿನವರು ಅದೇ ಹೆಸರಿನ ಬೆಡಗಿನವರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುವುದಿಲ್ಲ. ಒಂದೇ ಬೆಡಗಿನವರು ಅಣ್ಣ ತಮ್ಮಂದಿರಾಗುತ್ತಾರೆ. ಹೀಗಾಗಿ ಬೇರೆ ಬೆಡಗಿನವರೊಂದಿಗೆ ಮಾತ್ರ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ. ಬೇರೆ ಜಾತಿಯ ಪುರುಷನು ಬೇಡರ ಜಾತಿಯನ್ನು ಸೇರಿದರೆ ಅವನಿಗೆ 'ಮಲ್ಲನವರು' ಹೆಸರಿನ ಬೆಡಗನ್ನು, ಅಲ್ಲದೇ ಬೇರೆ ಜಾತಿಯ ಸ್ತ್ರೀ ಬೇಡರ ಜಾತಿಯ ಪುರುಷನನ್ನು ವಿವಾಹವಾದರೆ ಅವಳಿಗೆ 'ಗುಜ್ಜಲವರು'[5] ಎಂಬ ಬೆಡಗಿನಿಂದ ಕರೆಯುತ್ತಾರೆ.

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯನ್ನಾಳಿದ ಕೆಲವು ಮನೆತನಗಳ ಅರಸರು, ಅವರ ಸಾಮಂತರು ಹಾಗೂ ವಿಜಯನಗರದ ಅಧೀನದ ಕೆಲವು ಅಮರನಾಯಕರು, ರಾಣಿಯರು 'ಗುಜ್ಜಲ' ವಂಶಕ್ಕೆ ಸೇರಿದವರಾಗಿದ್ದರು. ಕುಮ್ಮಟದುರ್ಗದ ಅರಸ ಕಂಪಿಲರಾಯನ ಹೆಂಡತಿ ಹರಿಯಾಲದೇವಿಯು ಗುಜ್ಜಲ ವಂಶಕ್ಕೆ ಸೇರಿದವಳಾಗಿದ್ದಳು. ಈಕೆಗೆ ಹರಿಹರದೇವಿ[6]

ಹರಿಯಮ್ಮ[7] ಮುಂತಾದ ಹೆಸರುಗಳಿದ್ದವು. ಈಕೆಯ ಕುರಿತಾಗಿ ಮೂಲದ [ಮನೆತನದ] ಎರಡು ಅಭಿಪ್ರಾಯಗಳಿವೆ. ಕನಕಗಿರಿನಾಯಕ ಅರಸರ ಮನೆತನದವಳು ಎಂಬುದು ಒಂದು ಅಭಿಪ್ರಾಯ. ಈ ಕುರಿತಾಗಿ ಕಂಪಲಿ ಕೈಫಿಯತ್ತಿನಲ್ಲಿ ಈ ರೀತಿ ಇದೆ: "ಕಂಪಲಿರಾಯ ಕನಕಗಿರಿ ಗುಜ್ಜಲವರ ಹೆಣ್ಣು ಹರಿಯಾಲದೇವಿನ ಮದಿವಿ ಮಾಡಿದರ್ರು. ಯಿನ್ನು ನಾಲ್ಕು ಮಂದಿ ಹೆಣ್ಣು ಮದಿವಿ ಮಾಡಿದರು. ಪಟ್ಟದ ಹೆಂಡತಿಗೆ ಪುತ್ರ ಸಂತಾನವಾಗಲಿಲ್ಲ. ನಾಲ್ಕು ಮಂದಿ ಹೆಂಡದಿರಲ್ಲಿ ಆಯಿದು ಮಂದಿ ಪುತ್ರ ಸಂತಾನವಾಯ್ತು. ಯಿದರಲ್ಲಿ ಕಾಟಣ್ಣನೆಂಬೊವನ್ನ ಹರಿಯಾಲದೇವಿಗೆ ಸಾಕುಕೊಟ್ರರ್ರು. ಆಕೆ ಸಾಕಿದ ಮಗನಿಂದ ಪ್ರಯೋಜನವೇನು?"[8] ಮುಂತಾಗಿ ವಿವರಣೆಯನ್ನು ನೀಡುತ್ತದೆ. ಈಕೆಯು ಕನಕಗಿರಿಯ ಅರಸ ಪರಸಪ್ಪ ನಾಯಕನ ಸಂಬಂಧಿಯಾಗಿದ್ದಳು. ಈ ವಿಚಾರವನ್ನು ಗಮನಿಸಿದಾಗ ಈಕೆಯು ಕನಕಗಿರಿಯವಳು ಎಂಬುದು ಸ್ಪಷ್ಟವಾಗುತ್ತದೆ. ಈಕೆಯ ಸಂಬಂಧಿಕರು ಕನಕಗಿರಿಯಲ್ಲಿ ಗುಜ್ಜಲ ವಂಶದ ನಾಯಕರು (ಕ್ರಿ. ಶ. 1436–1948) ಆಳ್ವಿಕೆಯನ್ನು ಮಾಡಿರುವುದು ಇದಕ್ಕೆ ಪುಷ್ಟಿಯನ್ನು ನೀಡುತ್ತದೆ.

ಕುಮ್ಮಟದುರ್ಗದ ಒಂಬತ್ತು ಅರಸರು ಅಧಿಕಾರದಲ್ಲಿರುವಾಗ ಕನಕಗಿರಿ ನಾಯಕರು ಅರಸರೆಂದು ಗುರುತಿಸಿಕೊಂಡಿರಲಿಲ್ಲ. ಆದರೆ ಕುಮ್ಮಟದುರ್ಗದ ಅರಸರ ಕಾಲದಲ್ಲಿ ಯಾವುದಾದರೂ ಅಧಿಕಾರ ಅಥವಾ ಹುದ್ದೆಯಲ್ಲಿರುವ ಸಾಧ್ಯತೆಗಳಿವೆ. ಹೀಗಾಗಿ ಈ ಮನೆತನದ ಹರಿಯಾಲದೇವಿಯನ್ನು ಕುಮ್ಮಟದುರ್ಗದ ಕಂಪಿಲರಾಯನಿಗೆ ಕೊಟ್ಟು ವಿವಾಹ ಮಾಡಿರಬಹುದಾಗಿದೆ. ಕುಮಾರರಾಮನ ಜನನವು ಕನಕಗಿರಿಯಲ್ಲಿಯೇ ಆಯಿತು[10] ಎಂಬ ಅಭಿಪ್ರಾಯವೂ ಇದೆ. ಈ ಕುರಿತಾಗಿ ಇನ್ನಷ್ಟು ಸಂಶೋಧನೆಯ ಅಗತ್ಯತೆ ಇದೆ.

ಎರಡನೆಯ ಅಭಿಪ್ರಾಯದ ಪ್ರಕಾರ "ಕಂಪಿಲದೇವರಾಯನು ಸುಖದಿಂದ ರಾಜ್ಯಭಾರ ಮಾಡುತ್ತಿರಲು ಗುಜ್ಜಾರಿಯನ್ನಾಳುತ್ತಿದ್ದ (ಬಹುಶಃ ಗುಜರಾತು ದೇಶದಲ್ಲಿ) ಚಾರಾಮರಾಯನೆಂಬ ಆರೆಯ ರಾಜನೊಬ್ಬನು (ಮರಾಟೆಯವರಿಗೆ ಆರೆಯರೆಂದೂ, ಮಹಾರಾಷ್ಟ್ರ ಭಾಷೆಗೆ ಆರೆ ಭಾಷೆ ಎಂದೂ ಆಗಿನ ಕಾಲದ ಶಾಸನಗಳಲ್ಲಿ ಉಕ್ತವಾಗಿದೆ) ರಾಜ್ಯಚ್ಯುತನಾಗಿ ದೇಶ ದೇಶವನ್ನು ಅಲೆಯುತ್ತಾ ಕೃಷ್ಣಾನದಿಯನ್ನು ದಾಟಿ ತೋರಗಲ್ಲು, ಬಾದಾಮಿ, ಕುಮ್ಮಟದುರ್ಗಗಳನ್ನು ಸಂದರ್ಶಿಸಿ ಎಲ್ಲಿಯೂ ಆಶ್ರಯ ದೊರೆಯದೆ, ತುಂಗಭದ್ರಾ ನದಿಯನ್ನು ದಾಟಿ ಕಂಪಿಲದೇವರಾಯನ ರಾಜಧಾನಿ ಹೊಸಮಲೆ ಪಟ್ಟಣಕ್ಕೆ ಬಂದು ಸೇರಿದನು ರಾಜಾಶ್ರಯ ದೊರಕಲು ಸಂತುಷ್ಟನಾಗಿ ಚಾರಾಮರಾಯನು ತನ್ನ ಕುಮಾರಿ ಹರಿಯಾಲಮ್ಮನನ್ನು ಕಂಪಿಲರಾಯನಿಗೆ ಕಾಣಿಕೆಯಾಗಿ ಒಪ್ಪಿಸಿದನು. ರಾಯನು ರಾಜಕುಮಾರಿಯನ್ನು ಸಂತೋಷದಿಂದ ಸ್ವೀಕರಿಸಿ ವಿವಾಹವಾದನು. ಹರಿಯಾಲದೇವಿಯು ಪಟ್ಟದರಾಣಿಯಾದಳು. ಕಂಪಿಲದೇವನು ತನ್ನ ಮಾವನಿಗೆ ಧನಕನಕ ವಸ್ತ್ರಗಳನ್ನಿತ್ತು ತನ್ನ ರಾಜ್ಯದ ಪಡುವಣ ಶೀಮೆಯನ್ನು ಅವನಿಗೆ ಕೊಟ್ಟು, ಸಾಮಂತರಾಜನನ್ನಾಗಿ ನಿಯಮಿಸಿ ಸತ್ಕರಿಸಿದನು. ಧೀರನಾದ ಚಾರಾಮರಾಯನು ಉತ್ತಮವಾದ ಅಶ್ವಸೇನೆಯನ್ನು ಕಟ್ಟಿ ತನ್ನ ಅಳಿಯನಿಗೆ ಸಹಾಯಕನಾಗಿ ನಿಂತನು. ಕಂಪಿಲದೇವನಿಗೆ ಹರಿಯಾಲದೇವಿಯಲ್ಲದೆ ಕಾಟಮ್ಮ (ಸೋದರಮಾವನ ಮಗಳು ಚೆನ್ನಾಜಿ, ಹಂಪಾಜಿ, ಸಿಂಗಾಜಿ ಮತ್ತು ಸಿರಾಮಣಿ ಎಂಬ ಹಲವು ಮಾನವತಿ ಅರಸರು ರಾಣಿಯರಾಗಿದ್ದರು. ಈ ರೀತಿ ಸುಖಸಂಕಥಾ ವಿನೋದದಿಂದ ರಾಜ್ಯಭಾರ ಮಾಡುತ್ತಿದ್ದನು[11] ಎಂಬುದು ತಿಳಿದುಬರುತ್ತದೆ. ಆದರೆ ಇದಕ್ಕೆ ಪೂರಕವಾದ ಯಾವುದೆ ಆಕರಗಳು ಇಲ್ಲ, ಹೀಗಾಗಿ ಹರಿಯಾಲದೇವಿಯು ಗುಜರಾತ್ ಪ್ರದೇಶದ ಗುಜ್ಜರಿಯನ್ನಾಳುತ್ತಿದ್ದ ಚಾರಾಮರಾಯನೆಂಬ ರಾಜನೊಬ್ಬನ ಮಗಳೆಂಬ ಅಭಿಪ್ರಾಯವನ್ನು ನಂಬಲು ಆಕರಗಳ ಕೊರತೆ ಇದೆ.

ವಿಜಯನಗರ ಅರಸರ ಕಾಲಾವಧಿಯಲ್ಲಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 'ಗುಜ್ಜಲ' ವಂಶಕ್ಕೆ ಸೇರಿದ ಅಮರನಾಯಕರು ಆಡಳಿತ ನಡೆಸಿರುವರಲ್ಲದೆ, ದಾನ–ದತ್ತಿಗಳನ್ನು ನೀಡಿದ ಹಾಗೂ ಕೆರೆಕಟ್ಟೆಗಳನ್ನು ಕಟ್ಟಿಸಿದ ಕುರಿತಾಗಿ

ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಆ ಸಂದರ್ಭದಲ್ಲಿ ಈ ಭಾಗದಲ್ಲಿ ಗುಜ್ಜಲವಂಶದವರು (ಬೆಡಗಿನ) ಪ್ರಸಿದ್ಧಿಯನ್ನು ಪಡೆದಿದ್ದರೆಂಬುದನ್ನು ಅರಿಯಬಹುದಾಗಿದೆ.

ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನ್ನೇರುಮಡುವಿನ ಕ್ರಿ.ಶ. 1506ರ ಶಾಸನವು ತಿಂತಿಣಿಯ[12] ಗುಜ್ಜಲ ಬೊಂಮಣ್ಣ ನಾಯಕನ ಮಗನಾದ ಲಖುಮಣನಾಯಕ ಹಾಗೂ ಬೊಮ್ಮನಾಗಿತಿ ಕಲ್ಲು ಕೆರೆಯನ್ನು ಕಟ್ಟಿಸಿದ[13] ಉಲ್ಲೇಖವಿದೆ. ಯಲಬುರ್ಗಾ ತಾಲ್ಲೂಕಿನ ಕಲ್ಲೂರು ಗ್ರಾಮದ ಕಲ್ಲಿನಾಥ ದೇವಾಲಯದ ಆವರಣದಲ್ಲಿಯ ವಿಜಯನಗರದ ಅರಸ ಅಚ್ಯುತದೇವರಾಯನ (ಕ್ರಿ.ಶ. 1529–1542) ಕಾಲದ ಕ್ರಿ.ಶ. 1537ರ ಶಾಸನವು ಅಚ್ಯುತದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ಕಾಶಿಯ ವಿಶ್ವನಾಥನಿಗೆ ಸಮಾನವಾದ ಕಲ್ಲೂರ ಕಲ್ಲಿನಾಥದೇವರಿಗೆ ಶ್ರೀಮನ್ಮಹಾನಾಯಕಾಚಾರ್ಯನೆಂದು ಬಿರುದಾಂಕಿತನಾದ ಗುಜ್ಜಲ ಚಿಕ್ಕಹನುಮನಾಯಕನ ಪುತ್ರರಾದ ಯಿಂಮಡಿ (ಇಮ್ಮಡಿ) ಹನುಮಂತನಾಯಕ ಮತ್ತು ಕುಷ್ಟಗೆಯ[14] ಗುಜ್ಜಲ ಯಿಂಮಡಿ (ಇಮ್ಮಡಿ) ಮರನದಿನಾಯಕನ ಮಗ ಮುಂಮಡಿ (ಮುಮ್ಮಡಿ) ಮಂಗಪನಾಯಕರು ದಾನ ನೀಡಿದ ವಿವರವನ್ನು ದಾಖಲಿಸುತ್ತದೆ. ಇವರಿಗೆ ಅಚ್ಯುತದೇವರಾಯನು ಯಲಬುರಿಗೆ ಪ್ರದೇಶದ[15] ಅಮರನಾಯಕತ್ವವನ್ನು ನೀಡಿದ್ದ. ಈ ಪ್ರದೇಶದ ವ್ಯಾಪ್ತಿಯ ಕಲ್ಲೂರ ಗ್ರಾಮದಾನವು ನಷ್ಟವಾಗಿತ್ತು. ಹೀಗಾಗಿ ಈ ಗುಜ್ಜಲ ಅಮರನಾಯಕರು ತಮ್ಮ ಅರಸ ಅಚ್ಯುತದೇವರಾಯನಿಗೆ ಪುಣ್ಯವಾಗಲೆಂದು ಕಲ್ಲೂರ ಗ್ರಾಮಕ್ಕೆ ಸಲ್ಲುವ ಹೊನ್ನು, ಗಾಣ, ಮಗ್ಗ ಇನ್ನೂ ಮುಂತಾದ ಸಕಲವನ್ನು ಪುನಃ ಕಲ್ಲಿನಾಥದೇವರಿಗೆ ಸಮರ್ಪಿಸುವರು.[16]

ಯಲಬುರ್ಗಾ ತಾಲ್ಲೂಕಿನ ಬಂಡಿಹಾಳ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿರುವ ಶಾಸನ ಇದರ ಕಾಲ ಕ್ರಿ.ಶ. 1537. ಅಚ್ಯುತದೇವರಾಯನ ಅಧಿಕಾರಾವಧಿಯಲ್ಲಿ ನಾಯಕಾಚಾರ್ಯ ಬಿರುದಾಂಕಿತ ಗುಜ್ಜಲ ಯಿಮ್ಮಡಿ ಯರಪನಾಯಕನ ಪುತ್ರನಾದ ಮುಮ್ಮಡಿ ಯರಪನಾಯಕನು ಮತ್ತು ಗುಜ್ಜಲ ಚಿಕ್ಕಹನುಮಂತನಾಯಕನ ಪುತ್ರ ಯಿಮ್ಮಡಿ ಹನುಮಂತನಾಯಕನು ಮಲ್ಲಿಕಾರ್ಜುನ ದೇವರಿಗೆ ದಾನವನ್ನು ನೀಡುತ್ತಾರೆ.[17] ಈ ಪ್ರದೇಶವೂ ಸಹ ಇವರಿಗೆ ಅಚ್ಯುತದೇವರಾಯನು ಅಮರನಾಯಕತನಕ್ಕೆ ನೀಡಿದ ಪ್ರದೇಶವಾಗಿತ್ತು. ಕೊಪ್ಪಳ ತಾಲ್ಲೂಕಿನ ಚಿಲಕಮಕ್ಕಿ ಗ್ರಾಮದ ಗುಡ್ಡದ ಕರಿಯಮ್ಮನ ಬಂಡೆಯಲ್ಲಿಯ ಕ್ರಿ.ಶ. 1538ರ ಶಾಸನವು ಯಿಲಕಲ್ಲ ಯಲ್ಲಾಗೊರವನಿಗೆ ಯಿಂಮಡಿ ಹನುಮಂತನಾಯಕನ ಪುತ್ರ ಮಂನ್ನಣನ ವಿವಾಹದ ಸಂದರ್ಭದಲ್ಲಿ ಜಕ್ಕಿನಾಯಕನು ದಾನವನ್ನು ನೀಡುತ್ತಾರೆ.[18] ಇದೇ ತಾಲ್ಲೂಕಿನ ಹಿರೇಸೂಳಿಕೇರಿಯ ಶಾಂತಮಲ್ಲಪ್ಪನ ಗುಡ್ಡದ ಬಂಡೆಯ ಮೇಲಿನ ಕ್ರಿ.ಶ. 1543ರ ಶಾಸನವು ಶ್ರೀಮನ್‌ಮಹಾನಾಯಕಾಚಾರ್ಯನಾದ ಗುಜ್ಜಲ ಮುಂಮಡಿ (ಮುಮ್ಮಡಿ) ಮೇದಿನಿರಾಯನು ಸೂಳೆಯ ಕೆರೆಯ ಗಡಿಯಲ್ಲಿ ಶಾಂತಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠೆ ಮಾಡುತ್ತಾನೆ. ಅಲ್ಲದೇ ಈ ದೇವರ ಅಮೃತಪಡಿಯ ಸೇವೆಯ ಸಲುವಾಗಿ ಯಿಕುಳದ ಭೂಮಿಯನ್ನು ನೀಡುತ್ತಾನೆ.[19]

ಇದೇ ತಾಲ್ಲೂಕಿನ ಗಂಗನಹಾಳು ಗ್ರಾಮದ ಪ್ರಭುದೇವರ ಮಠದ ಮುಂಭಾಗದಲ್ಲಿರುವ 16ನೇ ಶತಮಾನದ ಶಾಸನವು ಗುಜ್ಜಲ ಮುಂಮಡಿ ರಾಯಣನಾಯಕನು ಸಂಣವಡೆಯರಿಗೆ ಗಂಗನಹಾಳದ ಕೆರೆಯ ಕೆಳಗೆ ಗದ್ದೆಯನ್ನು ನೀಡುತ್ತಾನೆ.[20]

ವಿಜಯನಗರ ಕಾಲದ ಆಡಳಿತದ ವಿಭಾಗಗಳಲ್ಲಿ ದೇಶ, ರಾಜ್ಯ, ವೇಂಠೆ, ವಳಿತ, ಚಾವಡಿ, ನಾಡು, ಮಾಗಣಿ, ಮಂಡಳ, ಸಂಸ್ಥಾನ, ಸೀಮೆ, ಸ್ಥಳ, ಗ್ರಾಮ ಮುಂತಾದವುಗಳಿದ್ದವು. ಇವುಗಳಲ್ಲಿ 'ಸೀಮೆ' ಎಂಬುದು ಹಲವಾರು ಸ್ಥಳಗಳನ್ನು ಒಟ್ಟುಗೂಡಿಸಿರುವುದಾಗಿತ್ತು. 'ಸೀಮೆ'ಯು ಸಂಸ್ಕೃತದ 'ಸೀಮ' ಎಂಬ ಪದದಿಂದ ಬಂದಿದೆ. ವಿಜಯನಗರ ಅರಸರ ಕಾಲದಲ್ಲಿ ಆಡಳಿತದ ವಿಭಾಗವೆಂದು ಪ್ರಯೋಗವಾಗಿದೆ. ಕ್ರಿ.ಶ. 1400ರ ನಂತರದ ಶಾಸನಗಳಲ್ಲಿ ವಿಜಯನಗರ

ಕಾಲದಲ್ಲಿ ಹೆಚ್ಚಿನಮಟ್ಟಿಗೆ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳೆಲ್ಲವೂ 'ಸೀಮೆ' ಎಂಬ ಪ್ರತ್ಯಯ ಪಡೆದಿವೆ. ಈ ಅರ್ಥದಲ್ಲಿ ಗ್ರಾಮಗಳನ್ನು ಸೇರಿಸಿ, ಸೀಮೆ ಎಂಬ ಪದ ಪ್ರಯೋಗವಾಗಿದೆ.[21]

ಅಚ್ಯುತದೇವರಾಯನ (ಕ್ರಿ.ಶ. 1529–1542) ಕಾಲದಲ್ಲಿ ಮೊಸಗೆ ಸೀಮೆಯನ್ನು ಗುಜ್ಜಲ ವಂಶದವರ ಅಮರನಾಯಕತನಕ್ಕೆ ನೀಡಿದ್ದನು. ಈ ಮೊಸಗೆ ಸೀಮೆಯು ಇಂದಿನ ರಾಯಚೂರು ಜಿಲ್ಲೆಯ ಮಸ್ಕಿಯಾಗಿದೆ. ಈ ಸೀಮೆಯ ಅಮರನಾಯಕ ಇಮ್ಮಡಿ ಮೇದಿನಿರಾಯನಾಗಿದ್ದನು. ಈ ಭಾಗದ ಅಮರನಾಯಕರು ನೀಡಿದ ದತ್ತಿದಾನಗಳ ಕುರಿತು ಇಲ್ಲಿಯ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಮಸ್ಕಿಯ ಕ್ರಿ.ಶ. 1530ರ ಶಾಸನವು ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ ಈ ಸೀಮೆಯನ್ನು ಗುಜ್ಜಲ ಇಮ್ಮಡಿ ಮೇದಿನಿರಾಯನಿಗೆ ಅಮರನಾಯಕತನದ ಸೀಮೆಯಾಗಿ ನೀಡಲಾದ್ದ ವಿಷಯವನ್ನು ಹೊಂದಿದೆ. ಈತನು ತನ್ನ ಆಧೀನದ ಮೊಸಗೆಸೀಮೆಗೆ ಸೇರಿದ ತಿದಗಿಬಾವಿಯೆಂಬ ಗ್ರಾಮವನ್ನು (ಇದು ಇಂದು ತೀರ್ಥಬಾವಿ ಎಂದು ಕರೆಯಲ್ಪಡುತ್ತಿದೆ) ಝುರಣೇದ ದೇವರಿಗೆ[22] ದಾನವನ್ನು ನೀಡಿದ್ದಾನೆ.[23]

ಸುಲ್ತಾನಪುರದ ಹನುಮಂತದೇವರ ಗುಡಿಯ ಎದುರಿಗೆ ಇರುವ ಕ್ರಿ.ಶ. 1537ರ ಶಾಸನದಲ್ಲಿ ಗುಜ್ಜಲ ಇಮ್ಮಡಿ ಮೇದಿನಿರಾಯ ಒಡೆಯನು ಮಸ್ಕಿಯ ಭಟ್ಟರ ನಾಗರಾಜನ ಮಗ ಮಲ್ಲಯ್ಯ, ರಾಮರಾಜನ ಮಗ ಚಿಕ್ಕಮಲ್ಲಯ್ಯ ಮತ್ತು ನಾಗರಾಜನ ಮಗ ಅನಂತಯ್ಯರುಗಳಿಗೆ ಮಸ್ಕಿ ಸೀಮೆಯಲ್ಲಿ ಬರುವ ಉದ್ದಂಡ ಮೇದಿನಿಪುರವನ್ನು ಅಮರನಾಥ ದೇವರಿಗೆ ಪುಣ್ಯವಾಗಬೇಕೆಂದು ಅಗ್ರಹಾರವನ್ನಾಗಿ ಮಾರ್ಪಡಿಸಿ ದಾನ ನೀಡಿದ್ದನು.[24] ಈ ಉದ್ದಂಡ ಮೇದಿನಿಪುರದ ಪೂರ್ವದಲ್ಲಿ ಮಾರ್ಲದಿನ್ನಿ (ಇಂದಿಗೂ ಈ ಗ್ರಾಮವಿದ್ದು ಇಂದು ಇದು ಮಾರಲದಿನ್ನಿ ಎಂದು ಕರೆಯಲ್ಪಡುತ್ತಿದೆ.) ಪಶ್ಚಿಮಕ್ಕೆ ಸೀಮೆಹಳ್ಳ, ಉತ್ತರಕ್ಕೆ ಆವಿನಮಡುವು, ದಕ್ಷಿಣಕ್ಕೆ ಮೂಡಲದಿನ್ನಿ ಗ್ರಾಮಗಳಿದ್ದವು. ಇಂದಿಗೂ ಈ ಊರುಗಳನ್ನು ಹಾಗೂ ಹಳ್ಳವನ್ನು ನೋಡಬಹುದಾಗಿದೆ. ಆವಿನಮಡುವನ್ನು ಜಕ್ಕೇರುಮಡುವು ಎಂದು ಕರೆಯಲಾಗುತ್ತದೆ.

ಮಸ್ಕಿಯ ಕ್ರಿ.ಶ. 1537ರ ಶಾಸನ ಅಚ್ಯುತದೇವರಾಯನ ಆಳ್ವಿಕೆಯ ಅವಧಿಯದ್ದಾಗಿದೆ. ಗುಜ್ಜಲ ಇಮ್ಮಡಿ ಮೇದಿನಿರಾಯನು ಮೊಸಗೆಯ ಮೂಲಸ್ಥಾನದ ದೇವರಾದ ಮಲ್ಲಿಕಾರ್ಜುನನಿಗೆ ಯೆರೆಯಹೆಲನ ಗ್ರಾಮದಲ್ಲಿ ಇಕ್ಕುಳ ಭೂಮಿಯನ್ನು ದಾನವಾಗಿ ನೀಡಿದನು.[25] ಅದೇ ಕ್ರಿ.ಶ. 1537ರ ಇನ್ನೊಂದು ಶಾಸನದಲ್ಲಿ ಗುಜ್ಜಲ ಇಮ್ಮಡಿ ಮೇದಿನಿರಾಯನು, ಮೊಸಗೆಗೆ ಸೇರಿದ ಹಲವು ಗ್ರಾಮಗಳನ್ನು ಹಂಪೆಯಲ್ಲಿದ್ದ ರುದ್ರಪಾದ ಮಠಪತಿ ಒಡೆಯರಿಗೆ ದಾನ ನೀಡಿದ ವಿವರವಿದೆ. ಅಂಬಟಿಗುಡ್ಡದಲ್ಲಿ 42 (ಇಂದಿನ ಬೈಲಗುಡ್ಡವಾಗಿದ್ದು, ಲಿಂಗಸೂಗೂರು ತಾಲ್ಲೂಕಿನಲ್ಲಿದೆ) ಗೋನ್ವಾಳದಲ್ಲಿ–81 (ಇಂದಿನ ಗೋನಾಳ ಇದು ಸಿಂಧನೂರು ತಾಲ್ಲೂಕಿನಲ್ಲಿದೆ), ಸಿದುಬಾವುರದಲ್ಲಿ 81 (?), ಪರವಾಪುರದಲ್ಲಿ 81 (ಇಂದಿನ ಪರಾಪುರ, ಸಿಂಧನೂರು ತಾಲ್ಲೂಕು), ಇಷ್ಟನ್ನು ದಾನವಾಗಿ ನೀಡುತ್ತಾನೆ. ಅದನ್ನು ಮತ್ತರದಲ್ಲಿ ಕೊಟ್ಟನೋ, ಇಕ್ಕುಳದಲ್ಲಿ ಕೊಟ್ಟನೋ ಎಂಬುದರ ಕುರಿತು ಮಾಹಿತಿ ಇಲ್ಲ. ಆದರೆ ಶಾಸನದ ಕೊನೆಯ ಭಾಗದಲ್ಲಿ ವಿರುಪಾಕ್ಷದೇವರಿಗೆ ಪುಣ್ಯವಾಗಲಿ ಎಂದು ಕೊಟ್ಟ ಭೂದಾನದ ಶಾಸನವೆಂದು[26] ಹೇಳಲಾಗಿದೆ. ಲಿಂಗಸೂಗೂರು ತಾಲ್ಲೂಕಿನ ಸಾನಬಾಳದ ಶಾಸನ ಗುಜ್ಜಲ ಮುಮ್ಮಡಿ ಮೇದಿನಿರಾಯನು (ಈತ ಇಮ್ಮಡಿ ಮೇದಿನಿರಾಯನ ಮೊಮ್ಮಗನಾಗಿರಬೇಕು) ದೊಂಬರಬಂಡಿ ಹನುಮಂತನಾಯಕನಿಗೆ ಮೊಸಗೆಸೀಮೆಯಲ್ಲಿನ ಚಿಕ್ಕಸಾನಬಾಳ ಗ್ರಾಮವನ್ನು ಉಂಬಳಿ ನೀಡಿದ್ದನ್ನು ದಾಖಲಿಸಿದೆ.[27]

ಈ ಗುಜ್ಜಲ ವಂಶದ ಮೇದಿನಿರಾಯನ ವಂಶಸ್ಥರು ಎಂದು ಹೇಳುವ ಕುಟುಂಬವು ಮಸ್ಕಿಯಿಂದ ಏಳು 7 ಕಿ.ಮೀ. ದೂರದಲ್ಲಿರುವ ಬೆಲ್ಲದಮರಡಿ ಎಂಬ ಗ್ರಾಮದಲ್ಲಿದ್ದಾರೆ. ಈ ಬೆಲ್ಲದಮರಡಿ ದೇಸಾಯಿಯರು ಎಂದು ಇವರನ್ನು ಕರೆಯುತ್ತಾರೆ. ಇವರೂ ಸಹ ಗುಜ್ಜಲವಂಶದವರು. ಇವರ ಮನೆಯಲ್ಲಿ ಇಂದಿಗೂ ಮೇದಿನಿರಾಯ, ಮಾದಪ್ಪ, ಮೇದಪ್ಪ,

ಮಾಯಪ್ಪ, ಮೇದವ್ವ ಎಂದು ಹೆಸರಿಡುವ ರೂಢಿಯಿದೆ. ಇವರು ಇಂದಿಗೂ ಮಸ್ಕಿಯ ಮಲ್ಲಿಕಾರ್ಜುನ ದೇವರಿಗೆ ನಡೆದುಕೊಳ್ಳುತ್ತಾರೆ. ದೇವರ ಜಾತ್ರೆಗೆ ಅಂದಿನಿಂದ ಇಂದಿನವರೆಗೆ ಎಣ್ಣೆ, ಬೆಣ್ಣೆ, ಸುಣ್ಣ ಇವರ ಮನೆಯಿಂದಲೇ ಹೋಗುತ್ತದೆ. ಇವರ ಮನೆಯಿಂದ ಕಾಯಿಕರ್ಪೂರ ಹೋದ ನಂತರವೇ ತೇರು ಎಳೆಯುತ್ತಾರೆ.

ಹೀಗೆ ರಾಯಚೂರು ಮತ್ತು ಕೊಪ್ಪಳ ಭಾಗದ ಸೀಮೆಗಳಿಗೆ ಅರಸ ಅಚ್ಯುತರಾಯನ ಆಳ್ವಿಕೆಯಲ್ಲಿ ಗುಜ್ಜಲವಂಶದ ಅಮರನಾಯಕರಿದ್ದರೆಂಬುದು ತಿಳಿಯುತ್ತದೆ.

ಕನಕಗಿರಿ ನಾಯಕ ಅರಸರಿಗೆ ಸಂಬಂಧಿಸಿದ ಶಾಸನಗಳು ಈ ಅರಸರು ಗುಜ್ಜಲ ವಂಶದವರಾಗಿದ್ದಾರೆಂಬುದನ್ನು ಸಮರ್ಥಿಸುತ್ತವೆ. ಇವರ ಹೆಸರುಗಳು ಮತ್ತು ಇವರ ವಂಶದ ಕುರಿತಾಗಿ ಕೊಪ್ಪಳ ಜಿಲ್ಲೆಯ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಕ್ರಿ.ಶ. 1660ರಲ್ಲಿ ಗುಜ್ಜಲ ಇಮ್ಮಡಿ ವುಡಿಸಿನಾಯಕನ ರಾಣಿ ಚಿಣ್ಣಮ್ಮ ಕನಕರಾಯನ ಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ.[28] ಕ್ರಿ.ಶ. 1662ರಲ್ಲಿ ಕನಕಗಿರಿಯ ಲಕ್ಷ್ಮನಾಗಿತಿ ಯಿಂಮಡಿವುಡಸಿ ನಾಯಕನು ವಿಠಲಾಪುರದ ವೀರಪ್ಪನ ಮಗನಾದ ಸೊಲಬಾಯನು ನರಭಕ್ಷಕ ಪ್ರಾಣಿಯನ್ನು ಕೊಂದದ್ದಕ್ಕಾಗಿ 12 ಎಕರೆ ಗದ್ದೆಯನ್ನು ನೀಡುವನು.[29] ಕ್ರಿ.ಶ. 1668ರಲ್ಲಿ ಕನಕಗಿರಿಯ ಗುಜ್ಜಲ ವಂಶೋದ್ಭವ ಯಿಂಮಡಿ ವುಡುಸಿನಾಯಕನ ಪತ್ನಿ ಕನಕಮ್ಮನವರು ಶ್ರೀಗುಡ್ಡದ ಲಕ್ಷ್ಮಮ್ಮನ ಬಾವಿಯನ್ನು ಕಟ್ಟಿಸಿದರು.[30] ಕ್ರಿ.ಶ. 1673ರಲ್ಲಿ ಕನಕಗಿರಿಯ ಶ್ರೀಮದ್ ಮಹಾನಾಯಕಾಚಾರ್ಯ, ನಾಯಕ ಶಿರೋಮಣಿಗಳಾದ ಲಕ್ಷ್ಮಾನಾಗತಿ ಯಿಂಮಡಿ ಉಡಿಸಿ ನಾಯಕರ ಅವಧಿಯಲ್ಲಿ ಕೊಕನಕೆ ನಿಜಗಣಪಂಡಿತನಿಗೆ ದಾನ ನೀಡಲಾಗಿದೆ.[31] ಕ್ರಿ.ಶ. 1674ರಲ್ಲಿ ಮಹಾನಾಯಕಾಚಾರ್ಯರಾದ ಲಕ್ಷ್ಮಾನಾಗತಿ ಯಿಂಮಡಿ ವುಡಿಸಿನಾಯಕನು ಕನಕಾಚಲ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಸನ್ನಿಧಿಯಲ್ಲಿ ಸಕಲ ಇತಿಹಾಸ ಮತ್ತು ಪುರಾಣಗಳನ್ನು ಜ್ಞಾನಿಗಳಿಂದ ತಿಳಿದುಕೊಂಡನು.[32] ಕ್ರಿ.ಶ. 1675ರಲ್ಲಿ ಕನಕಗಿರಿಯ ಗುಜ್ಜಲವಂಶದ ಯಿಂಮಡಿ ವುಡುಚಿನಾಯಕನ ಪತ್ನಿ ಚಿಂನಾಜಮ್ಮನು ಕನಕಗಿರಿನಾಥಸ್ವಾಮಿಯ ಕನಕಗಿರಿನಾಥ ಪೌಳಿಗೆ ಕಲ್ಲುಹಾಸಿಗೆ ಹಾಸಿರುವ[33] ವಿಷಯವಿದೆ.

ಕ್ರಿ.ಶ. 1680ರಂದು ಕನಕಗಿರಿಯ ವುಡಿಚಿ ನಾಯಕನ ರಾಣಿ ಚಿನ್ನಮ್ಮನು ಬಸವಣ್ಣ ದೇವರ ಗುಡಿಯನ್ನು ಕಟ್ಟಿಸಿದಳು.[34] 17ನೇ ಶತಮಾನದ ಥಾಣಾಪುರದ ಶಾಸನದಲ್ಲಿ ಮುಂಮಡಿ ವುಡುಸಿನಾಯಕನು ಜೈನಪುರ ಗ್ರಾಮವನ್ನು ದೇವರಿಗೆ ನಿತ್ಯನೈಮಿತ್ಯವಾಗಿ ದಾನ ನೀಡಿದ್ದಾನೆ.[35] ಕ್ರಿ.ಶ. 1812ರಲ್ಲಿ ಶ್ರೀಮನ್ಮಹಾನಾಯಕ ರಂಗಪ್ಪ ನಾಯಕನು ದೇವಾಲಯವೊಂದಕ್ಕೆ ಭೂದಾನವನ್ನು ನೀಡಿದ್ದಾನೆ.[36]

ಹೀಗೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಹೆಚ್ಚಾಗಿ ಅಚ್ಚುತದೇವರಾಯನ ಆಳ್ವಿಕೆಯಲ್ಲಿ ಗುಜ್ಜಲವಂಶದ ಅಮರನಾಯಕರು ಅವರ ಮಾಂಡಲಿಕರಾಗಿ ಹಾಗೂ ವಿಜಯನಗರೋತ್ತರದಲ್ಲಿ ಸ್ವತಂತ್ರರಾಗಿ ಆಳ್ವಿಕೆ ಮಾಡಿದ್ದಾರೆ. ಇವರು ನೀಡಿದ ದತ್ತಿ ದಾನಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಅಲ್ಲದೇ ಇವರನ್ನು ಶಾಸನಗಳು 'ಶ್ರೀಮನ್‌ಮಹಾನಾಯಕಾಚಾರ್ಯ', 'ನಾಯಕಶಿರೋಮಣಿ', 'ಗುಜ್ಜಲವಂಶೋದ್ಧಾರಕ', 'ಗುಜ್ಜಲಭೂಪತಿ', 'ಹಿಂದು ಪಾಳೆಯಗಾರರಗಂಡ', ಮುಂತಾದ ಬಿರುದುಗಳಿರುವುದನ್ನು ತಿಳಿಸುತ್ತವೆ.

ಅಡಿಟಿಪ್ಪಣಿಗಳು

1. *ಸಂಕ್ಷಿಪ್ತ ಕನ್ನಡ ನಿಘಂಟು*, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2013, ಪು. 908–909.
2. ಕಿತ್ತೂರು ಆರ್.ಬಿ., *ವಾಲ್ಮೀಕಿ ವಂಶಜರ ವಂಶಗಳು, ಗೋತ್ರಗಳು ಹಾಗೂ ಬೆಡಗುಗಳು*, 2006, ಪು–10.
3. ಅದೇ, ಪು. 12.
4. ಅದೇ, ಪು. 20.
5. ಅದೇ, ಪು. 11.
6. ಡಾ. ಪರಮಶಿವಮೂರ್ತಿ ಡಿ.ವ್ಹಿ. *ಕೃಷ್ಣದೇವರಾಯನ ಶಾಸನಗಳು*, ಸಂಪುಟ–1, *ಕನ್ನಡ ಸಂಸ್ಕೃತ ಶಾಸನಗಳು*, (ಶಾಸನ ಸಂಖ್ಯೆ–225), ರಾಮಘಡ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 224–225.
7. ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ್ (ಸಂ), *ಹಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು*, 1995, ಪು. 105.
8. ಡಾ. ಎಂ.ಎಂ. ಕಲಬುರ್ಗಿ (ಸಂ.), *ಕರ್ನಾಟಕ ಕೈಫಿಯತ್ತುಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1994, ಪು. 492.
9. ಇದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಬರುವ ಜಬ್ಬಲಗುಡ್ಡ ಎಂಬ ಗ್ರಾಮದ ಸಮೀಪ ಇದೆ.
10. ಎಚ್.ಎಸ್. ಪಾಟೀಲ, *ಕೊಪ್ಪಳ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ ಪರಂಪರೆ*, ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ, 2010, ಪುಟ–41.
11. ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ್ (ಸಂ), *ಪೂರ್ವೋಕ್ತ*, ಪು. 469.
12. ತಿಂತಿಣಿಯು ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ಪ್ರಮುಖ ಐತಿಹಾಸಿಕ ಸ್ಥಳವಾಗಿದೆ.
13. ಡಾ. ದೇವರಕೊಂಡಾರೆಡ್ಡಿ ಹಾಗೂ ಇತರರು, ಕನ್ನಡ *ವಿಶ್ವವಿದ್ಯಾಲಯ ಶಾಸನ ಸಂಪುಟ–2*, ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–90, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1999, ಪು. 379.
14. ಕುಷ್ಟಗಿಯು ಕೊಪ್ಪಳ ಜಿಲ್ಲೆಯ ತಾಲ್ಲೂಕಾ ಪ್ರದೇಶವಾಗಿದೆ.
15. ಯಲಬುರ್ಗಾ ಕೊಪ್ಪಳ ಜಿಲ್ಲೆಯ ತಾಲ್ಲೂಕಾ ಪ್ರದೇಶವಾಗಿದೆ. ವಿಜಯನಗರದ ಸಂದರ್ಭದಲ್ಲಿ ಸೀಮೆಯಾಗಿತ್ತು.
16. ಡಾ. ದೇವರಕೊಂಡಾರೆಡ್ಡಿ ಹಾಗೂ ಇತರರು, ಕನ್ನಡ *ವಿಶ್ವವಿದ್ಯಾಲಯ ಶಾಸನ ಸಂಪುಟ–2*, ಯಲಬುರ್ಗಾ ತಾಲ್ಲೂಕು, ಶಾಸನ ಸಂಖ್ಯೆ–14, ಪುಟ–170–171.
17. ಅದೇ, ಯಲಬುರ್ಗಾ ತಾಲ್ಲೂಕು, ಶಾಸನ ಸಂಖ್ಯೆ–22, ಪು. 179.
18. ಅದೇ, ಕೊಪ್ಪಳ ತಾಲ್ಲೂಕು, ಶಾಸನ ಸಂಖ್ಯೆ–144, ಪು. 143.
19. ಅದೇ, ಕೊಪ್ಪಳ ತಾಲ್ಲೂಕು, ಶಾಸನ ಸಂಖ್ಯೆ–142, ಪು. 142.
20. ಅದೇ, ಕೊಪ್ಪಳ ತಾಲ್ಲೂಕು, ಶಾಸನ ಸಂಖ್ಯೆ–143, ಪು. 142–143.
21. ಡಾ. ಕೆ.ಜಿ. ಭಟ್‌ಸೂರಿ, ಹಂಪಿಯ ಶಾಸನಗಳಲ್ಲಿ ವಿಜಯನಗರಕಾಲದ ಆಡಳಿತ ವಿಭಾಗಗಳು, ವಿಜಯನಗರ ಅಧ್ಯಯನ ಸಂಪುಟ–9, 2003, ಪು. 315.
22. ಝುರಣೇದ ದೇವರು, ನರಸಿಂಹಸ್ವಾಮಿ. ಇದು ನೀರಿನ ಮಧ್ಯ ಇರುವ ದೇವಾಲಯವಾಗಿದೆ. ತೊರವೆ–ಕಂದಕದಲ್ಲಿರುವ ದೇವರು.
23. ಡಾ. ದೇವರಕೊಂಡಾರೆಡ್ಡಿ ಹಾಗೂ ಇತರರು, ಕನ್ನಡ *ವಿಶ್ವವಿದ್ಯಾಲಯ ಶಾಸನ ಸಂಪುಟ–7*, ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಶಾಸನ ಸಂಖ್ಯೆ–37, ಪು. 171.
24. ಅದೇ, ಶಾಸನ ಸಂಪುಟ–7, ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಶಾಸನ ಸಂಖ್ಯೆ–46, ಪು. 180–182.

25. ಅದೇ, ಶಾಸನ ಸಂಪುಟ–7, ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಶಾಸನ ಸಂಖ್ಯೆ–36, ಪು. 170–172.
26. ಅದೇ, ಶಾಸನ ಸಂಪುಟ–7, ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು, ಶಾಸನ ಸಂಖ್ಯೆ–39, ಪು. 173–174.
27. ಎ.ಪಿ.ಜಿ.ಎ.ಎಸ್., ನಂ.9, ಪಿ.ಬಿ. ದೇಸಾಯಿ (ಸಂ.), ಶಾಸನ ಸಂಪುಟ–I ಮತ್ತು II ಹಾಗೂ Channabassappa S.Patil and Vinoda C. Patil, Inscriptions of Raichur District, 1998, p. 66.
28. ಡಾ. ದೇವರಕೊಂಡಾರೆಡ್ಡಿ ಹಾಗೂ ಇತರರು, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2*, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–75, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 1999, ಪು. 367.
29. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–85, ಪು. 375–376.
30. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–89, ಪು. 377.
31. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–87, ಪು. 376.
32. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–81, ಪು. 371–372.
33. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–79, ಪು. 368–369.
34. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–78, ಪು. 368.
35. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–106, ಪು. 387–388.
36. ಅದೇ, ಗಂಗಾವತಿ ತಾಲ್ಲೂಕು, ಶಾಸನ ಸಂಖ್ಯೆ–75, ಪು. 367.

14. ಪಿಂಗಳಿ ಸೂರನನ 'ಕಲಾಪೂರ್ಣೋದಯಮು' ಕೃತಿಯಲ್ಲಿ ನಂದ್ಯಾಲ ರಾಜಮನೆತನದ ವರ್ಣನೆ

ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ

ಪಿಂಗಳಿ ಸೂರನ ವಿಜಯನಗರದ ಕಾಲದ ತೆಲುಗು ಭಾಷೆಯ ಮಹಾಕವಿ. ಈತನನ್ನು ಕೆಲವು ವಿದ್ವಾಂಸರು ವಿಜಯನಗರದರಸರಲ್ಲಿ ಅತ್ಯಂತ ಶ್ರೇಷ್ಠನೆನಿಸಿದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ತೆಲುಗು ಕವಿಗಳಲ್ಲಿ ಒಬ್ಬನೆಂದು ಪರಿಗಣಿಸಿರುವರಾದರೂ ವಾಸ್ತವದಲ್ಲಿ ಕೃಷ್ಣದೇವರಾಯನ ನಂತರದ ಕಾಲದ ಕವಿ. 1560ರ ವೇಳೆಗೆ ವಿಜಯನಗರದ ಸಾಮಂತ ರಾಜ್ಯವಾಗಿದ್ದ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯಲ್ಲಿರುವ ನಂದ್ಯಾಲದಲ್ಲಿ ಆಳುತ್ತಿದ್ದ ಅರವೀಡು ಮನೆತನದ ಬುಕ್ಕನ ವಂಶಸ್ಥನಾದ ನಂದ್ಯಾಲ ಕೃಷ್ಣರಾಜನ ಆಸ್ಥಾನದಲ್ಲಿದ್ದು, ತನ್ನ ಆಶ್ರಯದಾತನ ಆಶಯದಂತೆ ಈ 'ಕಲಾಪೂರ್ಣೋದಯಮು' ಕೃತಿಯನ್ನು ರಚಿಸಿದನೆಂದು ಕೃತಿಯ ಪ್ರಶಸ್ತಿ (ಪೀಠಿಕೆ)ಯ ಭಾಗದಿಂದ ತಿಳಿದುಬರುತ್ತದೆ. ಇದೇ ವಿಚಾರವನ್ನು ಮ.ರಾ.ಶ್ರೀ ಕುಂದುಕೂರಿ ವೀರೇಶಲಿಂಗ ಪಂತುಲು ಬರೆದ 'ಆಂಧ್ರಕವುಲಚರಿತ್ರ'ದಲ್ಲಿ ಸ್ಪಷ್ಟವಾಗಿದೆ.

'ಕಲಾಪೂರ್ಣೋದಯಮು' ತೆಲುಗು ಸಾಹಿತ್ಯದಲ್ಲಿ ಅದ್ವಿತೀಯವಾದ ಪ್ರಬಂಧ ಕಾವ್ಯವೆನಿಸಿದೆ. ಈ ಕೃತಿಯ ಕಾವ್ಯವಸ್ತು ಕವಿಯ ಸ್ವಸೃಷ್ಟಿಯಾಗಿದ್ದು ಭಾವನಾಶಕ್ತಿ, ಸಂದರ್ಭಶುದ್ಧಿ, ಪಾತ್ರೋಚಿತ ಪದ್ಯರಚನೆ, ಪ್ರತಿಭೆ ಮುಂತಾದ ಗುಣಗಳಿಂದ ಕೂಡಿದ್ದು ಸಾಮಾನ್ಯ ಪ್ರಬಂಧ ಕಾವ್ಯಗಳಿಗಿಂತ ಅತಿಶಯವಾದ ರಸವತ್ತಾದ ಕಾವ್ಯವಾಗಿದೆ.

ಬ್ರಹ್ಮ ಸರಸ್ವತಿಯರು ವಿಹಾರದಲ್ಲಿದ್ದು ಸರಸ್ವತಿ ಮುನಿಸಿಕೊಂಡಾಗ ಅವಳ ಮುನಿಸನ್ನು ಹೋಗಲಾಡಿಸಿ ಒಲಿಸಿಕೊಳ್ಳಲು ಅಲ್ಲಿದ್ದ ಗಿಣಿಗೆ ಕಥೆಯೊಂದನ್ನು ಹೇಳಲು ಆಜ್ಞಾಪಿಸಿದಾಗ ಹೇಳಿದ ಕಥೆ. ದೇವಲೋಕದ ಅಪ್ಸರೆಯಾದ ರಂಭೆ ಮತ್ತು ಅವಳ ಪ್ರಿಯತಮನಾದ ಕುಬೇರನ ಮಗ ನಳಕೂಬರರ ವಿಯೋಗ, ನಾರದಮುನಿಯು ರಂಭೆಗೆ ನೀಡಿದ ಶಾಪದ ಕಾರಣ ನಳಕೂಬರನು ನಾರದನ ಶಿಷ್ಯ ಮಣಿಕಂದರನಾದದ್ದು, ದೇವಮುನಿಯ ಜತೆ ದ್ವಾರಕೆಗೆ ಬಂದಾಗ ಆ ಪುರದ ಗಣಿಕಾರತ್ನ ಕಲಭಾಷಿಣಿಯು ಮಣಿಕಂದರನಲ್ಲಿ ಮೋಹಕಳಾಗಿದ್ದು, ನಾರದನು ಮಣಿಕಂದರನಿಗೆ ತೀರ್ಥಯಾತ್ರೆ ಮಾಡಿ ಬರಲು ಕಳುಹಿಸಿದ್ದು, ನಾರದನು ಆ ಸಂದರ್ಭದಲ್ಲಿ ಗಾನಕಲೆಯನ್ನು ಇಚ್ಛಾರೂಪ ಧರಿಸುವ ವಿದ್ಯೆಯನ್ನು ಹೇಳಿಕೊಟ್ಟಿದ್ದು, ದ್ವಾರಕೆಯಲ್ಲಿ ಕೃಷ್ಣನ ಅಂತಃಪುರದ ರಾಣಿಯರಿಗೆ ಕಲಭಾಷಣೆಯಿಂದ ಗಾನವಿದ್ಯೆ ಕಲಿಸಿಕೊಟ್ಟದ್ದು, ಮುಂದೆ ಮೃಗೇಂದ್ರವಾಹಿನಿ ದೇವಿಗೆ ಬಲಿಯಾಗಿಸಲು ಸಿದ್ಧ (ಕಪಟ) ಮಣಿಸ್ತಂಭನು ಕಲಭಾಷಿಣಿಯನ್ನು ಒಯ್ದು ಅಲ್ಲಿಗೆ ಬಂದ ಮಣಿಕಂದರನಿಂದ ಕತ್ತಿಗೆ ಶಿರವೊಡ್ಡಿದ್ದು, ಮಣಿಕಂದರ ನಂತರ ರಂಭೆಯೊಡನೆ ಸ್ವರ್ಗಕ್ಕೆ ಹೋದದ್ದು ಒಂದು ಕಥೆಯಾದರೆ, ಕಲಾಪೂರ್ಣ ಎಂಬ ಕಾಸಾರಪುರದ ರಾಜ ಅಂಗ ವಂಗ ಕಳಿಂಗಾದಿ ದೇಶಗಳನ್ನು ಜಯಿಸಿ ಮಣಿಸ್ತಂಭ (ತಾಯಿ) ಸಮುಖಾಸತ್ತಿ (ತಂದೆ) ಲಿಂಗವ್ಯತ್ಯಯ ದಂಪತಿಗಳಿಗೆ ಮಗಳಾಗಿ ಜನಿಸಿದ ಮಧುರಲಾಲನೆಯನ್ನು ವಿವಾಹವಾಗಿ ದೀರ್ಘಕಾಲ ಸುಖವಾಗಿ ಆಳಿದನು. ಸರಸ್ವತೀ ಬ್ರಹ್ಮರ ವಿಲಾಸ, ಮಣಿಕಂದರ ಮತ್ತು ಕಲಾಪೂರ್ಣ ಕಥೆಗಳನ್ನು ಒಟ್ಟಿಗೂಡಿಸಲು ಮಣಿಹಾರ ವೃತ್ತಾಂತವನ್ನು ಕವಿ ಸೇರಿಸಿದ್ದಾನೆ. ಈ ಮಣಿಹಾರವು ವಿಷ್ಣುವಿನಿಂದ ಸುಗ್ರಹನಿಗೆ, ಸತ್ವದಾತ್ಮ ಮಧುರಾಪುರದ ಬ್ರಾಹ್ಮಣನಿಗೆ, ಶ್ರೀ ಕೃಷ್ಣನಿಗೆ, ಮಣಿಕಂಧರನಿಗೆ, ಅಲಘು ವ್ರತನಿಗೆ, ಕಳಾಪೂರ್ಣನಿಗೆ, ಮಧುರಲಾಲಸಳಿಗೆ ಕ್ರಮವಾಗಿ ಹಸ್ತಾಂತರವಾಗುತ್ತದೆ. ಈ ಹಾರವನ್ನು ಧರಿಸುವವನಿಗೆ ಸರ್ವಜ್ಞತ್ವ, ವಾಕ್ಪಟುತ್ವ ಸಿದ್ಧಿಗಳು ಲಭಿಸುವವು ಎಂಬ ವರವೂ ಇರುತ್ತದೆ. ಈ ಹಾರದ ಮಹಿಮೆಯನ್ನು ಸಂಪೂರ್ಣವಾಗಿ ಭೋಗಿಸಿದವನು ಕಳಾಪೂರ್ಣನು. ಸಮಸ್ತಸದ್ಗುಣವಿಭೂಷಿತನಾಗಿ, ನೀತಿಮಾರ್ಗ

ಸಮುದಾರನಾಗಿ, ಧೀರಶೂರನಾಗಿ, ಬಂಧುಲೋಕಮಂದಾರನಾಗಿ, ರೂಪವಿಲಾಸ ವೈಭವೋಪೇತನಾಗಿ, ಲೋಕಪವಿತ್ರಕೀರ್ತಿವಿಸ್ತಾರನಾಗಿ, ಧರ್ಮಸಾರನಾಗಿ ಮೆರೆದ ರಾಜ ಕಲಾಪೂರ್ಣನ ಕಥೆ 'ಕಲಾಪೂರ್ಣೋದಯಮು' ಕಲ್ಪನಾತಿಶಯದಿಂದಲೂ, ಕಾರ್ಯಕಾರಣ ಕ್ರಮದಿಂದ ಕಥಾನುಸಂಧಾನದಿಂದಲೂ ತೆಲುಗು ಸಾಹಿತ್ಯದಲ್ಲಿ ಅದ್ವಿತೀಯ ಕಾವ್ಯವೆನಿಸಿದೆ. ಪಿಂಗಳ ಸೂರನನನ್ನು ತೆಲುಗು ಸಾಹಿತ್ಯದ ಮಹೋತ್ತಮ ಕವಿಗಳಲ್ಲಿ ಒಬ್ಬನನ್ನಾಗಿಸಿದೆ.


'ಕಲಾಪೂರ್ಣೋದಯಮು' ಕೃತಿಯ ಪೀಠಿಕೆಯ ಆದ್ಯಭಾಗವಾದ ಮಂಗಳಾಚರಣೆಯ ಪ್ರಥಮ ಪದ್ಯದಲ್ಲೇ ಕವಿಯು ತನ್ನ ಆಶ್ರಯದಾತ ನಂದ್ಯಾಲ ಶ್ರೀ ನರಸಿಂಹ ಕೃಷ್ಣ ವಿಭುವನ್ನು ಭಗವಂತ ನಿತ್ಯ ಶ್ರೀಯುತನನ್ನಾಗಿ ಮಾಡಲಿ ಎಂಬ ಹಾರೈಕೆಯಿಂದಲೇ ತನ್ನ ಕೃತಿರಚನೆಯನ್ನು ಆರಂಭಿಸುತ್ತಾನೆ. ಮುಂದೆ 105 ಪದ್ಯಗಳಲ್ಲಿ ನಂದ್ಯಾಲ ರಾಜವಂಶದ ವರ್ಣನೆಯನ್ನು ಸವಿಸ್ತಾರವಾಗಿ ಸಹೃದಯರ ಮುಂದಿಟ್ಟಿದ್ದಾನೆ.

ಅದರಂತೆ ಅತ್ರಿಮುನಿಯ ನೇತ್ರಗಳಿಂದ ಸಮುದ್ಭವನಾದ, ತಾರೆಗಳ ಅಧಿಪತಿ ಎನಿಸಿದ ಚಂದ್ರನ ವಂಶದಲ್ಲಿ ಚಕ್ರವಾಳ ಶೈಲದ ಭೂಪ್ರದೇಶದಲ್ಲಿ ಸ್ಫೂರ್ತಿಕೀರ್ತಿಸಾಂದ್ರನಾದ ಅರೆವೀಟಿ ಬುಕ್ಕ ದೊರೆ ಜನಿಸಿದನು. ಈ ಬುಕ್ಕನು ತನ್ನ ಬಾಹುಬಲದಿಂದ ರಿಪುಗಳೆಲ್ಲರನ್ನೂ ಹತಮಾಡಿ ಸ್ವಶೌರ್ಯ, ಪ್ರಾಬಲ್ಯಗಳನ್ನು ಈ ವರೆಗೆ ನಿರಾಕರಿಸಿದ್ದ ನಳಕೂಬರನಿಗೆ (ದೇವಲೋಕದ ಅಪ್ಸರೆ ರಂಭೆಯ ಪ್ರಿಯಕರ, ಧನಪತಿ ಕುಬೇರನ ಕಿರಿಯ ಮಗ) ತಿಳಿಯಪಡಿಸಿದನು. ಬುದ್ಧಿಯಲ್ಲಿ ಬ್ರಹ್ಮ, ರೂಪದಲ್ಲಿ ಮನ್ಮಥ, ನಯೋನ್ನತಿಯಲ್ಲಿ ಬೃಹಸ್ಪತಿ, ದಾನಪರತೆಯಲ್ಲಿ ಸೂರ್ಯಪುತ್ರ ಕರ್ಣ, ಈ ಬುಕ್ಕದೊರೆ ಎಂದು ಆರ್ಯ ಜನರು ಪ್ರಶಂಸೆಗೈಯುತ್ತಿದ್ದರೆಂದೂ, ಹೀಗೆ ಆ ಕಾಲದಲ್ಲಿ ಬುಕ್ಕದೊರೆಗೆ ಗುಣಸಮರಾದ ಯಾವ ರಾಜನೂ ಭೂಮಂಡಲದಲ್ಲಿ ಇರಲಿಲ್ಲವೆಂದು ಉದ್ಗಾರವೆತ್ತಿದ್ದಾನೆ ಕವಿ ಸೂರನ. ಇಂಥಹ ಬುಕ್ಕದೊರೆಗೆ ಪಾವನಗುಣವತಿಯಾದ ಅಬ್ಬಲದೇವಿ ಹಾಗೂ ಕುಲಶೀಲಗುಣನಿಧಿಯಾದ ಬಲ್ಲಾದೇವಿ ಎಂಬ ಇಬ್ಬರು ಪತ್ನಿಯರು. ಬಲ್ಲಾದೇವಿಗೆ ಇಂದ್ರನಂದನರಾದ ಜಯಂತ ಹಾಗೂ ಅರ್ಜುನ ಸದೃಶರಾದ, ಯಶೋವಂತರಾದ, ವೈಭವ ಶಾಲಿಗಳೂ ಆದ ರಾಮರಾಜಾದಿ ಪ್ರಮುಖರು ಮಕ್ಕಳು. ಹಿರಿಯ ಪತ್ನಿ ಅಬ್ಬಲದೇವಿಗೆ ಸಮಸ್ತಗುಣಾಢ್ಯರಾದ ಸಿಂಗರಯ್ಯ, ರಾಮವಿಭು, ಅಹೋಬಲರೆಂಬ ಪುತ್ರರು. ಅವರಲ್ಲಿ ಸಿಂಗರಯ್ಯನು ಓಬಳದೇವಿಯನ್ನು ವಿವಾಹವಾಗಿ ಇಂದ್ರಸಮಾನವೈಭವೋಪೇತನೂ, ಬುಧಜನರಿಗಾನಂದಕರನೂ, ನಿರ್ಮಲಗುಣಪ್ರಖರತೇಜನೂ, ದಿವ್ಯಪಾರ್ಥಿವನೂ, ನವ್ಯಪುರೂರವನೂ ಆದ ನರಸಿಂಗರಾಜ ಎಂಬ ಮಗನನ್ನು ಪಡೆದನು. ಈ ನರಸಿಂಗರಾಜನು ನಂದ್ಯಾಲ ರಾಜ್ಯದ ಅಧಿಪತ್ಯವನ್ನು ವಹಿಸಿ ಮಾನವತೀ ತಿಲಕಳೆನಿಸಿದ ಮಾದಮದೇವಿಯನ್ನು ವಿವಾಹವಾಗಿ ವೈಭವಾತಿಶಯದಿಂದ ಆಳುತ್ತಾ ದಾನಪ್ರಸಿದ್ಧನೂ, ಭೂಭುವನ ಪ್ರಶಂಸಾಭಿಶೋಭಿತನೂ ಆಗಿ ಖ್ಯಾತಿವೆತ್ತನು. ಈ ನರಸಿಂಹಭೂಪತಿಗೆ ಓಬಳ, ವರದರಾಜ, ರಘುಪತಿ ಎಂಬ ಮೂವರು ಪುತ್ರರು. ನರಸಿಂಗರಾಜನು ಉತ್ಕಳೇಂದ್ರ (ಕಳಿಂಗದ ದೊರೆ), ಸವಾಯಬರೀದ (ಗುಲ್ಬರ್ಗಾ–ಬೀದರಿನ ಬರೀದ್ ವಂಶದ ಸುಲ್ತಾನ), ಗುದುಪನ ಮಲ್ಕ (ಕುತುಬ್‌ಷಾಹಿ ಸುಲ್ತಾನ) ಹಾಗೂ ಕೊಂಡವೀಡಿನ ರಾಜ – ಇವರುಗಳನ್ನು ಯುದ್ಧದಲ್ಲಿ ಎದುರಿಸಿ ಶೌರ್ಯೋತ್ಸಾಹ ಮೆರೆದು, ಮಣಿಸಿ, ವಿಜಯಶಾಲಿಯಾಗಿ ಭೇರಿಯನ್ನು ಹೊಯಿಸಿ ಯಜ್ಞವನ್ನಾಚರಿಸಿದನು. ಶ್ರೀ ವಿಷ್ಣುಪದಭುಕ್ತಿಯಿಂದ ಧರ್ಮಸಂಪತ್ತಿ, ಧರ್ಮಸಂಪತ್ತಿನಿಂದ ಜಯ, ಜಯಸಿದ್ಧಿಯಿಂದ ಉಜ್ವಲಬಾಹುಶೌರ್ಯ, ಬಾಹುಶೌರ್ಯದಿಂದ ಚತುರನೀತಿ, ಚತುರನೀತಿಯಿಂದ ಮಹನೀಯ ಸಾಮ್ರಾಜ್ಯ, ಮಹಾಸಾಮ್ರಾಜ್ಯದಿಂದ ಶಾಂತಿ, ಶಾಂತಿಯಿಂದ ವೇದಾದಿಸಕಲವಿದ್ಯೆ, ಕೀರ್ತಿ, ಜನಪ್ರೇಮಗಳಿಂದ ನಂದ್ಯಾಲ ನರಸಿಂಗ (ನರಸಿಂಹ) ಭೂಪನು ರಂಜಿಸಿದನು.

ನರಸಿಂಹಭೂಪನ ಮಗನಾದ ಓಬನು ಘನತರಚಾತುರ್ಯದಿಂದ, ಶೃತಿಸ್ಮೃತಿಶಾಸ್ತ್ರ ನೈಪುಣ್ಯದಿಂದ, ವಿದ್ವಜ್ಜನರಂಜನೆಯಿಂದ, ಬಹುಶುಚಿತ್ವಶೋಭೆ ಪ್ರತಾಪ ಸಂಪತ್ತುಗಳಿಂದ ಪೃಥ್ವೀನಾಯಕನಾಗಿ ಶೋಭಿಸಿದನು.

ನರಸಿಂಗರಾಜನ ದ್ವಿತೀಯ ಪುತ್ರನಾದ ವರದರಾಜನೂ ಸಾತ್ವಿಕಪರಾಯಣನಾಗಿ ಸತ್ಯವಚನನಾಗಿ, ದಾನಶೀಲನಾಗಿ,

ನಂದ್ಯಾಲ ರಾಜವಂಶ


ಅತ್ರಿಮುನಿ
ಚಂದ್ರ
I. ಅರವೀಟಿ ಬುಕ್ಕ
1) + ರಾಣಿ ಅಬ್ಬಲದೇವಿ
2) + ರಾಣಿ ಬಲ್ಲಾದೇವಿ
ರಾಮರಾಜ
II.
ಸಿಂಗರಯ್ಯ
+
ರಾಮವಿಭು
ಅಹೋಬಲ
1) ಓಬಳದೇವಿ
2) ಗೌರಮಾಯೀ
III.
ನರಸಿಂಗ
+ ಮಾದಮದೇವಿ
ನಾರವಿಭು
ತಿಮ್ಮ
ನರಸಿಂಹ
+ ಶ್ರೀರಾಮಾಂಬೆ
ರಘುಪತಿ
ಓಬಳ (ಪೆದ್ದ)
ನಾವಳಿ ಚಿನ್ನ ಓಬಳ
IV. ಕುಮಾರ ಓಬಳ
+ ತಿರುಮಲಾಂಬ
V. ವರದರಾಜ
+ ತಿರುಮಲಾಂಬ
ರಘುಪತಿ
ತಿರುಮಲ
ರಾಜಮನಾಮು
ಕೃಷ್ಣ
ನರಸಿಂಹ
+ ಲಕ್ಷ್ಮಿದೇವಿ
ಶ್ರೀರಂಗ
+ತಿರುಮಲಾಂಬ
ನರಸಿಂಗ
ಕನಕರಾಜ
ತಿಮ್ಮರಾಜ
ನಾರಕ್ಷಿತೀಂದ್ರ
+ತಿರುಮಲಾಂಬಾ
ಓಬಳೇಶ್ವರ (ಘನಗಿರಿ)
ಓಬಳ
ತಿಮ್ಮ
ಕೃಷ್ಣ
ನರಸಿಂಗ
ಮಾದರಾಜ
ಕನಕರಾಜ
1) + ಪೆದ್ದಕೊಂಡಮಾಂಬ
2) ಚಿನ್ನಕೊಂಡಮಾಂಬ
ತಿಮ್ಮರಾಜ
ಕೃಷ್ಣರಾಜ (ಕವಿ ಸೂರನನ ಆಶ್ರಯದಾತ)

ಸತ್ತ್ವವಿಜೃಂಭಿತನಾಗಿ, ರಣಶೌರ್ಯಧುರೀಣನಾಗಿ, ಕೌಟಿಲ್ಯ ಶುಕ್ರಾದಿ ನೀತಿಪದ್ಧತಿ ತತ್ತ್ವವಿಶಾರದನಾಗಿ ನಿಷ್ಕಲ್ಮಷಚಿತ್ತನಾಗಿ, ಚತುರಮತಿಯಾಗಿ, ವೈಭವಶಾಲಿ ರಾಜನೆಂದು ವರ್ಣಿಸಲ್ಪಟ್ಟಿದ್ದಾನೆ.

ನರಸಿಂಗರಾಜನ ತೃತೀಯ ಪುತ್ರನಾದ ರಘುಪತಿಯು ಕರುಣಾದೃಷ್ಟಿಪೂರಿತನೂ, ಶರಣಾಗತರಕ್ಷಕನೂ, ಶತ್ರುದಮನಕಾರಿ ರಣಧೀರನೂ ಆಗಿ ಸಾಕ್ಷಾತ್ ರಘುಪತಿಯಂತೆ (ಶ್ರೀರಾಮಚಂದ್ರ) ಖ್ಯಾತಿಪಡೆದನು ಎಂದು ಪ್ರಶಂಸಿಸಲ್ಪಟ್ಟಿದ್ದಾನೆ.

ಸಿಂಗರಯ್ಯನು ಅನವದ್ಯಗುಣವಂತೆಯಾದ ಗೌರಮಾಂಬಾ ಎಂಬ ಇನ್ನೊಬ್ಬ ಪತ್ನಿಯಲ್ಲಿ ನರಸಿಂಹ, ರಘುಪತಿ ಮತ್ತು ಓಬಳರೆಂಬ ಪುತ್ರರನ್ನು ಪಡೆದನು. ನರಸಿಂಹನು ಮಾನವಂತನಾಗಿ ರಘುಪತಿಯು ಕ್ಷಮಾವಂತನಾಗಿ ಓಬಳನು ಮಹಾನ್ ಯಶೋವಂತನಾಗಿಯೂ ಸಕಲಗುಣವಿರಾಜಿತನಾಗಿಯೂ ವಿರಾಜಿಸಿದರು. ಈ ಮೂವರು ಪುತ್ರರಲ್ಲಿ ಹಿರಿಯನಾದ ನರಸಿಂಹನಿಗೆ ತನ್ನ ಪತ್ನಿ ಶ್ರೀರಾಮಾಂಬೆಯಲ್ಲಿ ನಾವಳಿ ಚಿನ್ನ ಓಬನೆಂಬ ಮಗನು ಜನಿಸಿದನು.

ಇದು ಸಿಂಗರಯ್ಯನ ಸಂತತಿಯ ವರ್ಣನಾ ವಿವರಗಳು.

ಇನ್ನು ಸಿಂಗರಯ್ಯನ ಸಂತತಿಯ ವರ್ಣನಾನಂತರದಲ್ಲಿಯ ಕುಮಾರ ಓಬಳನ ಸಂತತಿಯ ವರ್ಣನೆಯ ಉಪಕ್ರಮವಿದು.

ಕುಮಾರ ಓಬಳನು ಸಿಂಗರಯ್ಯ ಓಬಳದೇವಿ ದಂಪತಿಗಳ ಹಿರಿಯಮಗನಾದ ನರಸಿಂಗ ಮತ್ತು ಮಾದಮದೇವಿಯರ ಮಗ. ಅಂದರೆ ಸಿಂಗರಯ್ಯನ ಮೊಮ್ಮಗ. ಇವನು ಗುಣಗಂಭೀರ ಚರಿತೆ, ಪರಮಪತಿವ್ರತೆ, ಪಾವನೆ, ಭಾಗ್ಯನಿಧಿಯೆನಿಸಿದ ತಿರುಮಲಾಂಬೆಯನ್ನು ವಿವಾಹ ಮಾಡಿಕೊಂಡು ಅವಳಲ್ಲಿ ಸತ್ಕಾಂತಿಯುತನಾದ, ವಿಷ್ಣುಸೇವಾನಿರತನಾದ, ಪ್ರವೀಣಮತಿಯಾದ ನರಸಿಂಹನೆಂಬ ಮಗನನ್ನು ಪಡೆದನು. ಈ ನರಸಿಂಹವಿಭುವು ಉಭಯ ಕುಲಶ್ರೀ ಸೌಂದರ್ಯಗುಣಚರಿತ್ರವಂತೆಯಾದ ಲಕ್ಷ್ಮೀದೇವಿಯನ್ನು ವಿವಾಹವಾಗಿ ತ್ರೈಲೋಕ್ಯಸ್ತುತರಾದ ಯಶೋಭವ್ಯರಾದ ಕವಿತ್ವಪ್ರಮುಖಕಲಾಪಾರಂಗರಾದ ತಿಮ್ಮರಾಜ ಮತ್ತು ಬಾಲಾದಿತ್ಯೋಪಮಾನ ಪ್ರಚುರತರರುಚಿಚಾರುವಾದ ನಾರಕ್ಷಿತೀಂದ್ರ ಎಂಬ ಇಬ್ಬರು ಪುತ್ರರನ್ನು ಪಡೆದನು. ಕುಮಾರ ಓಬಳನ ಮಗ ನರಸಿಂಹವಿಭುವು ವೈಭವಜೃಂಭಣಾವಮತ ವಾಸವ (ಇಂದ್ರ), ಇಂದುಮುಖೀ ನವೀನ ಚೇತೋಭವ ಮೂರ್ತಿ, ಕಲ್ಮಷವಿದೂರ, ನಿತ್ಯರಮಾವಿಹಾರಲೀಲಾಭವನೀಯಮಾನ ಸುವಿಲಾಸಕಟಾಕ್ಷನಿರೀಕ್ಷಣನೂ ಆಗಿದ್ದನೆಂದು ವರ್ಣಿತನಾಗಿದ್ದಾನೆ. ನರಸಿಂಹನ ಕೀರ್ತಿಯು ಮೇರುಶೃಂಗವನ್ನೇರಿದ್ದು ಸವತಿಮತ್ಸರವನ್ನುಂಟುಮಾಡಿತೆಂದೂ ಹೇಳಲಾಗಿದೆ. ಈ ನರಸಿಂಹನ ಮಗ ತಿಮ್ಮರಾಜನು ಉಜ್ವಲಶೂರಗುಣೋಪೇತನಾಗಿ ಕೀರ್ತಿಯಲ್ಲಿ ದಿಕ್ತಟಮೇರೆ ಮೀರಿ ಸ್ತೋತ್ರಾಕಾರ ಸರಸ್ವತೀಸತಿಯಂತೆ ವಿದ್ವತ್ ವಾಕ್‌ವುಳ್ಳವನೂ ಸೂರಿಗಳ ಜಿಹ್ವೆಯುಳ್ಳವನೆಂದೂ ಕೀರ್ತಿಸಲ್ಪಟ್ಟಿದ್ದಾನೆ.

ಈ ಕುಮಾರ ಓಬನ ಚಿಕ್ಕಪ್ಪ ಪೆದ್ದ ಓಬ ಭೂಪನು ಸಾರಸುಗುಣಮಣಿ ಪಯೋರಾಶಿ, ಉದ್ದಂಡನೆಂದೂ ಹಾಗೂ ಧೀರಜನಾಭಿವರ್ಣ್ಯನೂ ಉಜ್ವಲಾಕಾರನಾಗಿದ್ದ ಚಿನ್ನ ಓಬಳನಿಗೆ ತಿರುಮಲ, ರಾಜಮನಾಮ, ಕೃಷ್ಣರಾಜ ಎಂಬ ಮನೋಹಾರಿಗುಣೋನ್ನತರಾದ ಮೂವರು ಪುತ್ರರಿದ್ದರೆಂದೂ ಹೇಳಲಾಗಿದೆ. ಇದು ನಂದ್ಯಾಲ ಕುಮಾರ ಓಬಳನ ವಂಶಚಾರಿತ್ರ್ಯ ಸುಪಾವನ ವೃತ್ತಿಕಥನ.

ನಂತರದಲ್ಲಿ ಕುಮಾರ ಓಬಳನ ತಮ್ಮ ವರದರಾಜನ ವಂಶಾನುಕೀರ್ತನವಿದೆ. ಸಂಗರ ಪಾರ್ಥನೆಂದು ಬಿರುದಾಂಕಿತನಾಗಿದ್ದ ವರದಶೌರಿಗೆ ತನ್ನ ಪತ್ನಿ ಶ್ರೀ ತಿರುಮಲಾಂಬಾಳಲ್ಲಿ ಮಹಾಗುಣಾಢ್ಯನಾದ ಶ್ರೀರಂಗ ಜನಾಧಿಪ, ಬುಧವರ ಪ್ರಣತುವಾದ ನರಸಿಂಗಮೇದಿನೀಂದ್ರ ಹಾಗೂ ಕವಿಪೋಷಣಾತಿಚತುರನಾದ ಕನಕಕ್ಷಿತಿಪಾಲಶೇಖರ ಎಂಬ

ಮೂವರು ಪುತ್ರರು ಜನಿಸಿದರು. ಅವರಲ್ಲಿ ಸಮಸ್ತ ಗುಣನಿಕೇತನನೂ ಆಶ್ರಿತಸುವರ್ಣಕೇತನನೂ ಆದ ಶ್ರೀರಂಗರಾಜನು ತನಗೆ ಕುಲರೂಪಗುಣದಲ್ಲಿ ಅನುರೂಪಳಾದ ತಿರುಮಲಾಂಬಿಕೆಯನ್ನು (ತಿಮ್ಮಾಂಬಾ) ವಿವಾಹವಾಗಿ ಅವಳಲ್ಲಿ ಶೋಭನ ಜಯಲಾಭಸೌಭಾಗ್ಯ ಭೂಭರಣಶೋಭಿತನಾದ ಓಬಳೇಂದ್ರ, ನಿರ್ಮಲ ಸತ್ಕರ್ಮಧರ್ಮನಿರ್ಮಿತ ಬುಧಸಮ್ಮೋದಿತನಾದ ತಿಮ್ಮವಿಭು, ಸುರದಂತಿಶರದಭ್ರಹರದಂತಿರುಪುನಿಭಸ್ಫುರದು ಸಂಚಿತಕೀರ್ತಿ ಆದ ವರದವಿಭು ವಿಷ್ಣುಸೇವಾಢ್ಯನಾದ ವಿಷ್ಣುನಿತ್ಯಾಚಾರ ನಿಷ್ಣಾತ ಹೃದಯನಾದ ಕೃಷ್ಣನೃಪ ಎಂಬ ನಾಲ್ಕು ಜನ ಮಕ್ಕಳನ್ನು ಪಡೆದು ಅನವರತ ದಾನ ಕಾರ್ಯಗಳಲ್ಲಿ ಸಂತೋಷದಿಂದ ನಿರತನಾಗಿದ್ದನು.

ಶ್ರೀರಂಗವಿಭುವಿನ ಎರಡನೇ ತಮ್ಮನಾದ ಕನಕರಾಜನಿಗೆ ಘನಗಿರಿ ಓಬಳೇಶ್ವರನೆಂಬ ಮಗನಾದನು.

ಇದು ವರದರಾಜವಂಶಕ್ರಮವು. ಇದರ ನಂತರದಲ್ಲಿ ವರ್ಣಿತವಾಗಿರುವುದು ಕುಮಾರ ಓಬಳನ ಮೊಮ್ಮಗನಾದ ನಾರಕ್ಷಿತೀಂದ್ರನ ವಂಶವಿವರವು.

ನಾರಕ್ಷಿತೀಂದ್ರನು ಕುಮಾರ ಓಬಳನ ಮಗ ನರಸಿಂಹನ ಕಿರಿಯಮಗನು. ಇವನು ತನಗೆ ನಿಜರೂಪನು, ಗುಣಳಾದ, ಪುಣ್ಯಕುಲಶೀಲಮಹಿಮಳಾದ, ನಿಷ್ಕಳಂಕಪಾತಿವ್ರತ್ಯ ನಿಧಿಯಾದ, ಪರಮಶುಭಳಾದ ತಿರುಮಲಾಂಬೆಯನ್ನು ವಿವಾಹವಾಗಿ ನರಸಿಂಗರಾಜ, ಮಾದರಾಜ, ಕನಕರಾಜರೆಂಬ ಮೂವರು ಸತ್ಪುತ್ರರನ್ನು ಪಡೆದನು. ಇವರಲ್ಲಿ ಹಿರಿಯನಾದ ನರಸಿಂಗವಿಭುವು ಶೌರ್ಯಸಂಪನ್ನನೂ, ವಿದ್ಯಾಪ್ರತಿಪನ್ನನೂ, ಕವೀಂದ್ರ ಕೋಟಿಗೆ ಆಶ್ರಯದಾತನೂ, ಹರಿಭಕ್ತನೂ, ದೀನಜನರಕ್ಷಕನೂ, ಸದಾಪ್ರಸನ್ನಚಿತ್ತನೂ ಆಗಿದ್ದು, ಯಥಾರ್ಥದಲ್ಲಿ ಪ್ರಹ್ಲಾದವರದ ನರಸಿಂಹನೆನಿಸಿದ್ದನು. ಇವನ ಸ್ಫೂರ್ತಿಪ್ರೌಢಿಮೆ, ಬೆಳದಿಂಗಳ ತನುಕಾಂತಿ, ಸೂರ್ಯಪ್ರಭೆ, ರೂಪಸೌಂದರ್ಯ ವೈಭವ, ಕೀರ್ತಿ ಪ್ರತಾಪ ಉನ್ನತಿಗಳನ್ನು ಕೀರ್ತಿಸುವುದು ಸಾಧ್ಯವಿಲ್ಲವೆಂದು ಕವಿ ಸೂರನ ಉದ್ಗಾರವೆತ್ತಿದ್ದಾನೆ.

ಇಂತಹ ನಾರಕ್ಷಿತೀಂದ್ರನ ದ್ವಿತೀಯ ಮಗ ಮಾದಪ್ರಭುವು ರಣದಲ್ಲಿ, ದಾನದಲ್ಲಿ, ನಯನೀತಿಯಲ್ಲಿ, ವಿನಯದಲ್ಲಿ ಅನ್ಯರಿಗೆ ಮಿಗಿಲಾಗಿ ಶೋಭಿಸಿದನು. ಅಂತೆಯೇ ನಾರಭೂಪತಿಯ ಕಿರಿಯ ಮಗನಾದ ಕನಕಮಹೀಪತಿಯು ರಾಜರಲ್ಲಿ ಶ್ರೇಷ್ಠನಾಗಿ, ಶೌರ್ಯದಲ್ಲಿ ಬುದ್ಧಿಯಲ್ಲಿ ಗಟ್ಟಿಗನಾಗಿ, ಪರಹಿತ ಧರ್ಮ ಭಾವದಲ್ಲಿ ಸದಾನಿರತನಾಗಿ ಶೋಭಿಸಿದನು. ಸಂತತ, ಔದಾರ್ಯ, ಸೌಂದರ್ಯ, ಶೌರ್ಯ, ನೈಪುಣ್ಯ, ಪ್ರೌಢಿಮೆಯನ್ನು ಮೆರೆದು ನರವರೇಣ್ಯನೆನಿಸಿದನು.

ನಾರಕ್ಷಿತೀಂದ್ರನ ಮೂವರು ಪುತ್ರರಲ್ಲಿ ಹಿರಿಯನಾದ ನರಸಿಂಹವಿಭು ಪೆದ್ದಕೊಂಡಮಾಂಬಾ ಮತ್ತು ಚಿನ್ನಕೊಂಡಮಾಂಬಾರನ್ನು ಪತ್ನಿಯರಾಗಿ ಸ್ವೀಕರಿಸಿದ್ದನು. ಇವರು ನಿರುಪಮ ವಿಕ್ರಮವನ್ನು ಸೇವಿಸುವ ವಿನೀತಿ-ನೀತಿ, ವಿರಕ್ತಿ-ಭಕ್ತಿ, ಶಾಂತಿ-ದಾಂತಿಗಳ ತುಲನೆಯಲ್ಲಿ ಸದಾ ನರಸಿಂಗವಿಭುವಿನ ಪರಿಚರ್ಯೆಗೈದರು. ಹಿರಿಯ ಪತ್ನಿ ಪೆದ್ದಕೊಂಡಮಾಂಬಾಳಲ್ಲಿ ನರಸಿಂಗವಿಭು ಶಿಷ್ಟಮತಿಯೂ, ಕಾಂತಿಯುತನೂ, ಕ್ಷಮಾಗುಣಸಂಪನ್ನನೂ ಆದ ತಿಮ್ಮವಿಭು ಎಂಬ ಮಗನನ್ನು ಪಡೆದನು. ಕಿರಿಯ ಪತ್ನಿ ಚಿನ್ನಕೊಂಡಮಾಂಬಾಳಲ್ಲಿ ದಾನಿಯೂ, ಅಖಿಲ ಹಿತ ಸಹಜನೂ, ಪಂಡಿತಜನರ ಮಿತ್ರನೂ, ಸೂರ್ಯತೇಜನೂ, ನವಭೋಜನೆಂಬ ಬಿರುದಾಂಕಿತನಾದ ಕೃಷ್ಣಮರಾಜನೆಂಬ ಮಗನನ್ನು ಪಡೆದನು.

ಈ ಕೃಷ್ಣರಾಜನು ಮಹಾಕವಿ ಪಿಂಗಳಿ ಸೂರನನ ಪೋಷಕರಾಜನಾಗಿದ್ದರಿಂದ ಕವಿಯು ಇವನ ವರ್ಣನೆಯನ್ನು ಅತಿಶಯುವಾಗಿ ಮಾಡಿದ್ದಾನೆ. ಸೂರನನು ಕೃಷ್ಣಮರಾಜನನ್ನು ಭುಜಬಲಪರಾಕ್ರಮಿ, ತೇಜಸಮನ್ವಿತ, ನಿಖಿಲದಿಗಂತಪೃಥ್ವೀತಲಾಧಿಪತಿ, ಪ್ರತಿಮಲ್ಲ, ಕೀರ್ತಿವಿಭವಶೋಭಿತ, ಹಾಗೂ ಕವೀಂದ್ರರಿಂದ ಕಾವ್ಯಾಮೃತವನ್ನು

ಹರಿಸಿದವನೂ, ನಿತ್ಯಸುವರ್ಣವರ್ಷದಿಂದ ಕವಿಸಮೂಹವನ್ನು ತೋಯಿಸಿದವನೂ, ಅಪ್ರತಿಮನೂ, ಸಪ್ತಸಂತಾನ (ಸತ್ರ, ಪ್ರಪಾ, ಪ್ರಶ್ರಯ, ವೃಷೋತ್ಸರ್ಗ, ವಾಪಿ, ಕೂಪತಟ, ಛತ್ರ, ಅರವಟ್ಟಿಗೆ, ಆಶ್ರಯಮಂಟಪ, ಗೋಮಾಳ, ಕೊಳ, ಕೆರೆಕಟ್ಟೆ, ಆರಾಮ) ಸಮೃದ್ಧಿ ಪಡೆದವನೂ, ವಿನಯಾದಿ ಗುಣಗಳಿಂದ ಕೂಡಿದ್ದು ಸುರಭಿತ್ವ (ಕಾಮಧೇನುವಿನಂತೆ ಇಷ್ಟಾರ್ಥ ನೀಡುವುದು) ಹೊಂದಿದವನೂ ಯದುವಂಶೋದ್ಭೂತಿತಂದಿತ್ತ ಪ್ರದ್ಯುಮ್ನನೂ (ಶ್ರೀಕೃಷ್ಣನ ಪುತ್ರ) ಧಾತ್ರಿಯಲಿ ದಾನವಾರಿ ವಿಷ್ಣುವಿನ ಅವತಾರಿ ಎನಿಸಿದ್ದನು. ಅಲ್ಲದೆ, ಕೃಷ್ಣರಾಜನು ವಿಷ್ಣುಭಕ್ತನೂ, ಗಜಹಯಾರೋಹಣದೀಕ್ಷಾಗುರುವೂ, ಸಂಗೀತ ಸಾಹಿತ್ಯಾದಿ ಕಲಾವಿಚಕ್ಷಣನೂ, ರಸಿಕನೂ, ಗಭೀರನೂ, ಉಚಿತ ವಿಹಾರನೂ, ಉದಾರಿಯೂ, ಕೀರ್ತಿಪ್ರಿಯನೂ, ಶರಣಾಗತವತ್ಸಲನೂ ಆಗಿದ್ದನು. ಇಂತಹ ಈ ನಂದ್ಯಾಲ ಕೃಷ್ಣಧರಾಧಿಪತಿಯ ವರ್ಣಿಸಲು ಶೇಷನಿಗೂ (ಆದಿಶೇಷ) ಸಾಧ್ಯವಾಗದು.

ಈದೃಶಗುಣರಮ್ಯನಾದ ಆಧುನಿಕ ರಾಮಭದ್ರನೂ, ಆಹವಕ್ರಿಯೆಯಲ್ಲಿ ರುದ್ರನೂ, ಮಾಧವ ಪದಪದ್ಮಸಮಾರಾಧನ ವಿಧಿ ಸಾಧಿತಾವಿರತಭದ್ರನೂ, ಜಯಲಕ್ಷ್ಮೀವರಣ ಸಹೃದಯ ಕೀರ್ತಿತನೂ ಆದ ಆತ್ರೇಯಮುನಿಗೋತ್ರ ಪವಿತ್ರನಿಗೆ ದಿಶಾವಿಜೇತನಿಗೆ ಲೋಚನೋತ್ಸವಗಾತ್ರನಿಗೆ (ಕಣ್ಣುಗಳಿಗೆ ಆನಂದ ಉಂಟುಮಾಡುವ ಸುಂದರವ್ಯಕ್ತಿ), ಜಿಷ್ಣು ಯಶೋಧಿಕ್ಷೇಪಣ ಶೌರ್ಯಪದ್ಧತಿ ಖೇಲುವಿಗೆ ವೈಷ್ಣವಮತಶೀಲನಿಗೆ, ಕೃತಿಲೋಲುಪನಾದ ನವ್ಯಭೋಜ ಕೃಷ್ಣಮಹಿಪಾಲನಿಗೆ ಅಭ್ಯುದಯ ಪರಂಪರಾವೃದ್ಧಿ ಆಯುರಾರೋಗ್ಯ ಸಮೃದ್ಧಿಗಾಗಿ 'ಕಲಾಪೂರ್ಣೋದಯಮು' ಎಂಬ ಈ ಮಹಾಪ್ರಬಂಧದ ಕಥಾಕ್ರಮವನ್ನು ರಚಿಸಲು ಉಪಕ್ರಮಿಸಿತ್ತೇನೆ ಎಂದು ಕವಿ ಪಿಂಗಳಸೂರನ ಪ್ರಶಸ್ತಿ ಭಾಗದ ಮಂಗಳಾಚರಣ ಮಾಡಿ ವಿಜಯನಗರ ಸಾಮ್ರಾಜ್ಯದ ಸಾಮಂತರಾದ ನಂದ್ಯಾಲ ಅರವೀಟಿ ರಾಜಮನೆತನದ ವಂಶವರ್ಣನೆಯನ್ನು ಸವಿಸ್ತಾರವಾಗಿ ಮಾಡಿ ಕೃತಕೃತ್ಯನಾಗಿದ್ದಾನೆ. ವಿಜಯನಗರೋತ್ತರ ಇತಿಹಾಸದ ಬಗ್ಗೆ ಆಸಕ್ತರಿಗೆ ಮಹೋಪಕಾರವನ್ನೆಸಗಿದ್ದಾನೆ.

15. ವಿಜಯನಗರ ಸಾಮ್ರಾಜ್ಯದ ಆರಂಭಿಕ ದೊರೆಗಳ ಬಿರುದುಗಳು

ಡಾ. ಡಿ.ಎನ್. ಯೋಗೀಶ್ವರಪ್ಪ

I

ಹದಿನಾಲ್ಕನೇ ಶತಮಾನದಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಸುಮಾರು 250 ವರ್ಷಗಳ ಕಾಲ ರಾಜಕೀಯ ಉತ್ತುಂಗ ಶಿಖರದಲ್ಲಿದ್ದು, ದಕ್ಷಿಣ ಭಾರತವನ್ನಾಳಿದ ಇತರೆ ರಾಜಮನೆತನಗಳಿಗಿಂತ ಭಿನ್ನವಾದ ಸ್ವರೂಪವನ್ನು ಪಡೆದಿತ್ತೆಂದು ಚರಿತ್ರೆಯ ಬರವಣಿಗೆಯಲ್ಲಿ ಗುರ್ತಿಸಬಹುದು. ಉದಾಹರಣೆಗೆ ಕೆ.ಎ. ನೀಲಕಂಠಶಾಸ್ತ್ರಿಯವರು 'ಯಾವ ಹಿಂದೂ ರಾಜ್ಯವು ಸಾಧಿಸದಿರುವುದನ್ನು ಸಾಧಿಸಿದ ವಿಜಯನಗರ ಸಾಮ್ರಾಜ್ಯವು ಪ್ರಾಯಶಃ ಮಿಲಿಟರಿ ರಾಜ್ಯಕ್ಕೆ ಹತ್ತಿರವಾಗಿತ್ತು. ಆದರೆ ಅದರ ರಾಜಕೀಯ ಸಂಘಟನೆಯಲ್ಲಿ ಮಿಲಿಟರಿಯೇ ಪ್ರಧಾನವಾಗಿತ್ತು' (1975, 307). ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರವು ಇತರೆ ರಾಜಮನೆತಗಳ ರಾಜಧಾನಿಗಿಂತ ಭಿನ್ನವಾದ ಲಕ್ಷಣಗಳಿಂದ ಕೂಡಿದೆ. ಆ ನಗರದ ವೈಶಾಲ್ಯತೆ, ರಕ್ಷಣಾಗೋಡೆಯ ಸಾಲುಗಳು, ಅದರೊಳಗಿರುವ ಅರಮನೆ, ಆಡಳಿತ ಕಛೇರಿ, ಮಿಲಿಟರಿ ಅನುಕೂಲ, ರಾಜ ಕುಟುಂಬದವರಿಗೇ ಮೀಸಲಾದ ದೇವಾಲಯಗಳು, ನಗರದ ಮಧ್ಯಭಾಗದಲ್ಲಿದ್ದು ರಕ್ಷಣಾಗೋಡೆಯಿಂದ ಸುತ್ತುವರಿಯಲ್ಪಟ್ಟಿವೆ. ಈ ರೀತಿಯ ಸರ್ಕಾರಿ ಅನುಕೂಲಗಳು ಒಂದೇ ಕಡೆ ದಟ್ಟವಾಗಿರುವುದು ಆ ನಗರದ ವಿಶೇಷವಾಗಿದೆ. ಈ ನಗರ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಂದಿನಿಂದ ಹಿಡಿದು ಅದು ಪತನವಾಗುವತನಕ (ಕ್ರಿ.ಶ. 1336–1565) ಧೃಡವಾದ ಪೂರ್ಣಪ್ರಮಾಣದ ರಾಜಧಾನಿಯಾಗಿಯೇ ಮುಂದುವರಿದಿರುವುದು ವಿಶೇಷವಾಗಿದೆ. ಈ ರೀತಿಯ ನಿಶ್ಚಿತ ಧೃಡವಾದ ರಾಜಧಾನಿಯಿಲ್ಲದಿದ್ದರೆ ಪ್ರಾಯಶಃ ವಿಜಯನಗರ ಚಕ್ರವರ್ತಿಗಳಿಗೆ ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಲು ಸಾಧ್ಯವಾಗುತ್ತಿರಲಿಲ್ಲವೇನೋ? ಇಂಥಹ ರಾಜಧಾನಿಯನ್ನು ನಿರ್ಮಿಸಿ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದವರು ಸಂಗಮ ಸಹೋದರರು, ವಿಶೇಷವಾಗಿ ಹರಿಹರ ಮತ್ತು ಬುಕ್ಕ.

ವಿಜಯನಗರ ಸಾಮ್ರಾಜ್ಯವು ಮುಸ್ಲಿಂ ಶಕ್ತಿಗಳ ವಿಸ್ತರಣೆಯನ್ನು ತಡೆಗಟ್ಟುವ ಉದ್ದೇಶದಿಂದ ಹಿಂದೂಗಳ ರಕ್ಷಣೆಗೋಸ್ಕರ ತಡೆಗೋಡೆಯಾಗಿ ಕಾರ್ಯ ನಿರ್ವಹಿಸಿತೆಂದು ದಕ್ಷಿಣ ಭಾರತದ ಇತಿಹಾಸದ ಬಗೆಗಿನ ಅನೇಕ ಸಂಶೋಧನಾ ಕೃತಿಗಳು ಸಾಮಾನ್ಯವಾಗಿ ಹೇಳುತ್ತವೆ (ಕೃಷ್ಣಸ್ವಾಮಿ ಅಯ್ಯಂಗಾರ್, 1991 ನೋಡಿ). ಇದು ಸತ್ಯವೇ ಆಗಿದೆ. ಏಕೆಂದರೆ ಸಮಕಾಲೀನ ಶಾಸನಗಳಲ್ಲಿ ಉಲ್ಲೇಖವಾಗಿರುವ ನುಡಿಗಟ್ಟುಗಳು (ಬಿರುದು) ಅವರನ್ನು ಹಿಂದೂ ಸಂಸ್ಕೃತಿಯ ವೀರ ರಕ್ಷಕರು, ಮುಸ್ಲಿಂ ಅತಿಕ್ರಮಣದಿಂದ ತೊಂದರೆಗೊಳಗಾದ ಸಾಮಾಜಿಕ ವರ್ಗವನ್ನು ಪುನರ್ ಸ್ಥಾಪಿಸುವವರು ಎಂಬುದನ್ನು ಸೂಚಿಸುತ್ತವೆ. ಈ ದೊರೆಗಳು ಧರಿಸಿದ್ದ ಬಿರುದುಗಳು ವೈಧಿಕ ಧರ್ಮಾಚರಣೆಯನ್ನು ಉತ್ತೇಜಿಸುವಂತಿವೆ. ಉದಾ: ಶಾಸನಗಳಲ್ಲಿ ಉಕ್ತವಾಗಿರುವ ವೇದಮಾರ್ಗ ಸ್ಥಾಪನಾ ತತ್ಪರ,[1] ವೈದಿಕ ಮಾರ್ಗ ಸ್ಥಾಪನಾಚಾರ್ಯ,[2] ವೈದಿಕ ಮಾರ್ಗ ಪ್ರತಿಷ್ಠಾಪಕ,[3] ವೇದದ್ವಿಜಾತಿ ಪರಿರಕ್ಷಣ[4] ಇತ್ಯಾದಿ ಗಮನಿಸಬಹುದು. ಈ ಬಿರುದುಗಳು 1377ರ ನಂತರ ಅಂದರೆ ಎರಡನೇ ಹರಿಹರನ ನಂತರ ಧರಿಸಿದವುಗಳಾಗಿವೆ. ಆದರೆ ಈ ಬಿರುದುಗಳನ್ನು ಧರಿಸಿಕೊಳ್ಳುವುದಕ್ಕಿಂತ ಮೊದಲು ವಿಜಯನಗರದ ದೊರೆಗಳು ಯಾವ ಬಿರುದುಗಳನ್ನು ಧರಿಸಿಕೊಂಡಿದ್ದರು, ಅದರ ಪ್ರಾಮುಖ್ಯತೆ ಏನು ? ಎನ್ನುವುದು ಕುತೂಹಲಕಾರಿ ವಿಷಯವಾಗಿದೆ. ಶಾಸನಗಳಲ್ಲಿ ಉಲ್ಲೇಖವಾಗಿರುವ ಬಿರುದುಗಳನ್ನು ಸಂಗ್ರಹಿಸಿ ಅದನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

II

ವಿಜಯನಗರದ ಸಾಮ್ರಾಜ್ಯವು ಹೊಯ್ಸಳರ ಉತ್ತರಾಧಿಕಾರಿಯಾಗಿ ದಕ್ಷಿಣ ಭಾರತದಲ್ಲಿ ಏಳಿಗೆಗೆ ಬಂದಿತು. ಕ್ರಿ.ಶ. 1336ರಲ್ಲಿ ಆರಂಭವಾದ ಈ ಸಾಮ್ರಾಜ್ಯವು ಹೊಯ್ಸಳರಿಗೆ ಸೇರಿದ ಭೂಭಾಗಗಳನ್ನೆಲ್ಲಾ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲಾರಂಭಿಸಿತು. ಉದಾ: ಕ್ರಿ.ಶ. 1333ರಲ್ಲಿ ಮೈಲೆಯನಾಯಕ ಎಂಬುವನು ಹೊಯ್ಸಳ ಮೂರನೇ ಬಲ್ಲಾಳನ ಅಧೀನನಾಗಿ ಕುಕ್ಕಲನಾಡಿನಲ್ಲಿ ಆಳ್ವಿಕೆ ಮಾಡುತ್ತಿದ್ದು, ಕ್ರಿ.ಶ. 1340ರಲ್ಲಿ ಮೊದಲನೇ ಹರಿಹರನ ಅಧೀನನಾಗಿ ಅದೇ ನಾಡಿನಲ್ಲಿದ್ದನು.[5] ಇದರಿಂದ ಹರಿಹರ ಮತ್ತು ಬುಕ್ಕ ಸಹೋದರರು ಹೊಯ್ಸಳರಿಗೆ ಸೇರಿದ ಪ್ರದೇಶಗಳ ಮೇಲೆ ದಾಳಿ ಮಾಡಿ ಗೆದ್ದುಕೊಂಡರೆಂದು ಸ್ಪಷ್ಟವಾಗುತ್ತದೆ. ಭಾರತದ ಚರಿತ್ರೆಯಲ್ಲಿ ಸಾಮಾನ್ಯವಾಗಿ ಹೊಸ ಪ್ರದೇಶಗಳನ್ನು ಗೆದ್ದುಕೊಂಡಾಗ ಆ ಪ್ರದೇಶದ ಒಡೆಯನ ಬಿರುದುಗಳನ್ನು ಧರಿಸುವುದೆಂದರೆ ಸ್ವಲ್ಪಮಟ್ಟಿಗೆ ಅವರ ಗೌರವವನ್ನು ಪಡೆದಂತೆ (ಯೋಗೀಶ್ವರಪ್ಪ ಡಿ.ಎನ್. 2012, ಪು. 57). ಆದರೆ ಇಲ್ಲಿ ಹರಿಹರ ಸೋದರರು ಹೊಯ್ಸಳರ ಪ್ರದೇಶಗಳನ್ನು ಗೆದ್ದುಕೊಂಡರೂ ಅವರು ಧರಿಸುತ್ತಿದ್ದ ಪ್ರಶಸ್ತಿಗಳನ್ನಾಗಲೀ, ಬಿರುದುಗಳನ್ನಾಗಲೀ ಧರಿಸಿಕೊಳ್ಳದೆ ತಮ್ಮದೇ ಆದ 'ಸ್ವಾರ್ಜಿತ ಬಿರುದು'ಗಳನ್ನು ಧರಿಸಿಕೊಂಡರು. ಈ ಪರಂಪರೆ ಕ್ರಿ.ಶ. 1340ರಿಂದ ಆರಂಭವಾಗುತ್ತದೆ. ಕ್ರಿ.ಶ. 1340ರ ಬಾದಾಮಿ ಶಾಸನವು ಮೊದಲನೇ ಹರಿಹರನನ್ನು 'ಶ್ರೀಮನ್ ಮಹಾ ಮಂಡಲೇಶ್ವರ, ಅರಿರಾಯ ವಿಭಾಡ, ಭಾಸೆಗೆ ತಪ್ಪುವ ರಾಯರಗಂಡ, ಪೂರ್ವ ಪಶ್ಚಿಮ ಸಮುದ್ರಾಧಿಪತಿ, ಶ್ರೀ ವೀರ ಹರಿಯಪ್ಪ ವಡೆಯರು' ಎಂದು ವರ್ಣಿಸಿದೆ.[6] ಈ ಶಾಸನಕ್ಕಿಂತ ಮೊದಲು ದೊರಕಿರುವ ಶಾಸನಗಳಲ್ಲಿ ಅವರು ತಮ್ಮನ್ನು ಕೇವಲ ಮಹಾಮಂಡಲೇಶ್ವರರೆಂದೂ[7] ಮನ್ಮಹಾರಾಜಾಧಿರಾಜ ರಾಜಪರಮೇಶ್ವರರೆಂದೂ[8] ಕರೆದುಕೊಂಡಿದ್ದಾರೆ. ಹರ್ಮನ್ ಕುಲ್ಕೆಯವರು ಮೊದಲನೇ ಹರಿಹರನು ತನ್ನ ಜೀವಿತದ ಕೊನೆಯವರೆಗೂ ಕೇವಲ 'ಮಹಾಮಂಡಲೇಶ್ವರ' ಎಂಬ ಬಿರುದನ್ನು ಧರಿಸಿದ್ದನೆಂದು ಹೇಳುತ್ತಾರೆ (2001, ಪು. 217). ಆದರೆ ಇವರ ಮಾತನ್ನು ಒಪ್ಪಲಾಗದು, ಏಕೆಂದರೆ ಅವನು ತನ್ನ ನಾಲ್ಕು ಶಾಸನಗಳಲ್ಲಿ 'ಮಹಾರಾಜಾಧಿರಾಜ ರಾಜ ಪರಮೇಶ್ವರ'[9] ಎಂಬ ಬಿರುದನ್ನು ಕೂಡಾ ಧರಿಸಿಕೊಂಡಿದ್ದಾನೆ. ಈ ರಾಜಶಾಹಿತ್ವದ ಬಿರುದು ಅವನಿಗೆ ಮೊದಲು ಕ್ರಿ.ಶ. 1339ರಲ್ಲಿ ಕಾಣಿಸಿಕೊಳ್ಳುತ್ತದೆ. ಜೊತೆಗೆ ಹನ್ನೊಂದು ಶಾಸನಗಳಲ್ಲಿ 'ಮಹಾಮಂಡಲೇಶ್ವರ'[10] ಎಂಬ ಸಾಮಂತತ್ವದ ಬಿರುದು ಧರಿಸಿಕೊಂಡಿದ್ದಾನೆ. ಹರಿಹರನಿಗೆ ಸಾಮಂತತ್ವದ 'ಮಹಾಮಂಡಲೇಶ್ವರ' ಎಂಬ ಬಿರುದನ್ನು ಕ್ರಿ.ಶ. 1327ರಲ್ಲಿ ಕಾಣಿಸಿಕೊಂಡರೂ ರಾಜಶಾಹಿತ್ವದ 'ಮಹಾರಾಜ' ಬಿರುದು ಕ್ರಿ.ಶ. 1339ರಲ್ಲಿ ಮೊದಲು ಕಾಣಿಸಿಕೊಂಡಿದೆ. ಆದರೂ ಹರಿಹರ ತನ್ನ ಶಾಸನಗಳಲ್ಲಿ ಅತಿ ಹೆಚ್ಚಾಗಿ ಮಹಾಮಂಡಲೇಶ್ವರ ಎಂದೇ ಕರೆದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಇವನ ಸಹೋದರನಾದ ಮೊದಲನೇ ಬುಕ್ಕನ (ಕ್ರಿ.ಶ. 1357–1377) ಬಿರುದುಗಳನ್ನು ಪರಿಶೀಲಿಸಿದಾಗ ತನ್ನ ಅಣ್ಣ ಹರಿಹರನಿಗಿಂತ (ಕ್ರಿ.ಶ. 1336–1357) ಈ ವಿಚಾರದಲ್ಲಿ ಮುಂದಿರುವಂತೆ ಕಾಣುತ್ತದೆ. ಕ್ರಿ.ಶ. 1333ರಲ್ಲೇ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಎಂಬ ರಾಜಶಾಹಿತ್ವದ ಬಿರುದನ್ನು ಧರಿಸಿಕೊಂಡ ಈತನು ಇದನ್ನು ತನ್ನ ಆಳ್ವಿಕೆಯ ಅವಧಿಯಲ್ಲಿ ಒಟ್ಟು ಏಳು ಬಾರಿ[11] ಅಂದರೆ ಕ್ರಿ.ಶ. 1333, 1351, 1353, 1354, 1368, 1375, 1377ರಲ್ಲಿ ಉಪಯೋಗಿಸಿದ್ದಾನೆ. ಇದರಿಂದ 'ಮಹಾರಾಜಾಧಿರಾಜ ರಾಜಪರಮೇಶ್ವರ' ಎಂಬ ರಾಜಶಾಹಿತ್ವದ ಬಿರುದನ್ನು ಮೊದಲು ಉಪಯೋಗಿಸಿಕೊಂಡವನು ಮೊದಲನೇ ಬುಕ್ಕ (ಹರ್ಮನ್‌ಕುಲ್ಕೆ 1993, 2001, ಪು. 217) ಎಂಬ ಹೇಳಿಕೆಯನ್ನು ಮೇಲಿನ ದಾಖಲೆಗಳ ಆಧಾರದಿಂದ ನಿರಾಕರಿಸಬಹುದು. ಹರಿಹರನಂತೆ ಬುಕ್ಕರಾಯನೂ ಕೂಡಾ 74 ಬಾರಿ 'ಶ್ರೀಮನ್ ಮಹಾಮಂಡಲೇಶ್ವರ' ಎಂದು (ಕ್ರಿ.ಶ. 1345ರಿಂದ 1377ರ ವರೆಗಿನ ಶಾಸನಗಳು) ಕರೆದುಕೊಂಡಿದ್ದಾನೆ. ಅಲ್ಲದೆ ಒಂದು ಬಾರಿ ಅವನು ರಾಜಶಾಹಿತ್ವದ ಮತ್ತು ಸಾಮಂತತ್ವದ ಜೊತೆಗೂಡಿದ ಬಿರುದನ್ನು ಧರಿಸಿಕೊಂಡಿರುವುದು ವಿಶೇಷವಾಗಿದೆ. ಉದಾ: ಕ್ರಿ.ಶ. 1346ರಲ್ಲಿ 'ಶ್ರೀಮನ್ ಮಹಾಮಂಡಳೇಶ್ವರ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಬುಕ್ಕರಾಯ'.[12]

ಈ ಬಿರುದಿನಲ್ಲಿ 'ರಾಜಾಧಿರಾಜ ರಾಜಪರಮೇಶ್ವರ'ದ ಪೂರ್ವದಲ್ಲೇ 'ಶ್ರೀಮನ್ ಮಹಾಮಂಡಳೇಶ್ವರ' ಎಂಬುದನ್ನು ಬಳಸಿರುವುದು, ಇದಕ್ಕೆ ಕಾರಣವಾದರೂ ಏನು? ಪ್ರಾಯಶಃ ಅವರು ಕಟ್ಟಿದ ರಾಜ್ಯಕ್ಕೆ ಇನ್ನೂ ಸರಿಯಾದ ಸ್ಥಿರತೆ ದೊರಕಿಲ್ಲದಿರುವುದು ಅವರ ಮನಸ್ಸಿನಲ್ಲಿ ಮೂಡಿರಬಹುದಾದ ಭಾವನೆ ಇರಬಹುದು. ಆದ್ದರಿಂದ ಅವನು ಎರಡನ್ನೂ ಜೊತೆಗೂಡಿಸಿ ಬಳಸಿರುವ ಸಾಧ್ಯತೆ ಇದೆ. ಬುಕ್ಕರಾಯನ ನಂತರ ರಾಜಶಾಹಿತ್ವದ ಬಿರುದನ್ನು ನಿರಂತರವಾಗಿ ಅವನ ಉತ್ತರಾಧಿಕಾರಿಗಳು ಬಳಸಿದರು.

ಈ ಶಾಸನಗಳ ಆಧಾರದಿಂದ ಸಂಗಮ ಸಂತತಿಯ ಆರಂಭದಿಬ್ಬರು ದೊರೆಗಳು ರಾಜಶಾಹಿತ್ವದ 'ಮಹಾರಾಜಾಧಿರಾಜ ರಾಜಪರಮೇಶ್ವರ' ಎಂಬ ಬಿರುದನ್ನು ಹೆಚ್ಚು ಬಳಸದೆ ಸಾಮಂತತ್ವದ ಮಹಾಮಂಡಲೇಶ್ವರ ಎಂಬುದನ್ನು ಅತಿಹೆಚ್ಚು ಬಳಸಿರುವುದು ಕಂಡುಬರುತ್ತದೆ. ಇದರಿಂದ ರಾಜಶಾಹಿತ್ವದ ಬಿರುದನ್ನು ಧರಿಸಲು ಅವರಿಗೆ ಹಿಂಜರಿಕೆ ಇದ್ದಂತೆ ತೋರುತ್ತದೆ. ಹೊಯ್ಸಳ ರಾಜ್ಯ ಪತನದ ವೇಳೆಯಲ್ಲಿ ಉದಯಿಸಿದ ಈ ರಾಜ್ಯ ಆಗಿನ್ನೂ ಅಂಬೆಗಾಲಿಡುವ ಶಿಶುವಿನಂತಿದ್ದು ತಮ್ಮ ನಿಷ್ಠೆಯನ್ನು ಹೊಯ್ಸಳರಿಗೆ ತೋರುವ ಕುರುಹಾಗಿ ಸಾಮಂತತ್ವದ ಬಿರುದನ್ನು ಧರಿಸಿದ್ದರೆಂದು ಸ್ಪಷ್ಟಪಡಿಸಬಹುದು. ಇದನ್ನು ಮತ್ತೊಂದು ಆಧಾರದಿಂದ ಧೃಡಪಡಿಸಬಹುದು. ಉದಾ: ಕ್ರಿ.ಶ. 1354ರಲ್ಲಿ ಬುಕ್ಕನು ಹೊಸ ಪಟ್ಟಣದಿಂದ ರಾಜ್ಯವಾಳುತ್ತಿದ್ದನೆಂದೂ, ಅದು ಹೊಯ್ಸಳ ದೊರೆಗಳಿಗೆ ಸೇರಿತ್ತೆಂದೂ ಹೇಳಲಾಗಿದೆ (ಹರ್ಮನ್ ಕುಲ್ಕೆ 1993, 2001, ಪು. 218). ಆದ್ದರಿಂದ ಸಂಗಮ ಸಂತತಿಯ ಮೊದಲೆರಡು ತಲೆಮಾರಿನವರು ಹೊಯ್ಸಳರ ಭೂಪ್ರದೇಶಗಳಿಗೆ ಒಡೆಯರಾದರೂ ತಮ್ಮ ನಿಷ್ಠೆಯ ಕುರುಹಾಗಿ ಸಾಮಂತತ್ವದ 'ಶ್ರೀಮನ್ ಮಹಾಮಂಡಲೇಶ್ವರ'ರು ಎಂದು ಹೇಳಿಕೊಳ್ಳುವುದಕ್ಕೆ ಹೆಚ್ಚು ಒಲವು ತೋರಿದ್ದರೆಂದು ಸ್ಪಷ್ಟವಾಗುತ್ತದೆ.

III

ಸಂಗಮ ಸಂತತಿಯ ಸೋದರರಾದ ಹರಿಹರ ಮತ್ತು ಬುಕ್ಕ ಶ್ರೀಮನ್ ಮಹಾ ಮಂಡಲೇಶ್ವರರಾಗಿ ಕ್ರಿ.ಶ. 1336ರಿಂದ 1377ರವರೆಗೆ ಆಳ್ವಿಕೆ ನಡೆಸಿದರು. ಈ ಸಂದರ್ಭದಲ್ಲಿ ಅವರು 'ಅರಿರಾಯ ವಿಭಾಡ', 'ಭಾಷೆಗೆ ತಪ್ಪುವ ರಾಯರ ಗಂಡ', 'ಪೂರ್ವ ಪಶ್ಚಿಮ ಸಮುದ್ರಾಧಿಪತಿ' ಎಂಬ ಬಿರುದುಗಳನ್ನು ಸಾಮಾನ್ಯವಾಗಿ ಧರಿಸಿದ್ದಾರೆ. ಈಗಾಗಲೇ ಹಿಂದಿನ ಭಾಗದಲ್ಲಿ ತಿಳಿಸಿರುವಂತೆ ಇವುಗಳನ್ನು ಅವರು ಕ್ರಿ.ಶ. 1340ರಲ್ಲಿ ಮೊದಲ ಬಾರಿಗೆ ಬಳಸಿದರು. ನಂತರ ಇಬ್ಬರು ಸೋದರರು ನಿರಂತರವಾಗಿ ತಮ್ಮ ಆಳ್ವಿಕೆಯ ಕೊನೆಯ ದಿನಗಳವರೆಗೂ ಇವುಗಳನ್ನು ಉಪಯೋಗಿಸಿದ್ದಾರೆ. ಈ ಬಿರುದುಗಳನ್ನು ಗಮನಿಸಿದಾಗ 'ಪೂರ್ವ ಪಶ್ಚಿಮ ಸಮುದ್ರಾಧಿಪತಿ' ಎಂಬ ಬಿರುದನ್ನು ಹೊರತುಪಡಿಸಿದರೆ ಉಳಿದ 'ಅರಿರಾಯ ವಿಭಾಡ', 'ಭಾಷೆಗೆ ತಪ್ಪುವ ರಾಯರ ಗಂಡ' ಎಂಬ ಬಿರುದುಗಳು ಕೆಲ ಬದಲಾವಣೆಗಳೊಂದಿಗೆ ಹೊಯ್ಸಳರ ಕಾಲದಲ್ಲಿ ಬಳಸುತ್ತಿದ್ದವುಗಳಾಗಿವೆ. ಉದಾ : ಹರಿಹರ ಮತ್ತು ಬುಕ್ಕರಾಯರು ಬಳಸಲಾರಂಭಿಸಿದ "ಭಾಷೆಗೆ ತಪ್ಪುವ ರಾಯರ ಗಂಡ" ಎಂಬ ಬಿರುದು ಹೊಯ್ಸಳರ ಕಾಲದಲ್ಲಿ 'ಭಾಸೆಗೆ ತಪ್ಪುವಂಕದ ನೆಗಳ್ತಿಯ ಲೆಂಕರ ಗಂಡ'[13] ಎಂಬ ರೂಪದಲ್ಲಿ ಎರಡನೇ ಬಲ್ಲಾಳನ ಮಂತ್ರಿಯಾದ ಕುವರ ಲಕ್ಷ್ಮಣನಿಗಿದ್ದಿತು. ಇದನ್ನು ಮೊದಲನೇ ಹರಿಹರ ಅದೇ ಅರ್ಥವನ್ನು ಹೋಲುವ ಸ್ವಲ್ಪ ಪದ ಬದಲಾವಣೆಯೊಂದಿಗೆ ಬಳಸಲಾರಂಭಿಸಿರುವುದು ಸ್ಪಷ್ಟವಾಗುತ್ತದೆ. ಈಗಾಗಲೇ ಇದಕ್ಕೆ ಅನೇಕ ಅರ್ಥಗಳನ್ನು ನೀಡಲಾಗಿದೆ. 'ತಮ್ಮ ಮಾತನ್ನು ಉಳಿಸಿಕೊಳ್ಳಲಾಗದವರನ್ನು ಶಿಕ್ಷಿಸುವವನು', 'ಆಡಿದ ಮಾತನ್ನು ನಡೆಸದೆ ಇರುವ ಸಾಮಂತರನ್ನು ಅಥವಾ ತನ್ನ ಅಧೀನವರ್ತಿಗಳನ್ನು ಶಿಕ್ಷಿಸುವವನು' ಇತ್ಯಾದಿ.

ಇವರ ಇನ್ನೊಂದು ಬಿರುದಾದ 'ಅರಿರಾಯ ವಿಭಾಡ'ವೂ ಕೂಡ ಇದಕ್ಕೆ ಹೊರತಲ್ಲ. ಈ ಬಿರುದಿನಲ್ಲಿರುವ ಅರಿರಾಯ ಪದವು ಕ್ರಿ.ಶ. 1019ರಲ್ಲೇ 'ಅರಿರಾಯ ತಲೆಯ ಕರವತ್ತಂ', 'ಅರಿರಾಯ ಸೆಳೆವಂ' ಎಂಬ ರೂಪದಲ್ಲಿ

ಶಾಸನದಲ್ಲಿ[14] ಉಲ್ಲೇಖವಾಗಿದೆ. ಅರಿರಾಯ ಎಂದರೆ ಶತ್ರುರಾಜ, ಇದನ್ನು ಶತ್ರುರಾಜರ ತಲೆಯನ್ನು ಕತ್ತರಿಸಿದವನು, ಉರುಳಿಸಿದವನು ಎಂಬ ಅರ್ಥದಲ್ಲಿ ಬಳಸಲಾಗಿದೆ. ಅದೇ ಅರ್ಥದಲ್ಲಿಯೇ ಹರಿಹರನು 'ಅರಿರಾಯ' ಪದದ ಜೊತೆಗೆ 'ವಿಭಾಡ' ಎಂಬ ಪದವನ್ನು ಸೇರಿಸಿ ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಒಟ್ಟಾರೆ ಹೇಳುವುದಾದರೆ ಈ ಎರಡೂ ಬಿರುದುಗಳು ಇವರ ಪೂರ್ವಿಕರ ಕಾಲದಲ್ಲಿ ಈಗಾಗಲೇ ಬೇರೆ ಪದಗಳೊಂದಿಗೆ ಅದೇ ಅರ್ಥದಲ್ಲಿ ಬಳಕೆಯಾಗುತ್ತಿದ್ದವು. ಇವರು ಸ್ವಲ್ಪಮಟ್ಟಿನ ಪದವ್ಯತ್ಯಾಸದೊಂದಿಗೆ ಉಪಯೋಗಿಸಲಾರಂಭಿಸಿದರು ಎನ್ನಬಹುದು. ಇವರ 'ಪೂರ್ವ ಪಶ್ಚಿಮ ಸಮುದ್ರಾಧಿಪತಿ' ಎಂಬ ಬಿರುದು ಹೊಸದಾಗಿ ಸೃಷ್ಟಿಯಾದ ಬಿರುದು. ಇದು ಅವನ ರಾಜ್ಯವು ಎರಡೂ ಸಮುದ್ರದ ತೀರದವರೆಗೆ ವಿಸ್ತರಿಸಿತ್ತೆನ್ನುವ ಸೂಚನೆಯಾಗಿದೆ. ಅಂದರೆ ಮಲಬಾರ ಕೋರಮಂಡಲಗಳ ಮೇಲೆ ಹಿಡಿತ ಸಾಧಿಸಿದುದರ ಪ್ರತೀಕವಾಗಿದೆ ಎಂದು ಸೋಮಶೇಖರ್ ಎಸ್.ವೈ. ಅಭಿಪ್ರಾಯಪಟ್ಟಿದ್ದಾರೆ. (ಸೋಮಶೇಖರ್ ಎಸ್.ವೈ., 2000, ಪು. 106). ಆದರೆ ಕ್ರಿ.ಶ. 1340ರ ವೇಳೆಗೆ ಅವರ ರಾಜ್ಯ ಅಷ್ಟೊಂದು ವಿಸ್ತಾರವಾಗಿರಲು ಸಾಧ್ಯವೇ ? ಇದಕ್ಕೆ ಹೆಚ್ಚಿನ ಅಧ್ಯಯನಗಳು ಅವಶ್ಯಕ.

IV

ಸಂಗಮ ಸಂತತಿಯ ಮೊದಲ ತಲೆಮಾರಿನ ಅರಸರು ಹಿಂದೆ ಚರ್ಚಿಸಿದ ಬಿರುದುಗಳ ಜೊತೆಗೆ ತಮ್ಮದೇ ಆದ ವಿಶೇಷವಾದ ಸ್ವಯಾರ್ಜಿತ ಬಿರುದಾದ 'ಹಿಂದೂರಾಯ ಸುರತ್ರಾಣ' ಎಂಬುದನ್ನು ಧರಿಸಿರುವುದು. ಈ ಬಿರುದನ್ನು ಧರಿಸಿದವರಲ್ಲಿ ಬುಕ್ಕರಾಯನೇ ಮೊದಲಿಗನಾಗಿದ್ದು, ಅದು ಕ್ರಿ.ಶ. 1352ರ ಮೋಪೂರು ಶಿಲಾಶಾಸನದಲ್ಲಿ ದಾಖಲಾಗಿದೆ ಎಂದು ಫಿಲಿಪ್ ವ್ಯಾಗನಾರ್‌ರವರು ಹೇಳುತ್ತಾರೆ (1996, ಪು. 861–862). ಆದರೆ ಈ ಬಿರುದನ್ನು ಇವನಿಗಿಂತ ಮೊದಲೇ ಕ್ರಿ.ಶ. 1347ರಲ್ಲಿ ಬುಕ್ಕರಾಯನ ಮತ್ತೊಬ್ಬ ಸಹೋದರ ಮಾರಪ್ಪನು ಧರಿಸಿದ್ದನ್ನು ಸೊರಬ ತಾಲ್ಲೂಕಿನ ಹೆಜ್ಜೆ ಎಂಬಲ್ಲಿ ದೊರಕಿರುವ ತಾಮ್ರಶಾಸನವು ದಾಖಲಿಸಿದೆ (ಎಂ.ಎ.ಆರ್. 1929, ಪು. 249). ಈ ಶಾಸನವು ಮಾರಪ್ಪನನು 'ಮೂವರು ರಾಯರ ಗಂಡಃ ಪೂರ್ವಾಪರ ದಕ್ಷಿಣಾರ್ಣವಾಧೀಶಃ ಭಾಷೆಗೆ ತಪ್ಪುವ ರಾಯರ ಗಂಡಶ್ಚಂಡಾರಿರಾಯ ಮಾನಹರಃ । ದ್ವಿಷದರಿರಾಯ ವೇಶ್ಯಾಭೂಜಂಗಕೋ ಹಿಂದೂರಾಯ ಸುರತಾಲಃ । ಮಹದರಿರಾಯ ವಿಭಾಡೋ ಬಿರುದ್ಯೈ ರೀತಿ ಮಾರಪಃ ಪ್ರಥಿತಃ । ಎಂದು ವರ್ಣಿಸಿದೆ. ಆದ್ದರಿಂದ ಈ ಬಿರುದನ್ನು ಧರಿಸಿದಾತ ಮಾರಪ್ಪನೇ ಹೊರತು ಮೊದಲನೇ ಬುಕ್ಕನಲ್ಲ ಎಂದು ಸ್ಪಷ್ಟಪಡಿಸಬಹುದು.

ಹಿಂದೂರಾಯ ಸುರತಾಳ । ಲ । ಣ ಎಂಬ ಬಿರುದು ಸಂಗಮ ವಂಶೀಯರಲ್ಲೇ ಅಲ್ಲದೆ ಸಾಳುವ, ತುಳುವ ದೊರೆಗಳ ಕಾಲದಲ್ಲೂ ಮುಂದುವರೆದು ಆ ಮನೆತನಗಳ ಅನೇಕ ಚಕ್ರವರ್ತಿಗಳು ಧರಿಸಿದ್ದಾರೆ. ಆದರೆ ಇಂಥಹ ಮಹತ್ವಪೂರ್ಣವಾದ ಬಿರುದಿನ ಬಗೆಗೆ ಸಂಶೋಧಕರು ಹೆಚ್ಚು ಗಮನ ಹರಿಸಿದಂತೆ ಕಾಣುವುದಿಲ್ಲ. ಬಹುಪಾಲು ಚರಿತ್ರೆಕಾರರು/ಸಂಶೋಧಕರು ಇದನ್ನು ಕೇವಲ ಒಂದು ಬಿರುದೆಂದು ಪರಿಗಣಿಸಿದ್ದಾರೆಯೇ ಹೊರತು ಅದನ್ನು ವಿಮರ್ಶೆಗೆ ಒಳಪಡಿಸುವ ಪ್ರಯತ್ನ ಮಾಡಿಲ್ಲ. ಆದರೂ ಪ್ರಸಿದ್ಧ ಸಂಶೋಧಕರಾದ ವಸುಂಧರಾ ಫಿಲಿಯೋಜ, ಹರ್ಮನ್ ಕುಲ್ಕೆ, ಫಿಲಿಪ್ ಬಿ. ವ್ಯಾಗನಾರ್ ಈ ಬಿರುದಿನ ಬಗೆಗೆ ತಮ್ಮದೇ ಆದ ದೃಷ್ಟಿಕೋನದಲ್ಲಿ ಚರ್ಚಿಸಿದ್ದಾರೆ.

ವಸುಂಧರಾ ಪಿಲಿಯೋಜ ಪ್ರಕಾರ 'ಹಿಂದೂರಾಯ ಸುರತ್ರಾಣ' ಎಂಬ ಬಿರುದಿನಲ್ಲಿನ 'ಸುರತ್ರಾಣ' ಎಂಬ ಪದ ಸಂಸ್ಕೃತವೋ ? ಕನ್ನಡವೋ? ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಮುಸ್ಲಿಮರ 'ಸುಲ್ತಾನ' ಎಂಬುದಕ್ಕೆ ಧ್ವನಿಗ್ರಹಣದಲ್ಲಿ ಅದು ಲಿಪ್ಯಂತರವಾದಾಗ ಸಂಸ್ಕೃತದಲ್ಲಿ ಅದು 'ಸುರತ್ರಾಣ' ಎಂದು ಅಪಭ್ರಂಶವಾಗಿದೆ. ಇದಕ್ಕೆ ಸರಿಯಾದ ಅರ್ಥವನ್ನು ಹೇಳುವುದು ಕಷ್ಟ, ಸುಲ್ತಾನ ಎಂಬ ಪದಕ್ಕೆ 'ಸುರತಾಳು' ಎಂಬುದು ಕನ್ನಡ ಭಾಷೆಯ ಸಮನಾರ್ಥಕ ಪದವಾಗಿದ್ದು ಈ

ಬಿರುದನ್ನು 'ಹಿಂದೂರಾಜರ ಸುಲ್ತಾನ' ಎಂದು ಅರ್ಥೈಸಬಹುದು. ನೆರೆಯ ಮುಸ್ಲಿಂ ಸುಲ್ತಾನರು ಬುಕ್ಕನಿಗೆ ಈ ಬಿರುದನ್ನು ನೀಡಿದ್ದರು (ವಸುಂಧರಾ ಫಿಲಿಯೋಜ, 1973, xvi, ಉಲ್ಲೇಖ; ವ್ಯಾಗನಾರ್ ಫಿಲಿಪ್, 1996, ಪು. 862).

ಹರ್ಮನ್ ಕುಲ್ಕೆಯವರು ರೂಢಿಯಲ್ಲಿಲ್ಲದ 'ಈ ಬಿರುದಿನ ಅರ್ಥವು ಸರಿಯಾಗಿ ಸ್ಪಷ್ಟವಾಗುವುದಿಲ್ಲ, ಆದರೆ ವಿಜಯನಗರ ಸಾಮ್ರಾಜ್ಯದ ಆರಂಭಿಕ ದೊರೆಗಳು ಹಿಂದೂ ರಾಜವರ್ಗದಲ್ಲಿ ತಮ್ಮ ಅಂತಸ್ತನ್ನು ವೃದ್ಧಿಸಿಕೊಳ್ಳಲು, (ಮುಸ್ಲಿಂ ದೊರೆಗಳು ತಮ್ಮನ್ನು ಸುಲ್ತಾನ ಎಂದು ಕರೆದುಕೊಳ್ಳುತ್ತಿದ್ದಂತೆ) ತಾವೂ ಕೂಡಾ ಸುಲ್ತಾನರಂತೆ ಎಂದು ತೋರಿಸಿಕೊಳ್ಳಲು ಈ ಬಿರುದನ್ನು ಧರಿಸಿಕೊಂಡಿರಬಹುದು. ಸುರತ್ರಾಣ ಎಂಬುದು ಮುಸ್ಲಿಂ ಅರಸರ ಸುಲ್ತಾನ ಎಂಬ ಬಿರುದಿಗೆ ಸಮಾನವಾಗಿದೆ. ಇದಕ್ಕೆ ಅವರ ಸಮಕಾಲೀನ ಮಧುರೈ ಸುಲ್ತಾನ, ಬಹಮನಿ ಸುಲ್ತಾನ ದೂರದ ದೆಹಲಿ ಸುಲ್ತಾನರನ್ನು ಉದಾಹರಿಸಬಹುದು' (ಹರ್ಮನ್ ಕುಲ್ಕೆ, 1993, 2001, ಪು. 218).

ಫಿಲಿಪ್ ಬಿ. ವ್ಯಾಗನಾರ್‌ರವರು "'ಹಿಂದೂರಾಯ ಸುರತ್ರಾಣ' ಎಂಬ ಬಿರುದನ್ನು ವಿಜಯನಗರ ಚಕ್ರವರ್ತಿಗಳು ಸುಲ್ತಾನ ಎಂಬುದರ ಸಮಾನಾರ್ಥಕ್ಕಿಂತ ಹೆಚ್ಚಾಗಿ ವಾಚ್ಯಾರ್ಥದಲ್ಲಿ ಬಳಸಿದ್ದಾರೆ. ಅವರನ್ನು ರಾಜಕೀಯ ಅರ್ಥದಲ್ಲಿ ಸುಲ್ತಾನರೆಂದು ಕರೆಯುವುದಕ್ಕಿಂತ ಹೆಚ್ಚಾಗಿ ಅವರ ಜೀವನ ಶೈಲಿ ಮತ್ತು ಲಕ್ಷಣದಲ್ಲಿ ಸುಲ್ತಾನರೆನ್ನಬಹುದು. ಈ ಬಿರುದನ್ನು ಧರಿಸಿದ ಚಕ್ರವರ್ತಿಯು ಸಾಮಾನ್ಯ ಹಿಂದೂ ರಾಜನಿಗಿಂತ ನಿರ್ದಿಷ್ಟವಾಗಿ ಭಿನ್ನ ಎಂಬುದನ್ನು ಸೂಚಿಸುವಂತಿದೆ. ಇದು ರಾಜಕೀಯ ವಲಯದಲ್ಲಿ ಇಸ್ಲಾಂ ಸಂಸ್ಕೃತಿಯ ಪ್ರವೇಶದ ಒಪ್ಪಿಗೆಯನ್ನು ಸಂಕೇತಿಸುವಂತಿದೆ" ಎಂದಿದ್ದಾರೆ (ಫಿಲಿಪ್ ಬಿ. ವ್ಯಾಗನಾರ್, 1996, ಪು, 863).

ಈ ಮೂರು ಜನರು 'ಸುರತ್ರಾಣ' ಪದ ಸುಲ್ತಾನ ಪದಕ್ಕೆ ಸಮನಾರ್ಥಕ ಎಂದು ಒಪ್ಪಿಕೊಂಡಿರುವುದು ಸ್ಪಷ್ಟವಾಗುತ್ತದೆ. ಆದರೆ ಅದರ ಬಳಕೆಯಲ್ಲಿ ಭಿನ್ನತೆಯನ್ನು ವ್ಯಕ್ತಪಡಿಸಿದ್ದಾರೆ. ಫಿಲಿಯೋಜಾರವರು ಈ ಬಿರುದನ್ನು 'ನೆರೆಯ ಮುಸ್ಲಿಂ ಸುಲ್ತಾನರು ನೀಡಿದರು' ಎಂದು ಹೇಳಿದ್ದಾರದರೂ ಅದಕ್ಕೆ ಯಾವುದೇ ರೀತಿಯ ದಾಖಲೆಯನ್ನು ನೀಡಿಲ್ಲ. ಕುಲ್ಕೆಯವರು ತಾವೂ ಕೂಡಾ ಸುಲ್ತಾನರಿಗೆ ಸಮ ಎಂದು ತೋರಿಸಿಕೊಳ್ಳಲು ಧರಿಸಿಕೊಂಡರು ಎಂದರೆ ವ್ಯಾಗನಾರ್‌ರವರು ಇವರಿಬ್ಬರಿಗಿಂತ ಭಿನ್ನವಾಗಿ ಈ ಬಿರುದಿನ ಮೂಲಕ ಅವರು ಸುಲ್ತಾನರ ಸಂಸ್ಕೃತಿ ಮತ್ತು ಲಕ್ಷಣವನ್ನು ಅನುಸರಿಸುವ ಪ್ರಯತ್ನ ಎನ್ನುವರು.

ಮಧ್ಯಯುಗೀನ ಭಾರತದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಪರ್ಷಿಯನ್ ಸಂಸ್ಕೃತಿಯ ಪ್ರಭಾವ ಭಾರತದ ರಾಜಮನೆತನಗಳ ಮೇಲೆ ಉಂಟಾಗಿತ್ತು ಎಂಬುದು ತಿಳಿಯುತ್ತದೆ. ಅನೇಕ ಸ್ಥಳೀಯ ಹಿಂದೂ ದೊರೆಗಳು 'ಸುಲ್ತಾನ್' ಎನ್ನುವ ಪರ್ಷಿಯನ್ ಬಿರುದಿನ ದೇಶೀಯ ಪದದ ಮೂಲಕ ಬಳಸುತ್ತಿದ್ದುದು ವಿಜಯನಗರ ಚಕ್ರವರ್ತಿಗಳು ಧರಿಸುತ್ತಿದ್ದ ಹಿಂದೂರಾಯ ಸುರತ್ರಾಣ ಎಂಬ ಬಿರುದಿನಿಂದ ಗೊತ್ತಾಗುತ್ತದೆ. ಈ ಬಿರುದು ಹಿಂದೂ ರಾಜರಿಗೆಲ್ಲಾ ಸುಲ್ತಾನರು ಎಂಬ ಅರ್ಥವನ್ನು ನೀಡುವಂತಿದೆ. ಇದರಿಂದ 'ಸುಲ್ತಾನ' ಎಂಬ ಬಿರುದಿಗೆ ಉನ್ನತಿಯ ಸ್ಥಾನವನ್ನು ಕೊಟ್ಟಂತಹ ಸುಳುಹು ಸ್ಪಷ್ಟವಾಗುತ್ತದೆ. ಮೇವಾಡದ ದೊರೆ ರಾಣಾ ಕುಂಭ ಎಂಬುವನೂ ಕೂಡಾ ತನ್ನನ್ನು ಹಿಂದೂ ಸುಲ್ತಾನ ಎಂದು ಕರೆದುಕೊಂಡು ತನ್ನ ವಿಜಯಸ್ತಂಭದ ಮೇಲುಗಡೆ ಪರ್ಷಿಯನ್ ಅಕ್ಷರದಲ್ಲಿ 'ಅಲ್ಲಾ' ಹೆಸರನ್ನು ಬರೆಸಿದ್ದಾನೆ.[15] ಇದರಿಂದ ಪರ್ಷಿಯನ್ ಸಂಸ್ಕೃತಿಯು ಧಾರ್ಮಿಕ ಮತ್ತು ಸಾಂಸ್ಕೃತಿಕ ಗಡಿಯನ್ನು ಮೀರಿ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಹೀಗೆ ಆ ಕಾಲದಲ್ಲಿ ನಿರ್ದಿಷ್ಟವಾದ ಧರ್ಮ ಅಥವಾ ಸಂಸ್ಕೃತಿಗೆ ಸಂಬಂಧಪಡದ ಹೊಸ ಇಂಡೋ ಪರ್ಷಿಯನ್ ಸಂಸ್ಕೃತಿ ಉದಯವಾಯಿತೆನ್ನಬಹುದು. ಸುಲ್ತಾನ ಎಂಬ ಬಿರುದು ಅಂದು ಒಂದು ನಿರ್ದಿಷ್ಟ ಧರ್ಮಕ್ಕೆ ಸೀಮಿತವಾಗದೆ ಅದು ಎಲ್ಲರಲ್ಲೂ ಬಳಕೆಯಲ್ಲಿತ್ತು ಎನ್ನಬಹುದು. ಸಮಾಜದಲ್ಲಿ ಸಂಸ್ಕೃತಿಯ ಕೊಡು ಮತ್ತು ಕೊಳ್ಳುವಿಕೆ ಸಹಜವಾದ ಕ್ರಿಯೆಯಾಗಿದೆ. ವಿಜಯನಗರದವರು ತಮ್ಮನ್ನು "ಹಿಂದೂರಾಯ ಸುರತ್ರಾಣ" ಎಂದು ಕರೆದುಕೊಳ್ಳುವ

ಮೊದಲೇ ಮಹಮ್ಮದೀಯ ಸುಲ್ತಾನರು ತಮ್ಮನ್ನು ಮಹಾರಾಜರೆಂದು ಕರೆದುಕೊಂಡಿದ್ದಾರೆ. ಕ್ರಿ.ಶ. 1326ರ ಶಾಸನವು ಇದನ್ನು ಹೀಗೆ ಸಮರ್ಥಿಸುತ್ತದೆ.

"ಅಥ್ಯೇಹ ಸಮಸ್ತ ರಾಜಾವಲೀ ಮಾಲಾಂಕೃತ ವಿರಾಜಿತ
ಮಹಾರಾಜಾಧಿರಾಜ ಶ್ರೀ ಸುರತಾಣ ಮಹಮದಃ ರಾಜ್ಯೇ ತತ್ಪಾದ ಪದ್ಮೋಪಜೀವಿ".[16]

ವಿದೇಶಿ ಮೂಲದ ಮುಸ್ಲಿಮರು ಉತ್ತರ ಭಾರತದಲ್ಲಿ ರಾಜ್ಯಕಟ್ಟುವ ಮೂಲಕ ತಮ್ಮ ಅಸ್ತಿತ್ವವನ್ನು ಅಲ್ಲಿ ಕಂಡುಕೊಂಡರು. ಅಲ್ಲದೆ ದಕ್ಷಿಣ ಭಾರತದ ಮೇಲೆ 14ನೇ ಶತಮಾನದ ಆರಂಭದಲ್ಲಿ ದಾಳಿಮಾಡುವ ಮೂಲಕ ತಮ್ಮ ಅಧಿಕಾರವನ್ನು ದಕ್ಷಿಣದಲ್ಲಿ ಸ್ಥಾಪಿಸುವ ಪ್ರಯತ್ನ ಮಾಡಿದರು. ತಮ್ಮ ವಿದೇಶಿ ಮೂಲದ ಅಧಿಕಾರಿಗಳನ್ನು ನೇಮಕ ಮಾಡುವ ಮೂಲಕ ಇದನ್ನು ಮೊದಲಿಗೆ ಆರಂಭಿಸಿದರು. ಅಂತಹವರು ಇಲ್ಲಿ ನೆಲೆಯೂರಿದ ಮೇಲೆ ಬಹುಸಂಖ್ಯಾತ ಸ್ಥಳೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು ಮತ್ತು ತಮ್ಮನ್ನು ಮಹಾರಾಜ ಎಂದು ಕರೆದುಕೊಳ್ಳುವ ಮೂಲಕ ತಾವೂ ಕೂಡಾ ತಮ್ಮ ಆಳ್ವಿಕೆ ಪ್ರದೇಶದಲ್ಲಿ ಮಹಾರಾಜರೇ ಎಂದು ತೋರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಅದರ ಪರಿಣಾಮವಾಗಿಯೇ ಅವರು ತಮ್ಮನ್ನು 'ಮಹಾರಾಜಾಧಿರಾಜ ಶ್ರೀ ಸುರತಾಣ' ಎಂದು ಕರೆದುಕೊಂಡರೆನ್ನಬಹುದು. ಇದು ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಮುಸಲ್ಮಾನ ಸುಲ್ತಾನರೇ ಮೊದಲಿಗೆ ತಮ್ಮನ್ನು ಮಹಾರಾಜಾಧಿರಾಜರೆಂದು ಹಾಗೂ ತಮ್ಮ ರಾಜ್ಯವನ್ನು ಮಹಮ್ಮದ್ ರಾಜ್ಯ ಎಂದು ವರ್ಣಿಸಿಕೊಂಡಿರುವಾಗ, ಅವರ ಸಮಕಾಲೀನರಾದ ವಿಜಯನಗರದವರು 'ಹಿಂದೂರಾಯ ಸುರತ್ರಾಣ' ಎಂದು ಕರೆದುಕೊಂಡಿರುವುದರಲ್ಲಿ ವಿಶೇಷವಿಲ್ಲ. ಆದ್ದರಿಂದ ಈ ಬಿರುದಿನಲ್ಲಿನ 'ಸುರತ್ರಾಣ' (ಸುಲ್ತಾನದ ಅಪಭ್ರಂಶ) ಎಂಬ ಪದವು ಪರ್ಷಿಯನ್ ಸಂಸ್ಕೃತಿಯ ಕೊಡುಕೊಳ್ಳುವಿಕೆಯ ಹಿನ್ನೆಲೆಯಿಂದ ಉದಯವಾದುದು ಎಂದು ಸ್ಪಷ್ಟಪಡಿಸಬಹುದು.

"ಹಿಂದೂರಾಯ ಸುರತ್ರಾಣ" ಎಂಬ ಬಿರುದಿನಲ್ಲಿನ "ಹಿಂದೂ" ಎಂಬ ಪದವನ್ನು ಅರ್ಥೈಸುವುದು ಕಷ್ಟ. "ಹಿಂದೂ" ಎಂಬುದು ಹಿಂದೂ ಧರ್ಮದ ಅನುಯಾಯಿಯೇ ಅಥವಾ ಇಂಡಿಯನ್ನೇ (ಭಾರತೀಯನೇ)? ಆರಂಭಿಕ ಕಾಲದಲ್ಲಿ ಇಂಡಿಯಾಕ್ಕೆ ಪರ್ಷಿಯನ್ ಪದವಾದ ಹಿಂದೂಸ್ಥಾನವೆಂದು ಕರೆಯುತ್ತಿದ್ದರೂ ಅದು ಇಂಡಿಯನ್ನರ ಭೂಪ್ರದೇಶವೋ ಅಥವಾ ಹಿಂದೂ ಧರ್ಮೀಯರ ನಾಡೋ ಎಂಬ ಬಗೆಗೆ ಯಾವುದನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. (ಸ್ಮಿತ್ ಡಬ್ಲ್ಯೂ.ಸಿ. 1962, 256). ವಿದೇಶಿಗರು ಈ ನಾಡನ್ನು ಭಾರತದ ಭೂಪ್ರದೇಶವೆಂಬ ರೀತಿ ಉಪಯೋಗಿಸಿದರೆ ಭಾರತೀಯರು ಹಿಂದೂಗಳ ಭೂಪ್ರದೇಶವೆಂದು ಭಾವಿಸಿದ್ದಾರೆ. ಇದಕ್ಕೆ ಭಾರತದ ವಿಭಜನೆಯ ಸಂದರ್ಭದಲ್ಲಿ ಹಿಂದೂಸ್ಥಾನವನ್ನು ಪಾಕಿಸ್ಥಾನ ಮತ್ತು ಹಿಂದೂಸ್ಥಾನ ಎಂದು ಕರೆದಿರುವುದನ್ನು ಉದಾಹರಿಸಬಹುದು. ಆದ್ದರಿಂದ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹಿಂದೂಗಳು ತಮ್ಮನ್ನು ತಾವು ಗುರುತಿಸಿಕೊಳ್ಳಲು "ಹಿಂದೂ" ಪದವನ್ನು ಬಳಸಲಾಗುತ್ತಿದ್ದುದನ್ನು ಕಡೆಗಣಿಸಲಾಗದು. ಆದರೆ "ಹಿಂದೂ" ಎಂಬ ಪದ ಶಾಸನೋಕ್ತವಾಗಿ ಮೊಟ್ಟಮೊದಲಿಗೆ ಬಳಕೆಯಾಗಿದ್ದು ವಿಜಯನಗರ ಕಾಲದ ಶಾಸನಗಳಲ್ಲಿ ಮಾತ್ರ. 14ನೇ ಶತಮಾನದಲ್ಲಿ ಅಧಿಕೃತವಾಗಿ ಶಾಸನಗಳಲ್ಲಿ ಉಪಯೋಗಿಸಲ್ಪಟ್ಟ ಈ ಪದ "ಹಿಂದೂ ಸ್ವಯಂಪ್ರಜ್ಞೆಯ" ಅಂಶವನ್ನು ಒಳಗೊಂಡಿತ್ತೆನ್ನಬಹುದು.

ಹರಿಹರ ಮತ್ತು ಬುಕ್ಕರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಒಟ್ಟು ಹನ್ನೊಂದು ಬಾರಿ "ಹಿಂದೂರಾಯ ಸುರತಾಳ" ಎಂಬ ಬಿರುದನ್ನು ಧರಿಸಿಕೊಂಡಿದ್ದಾರೆ. (ನೋಡಿ ಅನುಬಂಧ). ಇವರಲ್ಲಿ ಬುಕ್ಕರಾಯನೇ ಅತಿಹೆಚ್ಚು 9 ಭಾರಿ ಈ ಬಿರುದಿನಿಂದ ಉಲ್ಲೇಖಿತವಾಗಿದ್ದರೆ ಹರಿಹರ ಮತ್ತು ಮಾರಪ್ಪ ತಲಾ ಒಂದು ಬಾರಿ ಉಲ್ಲೇಖಿತರಾಗಿದ್ದಾರೆ. "ಸುರತಾಳ"

ಎಂಬುದನ್ನು ಇವರು ವಾಚ್ಯಾರ್ಥದಲ್ಲಿ ಹೆಚ್ಚು ಬಳಸಿದ್ದಾರೆಯೇ ಹೊರತು ನೇರವಾಗಿ ಬಳಸಿಲ್ಲ. ಆದರೆ ಒಮ್ಮೆ ಮಾತ್ರ ಕ್ರಿ.ಶ. 1356ರಲ್ಲಿ ಬುಕ್ಕರಾಯನು ಸುರತ್ರಾಣ ಎಂದು ಬಳಸಿರುವುದನ್ನು ಶಾಸನವು ದಾಖಲಿಸಿದೆ.

"ಹರನೃಪ ಗಂಧ ಸಿಂಧೂರ, ಮೃಗೇಂದ್ರ, ಸುಜನ ನಿರೂಪಾಲ ಸುರತ್ರಾಣ ಧೀರ, ಅರಿರಾಯ ವಿಭಾಡ ವಿನೋದಿರಾಯ ಭೂವರ ನಿಧಿ ಬುಕ್ಕರಾಯ"[17]

ಇದರಿಂದ ವಿಜಯನಗರ ಚಕ್ರವರ್ತಿಗಳು ಸುರತ್ರಾಣ ಎಂಬುದನ್ನು ರಾಜಕೀಯ ಅರ್ಥದಲ್ಲಿ ಬಳಸದೆ ಸಂಸ್ಕೃತಿಯ ಕೊಡುಕೊಳ್ಳುವಿಕೆಯ ಪ್ರಭಾವದಿಂದ ಬಳಸಿರುವುದು ಸ್ಪಷ್ಟವಾಗುತ್ತದೆ.

ಟಿಪ್ಪಣಿಗಳು

1. ಎಪಿಗ್ರಾಫಿಯಾ ಇಂಡಿಕಾ, ನ್ಯೂ ದೆಹಲಿ, ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ 1892, 8, 301, ನಂ.31.
2. ಅದೇ, 3, 122, ನಂ. 19.

   ಪ್ರತಾಪ ಹರಿಹರ ಭೂಪಂ॥ ದಾನವ ಮರ್ದ್ದನನಂತಿರೆ ಮೀನಾಗದೆ ಪಂದಿಯಾಗದ ಪ್ರತಿರೂಪಂ ತಾನಾ ಪ್ರತಾಪ ಹರಿಹರನೇನುದ್ಧರಿಸಿದನೊ ವೇದಮಂ ಮೇದಿನಿಯಂ (ಕನ್ನಡ ವಿ.ವಿ. ಶಾಸನ ಸಂಪುಟ 3, 58, ಹಂಪೆ, 69, ಪ್ರಸಾರಾಂಗ, 1998). ಈ ಭಾಗವು ವಿಷ್ಣುವಿನ ಅವತಾರದ ಘಟನೆಗಳನ್ನು ದಾಖಲಿಸಿದೆ. ವಿಷ್ಣುವು ಮತ್ಸ್ಯಾವತಾರದಲ್ಲಿದ್ದಾಗ ನೀರಿನ ಒಳಗಡೆ ಮುಳುಗಲ್ಪಟ್ಟ ವೇದಗಳನ್ನು ರಕ್ಷಿಸಿದನು. ಅವನು ವರಾಹವತಾರದಲ್ಲಿದ್ದಾಗ ಭೂ ರಕ್ಷಣೆ ಮಾಡಿದನು.
3. ಎಂ.ಎ.ಆರ್., 1933, ಪು. 135, ಸಾಲು 25.
4. ಅದೇ, ಸಾಲು 39.
5. ಕ್ರಿ.ಶ. 1340ರ ಶಾಸನವು ಮಹಾಸಾಮಂತಾಧಿಪತಿ ಮೈಲೆಯ ನಾಯಕನು ಕುಕ್ಕಲನಾಡಿನಲ್ಲಿ ಮೊದಲನೇ ಹರಿಹರನ ಅಧೀನನಾಗಿ ಆಳ್ವಕೆ ಮಾಡುತ್ತಿದ್ದನೆಂದು ತಿಳಿಸುತ್ತದೆ. ಇವನು ಮೂರನೇ ಬಲ್ಲಾಳನ ಸಾಮಂತನಾಗಿ ಕ್ರಿ.ಶ. 1333ರಲ್ಲಿ ಕುಕ್ಕಲನಾಡಿನಲ್ಲಿ ಆಳ್ವಕೆ ಮಾಡುತ್ತಿದ್ದನು (ಎಕ, 9 (ಹಳೇ) ನೆಲಮಂಗಲ 9). ಇದರಿಂದ ಮೈಲೆಯ ನಾಯಕ ಕ್ರಿ.ಶ. 1340ರ ವೇಳೆಗೆ ತನ್ನ ನಿಷ್ಠೆಯನ್ನು ವಿಜಯನಗರದವರಿಗೆ ಬದಲಾಯಿಸಿದ್ದನೆಂದು ಸ್ಪಷ್ಟವಾಗುತ್ತದೆ. ಕುಕ್ಕಲನಾಡಿನ ದೊರೆ ಮೈಲೆಯ ನಾಯಕ ಮೊದಲನೇ ಹರಿಹರನನ್ನು ಸಾರ್ವಭೌಮನೆಂದು ಅಂಗೀಕರಿಸಬೇಕಾದರೆ ಹರಿಹರ ಆತನ ಮೇಲೆ ದಾಳಿ ಮಾಡಿರಬೇಕು. ಈ ದಾಳಿ ಕ್ರಿ.ಶ. 1333ರಿಂದ 1340ರೊಳಗೆ ನಡೆದಿರಬೇಕು (ವೆಂಕಟರಮಣಯ್ಯ ಎನ್. 1933, 2007, 143).
6. *ಕನ್ನಡ ವಿ.ವಿ. ಶಾಸನ ಸಂಪುಟ*, 9, ಬಾದಾಮಿ 350; *ಇಂಡಿಯನ್ ಆಂಟಿಕ್ವೆರಿ*, x, 87.
7. *ಎಪಿಗ್ರಾಫಿಯಾ ಕರ್ನಾಟಕ*, 10 (ಹಳೆ), ಕೋಲಾರ 105, ಕ್ರಿ.ಶ. 1313; ಎಕ, 3 (ಹೊಸ), ನಂಜನಗೂಡು 152, ಕ್ರಿ.ಶ. 1327; ಎಕ, 15 (ಹೊಸ), ಸಾಗರ, 63, ಕ್ರಿ.ಶ. 1339; ಎಸ್.ಐ.ಐ. xvii, ನಂ. 700, ಕ್ರಿ.ಶ. 1339.
8. ಎಕ (ಹೊಸ), 4 ಚಾಮರಾಜನಗರ, 227, ಕ್ರಿ.ಶ. 1333; ಐ.ವಿ.ಆರ್., ಸಂ 1, ಸಂಖ್ಯೆ 1.
9. ಐ.ವಿ.ಆರ್., ಸಂ. 1, ಸಂಖ್ಯೆ 1, 4, 14, 17.
10. ಎ.ಕ., 3 (ಹೊಸ), ನಂಜನಗೂಡು, 152; ಎಸ್.ಐ.ಐ. xvii, ಸಂ. 700; ಐ.ವಿ.ಆರ್., ಸಂ. 1, ಸಂಖ್ಯೆ 2, 3, 5, 6, 7, 9, 10, 11, 15.
11. ಎಕ 4 (ಹೊಸ), ಚಾಮರಾಜನಗರ, 227; ಐ.ವಿ.ಆರ್., ಸಂ. 1, ಸಂಖ್ಯೆ 28, 30, 31, 90, 126, 135.
12. ಐ.ವಿ.ಆರ್. ಸಂ. 1, ಸಂಖ್ಯೆ 24.
13. ಎಕ, 5, ಬೇಲೂರು, 112, ಕ್ರಿ.ಶ. 1220; ಎಕ, 9 (ಹೊಸ), ಬೇಲೂರು, 300.
14. ಎಕ, 7 (ಹಳೆ), ಶಿಕಾರಿಪುರ, 125, ಕ್ರಿ.ಶ. 1019.
15. *ಆರ್ಕಿಯಾಲಾಜಿಕಲ್ ಸರ್ವೆ ರಿಪೋರ್ಟ್*, xxii ಪು–116–17.
16. *ಕನ್ನಡ ವಿ.ವಿ. ಶಾಸನ ಸಂಪುಟ*, 8, ಬಸವಕಲ್ಯಾಣ, 13, ಕ್ರಿ.ಶ. 1326.
17. ಐ.ವಿ.ಆರ್. ಸಂ. 1, ಸಂಖ್ಯೆ 37, ಕ್ರಿ.ಶ. 1356.

REFERENCES

1. Shastri K.A. Nilakanta, *A History of South India,* 4th edi., Madras, Oxford University Press 1975.
2. Yogeeswarappa D.N., 2012, *Kalpa Shodha,* Pragathi Graphics Bangalore.
3. Herman Kulke, 1993, Reprint, 2001. *Kings and Cults,* Manohar Publishers, New Delhi.
4. Somashekar S.Y., Shourya-Parakramagala Prateekavagi Vjayanagara Kalada Birdavaligalu in *Vijayanagara Adyayana,* Vol. 5, Directorate of Archaeology and Museum Mysore, 2000.
5. Wagoner Philip B. "Sultan Among Hindu Kings", Dress, Titles and the Islamicization of Hindu Culture at Vijayanagara. *The Journal of Asian Studies,* Vol. 55, No. 4, 1996, 851-880.
6. Filliozat Vasundhara, 1973, *L'Epi graphic de Vijayanagar du debuta',* 1377, Paris Ecole Francaise d' Extreme orient.
7. Filliozat Vasundhara, 1980, *Vijayanagara Samrajya Sthapane,* Kannada Sahitya Parishat, Bangalore.
8. *Mysore Archaeological Reports,* 1929, 1933.
9. *Ritti Srinivasa* (Ed.), *Inscriptions of Vijayanagara Rulers,* Vol. 1, Indian Council of Historical Research, New Delhi.
10. Para Brahma Sastri (Ed.), *Inscriptions of Vijayanagara Rulers,* Vol. IV, Indian Council of Historical Research Bangalore.
11. *Epigraphia Carnatica* (Mysore, Kannada Adyayana Samsthe, Prasaranga, Mysore University, New Series) Mysore.
12. Devarakonda Reddy (Ed.), *Kannada University Shasana Samputa,* Vol. 9, Prasaranga, Hampi.
13. Smith Wilfred Contwell, *The Meaning and End of Religions New York,* The Macmillan Company, 1962.

ABBREVIATIONS

1.	*MAR*	-	Mysore Archaeological Report
2.	*IVR*	-	Inscriptions of Vijayanagar Rulers
3.	*EC*	-	Epigraphia Carnatica
4.	*SII*	-	South Indian Inscriptions
5.	ICHR	-	Indian Council of Historical Research.

ಅನುಬಂಧ

ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ

1.	ವೀರ ಬುಕ್ಕಣ ಒಡೆಯರು	ಕ್ರಿ.ಶ. 1333	ಎಕ, 4 (ಹೊಸ), ಚಾಮರಾಜನಗರ, 227.
2.	ವೀರ ಪ್ರತಾಪ ಹರಿಹರ ಮಹಾರಾಯ	ಕ್ರಿ.ಶ. 1339	*IVR,* Vol. 01, No. 01, ICHR

3.	ವೀರ ಪ್ರತಾಪ ಹರಿಹರ ಮಹಾರಾಯ	ಕ್ರಿ.ಶ. 1343	*IVR,* Vol. 01, No. 04, ICHR.
4.	ವೀರ ಪ್ರತಾಪ ಹರಿಹರ ಮಹಾರಾಯ	ಕ್ರಿ.ಶ. 1352	*IVR,*, Vol. 01, No. 14, ICHR.
5.	ವೀರ ಪ್ರತಾಪ ಹರಿಹರ ಮಹಾರಾಯ	ಕ್ರಿ.ಶ. 1357	*IVR,* Vol. 01, No. 17, ICHR.
6.	ವೀರ ಪ್ರತಾಪ ವೀರಬುಕ್ಕಣ್ಣ	ಕ್ರಿ.ಶ. 1351	*IVR,* Vol. 01, No. 28, ICHR.
7.	ವೀರ ಪ್ರತಾಪ ವೀರಬುಕ್ಕಣ್ಣ ಒಡೆಯರ್	ಕ್ರಿ.ಶ. 1353	*IVR,* Vol. 01, No. 30, ICHR.
8.	ಶ್ರೀ ವೀರ ಬುಕ್ಕರಾಯ ಮಹಾರಾಯ	ಕ್ರಿ.ಶ. 1354	*IVR,* Vol. 01, No. 31, ICHR.
9.	ಶ್ರೀ ವೀರ ಬುಕ್ಕರಾಯ ಮಹಾರಾಯ	ಕ್ರಿ.ಶ. 1368	*IVR,* Vol. 01, No. 90, ICHR.
10.	ಶ್ರೀ ವೀರ ಬುಕ್ಕರಾಯ	ಕ್ರಿ.ಶ. 1375	*IVR,*, Vol. 01, No. 126, ICHR.
11.	ಶ್ರೀ ವೀರ ಬುಕ್ಕರಾಯ	ಕ್ರಿ.ಶ. 1377	*IVR,* Vol. 01, No. 135, ICHR.

"ಶ್ರೀಮನ್ ಮಹಾಮಂಡಲೇಶ್ವರ ರಾಜಾಧಿರಾಜ ರಾಜಪರಮೇಶ್ವರ"

1.	ಶ್ರೀ ವೀರ ಬುಕ್ಕರಾಯ	ಕ್ರಿ.ಶ.1346	*IVR,* Vol. 01, No. 24, ICHR.

"ಶ್ರೀಮನ್ ಮಹಾಮಂಡಲೇಶ್ವರ"

1.	ಹರಿಹರ	ಕ್ರಿ.ಶ. 1340	*IVR,* Vol. 01, No. 2, 3
		ಕ್ರಿ.ಶ. 1346	*IVR,* Vol. 01, No. 5, 6, 7
		ಕ್ರಿ.ಶ. 1347	*IVR,* Vol. 01, No. 9
		ಕ್ರಿ.ಶ. 1348	*IVR,* Vol. 01, No. 10, 11
		ಕ್ರಿ.ಶ. 1354	*IVR,* Vol. 01, No. 15
2.	ಬುಕ್ಕ	ಕ್ರಿ.ಶ. 1345	*IVR,* Vol. 01, No. 21
		ಕ್ರಿ.ಶ. 1346	*IVR,* Vol. 01, No. 23
		ಕ್ರಿ.ಶ. 1350	*IVR,* Vol. 01, No. 26
		ಕ್ರಿ.ಶ. 1351	*IVR,* Vol. 01, No. 27, 29
		ಕ್ರಿ.ಶ. 1354	*IVR,* Vol. 01, No. 33
		ಕ್ರಿ.ಶ. 1355	*IVR,* Vol. 01, No. 35
		ಕ್ರಿ.ಶ. 1356	*IVR,* Vol. 01, No. 36, 38
		ಕ್ರಿ.ಶ. 1357	*IVR,* Vol. 01, No. 39, 40
		ಕ್ರಿ.ಶ. 1358	*IVR,* Vol. 01, No. 42
		ಕ್ರಿ.ಶ. 1359	*IVR,* Vol. 01, No. 45, 47, 48, 50
		ಕ್ರಿ.ಶ. 1360	*IVR,* Vol. 01, No. 51, 52, 53, 54,55
		ಕ್ರಿ.ಶ. 1362	*IVR,* Vol. 01, No. 57
		ಕ್ರಿ.ಶ. 1363	*IVR,* Vol. 01, No. 58, 60, 62, 64

ಕ್ರಿ.ಶ. 1364	*IVR*, Vol. 01, No. 67, 68, 69
ಕ್ರಿ.ಶ. 1365	*IVR*, Vol. 01, No. 70, 71, 72, 73
ಕ್ರಿ.ಶ. 1366	*IVR*, Vol. 01, No. 75, 76, 77
ಕ್ರಿ.ಶ. 1367	*IVR*, Vol. 01, No. 79, 80, 81, 82, 83
ಕ್ರಿ.ಶ. 1368	*IVR*, Vol. 01, No. 84, 85, 86, 87, 88, 89
ಕ್ರಿ.ಶ. 1369	*IVR*, Vol. 01, No. 94, 95, 96, 97, 98, 99, 100, 101
ಕ್ರಿ.ಶ. 1370	*IVR*, Vol. 01, No.102, 103, 105
ಕ್ರಿ.ಶ. 1371	*IVR*, Vol. 01, No. 108, 109, 110
ಕ್ರಿ.ಶ. 1372	*IVR*, Vol. 01, No. 112, 113, 115, 117
ಕ್ರಿ.ಶ. 1373	*IVR*, Vol. 01, No. 119
ಕ್ರಿ.ಶ. 1374	*IVR*, Vol. 01, No. 120, 121, 123, 124, 125
ಕ್ರಿ.ಶ. 1376	*IVR*, Vol. 01, No. 127, 139
ಕ್ರಿ.ಶ. 1377	*IVR*, Vol. 01, No. 134

"ಹಿಂದೂರಾಯ ಸುರತ್ರಾಣ"

ಹೆಸರು	ಬಿರುದು	ಕಾಲ	ಉಲ್ಲೇಖ
ಮಾರಪ್ಪ	ಹಿಂದೂರಾಯ ಸುರತಾಲ	ಕ್ರಿ.ಶ. 1347	ಎಂ.ಎ.ಆರ್., 1929 ಪು. 249
ಬುಕ್ಕಣ ಒಡೆಯ	ಹಿಂದೂರಾಯ ಸುರತ್ರಾಣ	ಕ್ರಿ.ಶ. 1352	ಐ.ವಿ.ಆರ್., IV ಕದರಿ–4
ಹರಿಹರ	ಹಿಂದೂವರಾಯ ಸುರತಾಳು	ಕ್ರಿ.ಶ. 1354	ಇ.ಸಿ., 8 (ಹಳೆ) ಸೊರಬ 104
ಬುಕ್ಕ	ಹಿಂದೂರಾಯ ಸುರತ್ರಾಣ	ಕ್ರಿ.ಶ. 1354	ಐ.ವಿ.ಆರ್.–1, ಪೆನುಗೊಂಡೆ–33
ಬುಕ್ಕ	ಹಿಂದೂರಾಯ ಸುರತ್ರಾಣ	ಕ್ರಿ.ಶ. 1358	ಎ.ಕ., 7 (ಹೊಸ), ಮದ್ದೂರ್–93
ಬುಕ್ಕ	ಇನಇ..ಸುರತ್ರಾಣ	ಕ್ರಿ.ಶ. 1359	ಎ.ಕ., 4 (ಹೊಸ), ಕೊಳ್ಳೆಗಾಲ–22
ಬುಕ್ಕ	ಹಿಂದುರಾಯ ಸುರತ್ರಾಣ	ಕ್ರಿ.ಶ. 1359	ಐ.ವಿ.ಆರ್., 4, ಹೊಸಾಳ–45
ಬುಕ್ಕ	ಹಿಂದೂರಾಯ ಸುರತಾಳ	ಕ್ರಿ.ಶ. 1360	ಎ.ಕ., 9 (ಹೊಸ), ಆಲೂರು–41
ಬುಕ್ಕ	ಹಿಂದೂರಾಯ ಸುರತಾನ	ಕ್ರಿ.ಶ. 1371	ಎ.ಕ., 11 (ಹೊಸ), ಮೂಡಗೆರೆ–12
ಬುಕ್ಕ	ಹಿಂದೂರಾಯ ಸುರತಾಳ	ಕ್ರಿ.ಶ. 1372	ಐ.ವಿ.ಆರ್.–1, ತವನಂದಿ–113
ಬುಕ್ಕ	ಹಿಂದೂರಾಯ ಸುರತಾಳ	ಕ್ರಿ.ಶ. 1374	ಐ.ವಿ.ಆರ್.–1, ಮಳಗಾಳೆ–120

"ಮಹಾರಾಜಾಧಿರಾಜ ಸುರತಾಣ ಮಹಮದಃ ರಾಜ್ಯೈ"

1. ಮಹಮ್ಮದ ಕ್ರಿ.ಶ.1326 ಕವಿವಿ ಶಾ.ಸಂ., 08, ಬಸವಕಲ್ಯಾಣ, 13.

(ಈ ಪ್ರಬಂಧವನ್ನು ದಿನಾಂಕ 11 ಮತ್ತು 12ನೇ ಜನವರಿ 2014ರಲ್ಲಿ ಹಂಪಿಯಲ್ಲಿ ರಾಜ್ಯ ಪ್ರಾಚ್ಯವಸ್ತು ಇಲಾಖೆ ಏರ್ಪಡಿಸಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿತ್ತು)

16. ಶ್ರೀಕೃಷ್ಣದೇವರಾಯನ ಬಿರುದಾವಳಿಗಳು

ಡಾ. ಎಸ್.ವೈ. ಸೋಮಶೇಖರ್

ಕರ್ನಾಟಕದ ಅರಸರು, ಮಾಂಡಲಿಕರು, ವೀರಯೋಧರು ಮೊದಲಾದವರಿಗೆ ಸೇರಿದ ಬಿರುದಾವಳಿಗಳು ಆಯಾಯ ಕಾಲಘಟ್ಟದ ಚರಿತ್ರೆಯನ್ನು ಸಾರುವ ಮಹತ್ವದ ಆಕರಗಳಾಗಿವೆ. ಚರಿತ್ರೆಯ ಅನೇಕ ಘಟನೆ ಹಾಗೂ ಅರಸರ ಆಡಳಿತವನ್ನು ಬಿರುದುಗಳಿಂದ ಗುರುತಿಸಲು ಸಾಧ್ಯವಾಗಿರುವುದನ್ನು ಗಮನಿಸಬಹುದು. ಕರ್ನಾಟಕದ ವಿವಿಧ ಕಾಲದ ಶಾಸನ, ಸಾಹಿತ್ಯ ಮೊದಲಾದ ಆಕರಗಳಲ್ಲಿ ಈ ಬಿರುದಾವಳಿಗಳ ಪರಾಕ್ರಮವನ್ನು ಕಾಣಬಹುದು. ಈ ಬಿರುದಾವಳಿಗಳ ಅರ್ಥ, ಸ್ವರೂಪ ಮತ್ತು ಮಹತ್ವವನ್ನು ಅಂದಿನ ಸಮಯ, ಸಂದರ್ಭ, ಘಟನೆಗಳಿಗೆ ಹೋಲಿಸಿ ನೋಡಿದರೆ ಅವು ನಮಗೆ ಪ್ರಾಚೀನರ ಬದುಕಿನ ಅವಿಭಾಜ್ಯ ಅಂಗಗಳೆಂಬಂತೆ ಭಾಸವಾಗುವುದು. ಬಿರುದಾವಳಿಗಳು ಸಂಕ್ಷಿಪ್ತ ರೂಪದಲ್ಲಿದ್ದು ನಿಗೂಢ ಅರ್ಥವನ್ನು ಒಳಗೊಂಡಿವೆ. ಇವುಗಳ ಒಳ ಅರ್ಥ ಅವನ್ನು ವ್ಯವಸ್ಥಿತವಾಗಿ ಬಿಚ್ಚಿ, ಬಿಡಿಸಿ, ವಿಮರ್ಶಿಸಿ ನೋಡಿದಾಗ ಮಾತ್ರ ತಿಳಿದುಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣದೇವರಾಯನ ಬಿರುದಾವಳಿಗಳನ್ನು ಗಮನಿಸಲಾಗಿದೆ. ಶ್ರೀಕೃಷ್ಣದೇವರಾಯನು ದಕ್ಷಿಣ ಭಾರತ ಅದರಲ್ಲೂ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸನೆಂಬುದು ತಿಳಿದ ಸಂಗತಿ. ಇವನ ಖ್ಯಾತಿ ಶಾಸನ, ಸಾಹಿತ್ಯ, ವಿದೇಶಿ ಪ್ರವಾಸಿಗಳ ವರದಿಗಳಲ್ಲಿರುವಂತೆ ಬಿರುದಾವಳಿಗಳ ಮೂಲಕವೂ ಗೋಚರಿಸುತ್ತದೆ. ಕೃಷ್ಣದೇವರಾಯನ ಮೂಲ, ವಂಶ, ಸಾಮ್ರಾಜ್ಯ, ಪ್ರತಿಭೆ, ಸಾಧನೆ, ಶೌರ್ಯ–ಪರಾಕ್ರಮ, ಸಾಹಿತ್ಯ ಮತ್ತು ಸಂಸ್ಕೃತಿ ಪ್ರಿಯತೆಗಳನ್ನು ಬಿರುದಾವಳಿಗಳಿಂದ ತಿಳಿದುಕೊಳ್ಳಬಹುದಾಗಿದೆ.

ಬಿರುದಾವಳಿಗಳು ಕೃಷ್ಣದೇವರಾಯನ ಜೀವನ ಸಾಧನೆಗಳ ದ್ಯೋತಕವಾಗಿವೆ. ಇವು ಕೇವಲ ಅವನ ಆಡಳಿತವನ್ನಷ್ಟೇ ಪ್ರತಿನಿಧಿಸುವುದಿಲ್ಲ. ಅಂದಿನ ಅವನ ಸಾಮ್ರಾಜ್ಯ, ವ್ಯಕ್ತಿತ್ವ, ಪ್ರತಿಭೆ, ಸಾಧನೆ, ಘಟನೆ, ವಿಷಯ, ಸಾಹಿತ್ಯ, ಭಾಷೆ ಮೊದಲಾದ ಸಂಗತಿಗಳನ್ನು ಕುರಿತು ವಿವರಿಸುವ ಶಕ್ತಿಯನ್ನು ಹೊಂದಿವೆ. ಜೊತೆಗೆ ವಿಜಯನಗರದ ಅರಸರ ಮತ್ತು ಅರಸು ಮನೆತನದ ಹಕ್ಕು, ಪರಮಾಧಿಕಾರ, ಸ್ಥಾನಮಾನಗಳನ್ನು ಸಾರುವುದರ ಜೊತೆಗೆ ಕೀರ್ತಿ ಪ್ರತಿಷ್ಠೆಗಳನ್ನು ಎಲ್ಲೆಡೆ ಹರಡಿವೆ.. ಆ ಮೂಲಕ ಬಿರುದಾವಳಿಗಳು ಪ್ರಜೆಗಳಲ್ಲಿ ಅರಸನ ಬಗೆಗೆ ಗೌರವ, ನಿಷ್ಠೆ, ವಿಧೇಯತೆ ಹಾಗೂ ಅಭಿಮಾನಗಳನ್ನು ಮೂಡಿಸಿ ರಾಜಪ್ರಭುತ್ವವನ್ನು ನಾಡಿನಾದ್ಯಂತ ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದವೆಂಬುದು ಗಮನಾರ್ಹ.

ಪ್ರಸ್ತುತ ಪ್ರಬಂಧದಲ್ಲಿ ಕೃಷ್ಣದೇವರಾಯನ ಸುಮಾರು ಐವತ್ತೈದಕ್ಕೂ ಹೆಚ್ಚು ಬಿರುದಾವಳಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳನ್ನು ವಂಶ ಮತ್ತು ಮೂಲ, ಅರಸೊತ್ತಿಗೆ, ಸಾಮಾಜಿಕ, ಕನ್ನಡ ಮತ್ತು ಕರ್ನಾಟಕ, ದೇವರು ಮತ್ತು ಧರ್ಮ, ಶಕ್ತಿ–ಸಾಮರ್ಥ್ಯಗಳ ಹೋಲಿಕೆ, ಶೌರ್ಯ–ಪರಾಕ್ರಮ, ಸೋಲಿಸಿದ ಅರಸರು, ಪುನರ್‌ಪ್ರತಿಷ್ಠಾಪನೆ, ಸಾಮ್ರಾಜ್ಯ ವಿಸ್ತರಣೆಯ ಹಿನ್ನೆಲೆಯಲ್ಲಿ ವಿಭಾಗಿಸಿಕೊಳ್ಳಲಾಗಿದೆ.

ವಂಶ ಮತ್ತು ಮೂಲ

ಕೃಷ್ಣದೇವರಾಯನ ಮೂಲವನ್ನು ತಿಳಿದುಕೊಳ್ಳಲು ಅವನ ಕಾಲದ ಬಿರುದುಗಳು ಸಹಕಾರಿಯಾಗಿವೆ. ಈತ ಹಾಕಿಸಿರುವ ಶಾಸನವೊಂದರಲ್ಲಿ ಈತನ ತಂದೆಯಾದ ನರಸನಾಯಕನನ್ನು ಈಶ್ವರೇಂದ್ರವರಪುತ್ರನೆಂದು ವರ್ಣಿಸಿದೆ.

ಹಾಗೆಯೇ ಅದೇ ಶಾಸನವು ತೌಳವಂಶಾಬ್ಧಿಚಂದ್ರನೆಂದೂ ಬಣ್ಣಿಸಿದೆ. ಇದರಿಂದ ಕೃಷ್ಣದೇವರಾಯ ತುಳುವ ವಂಶದವನೆಂಬುದು ಪ್ರಸ್ತುತ ಬಿರುದಿನಿಂದ ಸ್ಪಷ್ಟವಾಗುತ್ತದೆ. ಹಾಗೆಯೇ ಇನ್ನೊಂದು ಶಾಸನದಲ್ಲಿ ಕೃಷ್ಣದೇವರಾಯನನ್ನು ಯಾದವಕುಲಾಂಬರದ್ಯುಮಣಿಯೆಂದು ಹೇಳಿದೆ. ಇದರರ್ಥ ಯಾದವಕುಲದಲ್ಲಿ ಸೂರ್ಯನಂತೆ ಪ್ರಕಾಶಿಸುವವನು ಎಂಬುದಾಗಿದೆ.. ಇದಕ್ಕೆ ಪೂರಕವಾಗಿ ಪ್ರೌಢದೇವರಾಯ ಯದುಕುಲತಿಲಕ, ಯಾದವವಂಶ ಪ್ರದೀಪ ಎಂಬ ಬಿರುದುಗಳನ್ನು ಹೊಂದಿದ್ದುದು ತಿಳಿದುಬರುವುದು. ಇವೂ ಅವನನ್ನು ಯದು ಕುಲಕ್ಕೆ ತಿಲಕಪ್ರಾಯವಾದವನು, ಯಾದವ ವಂಶಕ್ಕೆ ಪ್ರದೀಪಿಕೆಯಂತಿರುವವನು ಎಂಬುದಾಗಿ ಹೇಳುತ್ತವೆ. ಇವುಗಳ ಹಿನ್ನೆಲೆಯಲ್ಲಿ ವಿಜಯನಗರ ಅರಸರ ಮೂಲವನ್ನು ಪರಿಶೀಲಿಸುವ ಅಗತ್ಯವಿದೆ.

ಹಾಗೆಯೇ ಕೃಷ್ಣದೇವರಾಯನನ್ನು ಪೂರ್ವಸಿಂಹಾಸನಾಧೀಶ್ವರ, ವಿಜಯನಗರ ಸಿಂಹಾಸನಮೇರು, ಶ್ರೀವಿಜಯನಗರ ರತ್ನಸಿಂಹಾಸನಾಧ್ಯಕ್ಷ ಎಂದು ಕರೆಯಲಾಗಿದೆ, ಇದರಿಂದ ಕೃಷ್ಣದೇವರಾಯನು ಪೂರ್ವದ ಅರಸರಿಂದ ಅನೂಚಾನವಾಗಿ ಬಂದ ವಿಜಯನಗರ ಸಿಂಹಾಸನವನ್ನು ಏರಿ ಆಡಳಿತವನ್ನು ಕಾಯ್ದುಕೊಂಡು ಪೂರ್ವ ಸಿಂಹಾಸನಾಧೀಶ್ವರನಾಗಿ, ವಿಜಯನಗರ ಸಿಂಹಾಸನವನ್ನೇರಿದ ಮೇರು ವ್ಯಕ್ತಿಯಾಗಿ, ವಿಜಯನಗರ ರತ್ನಸಿಂಹಾಸನದ ಅಧಿಪತಿಯಾಗಿ ಆಳ್ವಿಕೆ ಮಾಡಿದ್ದು ಬಿರುದಾವಳಿಗಳಿಂದ ದೃಢವಾಗುತ್ತದೆ.

ಅರಸೊತ್ತಿಗೆ

ಕರ್ನಾಟಕದ ಅರಸರಲ್ಲಿ ಸಾಮಾನ್ಯವಾಗಿ ಕಂಡುಬರುವ ಬಿರುದಾವಳಿಗಳಲ್ಲಿ ಕಾಣಬರುವ ಬಿರುದುಗಳು ಅರಸೊತ್ತಿಗೆಯನ್ನು ಸಾಮಾನ್ಯವಾಗಿ ಪ್ರತಿನಿಧಿಸುವಂಥವಾಗಿವೆ. ಅಂತೆಯೇ ಕೃಷ್ಣದೇವರಾಯನನ್ನು ಸಮಸ್ತ ಭುವನಾಶ್ರಯ, ಮಹಾರಾಜಾಧಿರಾಜ, ರಾಜಪರಮೇಶ್ವರ, ಶ್ರೀವೀರಪ್ರತಾಪ, ಸಕಲದೇಶಾಧೀಶ್ವರ ಎಂದು ಕರೆಯಲಾಗಿದೆ.

ಸಾಮಾಜಿಕ ಸಂಗತಿ

ಬಿರುದಾವಳಿಗಳಲ್ಲಿ ಇತರ ಸಂಗತಿಗಳಂತೆ ಸಾಮಾಜಿಕ ವಿವರಗಳನ್ನು ಕಾಣಬಹುದು. ಅವುಗಳಲ್ಲಿ ಪರನಾರೀ ಸಹೋದರ, ಶೌಚವೀರ, ಸದ್ಧರ್ಮಚಾರಿತ್ರ, ಶರಣಾಗತರಕ್ಷಕ, ಸಕಲಲೋಕರಕ್ಷಕ, ಸ್ವಾಮಿಕಾರ್ಯ ದುರಂಧರ, ಸಮ್ಯಕ್ತ್ವಚೂಡಾಮಣಿ, ಭಾಷೆಗೆತಪ್ಪುವ ರಾಯರಗಂಡ ಎಂಬ ಬಿರುದುಗಳು ಪ್ರಮುಖವಾಗಿವೆ. ಇವುಗಳಿಂದ ಸ್ತ್ರೀಯರನ್ನು ಸಹೋದರ ಭಾವದಿಂದ ಕಾಣುವವನು, ಶುಚಿತ್ವವನ್ನು ಕಾಯ್ದುಕೊಂಡ ವೀರನು, ಉತ್ತಮ ಧರ್ಮ ಚಾರಿತ್ರ್ಯವನ್ನು ಹೊಂದಿದವನು, ಶರಣರಾದವರನ್ನು ರಕ್ಷಿಸುವವನು, ಸಕಲ ಲೋಕಗಳನ್ನು ರಕ್ಷಿಸುವವನು, ಸ್ವಾಮಿಕಾರ್ಯವನ್ನು ಪರಿಪಾಲಿಸುವವನೂ ಆಗಿದ್ದನು. ಹಾಗೆಯೇ ಪರಿಶುದ್ಧವಾದ ವ್ಯಕ್ತಿತ್ವವನ್ನು ಹೊಂದಿ ಸಮ್ಯಕ್ತ್ವಚೂಡಾಮಣಿಯಾಗಿ ಪರಿಶುದ್ಧವಾದ ಚೂಡಾಮಣಿಯಂತಿರುವವನು, ನುಡಿದಂತೆ ನಡೆಯುವ ವ್ಯಕ್ತಿತ್ವವನ್ನು ಹೊಂದಿದ್ದನೆಂಬುದಾಗಿ ತಿಳಿಯುತ್ತದೆ. ಇದರಿಂದ ಅಂದಿನ ಸಮಾಜವು ಬಯಸುತ್ತಿದ್ದ ಸಾಮಾಜಿಕ ಮೌಲ್ಯಗಳೇನೆಂಬುದು ಈ ಬಿರುದುಗಳಿಂದ ಸ್ಪಷ್ಟವಾಗುತ್ತದೆ.

ಕನ್ನಡ ಮತ್ತು ಕರ್ನಾಟಕ

ಕೃಷ್ಣದೇವರಾಯನು ಕನ್ನಡ ಮತ್ತು ಕರ್ನಾಟಕವನ್ನು ಕುರಿತಾದ ಕನ್ನಡರಾಜ್ಯರಮಾರಮಣ, ಕರ್ನಾಟರಾಜ್ಯರಕ್ಷಾಮಣಿ, ಕರ್ನಾಟರಾಜ್ಯಲಕ್ಷ್ಮೀಮನೋಹರ, ಕರ್ನಾಟಕ ಸಿಂಹಾಸನ ಸಂಸ್ಥಾಪನಾಚಾರ್ಯ, ಕರ್ನಾಟಕ ಸಿಂಹಾಸನಾರೂಢ, ಶ್ರೀ ಕರ್ನಾಟಮಹಿಷ ಎಂಬ ಬಿರುದುಗಳನ್ನು ಹೊಂದಿದ್ದನು. ಈ ಬಿರುದುಗಳು ಕನ್ನಡ ಮತ್ತು ಕರ್ನಾಟಕದ ಪ್ರಾಚೀನತೆ ಹಾಗೂ ಭೌಗೋಳಿಕ ಪರಿಮಿತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಶ್ರೀಕೃಷ್ಣದೇವರಾಯನು

ಕನ್ನಡಿಗನೋ, ಇತರೆ ಭಾಷಿಗನೋ ಎಂಬ ವಾದವಿವಾದಗಳಿಗೆ ಉತ್ತರವನ್ನೂ ನೀಡುವಲ್ಲಿ ಈ ಬಿರುದುಗಳು ನೆರವಾಗುವುದಂತೂ ಸತ್ಯ.

ದೇವರು ಮತ್ತು ಧರ್ಮ

ಅರಸರು ತಮ್ಮ ಕಾರ್ಯವೈಖರಿಗಳ ಹಿನ್ನೆಲೆಯಲ್ಲಿ ತಮ್ಮನ್ನು ದೇವರಿಗೆ ಹೋಲಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕೃಷ್ಣದೇವರಾಯನನ್ನು ಶಾಸನಗಳು ಏಳುನಲೈಯಿಲ್‌ಯಿತಂತಿರೈಕೊಂಡಪೆರುಮಾಳ್, ಪ್ರತ್ಯಕ್ಷ ಕೃಷ್ಣಾವತಾರಿ ಎಂದೆಲ್ಲಾ ಬಣ್ಣಿಸಿವೆ. ಅಂದರೆ ಏಳು ಬೆಟ್ಟಗಳನ್ನು ವಶಮಾಡಿಕೊಂಡ ಪೆರುಮಾಳ್‌ನಂತೆ ಇರುವವನು; ಶ್ರೀಕೃಷ್ಣನ ಅವತಾರವಾಗಿರುವವನು. ಕೃಷ್ಣದೇವರಾಯ ತನ್ನ ಆಳ್ವಿಕೆಯ ಅವಧಿಯಲ್ಲಿ ಅನೇಕ ದಾನಧರ್ಮ ಕಾರ್ಯಗಳನ್ನು ಕೈಗೊಂಡ ಬಗೆಗಿನ ಬಿರುದುಗಳಲ್ಲಿ ಧರ್ಮಪ್ರತಿಪಾಲನಂ, ಅಧರ್ಮಸಂಹಾರಕ, ಅನೇಕನೂತನಾಗ್ರಹಾರಪಾಲಕ, ಹಿಂದೂರಾಯಸುರತ್ರಾಣ ಮುಖ್ಯವಾಗಿವೆ. ಕೃಷ್ಣದೇವರಾಯನು ತಾನು ಕೈಗೊಂಡ ದಂಡಯಾತ್ರೆ ಮೊದಲಾದ ಸಂದರ್ಭಗಳಲ್ಲಿ ಪುಣ್ಯಕ್ಷೇತ್ರಗಳಿಗೆ ಹೋಗಿ ದಾನದತ್ತಿಗಳನ್ನು ನೀಡುವ ಪರಿಪಾಠವನ್ನು ರೂಢಿಸಿಕೊಂಡಿದ್ದನು. ತಿರುಪತಿಗೆ ಏಳುಬಾರಿ ಭೇಟಿ ನೀಡಿದ್ದುದು ಶಾಸನದಿಂದ ತಿಳಿಯುತ್ತದೆ. ಅಲ್ಲದೆ ಶ್ರೀಶೈಲ, ಶ್ರೀರಂಗಂ, ಕಂಚಿ, ಅಮರೇಶ್ವರ ಮೊದಲಾದ ಕ್ಷೇತ್ರಗಳಿಗೂ ಭೇಟಿನೀಡಿ ದೇವರ ದರ್ಶನ ಪಡೆದಿದ್ದನು. ಈ ಹಿನ್ನೆಲೆಯಲ್ಲಿ ಇಲ್ಲಿನ ವರ್ಣನೆ ಸಮರ್ಥನೀಯವಾಗಿದೆ. ಹಾಗೆಯೇ ಅಧರ್ಮವನ್ನು ಸಹಿಸದವನಾಗಿ, ಅನೇಕ ಹೊಸ ಹೊಸ ಅಗ್ರಹಾರಗಳನ್ನು ಸ್ಥಾಪಿಸಿ, ಪೋಷಿಸಿದ್ದುದು ಇವುಗಳಿಂದ ಗೊತ್ತಾಗುತ್ತದೆ. ಹಾಗೆಯೇ ಕೃಷ್ಣದೇವರಾಯನನ್ನು ಹಿಂದೂರಾಯ ಸುರತ್ರಾಣನೆಂದು ಅನೇಕ ಶಾಸನಗಳು ವರ್ಣಿಸಿವೆ. ಇದರರ್ಥ ಹಿಂದೂ ಅರಸರಲ್ಲಿ ಸುಲ್ತಾನನಾದವನು ಎಂಬುದಾಗಿದೆ.

ಶಕ್ತಿ–ಸಾಮರ್ಥ್ಯಗಳ ಹೋಲಿಕೆ

ಕೃಷ್ಣದೇವರಾಯನ ಬಿರುದುಗಳಲ್ಲಿ ಕಾಣಬರುವ ಸಂಗತಿಗಳಲ್ಲಿ ತನ್ನ ಬಲಾಢ್ಯತೆಯನ್ನು ಶಕ್ತಿಶಾಲಿಯಾದ ಪ್ರಾಣಿ–ಪಕ್ಷಿಗಳಿಗೆ ಹೋಲಿಸಿಕೊಂಡಿರುವುದು. ಅವುಗಳೆಂದರೆ ಗಂಡಭೇರುಂಡ, ದುಷ್ಟಶಾರ್ದೂಲಮರ್ಧನ. ತಾನು ಕತ್ತಿ–ಗುರಾಣಿಯಲ್ಲಿ ಗಳಿಸಿದ ಪ್ರಾವಿಣ್ಯತೆಯ ಸಂಕೇತವಾಗಿ ಹೊಂದಿದ ಬಿರುದುಗಳಾಗಿ ಕಠಾರಿ ತ್ರಿನೇತ್ರ, ಕಠಾರಿಸಾಳುವ ಕಂಡುಬಂದರೆ, ರಣಚಂಡಃ ಎಂಬುದು ಅವನ ರಣಾಂಗಣದ ಸಾಮರ್ಥ್ಯವನ್ನು ಕುರಿತದ್ದಾಗಿದೆ.

ಶೌರ್ಯ–ಪರಾಕ್ರಮ

ಕೃಷ್ಣದೇವರಾಯನ ಶೌರ್ಯ–ಪರಾಕ್ರಮವನ್ನು ಸಾರುವ ಅನೇಕ ಬಿರುದುಗಳಿವೆ. ಅವುಗಳಲ್ಲಿ ಅತಿಬಹಳಚತುರಂಗಬಲಸಮೋಪೇತ, ಅರಿರಾಯಮನೋಭಯಂಕರ, ಮೂರುರಾಯರಗಂಡ, ಮೇದಿನಿಯಮೀಸೆಯರ ಗಂಡ, ಅರಿರಾಯವಿಭಾಡ, ಅಷ್ಟದಿಕ್ಕುರಾಯ ಮನೋಭಯಂಕರ, ಪರರಾಯ ಭಯಂಕರ, ಆಶ್ಚರ್ಯಅಪ್ರತಿಮಸಾಹಸ, ಭುಜಬಲಪರಾಕ್ರಮಿ, ಐವತ್ತಾರು ಮಾಂಡಲಿಕರ ಗಂಡ, ಕಂಡನಾಡುಕೊಂಡುಕೊಂಡನಾಡಕೊಡದಪೂರ್ವದಕ್ಷಿಣಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ ಪ್ರಮುಖವಾಗಿವೆ. ಇವನು ಎಷ್ಟು ಬಲಿಷ್ಠರೆಂದರೆ ಯಾವುದೇ ರಾಜ್ಯದ ಮೇಲೆ ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನು. ಇದು ಅವನಲ್ಲಿದ್ದ ಸೇನಾಬಲ ಹಾಗೂ ಛಲವನ್ನು ವ್ಯಕ್ತಪಡಿಸುವುದರ ಜೊತೆಗೆ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದ್ದುದನ್ನು ಸ್ಪಷ್ಟಪಡಿಸುತ್ತದೆ.

ಸೋಲಿಸಿದ ಅರಸರು

ಶ್ರೀಕೃಷ್ಣದೇವರಾಯನು ತನ್ನ ಆಳ್ವಿಕೆಯ ಅವಧಿಯಲ್ಲಿ ಅನೇಕ ಯುದ್ಧಗಳನ್ನು ಕೈಗೊಂಡು ಶತ್ರುಗಳನ್ನು ಸೋಲಿಸಿದ್ದುದು ಇತಿಹಾಸ. ಅಂತೆಯೇ ಬಿರುದುಗಳಲ್ಲಿ ಅವನು ಸೋಲಿಸಿದ ಕೆಲವು ಅರಸರನ್ನು ದಾಖಲಿಸಿರುವುದುನ್ನು ಕಾಣಬಹುದು.

ಅವುಗಳಲ್ಲಿ ಗಜಪತಿಗಜಕೂಟಪಕಲ, ಗಜಪತಿವಿಭಾಡ, ಚೇರಚೋಳಪಾಂಡ್ಯಾದಿವೈರಿಭೂಭುಜಮದಭಂಜನ ಮುಖ್ಯವಾಗಿವೆ. ಅಂದರೆ ಗಜಪತಿಯ ಆನೆಗಳ ಸಮೂಹವನ್ನು ಚದುರಿಸಿದವನು, ಒರಿಸ್ಸಾದ ಗಜಪತಿಯನ್ನು ಸೋಲಿಸಿದವನು. ಚೇರರು, ಚೋಳರು, ಪಾಂಡ್ಯ ಮೊದಲಾದ ವೈರಿಗಳ ಸೊಕ್ಕನ್ನು ಅಡಗಿಸಿದವನು ಎಂದಾಗುತ್ತದೆ. ಹಾಗೆಯೇ ಅನೇಕ ಕೋಟೆಕೊತ್ತಲಗಳನ್ನು ವಶಮಾಡಿಕೊಂಡದ್ದು ಶಾಸನಗಳಲ್ಲದೆ ಸಮಸ್ತದುರ್ಗಗರ್ವಮದಭಂಜನಂ ಬಿರುದಿನಿಂದಲೂ ತಿಳಿಯುತ್ತದೆ.

ಬಹಮನಿ ಸುಲ್ತಾನ ಪ್ರತಿಷ್ಠಾಪನೆ

ಶತ್ರು ಅರಸರನ್ನು ಸೋಲಿಸುವುದು ಮಾತ್ರವಲ್ಲ. ಅವರ ರಕ್ಷಣೆಗೂ ಶ್ರೀಕೃಷ್ಣದೇವರಾಯ ಮುಂದಾಗಿದ್ದುದು ಅವನ ಯವನರಾಜ್ಯ ಸ್ಥಾಪನಾಚಾರ್ಯ ಬಿರುದಿನಿಂದ ಗೊತ್ತಾಗುತ್ತದೆ. ಷಾಹಿ ಸುಲ್ತಾನರು ಬಹಮನಿ ಅರಸನನ್ನು ಮೂಲೆಗುಂಪು ಮಾಡಿ ತಾವೇ ಸ್ವತಂತ್ರ ಅರಸರಾಗಿ ಘೋಷಿಸಿಕೊಂಡಿದ್ದರು. ಇದನ್ನು ಗಮನಿಸಿದ ಕೃಷ್ಣದೇವರಾಯ ಬಿಜಾಪುರದ ಸುಲ್ತಾನನ್ನು ಪರಾಭವಗೊಳಿಸಿ ಬಹಮನಿಯ ಸುಲ್ತಾನನನ್ನು ಪುನಃ ಅಧಿಕಾರಕ್ಕೆ ತಂದನು. ಅದರ ನೆನಪಿಗಾಗಿ ಧರಿಸಿದ ಬಿರುದೇ ಯವನರಾಜ್ಯ ಸ್ಥಾಪನಾಚಾರ್ಯ.

ಸಾಮ್ರಾಜ್ಯ ವಿಸ್ತಾರ

ಸಾಮ್ರಾಜ್ಯ ವಿಸ್ತರಣೆಯು ಅರಸರ ಬಹುಮುಖ್ಯ ಧ್ಯೇಯವಾಗಿತ್ತು. ಆದುದರಿಂದಲೇ ತಮ್ಮ ಗಡಿಗಳನ್ನು ಸಮುದ್ರಗಳ ಅಂಚಿನವರೆಗೂ ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಎಲ್ಲ ಅರಸರೂ ಹೊಂದಿದ್ದರು. ಈ ಹಿನ್ನೆಲೆಯಲ್ಲಿಯೇ ಚತುಸಮುದ್ರಾಧೀಶ್ವರ, ಪೂರ್ವಪಶ್ಚಿಮದಕ್ಷಿಣೋತ್ತರ ಸಮುದ್ರಾಧೀಶ್ವರ ಎಂಬ ಬಿರುದುಗಳನ್ನು ಇಟ್ಟುಕೊಂಡಿದ್ದರು. ಅಂತೆಯೇ ದಕ್ಷಿಣ ಭಾರತದ ಭೂಭಾಗದ ಸ್ವರೂಪದ ಹಿನ್ನೆಲೆಯಲ್ಲಿ ಅರಬ್ಬೀಸಮುದ್ರ, ಹಿಂದೂಮಹಾಸಾಗರ ಮತ್ತು ಬಂಗಾಳಕೊಲ್ಲಿಗಳ ನಡುವಿನ ಭೂಭಾಗ ಹಾಗೂ ಸಮುದ್ರಗಳ ಅಧಿಪತಿ ಎಂಬುದಾಗಿ ಕರೆದುಕೊಂಡಿದ್ದರು.

ಸಾಹಿತ್ಯ ಮತ್ತು ಸಂಗೀತ ಪ್ರೇಮ

ಶ್ರೀಕೃಷ್ಣದೇವರಾಯನು ತನ್ನ ಅಧಿಕಾರಾವಧಿಯಲ್ಲಿ ಸಾಮ್ರಾಜ್ಯ ವಿಸ್ತರಣೆ, ಯುದ್ಧ, ಸಂಘರ್ಷಗಳಲ್ಲಿ ಮಾತ್ರ ಕಾಲವನ್ನು ಕಳೆಯದೆ ಸಾಂಸ್ಕೃತಿಕ ಚಟುವಟಿಕೆಗಳಾದ ಸಂಗೀತ, ಸಾಹಿತ್ಯ, ಶಾಸ್ತ್ರ, ಪುರಾಣ ಮೊದಲಾದವುಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಿದ್ದನು. ಅಂತೆಯೇ ಸಂಗೀತ ಸಾಹಿತ್ಯ ಸಮರಾಂಗಣ ಸಾರ್ವಭೌಮ, ಸಮಸ್ತವೇದಶಾಸ್ತ್ರಪುರಾಣಾಗಮಾದಿಪ್ರವರ್ತಕ ಎಂಬ ಬಿರುದುಗಳನ್ನು ಅವನು ಹೊಂದಿದ್ದನು. ಸಂಗೀತ ಮತ್ತು ಸಾಹಿತ್ಯಗಳಲ್ಲಿ ಸ್ವತಃ ಪರಿಣತನಾಗಿದ್ದು, ವೇದ, ಶಾಸ್ತ್ರ, ಪುರಾಣ, ಆಗಮಗಳನ್ನೂ ಬಲ್ಲವನಾಗಿದ್ದು, ಅವುಗಳಿಗೆ ಪ್ರೋತ್ಸಾಹವನ್ನು ನೀಡಿದ್ದುದು ಈ ಬಿರುದುಗಳಿಂದ ತಿಳಿಯುತ್ತದೆ.

ಒಟ್ಟಿನಲ್ಲಿ ಶ್ರೀಕೃಷ್ಣದೇವರಾಯನ ಬಿರುದಾವಳಿಗಳು ಆಡಳಿತ ಸಂಗತಿಗಳ ಜೊತೆಗೆ ಅಂದಿನ ಸಾಂಸ್ಕೃತಿಕ ಬದುಕನ್ನೂ ಬಿಚ್ಚಿಡುವ ಶಕ್ತಿಯನ್ನೂ ಹೊಂದಿವೆ. ಇವು ಆಕರಗಳಾಗಿ ಶ್ರೀಕೃಷ್ಣದೇವರಾಯನ ಚರಿತ್ರೆಯನ್ನು ಕಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಅವನ ಸಾಮ್ರಾಜ್ಯದ, ರಾಜಕಾರಣದ ಅಥವಾ ವ್ಯಕ್ತಿಗತ ಚರಿತ್ರೆ ಅರಿಯಲು ಮಹತ್ವದ ಕುರುಹುಗಳನ್ನು ಈ ಮೇಲಿನ ಬಿರುದಾವಳಿಗಳು ನೀಡುತ್ತವೆಯೆಂದರೆ ಅತಿಶಯೋಕ್ತಿಯಾಗಲಾರದು.

ಈ ಮೇಲಿನ ಬಿರುದುಗಳಲ್ಲದೆ ಶ್ರೀಕೃಷ್ಣದೇವರಾಯನ ಅನೇಕ ಬಿರುದುಗಳನ್ನು ಹೊಂದಿದ್ದನು. ಅವು ಈ ಕೆಳಗಿನಂತಿವೆ. ಅವುಗಳನ್ನು ಒಂದೆಡೆ ತಂದು ಅಕಾರಾದಿಯಲ್ಲಿ ನೀಡಿ ಅವುಗಳಿಗೆ ಅರ್ಥಗಳನ್ನು ನೀಡುವ ಪ್ರಯತ್ನವನ್ನು

ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ. ಈ ಬಿರುದುಗಳನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವ ಮೂಲಕ ಶ್ರೀಕೃಷ್ಣದೇವರಾಯ ಮತ್ತು ವಿಜಯನಗರ ಚರಿತ್ರೆಯನ್ನು ವಿಭಿನ್ನವಾಗಿ ನೋಡಲು ಅವಕಾಶವಿದೆ ಎಂಬುದನ್ನು ಒತ್ತಿಹೇಳುವ ಪ್ರಯತ್ನವಿದು.

ಅತಿಬಹಳಚತುರಂಗಬಲಸಮೋಪೇತ: ಬೃಹತ್ ಪ್ರಮಾಣದ ಚತುರಂಗಬಲವನ್ನು ಹೊಂದಿದವನು (ಕೃ.ಶಾ., ಪು. 623)

ಅಧರ್ಮಸಂಹಾರಕ: ಅಧರ್ಮವನ್ನು ನಾಶಮಾಡುವವನು *(ಅದೇ)*

ಅನೇಕನೂತನಾಗ್ರಹಾರಪಾಲಕ: ಅನೇಕ ಹೊಸಹೊಸ ಅಗ್ರಹಾರಗಳನ್ನು ಸ್ಥಾಪಿಸಿ ಅವುಗಳನ್ನು ರಕ್ಷಿಸಿದವನು *(ಅದೇ)*

ಆಶ್ಚರ್ಯಅಪ್ರತಿಮಸಾಹಸಭುಜಬಲಪರಾಕ್ರಮಿ: ಆಶ್ಚರ್ಯಕರ, ಅಪ್ರತಿಮ ಸಾಹಸಿಯೂ ಭುಜಬಲ ಪರಾಕ್ರಮಿಯೂ ಆದವನು; ಮಹಾಶೂರನಾದವನು *(ಅದೇ).*

ಅರಿರಾಯಮನೋಭಯಂಕರ: ಶತ್ರು ಅರಸು, ಮಾಂಡಲಿಕರ ಮನದಲ್ಲಿ ಭಯವನ್ನು ಉಂಟುಮಾಡಿದವನು (ಅದೇ, ಪು. 625)

ಅರಿರಾಯವಿಭಾಡ: ಶಕ್ತಿಶಾಲಿಯೂ, ಬಲಶಾಲಿಯೂ ಆದ ಶತ್ರು ಅರಸರನ್ನು ನಾಶಪಡಿಸಿದವನು. *(ಅದೇ)*

ಅಷ್ಟದಿಕ್ಕುರಾಯಮನೋಭಯಂಕರ: ಎಂಟು ದಿಕ್ಕುಗಳಲ್ಲಿರುವ ಅರಸರಿಗೆ ಭಯವನ್ನು ಉಂಟುಮಾಡಿದವನು (ಅದೇ, ಪು. 614, 624)

ಏಳುನಲೈಯಿಲ್‌ಯಿತಂತಿರೈಕೊಂಡಪೆರುಮಾಳ್: ಏಳು ಬೆಟ್ಟಗಳನ್ನು ವಶಮಾಡಿಕೊಂಡ ಪೆರುಮಾಳ್‌ನಂತೆ ಇರುವವನು. ಈ ಬಿರುದುಗಳು ಕೃಷ್ಣದೇವರಾಯನ ಶೌರ್ಯ ಪರಾಕ್ರಮ, ಪ್ರಾವಿಣ್ಯತೆ, ವಿದ್ವತ್ತು, ನಡೆ, ನುಡಿ, ವ್ಯಕ್ತಿತ್ವಗಳನ್ನು ಅಭಿವ್ಯಕ್ತಿಸುತ್ತವೆ.(ಇ.ಐ., ನಂ.21, 1931–32)

ಐವತ್ತಾರು ಮಾಂಡಲಿಕರ ಗಂಡ: ಐವತ್ತಾರು ಇದೊಂದು ವಾಚಿಕ ರೂಪವುಳ್ಳ ಪದ. ಪ್ರಾಚೀನ ಕಾಲದ ಚರಿತ್ರೆಯಲ್ಲಿ ಮೂವತ್ತಾರು ಸಾವಿರ (ಪನ್ನಿರ್ಚ್ಛಾಸಿರ), ಐವತ್ತಾರು ಸಾವಿರ, ಎಪ್ಪತ್ತೇಳು ಪಾಳೆಯಗಾರರು ಎಂಬ ಸಂಖ್ಯೆಗಳನ್ನು ಬಳಸಿರುವುದು ರೂಢಿಯಾಗಿದೆ. ಈ ಹಿನ್ನೆಲೆಯಲ್ಲಿ ಅರಸರು ತಮ್ಮ ಬಿರುದುಗಳಲ್ಲಿ ಉತ್ಪ್ರೇಕ್ಷೆಯುಳ್ಳ ಸಂಖ್ಯೆಯನ್ನು ಸೇರಿಸಿಕೊಂಡಿರುವ ಸಾಧ್ಯತೆಯಿದೆ. ಹಾಗಿದ್ದೂ ಕೃಷ್ಣದೇವರಾಯನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯದ ಆಡಳಿತವು ಕೇಂದ್ರೀಕರಣದಿಂದ ವಿಕೇಂದ್ರೀಕರಣದತ್ತ ಸಾಗಿದ್ದುದು ಅಂದಿನ ಅಮರನಾಯಕ ಪದ್ಧತಿಯಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ಅರಸರ ಕಾಲದಲ್ಲಿ ಅನೇಕ ಪ್ರಾಂತ್ಯಾಧಿಕಾರಿಗಳು, ಅಮರನಾಯಕರು, ಸಾಮಂತರು ಆಡಳಿತದ ಅಡಿಯಲ್ಲಿ ಇದ್ದರು. ಈ ಮಾಂಡಲಿಕರು ಸಾಕಷ್ಟು ಇದ್ದ ಕಾರಣ ಈ ಬಿರುದು ಅನ್ವಯವಾಗಿದೆ.

ಕಠಾರಿ ತ್ರಿಣೇತ್ರ: ಕತ್ತಿ ವರಸೆಯಲ್ಲಿ ಪ್ರವೀಣನು (ಅದೇ, ಪು. 111)

ಕಠಾರಿಸಾಳುವ: ಕತ್ತಿ ವರಸೆಯಲ್ಲಿ ಹೆಸರಾದವನು, ನಿಪುಣನು (ಕೃ.ಶಾ., ಪು. 110)

ಕಂಡನಾಡುಕೊಂಡುಕೊಂಡನಾಡಕೊಡದಪೂರ್ವದಕ್ಷಿಣಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ: ಇವನು ಎಷ್ಟು ಬಲಿಷ್ಠರೆಂದರೆ ಯಾವುದೇ ರಾಜ್ಯದ ಮೇಲೆ ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನು. ಇದು ಅವನಲ್ಲಿದ್ದ ಸೇನಾಬಲ

ಹಾಗೂ ಛಲವನ್ನು ವ್ಯಕ್ತಪಡಿಸುವುದರ ಜೊತೆಗೆ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದ್ದುದನ್ನು ಸ್ಪಷ್ಟಪಡಿಸುತ್ತದೆ. (*SII.,* Vol. ix-ii, No. 510)

ಕನ್ನಡರಾಜ್ಯರಮಾರಮಣ: ಕೃಷ್ಣದೇವರಾಯನು ಈ ಬಿರುದನ್ನು ಹೊಂದಿದ್ದನು. ಕನ್ನಡ ರಾಜ್ಯದ ಅಧಿಪತಿಯಾಗಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. (H of K., p. 322)

ಕರ್ನಾಟಕ ಸಿಂಹಾಸನ ಸಂಸ್ಥಾಪನಾಚಾರ್ಯ: ಕರ್ನಾಟಕ ಸಿಂಹಾಸನವನ್ನು ಸಂಸ್ಥಾಪಿಸಿದವನು (ಕೃ.ಶಾ., ಪು.265)

ಕರ್ನಾಟರಾಜ್ಯರಕ್ಷಾಮಣಿ: ಕೃಷ್ಣದೇವರಾಯನು ಈ ಬಿರುದನ್ನು ಹೊಂದಿದ್ದನು. ಕರ್ನಾಟಕವನ್ನು ಕರ್ನಾಟವೆನ್ನಲಾಗಿದೆ. ವಿಜಯನಗರ ಕಾಲದ ಹೊತ್ತಿಗೆ ಹಲವು ರಾಜ್ಯಗಳಿದ್ದವೆಂಬುದನ್ನು ಗಮನಿಸಬಹುದು. ಅದರಲ್ಲಿ ಕರ್ನಾಟಕ ರಾಜ್ಯವು ಪ್ರಾದೇಶಿಕವಾಗಿ ಆಂಧ್ರಪ್ರದೇಶ, ತಮಿಳುನಾಡುಗಳಂತೆ ಪ್ರತ್ಯೇಕತೆಯಿಂದ ಕೂಡಿದ್ದಿತು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯವನ್ನು ರಕ್ಷಿಸಿದ ಕಾರಣ ಬಂದಿರಬೇಕು. (H of K., p. 322)

ಕರ್ನಾಟರಾಜ್ಯಲಕ್ಷ್ಮೀಮನೋಹರ: ಕರ್ನಾಟಕ ರಾಜ್ಯಲಕ್ಷ್ಮಿಯ ಒಡೆಯ (ಕೃ.ಶಾ., ಪು.29)

ಕರ್ನಾಟಕಸಿಂಹಾಸನಾರೂಢ: ಕರ್ನಾಟಕ ಸಿಂಹಾಸನವನ್ನು ಹೊಂದಿದವನು. ಇದು ಮಧ್ಯಯುಗದ ಕನ್ನಡ ನಾಡು, ಕರ್ನಾಟಕವನ್ನು ನೆನಪಿಸುತ್ತದೆ. (*ಅದೇ,* ಪು. 623)

ಕುತೂಹಲಿತಕೀರ್ತಿ: ಕುತೂಹಲಭರಿತ ಕೀರ್ತಿಯನ್ನು ಪಡೆದವನು (*ಅದೇ,* ಪು.115)

ಕುಲದೇವತಾಸಹಚರ: ಕುಲದೇವತೆಯ ಆರಾಧಕನು *(ಅದೇ)*

ಕೃತಯುಗಾಂತ ಪ್ರವರ್ತಕ: ಕೃತಯುಗದ ಪ್ರವರ್ತಕನು (*ಅದೇ,* ಪು. 623)

ಗಂಡಭೇರುಂಡ: ಗಂಡಭೇರುಂಡ ಎರಡು ತಲೆಯ ಪಕ್ಷಿ. ಇದು ಶಕ್ತಿ, ಬಲಾಢ್ಯತೆಗಳ ಸಂಕೇತ. ಬಲಾಢ್ಯನಾದ ಅರಸ. (*ಕವಿವಿ ಶಾಸಂ*–3, ಪು. 21)

ಗಜಪತಿಗಜಕೂಟಪಕಲ: ಗಜಪತಿಯ ಆನೆಗಳ ಸಮೂಹವನ್ನು ಚದುರಿಸಿದವನು *(ಅದೇ)*

ಗಜಪತಿವಿಭಾಡ: ಒರಿಸ್ಸಾದ ಗಜಪತಿಯನ್ನು ಸೋಲಿಸಿ ಗಜಪತಿ ವಿಭಾಡನಾದನು (ಕೃ.ಶಾ., ಪು.625)

ಗಜಾಶ್ವಪತಿ: ಗಜ ಮತ್ತು ಅಶ್ವದಳಗಳ ಒಡೆಯನು *(ಅದೇ)*

ಚತುಸಮುದ್ರಾಧೀಶ್ವರ: ನಾಲ್ಕು ಸಮುದ್ರಗಳಿಗೆ ಒಡೆಯನು; ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ಸಮುದ್ರಗಳ ಅಧಿಪತಿಯಾದವನು *(ಅದೇ)*

ಧರ್ಮಪ್ರತಿಪಾಲನಂ: ಧರ್ಮವನ್ನು ಪ್ರತಿಪಾಲಿಸುವವನು *(ಅದೇ)*

ದುಷ್ಟಶಾರ್ದೂಲಮರ್ಧನ: ದುಷ್ಟ ಹುಲಿಗಳಂತಿರುವ ಶತ್ರುಗಳನ್ನು ಸಂಹರಿಸಿದವನು (*ಅದೇ,* ಪು.684)

ಪರನಾರೀ ಸಹೋದರ: ಪರಸ್ತ್ರೀಯರನ್ನು ಸಹೋದರ ಭಾವದಿಂದ ಕಾಣುವವನು (*ಅದೇ,* ಪು.111)

ಪರರಾಯಭಯಂಕರ: ಇತರೆ ಸಮಕಾಲೀನ ಅರಸು, ಸಾಮಂತರಿಗೆ ಭಯವನ್ನು ಉಂಟು ಮಾಡುವವನೆಂದರ್ಥ. ಕೃಷ್ಣದೇವರಾಯನು ಈ ಬಿರುದನ್ನು ಹೊಂದಿದ್ದು, ಅವನು ತನ್ನ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿ

ಸೋಲಿಲ್ಲದ ಸರದಾರನಾಗಿದ್ದನು. ಅಲ್ಲದೆ ಯಾವುದೇ ರಾಜರಿಗೆ ಎಲ್ಲಿ ತಮ್ಮ ರಾಜ್ಯಕ್ಕೆ ಮುತ್ತಿಗೆ ಹಾಕುವನೋ ಎಂಬ ಭಯ ನಿರಂತರವಾಗಿ ಕಾಡಿದ್ದುದು ಚರಿತ್ರೆಯಿಂದ ಗೊತ್ತಾಗುತ್ತದೆ. (ಅದೇ, ಪು. 684)

ಪ್ರತ್ಯಕ್ಷಕೃಷ್ಣಾವತಾರಿ: ಶ್ರೀಕೃಷ್ಣನ ಅವತಾರಿಯಾದವನು (ಅದೇ, ಪು. 623)

ಪ್ರಥಮಪ್ರಜಾಪತಿ: ಪ್ರಜೆಗಳಲ್ಲಿ ಪ್ರಥಮನು; ಪ್ರಥಮ ಪ್ರಜೆಯಾಗಿರುವವನು (ಅದೇ, ಪು. 115)

ಪೂರ್ವದಕ್ಷಿಣಪಶ್ಚಿಮ ಸಮುದ್ರಾಧೀಶ್ವರ: ಪೂರ್ವ, ದಕ್ಷಿಣ, ಪಶ್ಚಿಮ ಸಮುದ್ರಗಳ ಒಡೆಯ; ಅರಬ್ಬೀಸಮುದ್ರ, ಹಿಂದೂಮಹಾಸಾಗರ ಮತ್ತು ಬಂಗಾಳಕೊಲ್ಲಿಗಳ ನಡುವಿನ ಭೂಭಾಗ ಹಾಗೂ ಸಮುದ್ರಗಳ ಅಧಿಪತಿಯಾದವನು (ಅದೇ, ಪು.625)

ಪೂರ್ವಸಿಂಹಾಸನಾಧೀಶ್ವರ: ಕೃಷ್ಣದೇವರಾಯನು ಪೂರ್ವದ ಅರಸರಿಂದ ಅನೂಚಾನವಾಗಿ ಬಂದ ವಿಜಯನಗರ ಸಿಂಹಾಸನವನ್ನು ಏರಿ ಆಡಳಿತವನ್ನು ಕಾಯ್ದುಕೊಂಡು ಪೂರ್ವ ಸಿಂಹಾಸನಾಧೀಶ್ವರನಾಗಿ ಹೆಸರು ಗಳಿಸಿದ್ದನು. (*ARIE,* 1964–65, No.15)

ಭಾಷೆಗೆತಪ್ಪುವರಾಯರಗಂಡ: ಭಾಷೆಗೆ ತಪ್ಪುವ ರಾಯರ ಗಂಡನೆಂಬುದು ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ (ಕವಿವಿ *ಶಾಸಂ*–3, ಪು. 21).

ಮಹಾರಾಜಾಧಿರಾಜ: ಮಹಾರಾಜರಿಗೆ ರಾಜನಾದವನು (ಕೃ.ಶಾ., ಪು. 625)

ಮೂರುರಾಯರ ಗಂಡ: ಅರಸ, ಮಾಂಡಲಿಕ ಮತ್ತು ಸಾಮಂತರ ಒಡೆಯ *(ಅದೇ)*

ಮೇದಿನಿಯಮೀಸೆಯರಗಂಡ: ಭೂಮಂಡಲದಲ್ಲಿ ಮೀಸೆಯನ್ನು ತಿರುವುತ್ತ ಆಳುತ್ತಿದ್ದ ಅರಸು ಮಾಂಡಲಿಕರ ಅಧಿಪತಿಯಾದವನು (ಅದೇ, ಪು. 110, 197).

ಯವನರಾಜ್ಯ ಸ್ಥಾಪನಾಚಾರ್ಯ: ಬಿಜಾಪುರದ ಸುಲ್ತಾನನ್ನು ಹಿಮ್ಮೆಟ್ಟಿಸಿದ ಕೃಷ್ಣದೇವರಾಯ ಶಾಹಿ ಸುಲ್ತಾನರ ಪ್ರಭಾವವನ್ನು ಕುಗ್ಗಿಸಿ ಬಹಮನಿಯ ಸುಲ್ತಾನನನ್ನು ಪುನಃ ಅಧಿಕಾರಕ್ಕೆ ತಂದ ನೆನಪಿಗಾಗಿ ಧರಿಸಿದ ಬಿರುದು ಯವನರಾಜ್ಯ ಸ್ಥಾಪನಾಚಾರ್ಯ. (ಅದೇ, ಪು. 624, 625)

ಯಾದವಕುಲಾಂಬರದ್ಯುಮಣಿ: ಯಾದವಕುಲದಲ್ಲಿ ಸೂರ್ಯನಂತೆ ಪ್ರಕಾಶಿಸುವವನು (ಅದೇ, ಪು. 111)

ರಾಜಪರಮೇಶ್ವರ: ರಾಜರಲ್ಲಿ ಪರಮೇಶ್ವರನಂತಿರುವವನು (ಅದೇ, ಪು. 23)

ರೋಷಕೃತಪ್ರತಿಪಾರ್ಥಿವ: ರೋಷವುಳ್ಳ ಶತ್ರುಗಳಿಗೆ ಅರಸನಾದವನು (ಕೃ.ಶಾ., ಪು. 127)

ವಿಚಾರವಿಶಾರದ: ವಿಚಾರ ಮಾಡುವವನು, ತಿಳುವಳಿಕೆಯುಳ್ಳವನು (ಅದೇ, ಪು.115)

ವಿಜಯನಗರ ರತ್ನಸಿಂಹಾಸನಸ್ಥ: ವಿಜಯನಗರದ ರತ್ನಸಿಂಹಾಸನವನ್ನು ಹೊಂದಿದವನು (ಅದೇ, ಪು.90)

ವೀರಪ್ರತಾಪ: ಕೀರ್ತಿ ಪ್ರತಿಷ್ಠೆಗಳುಳ್ಳ ಅಪ್ರತಿಮ ಶೂರನಾದ ಅರಸ (ಕವಿವಿ *ಶಾಸಂ*–3, ಪು. 22)

ಶರಣಾಗತರಕ್ಷಕ: ಶರಣಾಗತರಾದವರನ್ನು ರಕ್ಷಿಸುವವನು (ಕೃ.ಶಾ., ಪು. 623)

ಶ್ರೀ ಕರ್ನಾಟಮಹಿಷ: ಕರ್ನಾಟಕದ ಅರಸ (H of K, p.322)

ಶೇಷಭುಜಕ್ಷಿತಿರಕ್ಷಣಶೌಂಡಃ: ಆದಿಶೇಷನ ಭುಜದಲ್ಲಿರುವ ಈ ಭೂಮಿಯನ್ನು ರಕ್ಷಿಸುವುದರಲ್ಲಿ ಸಮರ್ಥನಾದವನು (*ಕೃ.ಶಾ.*, ಪು. 127)

ಶೌಚವೀರ: ಶುಭ್ರನಾದ, ಶುಚಿತ್ವವನ್ನು ಕಾಯ್ದುಕೊಂಡ ವೀರ (*ಅದೇ*, ಪು. 111)

ಸಂಗೀತ ಸಾಹಿತ್ಯ ಸಮರಾಂಗಣ ಸಾರ್ವಭೌಮ: ಸಂಗೀತ ಮತ್ತು ಸಾಹಿತ್ಯಗಳಲ್ಲಿ ಸ್ವತಃ ಪರಿಣತನಾಗಿದ್ದನು ಹಾಗೂ ಸಮರಾಂಗಣದಲ್ಲಿ ಪರಕ್ರಮಶಾಲಿಯಾಗಿ ಹೋರಾಡುವವನೂ ಆದವನು. ಈ ಮೇಲಿನ ಮೂರೂ ವಿಷಯಗಳಲ್ಲಿ ನುರಿತವನಾದುದಲ್ಲದೆ ಅವುಗಳ ಸಾರ್ವಭೌಮನಾಮನಾಗಿದ್ದನೆಂಬ ವಿಷಯ ಈ ಬಿರುದಿನಿಂದ ತಿಳಿದುಬರುತ್ತದೆ. (*ಕವಿವಿ ಶಾಸಂ.* 3, ಪು. 80)

ಸಕಲದೇಶಾಧೀಶ್ವರ: ಸಕಲ ದೇಶಗಳ, ಹಲವು ದೇಶಗಳ ಒಡೆಯ (*ಕೃ.ಶಾ.*, ಪು.111)

ಸಕಲಭೂಮೀಶ್ವರ: ಸಕಲ ಭೂಮಿಯ ಒಡೆಯನು; ವಿಶಾಲ ಸಾಮ್ರಾಜ್ಯದ ಅಧಿಪತಿ (*ಅದೇ*, ಪು. 115)

ಸಕಲಲೋಕರಕ್ಷಕ: ಸಕಲ ಲೋಕಗಳನ್ನು ರಕ್ಷಿಸುವವನು (*ಕೃ.ಶಾ.*, ಪು. 623)

ಸಮ್ಯಕ್ತ್ವಚೂಡಾಮಣಿ: ಪರಿಶುದ್ಧವಾದ ಚೂಡಾಮಣಿಯಂತಿರುವವನು (*ಅದೇ*, ಪು.111)

ಸಮಸ್ತದುರ್ಗಗರ್ವಮದಭಂಜನಂ: ಸಮಸ್ತ ದುರ್ಗಗಳನ್ನು ವಶಮಾಡಿಕೊಂಡವನು (*ಕೃ.ಶಾ.*, ಪು. 623)

ಸಮಸ್ತವೇದಶಾಸ್ತ್ರಪುರಾಣಾಗಮಾದಿಪ್ರವರ್ತಕ: ಸಮಸ್ತ ವೇದ, ಶಾಸ್ತ್ರ, ಪುರಾಣ, ಆಗಮ ಮೊದಲಾದವುಗಳಿಗೆ ಪ್ರವರ್ತಕನು, ಆಶ್ರಯ ನೀಡಿದವನು (*ಅದೇ*, ಪು. 623)

ಸರ್ವಭುವನಪ್ರಚಾರ: ಇಡೀ ಭೂಮಂಡಲದಲ್ಲಿ ಹೆಸರಾದವನು (*ಅದೇ*, ಪು.115)

ಸ್ವಾಮಿಕಾರ್ಯದುರಂಧರ: ಸ್ವಾಮಿಕಾರ್ಯವನ್ನು ಪರಿಪಾಲಿಸುವವನು *(ಅದೇ)*

ಹರಿಶ್ಚಂದ್ರಾದಿಚಕ್ರವರ್ತಿಸಮೋಪೇತಸತ್ಯಕೀರ್ತಿಪ್ರತಾಪ: ಹರಿಶ್ಚಂದ್ರ ಮೊದಲಾದ ಚಕ್ರವರ್ತಿಗಳ ಸಮಾನವಾದ ಕೀರ್ತಿ, ಪ್ರತಾಪಗಳನ್ನು ಹೊಂದಿದವನು *(ಅದೇ)*

ಹಿಂದೂರಾಯಸುರತ್ರಾಣ: ಹಿಂದೂ ಅರಸರಲ್ಲಿ ಸುಲ್ತಾನನಾದವನು (*ಅದೇ*, ಪು.108)

ಒಟ್ಟಿನಲ್ಲಿ ಈ ಮೇಲಿನ ಬಿರುದುಗಳು ಕೇವಲ ಅರಸನ ವಿಶೇಷಣಗಳಲ್ಲ. ಅವು ಅಂದಿನ ಸಂಗತಿಗಳನ್ನು ಸಾರುವ ಮಹತ್ವದ ಆಕರಗಳು. ಈ ಬಿರುದುಗಳಲ್ಲಿ ಅನೇಕ ಬಗೆಯ ವರ್ಣನೆ ಹಾಗೂ ಉತ್ಪ್ರೇಕ್ಷೆಗಳಿವೆಯೆಂಬುದು ಸತ್ಯ. ಅಲ್ಲದೆ ಅರಸರಿಗೆ ಅಧೀನರಾದ ಕವಿ, ವಿದ್ವಾಂಸ, ಪಂಡಿತರು ತಮ್ಮ ಅರಸ, ಮಾಂಡಲಿಕ ಮೊದಲಾದವರನ್ನು ಮೆಚ್ಚಿಸಲು ಬಿರುದುಗಳಲ್ಲಿ ಅನೇಕ ಹೊಗಳಿಕೆಗಳಿರುವುದು ಸಹಜ. ಹಾಗೆಯೇ ಬಿರುದುಗಳಲ್ಲಿ ಅವರ ಜೀವನದ ಸಾಧನೆ, ವ್ಯಕ್ತಿತ್ವ, ಶ್ರೇಷ್ಠತೆ, ಪಾಂಡಿತ್ಯ, ಗುಣಸ್ವಭಾವ, ವಿಲಾಸಿಪ್ರಜ್ಞೆ ಮುಂತಾದ ವಿಶೇಷತೆಗಳೂ ಬಿಂಬಿತವಾಗಿವೆ. ಬಿರುದುಗಳಲ್ಲಿ ವ್ಯಕ್ತವಾಗಿರುವ ಭಾಷೆ, ಬಳಸಲಾದ ಪದಪುಂಜಗಳ ವೈವಿಧ್ಯತೆ ಮತ್ತು ಬೆಳವಣಿಗೆಗಳನ್ನು ಗುರುತಿಸಲು ಸಾಧ್ಯವಿದೆ. ಹಾಗಿದ್ದೂ ಅಂತಹ ಬಿರುದುಗಳನ್ನು ಕಾಲ, ದೇಶ, ಭಾಷೆ, ಆಳ್ವಿಕೆ ಮೊದಲಾದ ಸಂಗತಿಗಳಿಗೆ ಅನುಗುಣವಾಗಿ ಬಿಡಿಸಿ, ವಿಮರ್ಶಿಸಿ, ವಿವೇಚಿಸಿ, ಅರ್ಥೈಸಿ ನೋಡಿದಾಗ ಒಳಗಿನ ಸತ್ಯ ಗೋಚರಿಸುತ್ತದೆ. ಆದುದರಿಂದ ಬಿರುದುಗಳನ್ನೂ ಆಯಾ ಕಾಲದ ಅಧ್ಯಯನಗಳಿಗೆ ಮುಖ್ಯ ಆಕರಗಳನ್ನಾಗಿ ಬಳಸಿಕೊಳ್ಳುವ ಅಗತ್ಯತೆ ಇದೆ. ಆ ಮೂಲಕ ಈಗಿರುವ ಚರಿತ್ರೆಗೆ ಪೂರಕವಾಗಿ ಇಲ್ಲವೆ ಅನೇಕ ಹೊಸದಾದ ಮತ್ತು ಅಗೋಚರವಾದ ಸಂಗತಿಗಳನ್ನು ಹೊರಗೆಡಹಲು ಬಿರುದುಗಳು ನೆರವಾಗುವುದರಲ್ಲಿ ಸಂಶಯವಿಲ್ಲ.

ಗ್ರಂಥಸೂಚಿ

1. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು, 1998–2011, ದೇವರಕೊಂಡಾರೆಡ್ಡಿ ಮತ್ತಿತರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕರ್ನಾಟಕ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ
4. ಪರಮಶಿವಮೂರ್ತಿ, ಡಿ.ವಿ.(ಸಂ), ಪ್ರೌಢದೇವರಾಯನ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
5. ಪರಮಶಿವಮೂರ್ತಿ, ಡಿ.ವಿ. (ಸಂ), ಕೃಷ್ಣದೇವರಾಯನ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
6. ಸೋಮಶೇಖರ್, ಎಸ್.ವೈ., ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ, 2009
7. ಕನ್ನಡ ನಿಘಂಟು, 8 ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2010.
8. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1975
9. ಸಂಸ್ಕೃತ–ಕನ್ನಡ ನಿಘಂಟು, ಚಕ್ರವರ್ತಿ ಜಿ.ಎನ್., ಗೀತಾ ಬುಕ್ ಹೌಸ್, ಮೈಸೂರು, 2009
10. ಸಂಸ್ಕೃತ–ಕನ್ನಡ ಶಬ್ದಕೋಶ, ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ, ಬೆಂಗಳೂರು ಪ್ರೆಸ್, ಬೆಂಗಳೂರು, 2012
11. Desai, P.B., A History of Karnataka, Kannada Research Institute, Karnataka University, Darwad,1970

17. ಮಹಮ್ಮದ ಆದಿಲ್‌ಶಾಹ ಮತ್ತು 3ನೇ ಶ್ರೀರಂಗನ ಸಂಬಂಧಗಳು

ಕು. ಮಂಜುಳಾ ಆಚಾರಿ ಮತ್ತು ಮುಸ್ತಾಕ ಅಹಮ್ಮದ ಇನಾಮದಾರ

ಬಹಮನಿ ಮತ್ತು ವಿಜಯನಗರ ಸಮಕಾಲೀನ ಸಾಮ್ರಾಜ್ಯಗಳಾಗಿದ್ದು, ತುಘಲಕ ಸಾಮ್ರಾಜ್ಯ ದಕ್ಷಿಣ ಭಾರತದಿಂದ ಕಣ್ಮರೆಯಾದ ನಂತರ ಈ ನೂತನ ರಾಜ್ಯಗಳು ಅಸ್ತಿತ್ವಕ್ಕೆ ಬಂದು ಬಹುಬೇಗ ವೈರಿಗಳಾದವು. ವಿಜಯನಗರ ಸಾಮ್ರಾಜ್ಯವು ದಕ್ಷಿಣದಲ್ಲಿ ಸರ್ವೋನ್ನತವಾಗಲು ಪ್ರಯತ್ನಿಸುತ್ತಿತ್ತು. ಆದರೆ ಬಹಮನಿ ರಾಜ್ಯವು ಅದಕ್ಕೆ ಅಡ್ಡಿಯಾಗಿತ್ತು. ಆದ್ದರಿಂದ ಎರಡು ರಾಜ್ಯಗಳ ನಡುವೆ ಕೊನೆಯೇ ಇಲ್ಲದ ಯುದ್ಧಗಳು ನಡೆದವು. ಬಹಮನಿ ರಾಜ್ಯವು ಮಾಯವಾದುದಕ್ಕೆ ವಿಜಯನಗರ ಕಾರಣವಲ್ಲ. ಅದರದೇ ಅಂತಃಕಲಹಗಳು, ರಾಜಕೀಯ ಗುಂಪುಗಾರಿಕೆ ಕಾರಣ. ಬಹಮನಿ ರಾಜ್ಯ ಒಡೆದು ಐದು ರಾಜ್ಯ ಅಸ್ತಿತ್ವಕ್ಕೆ ಬಂದವು. ಅದರಲ್ಲಿ ಬಿಜಪುರದ ಆದಿಲ್‌ಶಾಹಿ ರಾಜ್ಯ ಅತ್ಯಂತ ಪ್ರಮುಖ ರಾಜ್ಯವಾಗಿತ್ತು. ಆದಿಲ್‌ಶಾಹಿ ರಾಜ್ಯವು ಆರಂಭದಿಂದ ಹಿಡಿದು 1565ರ ತಾಳಿಕೋಟೆ ಯುದ್ಧದ ನಂತರವು ಇಬ್ಬರ ನಡುವೆ ರಾಜತಾಂತ್ರಿಕ ಸಂಬಂಧಗಳು ಹೊಂದಿದ್ದನ್ನು ನೋಡಬಹುದಾಗಿದೆ. ಈ ಲೇಖನದಲ್ಲಿ ಕೇವಲ ಮಹಮ್ಮದ ಆದಿಲ್‌ಶಾಹ ಮತ್ತು ವಿಜಯನಗರದ ಶ್ರೀರಂಗನ ಸಂಬಂಧಗಳ ಬಗ್ಗೆ ವಿವೇಚಿಸಲಾಗಿದೆ.

ಮಹಮ್ಮದ ಆದಿಲ್‌ಶಾಹ ಮತ್ತು 3ನೇ ಶ್ರೀರಂಗ

ಮಹಮ್ಮದ ಆದಿಲ್‌ಶಾಹನು ಬಿಜಾಪುರ ಸುಲ್ತಾನರಲ್ಲಿಯೇ ಅತ್ಯಂತ ಶ್ರೇಷ್ಠ ಸುಲ್ತಾನಾಗಿದ್ದನು. ಈತನು ಕ್ರಿ.ಶ. 1627ರಿಂದ 1636ರ ವರೆಗೆ ಆಳ್ವಿಕೆ ನಡೆಸಿದನು. ಈತನು ತನ್ನ ದಕ್ಷಿಣದ ದಂಡಯಾತ್ರೆಯನ್ನು ಮಾಡುವ ಸಮಯದಲ್ಲಿ ಶ್ರೀರಂಗನ ಜೊತೆ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸಿಕೊಂಡು ದಕ್ಷಿಣ ಪ್ರದೇಶದ ಮೇಲೆ ದಾಳಿ ಮಾಡಿದ್ದನ್ನು ಈ ಕೆಳಗಿನಂತೆ ಗುರುತಿಸಬಹುದು.

ಕ್ರಿ.ಶ. 1636ರಲ್ಲಿ ಆದಿಲ್‌ಶಾಹನು ಪೆನುಗೊಂಡದ ಮೇಲೆ ಕಣ್ಣು ಹಾಕಿ, ಅದನ್ನು ಗೆಲ್ಲಲು ರಣದುಲ್ಲಾಖಾನನನ್ನು ಕಳಿಸಿದನು. ಮುಂದೆ ರಣದುಲ್ಲಾಖಾನನು ಶ್ರೀರಂಗನ ಜೊತೆ ಸೇರಿ, ಕರ್ನಾಟಕದ ಸಣ್ಣಪುಟ್ಟ ರಾಜರುಗಳ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದರು. ಇದು ನಡೆದದ್ದು 1637ರಲ್ಲಿ.[1] ಮುಂದೆ 1639ರಲ್ಲಿ ಬಿಜಾಪುರದವರು ಬೆಂಗಳೂರಿನವರೆಗೂ ಹೋದರು. ಆಗ ವೆಂಕಟನು ಬಹು ಪ್ರಯಾಸದಿಂದ ಸಂಧಾನ ಮಾಡಿಕೊಂಡನು.[2]

ಮತ್ತೆ 1641ರ ಮೇ ತಿಂಗಳಿನಲ್ಲಿ, ಶ್ರೀರಂಗನು ರಣದುಲ್ಲಾಖಾನನ ಜೊತೆಗೂಡಿ ವೆಂಕಟಪ್ಪನ ಎರಡು ಕೋಟೆಗಳನ್ನು ಗೆದ್ದುಕೊಂಡನು. ಈಗ ಬಿಜಾಪುರದವರಿಗೆ ವಿಜಯನಗರದ ಸಾಮ್ರಾಜ್ಯಕ್ಕೆ ಹಾದಿಯು ಸುಗಮವಾಯಿತು. ಶ್ರೀರಂಗನ ಜೊತೆಗೆ ಸೇರಿಕೊಂಡು ಅವರು ವೆಲ್ಲೂರಿನ ಮೇಲೆ ದಾಳಿ ಮಾಡಲು ಹೊರಟರು. ಆಗ ವೆಂಕಟನ ಸಹಾಯಕ್ಕೆ ಬಂದವರು ಮಧುರೆ, ತಂಜಾವೂರ ಮತ್ತು ಜಿಂಜಿಯ ನಾಯಕರುಗಳು. ಅವರೆಲ್ಲರೂ ಸೇರಿ ಬಿಜಾಪುರದವರನ್ನು ತಡೆದರು. ಇದು ವೆಂಕಟನಿಗೆ ಸ್ವಲ್ಪ ತಾತ್ಕಾಲಿಕವಾಗಿಯಾದರೂ ನೆಮ್ಮದಿಯನ್ನುಂಟುಮಾಡಿತು. ನಂತರ ಆ ಕೋಟೆಗಳನ್ನು ಲೂಟಿ ಮಾಡಿದಾಗ ಸಿಕ್ಕ ಅನೇಕ ವಸ್ತುಗಳು, ಸಂಪತ್ತನ್ನು ರಣದುಲ್ಲಾಖಾನನು ತೆಗೆದುಕೊಂಡು ಕೆಲವು ಕೋಟೆಗಳನ್ನು ಶ್ರೀರಂಗನಿಗೆ ಕೊಟ್ಟನು.[3]

ಆದರೆ ಶ್ರೀರಂಗನು ಬಿಜಾಪುರದವರೊಂದಿಗಿನ ಸ್ನೇಹವನ್ನು ಬಹಳ ದಿನಗಳವರೆಗೆ ಇಟ್ಟುಕೊಳ್ಳಲಿಲ್ಲ. ತನ್ನ ಸ್ವಾರ್ಥಸಾಧನೆಯ ಕಡೆಗೆ ಹೆಚ್ಚು ಗಮನವನ್ನು ಕೊಟ್ಟನು. 3ನೇ ವೆಂಕಟನು ಅವನ ದೊಡ್ಡಪ್ಪನಾಗಿದ್ದನು. ಅವನಿಗೆ

ಮಕ್ಕಳಿರಲಿಲ್ಲ. ಅವನು ನಾರಾಯಣವರಂನಲ್ಲಿ ಸಾಯುತ್ತಿದ್ದಾನೆಂಬ ಸುದ್ದಿಯನ್ನು ಕೇಳಿದ ಕೂಡಲೇ, ಆ ಸಿಂಹಾಸನವನ್ನೇರಲು ಮನಸ್ಸು ಮಾಡಿದ. ಆದ್ದರಿಂದ ಬಿಜಾಪುರದವರನ್ನು ಬಿಟ್ಟು ತನ್ನ ವಂಶಸ್ಥರ ರಾಜ್ಯವನ್ನು ರಕ್ಷಿಸಲು ಮುಂದಾದನು. 29 ಅಕ್ಟೋಬರ್ 1642ರಂದು ತಾನೆ ತನ್ನನ್ನು 3ನೇ ಶ್ರೀರಂಗ ಎಂದು ಘೋಷಿಸಿಕೊಂಡು ರಾಜನಾದನು.[4]

ಕರ್ನಾಟಕವನ್ನು ಆಕ್ರಮಿಸಿಕೊಳ್ಳುವ ಸಂಬಂಧದಲ್ಲಿ ಬಿಜಾಪುರ ಮತ್ತು ಗೊಲ್ಕೊಂಡದವರ ನಡುವೆ ಸಾಕಷ್ಟು ವಿರಸಗಳಿದ್ದವು. ಇವನು ಅದರ ಲಾಭವನ್ನು ಪಡೆಯಲೆತ್ನಿಸಿದನು. ಅವನು ಆದಿಲ್‌ಶಾಹನಿಗೆ ಕೆಲವು ಆನೆಗಳನ್ನು ಬಹುಮಾನವಾಗಿ ಕೊಟ್ಟು ಗೋಲ್ಕೊಂಡದವರ ವಿರುದ್ಧ ತನಗೆ ಸಹಾಯ ಮಾಡಿದರೆ, 15 ಲಕ್ಷ ಪಗೋಡಾಗಳನ್ನು ಕೊಡುವುದಾಗಿ ಹೇಳಿದನು. 1643ರ ಜೂನ್ ತಿಂಗಳಲ್ಲಿ ಆದಿಲ್‌ಶಾಹನು 6000 ಕುದುರೆಗಳನ್ನು ಮತ್ತು 20,000 ಸೈನಿಕರನ್ನು ಅವನ ಸಹಾಯಕ್ಕೆ ಕಳಿಸಿದನು. ಈ ಸಹಾಯದಿಂದ ಶ್ರೀರಂಗನು ಉದಯಗಿರಿಗೆ ದಂಡೆತ್ತಿ ಹೋಗಿ ಗೋಲ್ಕೊಂಡದ ಸೈನ್ಯವನ್ನು ಅಲ್ಲಿನ ಕೋಟೆಯಿಂದ ಓಡಿಸಿದನು. ಇದು ಆದದ್ದು 1644ರಲ್ಲಿ. ಅವರು ಮುನ್ನುಗ್ಗಿ ಬರುವುದನ್ನು ತಡೆಹಿಡಿದನು. ಅವನಿಗೆ 'ನಾಯಕ'ರು ಬಹಳ ತೊಂದರೆ ಕೊಡುತ್ತಿದ್ದರು. ಅದನ್ನು ನಿವಾರಿಸಿಕೊಳ್ಳುವ ಸಲುವಾಗಿ ಬಿಜಾಪುರದವರ ಸಹಾಯವನ್ನು ಕೇಳಿದನು. ಆಗ ಅವರಿಬ್ಬರೂ ಸೇರಿ ಯುದ್ಧ ಮಾಡುವುದೆಂದೂ ಯಾವುದಾದರೂ ಕೋಟೆಯನ್ನು ವಶಪಡಿಸಿಕೊಂಡರೆ, ಅದರಲ್ಲಿನ ಜನರ ಆಸ್ತಿಗಳನ್ನು ಬಿಜಾಪುರದವರು ತೆಗೆದುಕೊಳ್ಳಬೇಕೆಂದು, ಕೋಟೆ ಮುಂತಾದ ಸ್ಥಿರ ಆಸ್ತಿಗಳನ್ನು ಶ್ರೀರಂಗನು ತೆಗೆದುಕೊಳ್ಳಬೇಕೆಂದು ತಮ್ಮ ತಮ್ಮಲ್ಲೇ ಕರಾರು ಮಾಡಿಕೊಂಡರು. ಇಂತಹ ಕರಾರುಗಳಿಂದ ಶ್ರೀರಂಗನು ತನ್ನ ರಾಜ್ಯವು ಪರರ ಪಾಲಾಗದಂತೆ ಉಳಿಸಿಕೊಂಡನು. ಇದು ನಾಯಕರನ್ನು ಬಗ್ಗು ಬಡಿಯುವ ತಂತ್ರವಾಗಿತ್ತು ಮತ್ತು ಅದರಲ್ಲಿ ಯಶಸ್ವಿಯೂ ಆದನು. ಶ್ರೀರಂಗನು ನಾಯಕರು, ತಂಜಾವೂರು ಮತ್ತು ಮಧುರೆಯಿಂದ ವಶಪಡಿಸಿಕೊಂಡಿದ್ದ ಹಣ ಮುಂತಾದವುಗಳ ದೊಡ್ಡ ಪಾಲನ್ನು ತನಗೆ ಸಹಾಯ ಮಾಡಿದ್ದಕ್ಕೆ ಪ್ರತಿಯಾಗಿ ಬಿಜಾಪುರದವರಿಗೆ ಕೊಟ್ಟನು.[5]

ಆದರೆ ಶ್ರೀರಂಗನು ಬಿಜಾಪುರದೊಂದಿಗೆ ಮಾಡಿಕೊಂಡಿದ್ದ ಕರಾರುಗಳಂತೆ ನಡೆದುಕೊಳ್ಳಲಿಲ್ಲ. ಅವನು ಸ್ಥಳೀಯ ರಾಜರುಗಳೊಡನೆ ಸೇರಿ, ಬಿಜಾಪುರದವರ ವಿರುದ್ಧ ಯೋಚಿಸಲು ಪ್ರಯತ್ನಿಸುತ್ತಿದ್ದನು. ಬಿಜಾಪುರ ಮತ್ತು ಗೋಲ್ಕೊಂಡದವರು ಒಟ್ಟುಗೂಡಿ ಕರ್ನಾಟಕವನ್ನು ಗೆದ್ದು ಹಂಚಿಕೊಳ್ಳಬೇಕೆಂದು ಉಪಾಯಗಳನ್ನು ಮಾಡುತ್ತಿದ್ದರು. ಅವರಿಬ್ಬರ ಸೈನ್ಯಗಳು ಕೂಡಿಕೊಂಡು 1644ರಲ್ಲಿ ಶ್ರೀರಂಗನ ರಾಜ್ಯ ಕಡೆಗೆ ಧಾವಿಸಿದವು. ಶ್ರಿರಂಗನಿಗೆ ಎರಡು ಸೈನ್ಯದ ಜೊತೆಗೆ ಯುದ್ಧ ಮಾಡುವುದು ಕಷ್ಟವಾಗಿತ್ತು. ಮತ್ತೊಮ್ಮೆ ಬಿಜಾಪುರದ ರಾಜನನ್ನು ಬೇಡಿಕೊಂಡು, 50 ಲಕ್ಷ ಹೊನ್ನುಗಳನ್ನು ಕೊಡುವುದಾಗಿ ಹೇಳಿದನು. ಆದರೆ ರಣದುಲ್ಲಾಖಾನ ಅದಕ್ಕೆ ಬೆಲೆ ಕೊಡಲಿಲ್ಲ.[6]

ರುಸ್ತಂ-ಇ-ಜಮನ್ (ರಣದುಲ್ಲಾಖಾನ) ಮುಂದುವರೆಯುತ್ತಿದ್ದಾಗ, ಕ್ರಿ.ಶ. 1646ರ ಜೂನ್‌ನಲ್ಲಿ ಆದಿಲ್‌ಶಾಹನು ಮುಸ್ತಫಾಖಾನನ ತುಕ್ಕಡಿಯನ್ನು ಅಲ್ಲಿಂದ ತೆಗೆದು ಶ್ರೀರಂಗನ ಕೆನರಾ ಪ್ರದೇಶದ ಮೇಲೆ ತೆಗೆದುಕೊಂಡು ಹೋಗಲು ಹೇಳಿದನು. ಮುಸ್ತಫಾಖಾನನು ಮಲಪ್ರಭಾ ನದಿ ದಡದ ಮೇಲಿದ್ದ ಗುತ್ತಿಗೆ ಬಂದನು. ಆಗ ದಾರಿಯಲ್ಲಿ ಸಿಕ್ಕ ಬಕರಗುಂಡಾವನ್ನು ಸ್ವಾಧೀನಕ್ಕೆ ತೆಗೆದುಕೊಂಡನು. ನಂತರ ಅವನು ಗದಗ-ಲಕ್ಷ್ಮೇಶ್ವರದ ಮೂಲಕ ಹೊನ್ನಾಳಿಗೆ ಬಂದನು.[7] ಅಲ್ಲಿ ಅವನು ಅಸದಖಾನ ಮತ್ತು ಷಾಹಜಿಯನ್ನು 30ನೇ ಅಕ್ಟೋಬರ್‌ರಂದು ಭೇಟಿಯಾದನು. ಸಕ್ರೇಪಟ್ಟಣದಲ್ಲಿ ಬಿಜಾಪುರ ಸೈನ್ಯದೊಂದಿಗೆ ಈ ಕೆಳಗಿನ ಸೈನ್ಯಗಳು ಸೇರಿಕೊಂಡವು. ಶಿವಪ್ಪ ನಾಯಕನ ಸೈನ್ಯ, ದೊಡ್ಡನಾಯಕನ ಸೈನ್ಯ, ಅಬಾಜಿ ಘಾಟ್ಗೆ ಮುಂತಾದವರು, ಅವರ ಜೊತೆಗೆ ಲಕ್ಷ್ಮೇಶ್ವರ, ಕೊಪ್ಪಳ ಮತ್ತು ಬಾಲಾಜಿ ಹನುಮಂತರಾಯ ಮುಂತಾದ ದೇಸಾಯಿಗಳ ಸೈನ್ಯ ಕೂಡಿಕೊಂಡವು.[8]

ಹಾಗೇ ಮುಂದುವರಿಯುತ್ತಾ ಹೋಗಿ, ಮುಸ್ತಫಾಖಾನನು ಶಿವಗಣವನ್ನು ತಲುಪಿದನು. ಶ್ರೀರಂಗ

ರಾಯಭಾರಿಯಾಗಿದ್ದ ವೆಂಕಯ್ಯ ಮತ್ತು ಸೋಮಾಜಿ ಅನ್ನುವರು ಮುಸ್ತಫಾಖಾನನ ಬರುವಿಕೆಗಾಗಿ ಕಾದಿದ್ದರು. ಅವನು ಬಂದ ನಂತರ ಅವನ ಮುಂದೆ, ರಾಜಿಗೆ ಸಂಬಂಧಿಸಿದಂತೆ ಮಾತುಕತೆಗಳ ಪ್ರಸ್ತಾಪವನ್ನು ಎತ್ತಿದನು. ಅವನು ಆ ಮಾತುಗಳಿಗೆ ಬೆಲೆ ಕೊಡದೆ ವೆಲ್ಲೂರಿನ ಕಡೆಗೆ ಮುನ್ನಗ್ಗಲು ಪ್ರಯತ್ನಿಸಿದ. ಶ್ರೀರಂಗನು ಯುದ್ಧದಿಂದ ಸರಿದರೆ ತಾನು ಸರಿಯುವುದಾಗಿ ಸೋಮಾಜಿಗೆ ಹೇಳಿದನು. ಶ್ರೀರಂಗನನ್ನು ವೆಲ್ಲೂರಿಗೆ ಹೋಗುವಂತೆ ಮಾಡುವುದಾಗಿ ಸೋಮಾಜಿಯು ಹೇಳಿದನು.

ವೆಲ್ಲೂರಿಗೆ ಬಂದ ಕೂಡಲೇ ಯುದ್ಧಕ್ಕೆ ತಯಾರಾಗಬೇಕೆಂದು ರಾಯನಿಗೆ ಸೋಮಾಜಿಯು ಹೇಳಿದನು. ಅಷ್ಟೇ ಅಲ್ಲ ಕಣಿವೆಯ ಮಾರ್ಗವನ್ನು ಮುಚ್ಚಬೇಕೆಂದೂ ಹೇಳಿದನು. ಈ ವಿಶ್ವಾಸ ದ್ರೋಹದಿಂದ ಮುಸ್ತಫಾಖಾನನು, ಬೇರೆ ಮಾರ್ಗದ ಮೂಲಕ ಜಗದೇವರಾಯನ ರಾಜ್ಯವನ್ನು ಪ್ರವೇಶಿಸಿದನು.[9]

ರಾಯನು ಕಣಿವೆಯ ಮಾರ್ಗವನ್ನು ರಕ್ಷಿಸಿಕೊಳ್ಳಲು ಮುಂದಾದನು. ಮುಸ್ತಫಾಖಾನನು ಆಗ ಬೆಂಗಳೂರ ಹತ್ತಿರ ಇದ್ದನು. 1646ರ ಡಿಸೆಂಬರ್ 21ರಂದು ಅಸದಖಾನನೊಡನೆ ಒಂದು ದೊಡ್ಡ ಸೈನ್ಯವನ್ನು ತನಗಿಂತ ಮುಂಚೆ ಕಳಿಸಿದನು. ಆ ಸೈನ್ಯವು ಜಗದೇವನ ರಾಜ್ಯದಲ್ಲಿ ನುಗ್ಗಿತು ಮತ್ತು ಆ ರಾಜ್ಯದ ಒಳಗೆ ಮಾಸ್ತಿಯ ಹತ್ತಿರ, ಒಂದು ಕೆರೆಯ ಬಳಿ ಇಪ್ಪತ್ತು ದಿನಗಳ ಕಾಲ ಬೀಡು ಬಿಟ್ಟಿತು. ಆಗ ರಾಯನು ಒಂದು ದೊಡ್ಡ ಸೈನ್ಯದೊಂದಿಗೆ ಗುರಿತಾತನ್ ಮತ್ತು ಕೃಷ್ಣಗಿರಿಯ ಮಾರ್ಗವಾಗಿ ಈ ಅಸದಖಾನನ ಮತ್ತು ಷಾಹಜಿಯ ಸೈನ್ಯವನ್ನು ಎದುರಿಸಿದನು.[10]

ಬಿಜಾಪುರದ ಮೇಲೆ ಭೀಕರವಾದ ಯುದ್ಧವನ್ನು ರಾಯನು ತನ್ನ ಸೈನ್ಯದೊಂದಿಗೆ ಮಾಡಿದನು. ಆದರೆ ಕೊನೆಗೆ ಆ ಯುದ್ಧದಲ್ಲಿ ಬಿಜಾಪುರದವರು ಗೆದ್ದರು. ಮುಸ್ತಫಾಖಾನ್, ಇನ್ನೂ ಮುಂದೆ ಹೋಗಿ, ಕೃಷ್ಣಗಿರಿಯನ್ನು 30 ಜನವರಿ 1647ರಂದು ತಲುಪಿದನು. ಸ್ವಲ್ಪ ಕಾಲ ಅದನ್ನು ಮುತ್ತಿಗೆ ಹಾಕಿ, ನಂತರ ಅದನ್ನು ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಬಿಜಾಪುರದವರು ಜಗದೇವನ ರಾಜಧಾನಿಯ ಕಡೆಗೆ ಹೊರಟು ಭೀಕರ ಕಾಳಗದ ನಂತರ ರಾಜಧಾನಿಯನ್ನು ವಶಪಡಿಸಿಕೊಂಡರು. ನಂತರ ಬಿಜಾಪುರ ಸೈನ್ಯ ದೇವದುರ್ಗದ ಕಡೆಗೆ ಸಾಗಿ ಏಳು ಫೆಬ್ರವರಿ 1646ರಂದು ಅದನ್ನು ವಶಪಡಿಸಿಕೊಂಡಿತು. ನಂತರ ಅವರು ಆನಂದಬಾರ, ಅಮರಾವತಿ ಮತ್ತು ಗೋರಿಯತಮ್ ಮಾರ್ಗವಾಗಿ ಹೋಗಿ ಉರಂಜಪುರವನ್ನು ಹಿಡಿದುಕೊಂಡರು. ಮುಂದೆ ಅವರು ವೆಲ್ಲೂರಿಗೆ ಹೋದರು. ಇಲ್ಲೂ ಒಂದು ದೊಡ್ಡ ಯುದ್ಧವೇ ಆಯಿತು, ಇದರಲ್ಲೂ ಬಿಜಾಪುರದವರೇ ಗೆದ್ದರು. ಕೊನೆಗೆ ರಾಯನು ಶರಣಾಗತನಾಗಿ 50 ಲಕ್ಷ ಹೊನ್ನುಗಳನ್ನು ಮತ್ತು 150 ಆನೆಗಳನ್ನು ಯುದ್ಧದ ಖರ್ಚಿನ ಬಾಬತ್ತು ಎಂದು ಕೊಟ್ಟನು. ವೆಲ್ಲೂರಿನಲ್ಲಿ ಒಂದು ತಿಂಗಳು ಇದ್ದ ನಂತರ, ಸೈನ್ಯ ತನ್ನ ವಿಜಯ ಯಾತ್ರೆಯನ್ನು ಮುಂದುವರೆಸಿತು. ವೆಲ್ಲೂರಿನಿಂದ ಅದು ವಾಪಸ್ಸು ಹೊರಟಿತು. ಆಗ ಅದು ಗಂಜಾತಂ ಮಾರ್ಗವಾಗಿ ಮುಸ್ತಫಾಖಾನನ ನೇತೃತ್ವದಲ್ಲಿ ಸಾಗುತ್ತಿತ್ತು. ನಂತರ ಮಾರ್ಚ್ 1647ರಲ್ಲಿ ಶ್ರೀರಂಗನ ರಾಜ್ಯದ ಈ ಕೆಳಗೆ ಕಾಣಿಸಿದ ಪ್ರದೇಶಗಳನ್ನು ಹಿಡಿದುಕೊಂಡಿತು.[57] ಅವುಗಳೆಂದರೆ ಆಂಬೋರ, ಕನ್ನಕುಟ್ಟಿ, ತಿರುಪತ್ತೂರ, ಕಾವೇರಿಪಟ್ಣ, ಹಸನ ರಾಯದುರ್ಗ, ಕಾಯಕಪಿರಿ, ರತ್ನಪ್ರಿ, ಮೇಲಪ್ರಿ, ಅರ್ಜುನಕೋಟ ಮತ್ತು ಧಲಿಂಕೋಟ.

1648ರಲ್ಲಿ ಮೈಸೂರಿನ ರಾಜ ಮತ್ತು ಮಧುರೆಯ ನಾಯಕ ಒಂದಾದಾಗ ಅವರ ಜೊತೆಗೆ ಮುಸ್ತಫಾಖಾನನು ಸೇರಿಕೊಂಡನು (ಈ ವೇಳೆಗೆ ಅವನು ಬಿಜಾಪುರದವರ ಸೇವೆಯನ್ನು ತೊರೆದಿದ್ದ). ಆಗ ಗೋಲ್ಕೊಂಡದವರು, ದಕ್ಷಿಣದಲ್ಲಿ ಮುನ್ನುಗ್ಗುತ್ತಿದ್ದರು. ಇವರುಗಳೆಲ್ಲರೂ ಸೇರಿಕೊಂಡು ಗೋಲ್ಕೊಂಡದವರನ್ನು ಎದುರಿಸಿದರು. ಆಗ ಆದ ಭೀಕರ ಕದನದಲ್ಲಿ, ಗೋಲ್ಲಂಡದವರು ವಿಜಯಿಯಾದರು. ಕೊನೆಗೆ ಶ್ರಿರಂಗನು ಪ್ರತಿರೋಧವನ್ನು ಬಿಟ್ಟು, ತಂಜಾವೂರಿನಲ್ಲಿ ಆಶ್ರಯ ಪಡೆದನು. ಆದರೆ ಮುಂದೆ ಬಿಜಾಪುರದವರು ಜಿಂಜಿ ಮತ್ತು ತಂಜಾವೂರನ್ನು ವಶಪಡಿಸಿಕೊಂಡರು (ಇದು

ಆದದ್ದು 1649ರಲ್ಲಿ). ನಂತರ ಶ್ರೀರಂಗನು ಮೈಸೂರಿಗೆ ಬಂದು ಕೆಳದಿಯವರ ಸಹಕಾರದಿಂದ ಮತ್ತೆ ವೆಲ್ಲೂರನ್ನು ವಶಪಡಿಸಿಕೊಳ್ಳುವ ಕನಸನ್ನು ಕಾಣುತ್ತಿದ್ದನು.[11]

ಮುಂದೆ 1652ರಲ್ಲಿ ಕರ್ನಾಟಕವನ್ನು ಭಾಗ ಮಾಡಿಕೊಳ್ಳುವ ವಿಷಯದಲ್ಲಿ ತಕರಾರು ಆಗಿ, ಬಿಜಾಪುರ ಮತ್ತು ಗೋಲ್ಕೊಂಡದವರು ಯುದ್ಧಕ್ಕೆ ಇಳಿದರು. ಆ ಸಮಯದಲ್ಲಿ ಶ್ರೀರಂಗನು ಬಿಜಾಪುರದವರಿಂದ ತನ್ನ ಕೆಲವು ಪ್ರದೇಶಗಳನ್ನು ಪಡೆದುಕೊಂಡನು. ಇದರಿಂದ ಸ್ವಲ್ಪ ಪ್ರೋತ್ಸಾಹಿತನಾಗಿದ್ದ ಶ್ರೀರಂಗನು 1654ರಲ್ಲಿ ಒಂದು ದೊಡ್ಡ ಸೈನ್ಯವನ್ನು ಕಟ್ಟಿ ಬಿಜಾಪುರದವರನ್ನು ಹೊರಗೆ ಓಡಿಸಲು ಉದ್ಯುಕ್ತನಾದನು. ಆಗ ಖಾನ ಮಹಮ್ಮದನು ಶ್ರೀರಂಗನನ್ನು ಹತ್ತಿಕ್ಕಿ ಬಿಜಾಪುರದ ಅಧಿಕಾರವನ್ನು ಪುನಃ ಸ್ಥಾಪಿಸುವುದರ ಸಲುವಾಗಿ ವೆಲ್ಲೂರಿಗೆ ಹೋದನು. ಖಾನ ಮಹಮ್ಮದ ಬರುತ್ತಿರುವ ಸುದ್ದಿಯನ್ನು ಕೇಳಿ ಶ್ರೀರಂಗನು ಸುರಕ್ಷಿತ ಸ್ಥಳಕ್ಕೆ ಓಡಿಹೋದನು. ವೆಲ್ಲೂರ ಪತನವಾಯಿತು. ಖಾನ ಮಹಮ್ಮದನು ಚಂದ್ರಗಿರಿ ಕೋಟೆಯನ್ನು ಬಿಟ್ಟುಕೊಡಬೇಕಾಯಿತು. ಅದರ ಜೊತೆಗೆ ಇನ್ನೂ ಕೆಲವು ಪ್ರದೇಶಗಳನ್ನು ಶ್ರೀರಂಗನಿಗೆ ಕೊಡಗಬೇಕಾಯಿತು. 1656ರಲ್ಲಿ ಶ್ರೀರಂಗನು ಮೀರ ಜಮ್ಲಾನ ಮೂಲಕ ಬಿಜಾಪುರದವರನ್ನು ಸದೆಬಡಿಯಲು ಔರಂಗಜೇಬನ ಸಹಾಯವನ್ನು ಬೇಡಿದನು. ಔರಂಗಜೇಬನೊಡನೆ ಯುದ್ಧವನ್ನು ಮಾಡಬಹುದಾದ ಸ್ಥಿತಿಯನ್ನು ಉಂಟುಮಾಡುತ್ತಿರುವುದಕ್ಕೆ ಶ್ರೀರಂಗನಿಗೆ ಬುದ್ಧಿ ಕಲಿಸಬೇಕೆಂದು ಆದಿಲ್ ಷಾಹನು ತನ್ನ ಗೌವರ್ನರಗೆ ಆಜ್ಞಾಪಿಸಿದನು. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತು ಎಂಬುದು ಅಷ್ಟು ಸ್ಪಷ್ಟವಾಗಿಲ್ಲ.

ಆದಿಲ್‌ಶಾಹನು ಶ್ರೀರಂಗನ ಬಗ್ಗೆ ಅಷ್ಟೊಂದು ದ್ವೇಷಭಾವವನ್ನು ಹೊಂದಿದ್ದರೂ, ಬಿಜಾಪುರದ ಕೆಲವು ಅಧಿಕಾರಿಗಳು (ಉದಾ: ಷಾಜಿ) ಶ್ರೀರಂಗನಿಗೆ ಸಹಾಯ ಮಾಡುತ್ತಲೇ ಇದ್ದರು.[13] ಶ್ರೀರಂಗನ ಮರಣಾನಂತರ (1672) ಬಿಜಾಪುರ–ವಿಜಯನಗರದ ಸಂಬಂಧಗಳು ಮುಚ್ಚಿ ಹೋದವು.

ಅಡಿ ಟಿಪ್ಪಣಿಗಳು

1. Nayeem, M.A., 1975, *External Relations of the Bijapur Kingdom,* Bright Publication, p. 128.
2. *Ibid.*
3. *Ibid.*
4. *Ibid.*
5. Nilakanta Sastri and Venkataramanayya N., 1946, *Further Sources of Vijayanagara History,* p. 350.
6. *Ibid.*
7. Nayeem, M.A., 1975, *External Relations of the Bijapur Kingdom,* Bright Publication, p. 129.
8. Muhammad Nama, p. 10.
9. Nayeem, M.A., 1975, *External Relations of the Bijapur Kingdom,* Bright Publication, p. 130.
10. *Ibid.*
11. Nilakanta Sastri and Venkataramanayya N., 1946, *Further Sources of Vijayanagara History,* p. 361.
12. *Ibid.,* p. 365.
13. *Ibid.,* p. 367.

18. ವಿಜಯನಗರ ಹಾಗೂ ಕನಕಗಿರಿಯ ಸಂಬಂಧ

ಡಾ. ಶರಣಬಸಪ್ಪ ಕೋಲ್ಕಾರ

"ಕಣ್ಣಿದ್ದವರು ಕನಕಗಿರಿಯನ್ನು ನೋಡಬೇಕು. ಕಾಲಿದ್ದವರು ಹಂಪಿಯನ್ನು ನೋಡಬೇಕು" ಎಂಬ ನಾಣ್ಣುಡಿ ಹಂಪಿ ಪರಿಸರದಲ್ಲಿ ಪ್ರಚಲಿತವಾಗಿದೆ. ಇದು ಕನಕಗಿರಿಯ ಪ್ರೇಕ್ಷಣೀಯತೆಯನ್ನು ಮತ್ತು ಹಂಪಿಯ ವಿಸ್ತಾರತೆಯನ್ನು ಧ್ವನಿಸುತ್ತದೆ. ಜೊತೆಗೆ ಪರಸ್ಪರ ಎರಡೂ ಸ್ಥಳಗಳ ಸಂಬಂಧವನ್ನು ಸೂಚಿಸುತ್ತದೆ. ಈ ಸಂಬಂಧ ವೈಶಿಷ್ಟ್ಯಪೂರ್ಣವಾದುದು. ಸಾಮ್ರಾಜ್ಯ ಮಟ್ಟದಲ್ಲಿ ಹಂಪಿಯೆಂತೋ (ಪಂಪಾಕ್ಷೇತ್ರ), ಪ್ರಾದೇಶಿಕ ಮಟ್ಟದಲ್ಲಿ ಕನಕಗಿರಿ (ಕನಕಾಚಲ ಕ್ಷೇತ್ರ) ಅಂತೆ. ಹಂಪಿ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಕಲಾತ್ಮಕ ರಂಗಗಳ ವಿಕಾಸಕ್ಕೆ ಸ್ಫೂರ್ತಿಯ ನೆಲೆಯಾಗಿದ್ದಂತೆ ಕನಕಗಿರಿಯೂ ಕೂಡ ಹಂಪಿಯ ಪ್ರತಿರೂಪ. ಹಂಪಿಯಂತೆ ಕನಕಗಿರಿಯು ಕೂಡಾ ವಿಜಯನಗರದ ಮಾಂಡಲಿಕ ಗುಜ್ಜಲವಂಶದ ಪಾಳೆಯಗಾರರ ಅದ್ಭುತ ಕೇಂದ್ರವಾಗಿತ್ತು. ಅದು ವಿರೂಪಾಕ್ಷ ಕ್ಷೇತ್ರವಾಗಿದ್ದರೆ ಇದು ಲಕ್ಷ್ಮೀನರಸಿಂಹ ಕ್ಷೇತ್ರ. ವಿಶೇಷವೆಂದರೆ ದರ್ಶನಾರ್ಥಿಗಳಾಗಿ ಹಂಪಿಗೆ ಬಂದ ಅನೇಕ ದಾಸವರೇಣ್ಯರು ಕನಕಗಿರಿಗೆ ಬಾರದೇ ಇಲ್ಲ. ಇನ್ನು ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯ ವಿಜಯನಗರದ ಉತ್ಕೃಷ್ಟ ಹಾಗೂ ಪರಿಪೂರ್ಣ ಕಲಾಶೈಲಿಯಲ್ಲಿದ್ದು, ಹಂಪಿಯ ದೇವಾಲಯಗಳನ್ನು ನೆನಪಿಸುತ್ತದೆ. ಹೀಗೆ ಕನಕಗಿರಿ ಹಾಗೂ ಹಂಪಿಯ ಮಧ್ಯ ಹಲವು ಸಾಮ್ಯತೆಗಳಿವೆ. ಈ ಸಂಬಂಧದಲ್ಲಿ ಕನಕಗಿರಿಯ ಮೇಲೆ ಹಂಪಿಯ ಪ್ರಭಾವವನ್ನು ಹೆಚ್ಚಾಗಿ ಗುರುತಿಸಬಹುದು. ಹೀಗೆ ಎರಡರ ನಡುವಣ ಸಂಬಂಧಗಳ ವಿವಿಧ ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಭೌಗೋಳಿಕ ಸಂಬಂಧ

ಹಂಪಿ–ವಿಜಯನಗರ ಹಾಗೂ ಕನಕಗಿರಿಯ ಮಧ್ಯ ಭೌಗೋಳಿಕವಾಗಿಯೂ ಸಂಬಂಧವಿದೆ. ಸ್ಕಂದಪುರಾಣದ ತುಂಗಾಮಹಾತ್ಮೆಯಲ್ಲಿ ಕನಕಗಿರಿಯ ಸ್ಥಾನ ನಿರ್ದೇಶನವನ್ನೂ ಸೂಚಿಸಲು ಹಂಪಿಯನ್ನೇ ಆಧಾರವಾಗಿರಿಸಿಕೊಳ್ಳಲಾಗಿದೆ. ಅಲ್ಲಿ "ವಿರೂಪಾಕ್ಷಾತ್ಕೋ ಷಟ್ಕಸದನಂ ಸುಂದರಾಕೃತಿ" ಎಂದು ಅಂದರೆ ವಿರೂಪಾಕ್ಷ ಕ್ಷೇತ್ರ ಅಥವಾ ಹಂಪಿಯಿಂದ 20 ಮೈಲು ದೂರದಲ್ಲಿ ನರಸಿಂಹ ಲಿಂಗಾಕಾರದಲ್ಲಿ (ಸುಂದರಾಕೃತಿ) ಇದ್ದಾನೆಂದು ಹೇಳಿದೆ.[1]

ಕನಕಗಿರಿಯು ಹಂಪಿಯ (ಪಂಪಾಕ್ಷೇತ್ರದ) ಉತ್ತರದಿಕ್ಕಿನ ತೀರ ಬಾಹ್ಯ ಗಡಿಯಾಗಿತ್ತೆಂದು ಕಮಲಾಪುರ ಕೈಫಿಯತ್ತಿನಲ್ಲಿ[2] ವಿವರಣೆ ಇದೆ. ಅದರ ಪ್ರಕಾರ ಹಂಪಿ ಅಥವಾ ಪಂಪಾಕ್ಷೇತ್ರವು, ವಿಜಯನಗರವು 1) ಕೋಟೆ ರಕ್ಷಿತ ವಲಯ ಅಥವಾ ಕೇಂದ್ರ ವಲಯ, 2) ನೈಸರ್ಗಿಕ ಬೆಟ್ಟ ರಕ್ಷಿತ ವಲಯ ಅಥವಾ ಕೇಂದ್ರ ನೆರೆ ವಲಯ ಮತ್ತು 3) ಬಾಹ್ಯ ವಲಯ ಎಂಬು ಮೂರು ವಲಯಗಳ ವಿಸ್ತಾರವನ್ನು ಹೊಂದಿದ್ದಿತು. ಇದರಲ್ಲಿ ಬಾಹ್ಯ ವಲಯದ ಗಡಿಗಳು ಕೆಳಗಿನಂತಿದ್ದವು.

1. ಪೂರ್ವದಿಕ್ಕಿಗೆ – ಕುರುಗೋಡು ಬಸವೇಶ್ವರ ಕ್ಷೇತ್ರ, ಒಂಭತ್ತು ಹರದಾರಿ
2. ಪಶ್ಚಿಮಕ್ಕೆ – ಕೊಕ್ಕಸಮುದ್ರ ಮಹಾಲಕ್ಷ್ಮಿ ಕ್ಷೇತ್ರ, ಹನ್ನೆರಡು ಹರದಾರಿ
3. ದಕ್ಷಿಣ ದಿಕ್ಕಿಗೆ – ಸಂಡೂರು ಕುಮಾರಸ್ವಾಮಿ ಕ್ಷೇತ್ರ, ಹನ್ನೊಂದು ಹರದಾರಿ ಮತ್ತು
4. ಉತ್ತರ ದಿಕ್ಕಿಗೆ – ಕನಕಗಿರಿ ನರಸಿಂಹಕ್ಷೇತ್ರ, ಎಂಟು ಹರದಾರಿ ಇದ್ದಿತೆಂದು ಕೈಫಿಯತ್ತಿನಲ್ಲಿ ವಿವರಣೆ ಇದೆ.

ಇದರಿಂದ ಕನಕಗಿರಿಯು ಹಂಪಿ/ವಿಜಯನಗರದ ಉತ್ತರದ ಗಡಿ ಮತ್ತು ಒಂದು ಭಾಗವಾಗಿತ್ತೆಮದು ತಿಳಿಯುತ್ತದೆ.[3]

ಇನ್ನು ಹಂಪಿ/ವಿಜಯನಗರದಿಂದ ಉತ್ತರ ದಿಕ್ಕಿನೆಡೆಗೆ ತೆರಳಲು ಪ್ರಮುಖವಾದ ಹೆದ್ದಾರಿ ಕನಕಗಿರಿ ಮೂಲಕವೇ ಹಾದು ಹೋಗಿದ್ದಿತು. ಈ ಹಾದಿಯು ತಳವಾರ ಘಟ್ಟದ ಹರಿಶಂಕರದ್ವಾರ, ಆನೆಗೊಂದಿಯ ಅಂಬಿಗರ ಬಾಗಿಲು, ಹೊನ್ನಗಸೆ, ಗೋರಿಬಾಗಿಲು, ಕಡೇ ಬಾಗಿಲುಗಳ ಮೂಲಕ ಬಸವಾಪಟ್ಟಣ ಕಣಿವೆ ಬಾಗಿಲಿನಿಂದ ಬಾಹ್ಯ ವಲಯಕ್ಕೆ ಬಂದು ಅಲ್ಲಿಂದ ಕನಿಕಗಿರಿ, ತಾವರೆಕೆರೆಗೆ ತಲುಪುತ್ತಿತ್ತು. ಅಲ್ಲಿಂದ ಬಂದು ರಸ್ತೆ ಬಿಜಾಪುರಕ್ಕೂ, ಮತ್ತೊಂದು ರಸ್ತೆ ರಾಯಚೂರು, ಗುಲ್ಬರ್ಗಾಗಳೆಡೆಗೆ ತೆರಳುತ್ತಿತ್ತು.[4]

ವಿಜಯನಗರದ ಅರಸರಾದ ಹರಿಹರ, ಬುಕ್ಕರಾಯ, ಮೊದಲನೆಯ ದೇವರಾಯ, ಕೃಷ್ಣದೇವರಾಯ, ಅಳಿಯ ರಾಮರಾಯ ಮತ್ತು ಕನಕಗಿರಿ ಪಾಳೆಯಗಾರರಾದ ನವಾಬ ಉಡಚಪ್ಪ ನಾಯಕ, ಇಮ್ಮಡಿ ಉಡಚಪ್ಪ ನಾಯಕ ಇವರ ಸೈನಿಕ ಚಟುವಟಿಕೆಗಳಲ್ಲಿ ಈ ಎಲ್ಲಾ ಸ್ಥಳಗಳ ಉಲ್ಲೇಖಗಳು ಮೇಲಿನ ಸಂಚಾರಮಾರ್ಗವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಅಲ್ಲದೆ ಕನಕಗಿರಿ ಕೊಟೆಯ ದಕ್ಷಿಣದ ಬಾಗಿಲನ್ನು ಆನೆಗೊಂದಿ ಅಗಸೆ ಎಂದು ಕರೆಯುತ್ತಿದ್ದುದು ಕೂಡಾ ಪರಸ್ಪರ ರಸ್ತೆ ಸಂಪರ್ಕವನ್ನು ಸೂಚಿಸುತ್ತದೆ.

ರಾಜಕೀಯ ಸಂಬಂಧ

ವಿಜಯನಗರ ಹಾಗೂ ಕನಕಗಿರಿಗಳ ಮಧ್ಯೆ ರಾಜಕೀಯವಾಗಿ ಅನ್ಯೋನ್ಯ ಸಂಬಂಧವಿದ್ದಿತು. ಕನಕಗಿರಿ ಒಂದು ರಾಜ್ಯವಾಗಿದ್ದು, ವಿಜಯನಗರದ ಅಧೀನದಲ್ಲಿದ್ದಿತು. ಇಲ್ಲಿ ಕ್ರಿ.ಶ. 1436ರಲ್ಲಿ ಗುಜ್ಜಲವಂಶದ ಪರಸಪ್ಪನಾಯಕನು ವಿಜಯನಗರ ಸಾರ್ವಭೌಮ ಪ್ರೌಢದೇವರಾಯನ ಸಾಮಂತನಾಗಿ ಪಾಳೆಯಪಟ್ಟನ್ನು ಸ್ಥಾಪಿಸಿದನು. ಕನಕಗಿರಿ ನಾಯಕರು ವಿಜಯನಗರದರಸರ ನಿಷ್ಠ ಪಾಳೆಯಗಾರರಾಗಿದ್ದು ರಾಜನ ಆಸ್ಥಾನದಲ್ಲಿ ಬಲಪಾರ್ಶ್ವದ ಮರ್ಯಾದೆಗಳನ್ನು ಹೊಂದಿದ್ದನು.[5]

ಕ್ರಿ.ಶ. 1510ರಲ್ಲಿ ಕೃಷ್ಣದೇವರಾಯನ ಸಮಕಾಲೀನನಾಗಿ ಕನಕಗಿರಿಯಲ್ಲಿ ನವಾಬ ಉಡಚಪ್ಪ ನಾಯಕರು ಅಧಿಕಾರಕ್ಕೆ ಬರುತ್ತಾನೆ. ಇವನಿಗೂ ಕೃಷ್ಣದೇವರಾಯನಿಗೂ ಆತ್ಮೀಯ ಸಂಬಂಧವಿದ್ದಿತು. ಕೃಷ್ಣದೇವರಾಯನಂತೆ ಇವನೂ ಕೂಡಾ ಬೃಹತ್ ಕಲಾ ಪ್ರೇಮಿಯಾಗಿದ್ದೂ, ಅವನಂತೆ ತನ್ನ ರಾಜಧಾನಿ ಕನಕಗಿರಿಯಲ್ಲಿ ಅನೇಕ ದೇವಾಲಯ ಸ್ಮಾರಕಗಳನ್ನು ನಿರ್ಮಿಸುತ್ತಾನೆ. ಪರಿಣಾಮವಾಗಿ ಕನಕಗಿರಿ ಪ್ರಾದೇಶಿಕವಾಗಿ ಹಂಪಿಯಂತೆ ಹಲವಾರು ಸ್ಮಾರಕಗಳ ಕೇಂದ್ರವಾಯಿತು.

ನವಾಬ ಉಡಚಪ್ಪನಾಯಕನು ಕೇವಲ ಕನಕಗಿರಿಯಷ್ಟೇ ಅಲ್ಲ ಕನಕಗಿರಿ ಸುತ್ತಲಿನ, ನವಲಿ, ಎಮ್ಮಿಗುಡ್ಡ, ವೆಂಕಟಗಿರಿಗಳಲ್ಲಿ ಮತ್ತು ಹಂಪಿಯಲ್ಲೂ ದೇವಾಲಯ, ಸ್ಮಾರಕಗಳನ್ನು ನಿರ್ಮಿಸಿದ್ದಾನೆ.

ಇವನ ಗಮನಾರ್ಹವಾದ ನಿರ್ಮಾಣವೆಂದರೆ ಹಂಪಿ ವಿರೂಪಾಕ್ಷ ದೇವಾಲಯದ ಉತ್ತರ ದಿಕ್ಕಿನ ಅಥವಾ ಕನಕಗಿರಿ ಗೋಪರ. ಈ ಗೋಪುರದಲ್ಲಿಯ ಗುಂಪು ಕಂಬಗಳ ಅಲಂಕರಣೆಗಳು ಹಂಪಿಯ ಯಾವೊಂದು ಗೋಪುರಗಳ ಅಲಂಕರಣೆಗಳನ್ನು ಹೋಲದೆ, ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಗೋಪುರಗಳ ಅಲಂಕರಣೆಯನ್ನು ಹೋಲುತ್ತವೆ.[6] ಇದು ಕೃಷ್ಣದೇವರಾಯ ಹಾಗೂ ನವಾಬ ಉಡಚಪ್ಪ ನಾಯಕನ ಆತ್ಮೀಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ತಡೆರಾಜ್ಯ

ಕನಕಗಿರಿ ವಿಜಯನಗರ ಸಾಮ್ರಾಜ್ಯದ ಸುತ್ತಲಿನ ಗಡಿಭಾಗದಲ್ಲಿದ್ದರಿಂದ ಅದು ಒಂದು ರೀತಿಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಉತ್ತರದ ದಾಳಿಗಳನ್ನು ತಡೆಯುವ "ತಡೆರಾಜ್ಯ"ವಾಗಿ (Buffer state) ಕಾರ್ಯನಿರ್ವಹಿಸಿರುವುದನ್ನು ತರ್ಕಿಸಬಹುದು. ಕನಕಗಿರಿ ಅಸ್ತಿತ್ವಕ್ಕೆ ಬಂದ ವರ್ಷವಾದ 1436ರಿಂದ ವಿಜಯನಗರ ಪತನವಾದ 1565ರ ವರೆಗೆ ವಿಜಯನಗರ ಉತ್ತರದ ಬಹಮನಿಗಳು ಮತ್ತು ನಂತರದ ಆದಿಲ್‌ಷಾಹಿಗಳೊಂದಿಗೆ ಅನೇಕ ಯುದ್ಧಗಳನ್ನು ನಡೆಸಿತು.

ಅವುಗಳಲ್ಲಿ ಮೇಲೆ ಗಮನಿಸಿದಂತೆ ಕನಕಗಿರಿಯ ಮೂಲಕವೇ ವಿಜಯನಗರದ ಸೈನ್ಯ ಸಾಗಿ ನಡೆಸಿದ ಯುದ್ಧಗಳು ಇಂತಿವೆ.[7]

1426 ಮತ್ತು 1442	ಎರಡನೇ ದೇವರಾಯ ಹಾಗೂ ಬಹಮನಿ ದೊರೆ ಅಲ್ಲಾವುದ್ದೀನ್ ಅಹಮದ್ ಇವರ ಮಧ್ಯೆ ನಡೆದ ರಾಯಚೂರು/ಮುದಗಲ್ಲು ಯುದ್ಧ.
1493	ಸಾಳ್ವ ನರಸಿಂಹ ಹಾಗೂ ಆದಿಲ್‌ಷಾಹಿ ದೊರೆ ಯೂಸೂಫ್ ಆದಿಲ್‌ಖಾನ್ ಮಧ್ಯೆ ನಡೆದ ಯುದ್ಧ.
1493	ನರಸನಾಯಕ ಹಾಗೂ ಬಿಜಾಪುರದ ಯೂಸೂಫ್ ಆದಿಲ್‌ಖಾನ್ ಮಧ್ಯೆ ನಡೆದ ಮಾನ್ವಿ ಯುದ್ಧ
1506	ವೀರನರಸಿಂಹ ಹಾಗೂ ಬಹಮನಿ ಮಹಮದ್‌ಶಹರ ನಡುವಿನ ಬಹಮನಿ ಕೊನೆಯ ಯುದ್ಧ
1510	ಕೃಷ್ಣದೇವರಾಯ ಹಾಗೂ ಇಸ್ಮಾಯಿಲ್ ಆದಿಲ್‌ಖಾನ್ ಮಧ್ಯೆ ನಡೆದ ರಾಯಚೂರು/ಮುದಗಲ್ಲು ಯುದ್ಧ
1512	ಕೃಷ್ಣದೇವರಾಯ ಹಾಗೂ ಬಿಜಾಪುರ, ಅಹಮದ್ ನಗರಗಳ ಮಧ್ಯೆ ನಡೆದ ಕೃಷ್ಣಾನದಿ ದಂಡೆ ಯುದ್ಧ
1512	ಕೃಷ್ಣದೇವರಾಯ ಮತ್ತು ಬೀದರ್‌ದ ಕುತುಬ್‌ಶಹರ ಮಧ್ಯೆ ನಡೆದ ಪನಗಲ್ ಯುದ್ಧ
1520	ಕೃಷ್ಣದೇವರಾಯ ಮತ್ತು ಇಸ್ಮಾಯಿಲ್ ಆದಿಲ್‌ಖಾನ್‌ರ ಮಧ್ಯೆ ನಡೆದ ಗೊಬ್ಬೂರು ಹಾಗೂ ರಾಯಚೂರು ಯುದ್ಧಗಳು
1521	ಕೃಷ್ಣದೇವರಾಯ ಹಾಗೂ ಇಸ್ಮಾಯಿಲ್ ಆದಿಲ್‌ಖಾನರ ಮಧ್ಯೆ ನಡೆದ ಗುಲ್ಬರ್ಗಾ ಯುದ್ಧ.
1530–31	ಅಚ್ಯುತದೇವರಾಯ ಮತ್ತು ಇಸ್ಮಾಯಿಲ್ ಆದಿಲ್ ಖಾನ್‌ರ ಮಧ್ಯ ಜರುಗಿದ ರಾಯಚೂರು/ಮುದಗಲ್ಲು ಯುದ್ಧ
1548	ವಿಜಯನಗರ–ಬಿಜಾಪುರಗಳ ಕಲ್ಯಾಣ ಯುದ್ಧ
1551	ಅಳಿಯ ರಾಮರಾಯ ಮತ್ತು ಇಸ್ಮಾಯಿಲ್ ಆದಿಲ್‌ಶಹರ ಮಧ್ಯೆ ನಡೆದ ರಾಯಚೂರು, ಮುದಗಲ್ಲು ಯುದ್ಧಗಳು
1553	ರಾಮರಾಯ ಮತ್ತು ಇಸ್ಮಾಯಿಲ್ ಆದಿಲ್‌ಶಹರ ಮಧ್ಯ ನಡೆದ ಬಿಜಾಪುರ ಯುದ್ಧ
1555	ವಿಜಯನಗರ ಮತ್ತು ಅಹಮದ್‌ನಗರ ಮಧ್ಯ ನಡೆದ ಗುಲ್ಬರ್ಗಾ ಯುದ್ಧ.
1558	ವಿಜಯನಗರ ಮತ್ತು ಅಹಮದ್‌ನಗರಗಳ ಮಧ್ಯ ನಡೆದ ಅಹಮದ್ ನಗರ ಯುದ್ಧ
1558	ವಿಜಯನಗರ ಮತ್ತು ಅಹಮದ್‌ನಗರಗಳ ಮಧ್ಯೆ ನಡೆದ ಕಲ್ಯಾಣ ಯುದ್ಧ
1562	ವಿಜಯನಗರ ಮತ್ತು ವಿಜಾಪುರಗಳ ಮಧ್ಯ ನಡೆದ ಅಹಮದ್‌ನಗರ ಯುದ್ಧ

ಈ ಎಲ್ಲ ಯುದ್ಧಗಳ ಸಂದರ್ಭದಲ್ಲಿ ಕನಕಗಿರಿಯಲ್ಲಿ ಕ್ರಮವಾಗಿ ಪರಸಪ್ಪ ನಾಯಕ (1436–1510), ನವಾಬ ಉಡಚಪ್ಪ ನಾಯಕ (1510–1533) ಕೆಲವಡಿ ಉಡಚನಾಯಕರು (1533–1538) ಆಡಳಿತ ನಡೆಸಿದರು. ಈ ಎಲ್ಲಾ ಯುದ್ಧಗಳಲ್ಲಿ ಹಾಗೂ 1565ರಲ್ಲಿ ಜರುಗಿದ ವಿಜಯನಗರ ಹಾಗೂ ಷಾಯಿ ಸುಲ್ತಾನರ ಮಧ್ಯದ ತಾಳಿಕೋಟೆ ಯುದ್ಧದಲ್ಲಿ ಕನಕಗಿರಿ ನಾಯಕರು ಭಾಗಿಯಾಗಿ ವಿಜಯನಗರದ ಪರವಾಗಿ ಹೋರಾಡಿದರೆಂಬುದನ್ನು ಖಚಿತವಾಗಿ ಹೇಳಬಹುದು. 1565ರ ತಾಳಿಕೋಟೆ ಕಾಳಗದಲ್ಲಿ ವಿಜಯನಗರ ಪತನವಾದರೂ ಕನಕಗಿರಿ ರಾಜ್ಯ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆದದ್ದು ಗಮನಾರ್ಹವೆನಿಸುತ್ತದೆ.

ಧಾರ್ಮಿಕ ಸಂಬಂಧ

ಹಂಪಿ, ವಿಜಯನಗರಕ್ಕೂ ಕನಕಗಿರಿಗೂ ಧಾರ್ಮಿಕವಾಗಿಯೂ ಸಂಬಂಧವಿದೆ. ಹಂಪಿ ತುಂಗಭದ್ರಾ ನದಿಯ ತೀರದಲ್ಲಿಯ ಪಂಪಾಕ್ಷೇತ್ರವಾಗಿದ್ದರೆ ಕನಕಗಿರಿ ಪುಷ್ಪಾ, ಜಯಂತಿ ಮತ್ತು ಗೋಪಿಕಾ ನದಿಗಳ (ಇಂದಿನ ಹಳ್ಳಗಳು) ಸಂಗಮದಲ್ಲಿಯ ಕನಕಾಚಲಪತ ಕ್ಷೇತ್ರವಾಗಿದ್ದು, ಹಂಪಿ ವಿರೂಪಾಕ್ಷನಂತೆ ವಿಜಯನಗರದರಸರ ಭಕ್ತಿ ಗೌರವಕ್ಕೆ ಪಾತ್ರವಾಗಿ ಅನೇಕ ದಾನ ದತ್ತಿಗಳನ್ನು ಪಡೆದಿದೆ. ಆ ದಾನ ಶಾಸನಗಳು ಕನಕಗಿರಿ ದೇವಾಲಯದಲ್ಲಿವೆ.[8]

ಸಂಗಮವಂಶದ ಪ್ರಸಿದ್ಧ ದೊರೆ ಐದನೆಯ ದೇವರಾಯನು ಕ್ರಿ.ಶ. 1426–37ರಲ್ಲಿ ಕನಕಗಿರಿನಾಥ ದೇವರ ಅಮೃತಪಡಿ ನೈವೇದ್ಯ ಅಂಗರಂಗವೈಭೋಗಗಳಿಗಾಗಿ ಕನಕಗಿರಿ ಪೇಟೆ ಗ್ರಾಮವನ್ನು ದಾನ ನೀಡುತ್ತಾನೆ. ಅದೇ ರೀತಿ ನರಸಿಂಹದೇವರಾಯನು ಕ್ರಿ.ಶ. 1488ರಲ್ಲಿ ಕನಕಗಿರಿನಾಥದೇವರ ಅಮೃತಪಡಿಗೆ ಗೋಡಿರಹಾಳ ಮತ್ತು ಖೇಡೆದ ಗ್ರಾಮಗಳನ್ನು ದಾನವಾಗಿ ಸಮರ್ಪಿಸಿದನು ಮತ್ತು ಕ್ರಿ.ಶ. 1512ರಲ್ಲಿ ಶ್ರೀಕೃಷ್ಣರಾಯನು ಕನಕಗಿರಿನಾಥ ದೇವರ ಅಮೃತಪಡಿಗೆ ಚಿನ್ನಾಪುರ, ಯಡಗಲ್, ಕಳಸ ಮತ್ತು ಬೈರಾಪುರ ಎಂಬ ಗ್ರಾಮಗಳನ್ನು, 1533ರಲ್ಲಿ ಅಚ್ಯುತದೇವರಾಯನು ಕನಗಕಗಿರಿನಾಥ ದೇವರ ಅಮೃತಪಡಿ, ನೈವೇದ್ಯ, ಪೂಜೆ ಪುನಸ್ಕಾರ ದೀಪಾರಾಧನೆ ಅಂಗರಂಗವೈಭೋಗ ತೇರು ಪಂಚಪರ್ವತ ನಿತ್ಯ ನೈವೇದ್ಯಗಳಿಗಾಗಿ ಇಂಗಳದಾಳು, ಅಚ್ಯುತರಾಯ ಮಲ್ಲಾಪುರ, ಸಿದ್ದನಹಾಳ ಮತ್ತು ರಾಮಪುರ ಗ್ರಾಮಗಳನ್ನು ದಾನವಾಗಿ ಸಮರ್ಪಿಸುತ್ತಾನೆ.

ಹೀಗೆ ವಿಜಯನಗರದಲ್ಲಿ ಪಟ್ಟಕ್ಕೆ ಬಂದ ಎಲ್ಲ ಪ್ರಮುಖ ಅರಸರು ಕನಕಗಿರಿನಾಥ ದೇವರಿಗೆ ಗ್ರಾಮಗಳನ್ನು ಅರ್ಪಿಸಿರುವುದು ವಿಜಯನಗರ ಹಾಗೂ ಕನಕಗಿರಿಗಳ ನಡುವಿನ ವಿಶಿಷ್ಟ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ. ಈ ದಾನಗಳು ಕೇವಲ ಒಂದು ದೇವರ ಮೇಲೆ ಇರಿಸಿದ ಭಕ್ತಿ ಅಥವಾ ಗೌರವವನ್ನು ಸೂಚಿಸದೆ ತಮ್ಮ ಅಧೀನ ರಾಜ್ಯದ ಬಗೆಗೆ ಅವರು ಹೊಂದಿದ್ದ ವಿಶೇಷ ಭಾವನೆಯನ್ನು ವ್ಯಕ್ತಗೊಳಿಸುತ್ತದೆ.

ಕಲಾಸಂಬಂಧ

ಕಲಾತ್ಮಕತೆಯ ದೃಷ್ಟಿಯಿಂದಲೂ ವಿಜಯನಗರಕ್ಕೂ ಕನಕಗಿರಿಗೂ ವಿಶೇಷ ನಂಟಿದೆ. ಸಾಮಾನ್ಯವಾಗಿ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ವಿಜಯನಗರ ವಾಸ್ತುಶೈಲಿಯ ಪರಿಪೂರ್ಣ ಮತ್ತು ಭವ್ಯ ದೇವಾಲಯಗಳು ನಿರ್ಮಾಣವಾಗಿವೆ. ಆದರೆ ವಿಜಯನಗರದ ಮಾಂಡಲಿಕ ರಾಜ್ಯಗಳಲ್ಲಿ ಅಂಥ ಭವ್ಯ ದೇವಾಲಯಗಳು ವಿರಳ. ಆದರೆ ಕನಕಗಿರಿಯಲ್ಲಿ ಮಾತ್ರ ಹಂಪಿಯಂತೆ ಸಂಖ್ಯಾತ್ಮಕವಾಗಿ ವಿಫುಲ ದೇವಾಲಯಗಳು, ಭಾವಿ, ಪುಷ್ಕರಣಿ, ಮಂಟಪ, ಪ್ರತಿಮಾಗೃಹ, ಶಿಲ್ಪ, ಶಾಸನಗಳಿವೆ. ಸ್ಥಳೀಯ ಐತಿಹ್ಯದ ಪ್ರಕಾರ ಕನಕಗಿರಿಯಲ್ಲಿ 301 ದೇವಾಲಯ ಮತ್ತು 301 ಭಾವಿಗಳಿವೆ ಎಂಬ ನಂಬಿಕೆ ಉಂಟು. ವಾಸ್ತವವಾಗಿ ಅಷ್ಟು ಸಂಖ್ಯೆಯ ಸ್ಮಾರಕಗಳು ಇಲ್ಲದಿದ್ದರೂ ಅಧಿಕ

ಸಂಖ್ಯೆಯಲ್ಲಿರುವುದಂತೂ ದಿಟ. ಇನ್ನು ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹದೇವಾಲಯ ಹಂಪಿಯ ವಿರೂಪಾಕ್ಷ ದೇವಾಲಯದಂತೆ ವಾಸ್ತು ಸಾಮ್ಯತೆಯನ್ನು ಹೊಂದಿದೆ. ಇಲ್ಲಿಯ ಪ್ರಧಾನ ಹಾಗೂ ಉಪ ಗೋಪುರಗಳು, ಸುತ್ತಲೂ ಪ್ರಕಾರ, ಮಹಾರಂಗಮಂಟಪ, ದ್ವಿತಾಂಡಶೈಲಿಯ ಬೃಹತ್ ಕಂಬಗಳು, ಕಂಬಗಳ ಮೇಲೆ ಛತ್ತಿನಲ್ಲಿ ಗಾರೆಯ ಸುಂದರ ಸಾಲಭಂಜಿಕೆಗಳು, ಛತ್ತಿನಲ್ಲಿ ಚಿತ್ರಕಲೆ, ಕಪೋತದುದ್ದಕ್ಕೂ ದೇವಾನುದೇವತೆಗಳ, ರಾಮಾಯಣ ಕಥಾನಕ ಗಾರೆಶಿಲ್ಪಗಳು ಎಲ್ಲವೂ ಹಂಪಿಯ ದೇವಾಲಯದಂತೆ ಮನಮೋಹಕವಾಗಿದೆ. ಹೀಗೆ ಹಂಪಿಯ ದೇವಾಲಯದ ವಾಸ್ತುಶೈಲಿಯ ದಟ್ಟ ಪ್ರಭಾವವನ್ನು ಇಲ್ಲಿ ಗುರುತಿಸಬಹುದು.

ಅದೇ ರೀತಿ ಹಂಪಿಗೆ ಬೇಟಿ ನೀಡಿದ ಅನೇಕ ದಾಸವರೇಣ್ಯರು ಕನಕಗಿರಿಗೂ ಬೇಟಿ ನೀಡದೆ ಇಲ್ಲ. ವಿಶೇಷವಾಗಿ ಪುರಂದರದಾಸರು, ಕನಕದಾಸರು, ವಿಜಯದಾಸರು ಕನಕಗಿರಿನಾಥನನ್ನು ಸಂದರ್ಶಿಸಿ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಹೀಗೆ ವಿಜಯನಗರ ಸಾಮ್ರಾಜ್ಯದ ಉತ್ತರ ಗಡಿಯಾಗಿದ್ದ ಕನಕಗಿರಿ ಹಲವಾರು ದೃಷ್ಟಿಯಿಂದ ಹಂಪಿ, ವಿಜಯನಗರದೊಂದಿಗೆ ವೈಶಿಷ್ಟ್ಯಪೂರ್ಣವಾದ ಸಂಬಂಧ ಹೊಂದಿದ್ದಿತು. ಆ ಸಂಬಂಧದ ಅಂಶಗಳನ್ನು ಭೌಗೋಳಿಕ, ರಾಜಕೀಯ, ಧಾರ್ಮಿಕ ಹಾಗೂ ಕಲಾತ್ಮಕ ನೆಲೆಗಳಲ್ಲಿ ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರದ ಚರಿತ್ರೆಯ ಸಂದರ್ಭದಲ್ಲಿ ಕನಕಗಿರಿಯ ಪಾತ್ರವನ್ನು ವಿಶೇಷವಾಗಿ ಅನುಲಕ್ಷಿಸಿ ಅಧ್ಯಯನ ನಡೆಸಬಹುದಾಗಿದೆ.

ಆಕರಗಳು

1. ಜಯತೀರ್ಥರಾಜ ಪುರೋಹಿತ, 1957, *ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹಸ್ತೋತ್ರ*, ಕನಕಗಿರಿ.
2. ಕಲಬುರ್ಗಿ, ಎಂ.ಎಂ. (ಸಂ.), 1994, "ಕರ್ನಾಟಕದ ಕೈಫಿಯತ್ತುಗಳು", ಕನ್ನಡ ವಿಶ್ವವಿದ್ಯಾಲಯ ವಿಶ್ಲೇಷಣೆ, ವಿಜಯನಗರ ಅಧ್ಯಯನ, ಸಂ. 16, ಮೈಸೂರು.
3. ಶರಣಬಸಪ್ಪ ಕೋಲ್ಕಾರ, 2012, "ವಿಜಯನಗರ ಪಟ್ಟಣದ ವಿಸ್ತಾರ: ಒಂದು ವಿಶ್ಲೇಷಣೆ", ವಿಜಯನಗರ ಅಧ್ಯಯನ, ಸಂ. 16, ಮೈಸೂರು.
4. ಶರಣಬಸಪ್ಪ ಕೋಲ್ಕಾರ, 2010, "ವಿಜಯನಗರದ ಉತ್ತರದಿಕ್ಕಿನ ಬಸವಪಟ್ಟಣದ್ವಾರ ಶೋಧನೆ", ಪು. 217–222, ವಿಜಯನಗರ ಅಧ್ಯಯನ, ಸಂ. 14.
5. ಶರಣಬಸಪ್ಪ ಕೋಲ್ಕಾರ, 1994, *"ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು"*, ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಶರಣಬಸಪ್ಪ ಕೋಲ್ಕಾರ, 2000, *"ಹಂಪಿ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ನಿರ್ಮಾಣ ಕಾಲ ಮತ್ತು ಕರ್ತೃ – ಒಂದು ಪರಿಶೀಲನೆ"*, ಪ್ರಾ.ಸಂ.ನಿ., ಮೈಸೂರು.
7. ಸೋಮಶೇಖರ್, ಎಸ್.ವೈ, 2009, ವಿಜಯನಗರ *ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ*, ಸಂಚಿಕೆ ಪ್ರಕಾಶನ, ಹಂಪಿ.
8. ಶರಣಬಸಪ್ಪ ಕೋಲ್ಕಾರ, 1997, "ಕನಕಗಿರಿಯ ವಿಜಯನಗರದರಸರ ಆರು ಅಪ್ರಕಟಿತ ಶಾಸನಗಳು", ಪು. 115–121, *ಸತ್ಯಶುದ್ಧಕಾಯಕ*, ಸಂ. 7, 3–4, ಚಿತ್ರದುರ್ಗ.

19. ವಿಜಯನಗರ ಮತ್ತು ಮೈಸೂರು ಒಡೆಯರ ರಾಜಕೀಯ ಸಂಬಂಧಗಳು – ಒಂದು ಸಂಕ್ಷಿಪ್ತ ನೋಟ

ಡಾ. ಬಿ.ಎಸ್. ಪುಟ್ಟಸ್ವಾಮಿ

ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಪತನಾನಂತರ ತಲೆಯೆತ್ತಿದ ರಾಜ್ಯಗಳಲ್ಲಿ ಮೈಸೂರು ಅತ್ಯಂತ ಪ್ರಮುಖವಾದುದು. ಈ ಸಂಸ್ಥಾನವನ್ನು ಕಟ್ಟಿದ ಒಡೆಯರ್ ಅರಸರು ಸುಮಾರು ಆರುನೂರು ವರ್ಷಗಳ ಕಾಲ ರಾಜ್ಯವನ್ನು ಆಳಿದ್ದಾರೆ. ವಿಜಯನಗರದ ಇತಿಹಾಸದಲ್ಲಿ ಮೈಸೂರು ಒಡೆಯರಿಗೆ ಮಹತ್ವ ಸ್ಥಾನವಿದೆ. ವಿಜಯನಗರದ ಸಾಮಂತರಾಗಿ 15ನೇ ಶತಮಾನದಲ್ಲಿ ಕಾಣಿಸಿಕೊಂಡ ಒಡೆಯರು ಆಶ್ರಿತರಾಜರಾಗಿ, ಮಿತ್ರರಾಗಿ ಕಡೆಗೆ ಶತ್ರುಗಳಾಗಿ ಕಾದಾಡಿದ ಘಟನೆಗಳು ಕುತೂಹಲಕಾರಿಯಾಗಿವೆ. ಪ್ರಾರಂಭದಲ್ಲಿ ಇವರು ವಿಜಯನಗರದ ಸಾಮಂತರಾಗಿದ್ದುಕೊಂಡು ಅದರ ಪತನಾನಂತರ ಸ್ವತಂತ್ರವಾಗಿ ಆಳತೊಡಗಿದರು.

ಯಾವುದೇ ರಾಜ್ಯದ ಉಗಮ, ಬೆಳವಣಿಗೆ, ಅಭಿವೃದ್ಧಿ ಹಾಗೂ ಅವನತಿಯನ್ನು ನಿರ್ಧರಿಸುವ ಅಂಶವೆಂದರೆ ಅದು ಇತರ ರಾಜ್ಯಗಳೊಂದಿಗೆ ಇಟ್ಟುಕೊಂಡಿರುವ ಸಂಬಂಧವೆಂದು ಹೇಳಬಹುದು. ಆಧುನಿಕ ಯುಗದಲ್ಲಿ ರಾಜ್ಯಗಳು ಆಂತರಿಕವಾಗಿ ಸ್ವತಂತ್ರ್ಯವಾಗಿದ್ದರೂ ಇತರ ರಾಜ್ಯಗಳೊಂದಿಗೆ ಸಂಪರ್ಕವನ್ನು ಹೊಂದಿ ಪರಸ್ಪರ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳುವುದು ಅತ್ಯವಶ್ಯಕವಾಗಿದೆ. ರಾಜಕೀಯ ಕ್ಷೇತ್ರ ಮಾತ್ರವಲ್ಲದೆ ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ರಾಜ್ಯ-ರಾಜ್ಯಗಳ, ರಾಷ್ಟ್ರ-ರಾಷ್ಟ್ರಗಳ ನಡುವಿನ ಮಧುರ ಸಂಬಂಧ ಅತ್ಯಂತ ಅಗತ್ಯವಾದ ಅಂಶವೆಂದು ಹೇಳಬಹುದು. ಇಂದಿನ ಅತ್ಯಂತ ಜಟಿಲವಾದ ಪ್ರಚಲಿತ ಪರಿಸ್ಥಿತಿಯಲ್ಲಿ ಪ್ರತಿಯೊಂದು ರಾಜ್ಯವು ಇತರ ರಾಜ್ಯಗಳೊಂದಿಗೆ ಕೊಡು-ಕೊಳುವ ಅಗತ್ಯವು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಆದರೆ ಅನೇಕ ಭೌಗೋಳಿಕ, ಆರ್ಥಿಕ ಹಾಗೂ ರಾಜಕೀಯ ಕಾರಣಗಳ ಪರಿಣಾಮವಾಗಿ ರಾಜ್ಯಗಳು ತಮ್ಮ ನೆರೆಯ ರಾಜ್ಯಗಳೊಂದಿಗೆ ಉತ್ತಮ ಸಂಬಂಧವನ್ನು ಸ್ಥಾಪಿಸುವುದು ಅಸಾಧ್ಯವಾದರೆ, ಸಂಘರ್ಷಗಳಿಗೆ ಎಡೆಮಾಡಿಕೊಡುತ್ತದೆ. ರಾಜ್ಯಗಳ ನಡುವಿನ ಸಮಸ್ಯೆಗಳನ್ನು ವಿವಾದಗಳನ್ನು ಪರಿಹರಿಸಿಕೊಳ್ಳುವುದು ಸಾಧ್ಯವಾಗದಿದ್ದಾಗ ಅವುಗಳ ನಡುವೆ ಯುದ್ಧವು ಅನಿವಾರ್ಯವಾಗುತ್ತದೆ. ಈ ರೀತಿಯಲ್ಲಿ ಬಹುಪ್ರಾಚೀನ ಕಾಲದಿಂದಲೂ ಮಾನವ ಇತಿಹಾಸದಲ್ಲಿ ಯುದ್ಧಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಲಭಿಸಿದೆ. ಪ್ರತಿಯೊಂದು ರಾಜ್ಯವು ಒಂದು ಬಲಿಷ್ಠವಾದ ಸೈನ್ಯವನ್ನು ಕಟ್ಟಿಕೊಂಡು ತನ್ನ ಗುರಿಯನ್ನು ಸಾಧಿಸುವ ಉದ್ದೇಶದಿಂದ ಇತರ ದೇಶಗಳ ಮೇಲೆ ಆಕ್ರಮಣವನ್ನು ಕೈಗೊಳ್ಳುತ್ತದೆ. ಆದರೆ ಆ ದೇಶವು ಸಮಬಲವನ್ನು ಹೊಂದಿದಾಗ ಸೈನ್ಯದ ಸಹಾಯದಿಂದ ಅದನ್ನು ಗೆಲ್ಲುವುದು ಸಾಧ್ಯವಾಗದಿರಬಹುದು.

ಹದಿನಾಲ್ಕನೆಯ ಶತಮಾನದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ಸಂತತಿಗಳು ಆಳಿದವು. ಮೊದಲನೆಯ ಸಂತತಿಯ ಸಂಗಮ ದೊರೆಗಳು ಹೊಯ್ಸಳರ ನಂತರ ಒಂದು ಬೃಹತ್ ಸಾಮ್ರಾಜ್ಯವನ್ನು ಕಟ್ಟಿದರು. ಮೊದಲನೆಯ ದೊರೆ ಹರಿಹರ ಅವನ ಸಹೋದರ ಬುಕ್ಕ ದಕ್ಷಿಣದಲ್ಲಿ ದೊಡ್ಡ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದರು. ಬುಕ್ಕನ ಆಳ್ವಿಕೆಯಲ್ಲಿ ವಿಜಯನಗರದ ಅರಸರು ಮಧುರೆಯ ಸುಲ್ತಾನರ ರಾಜ್ಯವನ್ನು ಗೆದ್ದು ವಶಪಡಿಸಿಕೊಂಡರು. ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯ ಸಾಗರವನ್ನು ದಾಟಿ ಸಿಂಹಳಕ್ಕೆ ವಿಸ್ತರಿಸಿತು. ಇದೇ ಸಮಯದಲ್ಲಿ ಹುಟ್ಟಿದ ಬಹಮನಿ ರಾಜ್ಯಕ್ಕೂ ವಿಜಯನಗರಕ್ಕೂ ಹಲವಾರು ಯುದ್ಧಗಳಾಗಿ ಸಂಗಮ ವಂಶವು ಕೊನೆಗೊಂಡು

ಸಾಳುವ ವಂಶದ ಅರಸರು ಅಧಿಕಾರಕ್ಕೆ ಬಂದರು. ತುಳುವ ಸಂತತಿಗೆ ವಿಜಯನಗರ ಅತ್ಯಂತ ಪ್ರಸಿದ್ಧವಾದುದು. ಈ ಸಂತತಿಯ ಕೃಷ್ಣದೇವರಾಯನು, ಬಹಮನಿ ರಾಜ್ಯ ಮಾತ್ರವಲ್ಲದೆ, ಒರಿಸ್ಸಾದ ಗಜಪತಿಯನ್ನು ಗೆದ್ದುದಲ್ಲದೆ, ವಿಜಯನಗರವನ್ನು ದಕ್ಷಿಣ ಭಾರತದ ಅತ್ಯಂತ ಬಲಿಷ್ಠ ಸಾಮ್ರಾಜ್ಯವನ್ನಾಗಿ ಮಾಡಿದನು. ಅಳಿಯ ರಾಮರಾಯನು ಆಳುತ್ತಿದ್ದಾಗ ಯದು ಷಾಹಿ ರಾಜ್ಯಗಳು ಒಂದುಗೂಡಿ ರಕ್ಕಸತಂಗಡಿಯಲ್ಲಿ ನಡೆದ ಯುದ್ಧದಲ್ಲಿ ವಿಜಯನಗರ ಸೋತು, ರಾಜಧಾನಿಯನ್ನು ಸುಲ್ತಾನರು ನಾಶಪಡಿಸಿದರು. ಮುಂದೆ ಅರವೀಡು ಸಂತತಿಯ ದೊರೆಗಳು ಅಧಿಕಾರ ವಹಿಸಿಕೊಂಡು ಆಳ್ವಿಕೆ ನಡೆಸಿದರೂ ವಿಜಯನಗರದ ವೈಭವ, ಶಕ್ತಿ ಸಾಮರ್ಥ್ಯಗಳು ಮರೆಯಾಗಿದವು. ತಿರುಮಲನು ಪೆನುಗೊಂಡೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರೂ, ಷಾಹಿ ರಾಜ್ಯಗಳು ಪದೇ ಪದೇ ದಾಳಿಗಳನ್ನು ನಡೆಸಿದವು. ಅರವೀಡು ಅರಸರು ತಮ್ಮ ರಾಜಧಾನಿಯನ್ನು ಚಂದ್ರಗಿರಿಗೂ, ಅನಂತರ ವೆಲ್ಲೂರಿಗೂ ಸ್ಥಳಾಂತರಿಸಿದರು. ಶತ್ರುಗಳ ಕಾಟ ತಪ್ಪಲಿಲ್ಲ. ಕಡೆಯಲ್ಲಿ ಕೆಳದಿಯ ಶಿವಪ್ಪ ನಾಯಕನು ಮುಮ್ಮಡಿ ಶ್ರೀರಂಗನಿಗೆ ತನ್ನ ರಾಜ್ಯದ ಒಂದು ಭಾಗವನ್ನು ನೀಡಿ ಬೇಲೂರಿನಲ್ಲಿ ಮೂರನೆಯ ಶ್ರೀರಂಗನನ್ನು ನೆಲೆಗೊಳಿಸಿದನು. ಈ ವೇಳೆಗಾಗಲೇ ವಿಜಯನಗರದ ಅಧೀನದಲ್ಲಿದ್ದ ಪಾಳೆಯಗಾರರು ಸ್ವತಂತ್ರವಾಗಿದ್ದವು. ಮೈಸೂರು, ಕೆಳದಿ ಪ್ರಬಲ ರಾಜ್ಯಗಳಾಗಿದ್ದವು. ಹದಿನೇಳನೆಯ ಶತಮಾನದ ಅಂತ್ಯದಲ್ಲಿ ವಿಜಯನಗರ ಸಾಮ್ರಾಜ್ಯವು ಅಸ್ತಂಗತವಾಯಿತು.

ಮೈಸೂರು ಒಡೆಯರ ಮೂಲವನ್ನು ಅವರ ಆಸ್ಥಾನದ ಕವಿಗಳು ಚಂದ್ರವಂಶದಿಂದ ನಿಷ್ಪನ್ನ ಮಾಡಲು ಪ್ರಯತ್ನಿಸಿದ್ದಾರೆ. ಇವರು ಯದು ವಂಶದವರೆಂದೂ, ದ್ವಾರಕಾವತಿಯಿಂದ ಮೈಸೂರಿಗೆ ಬಂದು ರಾಜ್ಯಸ್ಥಾಪನೆ ಮಾಡಿದರೆಂದೂ, ಕವಿಗಳು ವಿವರಿಸಿದ್ದಾರೆ. ಆದರೆ ಅನೇಕ ಇತಿಹಾಸಕಾರರು ಅವರ ಸ್ಥಳವೊಂದಿಗರೇ ಹೊರತು ಹೊರಗಿನಿಂದ ಬಂದವರಲ್ಲವೆಂದು ವಾದಿಸುತ್ತಾರೆ. ಯದುರಾಯ ಕೃಷ್ಣರಾಯರೆಂಬ ಇಬ್ಬರು ರಾಜಕುಮಾರರು ದ್ವಾರಕೆಯಿಂದ ಬಂದು ಹದಿನಾಲ್ಕನೆಯ ಶತಮಾನದ ಅಂತ್ಯದಲ್ಲಿ ಹದಿನಾಡಿನಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಇವರಲ್ಲಿ ಯದುರಾಯನು ಹದಿನಾಡಿನಿಂದ ಆಳ್ವಿಕೆ ನಡೆಸಿದನು. ಮೈಸೂರಿನ ರಾಜಕೀಯ ಇತಿಹಾಸವನ್ನು ಅನೇಕ ಇತಿಹಾಸಕಾರರು ಬೆಟ್ಟದ ಚಾಮರಾಜ ಒಡೆಯರ ಆಳ್ವಿಕೆಯಿಂದ ಆರಂಭಿಸುತ್ತಾರೆ. ತಿಮ್ಮರಾಜ ಒಡೆಯರ ಮರಣಾನಂತರ ಆಳಿದ ಬೋಳತಲೆ ಚಾಮರಾಜ ಒಡೆಯರು ಬಹುಸಮರ್ಥರೂ, ಮಹತ್ವಾಕಾಂಕ್ಷಿಗಳೂ ಆಗಿದ್ದರು.

ಈ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದ ವಿಜಯನಗರದ ಪ್ರತಿನಿಧಿ ಸಾಮಂತರಿಂದ ಕಪ್ಪಕಾಣಿಕೆ ಪಡೆದು ಅವರನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಹೊಂದಿದ್ದನು. ಬೋಳತಲೆ ಚಾಮರಾಜನಿಗೂ ವಿಜಯನಗರದ ಪ್ರತಿನಿಧಿಗೂ ಆಗಾಗ ಘರ್ಷಣೆಗಳಾಗುತ್ತಿದ್ದವು. 1574ರಲ್ಲಿ ವಿಜಯನಗರದ ಸೈನ್ಯ ಮೈಸೂರಿನ ಮೇಲೆ ದಾಳಿ ಆರಂಭಿಸಿ ಮೂರು ತಿಂಗಳ ಕಾಲ ಮುತ್ತಿಗೆಯನ್ನು ಹಾಕಿತು. ಚಾಮರಾಜ ಒಡೆಯರ್, ವಿಜಯನಗರದ ಸೈನ್ಯಕ್ಕೆ ಬರುತ್ತಿದ್ದ ಅಗತ್ಯ ವಸ್ತುಗಳ ಸರಬರಾಜನ್ನು ನಿಲ್ಲಿಸಿ ಆ ಸೈನ್ಯವನ್ನು ಸೋಲಿಸಿ ಓಡಿಸಿದನು. ವಿಜಯನಗರದ ಅಧೀನದಲ್ಲಿದ್ದ ಕಳಲೆ ಮತ್ತು ಕೊತ್ತೆಗಾಲಗಳನ್ನು ವಶಪಡಿಸಿಕೊಂಡನು. ಚಾಮರಾಜ (ನಾಲ್ವಡಿ) ಒಡೆಯರು 1571ರಿಂದ 1576ರ ವರೆಗೆ ಆಳಿದರು. ಅವರಿಗೆ ರಾಜ ಒಡೆಯರು ಮತ್ತು ಬೆಟ್ಟದ ಚಾಮರಾಜ ಒಡೆಯರೆಂಬ ಇಬ್ಬರು ಮಕ್ಕಳಿದ್ದರು. 1576ರಿಂದ ಇತಿಹಾಸ ಪ್ರಸಿದ್ಧ ರಾಜ ಒಡೆಯರ ಆಳ್ವಿಕೆ ಪ್ರಾರಂಭವಾಯಿತು. ಇವರ ಜೀವಿತದ ಅವಧಿಯಲ್ಲಿ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಬದಲಾವಣೆಗಳಾಗಿದ್ದವು. 1565ರಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ದಖನ್ನಿನ ಷಾಹಿ ರಾಜ್ಯಗಳು ವಿಜಯನಗರ ಸೈನ್ಯವನ್ನು ಸೋಲಿಸಿದವು. ರಾಮರಾಯನು ಕೊಲ್ಲಲ್ಪಟ್ಟವು. ಇದರಿಂದ ಕರ್ನಾಟಕದ ವೈಭವದ ಯುಗವೊಂದು ಮುಗಿಯಿತೆಂದು ಹೇಳಬಹುದು.

ರಾಮರಾಯನ ಸಹೋದರರಾದ ತಿರುಮಲನು ಪೆನುಗೊಂಡೆಯನ್ನೂ ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದನು. ಮುಂದೆ ಆಳಿದ ಅರವೀಡು ಸಂತತಿಯ ದೊರೆಗಳು ಚಂದ್ರಗಿರಿ ಮತ್ತು ವೆಲ್ಲೂರಿಗೆ ರಾಜಧಾನಿಯನ್ನು ಸ್ಥಳಾಂತರಿಸಿ ಆಳ್ವಿಕೆ ನಡೆಸಿದರು. ಈ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ರಾಜ ಪ್ರತಿನಿಧಿಯಾಗಿದ್ದ ಇಮ್ಮಡಿ ತಿರುಮಲನಿಗೂ ರಾಜ ಒಡೆಯರಿಗೂ ವೈಮನಸ್ಸ್ಯವಿದ್ದಿತು. ರಾಜ ಒಡೆಯರು ತಮ್ಮ ಶೌರ್ಯ ಸಾಹಸಗಳಿಂದ ದಿನ ದಿನವೂ ಪ್ರಸಿದ್ಧರಾಗುತ್ತಿದ್ದರೂ, ಕಾರುಗಳ್ಳಿಯ ವೀರರಾಜಯ್ಯನೆಂಬ ಸಾಮಂತನು ರಾಜ ಒಡೆಯರನ್ನು ಲಕ್ಷ್ಯಮಾಡದೆ ಅವರೆದುರಿಗೆ ಓಲಗ ತಾಳ ಮೇಳಗಳೊಡನೆ ಪಲ್ಲಕ್ಕಿಯಲ್ಲಿ ಕುಳಿತ ಅಟ್ಟಹಾಸದಿಂದ ಮೆರವಣಿಗೆ ಮಾಡಿಸಿಕೊಂಡಾಗ ಅವರನ್ನು ಹಿಡಿದು ತರಿಸಿ ಅವನ ಕಿವಿ ಮೂಗು ಕತ್ತರಿಸಿ ಅವನ ಕೋಟೆಯನ್ನು ವಶಪಡಿಸಿಕೊಂಡನು.

ತಿರುಮಲನು ಮಧುರೆಯ ವೀರಪ್ಪನಾಯಕನ ಮೇಲೆ ಯುದ್ಧದಲ್ಲಿ ತೊಡಗಿದ್ದ ಸಮಯವನ್ನು ಉಪಯೋಗಿಸಿಕೊಂಡು ರಾಜ ಒಡೆಯರು 1592ರಲ್ಲಿ ರಂಗಸಮುದ್ರವನ್ನು ಕಟ್ಟಿದನು. 1595ರಲ್ಲಿ ಕಾರುಗಹಳ್ಳಿಯ ವೀರರಾಜಯ್ಯನನ್ನು ಸೋಲಿಸಿದ್ದು ಅವರ ಬಹುಮುಖ್ಯವಾದ ಸಾಧನೆ. ಈ ರೀತಿ ರಾಜ ಒಡೆಯರು ದಿನದಿಂದ ದಿನಕ್ಕೆ ಪ್ರಬಲನಾಗುತ್ತಿದ್ದುದನ್ನು ಕಂಡು ಸ್ಥಳೀಯ ಅರಸರು ತಿರುಮಲನ ಬಳಿ ದೂರು ಹೇಳಿದರು. ರಾಜ ಒಡೆಯರು ಗೂಢಾಚಾರದ ಮೂಲಕ ಶ್ರೀರಂಗಪಟ್ಟಣದ ರಕ್ಷಣಾ ವ್ಯವಸ್ಥೆಯನ್ನು ತಿಳಿದುಕೊಂಡು, ತಿರುಮಲನ ಆಸ್ಥಾನಕ್ಕೆ ಭೇಟಿ ಕೊಡಲು ತೀರ್ಮಾನಿಸಿದನು. ಶ್ರೀರಂಗಪಟ್ಟಣದಲ್ಲಿ ತಿರುಮಲ ಮತ್ತು ರಾಜ ಒಡೆಯರು ಪರಸ್ಪರ ಸಂಧಿಸಿ ಕುಶಲ ವಿಚಾರಿಸಿದರು. ರಾಜ ಒಡೆಯರ ಕಂಠೀರವ ನರಸರಾಜ ವಿಜಯವು ಇದನ್ನು ತಿಳಿಸುತ್ತದೆ. ತಿರುಮಲನು ಈ ಎಲ್ಲಾ ದೊರೆಗಳ ನೆರವಿನಿಂದ ಮೈಸೂರು ದೊರೆಯ ಗಡಿ ಠಾಣೆಯಾಗಿದ್ದ ಕೆಸರೆಯನ್ನೂ ವಶಪಡಿಸಿಕೊಳ್ಳಲು ಯೋಜನೆ ಹಾಕಿದನು. ಈ ಯುದ್ಧದಲ್ಲಿ ಬೆಟ್ಟದ ಚಾಮರಾಜ ತನ್ನ ಅಣ್ಣ ರಾಜ ಒಡೆಯನಿಗೆ, ರಾಜ್ಯದ ರಕ್ಷಣೆಯನ್ನು ವಹಿಸಿ ಸೈನ್ಯವನ್ನು ತೆಗೆದುಕೊಂಡು ಶತೃಗಳ ಮೇಲೆ ಯುದ್ಧವನ್ನು ಆರಂಭಿಸಿದನು. ಶತೃಗಳ ಸೈನ್ಯವನ್ನು ಬೆಟ್ಟದ ಚಾಮರಾಜ ಮತ್ತು ರಾಜ ಒಡೆಯರು ಸುಲಭವಾಗಿ ಸೋಲಿಸಿದರು. ಈ ಕಾಳಗದಲ್ಲಿ ಮೈಸೂರು ಸೈನ್ಯ ಸುಪ್ರಸಿದ್ಧವಾದ "ಮೂಗನ" ತಂತ್ರವನ್ನು ಅನುಸರಿಸಿತು. ಬೆಟ್ಟದ ಚಾಮರಾಜನ ನೇತೃತ್ವದಲ್ಲಿ ನುರಿತ ಯೋಧರು ತಿರುಮಲನ ಸೈನ್ಯವನ್ನು ನಾಶ ಮಾಡಿದರು. ಮೈಸೂರಿನ ಆಶ್ರಿತ ರಾಜರು ಬೆಟ್ಟದ ಚಾಮರಾಜ ಒಡೆಯನೊಡನೆ ಯುದ್ಧಮಾಡಲಿಕ್ಕೆ ಆಗದೆ ತಮ್ಮ-ತಮ್ಮ ಊರಿಗೆ ತೆರಳಿದರು. ಕೆಸರೆ ಯುದ್ಧವು ಮೈಸೂರು ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟವೆಂದು ಹೇಳಬಹುದು. ನಂತರ ಹೆಗ್ಗಡದೇವನಕೋಟೆಯ ನಾಯಕನನ್ನು ಸೋಲಿಸಲಾಯಿತು. ಅನಂತರ ಕಬಿನಿ ನದಿಯನ್ನೂ ದಾಟಿ ಹೋಗಿ ರಾತ್ರಿಯ ವೇಳೆ ಕೆರೆಹಟ್ಟಿ ಸತ್ತೆಗಾಲ ಮತ್ತು ಕಿರಂಗೂರುಗಳಲ್ಲಿ ತಂಗಿದ್ದ ಶತ್ರು ಸೈನ್ಯವನ್ನೂ ನಾಶಮಾಡಲಾಯಿತು. ಈ ಮಧ್ಯೆ ಬಿರುದೆಂತೆಂಬುದರ ಗಂಡ ಎಂಬ ಬಿರುದಿನ ಬಗ್ಗೆ ತಿರುಮಲನಿಗೂ ಮತ್ತು ರಾಜ ಒಡೆಯರಿಗೂ ಮನಸ್ತಾಪ ಉಂಟಾಯಿತು. ತಿರುಮಲನು ತಾನು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿಯಾಗಿ ತನ್ನ ಆಶ್ರಿತ ರಾಜನು ಈ ರೀತಿಯ ಬಿರುದುಗಳನ್ನು ಉಪಯೋಗಿಸಿಸುವುದಕ್ಕೆ ಅವಕಾಶ ನೀಡಬಾರದೆಂದು ನಿರ್ಧರಿಸಿದನು.

ಈ ನಿಯಮವನ್ನೂ ಉಲ್ಲಂಘಿಸಿದ ರಾಜ ಒಡೆಯರನ್ನು ಬಂಧಿಸಲು ಆಜ್ಞೆ ಮಾಡಿದನು. ರಾಜ ಒಡೆಯರು ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ಮೈಸೂರು ಸೇರಿದರು. ತಿರುಮಲನು ಅವನಿಗೆ ಬೆಂಬಲ ನೀಡಿದ ಸ್ಥಳೀಯ ರಾಜರು, ಮೈಸೂರಿನ ಮೇಲೆ ಯುದ್ಧವನ್ನು ಸಾರಿದರು. ಇವರಲ್ಲಿ ಹದಿನಾಡ ರಾಮರಾಜೇಂದ್ರ ಪಿರಿಯಾಪಟ್ಟಣದ ರುದ್ರಗಣ, ತಲಕಾಡಿನ ನಂಜೇಂದ್ರ, ಕೆರಿಯೂರು ತಿಮ್ಮನಾಯಕ, ಮುಂತಾದವರು ಇದ್ದರು. ಇದು ಅಲ್ಲದೆ, ನುಗ್ಗೆಹಳ್ಳಿ ದಾಸನಾಯಕ, ಕೆಂಗೇಂದ್ರ, ಇಮ್ಮಡಿ ಚಿಕ್ಕಮನ್ನಯ್ಯ ಹಾಗೂ ಕೊಲ್ಲಾರ, ಬಳ್ಳಾಪುರ, ಬೆಂಗಳೂರಿನ ರಾಜರು ಭಾಗವಹಿಸಿದರೆಂದು ತಿಳಿಯುತ್ತದೆ. ಮೈಸೂರಿನ ಮೇಲೆ ದಾಳಿ ಮಾಡಲು ಸಂಚು ಮಾಡಿ ಹೊರಟಿದ್ದ ಉಮ್ಮತ್ತೂರಿನ ಮಲ್ಲರಾಜಯ್ಯ, ಯಳಂದೂರಿನ ರಾಜನಾಯಕ ಅವರ ಮೇಲೆ ಬಿದ್ದು ಅವರನ್ನು ಸೋಲಿಸಿದರು.

ಅನಂತರ ಹಂಚೆಗದ ಮೇಲೆ ದಾಳಿ ಮಾಡಲು ಹೊರಟಿದ್ದ ಶತ್ರು ಪಡೆಗಳ ಮುಖಂಡ ಜಕ್ಕನನ್ನು ರಾಜ ಒಡೆಯರು ಕೊಂದು ಹಾಕಿದರು. ಇದರಿಂದ ಅನೇಕ ಪಾಳೆಯಗಾರರು ತಿರುಮಲನ ಪಾಳೆಯವನ್ನು ತೊರೆದು ರಾಜ ಒಡೆಯರ ಕಡೆ ಬಂದು ಸೇರಿದರು. ಹೀಗೆ ಶತ್ರು ಸೈನ್ಯ ಛಿದ್ರ ಛಿದ್ರವಾಗಿ ಕರಗಿಹೋಯಿತು. ಎರಡನೆಯ ತಿರುಮಲನ ಸೋಲು ರಾಜ ಒಡೆಯರ ಕೀರ್ತಿಯನ್ನು ಹೆಚ್ಚಿಸಿತು. ವಿಜಯನಗರದ ಸಾಮ್ರಾಟ ವೆಂಕಟ ಇಂತಹ ಅಪಮಾನವನ್ನು ತಂದುಕೊಟ್ಟ ತಿರುಮಲನಿಗೆ ಛೀಮಾರಿ ಹಾಕಿದನು. ತನ್ನ ಪ್ರತಿನಿಧಿಯ ಮೇಲೆ ಇದ್ದ ನಂಬಿಕೆ ಹೋಗಿದ್ದು ಮಾತ್ರವಲ್ಲ. ರಾಜ ಒಡೆಯರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದನು. ರಾಜ ಒಡೆಯರ ಸಾಮರ್ಥ್ಯ, ಶೌರ್ಯ, ಸಾಹಸಗಳನ್ನು ಮೆಚ್ಚಿ ವೆಂಕಟನು ಅವರಿಗೆ ಉಮ್ಮತ್ತೂರು ಸೀಮೆಗೆ ಸೇರಿದ ತಾಯೂರು ನಾಡಿನ ಅಲದೂರು ನವೀಲೂರನ್ನು ಬನ್ನೂರಿಗೆ ಸೇರಿದ ಕೋಣಗಹಳ್ಳಿ ಮತ್ತು ಇತರ ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟನು.

ಇದರಿಂದ ರಾಜ ಒಡೆಯರು ಮತ್ತಷ್ಟು ಉತ್ಸಾಹದಿಂದ ಹರಿಹರಪುರ (1597) ಮತ್ತು ಸುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡನು. ಬೆಳಗೊಳದ ವಿಶಾಲಪ್ರದೇಶವೂ ಅವರ ಕೈವಶವಾಯಿತು. ಹೀಗೆ ಮೇಲಿಂದ ಮೇಲೆ ರಾಜ ಒಡೆಯರು ರಾಜ್ಯವನ್ನು ವಿಸ್ತರಿಸುತ್ತಾ ಹೋಗುತ್ತಿರುವುದನ್ನು ತಿರುಮಲ ಸಹಿಸಲಾರದೆ ಅವರ ಮೇಲೆ ಪರೋಕ್ಷ ದಾಳಿಗಳನ್ನು ಪ್ರಾರಂಭಿಸಿದನು. ಬೆಳಗೊಳದ ಸಂಗಪ್ಪ ಒಡೆಯರನ್ನು ರಾಜ ಒಡೆಯರನ್ನು ಕೊಲ್ಲಲು ಕಳುಹಿಸಲಾಯಿತು. ಸಿಂಗಪ್ಪ ರಾಜ ಒಡೆಯರನ್ನು ಇರಿಯಲು ಹೋದಾಗ ಕಂಭದ ಮರೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಎಲೆಯೂರ ದೇವರಾಜ (ರಾಜ ಒಡೆಯರ ಸಂಬಂಧಿ) ಚಕ್ಕನೆ ನೆಗೆದುಬಂದು ಕೊಲೆಯಾಗುವುದನ್ನೂ ತಪ್ಪಿಸಿದನು.

ಒಂದು ಕಡೆ ರಾಜ ಒಡೆಯರನ್ನು ನಾಶಪಡಿಸಲಾಗದೆ ನಿರಾಶನಾದ ತಿರುಮಲ ಚಕ್ರವರ್ತಿ ವೆಂಕಟನಿಂದಲೂ ಅಪಮಾನಕ್ಕೊಳಗಾಗಬೇಕಾಯಿತು. ವಿಜಯನಗರ ಅಧಿಕಾರಿಗಳನ್ನು ನರಸೀಪುರದ ಪಾಳೆಯಗಾರ ಸೆರೆಹಿಡಿದುಕೊಂಡು ಹೋದಾಗ, ರಾಜ ಒಡೆಯರ ಸಹಾಯ ಪಡೆದುಕೊಳ್ಳುವಂತೆ ವೆಂಕಟ ತಿರುಮಲನಿಗೆ ಆಜ್ಞೆ ಮಾಡಿದನು. ಇದರಿಂದ ತಿರುಮಲನಿಗೆ ಮತ್ತಷ್ಟು ಅವಮಾನವಾಗಿದ್ದಲ್ಲದೆ ರಾಜ ಒಡೆಯರ ಬಗ್ಗೆ ವೆಂಕಟನಿಗೆ ಸದಭಿಪ್ರಾಯ ಹೆಚ್ಚುತ್ತಾ ಹೋಯಿತು.

ಎರಡನೆಯ ತಿರುಮಲ ಮಾನಸಿಕ ಯಾತನೆ ದೈಹಿಕ ನಿಶ್ಯಕ್ತಿಯಿಂದ ಹಾಸಿಗೆ ಹಿಡಿದನು. ಇದೇ ಸಮಯದಲ್ಲಿ ಬೆನ್ನೊಫಣಿ (ಸರ್ಪಸುತ್ತು) ರೋಗ ಅವನನ್ನು ಕಾಡಲಾರಂಭಿಸಿತು. ಈ ಸಂದರ್ಭದಲ್ಲಿ ತನ್ನ "ದೇಶ ಕೋಶಗಳನ್ನು" ಉಮ್ಮತ್ತೂರು ಪಾಳೆಯಗಾರನಿಗೆ ಕೊಟ್ಟು ತಾನು ನಿವೃತ್ತನಾಗಿ ಹೊರಟುಹೋಗಬೇಕೆಂದು ಯೋಚಿಸಿದನು. ಆದರೆ ರಾಜ ಒಡೆಯರ ಪ್ರಾಬಲ್ಯದಿಂದ ಅದು ಸಾಧ್ಯವಾಗದೆ ಹೋಯಿತು. ಇತ್ತಕಡೆ ಚಕ್ರವರ್ತಿ ವೆಂಕಟ ರಾಜ ಒಡೆಯರನ್ನು ಶ್ರೀರಂಗಪಟ್ಟಣಕ್ಕೆ ಬರಲು ಆಹ್ವಾನಿಸಿದನು. ಈ ರೀತಿ ಶ್ರೀರಂಗಪಟ್ಟಣ, ಮೈಸೂರಿನ ದೊರೆ ರಾಜ ಒಡೆಯರಿಗೆ ಹಸ್ತಾಂತರವಾಯಿತು. ರಾಜ ಒಡೆಯರೇ ಶ್ರೀರಂಗಪಟ್ಟಣಕ್ಕೆ ಸೈನ್ಯ ಸಮೇತ ಪ್ರವೇಶಿಸಿ ಅದನ್ನೂ ವಶಪಡಿಸಿಕೊಂಡರು ಎನ್ನುವ ಅಭಿಪ್ರಾಯವೂ ಇದೆ. ಕಂಠೀರವ ನರಸರಾಜ ವಿಜಯವು ಹೇಳುವಂತೆ, ಆಡಳಿತ ನಿರ್ವಹಿಸುವುದು ಸಾಧ್ಯವಾಗದೆ ತಿರುಮಲನು ಪರಿವಾರ ಸಮೇತ ತಲಕಾಡಿನ ಬಳಿಯ ಮಾಲಂಗಿಗೆ ಹೋಗಿ ನೆಲೆಸಿದನು. ಸ್ವಲ್ಪ ಕಾಲಾನಂತರ ತಿರುಮಲ ಕಾಲವಾದನು. ಆಗ ರಾಜ ಒಡೆಯರು ಶ್ರೀರಂಗಪಟ್ಟಣಕ್ಕೆ ತಮ್ಮ ರಾಜಧಾನಿಯನ್ನು ವರ್ಗಾಯಿಸಿದರು. ಈ ಹೊಸ ವ್ಯವಸ್ಥೆಯನ್ನು ವಿಜಯನಗರದ ಚಕ್ರವರ್ತಿ ವೆಂಕಟ ಅನುಮೋದಿಸಿದನೆಂದು ತಿಳಿದುಬರುತ್ತದೆ.

ಈ ಅಧಿಕಾರ ಹಸ್ತಾಂತರ ಹೇಗೆ ನಡೆಯಿತೆನ್ನುವ ಬಗ್ಗೆ ಕೆಲವು ಭಿನ್ನಾಭಿಪ್ರಾಯಗಳಿವೆ. ತಿರುಮಲನು ತನ್ನ ಪದವಿಯನ್ನೂ ತ್ಯಜಿಸಿ ಮಾಲಂಗಿಗೆ ಹೋಗುವಾಗ ವಿಜಯನಗರದ ಸಿಂಹಾಸನವನ್ನೂ ರಾಜ ಒಡೆಯರಿಗೆ ಒಪ್ಪಿಸಿದನೆಂದು ಒಂದು ಅಭಿಪ್ರಾಯವಿದೆ. ಆದರೆ ಮೈಸೂರು ಒಡೆಯರ ಅಧಿಕೃತ ಇತಿಹಾಸ ಕೃತಿ Annals (ಶ್ರೀಮನ್ ಮಹಾರಾಜರ

ವಂಶಾವಳಿ) ಸಿಂಹಾಸನವನ್ನು ವಿಜಯನಗರದ ಚಕ್ರವರ್ತಿ ವೆಂಕಟ (ವೆಂಕಟಪತಿ) ರಾಜ ಒಡೆಯರಿಗೆ ನೀಡಿದನೆಂದು ತಿಳಿಸುತ್ತದೆ. ವೆಂಕಟ ರಾಜ ಒಡೆಯರಿಗೆ ರತ್ನಖಚಿತ ಸ್ವರ್ಣ ಸಿಂಹಾಸನದ ಕತೆಯನ್ನು ವಿವರಿಸಿದನು. ಕಡೆಗೆ ವಾರಂಗಲ್ಲಿನ ಪ್ರತಾಪರುದ್ರನ ವಶದಲ್ಲಿದ್ದು ಅಂತಿಮವಾಗಿ, ವಿದ್ಯಾರಣ್ಯರ ಮೂಲಕ ವಿಜಯನಗರದ ಅರಸರ ಕೈ ಸೇರಿತು. ತಾಳಿಕೋಟೆ ಯುದ್ಧದ ನಂತರ ವೈಭವದ ವಿಜಯನಗರ ಸಾಮ್ರಾಜ್ಯ ಪತನಗೊಂಡು ಅರವೀಡು ಸಂತತಿಯ ದೊರೆಗಳು ಸ್ವಲ್ಪಕಾಲ ಆಳ್ವಿಕೆ ನಡೆಸಿದರು. ಈಗ ಇಂಥ ಭವ್ಯ ಪರಂಪರೆಯುಳ್ಳ ಸಿಂಹಾಸನವನ್ನು ನಿನಗೆ ನೀಡುತ್ತಿದ್ದೇನೆ ಎಂದು ವೆಂಕಟ ನುಡಿದನೆಂದು ಆನಲ್ಸ್ (Annals) ತಿಳಿಸುತ್ತದೆ. ಚಕ್ರವರ್ತಿ ವೆಂಕಟಪತಿರಾಯ ಮಂತ್ರಿ ವಿರುಪಣ್ಣನ ಮೂಲಕ ರಾಜ ಒಡೆಯರಿಗೆ ಕಾಣಿಕೆಗಳನ್ನೂ ಕಳುಹಿಸಿದನೆಂದು ಚಿಕ್ಕದೇವರಾಯ ವಂಶಾವಳಿ ತಿಳಿಸುತ್ತದೆ. ಆದರೆ ಮೈಸೂರು ಅರಮನೆಯ ದಾಖಲೆಗಳ ಪ್ರಕಾರ ಸಿಂಹಾಸನ 18ನೆಯ ಶತಮಾನದಲ್ಲಿ ತಯಾರಾಯಿತು.

ಈ ರತ್ನ ಸಿಂಹಾಸನದ ಹಸ್ತಾಂತರ ವಿಜಯನಗರದ ಮತ್ತು ಮೈಸೂರು ರಾಜ್ಯಗಳ ಸಂಬಂಧದಲ್ಲಿ ಒಂದು ಮಹತ್ವದ ಘಟನೆ. ಇದನ್ನು ಪಡೆದುಕೊಂಡ ರಾಜ ಒಡೆಯರು 21 ಮಾರ್ಚ್ 1610ರಂದು ಶ್ರೀರಂಗಪಟ್ಟಣದಲ್ಲಿ ತಮ್ಮ ರಾಜ್ಯಭಾರವನ್ನು ಅಧಿಕೃತವಾಗಿ ಪ್ರಾರಂಭಿಸಿದರು. ನರಸರಾಜ ಒಡೆಯರು ಯುವರಾಜರ ಅಧಿಕಾರವನ್ನು ವಹಿಸಿದರು.

ರಾಜ ಒಡೆಯರ ದಿಗ್ವಿಜಯಗಳು ಮತ್ತು ಮುಂದುವರೆದವು. 1619–1616ರ ಮಧ್ಯೆ ಪಿರಿಯಾಪಟ್ಟಣದ ನಂಜುಂಡ ಅರಸನಿಂದ ಸಿರಿಯೂರು, ಶ್ರೀಕಂಠ ಒಡೆಯನಿಂದ ಸರಗೂರು, ಹದಿನಾಡಿನ ನಂಜರಾಜನಿಂದ 22 ಸಾವಿರ ನಾಡು, ತೆರಕಣಾಂಬಿ ಮತ್ತು ಉಮ್ಮತ್ತೂರುಗಳನ್ನು ವಶಪಡಿಸಿಕೊಂಡನು. 1615–1617ರ ಮಧ್ಯೆ, ಹುರ ಹರದನಹಳ್ಳಿ, ತಲಕಾಡಲಹುಲ್ಲಹಳ್ಳಿ, ಕಳಲೆಗಳನ್ನು ವಶಪಡಿಸಿಕೊಂಡರು. ಈ ರೀತಿ ರಾಜ್ಯ ವಿಸ್ತರಣೆ ಮಾಡುತ್ತಿದ್ದಂತೆ ರಾಜ ಚಿಹ್ನೆಗಳಾದ ಧರಣೀ, ವರಾಹ, ಗರುಡ, ಶಂಖ, ಸಿತಾತಪತ್ರ ಚಕ್ರಗಳನ್ನು ಪಡೆದುಕೊಂಡರು. ಇವುಗಳಲ್ಲಿ ಕೆಲವು ವಿಜಯನಗರದ ಚಿಹ್ನೆಗಳೆಂಬುದು ಗಮನಾರ್ಹ.

ರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಮೈಸೂರು ರಾಜ್ಯದ ವಿಸ್ತಾರವನ್ನು "**ತಮ್ಮ ಕುಲಕ್ರಮಾಹತ ಮೈಸೂರಿಗೆ ಸಲ್ವಸ್ವತ್ತು ಮೂರುವರೆವಳ್ಳಿಗಳ್**" ಎಂದು ಚಿಕ್ಕದೇವರಾಯ ವಂಶಾವಳಿ ತಿಳಿಸುತ್ತದೆ. ಅಂದರೆ ರಾಜ ಒಡೆಯರಿಗೆ ತಮ್ಮ ಹಿಂದಿನವರಿಂದ ಇಪ್ಪತ್ತಮೂರು ಗ್ರಾಮಗಳು ಮಾತ್ರ ಬಂದಿದ್ದವು ಎಂಬುದು ಅರ್ಥ. ರಾಜ ಒಡೆಯರು 33 ಗ್ರಾಮಗಳ ಒಡೆಯರಾಗಿದ್ದರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದನ್ನು ಹಲವು ಹಳ್ಳಿಗಳನ್ನು ಸೇರಿಸಿ ಒಂದು ರಾಜ್ಯವನ್ನಾಗಿ ಕಟ್ಟಿದ್ದರು. 1617ರಲ್ಲಿ ಮೈಸೂರು ದಕ್ಷಿಣದಲ್ಲಿ ಶ್ರೀರಂಗಪಟ್ಟಣದಿಂದ ಉಮ್ಮತ್ತೂರು ತೆರಕಣಾಂಬಿಯವರೆಗೆ, ಪೂರ್ವ ಬನ್ನೂರಿನಿಂದ ಪಶ್ಚಿಮ ಮತ್ತು ವಾಯುವ್ಯ ಮಾವತ್ತಾರು, ಅಕ್ಕಿಹೆಬ್ಬಾಳು, ಹೊಳೆನರಸೀಪುರದವರೆಗೆ ಹರಡಿದ್ದಿತು. ಪಶ್ಚಿಮದ ಡಣಾಯಕನ ಕೋಟೆ ರಂಗಸಮುದ್ರ, ವಿಜಯಪುರ, ನಳೂರು, ಅರಕೆರೆ, ಯಾರಿಯೂರು ಮಾರ್ಗಗಳಲ್ಲಿ ರಾಜ ಒಡೆಯರ ಪ್ರಭಾವವಿದ್ದಿತು. ರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಪ್ರತಿನಿಧಿಯು ಸಿಂಹಾಸನವೇರುವ ಮೂಲಕ ಮೈಸೂರು ಅರಸರ ಸ್ವತಂತ್ರ ರಾಜ್ಯ ಸ್ಥಾಪನೆಗೆ ನಾಂದಿ ಹಾಡಿದ್ದರೆಂದು ಹೇಳಬಹುದು.

ರಾಜ ಒಡೆಯರ ಆಡಳಿತಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣವೆಂದರೆ ಅಲಮೇಲಮ್ಮನ ಪ್ರಕರಣ. ಶ್ರೀರಂಗಪಟ್ಟಣದಿಂದ ನಿವೃತ್ತಿಹೊಂದಿ ತಿರುಮಲ ಮತ್ತು ಆತನ ಪತ್ನಿ ಅಲಮೇಲಮ್ಮ ತಲಕಾಡಿನಲ್ಲಿ ಬಂದು ನೆಲೆಸಿದರು. ಅಲಮೇಲಮ್ಮನ ಬಳಿ ಇದ್ದ ಆಭರಣಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿ ವಿಫಲನಾಗಿ ಸೈನಿಕರನ್ನು ಕಳುಹಿಸಿ ಬಲಾತ್ಕಾರದಿಂದ ಒಡವೆಗಳನ್ನು ಪಡೆಯಲು ಪ್ರಯತ್ನಿಸಿದಾಗ, ಅಲಮೇಲಮ್ಮ ಒಡೆಯರ ವಂಶದ ಅರಸರಿಗೆ ಮಕ್ಕಳಾಗದಿರಲಿ ಮೊದಲಾದ ಶಾಪವನ್ನೂ ಕೊಟ್ಟು ಮಾಲಂಗಿ ಮಡುವಿನಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಂಡಳೆಂದೂ ಜನಜನಿತವಾದ ಕತೆಗಳಿವೆ.

ರಾಜ ಒಡೆಯರ ನಿಧನಾನಂತರ ಅವರ ಮೊಮ್ಮಗ ಆರನೆಯ ಚಾಮರಾಜ ಒಡೆಯರು ಅಧಿಕಾರಕ್ಕೆ ಬಂದರು. ಅವರು 14 ವರ್ಷ ವಯಸ್ಸಿನ ಬಾಲಕರಾಗಿದ್ದುದರಿಂದ ದಳವಾಯಿ ಬೆಟ್ಟದ ಅರಸು ರಾಜ ಪ್ರತಿನಿಧಿಯಾಗಿ 1620ರ ವರೆಗೆ ಆಡಳಿತವನ್ನು ನೋಡಿಕೊಂಡನು. ಈ ಸಮಯದಲ್ಲಿ ಬೆಟ್ಟದ ಅರಸು ಕೂಡ ರಾಜ್ಯ ವಿಸ್ತರಣಾ ಕಾರ್ಯವನ್ನು ಕೈಗೊಂಡನು. ಮೈಸೂರಿನ ಮುಖ್ಯ ನೆರೆ ರಾಜ್ಯಗಳೆಂದರೆ ಚನ್ನಪಟ್ಟಣದ ಜಗದೇವರಾಯ ಮತ್ತು ಮಧುರೆಯ ಮುತ್ತುನಾಯಕ. ಜಗದೇವರಾಯನ ವಿರುದ್ಧ ಬೆಟ್ಟದ ಅರಸು ಅನೇಕ ದಾಳಿಗಳನ್ನೂ ಕೈಗೊಂಡನು. ವಿಜಯನಗರದ ಚಕ್ರವರ್ತಿಗಳೊಡನೆ ವೈವಾಹಿಕ ಸಂಬಂಧ ಹೊಂದಿದ್ದ ಜಗದೇವರಾಯ ಸಾಕಷ್ಟು ಪ್ರಬಲ ಸೈನ್ಯವನ್ನು ಹೊಂದಿದ್ದರೂ ಇತ್ತೀಚೆಗೆ ಮೈಸೂರು ರಾಜ್ಯವು ಅತ್ಯಂತ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದುದನ್ನು ಗಮನಿಸಿದ್ದನು. ವಿಜಯನಗರದ ಚಕವರ್ತಿಯೇ ಮೈಸೂರು ಅರಸರನ್ನೂ ಮಾನ್ಯ ಮಾಡಿರುವಾಗ ಅವರ ವಿರೋಧ ಕಟ್ಟಿಕೊಳ್ಳುವುದು ಕ್ಷೇಮವಲ್ಲವೆಂದು ತೀರ್ಮಾನಿಸಿ, ಶ್ರೀರಂಗಪಟ್ಟಣಕ್ಕೆ ತನ್ನ ರಾಯಬಾರಿಯನ್ನು ಉಡುಗೊರೆ 3000 ವರಹ ಒಂದು ಆನೆ ಸಮೇತ ಕಳುಹಿಸಿಕೊಟ್ಟನು. ಆದರೆ ಮೈಸೂರು ಒಡೆಯರು ಜಗದೇವರಾಯನನ್ನು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಒಪ್ಪಿರಲಿಲ್ಲ. ಆದುದರಿಂದ ಜಗದೇವರಾಯನಿಗೆ ಸೇರಿದ್ದ ನಾಗಮಂಗಲದ ಮೇಲೆ ದಳವಾಯಿ ದಾಳಿ ಮಾಡಿದನು. ನಾಗಮಂಗಲದ ಅಧಿಪತಿ ಚನ್ನಯ್ಯ ಅಣ್ಣಯ್ಯ ಈ ಯುದ್ಧದಲ್ಲಿ ಮೃತನಾಗಿ ಮೈಸೂರು ಸೈನ್ಯ ಜಯ ಗಳಿಸಿತು. ಜಗದೇವರಾಯ ಕೂಡಲೇ ತನ್ನ ಸಹೋದರ ಅಂಕುಶರಾಯ ಮತ್ತು ಕನ್ನಂಬಾಡಿಯ ಗೋಪಾಲ ರಾಜಯ್ಯನ ಸಹಾಯವನ್ನು ಪಡೆದು, ಮೈಸೂರು ಸೈನ್ಯವನ್ನು ಹಿಂದಕ್ಕಟ್ಟಿದರು. ಆದರೆ ದಳವಾಯಿ ಅರಸು ಬಲವಾದ ಸೈನ್ಯದೊಡನೆ ಜಗದೇವರಾಯನ ಸಂಯುಕ್ತ ಸೈನ್ಯವನ್ನು ಸೋಲಿಸಿ, ಹೊಸಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇದಲ್ಲದೆ ಜಗದೇವರಾಯನಿಗೆ ಸೇರಿದ ಅನೇಕ ಪ್ರದೇಶಗಳನ್ನು ಮೈಸೂರು ಒಡೆಯರು ಗೆದ್ದು ಸ್ವಾಧೀನ ಪಡಿಸಿಕೊಳ್ಳುತ್ತಾ ಹೋದರು. ದಳವಾಯಿ ಲಿಂಗಣ್ಣ ಚನ್ನಪಟ್ಟಣದ ಮೇಲೆ ದಾಳಿ ನಡೆಸಿ ಯುದ್ಧದಲ್ಲಿ ಮಡಿದನು. 1630ರಲ್ಲಿ ವಿಕ್ರಮರಾಯ ದಳಪತಿಯಾಗಿ ನೇಮಕಗೊಂಡ ಮೇಲೆ ಮೈಸೂರಿನ ದೀರ್ಘಕಾಲದ ಶತ್ರು ಚನ್ನಪಟ್ಟಣದ ಜಗದೇವರಾಯನ ಮೇಲೆ ದಂಡೆತ್ತಿ ಹೊಗಿ ಚನ್ನಪಟ್ಟಣ ಮತ್ತು ನಾಗಮಂಗಲಗಳನ್ನು ಗೆದ್ದು ವಶಪಡಿಸಿಕೊಂಡನು. ಇದರಿಂದ ಮೈಸೂರು ಒಡೆಯರ ರಾಜ್ಯ ವಿಸ್ತಾರವಾಗಿದ್ದು ಮಾತ್ರವಲ್ಲದೆ ವಿಜಯನಗರ ಸಂಬಂಧ ಹೊಂದಿದ ಒಬ್ಬ ಪ್ರಬಲ ಪ್ರತಿಸ್ಪರ್ಧಿಯನ್ನು ನಾಶಪಡಿಸಿದಂತಾಯಿತು.

ರಣಧೀರ ಕಂಠೀರವ ನರಸರಾಜ ಒಡೆಯರ್ ಸಿಂಹಾಸನವೇರಿದ ನಂತರ ಮೈಸೂರಿನ ಇತಿಹಾಸದಲ್ಲಿ ಒಂದು ಪರ್ವಕಾಲವು ಪ್ರಾರಂಭವಾಯಿತು. ಮೈಸೂರು ರಾಜ್ಯಕ್ಕೆ ತನ್ನದೇ ಆದ ಸ್ವತಂತ್ರವಾದ ಅಸ್ತಿತ್ವವು ದೊರಕಿದ್ದು ಈ ಸಮಯದಲ್ಲಿಯೇ. ಮೈಸೂರು ಒಡೆಯರ ಇತಿಹಾಸವು ಸ್ಪಷ್ಟ ರೂಪವನ್ನು ಪಡೆದಿದ್ದು ಸಹ ಇದೇ ಅವಧಿಯಲ್ಲಿ ಅಂದರೆ ತಪ್ಪಲ್ಲ. ಇದುವರೆಗೆ ದಂತಕತೆಗಳ ಮೂಲಕ ಇತಿಹಾಸವನ್ನೂ ನಿರೂಪಿಸುವುದು ತಪ್ಪಿ ಖಚಿತ ದಾಖಲೆಗಳ ಮೂಲಕ ಇತಿಹಾಸವನ್ನು ದಾಖಲಿಸುವ ಪದ್ಧತಿ ಆರಂಭವಾಯಿತು.

1639ರಲ್ಲಿ ಮೈಸೂರು ಸಿಂಹಾಸನವನ್ನೇರಿದ ರಣಧೀರ ಕಂಠೀರವ ನರಸರಾಜ ಒಡೆಯರು ತಾವು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನರಾಗಿದ್ದರೆಂಬುದೇ ಹೇಳಿಕೊಂಡರು. 1639ರ ಗಜ್ಜಗನಹಳ್ಳಿ ಶಾಸನದಲ್ಲಿ ಅವರು ತಮ್ಮನ್ನು ಮಹಾಮಂಡಲೇಶ್ವರ ಎಂದು ಕರೆದುಕೊಂಡಿದ್ದಾರೆ. ಕಂಠೀರವ ನರಸರಾಜ ಒಡೆಯರ ಆಳ್ವಿಕೆಯ ಕಾಲ ಮೈಸೂರಿನ ಹಾಗೂ ದಕ್ಷಿಣ ಭಾರತ ಇತಿಹಾಸದ ಅತ್ಯಂತ ಕಷ್ಟಕರವಾದ ಕಾಲವೆಂದು ಹೇಳಲಾಗಿದೆ. ಒಂದು ಕಡೆ ಮೊಘಲರು ದಕ್ಷಿಣ ಭಾರತದ ಪ್ರದೇಶವನ್ನು ಆಕ್ರಮಿಸಿಕೊಳ್ಳುತ್ತಾ ಹೋಗುತ್ತಿದ್ದರೆ, ಮೈಸೂರಿನ ಮೇಲೆ ಬಿಜಾಪುರ, ಇಕ್ಕೇರಿ ಮಧುರೆ ನಾಯಕರು ಧಾಳಿಗಳನ್ನು ನಡೆಸಿದರು. ಈ ಮಧ್ಯೆ ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳು ಸೇರಿ ಪೆನುಗೊಂಡದ ಮೇಲೆ ಆಕ್ರಮಣ ನಡೆಸಿದವು. ವಿಜಯನಗರದ ದೊರೆ ಶ್ರೀರಂಗನಿಗೆ ಯಾರು ರಕ್ಷಣೆ ನೀಡಲು ಮುಂದೆ ಬರಲಿಲ್ಲ.

ಶ್ರೀರಂಗ ರಾಜ್ಯದಿಂದ ರಾಜ್ಯಕ್ಕೆ ಅಲೆದಾಡುತ್ತಾ ತಮ್ಮ ಸಾಮಂತರಾಜ್ಯಗಳಲ್ಲಿ ಸ್ವಲ್ಪ ಕಾಲ ಆಶ್ರಯ ಪಡೆದು ಅನಂತರ ಮತ್ತೊಂದು ರಾಜ್ಯಕ್ಕೆ ಓಡಿ ಹೋಗುವ ಪರಿಸ್ಥಿತಿಯುಂಟಾಯಿತು.

ಕಂಠೀರವ ನರಸರಾಜನು ವಿಜಯನಗರದ ಮೇಲಿನ ಯುದ್ಧಗಳಲ್ಲಿ ಭಾಗವಹಿಸಿದೆ ತನ್ನ ರಾಜ್ಯದ ಭದ್ರತೆಯನ್ನೂ ಕಾಪಾಡುವ ಕಾರ್ಯದಲ್ಲಿ ತೊಡಗಿದ್ದನು. ಆದರೆ, 1650ರಲ್ಲಿ ತಂಜಾವೂರಿನ ನಾಯಕ ಶ್ರೀರಂಗನನ್ನೂ ತನ್ನ ರಾಜ್ಯದಿಂದ ಹೊರಗೆ ಕಳುಹಿಸಿದಾಗ ರಣಧೀರ ಆತನನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿ ಆತನನ್ನೂ ಅತ್ಯಂತ ಗೌರವದಿಂದ ಬರಮಾಡಿಕೊಂಡನು. ತನ್ನ ರಾಜ್ಯದ ಯಾವ ಭಾಗದಲ್ಲಿ ಬೇಕಾದರೂ ನೆಲೆಸುವಂತೆ ರಾಜನನ್ನು ಕೋರಿ ಅವನಿಗಾಗಿ ಎಲ್ಲ ವಿಧವಾದ ಸೌಕರ್ಯಗಳನ್ನು ಒದಗಿಸುವುದಾಗಿ ಭರವಸೆ ನೀಡಿದನು. ಶ್ರೀರಂಗನು ಕಂಠೀರವ ನರಸರಾಜನ ಆಹ್ವಾನವನ್ನೂ ಅಂಗೀಕರಿಸಿ ಶ್ರೀರಂಗಪಟ್ಟಣದ ಬಳಿ ಬಂದು ನೆಲೆಸಿದನು. ಶ್ರೀರಂಗನು ಮತ್ತೊಮ್ಮೆ ತನ್ನ ಸಾಮ್ರಾಜ್ಯವನ್ನು ಗೆದ್ದುಕೊಂಡು ಹಿಂದಿರುಗಿ ವಿಜಯನಗರ ಸಿಂಹಾಸನದ ಮೇಲೆ ರಾರಾಜಿಸಲು ಯೋಜನೆ ಹಾಕಿಕೊಂಡು ಸೈನ್ಯ ಸಂಘಟನೆಗೂ ಕ್ರಮ ಕೈಗೊಂಡನು. ಆದರೆ, ಬಿಜಾಪುರದ ದಳಪತಿ ಖಾನ್ ಮಹಮ್ಮದ್ 1652ರಲ್ಲಿ ಪೆನುಗೊಂಡೆಗೆ ಮುತ್ತಿಗೆ ಹಾಕಿ ಸ್ವಾಧೀನಪಡಿಸಿಕೊಂಡನು. ಮುಂದಿನ ವರ್ಷ ವೆಲ್ಲೂರನ್ನೂ ಗೆದ್ದು ವಶಪಡಿಸಿಕೊಂಡನು. ನಿರ್ವಾಹವಿಲ್ಲದೇ ಶ್ರೀರಂಗನು ತನಗೆ ಒದಗಬಹುದಾದ ಅವಕಾಶಕ್ಕಾಗಿ ಕಾದು ಕುಳಿತುಕೊಳ್ಳಲು ನಿರ್ಧರಿಸಿದನು.

ಶ್ರೀರಂಗನ ಕಡೆಯ ದಿನಗಳಂತೆ ರಣಧೀರ ಕಂಠೀರವ ಅಂತ್ಯದ ದಿನಗಳೂ ಬಹು ಕಠಿನವಾಗಿದ್ದವು. ಬಿಜಾಪುರ, ಇಕ್ಕೇರಿ ಮತ್ತು ಮಧುರೆ ನಾಯಕರ ಕೈಯಲ್ಲಿ ಸೋಲನ್ನು ಅನುಭವಿಸಿ ಝುರ್ಜರಿತವಾಗಿ 1659ರಲ್ಲಿ ಆತನು ಕಾಲವಾದನು. ನರಸರಾಜನ ನಂತರ ಅಧಿಕಾರಕ್ಕೆ ಬಂದ ದೇವರಾಜ ಒಡೆಯರ ಆಳ್ವಿಕೆಯಲ್ಲಿ ವಿಜಯನಗರ – ಮೈಸೂರು ಸಂಬಂಧದಲ್ಲಿ ಹೊಸ ಅಧ್ಯಾಯವು ಪ್ರಾರಂಭವಾಯಿತು. ಇವರು ವಿಜಯನಗರದ ಮಂಡಲೇಶ್ವರ ಪಟ್ಟಿಯನ್ನೂ ಕಿತ್ತು ಹಾಕಿ ಶ್ರೀಮದ್ರಾಜಾಧಿರಾಜ ಮೈಸೂರು ದೇವರಾಜ ಒಡೇರೈಯವರೆಂದು ಕರೆಸಿಕೊಂಡರು. ಹಾಗೆಯೇ ವಿಜಯನಗರದ ಹಿಂದೂರಾಯ ಸುರತ್ರಾಣ ಮೊದಲಾದ ಬಿರುದುಗಳನ್ನಾಧರಿಸಲಾರಂಭಿಸಿದರು. ಮೈಸೂರು ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿ ಎಂದು ಸೂಚಿಸುವ ಸ್ಪಷ್ಟ ಹೆಜ್ಜೆ ಇದಾಗಿತ್ತೆಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು

1. ರಾಗೌ, *ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು.*
2. ವಸು ಎಂ.ವಿ., *ದಕ್ಷಿಣ ಕರ್ನಾಟಕದ ಅರಸು ಮನೆತನಗಳು.*
3. ಪುಟ್ಟಣ್ಣ ಎಂ.ಎಸ್., *ಚಿತ್ರದುರ್ಗದ ಪಾಳೆಯಗಾರರು*
4. ಪುಟ್ಟಣ್ಣ ಎಂ.ಎಸ್., *ಇಕ್ಕೇರಿ ನಾಯಕರು*
5. ಪುಟ್ಟಣ್ಣ ಎಂ.ಎಸ್., *ಹಾಗಲವಾಡಿಯ ಪಾಳೆಯಗಾರರು*
6. ನಂಜುಂಡಸ್ವಾಮಿ ಎಸ್, *ಕರ್ನಾಟಕ ಪಾಳೆಯಗಾರರು ಮತ್ತು ಒಡೆಯರು*
7. ಅಬ್ದುಲ್ ಸತ್ತಾರ, ಪಿ., *ರಾಜ ಒಡೆಯರು*
8. ತಿತಾ ಶರ್ಮ (ಸಂ.), *ಕಂಠೀರವ ನರಸರಾಜ ವಿಜಯ*
9. ಶಾಮಶಾಸ್ತ್ರಿ ಆರ್. (ಸಂ.), *ಕಂಠೀರವ ನರಸರಾಜ ವಿಜಯ*
10. ಕಲ್ಬುರ್ಗಿ ಎಂ.ಎಂ. (ಸಂ.), *ಕರ್ನಾಟಕ ಕೈಫಿಯತ್ತುಗಳು*
11. ಬೆಟಗೇರಿ ಕೃಷ್ಣಶರ್ಮ, *ಕರ್ನಾಟಕ ಜನಜೀವನ*
12. ಶ್ಯಾಮರಾವ್ ಎಂ., *ಮೈಸೂರು ಸಂಸ್ಥಾನದ ಚರಿತ್ರಸಾರ*

13. Neelakantashastree K.A., *History of South India*
14. Mahalingam T.V., *South Indian Polity*
15. Ramasharma M.H., *History of Vijayanagar Empire.*
16. Sherwani M.H., *History of Medieval Deccan*
17. Robert Sewell, *The Forgotten Empire*
18. Surya Narayana Rao, *The Never to be Forgotten Empire.*
19. Salatore B.A., *Social and Political Life in the Vijayanagar Empire.*

20. ಉಮ್ಮತ್ತೂರು–ವಿಜಯನಗರ ಸಂಬಂಧಗಳು ಮತ್ತು ಸಂಘರ್ಷಗಳು

ಡಾ. ಎಸ್. ಶಿವರಾಮು

ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಸಣ್ಣಪುಟ್ಟ ರಾಜಕೀಯ ಶಕ್ತಿಗಳ ಪಾತ್ರ ಮಹತ್ವವೆನಿಸಿದೆ. ಈ ಸ್ಥಳೀಯ ರಾಜಕೀಯ ಶಕ್ತಿಗಳೇ ದೊಡ್ಡ ಸಾಮ್ರಾಜ್ಯದ ಬೆಳವಣಿಗೆಯಲ್ಲೂ ಸಹಕಾರಿಯಾಗಿವೆ. ದಕ್ಷಿಣ ಭಾರತದ ವಿಶಾಲ ಸಾಮ್ರಾಜ್ಯವಾದ ವಿಜಯನಗರದ ಕೀರ್ತಿ ಪತಾಕೆಯನ್ನು ವಿಸ್ತರಿಸುವಲ್ಲಿ ಈ ಪ್ರಾದೇಶಿಕ ಶಕ್ತಿಗಳ ಅಥವಾ ನಾಯಕರ ಸೇವೆ ಗಮನಾರ್ಹವಾದುದು. ಇಂತಹ ಪ್ರಾದೇಶಿಕ ಶಕ್ತಿಗಳಲ್ಲಿ ಮೈಸೂರು ಒಡೆಯರು, ಉಮ್ಮತ್ತೂರು ಪ್ರಭುಗಳು, ಕಳಲೆ, ಹದಿನಾಡು, ನಾಗಮಂಗಲ ನಾಯಕರುಗಳು ವಿಶಿಷ್ಟ ಪಾತ್ರ ವಹಿಸಿದರೆಂದು ಹೇಳಬಹುದು. ಅದರಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಪ್ರಮುಖ ಪ್ರಾದೇಶಿಕ ಶಕ್ತಿಯಾಗಿದ್ದ ಉಮ್ಮತ್ತೂರು ಪ್ರಭುಗಳು ಮಂಡ್ಯ ಪ್ರದೇಶದಲ್ಲಿ ವಿಜಯನಗರ ಸಾಮ್ರಾಟರೊಂದಿಗೆ ಹೊಂದಿದ್ದ ರಾಜಕೀಯ ಸಂಬಂಧ ಹಾಗೂ ಸಂಘರ್ಷಣೆಗಳನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

ಮಂಡ್ಯ ಪ್ರದೇಶದವು ವಿಜಯನಗರ ಅರಸರ ಕಾಲದಲ್ಲಿ ಹೊಯ್ಸಳ ನಾಡೆಂದೇ ಪ್ರಸಿದ್ಧವಾಗಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಹಲವು ಹೊಸ ಪ್ರಾದೇಶಿಕ ಶಕ್ತಿಗಳು ಜನ್ಮ ತಾಳಿದವು. ಉಮ್ಮತ್ತೂರಿನ ಪಾಳೆಯಗಾರರದ್ದು ಪುನಃಶ್ಚೇತನಗೊಂಡ ಒಂದು ಮುಖ್ಯವಾದ ರಾಜಕೀಯ ಶಕ್ತಿಯಾಗಿತ್ತು. ಈ ಪಾಳೆಯಗಾರರು ಮೈಸೂರು ಜಿಲ್ಲೆಯ ದಕ್ಷಿಣ ಭಾಗಗಳಾದ ನಂಜನಗೂಡಿನ ಸ್ವಲ್ಪಭಾಗ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ಮಳವಳ್ಳಿ ಹಾಗೂ ಕೊಯಮತ್ತೂರಿನ ಸ್ವಲ್ಪ ಭಾಗಗಳ ಮೇಲೆ ತಮ್ಮ ಹತೋಟಿಯನ್ನು ಸ್ಥಾಪಿಸಿಕೊಂಡಿದ್ದರು. ಉಮ್ಮತ್ತೂರು ಪಾಳೆಯಗಾರರು ತಮ್ಮ ಪಾಳೆಯಪಟ್ಟನ್ನು ಆಂತರಿಕ ದಂಗೆಗಳಿಂದಲೂ, ಬಾಹ್ಯ ಆಕ್ರಮಣದಿಂದಲೂ ಕಾಪಾಡಿಕೊಂಡು ಬರಲು ಹೋರಾಟ ನಡೆಸಿದರು.[1] 14 ಮತ್ತು 17ನೇ ಶತಮಾನದ ನಡುವಿನ ದಕ್ಷಿಣ ಭಾರತದ ಐತಿಹಾಸಿಕ ಹಿನ್ನಲೆಯಲ್ಲಿ ಈ ಪಾಳೆಯಪಟ್ಟು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಆಳ್ವಿಕೆ ನಡೆಸುವುದು ದುಸ್ತರವಾಗಿತ್ತು. ಆದರೂ ಸರಿಸುಮಾರು 3 ಶತಮಾನಗಳ ಕಾಲ ತಮ್ಮ ಪಾಳೆಯಪಟ್ಟನ್ನು ರಕ್ಷಣೆ ಮಾಡಿ ಉಳಿದುಕೊಂಡದ್ದು ಆಶ್ವರ್ಯವೆಂದು ಹೇಳಬಹುದು. ಇವರು ಮೈಸೂರಿನ ದಕ್ಷಿಣಭಾಗದ ಪ್ರಮುಖ ಅರಸರಾಗಿದ್ದು, ಮೈಸೂರು ಒಡೆಯರಿಗೆ ಈ ಭಾಗದ ಮುಖ್ಯ ವೈರಿಗಳಾಗಿದ್ದರು. ಆದರೆ ಇವರು ವಿಜಯನಗರದ ಸಾಮಂತರಾಗಿದ್ದುದರಿಂದ ರಾಜಕೀಯವಾಗಿ ಪ್ರಭಾವಶಾಲಿಗಳಾಗಿದ್ದರು. ಉಮ್ಮತ್ತೂರು ಚಾಮರಾಜನಗರ ತಾಲ್ಲೂಕಿನಲ್ಲಿರುವ ಚಿಕ್ಕಗ್ರಾಮವಾಗಿದೆ. ಈ ಅರಸರ ಮುಖ್ಯ ಕೋಟೆಯು ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದ ದ್ವೀಪದಲ್ಲಿದೆ.[2] ಶಿಂಷಾ ಜಲಪಾತದ ಸಮೀಪವೇ ಅವರ ಕುಲದೈವ ಸೋಮೇಶ್ವರನ ದೇವಾಲಯವೂ ಇದೆ. ಕಾವೇರಿ ಮತ್ತು ಕಪಿಲೆಗಳಿಂದ ಸುತ್ತುವರಿಯಲ್ಪಟ್ಟ ಮೈಸೂರು ಮತ್ತು ಮಂಡ್ಯ ಪ್ರದೇಶದಲ್ಲಿ ಈ ಮನೆತನದವರು ಆಳುತ್ತಿದ್ದರು. ಉಮ್ಮತ್ತೂರು ಪಾಳೆಯಪಟ್ಟಿನ ರಾಜಕೀಯ ಸಂಬಂಧದಂತಹ ಸೂಕ್ಷ್ಮ ವಿಷಯವನ್ನು ಸಮಗ್ರವಾಗಿ ಅಧ್ಯಯನ ಮಾಡಲು ಸಾಕಷ್ಟು ಸಾಮಾಗ್ರಿಗಳು ದೊರೆಯುವುದಿಲ್ಲ. ಲಭ್ಯವಿರುವ ಮಂಡ್ಯಪ್ರದೇಶದಲ್ಲಿ ದೊರೆತಿರುವ ಶಾಸನಗಳನ್ನು ಇಲ್ಲಿ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಮಂಡ್ಯಪ್ರದೇಶದಲ್ಲಿ ವಿಜಯನಗರ ಅರಸರ ಸಾಮಂತರಾಗಿದ್ದ ಉಮ್ಮತ್ತೂರಿನ ದೊರೆಗಳ ಐದು ಶಾಸನಗಳು ಮಳವಳ್ಳಿಯಲ್ಲಿ ದೊರೆತಿವೆ. ಇವುಗಳಲ್ಲಿ ಪ್ರಾಚೀನವಾದುದು ಮಳವಳ್ಳಿಯ ಹೊನಗನಹಳ್ಳಿಯ 149ನೆಯ ಶಾಸನ. ಇದು ಕ್ರಿ.ಶ. 1516 ನೆಯ ಶತಮಾನಕ್ಕೆ ಸೇರಿದ್ದು, ಮಹಾಮಂಡಳೇಶ್ವರ ವೀರಇಮ್ಮಡಿರಾಯಒಡೆಯನು ಬನ್ನಿಯೂರು ಗ್ರಾಮದ

ಬಳಿಯ ಹೊಲಗನಹಳ್ಳಿಯನ್ನು (ಹೊನಗನಹಳ್ಳಿ) ಬನ್ನಿಯೂರ ಮಾಯಪ್ಪನೆಂಬ ಅಧಿಕಾರಿಗೆ ದತ್ತಿಬಿಟ್ಟ ವಿಚಾರವನ್ನು ಈ ಶಾಸನದಲ್ಲಿ ದಾಖಲಿಸಿದೆ.[3] ಇದೇ ತಾಲ್ಲೂಕಿನ ಕ್ರಿ.ಶ. 1506ರ ಅವಧಿಯ ಮುಟ್ಟಹಳ್ಳಿಯ 166ನೆಯ ಶಾಸನವು ವಿಜಯನಗರದ ತುಳುವ ವಂಶದ ನರಸಿಂಹನ ಕಾಲಕ್ಕೆ ಸೇರಿದ್ದು, ಉಮ್ಮತ್ತೂರಿನ ದೊರೆದೇಪಣ್ಣೊಡೆಯನ ಮಗ ಚಿಕ್ಕರಾಯನನ್ನು ಕುರಿತದ್ದಾಗಿದೆ. ಚಿಕ್ಕರಾಯನಿಗೆ 'ಪೆನುಗೊಂಡೆಚಕ್ರೇಶ್ವರ' ಎಂಬ ಪ್ರಶಸ್ತಿಯಿತ್ತು. ಮಲ್ಲರಾಜ ಎಂಬುದು ಈತನ ಇನ್ನೊಂದು ಹೆಸರು. ಈತ ತೆರಕಣಾಂಬಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದಾಗ ತುಳುವ ಮನೆತನದ ನರಸಿಂಹ ಮಹಾರಾಯನು ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಿದ್ದನು. ಚಿಕ್ಕರಾಯನು ತಲಕಾಡುನಾಡು ಧನಗೂರು ಸ್ಥಳದ ಮೊನೆಮುಟ್ಟರ ಹಳ್ಳಿಯನ್ನು 'ಚಿಕ್ಕರಾಯಸಾಗರ' ಎಂದು ತನ್ನ ಹೆಸರಿನಲ್ಲಿ ಪುನರ್ನಾಮಕರಣ ಮಾಡಿ ಆ ಊರನ್ನು ಅದರ ಸಕಲ ಆದಾಯಗಳೊಂದಿಗೆ ಆಲಿಕೊಂಡದ ನಾಗಭಟ್ಟ ಎಂಬ ವಿದ್ವಾಂಸನಿಗೆ ದತ್ತಿಬಿಟ್ಟಿದ್ದನು. ಮೊನೆಮುಟ್ಟರಹಳ್ಳಿಯನ್ನು ಈತ ಅಗ್ರಹಾರವಾಗಿ ಪರಿವರ್ತಿಸಿದನ್ನು ವಿವರಿಸಿದೆ.[4]

ಇದೇ ತಾಲ್ಲೂಕಿನ ಕುಂದೂರಿನ 130ನೆಯ ಶಾಸನವು ಕ್ರಿ.ಶ. 1510ರ ಅವಧಿಯದ್ದಾಗಿದ್ದು, ಉಮ್ಮತ್ತೂರಿನ ದೊರೆವೀರಚಿಕ್ಕರಾಯಒಡೆಯನ ನಿರೂಪದಿಂದ ಸಾದಿಯಪವೊಡೆಯನು ದತ್ತಿ ನೀಡಿದ ಸಂಗತಿ ತಿಳಿದುಬರುತ್ತದೆ. ಸಾದಿಯಪವೊಡೆಯನು ಕುಂದೂರಿನ ಮೂಲಸ್ಥಾನ ದೇವರಿಗೆ ನೈವೇದ್ಯ ನಂದಾದೀಪಗಳಿಗೆಂದು ನೀಡಿದ ಕಾಣಿಕೆಯನ್ನು ಊರಗೌಡರು ಗುತ್ತಿಗೆಯಾಗಿ ಸ್ವೀಕರಿಸಿದ್ದನ್ನು ವಿವರಿಸುತ್ತದೆ.[5] ಇದೇ ಗ್ರಾಮದ 131ನೆಯ ಶಾಸನದಲ್ಲೂ ಕೂಡ ಸಾದಿಯಪವೊಡೆಯನ ಉಲ್ಲೇಖವಿದೆ. ಈತ ಕುಂದೂರು ಮೂಲಸ್ಥಾನ ದೇವರಿಗೆ ದತ್ತಿಬಿಟ್ಟಿದ್ದನು. ಹಿಂದೆ ವಿವರಿಸಿದ ಸಾದಿಯಪವೊಡೆಯ ಮತ್ತು ಪ್ರಸ್ತುತ ಶಾಸನದ ಸಾದಿಯಪವೊಡೆಯ ಏಕವ್ಯಕ್ತಿಗಳಾಗಿದ್ದಿರಬಹುದು. ಈತ ಉಮ್ಮತ್ತೂರಿನ ದೊರೆಗಳ ಆಶ್ರಯದಲ್ಲಿ ಕುಂದೂರನ್ನು ಪಾಲಿಸುತ್ತಿದ್ದನೆಂದು ತೋರುತ್ತದೆ.[6]

ಉಮ್ಮತ್ತೂರಿನ ದೊರೆ ವೀರನಂಜರಾಜಒಡೆಯನ ಮಗ ಪಿರಿಯೊಡೆಯನಿಗೆ ಸಂಬಂಧಿಸಿದ ಕ್ರಿ.ಶ. 1511ರ ಮಳವಳ್ಳಿಯ ಕಲ್ಕುಣಿಯ 146ನೆಯ ಶಾಸನವು ಉಮ್ಮತ್ತೂರು ರಾಜರ ಬಿರುದುಗಳನ್ನು ಉಲ್ಲೇಖಿಸುತ್ತದೆ. ಪಿರಿಯ ಒಡೆಯನನ್ನು ಘೇಣಾಂಕ ಚಕ್ರೇಶ್ವರ, ಪೆಸಾಳಿ ಹನುಮ, ಅರಸಂಕ ಸೊನೆಗಾರ, ಜವಾದಿಕೋಲಾಹಲ, ಗಜಬೇಂಟೆಕಾರ, ಸಂಗ್ರಾಮಭೀಮ ಎಂಬ ವಿಶೇಷಣಗಳಿಂದ ವರ್ಣಿಸಿದೆ. ಉಮ್ಮತ್ತೂರಿನ ವೀರನಂಜರಾಜ ಒಡೆಯನ ಮಗನಾದ ಮಹಾಮಂಡಲೇಶ್ವರ ಪಿರಿಯ ಒಡೆಯನು ಕಿರುಗಾವರ ಸ್ಥಳದ ಕಲ್ಕುಣಿ ಗ್ರಾಮವನ್ನು ಸಂಗಮ ಕ್ಷೇತ್ರದಲ್ಲಿರುವ ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ಉಲ್ಲೇಖಿಸಿದೆ.[7]

ಮಳವಳ್ಳಿ ತಾಲ್ಲೂಕಿನ ನೆಟ್ಟಕಲ್ಲು ಗ್ರಾಮದ ಕ್ರಿ.ಶ. 1532ರ ಶಾಸನದಲ್ಲಿ ವಿಜಯನಗರದ ಅಚ್ಯುತರಾಯನ ಕಾಲದಲ್ಲಿ ಉಮ್ಮತ್ತೂರಿನಲ್ಲಿ ವೀರಮಂಗಪ್ಪೊಡೆಯನ ಮಗ ಮಲ್ಲರಾಜವೊಡೆಯನು ಆಳುತ್ತಿದ್ದುದು ಹಾಗೂ ಈತ ತಳಕಾಡನಾಡಾದ್ವಯ ಧನಗೂರು ಸಾಧಿಪ್ಪವೊಡೆಯರ ಮಗ ಚಿಕ್ಕಸಾಧಿಪ್ಪನಿಗೆ ಧನಗೂರು ಸೀಮೆಯ ನೆಟ್ಟಕಲ್ಲು ಗ್ರಾಮವನ್ನು ನೀಡಿದ ಸಂಗತಿಯನ್ನು ದಾಖಲಿಸಲಾಗಿದೆ.[8] ಇದರಿಂದಾಗಿ ಕಾವೇರಿ ಜಲಪಾತವಿರುವ ಶಿವನಸಮುದ್ರದ ದ್ವೀಪದಲ್ಲಿ ಕೋಟೆಯನ್ನು ಕಟ್ಟಿಕೊಂಡು ಕ್ರಿ.ಶ. 16ನೆ ಶತಮಾನದ ಆರಂಭದಲ್ಲಿ ಸ್ವತಂತ್ರನಾದವನು ಈತನೆಂಬುದು ಸ್ಪಷ್ಟವಾಗುತ್ತದೆ.[9] 15ನೆಯ ಶತಮಾನದ ಕೊನೆಯ ದಶಕದಲ್ಲಿ ಅಧಿಕಾರಕ್ಕೆ ಬಂದ ಸಂಗಮ ರಾಜರ ದುರ್ಬಲತೆ ಮತ್ತು ಸಾಳುವ ರಾಜನ ಸಿಂಹಾಸನಾರೋಹಣ ವಿಜಯನಗರ ಸಾಮ್ರಾಜ್ಯದ ಪ್ರಾಬಲ್ಯಕ್ಕೆ ತಾತ್ಕಾಲಿಕವಾಗಿ ಹಿನ್ನಡೆಯಾಗಿ ಪರಿಣಮಿಸಿತಲ್ಲದೆ. ಉಮ್ಮತ್ತೂರು ಪ್ರಭುಗಳು ದಕ್ಷಿಣ ಕರ್ನಾಟಕದ ಭಾಗದಲ್ಲಿ ಪ್ರಬಲರಾಗಲು ಕಾರಣವಾಯಿತು. ದೇವಣ್ಣ ಒಡೆಯರ್, ಮಲ್ಲರಾಜಒಡೆಯರ್, ಇಮ್ಮಡಿನಂಜರಾಜಒಡೆಯರ್ ಮುಖ್ಯವಾಗಿ ಗಂಗರಾಜ ಮೊದಲಾದ ಉಮ್ಮತ್ತೂರುಪ್ರಭುಗಳು

ದೊರೆತ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ರಾಜಾಧಿಕಾರದ ಹಲವು ಬಿರುದು ಬಾವಲಿಗಳನ್ನು ಹೊಂದಿದ್ದರು. 15ನೆಯ ಶತಮಾನದ ಕೊನೆಯ ವೇಳೆಗೆ ಸೋಮರಾಜ ಒಡೆಯರ್ ಮಗನಾದ ದೇಪಣ್ಣ ಒಡೆಯರ್‌ನು ವಿಜಯನಗರ ಸರ್ಕಾರದ ಅಧಿಪತ್ಯವನ್ನು ಧಿಕ್ಕರಿಸಿ ಗೌರವ ನೀಡಲು ಓಗೊಡಲಿಲ್ಲ. ದೇವಣ್ಣ ಒಡೆಯರ್‌ನ ದಂಗೆಯ ಬಗ್ಗೆ ತಿಳಿದು ಅವನ ಉದ್ಧಟತನದ ಸೊಕ್ಕಡಗಿಸಲು ನರಸನಾಯಕನು ದಂಡೆತ್ತಿ ಹೊರಟನು. ಕಾವೇರಿ ಮೇಲೆ ಕಣಿವೆಯ ಮೂಲಕ ಸಾಗಿದ ಅವನು ಶ್ರೀರಂಗಪಟ್ಟಣವನ್ನು ತಲುಪಿದನು. ನದಿಯು ತುಂಬು ಪ್ರವಾಹದಿಂದ ಹರಿಯುತ್ತಿದ್ದುದರಿಂದ ಕೋಟೆಯ ಮೇಲೆ ಕೈಗೊಳ್ಳಬೇಕಾಗಿದ್ದ ದಾಳಿಯು ಅಸಾಧ್ಯವೆನಿಸಿತು. ಕಷ್ಟಕಾಣದೆ ನದಿಗೆ ಅಡ್ಡಲಾಗಿ ತುರ್ತಾಗಿ ಸೇತುವೆಯೊಂದನ್ನು ನಿರ್ಮಿಸಿ ನದಿಯನ್ನು ದಾಟುವುದರಲ್ಲಿ ಅವನು ಸಫಲನಾದನು. ಈ ರೀತಿ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿ ವಿಜಯ ಸ್ತಂಭವೊಂದನ್ನು ಅಲ್ಲಿ ನೆಟ್ಟನು. ಯುದ್ಧ ಖೈದಿಯಾಗಿ ಸಿಕ್ಕನಾಯಕನಿಗೆ ಮತ್ತೊಮ್ಮೆ ಅಲ್ಲಿನ ಕೋಟೆ ಹಾಗೂ ಅದಕ್ಕೆ ಹೊಂದಿಕೊಂಡಂತಿದ್ದ ಪ್ರದೇಶಗಳನ್ನು ಹಿಂತಿರುಗಿಸುವುದು ಬಹುಅವಶ್ಯಕವೆಂದು ಅವನು ಮನಗಂಡನು.[10]

ಉಮ್ಮತ್ತೂರು ಪ್ರಭುಗಳ ಅವಿಧೇಯ ವರ್ತನೆ ದೇವರಾಜನ ಶರಣಾಗತಿಯಿಂದ ನಿಲ್ಲಲಿಲ್ಲ. ಮುಂದೆ ಅವನ ಮಗ ಮಲ್ಲರಾಜ ಒಡೆಯನು ವಿಜಯನಗರದ ದೊರೆ ಸಾಳ್ವ ನರಸನಾಯಕನು ಮರಣ ಹೊಂದಿದ ಬಳಿಕ ಹಾಗೂ ವೀರನರಸಿಂಹನ ದುರ್ಬಲ ಆಳ್ವಿಕೆಯ ಲಾಭ ಪಡೆದು ಪುನಃ ದಂಗೆ ಎದ್ದನು. ಈ ದಂಗೆಯ ಮಾಹಿತಿ ಪಡೆದ ವೀರನರಸಿಂಹನು ದಂಗೆಯನ್ನು ಅಡಗಿಸುವುದಕ್ಕಾಗಿ ಸೈನ್ಯದೊಡನೆ ತೆರಳಿ ಉಮ್ಮತ್ತೂರನ್ನು ಮೂರು ತಿಂಗಳವರೆಗೆ ಸುತ್ತುವರೆದನು. ಆದರೆ ಶತ್ರುವಿನ ಪ್ರಬಲಪ್ರತಿರೋಧದ ಕಾರಣ ಉಮ್ಮತ್ತೂರು ಆಕ್ರಮಣವನ್ನು ಸಡಿಲಿಸಿ ಶ್ರೀರಂಗಪಟ್ಟಣವನ್ನು ಮುತ್ತಲು ಆ ದಿಕ್ಕಿನಲ್ಲಿ ಹೊರಟನು. ಆದರೆ ದಂಗೆಯೆದ್ದಿದ್ದ ಮಲ್ಲರಾಜ ಒಡೆಯನು ವಿಜಯನಗರದ ಸೈನ್ಯವನ್ನು ಸೋಲಿಸಲಾಗಿ ವೀರನರಸಿಂಹನು ಹಿಂತೆಗೆದನು. ಉಮ್ಮತ್ತೂರು ನಾಯಕನ ದಂಗೆಯನ್ನು ಅಡಗಿಸಲು ಅಸಮರ್ಥನಾದ ಇಮ್ಮಡಿ ನರಸಿಂಹನು ಸೋಲಿನಿಂದ ಹಿಂತಿರುಗಬೇಕಾಯಿತು. ರಾಜನ ಸೈನ್ಯದ ಸೋಲು ಉಮ್ಮತ್ತೂರು ಪ್ರಭುವಿನ ನೈತಿಕ ಸ್ಥೈರ್ಯವನ್ನು ಹೆಚ್ಚಿಸಲಾಗಿ ತದನಂತರ ಅವನು ಬಹುವಾಗಿ ಅಂಕೆಗೊಳಪಡದವನಾದನು. ಇಮ್ಮಡಿದೇವರಾಜ ಒಡೆಯನ ಎರಡನೇ ಮಗನಾದ ಇಮ್ಮಡಿ ನಂಜರಾಜ ಒಡೆಯರನು ರಾಜಾಧಿಕಾರವನ್ನು ಪಡೆದ ಬಳಿಕ ಕೆಲವು ಸಾಳುವ ಬಿರುದುಗಳಾದ ಅರಿರಾಯವಿಭಾಡ, ಭಾಷೆಗೆ ತಪ್ಪುವರಾಯರಗಂಡ. ಪೆನುಗೊಂಡಚಕ್ರೇಶ್ವರ, ಚಿಕ್ಕರಾಯಪಟ್ಟ ಮತ್ತಿತರ ಬಿರುದುಗಳನ್ನು ಧರಿಸಿದನು.[11]

ಉಮ್ಮತ್ತೂರು ಪ್ರಭುಗಳು ರಾಜಶಾಹಿ ಖಿಲ್ಲತ್ತುಗಳನ್ನು ಹೊಂದಿದುದು ವೀರನರಸಿಂಹನು ಉಮ್ಮತ್ತೂರು ನಾಯಕನ ಸ್ಥಾನಮಾನವನ್ನು ಗುರುತಿಸಿ ಅವನಿಗೆ ಪಟ್ಟಕ್ಕೆ ಬರುವ ರಾಜಕುಮಾರನನ್ನಾಗಿ ಮಾಡಿದಂತಿದೆಯೆಂದು ಕೃಷ್ಣಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಉಮ್ಮತ್ತೂರು ಪ್ರಭುಗಳು ಈ ಕಾಲಕ್ಕಾಗಲೇ ವಿಜಯನಗರ ಸಾಮ್ರಾಜ್ಯದಿಂದ ಸ್ವತಂತ್ರಗೊಂಡು ರಾಜಬಿರುದುಗಳನ್ನು ಧರಿಸಿ ಆಳ್ವಿಕೆ ನಡೆಸುತ್ತಿದ್ದರೆಂದು ಖಚಿತವಾಗುತ್ತದೆ.

ಕೃಷ್ಣದೇವರಾಯನು ಪಟ್ಟಾಭಿಕ್ತನಾದ ಕೂಡಲೇ ತನ್ನ ಗಮನವನ್ನು ಉಮ್ಮತೂರು ಪ್ರಾಂತ್ಯದ ಕಡೆಗೆ ತಿರುಗಿಸಿದನು. ರಾಜ್ಯದ ಇತರ ಪಾಳೆಯಗಾರರಂತೆಯೇ ಉಮ್ಮತ್ತೂರಿನ ಪಾಳೆಯಗಾರರು ಬಲವಾದ ಪ್ರತಿಭಟನೆಯನ್ನು ತೋರಿದರು.[12] ಇದು ಕೃಷ್ಣರಾಯನ ಆಳ್ವಿಕೆಯ ಮೊದಲ ದಂಡಯಾತ್ರೆ. ಈ ದಂಡಯಾತ್ರೆಯಲ್ಲಿ ಕೃಷ್ಣದೇವರಾಯನು ಸೋಲಿಸಿದ ಪಾಳೆಯಗಾರನೇ ಗಂಗರಾಜ.[13] ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರದ ದುರ್ಗಗಳು ಇವನ ಅಧೀನದಲ್ಲಿದ್ದು ಇವನು ವೀರನರಸಿಂಹನ ಆಳ್ವಿಕೆಯ ಕೊನೆಯ ಕಾಲದಿಂದಲೂ ವಿಜಯನಗರದ ಅಧೀನದಿಂದ ಸ್ವತಂತ್ರನಾಗಲು ಪ್ರಯತ್ನಿಸುತ್ತಿದ್ದನು. ಕೃಷ್ಣದೇವರಾಯನನ್ನು ಕಡೆಗಣಿಸಿ ಪೆನುಗೊಂಡದ ದುರ್ಗವನ್ನು ಆಕ್ರಮಿಸಿದನು. ಈ ಸಮಯದಲ್ಲಿ ಸಾಮ್ರಾಜ್ಯದ ಶಾಂತಿ

ಸುವ್ಯವಸ್ಥೆಯನ್ನು ಸ್ಥಾಪಿಸಲು ಉಮ್ಮತ್ತೂರಿನ ಗಂಗರಾಜನ ವಿರುದ್ಧ ಕೃಷ್ಣದೇವರಾಯ ಯುದ್ಧಾರಂಭ ಮಾಡಿದನು. ಈ ದಂಡಯಾತ್ರೆಯು 1510 ಫೆಬ್ರವರಿ-ಮಾರ್ಚ್ ತಿಂಗಳ ವೇಳೆಗೆ ಮುಗಿಯಿತು.[14] ಗಂಗರಾಜನ ಅಧೀನದಲ್ಲಿದ್ದ ಪೆನುಗೊಂಡ ದುರ್ಗದ ಆಕ್ರಮಣದೊಂದಿಗೆ ಉಮ್ಮತ್ತೂರು ದಂಗೆಯು ಆರಂಭಗೊಂಡಿತು. ಪೆನುಗೊಂಡೆಯ ದುರ್ಗದ ಆಕ್ರಮಣ ನಂತರ ಉಮ್ಮತ್ತೂರಿನ ಗಂಗರಾಜನ ಕೇಂದ್ರಸ್ಥಾನವಾದ ಶಿವನಸಮುದ್ರವನ್ನು ಮುತ್ತಿದನು. ಕೃಷ್ಣದೇವರಾಯನ ಈ ದಂಗೆಯ ಅವಧಿಯ ಬಗ್ಗೆ ಸ್ಪಷ್ಟತೆಯಿಲ್ಲ, ರಾಯವಾಚಕಮು ಕೃತಿಯಲ್ಲಿ ಈ ಕೋಟೆಯ ಮುತ್ತಿಗೆಯು ಕೇವಲ ಒಂದು ದಿನ ಮಾತ್ರ ನಡೆಯಿತೆಂದು ತಿಳಿಸಿದರೆ, ಕೊಂಗುದೇಶ (ತೆಲುಗುದೇಶ) ರಾಸಕ್ಕಲಿನ್ ಚರಿತಮ್ ಕೃತಿಯ ಪ್ರಕಾರ ಈ ದಂಡಯಾತ್ರೆಯು ಒಂದು ವರ್ಷದವರೆಗೆ ನಡೆಯಿತೆಂದು ತಿಳಿದುಬರುತ್ತದೆ.[15] ಪಾರಿಜಾತಾಪಹರಣಮು ಗ್ರಂಥವು ಉಮ್ಮತ್ತೂರು ಮತ್ತು ಶಿವನಸಮುದ್ರಗಳಲ್ಲಿನ ಯುದ್ಧದ ವಿವರಣೆಯನ್ನು ನೀಡುವುದಲ್ಲದೇ ಯುದ್ಧದ ಶಿಬಿರಗಳನ್ನು ಧ್ವಂಸಗೊಳಿಸಿದ್ದನ್ನು ಉಲ್ಲೇಖಿಸುತ್ತದೆ. ಉಮ್ಮತ್ತೂರ ಪಾಳೆಯಗಾರ ಗಂಗರಾಜ ವಿಜಯನಗರದ ಮೇಲೆ ವಿಜಯ ಸಾಧಿಸಲೇಬೇಕೆಂದು ದೃಢವಾಗಿ ನಿಶ್ಚಯಿಸಿ ಸೈನಿಕರನ್ನು ಹಾಗೂ ಯುದ್ಧ ಸಾಮಗ್ರಿಗಳನ್ನು ಹೆಚ್ಚಾಗಿ ಸಂಗ್ರಹಿಸಿ ಅದನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿದ್ದನು. ಕೃಷ್ಣದೇವರಾಯನ ಪ್ರಬಲ ಸೈನ್ಯದೆದುರು ಸೆಣಸಲು ಸಾಧ್ಯವಾಗದೇ ಗಂಗರಾಜನು ಶತ್ರು ಸೈನಿಕರಿಂದ ತಪ್ಪಿಸಿಕೊಂಡು ಪಲಾಯನಗೈಯುವಾಗ ಕಾವೇರಿ ನದಿಯ ಗಗನಚುಕ್ಕಿ ಜಲಪಾತದಲ್ಲಿ ಬಿದ್ದು ಅಸುನೀಗಿದನು. ಈ ರೀತಿ ಗಂಗರಾಜನು ಗತಿಸಿದ ಮೇಲೆ ಕೃಷ್ಣದೇವರಾಯನು ಆ ಪ್ರದೇಶವನ್ನು ಕೆಂಪೇಗೌಡ, ವೀರಪ್ಪಗೌಡ ಮತ್ತು ಚಿಕ್ಕರಾಯ ಇವರುಗಳಿಗೆ ಹಂಚಿಕೊಟ್ಟನು. ಪೆನುಕೊಂಡೆಯನ್ನು ಕೃಷ್ಣರಾಯ ಪುನಃ ತನ್ನ ಅಧಿಕಾರ ವ್ಯಾಪ್ತಿಗೆ ಒಳಪಡಿಸಿಕೊಂಡನು.[16]

ಕೃಷ್ಣದೇವರಾಯನು ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣದ ಮೇಲೆ ಅಧಿಕಾರ ಹೊಂದಲು ಹದಿನಾಡು ಪ್ರಭುಗಳು, ಮೈಸೂರು ಒಡೆಯರು ಸಹಾಯ ಮಾಡಿದರು. ವಿದೇಶಿ ಪ್ರವಾಸಿಗರಾದ ಪಯಸ್ ಮತ್ತು ನ್ಯೂನಿಜ್ ತಿಳಿಸುವಂತೆ ಶ್ರೀರಂಗಪಟ್ಟಣ ದುರ್ಗವನ್ನು ನೋಡಿಕೊಳ್ಳುತ್ತಿದ್ದ ಕುಮಾರ ವೀರಯ್ಯ ಕೃಷ್ಣದೇವರಾಯನ ಮಾವನಾಗಿದ್ದು, ತನ್ನ ಮಗಳಾದ ತಿರುಮಲಾಂಬೆಯನ್ನು ಕೃಷ್ಣರಾಯನಿಗೆ ವಿವಾಹ ಮಾಡಿದನು.[17] ಇವರ ವಿವಾಹವು ಕ್ರಿ.ಶ. 1510ರಲ್ಲಿ ಈಗ ಹೊಸಪೇಟೆ ಎಂದು ಕರೆಯುವ ತಿರುಮಲಪಟ್ಟಣದಲ್ಲಿ ನಡೆಯಿತು. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನಿಗೆ ಪ್ರೀತಿಪಾತ್ರಳಾದ ತಿರುಮಲಾಂಬೆಯನ್ನು ಮಂಡ್ಯ ಪ್ರಾಂತ್ಯ ಒದಗಿಸಿಕೊಟ್ಟಿದ್ದು, ಒಂದು ಅಭೂತಪೂರ್ವ ಅಂಶ.[18] ಈ ವೈವಾಹಿಕ ಸಂಬಂಧಗಳು ಈ ಪ್ರಾಂತ್ಯದ ಮೇಲೆ ಅಧಿಕಾರ ಸ್ಥಾಪಿಸಲು ಕಾರಣವಾಯಿತು. ಆತನ ಮಾವ ಕೂಡ ಉಮ್ಮತ್ತೂರು ವಿರುದ್ಧ ಹೋರಾಡಲು ಸೈನ್ಯ ಸಹಾಯ ಮಾಡಿದನು.[19]

ವಿಜಯನಗರ ಸಾಮ್ರಾಟರ ಕಾಲಾವಧಿಯಲ್ಲಿ ಹಲವು ಪ್ರಾದೇಶಿಕ ಶಕ್ತಿಗಳು ಏಳಿಗೆಗೆ ಬಂದವು. ಕೆಲವು ಪಾಳೆಯ ಪಟ್ಟುಗಳು ವಿಧೇಯರಾಗಿದ್ದು, ಅವರ ಸಾಮ್ರಾಜ್ಯ ವಿಸ್ತರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಆದರೆ ಉಮ್ಮತ್ತೂರು ಪಾಳೆಯಗಾರರು ಆರಂಭದಲ್ಲಿ ವಿಧೇಯರಾಗಿದ್ದು ಕಾಲಾನಂತರ ಸಾಮ್ರಾಟರ ರಾಜಕೀಯ ಅಸ್ಥಿರತೆಯ ಲಾಭಗಳಿಸಿಕೊಂಡು ಸ್ವತಂತ್ರರಾಗಲು ಬಯಸಿದರು. ಅದಕ್ಕೆ ಸಂಗಮ ವಂಶದ ಕಾಲಾವಧಿಯಲ್ಲಿ ಪ್ರಬಲ ಪ್ರತಿರೋಧ ಒಡ್ಡಿ ಅವರನ್ನು ಎದುರಿಸಲಾರಂಭಿಸಿದರು. ಇಷ್ಟೇ ಅಲ್ಲದೇ ಅವರ ಬಿರುದುಗಳನ್ನೂ ಧರಿಸಲಾರಂಭಿಸಿದರು. ಆದರೆ ಕೃಷ್ಣದೇವರಾಯನಂತಹ ಪ್ರಬಲ ಸಾಮ್ರಾಟರ ಕೆಂಗಣ್ಣಿಗೆ ಬಿದ್ದು ಉಮ್ಮತ್ತೂರು ಪಾಳೆಯಪಟ್ಟು ಸರ್ವನಾಶಗೊಂಡಿತು. ಈ ಪಾಳೆಯಪಟ್ಟು ಕಣ್ಮರೆಯಾದರೂ ಮಂಡ್ಯ ಪ್ರದೇಶದೊಂದಿಗೆ ಇವರು ಉತ್ತಮ ಬಾಂಧವ್ಯ ಹೊಂದಿದ್ದರು. ಹಲವು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿ ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಗಟ್ಟಿಗೊಳಿಸಿದ್ದಾರೆ.

ಅಡಿ ಟಿಪ್ಪಣಿಗಳು

1. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, 2003, ಪು. 77.
2. ಅದೇ, ಪು. 77–78.
3. *E.C.,* VII, Ml. 149, Honaganahalli, p. 445.
4. *E.C.,* VII, Ml. 106, Muttanahalli, pp. 408-409.
5. E.C., VII, Ml. 130, Kunduru, p. 424.
6. E.C., VII, Ml. 131, Kunduru, p. 425.
7. E.C., VII, Ml. 146, Kalkuni, p. 444.
8. E.C., VII, Ml. 86, Nettagallu, pp. 394-395.
9. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಪು. 79.
10. ಮುರಿಗೆಪ್ಪ. ಎ. (ಪ್ರ.ಸಂ), ಕೃಷ್ಣದೇವರಾಯ (ಆಯ್ದ ಲೇಖನ ಸಂಪುಟ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2008, ಪು. 341–342.
11. ಕೃಷ್ಣರಾವ್.ಎಂ.ವಿ. ಮತ್ತು ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ, ಬೆಂಗಳೂರು, 1970, ಪು. 492.
12. Sampathkumaracharya.V.S., Krishnadevaraya and his times, Mysore, 2009, p. 11.
13. ದೀಕ್ಷಿತ್ ಜಿ.ಎಸ್. ಮತ್ತು ಇತರರು, *ಶ್ರೀಕೃಷ್ಣದೇವರಾಯ–ಜೀವನ, ಸಾಧನೆಗಳು*, ಮೈಸೂರು, 1997 ಪು. 24–25; M. Arokiaswamy, "The Ummattur Chieftancy", *QJMS,* 1956.
14. ಗೋಪಾಲ್. ಆರ್. ಮತ್ತು ಟಿ.ಎಸ್. ಗಂಗಾಧರ, ವಿಜಯನಗರ ಅಧ್ಯಯನ, ಸಂಪುಟ 16, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2013, ಪು. 138–139.
15. Venkataramanayya N and KAN Sastry, *Further Sources of Vijayanagara History,* Vol. Madras 1946, p. 198.
16. ದೀಕ್ಷಿತ್ ಜಿ.ಎಸ್., ಪೂರ್ವೋಕ್ತ, ಪು. 29–30.
17. ಸೂರ್ಯನಾಥಕಾಮತ್, ವಿಜಯನಗರದ ಕೃಷ್ಣದೇವರಾಯ– ಆಡಳಿತ ಮತ್ತು ಸಾಂಸ್ಕೃತಿಕ ಸಾಧನೆ, ಬೆಂಗಳೂರು, 2009, ಪು. 16.
18. ಗೋಪಾಲ್. ಆರ್. ಮತ್ತು ಟಿ.ಎಸ್. ಗಂಗಾಧರ, ಪೂರ್ವೋಕ್ತ, ಪು. 66.
19. ವಸು. ಎಂ.ವಿ. (ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, 2001, ಪು. 418–419.

21. ಕೃಷ್ಣರಾಯನ ಉಮ್ಮತ್ತೂರು ಧಾಳಿ ಮತ್ತು ಮೈಸೂರು ಒಡೆಯರ ಮೂಲ

ಡಾ. ಲ. ನ. ಸ್ವಾಮಿ

ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಶ್ರೀರಂಗಪಟ್ಟಣ ಸೀಮೆಯಲ್ಲಿ ತಮ್ಮ ಪ್ರಭುತ್ವವನ್ನು ಮೆರೆದ ಮೈಸೂರು ಅರಸರ ಮೂಲದ ಬಗೆಗೆ ಇತ್ತೀಚಿನವರೆಗೆ ಪ್ರಕಟವಾಗಿರುವ ಯಾವ ಐತಿಹಾಸಿಕ ಕೃತಿಗಳೂ ನಿಖರವಾದ ಬೆಳಕು ಚೆಲ್ಲುವಲ್ಲಿ ವಿಫಲವಾಗಿವೆ. ಕಾರಣ ಈವರೆಗೆ ಪ್ರಕಟವಾಗಿರುವ ಕೃತಿಗಳೆಲ್ಲವೂ ಅರಮನೆಯ ಕಡತಗಳನ್ನು ಆಧರಿಸಿ, ಅದರಲ್ಲಿ ಪ್ರತಿಬಿಂಬಿತವಾಗಿರುವ ಐತಿಹ್ಯಗಳಿಗೆ ಮನ್ನಣೆಕೊಟ್ಟು ಒಬ್ಬೊಬ್ಬರೂ ಒಂದೊಂದು ಬಗೆಯ ಮೂಲವನ್ನು ಹುಡುಕಿದ್ದಾರೆ. ಆದರೆ ಈ ಮೂಲಗಳ ಪ್ರತಿಪಾದನೆಗೆ ಬಳಸಿರುವ ಆಕರಗಳು ಸಾಕಷ್ಟು ಸದೃಢವಾಗಿಲ್ಲ ಅಥವಾ ಪ್ರಶ್ನಾತೀತವಾಗಿಲ್ಲ.

ಹಿಂದಿನ ಇತಿಹಾಸಕಾರರಾದ ಹಯವದನರಾವ್, ವಿಲ್ಕ್ಸ್, ಜೋಸ್ಯರ್ ಹಾಗೂ ಇತರರ ಕೃತಿಗಳಲ್ಲಿ ಹಾಗೂ ಇತ್ತೀಚಿನ ಕೃತಿಕಾರರಾದ ಸತ್ಯನಾರಾಯಣರವರು ಸಹ ಈ ಹಿಂದಿನ ವಾದಗಳಿಗೆ ಅಂಟಿಕೊಂಡಿರುವುದು ನಿಖರವಾಗಿ ವ್ಯಕ್ತವಾಗಿದೆ. ಸತ್ಯನಾರಾಯಣ ಅವರು ಮೈಸೂರಿನ ಒಡೆಯರು, ಹೊಯ್ಸಳ ವಂಶದವರೆಂದು ಗುರುತಿಸಿ, ದ್ವಾರಸಮುದ್ರದ ಪತನದ ನಂತರ, ತೊಂಡನೂರಿನಲ್ಲಿ ನೆಲೆಸಿದ ಹೊಯ್ಸಳ ಮನೆತನದ ಮುಂದುವರಿದ ಮನೆತನವೇ ಒಡೆಯರೆಂದು ಗುರುತಿಸುತ್ತಾರೆ.

ಆದರೆ ಈವರೆಗೆ ಪ್ರಕಟವಾಗಿರುವ ಶಾಸನಗಳನ್ನು ಅಧ್ಯಯನ ಮಾಡಿದಾಗ, ಈ ಗೊಂದಲದಿಂದ ಆಚೆಗಿನ ಹೊಸ ಬೆಳಕನ್ನು ಕಾಣಬಹುದಾಗಿದೆ. ಹಾಗಾಗಿ, ಈ ಅಧ್ಯಾಯದಲ್ಲಿ ಅದನ್ನು ಹುಡುಕಲಾಗಿದೆ. ಅದಕ್ಕೆ ಪೂರ್ವದಲ್ಲಿ ಮೈಸೂರು ಒಡೆಯರ ಮೂಲದ ಬಗೆಗಿರುವ ವಾದಗಳನ್ನು ಸ್ವಲ್ಪ ಸ್ಥೂಲವಾಗಿ ತಿಳಿಯುವುದು ಅವಶ್ಯಕ. ಒಡೆಯರ ಕಾಲದಲ್ಲಿ ರಚಿತವಾಗಿರುವ ಕೃತಿಗಳಾದ ಗೋವಿಂದ ವೈದ್ಯನ *ಕಂಠೀರವ ನರಸರಾಜವಿಜಯ*, ತಿಮ್ಮ ಕವಿಯ *ಚಿಕ್ಕದೇವರಾಜ ವಂಶಾವಳಿ*, *ಯದುಗಿರಿ ಮಹಾತ್ಮೆ*, ತಿರುಮಲಾಚಾರ್ಯನ *ಚಿಕ್ಕದೇವರಾಜ ವಂಶಾವಳಿ*, ದೇವಚಂದ್ರನ *ರಾಜಾವಳಿ ಕಥಾಸಾರ*, ಸೋಸಲೆ ಅಯ್ಯಾಶಾಸ್ತ್ರಿಗಳ *ಮೈಸೂರು ಮಹಾರಾಜ ಚರಿತಂ* ಹಾಗೂ *ಮೈಸೂರು ದೊರೆಗಳ ವಂಶಾವಳಿ* ಮತ್ತಿತರ ಹಸ್ತಪ್ರತಿಗಳಲ್ಲಿ ಅಲ್ಲದೆ, ಮೈಸೂರು ಅರಮನೆಯಿಂದ ಉಪಕೃತವಾದ ರಾಮಕೃಷ್ಣರಾವ್‌ರವರು ರಚಿಸಿರುವ ಮೈಸೂರು ಅರಸರ ವಂಶಾವಳಿ ಕೃತಿಗಳು ಒಡೆಯರ ಮೂಲವನ್ನು ಚಿತ್ರಿಸಲು ದೊರೆಯುವ ಮೂಲ ಸಾಮಗ್ರಿಗಳಾಗಿವೆ.

ಮೈಸೂರು ಸಂಸ್ಥಾನದ ಉದಯ ಮತ್ತು ವಿಕಾಸವನ್ನು ಗುರುತಿಸುವ ಎಲ್ಲ ವಿದ್ವಾಂಸರು ಮೈಸೂರು ಅರಸು ಮನೆತನದ 19 ಮತ್ತು 20ನೇ ಶತಮಾನದ ದಾಖಲೆಗಳಿಗೆ ಮಹತ್ವವನ್ನು ಕೊಟ್ಟು ಆ ದಾಖಲೆಗಳಲ್ಲಿ ನಿರೂಪಿತವಾಗಿರುವಂತೆ ಒಡೆಯರ ಮನೆತನ 1399ರಲ್ಲಿ ಉದಯವಾದ ಬಗ್ಗೆ ದಾಖಲಿಸುತ್ತಾರೆ. ಮೈಸೂರು ಇತಿಹಾಸದ ಬಗ್ಗೆ ಬರೆದಿರುವ ಮೊದಲನೇ ಇತಿಹಾಸಕಾರ ವಿಲ್ಕ್ಸ್,[1] ಬಿ.ಎಲ್.ರೈಸ್,[2] ಹಯವದನರಾವ್,[3] ಎಂ.ಶಾಮರಾವ್,[4] ಜಿ.ಆರ್.ಜೋಸ್ಯರ್[5] ಮತ್ತಿತರರು ತಂತಮ್ಮ ಗ್ರಂಥಗಳಲ್ಲಿ ಒಡೆಯರ ಮೂಲವನ್ನು ಹಳೆ ಐತಿಹಾಸಿಕ ಕೃತಿಗಳಲ್ಲಿ ದಾಖಲಿಸಿರುವಂತೆಯೇ ಯಾದವ ಕುಲ ಸಂಜಾತರೆಂದೂ ಗುರುತಿಸುತ್ತಾರೆ.

ರಾಜ ಒಡೆಯರ ನಂತರದ ಕಾಲದಲ್ಲಿ ರಚಿತವಾದ *ಕಂಠೀರವ ನರಸರಾಜ ವಿಜಯ*[6] ಮತ್ತು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ರಚಿತವಾದ *ಚಿಕ್ಕದೇವರಾಜ ವಂಶಾವಳಿ*[7] ಸಹ ಇದೇ ನಿಟ್ಟಿನಲ್ಲಿ ಮುಂದುವರಿದಿದೆ. ಇವುಗಳ

ಆಧಾರದ ಮೇಲೆ *ಮಹಿಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ ವಂಶರತ್ನಾಕರ* ಕೃತಿ,[8] ಬಿ.ರಾಮಕೃಷ್ಣರಾವ್ ಅವರ *ಶ್ರೀಮನ್ಮಹಾರಾಜರವರ ವಂಶಾವಳಿ*[9] ಹಾಗೂ 19 ಮತ್ತು 20ನೇ ಶತಮಾನದಲ್ಲಿ ಒಡೆಯರ ಮನೆತನವನ್ನು ಕುರಿತು ರಚಿತವಾದ ಎಲ್ಲ ಕೃತಿಗಳು ಒಕ್ಕೊರಲಿನಿಂದ ಮೈಸೂರು ಒಡೆಯರು ಯಾದವ ಮೂಲದವರೆಂದೇ ಕರೆಯುತ್ತವೆ. ಈ ಯಾದವ ಮೂಲವನ್ನು ಆರೋಪಿಸಿಕೊಂಡಿರುವ ಎರಡು ಯಾದವ ಮನೆತನಗಳೊಂದಿಗೆ ಒಡೆಯರ ಮನೆತನವನ್ನು ಗುರುತಿಸುವ ಪ್ರಯತ್ನ ನಡೆದಿದೆ. ಅದೇನೆಂದರೆ ಹೊಯ್ಸಳ ಸಮಕಾಲೀನರಾದ ದೇವಗಿರಿಯ ಯಾದವರು ಮತ್ತು ಹೊಯ್ಸಳ ವಂಶದವರೂ ತಮ್ಮನ್ನು ಯಾದವರೆಂದು ಕರೆದುಕೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಮನೆತನವನ್ನು ಈ ಎರಡೂ ಯಾದವ ಕುಲಗಳಿಗೆ ಸಂಬಂಧಿಸುವ ಪ್ರಯತ್ನ ಮಾಡಲಾಗಿದೆ. ಧಾರ್ಮಿಕವಾಗಿ ಮತ್ತು ಅವರುಗಳು ಆಳ್ವಿಕೆ ನಡೆಸಿದ ಭೂಭಾಗದ ಆಧಾರದ ಮೇಲೆ ಹಾಗೂ ಪ್ರತೀತಿಯ ಪ್ರಕಾರ ಶ್ರೀ ವೈಷ್ಣವ ಪಂಥದ ಹಿನ್ನೆಲೆಯಲ್ಲಿ ಸಹ ಈ ಮನೆತನದ ಮೂಲವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. 1858ರ ಆಸುಪಾಸಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಸ್ಥಾನದ ಕವಿಯಾಗಿದ್ದ ದೇವಚಂದ್ರನು ಬರೆದ *ರಾಜಾವಳಿ ಕಥಾಸಾರ*[10]ದ ಆಧಾರದ ಮೇಲೆ ಮೈಸೂರು ಒಡೆಯರು ಜೈನಧರ್ಮಕ್ಕೆ ಸೇರಿದವರೆಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ. ನಂಜಮ್ಮಣ್ಣಿಯವರು ತಮ್ಮ ಗ್ರಂಥ *ಅರಸು ಜನಾಂಗ: ಒಂದು ಅಧ್ಯಯನ*[11] ಕೃತಿಯಲ್ಲಿ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದ ಚೆಂಗಾಳ್ವರಿಗೂ ಮೈಸೂರು ಅರಸರಿಗೂ ಸಂಬಂಧವನ್ನು ಕಲ್ಪಿಸಿ ಮೈಸೂರು ಅರಸರ ಪೂರ್ವಜರು ಜೈನರಾಗಿದ್ದರೆಂದು ಸಾಧಿಸುವ ಪ್ರಯತ್ನ ಮಾಡಿದ್ದಾರೆ.

ಈ ಎಲ್ಲ ಉಪಾಖ್ಯಾನಗಳನ್ನು ವಿವರವಾಗಿ ಚರ್ಚಿಸುವುದು ಪ್ರಸ್ತುತ ಲೇಖನದ ಅಧ್ಯಯನದ ಅಂಗವಾಗಿಲ್ಲದಿದ್ದರೂ ಇದರ ಸತ್ಯಾಸತ್ಯತೆಗಳನ್ನು ವಿಮರ್ಶಿಸುವುದು ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಈ ಮೂಲಗಳನ್ನು ಕುರಿತು ಸೂಕ್ಷ್ಮ ಚಿಂತನೆಯನ್ನು ನಡೆಸುವುದು ಅವಶ್ಯಕವೆಂದು ಭಾವಿಸಿ ಈ ಮುಂದಿನ ಪುಟಗಳಲ್ಲಿ ಅದರ ಬಗೆಗಿನ ವಿವರಣೆಗಳನ್ನು ನೀಡಲಾಗಿದೆ.

ಹೊಯ್ಸಳರು ಮತ್ತು ಮೈಸೂರು ಒಡೆಯರು

ಮೈಸೂರು ಅರಸು ಮನೆತನ ಹೊಯ್ಸಳ ಮೂಲದ್ದೆಂದು ಗುರುತಿಸುವ ಪ್ರಯತ್ನವನ್ನು ಹಲವಾರು ವಿದ್ವಾಂಸರು ಮಾಡಿದ್ದಾರೆ. ಇದಕ್ಕೆ ಪ್ರಾರಂಭವನ್ನು ಕೊಡುವ ಎಸ್. ಕೆ. ಅಯ್ಯಂಗಾರ್ ಅವರು ಈ ಬಗ್ಗೆ ಚಿಂತನೆ ನಡೆಸುತ್ತ ಇವರು ಹೊಯ್ಸಳ ಮೂಲದವರು ಅಥವಾ ಕಾಕತೀಯ ಮೂಲದವರೆಂದೂ ಗುರುತಿಸುತ್ತಾರೆ.[12]

ಕೆಲವು ಐತಿಹಾಸಿಕ ಕೃತಿಗಳಲ್ಲಿ ಹೊಯ್ಸಳರು ತಮ್ಮ ರಾಜಧಾನಿ ದೋರಸಮುದ್ರದ ಮೇಲೆ ಮಲ್ಲಿಕಾಫರನು ಧಾಳಿ ಮಾಡಿದ ನಂತರ ಮೈಸೂರಿನ ಸಮೀಪದ ಯಾದವ ಮನೆತನದ ಆಕರ್ಷಣೆಯ ಕೇಂದ್ರ ಬಿಂದುವಾದ ಮೇಲುಕೋಟೆಗೆ ಸಮೀಪದಲ್ಲಿದ್ದ ಹೊಯ್ಸಳರ ಉಪರಾಜಧಾನಿ ತೊಂಡನೂರಿನಲ್ಲಿ ಬಂದು ನೆಲೆಸಿದರೆಂಬ ಉಲ್ಲೇಖವಿದೆ. ಇದನ್ನು ಆಧರಿಸಿ, ಒಡೆಯರು ಯಾದರೆಂದು ಕರೆದುಕೊಂಡಿರುವುದನ್ನು ಅದರೊಂದಿಗೆ ಸೇರಿಸಿ, ಗಜಗನಹಳ್ಳಿ ಶಾಸನದಲ್ಲಿ ತಾವು ಕರ್ನಾಟಕವನ್ನು ಪೂರ್ವದಿಂದಲೂ ಆಳುತ್ತಿದ್ದವೆಂಬ ಉಲ್ಲೇಖವನ್ನು ಸಾಧಾರವಾಗಿ ಭಾವಿಸಿ, ಮೈಸೂರು ಒಡೆಯರು ಹೊಯ್ಸಳ ಮೂಲದವರೆಂದು ಗುರುತಿಸುವ ಪ್ರಯತ್ನ ಕೂಡ ನಡೆದಿದೆ.[13]

ಆದರೆ ಹೊಯ್ಸಳರೇ ಯದುವಂಶಿಗಳಲ್ಲವೆಂಬುದನ್ನು ಬಹಳ ಹಿಂದೆಯೇ ಪಿ.ಬಿ.ದೇಸಾಯಿ ಮತ್ತು ಇತರರು *ಹಿಸ್ಟರಿ ಆಫ್ ಕರ್ನಾಟಕ* ಗ್ರಂಥದಲ್ಲಿ ಆಧಾರ ಸಹಿತವಾಗಿ ನಿರೂಪಿಸುತ್ತಾರೆ.[14] ಹಾಗಾಗಿ ಮೈಸೂರು ಒಡೆಯರು ಹೊಯ್ಸಳರ ಮೂಲದವರಾಗಿದ್ದರೂ ಅವರು ಯಾದವರೆನ್ನುವ ವಾದಕ್ಕೆ ಯಾವ ಆಧಾರವೂ ದೊರೆಯುವುದಿಲ್ಲ.

ದೇವಗಿರಿಯ ಯಾದವರು ಮತ್ತು ಮೈಸೂರು ಅರಸರು

ವಿಲ್ಕ್ಸ್[15] ಮತ್ತು ಹಯವದನರಾಯರಿಬ್ಬರೂ[16] ಮೈಸೂರು ಒಡೆಯರ ಲೌಕಿಕ ಚರಿತ್ರೆಯನ್ನು ಆಧರಿಸಿ ಗಜಗನಹಳ್ಳಿ ತಾಮ್ರಶಾಸನವನ್ನು ಅದಕ್ಕೆ ಪೂರಕ ಆಕರವನ್ನಾಗಿಸಿಕೊಂಡು ಅಂದರೆ ಗಜಗನಹಳ್ಳಿ ತಾಮ್ರಶಾಸನದ 28 ರಿಂದ 31ನೇ ಸಾಲಿನಲ್ಲಿ ಉಲ್ಲೇಖವಾಗುವ ಪಾಠವನ್ನು ಪ್ರಧಾನವಾಗಿ ಬಳಸಿ ಅವರು ಯಾದವರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಅವರು ಮುಸಲ್ಮಾನ ದಾಳಿಗೆ ಸಿಲುಕಿ ನಶಿಸಿದ ತರುವಾಯ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಆಶ್ರಯ ಪಡೆದು ಅನಂತರ ವಿಜಯನಗರದ ಅರಸರಿಂದ ಮೈಸೂರು ಪ್ರಾಂತ್ಯವನ್ನು ಪಡೆದು ಇಲ್ಲಿ ಬಂದು ನೆಲೆಸಿ ಆಳ್ವಿಕೆಯನ್ನು ಮುಂದುವರಿಸಿದರೆಂಬ ಭಾವಾರ್ಥದಲ್ಲಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಇಲ್ಲಿ ಸಹ ಮತ್ತೆ ಯದುವಂಶದ ಹಿನ್ನೆಲೆಯೇ ಕಾರ್ಯ ನಿರ್ವಹಿಸಿದೆ. ದೇವಗಿರಿಯ ಯಾದವರ ಮೂಲದ ಬಗ್ಗೆ ಚಿಂತಿಸುತ್ತ ಡಾ.ಎಸ್.ಎಚ್. ಶ್ರೀನಿವಾಸರಿತ್ತಿಯವರು[17] ದೇವಗಿರಿಯ ಯಾದವರು ಅಥವಾ ಸೇವುಣರು ಕೃಷ್ಣನ ವಂಶಜರಲ್ಲವೆಂಬುದನ್ನು ಸಾಧಾರವಾಗಿ ನಿರೂಪಿಸಿರುವುದರಿಂದ ಎರಡನೇ ಬಾರಿಗೆ ಯಾದವ ಕುಲದ ನಂಟನ್ನು ಒಡೆಯರೊಂದಿಗೆ ಸಮೀಕರಿಸಲು ಸಾಧ್ಯವಾಗುವುದಿಲ್ಲ.

ಶ್ರೀ ವೈಷ್ಣವ ಸಿದ್ಧಾಂತ

ಮೊಟ್ಟ ಮೊದಲ ಬಾರಿಗೆ ಮೈಸೂರು ಒಡೆಯರ ಮನೆತನದ ಮೂಲಕ್ಕೆ ಶ್ರೀ ವೈಷ್ಣವ ಸಂಪ್ರದಾಯವನ್ನು ತಳಕು ಹಾಕಿದವನು ರಣಧೀರ ಕಂಠೀರವನ ಆಸ್ಥಾನ ಕವಿಯಾಗಿದ್ದ ಗೋವಿಂದ ವೈದ್ಯ.[18] ಈತನು ತನ್ನ ಕೃತಿಯಲ್ಲಿ ಮೈಸೂರು ಅರಸರು ಕೃಷ್ಣನ ಕುಲಸಂಜಾತರೆಂದು ಉಲ್ಲೇಖಿಸಿದ ನಂತರವೇ ಶಾಸನಗಳಲ್ಲಿ ಅದು ಪುನರುಕ್ತಿಗೊಂಡಿದೆ.[19] ಯಾವುದೇ ಆಕರಗಳಲ್ಲಿ ಯದುರಾಯರು, ಕೃಷ್ಣರಾಯರು ಶ್ರೀ ಕೃಷ್ಣನ ವಂಶದವರಾಗಿದ್ದರೆಂದೂ ಆಧಾರಸಹಿತವಾಗಿ ನಿರೂಪಿಸದೆ, ದಂತ ಕತೆಯನ್ನು ಮಾತ್ರ ದಾಖಲಿಸುತ್ತಾ ಬರಲಾಗಿದೆ. ಆದರೆ, ಅದು ಐತಿಹಾಸಿಕ ಆಕರವಾಗುವುದಿಲ್ಲ.

ಶಾಸನಗಳಲ್ಲಿ ಪುನರುಕ್ತಿಗೊಂಡಿರುವ ಮತ್ತು ಎಲ್ಲ ಹಳೆ ಐತಿಹಾಸಿಕ ಕೃತಿಗಳಲ್ಲಿ ಇದೇ ಅಭಿಪ್ರಾಯ. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಪುನರಾವರ್ತಿತವಾಗಿ ಮುಂದುವರಿದಿದೆ. ಹೀಗಾಗಿ ಮೈಸೂರು ಒಡೆಯರ ಮೂಲದ ಬಗೆಗೆ ಇರುವ ಯಾವುದೇ ಹಿಂದಿನ ವಂಶಗಳ ಸಂಬಂಧವನ್ನು ಕರಾರುವಕ್ಕಾಗಿ ಬೆಸೆಯುವುದು ಈವರೆಗಿನ ಅಧ್ಯಯನದಲ್ಲಿ ಸಾಧ್ಯವಾಗದಿರುವುದು ಒಂದು ಐತಿಹಾಸಿಕ ವಿಪರ್ಯಾಸ.

ಈ ಮೇಲಿನ ವಾದಗಳಲ್ಲಿ ಮೊದಲನೆಯದಾದ ಯಾದವವಂಶದವರೆನ್ನುವ ವಾದಕ್ಕೆ ಪೂರಕವಾದ ಮಾಹಿತಿ ದೊರೆಯುವುದು ಪ್ರಪ್ರಥಮವಾಗಿ, ಕಂಠೀರವ ನರಸರಾಜ ವಿಜಯಂ ಕೃತಿಯಲ್ಲಿ. ಆದರೆ, ಇತ್ತೀಚಿಗೆ ಪ್ರಕಟವಾಗಿರುವ ರಾಜ ಒಡೆಯರದೆಂದು ಗುರುತಿಸುವ ಶಾಸನದಲ್ಲಿ ಸಹ ಈ ಬಗೆಯ ಮೂಲದ ಉಲ್ಲೇಖವಿದೆ. ಆದರೆ ಆ ಶಾಸನ ಪ್ರಶ್ನಾತೀತವಾಗಿ ರಾಜ ಒಡೆಯರ ಕಾಲದ್ದೆನ್ನುವುದು ಸಾಧ್ಯವಿಲ್ಲ. ಕಾರಣಗಳು ಇಂತಿವೆ. ಶಾಸನದ ತಾಮ್ರಪಟಗಳು ಇತರ ತಾಮ್ರಪಟಗಳಂತೆ ವರಾಹ ಮುದ್ರೆ ಸಹಿತವಾದ ಉಂಗುರು ಹೊಂದಿಲ್ಲ. ಅಲ್ಲದೆ ಅದರಲ್ಲಿರುವ ರಾಜ ಒಡೆಯರ ವಪ್ಪ ಅಥವಾ ಸಹಿ ಆ ಕಾಲದ ಲಿಪಿಯನ್ನು ಹೋಲುವುದಿಲ್ಲ. ಶಾಸನದ ಪಟಗಳು, ಬಿಡಿ ಬಿಡಿಯಾಗಿ ದೊರೆತಿವೆ ಎಂದೂ ಶಾಸನ ಪ್ರಕಟಿಸಿರುವವರೇ ಒಪ್ಪಿಕೊಂಡಿದ್ದಾರೆ. ಹಾಗಾಗಿ, ಈ ಶಾಸನವನ್ನು ಸಂಪೂರ್ಣವಾಗಿ ನಂಬುವ ಹಾಗಿಲ್ಲ. ಉಳಿದೆಲ್ಲಾ ವಂಶಾವಳಿ ಶಾಸನಗಳಲ್ಲಿ ಇದೇ ವಿಚಾರ ಪ್ರಸ್ತಾಪವಾಗಿದ್ದರೂ ಶ್ರೀ ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರ್ ಅವರಿಗಿಂತ ಹಿಂದಿನವರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸುವುದಿಲ್ಲ ಮತ್ತು ಯದುಕುಲದ ಸಂಬಂಧ ಕೂಡ ದೊರೆಯದ ಹಿನ್ನೆಲೆಯಲ್ಲಿ ಈ ವಾದಕ್ಕೆ ಹೆಚ್ಚಿನ ಮಹತ್ವವಿಲ್ಲ.

ಮೈಸೂರು ಅರಸರು ಮತ್ತು ಜೈನಧರ್ಮದ ಸಂಬಂಧ

1858ರ ಆಸುಪಾಸಿನಲ್ಲಿ ರಚಿತವಾದ ದೇವಚಂದ್ರನ[20] ರಾಜಾವಳಿ ಕಥಾಸಾರದಲ್ಲಿ ಮೈಸೂರು ಅರಸರು ಪ್ರಾರಂಭದಲ್ಲಿ ಜಿನರಾಗಿದ್ದರೆಂದೂ ಒಂದು ಸಂಕೀರ್ಣವಾದ ಕಥೆಯನ್ನು ಹೆಣೆಯುತ್ತಾನೆ. ಬಹುಶಃ ಇದರ ಆಧಾರದ ಮೇಲೆಯೇ ನಂಜಮ್ಮಣ್ಣಿಯವರು[21] ಹಲವಾರು ಕಡೆಗಳಲ್ಲಿ ಮೈಸೂರು ಅರಸರು ಮತ್ತು ಇತರ ಅರಸು ಮನೆತನಗಳು ಕೊಡಗಿಗೆ ಸಮೀಪವಾಗಿದ್ದ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನಗಳು ಜಿನಧರ್ಮದೊಂದಿಗಿದ್ದ ಸಂಬಂಧವನ್ನು ಮೇಳವಿಸಿ ಅರಸುಗಳು ಜೈನಧರ್ಮ ಅವಲಂಬಿಗಳಾಗಿದ್ದವರೆಂದು ಅನುಮಾನ ಬರುವಂತೆ ವ್ಯಾಖ್ಯಾನಿಸಿರುತ್ತಾರೆ.

ಆದರೆ ದೇವಚಂದ್ರನ ಆರೋಪಣೆ ಅಥವಾ ತನ್ನ ಆಶ್ರಯದಾತನಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ತನ್ನ ಧರ್ಮಾವಲಂಬಿಗಳೆಂಬುದನ್ನು ತೋರಿಸುವ ಸಲುವಾಗಿ ನಿರ್ಮಿಸಿರುವ ಕಥಾ ಹಂದರವೆಂಬುದನ್ನು ಯಾವುದೇ ಅನುಮಾನಗಳಿಗೆ ಆಸ್ಪದ ಇಲ್ಲದಂತೆ ತೋರಿಬರುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ದೇವಚಂದ್ರನ ಜಿನಮತದ ಸಂಬಂಧವು ಅರ್ಥಹೀನವೆಂದು ಕಂಡುಬರುತ್ತದೆ. ಹೀಗಾಗಿ ಮೂಲದಲ್ಲಿ ಮೈಸೂರಿನ ಅರಸರು ಹೊಯ್ಸಳ ವಂಶಕ್ಕೆ ಅಥವ ಸೇವುಣ ವಂಶಕ್ಕೆ ಅಥವಾ ಜಿನಸಂಪ್ರದಾಯಕ್ಕೆ ಸೇರಿದವರಲ್ಲವೆಂಬುದನ್ನು ನಿರ್ವಿವಾದಿತವಾಗಿ ಈಗಾಗಲೇ ನಿರೂಪಿಸಲ್ಪಟ್ಟಿದೆ. ಉಳಿದಂತೆ ರಾಜ ಒಡೆಯರಿಂದ ಆರಂಭಿಸಿ ಎಲ್ಲ ಮೈಸೂರು ಅರಸರುಗಳು ಶ್ರೀ ವೈಷ್ಣವ ಪಂಥಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಆ ಮತದ ಕವಿವರ್ಯರು ಮೈಸೂರು ಅರಸರನ್ನು ವೈಷ್ಣವ ಶ್ರೇಷ್ಠ ಶ್ರೀಕೃಷ್ಣನ ಕುಲಕ್ಕೆ ಬೆಸೆದು ಆ ಬಗೆಯ ಪುರಾವೆಗಳನ್ನು ಸೃಷ್ಟಿಸಿರುವುದು ಸಿದ್ಧವಾಗುತ್ತದೆ. ಇದಕ್ಕೆ ಪೂರಕವಾಗಿ ರಣಧೀರ ಕಂಠೀರವರ ಪೂರ್ವದ ಮೈಸೂರು ಒಡೆಯರು ಮನೆತನದ ಯಾವುದೇ ಅರಸರ ಶಾಸನಗಳಲ್ಲಿ ಯದುಕುಲದ ಪ್ರಸ್ತಾಪವಿಲ್ಲದೆ ಇರುವುದರಿಂದ ಮೈಸೂರು ಅರಸರು ಪ್ರಾರಂಭದಿಂದಲೂ ಶ್ರೀ ವೈಷ್ಣವ ಮತಾವಲಂಬಿಗಳಾಗಿದ್ದರೆಂಬುದನ್ನು ಒಪ್ಪಲು ಸಾಧ್ಯವಿಲ್ಲ.[22] ಕಾರಣ ಬಹುತೇಕ ಅಸರು ಮನೆತನಗಳು ಇಂದಿಗೂ ಸ್ಮಾರ್ತ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಬಂದಿರುವ ಹಿನ್ನೆಲೆಯಲ್ಲಿ ಮೌಖಿಕ ಲಿಖಿತ ಆಧಾರಗಳ ಅನ್ವಯದಿಂದ ಈ ನಿರ್ಧಾರಕ್ಕೆ ಬರಬಹುದು.[23] ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ.

ಈ ಹಿಂದಿನ ಪುಟಗಳಲ್ಲಿ ಮೈಸೂರು ಒಡೆಯರು ದೇವಗಿರಿಯ ಯಾದವ ಮನೆತನಕ್ಕಾಗಲಿ ಅಥವಾ ದ್ವಾರವತಿಪುರವರಾಧೀಶ್ವರರೆಂದು ಕರೆದುಕೊಂಡ ಹೊಯ್ಸಳ ಮನೆತನಕ್ಕಾಗಲಿ ಸೇರಿದವರಲ್ಲವೆಂಬುದನ್ನು ಈವರೆಗೆ ನಡೆದಿರುವ ಐತಿಹಾಸಿಕ ಸಂಶೋಧನೆಗಳ ಆಧಾರದ ಮೇಲೆ ಹೇಳಿದೆಯಾದರೂ ಮೈಸೂರಿನ ಅರಸು ಮನೆತನದ ಉದಯದ ಬಗೆಗೆ ಬರೆದಿರುವ ಎಲ್ಲ ಶಾಸನಗಳೂ ಮತ್ತು ಕೃತಿಗಳು ಒಕ್ಕೊರಲಿನಿಂದ ಯದುವಂಶದೊಂದಿಗೆ ತಳಕು ಹಾಕಿಕೊಳ್ಳುತ್ತವೆ.[24] ಗೋವಿಂದ ವೈದ್ಯನ ಕೃತಿಯಿಂದ ಆರಂಭಿಸಿ 1800ರ ನಂತರವೂ ರಚಿತವಾದ ಎಲ್ಲ ಕೃತಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಶ್ರೀಕೃಷ್ಣನ ವಂಶಜರೇ ಮೈಸೂರು ಒಡೆಯರು ಎಂಬುದನ್ನು ಸಾಧಿಸುತ್ತಾ ಬಂದಿದ್ದಾರೆ. ಜನಪ್ರಿಯವಲ್ಲದ 1800 ಆಸುಪಾಸಿನಲ್ಲಿ ರಚಿತವಾದ ಒಂದು ಹಸ್ತಪ್ರತಿಯಲ್ಲಿ ಮೈಸೂರು ದೊರೆಗಳ ಮನೆತನದ ಮೂಲವನ್ನು ಕುರಿತು ಈ ರೀತಿ ಉಲ್ಲೇಖಿಸಲಾಗಿದೆ.[25]

ತಿರುಮಲರಾಜೈಯ್ಯನವರು, ಶ್ರೀರಂಗಪಟ್ಟಣವನ್ನು ಪ್ರತಿ ಅಚ್ಚುಕಟ್ಟಾಗಿ ಸೀಮೆಯಲ್ಲಿ ದೇವದಾಯ ಬ್ರಹ್ಮದಾಯ ಮುಂತಾಗಿ ನಡೆಸಿಕೊಂಡು ಇದ್ದರು. ಪಾರ್ಥಿವ ಸಂವತ್ಸರದಾರಭ್ಯ ಸೌಮ್ಯಸಂವತ್ಸರದವರಿಗೆ ಆಳಿದ ವರ್ಷ. ಶುಭಮಸ್ತು, ಮಹಿಶೂರ ದೊರೆಗಳ ಪಾರಂಪರೆ, ಶ್ರೀ ಅತ್ರೇಯ ಮಹಾಮುನೀಶ್ವರನ ನೇತ್ರದಲ್ಲಿ ಚಂದ್ರನು ಜನಿಸ್ತನು. ಅಂದಾರಾಭ್ಯ ಈ ವಂಶಕ್ಕೆ ಅತ್ರೇಯ ಗೋತ್ರವು ಎಂದು ಹೆಸರಾಯಿತು. ಚಂದ್ರನಿಂದ ಬುಧನು ಜನಿಸ್ತನು. ಅಂದಾರಭ್ಯವಾಗಿ ಈ

ವಂಶವು ಸೋಮವಂಶಯೆಂಬ ಹೆಸರು ಪ್ರಸಿದ್ಧವಾಯಿತು. ಯಶೋಧನಿಂದ ಪುರೂರವರಾಯನೆಂಬ ರಾಯನು ಜನಿಸಿದನು. ಆ ಪುರೂರವರಾಯನಿಗೂ ಊರ್ವಶಿಗೂ ಆಯುಂಕುಮಾರನೆಂಬ ರಾಯನು ಜನಿಸಿದನು. ಆತನಿಗೆ ನಹುಷನೆಂಬ ರಾಯನು ಜನಿಸಿದನು. ಆತನು ನೂರು ಯಜ್ಞವ ಮಾಡಿ ರಾಜ್ಯವನಾಳಿ ದೇವೇಂದ್ರ ಪದವಿಯ ಪಡೆದನು. ಆತನಿಗೆ ಯಯಾತಿಯಂ ರಾಜಯ ಜನಿಸಿದನು. ಆತನಿಗೆ ನಾಲ್ಕು ಮಂದಿ ಕುಮಾರರುಗಳು ಆದರು. ಆ ಕುಮಾರರುಗಳ ಹೆಸರುಗಳು ತರ್ವಸೂರಾಯ ಯದುಷ್ಯರಾಜ ಯದುರಾಯ, ಪುರೂರವರಾಯ ನಾಲ್ಕು ಮಂದಿಗಳಲ್ಲಿ ಯದುಯೆಂಬರಾಯಂಗೆ ಶೂರಸೇನಂ (ಭಕ್ತ) ಕುಮಾರನಾದನು. ಅಂದಾರಭ್ಯವಾಗಿ ಈ ವಂಶ ಯದುವಂಶ ಎಂಬ ಪ್ರಸಿದ್ಧವಾದ ಹೆಸರಾಯಿತು. ಆಶೂ(ಸು)ರಸೇನನೆಂಬ ರಾಯಂಗೆ ವಸುದೇವನೆಂಬರಾಯನು ಜನಿಸಿದನು. ಆ ವಸುದೇವಂಗೆ ದೇವಕಿಗೆ ಸಹ ಶ್ರೀಮನ್ನಾರಾಯಣನೆಂಬ ಶ್ರೀ ಕೃಷ್ಣನೆಂಬ ಹೆಸರಿನಲ್ಲಿ ಅವತರಿಸಿ ಆ ಸ್ವಾಮಿಗೆ ಅಷ್ಟಮಹಿಗಳಲ್ಲಿ ಬಹುಮಂದಿ ಕುಮಾರರುಗಳು ಜನಿಸಲಾಗಿ ಅವರು ಸಹಾ ದ್ವಾರಕಾಪಟ್ಟಣದಲ್ಲಿ ಸುಖದಿಂದಿದ್ದು ಅವತಾರ ಸಂಪೂರ್ಣವಾಗುವ ಸಮಯದಲ್ಲಿ ತಮ್ಮ ಒಡಹುಟ್ಟಿದವಳಾದ ಮಾಯಾದೇವಿಯನಿಸಿದ ಚಾಮುಂಡಿ ಅಮ್ಮನವರ ಕರೆದು ನಮ್ಮ ವಂಶವಾದ ಕುಮಾರರುಗಳು ಕುತಂಳದೇಶದಲ್ಲಿ ಇದ್ದಾರೆ. ನೀನು ಅಲ್ಲಿಗೆ ಹೋಗಿ ಇರು ಎಂಬ ಹಾಗೆ ಬುದ್ಧಿಕಲಿಸಲು, ಆ ಚಾಮುಂಡಿ ಅಮ್ಮನವರು ಕುಂತಳದೇಶದಲ್ಲಿ ಪ್ರಸಿದ್ಧವಾದ ಕಾವೇರಿನದಿಗೆ ತೆಂಕಲಾಗಿ ಮಹಾಚಲವೆಂಬ ಪರ್ವತದ ತಪ್ಪಲಲ್ಲಿ ಇರುವ ಮಹಿಷಾಪುರವೆಂಬ ಪಟ್ಟಣದ ಮಧ್ಯದಲ್ಲಿ ಯಾದವ ವಂಶದ ಅರಸುಗಳನ್ನು ಇರಿಸಿ, ಅವರಿಗೆ ತಾನು ಚಾಮುಂಡಿಯೆಂಬ ಹೆಸರಿನಲ್ಲಿ ಮನೆ ದೇವತೆಯಾಗಿ ಮಹಾಬಲಚಲಾಗ್ರದಲ್ಲಿ ನೆಲಸಿ ಪೂಜಿಸಿಕೊಂಡವಾದ ಕಾರಣ ಅಂದರಭ್ಯದಿಂದಾ, ಮಹಿಷಾಪುರವೆಂಬ ಪಟ್ಟಣಕ್ಕೆ ಮಹಿಶೂರುಯೆಂಬ ಹೆಸರಾಯಿತು. ಈ ಅರಸುಗಳೊಳಗೆ ಯದುವೆಂಬಾನೊಬ್ಬಾ ರಾಯನು ನಾರಾಯಣಗಿರಿಗೆ ಬಂದು, ತಿರುನಾರಾಯಣಸ್ವಾಮಿಯನ್ನು ಪೂಜಿಸಲಾಗಿ ಆ ಗಿರಿಯೂ ಯಾದವಗಿರಿಯೆಂಬ ಹೆಸರಾಯಿತು. ಆ ಯದುವೆಂಬ ಅರಶಿರ ವಂಶದಲ್ಲಿ ಅಂದಾರಭ್ಯ ಮೇಲುಕೋಟೆಯೆಂಬೀ ಹೆಸರು ಪ್ರಸಿದ್ಧವಾಯಿತು. ಬೆಟ್ಟದ ಒಡೆಯರು, ಚಾಮುಂಡಿ ಒಡೆಯರುಯೆಂದು ಇಬ್ಬರು ಕುಮಾರರುಗಳಾದರು. ಆ ಚಾಮ ಒಡೆಯರು ವಂಶ ಕೆಂಚಲಗೂಡ ಅರಸುಗಳ ಪಾರಂಪರೆ.

ಇದೇ ಭಾವವನ್ನು 1916ರಲ್ಲಿ ರಚಿಸಲಾದ *ಶ್ರೀಮನ್ಮಹಾರಾಜರ ವಂಶಾವಳಿಯಲ್ಲಿ*[26] ಅದಕ್ಕೆ ಸ್ವಲ್ಪ ಪೂರ್ವದಲ್ಲಿ ಅಂದರೆ 1887ರಲ್ಲಿ ರಚಿತವಾದ *ಮಹಿಶೂರ ಶ್ರೀ ಮನ್ಮಹಾರಾಜ ಚಾಮರಾಜೇಂದ್ರ ವಂಶರತ್ನಾಕರದಲ್ಲಿ* ಸಹ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಪುನರುಚ್ಚರಿಸಲಾಗಿದೆ.[27] ಆದರೆ ನಂಜಮ್ಮಣ್ಣಿಯವರು *ಅರಸು ಜನಾಂಗ : ಒಂದು ಅಧ್ಯಯನ*[28] ಕೃತಿಯಲ್ಲಿ ಅರಸರುಗಳು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಮುಸ್ಲಿಮರ ಹಾವಳಿಯ ಕಾಲದಲ್ಲಿ ವಲಸೆ ಬಂದವರೆಂದು ಗುರುತಿಸುತ್ತಾರೆ.

ಮತ್ತೆ ಕೆಲವು ಅರಸುಮನೆತನಗಳ ಮೂಲ ವೃತ್ತಿಯನ್ನು ಗುರುತಿಸುತ್ತಾ ಅರಿಕುಠಾರದ ಅರಸು ಮನೆತನ, ಕಮ್ಮರವಳ್ಳಿ ಅರಸು ಮನೆತನ, ಮುಂತಾದವುಗಳು ಕೆಲವು ಪ್ರದೇಶಗಳ ಶ್ರೋತ್ರೀಯ ಗುತ್ತಿಗೆಯನ್ನು ಅನುಭವಿಸುತ್ತ ರಾಜನಿಗೆ ಸಂದಾಯವಾಗಬೇಕಿದ್ದುದನ್ನು ಸಲ್ಲಿಸಿ ಆಡಳಿತಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆಂದು ಗುರುತಿಸುತ್ತಾರೆ.[29]

ಈ ಹಿನ್ನೆಲೆಯಲ್ಲಿ ನೋಡಿದಾಗ ಅರಸು ಮನೆತನಗಳು ಪ್ರಾಯಶಃ ಮಲ್ಲಿಕಾಫರನ ದಾಳಿಯಿಂದ ಹೆದರಿ ಉತ್ತರ ಕರ್ನಾಟಕದ ಭಾಗದಿಂದ ವಲಸೆ ಬಂದು ದಕ್ಷಿಣ ಭಾಗದಲ್ಲಿ ನೆಲೆಸಿದರೆಂದು ಹೇಳಬಹುದು. ಮಂಟೇಸ್ವಾಮಿಗಳ ಐತಿಹ್ಯದಲ್ಲಿಯೂ ಸಹ ಇದೇ ಬಗೆಯ ವಿವರಣೆಯಿದೆ. ಮಂಟೇಸ್ವಾಮಿಗಳು ಚನ್ನರಾಯಪಟ್ಟಣದಿಂದ ಇಬ್ಬರು ಅರಸು ಯುವಕರನ್ನು ಕರೆತಂದು ಬೊಪ್ಪಗೌಡನಪುರ ಮತ್ತು ಮಳವಳ್ಳಿಯ ಶೈವ ಮಠಗಳಿಗೆ ಆಡಳಿತಾಧಿಕಾರಿಗಳನ್ನಾಗಿ ಮಾಡಿದರೆಂದು

ತಿಳಿದುಬರುತ್ತದೆ[31]. ಈ ವಂಶದವರೇ ಮುಂದೆ ಈ ಮಠಗಳ ಸ್ವಾಮಿಗಳಾದರು. ಅವರುಗಳೂ ಇಡಿ ಅರಸು ಜನಾಂಗದ ಧರ್ಮ ಗುರುಗಳಾಗಿಲ್ಲ.[32] ಮೈಸೂರು ಸಂಸ್ಥಾನದ ಜಾತಿ ಮತ್ತು ಆಚರಣೆಗಳನ್ನು ಬರೆಯುತ್ತಾ ಎಲ್. ಕೆ. ಎ. ಅಯ್ಯರ್[33] ಅವರು ಅರಸು ಜನಾಂಗದಲ್ಲಿ ಜೈನ, ಶೈವ ಮತ್ತು ವೈಷ್ಣವ ಸಂಪ್ರದಾಯದವರು ಇದ್ದರೆಂದು ಗುರುತಿಸುತ್ತಾರೆ. ಈ ಎಲ್ಲ ವಿವರಗಳನ್ನು ಕಲೆ ಹಾಕಿದಾಗ ಮೈಸೂರು ಅರಸರ ಮೂಲ ಮತ್ತೊಮ್ಮೆ ಗೋಜಲಿನ ಸ್ಥಿತಿಯಲ್ಲೇ ಉಳಿಯುತ್ತದೆ. ಇವುಗಳೆಲ್ಲವನ್ನು ಅವಲೋಕಿಸಿ ಮೈಸೂರು ಅರಸು ಮನೆತನದ ಪ್ರಾರಂಭದ ದಿನಗಳನ್ನು ಗುರುತಿಸಿದರೆ ಈ ಅಸ್ಪಷ್ಟತೆ ಮತ್ತೂ ಮುಂದುವರೆಯುತ್ತದೆ. ಸಾಂಪ್ರದಾಯಿಕ ಐತಿಹ್ಯಗಳ ಆಧಾರದ ಮೇಲೆ ಮೈಸೂರು ಅರಸು ಮನೆತನ 1399ರಲ್ಲಿ ಪ್ರಾರಂಭವಾಯಿತೆಂದೂ ಆ ಪ್ರಕ್ರಿಯೆ ಮೈಸೂರಿನಲ್ಲಿ ನೆರವೇರಿತೆಂದು ತಿಳಿದುಬರುತ್ತದೆ.[34] ಆದರೆ ಪ್ರಾರಂಭಿಕ ಮೈಸೂರು ಅರಸರುಗಳ ಶಾಸನಗಳನ್ನು ಅವಲೋಕಿಸಿದಾಗ ಯದುರಾಯನಿಂದ 3ನೇ ಬೆಟ್ಟದ ಚಾಮರಾಜ ಒಡೆಯರವರೆಗೆ ಯಾವುದೇ ಐತಿಹಾಸಿಕ ಆಕರಗಳು ಲಭ್ಯವಿಲ್ಲ.[35]

ಆದರೂ ಈ ಎಲ್ಲ ಕೃತಿಗಳಲ್ಲಿಯೂ ನಡೆದಿರುವ ಸಂಶೋಧನೆಯನ್ನು ಗೌರವಿಸಿ ಯದುರಾಯರಿಂದ ರಾಜ ಒಡೆಯರ್‌ವರೆಗಿನ ಇತಿಹಾಸವನ್ನೂ, ಪರಂಪರೆಯನ್ನೂ ಆಧರಿಸಿಯೇ ಇಲ್ಲಿ ಪುನರುಕ್ತಿಗೊಳಿಸಲಾಗಿದೆ.

ಈ ಪೂರ್ವದಲ್ಲಿ ಮೈಸೂರು ಸಂಸ್ಥಾನ ಸ್ಥಾಪನೆಯಾದ ಕುರಿತು ಹಲವಾರು ಐತಿಹ್ಯದ ಪ್ರಾಕಾರಗಳಿವೆ. ಇವುಗಳೆಲ್ಲದರ ಒಟ್ಟಾರೆ ಸಾರಾಂಶವನ್ನು ಈ ರೀತಿ ಹೇಳಬಹುದು.

ಶ್ರೀಕೃಷ್ಣನ ವಂಶದಲ್ಲಿ ಜನಿಸಿದ ಯದುರಾಯ ಮತ್ತು ಕೃಷ್ಣರಾಯರು ತಮ್ಮ ಸ್ವಪ್ನದಲ್ಲಿ ಶ್ರೀಕೃಷ್ಣನು ನಿರ್ದೇಶಿಸಿದಂತೆ ತನ್ನ ತಪೋಭೂಮಿ ಯತಿಶೈಲದಲ್ಲಿ ಪೂಜಾ ಕೈಂಕರ್ಯಕ್ಕೆ ಯಾತ್ರೆಯನ್ನೂ ದ್ವಾರಕೆಯಿಂದ ಪ್ರಾರಂಭಿಸಿ ಯದುಶೈಲವನ್ನು ತಲುಪಿ ಚಲುವನಾರಾಯಣ ಸ್ವಾಮಿಗೆ ವಂದಿಸಿ ಪೂಜೆಗಳನ್ನೂ ನೆರವೇರಿಸಿ ನಂತರ ಮೈಸೂರು ನಗರದ ಅಧಿದೇವತೆಯಾದ ಚಾಮುಂಡಾಂಬೆಯನ್ನೂ ಆಕೆಯ ಸಹೋದರಿ ಜ್ವಾಲಾಮಾಲಿನಿಯನ್ನೂ ಸಂದರ್ಶಿಸಿ ಮೈಸೂರು ನಗರದ ಕೋಡಿ ಭೈರವ ಮಂದಿರದಲ್ಲಿ ತಂಗಿದ್ದಾಗ ಜಂಗಮನಿಂದ ಮೈಸೂರು ಅರಸು ಮನೆತನಕ್ಕೆ ಹದಿನಾರಿನ ಮಾರನಾಯಕನಿಂದ ಆಗುತ್ತಿದ್ದ ತೊಂದರೆಯನ್ನು ಕೇಳಿ ರಾಜವಂಶಕ್ಕೆ ಉಪಕಾರವನ್ನು ಮಾಡಲು ಒಪ್ಪಿ ಮಾರನಾಯಕನೊಂದಿಗೆ ರಾಜಕನ್ಯೆಯ ವಿವಾಹಕ್ಕೆ ಆಮಂತ್ರಣವನ್ನು ನೀಡುವಂತೆ ರಾಜಮಾತೆಗೆ ತಿಳಿಸಿ ಮಾರುವೇಷದಲ್ಲಿ ಮದುವೆ ಅಂಗಳವನ್ನು ಹೊಕ್ಕು ಮಾರನಾಯಕನನ್ನು ಕೊಂದು ಮೈಸೂರಿನ ಅರಸನ ಮಗಳನ್ನು ವಿವಾಹವಾಗಿ ರಾಜತ್ವವನ್ನು, ಒಡೆಯನೆಂಬ ಅಭಿದಾನವನ್ನು ಪಡೆದರೆಂದು ದಾಖಲಿಸಬಹುದು.[36]

ಕಾರುಗಳ್ಳಿಯ ಶಾಂತರಾಜಯ್ಯನು ಮೈಸೂರು ಮನೆತನದ ವಿರೋಧಿಯೆಂದು ತಿಳಿದು ಆತನನ್ನು ನಿಗ್ರಹಿಸಿ ತಮ್ಮನಾದ ಕೃಷ್ಣರಾಯನಿಗೆ ಕಾರುಗಳ್ಳಿ ಗ್ರಾಮದ ಅಧಿಪತ್ಯವನ್ನು ಕೊಟ್ಟನು.[37] ಈ ಸಾರಾಂಶಭೂತವಾದ ಐತಿಹ್ಯ ಎಲ್ಲ ಕಡೆ ಸಣ್ಣಪುಟ್ಟ ವ್ಯತ್ಯಾಸದೊಂದಿಗೆ ಉಲ್ಲೇಖಿತವಾಗಿದೆ.

ಕ್ರಿ.ಶ. 1858ರ ದೇವಚಂದ್ರನ ರಾಜಾವಳೀ ಕಥೆಯಲ್ಲಿ ಇದೇ ಪ್ರಸಂಗ ಹೀಗಿದೆ. "ವಿಜಯನಗರದಲ್ಲಿ ಕ್ರಿ.ಶ. 1414–1426ರ ಮಧ್ಯೆ 12 ವರ್ಷಗಳ ಕಾಲ ಕ್ಷಾಮ ತಲೆದೋರಿತು. ಆಗ ಅಲ್ಲಿನ ಅರಸುಗಳು, ಶೆಟ್ಟಿಗಳು, ಚಕ್ರಾಧಿಪತ್ಯದ ವಿವಿಧ ಭಾಗಗಳಿಗೆ ಮತ್ತು ಕರ್ನಾಟಕಕ್ಕೆ ವಲಸೆ ಹೋದರು. ಅವರಲ್ಲಿ ಯಾದವಾನ್ವಯದ ಮೂವರು ಅರಸುಗಳು ನುಗ್ಗೆಹಳ್ಳಿಯಲ್ಲಿ ನೆಲೆಸಿದರು. ಅವರಲ್ಲಿ ಕಿರಿಯವನಾದ ವಿಜಯರಾಜನು ಮೈಸೂರು ಬಳಿಯ ಕುಂಬಾರಕೊಪ್ಪಲಿನಲ್ಲಿ ನೆಲಸಿ ವ್ಯವಸಾಯ ಮಾಡಿಕೊಂಡಿದ್ದನು. ಕುಂಬಾರ ಕನ್ಯೆಯೊಬ್ಬಳನ್ನು ಮದುವೆಯಾದನು. ಸಮೀಪದ ಐದು ಹಳ್ಳಿಗಳನ್ನು ಗುತ್ತಿಗೆಗೆ ಹಿಡಿದಿದ್ದನು. ಕೆಲವು ಕಾಲಾನಂತರ ವಿಜಯರಾಜನು ತನ್ನ ಹೆಂಡತಿ ಮತ್ತು ಒಬ್ಬ ಮಗಳನ್ನು ಬಿಟ್ಟು ನಿಧನನಾದನು. ಈ ಸಂದರ್ಭವನ್ನು

ಬಳಸಿಕೊಂಡು ತೊರೆಯನು ಆ ರಾಜಕುಮಾರಿಯನ್ನು ಮದುವೆಯಾಗಲು ಪ್ರಯತ್ನಿಸಿದರು. ಅವಳಿಗೆ ಇದು ಇಷ್ಟವಿರಲಿಲ್ಲ. ಈ ಸಂದರ್ಭದಲ್ಲಿ ಯಾದವಾನ್ವಯದ ವಿಷ್ಣುವರ್ಧನನ ವಂಶಸ್ಥರಾದ ದೇವರಾಜ ಮತ್ತು ಶಾಂತರಾಜರು ರಾಜ್ಯಾಭಿಲಾಷಿಗಳಾಗಿ ಸಂಚರಿಸುತ್ತ ಮೈಸೂರು ಕೆರೆಯ ಸಮೀಪಕ್ಕೆ ಬಂದರು. ಅಲ್ಲಿ ಎಲ್ಲ ವಿಷಯಗಳನ್ನು ತಿಳಿದು ಖಚಿತಪಡಿಸಿಕೊಂಡು ಮೈಸೂರನ್ನು ಪ್ರವೇಶಿಸಿ ತೊಂದರೆಗೆ ಕಾರಣರಾದವರನ್ನು ನಿಗ್ರಹಿಸಿದರು. ದೇವರಾಜ ಮತ್ತು ಶಾಂತರಾಜರು ಮೈಸೂರಿನ ಒಡೆಯರಾದರು. ದೇವರಾಜನು ಕೆಲವು ಗ್ರಾಮಗಳನ್ನು ಪಡೆದು ಮಲೆಯೂರಿನ ಶಾಂತಯ್ಯ ಮತ್ತು ಪದ್ಮಣಯ್ಯ ಎನ್ನುವ ಇಬ್ಬರು ಜೈನಬ್ರಾಹ್ಮಣರನ್ನು ತನ್ನ ಅಧಿಕಾರಿಗಳನ್ನಾಗಿ ನೇಮಿಸಿಕೊಂಡನು. ಕೆಲವು ಕಾಲಾನಂತರ ಶಾಂತರಾಜನು ಅಣ್ಣನೊಡನೆ ಬಂದ ಭಿನ್ನಾಭಿಪ್ರಾಯದಿಂದ ಬೇರೆಯಾಗಿ ಕಾರುಗಹಳ್ಳಿಯಲ್ಲಿ ನೆಲೆಸಿದನು. ಅನಂತರ ತೊರೆಯ ಕುಲದ ಮಾರನಾಯಕನೆಂಬುವನು ಪ್ರಬಲನಾಗಿ ದೇವರಾಜನನ್ನು ಕೊಂದು ಮೈಸೂರನ್ನು ಆಕ್ರಮಿಸಿಕೊಂಡನು. ದೇವರಾಜನ ನಿಧನಾನಂತರ ಜನಿಸಿದ ರಾಜ ಒಡೆಯನು ಮಾರನಾಯಕನನ್ನು ಕೊಂದು ಜೈನರ ಸಹಾಯದಿಂದ ಅಧಿಕಾರಕ್ಕೆ ಬಂದನು.

ದ್ವಾರಕೆಯಿಂದ ಹೊರಟ ವಿಜಯರಾಜ ಒಡೆಯರು ಮತ್ತು ಕೃಷ್ಣರಾಜ ಒಡೆಯರು ಎನ್ನುವ ಸೋದರರು ವಿಜಯನಗರಕ್ಕೆ ಬಂದು ಅಲ್ಲಿನ ರಾಯನಲ್ಲಿ ನೆಲೆಸಿದರು. ರಾಯನು ಇವರಿಗೆ ಕೆಲವು ಸೀಮೆಗಳನ್ನು ಕೊಟ್ಟನು. ಅದನ್ನು ಒಪ್ಪಿಕೊಂಡ ಈ ಸೋದರರು ದಕ್ಷಿಣಾಭಿಮುಖವಾಗಿ ಹೊರಟು ಶ್ರೀರಂಗಪಟ್ಟಣವನ್ನು ತಲುಪಿದರು. ಕಾವೇರಿಯ ದಕ್ಷಿಣಕ್ಕಿದ್ದ ಚಾಮುಂಡಿಯನ್ನು ಸೇವಿಸಿ ಬೆಟ್ಟದ ತಪ್ಪಲಿನಲ್ಲಿದ್ದ ಹಡದಣ ಕೋಟೆಯವರೆಗೆ ಹೋದರು. ಅಲ್ಲಿನ ಶಾಂತ ಒಡೆಯರು ವೈರಾಗ್ಯ ಹುಟ್ಟಿ ತಮ್ಮ ಮಗಳನ್ನು ಒಡೆಯರು ಒಬ್ಬನಿಗೆ ಒಪ್ಪಿಸಿ ಹೊರಟು ಹೋದರು. ಕಾರುಗಹಳ್ಳಿಯ ಒಡೆಯನಾದ ಮಾರನಾಯಕನು ಈ ಸಂದರ್ಭದಿಂದ ಉತ್ತೇಜಿತನಾಗಿ ರಾಜಕುಮಾರಿಯ ಕೈ ಹಿಡಿಯಬಯಸಿದನು. ಹಡದಣದ ಕೆರೆಯ ಬಳಿಗೆ ಬಂದ ಈ ಸೋದರರಿಗೆ ಮದುವೆಯ ಏರ್ಪಾಡು ತಿಳಿಯಿತು. ಈ ಸಂದರ್ಭದಲ್ಲಿ ರಾಜಕುಮಾರಿಗೆ ಅಭಯಹಸ್ತವನ್ನು ನೀಡಿ ಈ ರಾಜಕುಮಾರರು ಒಡೆಯನೊಡನೆ ತಾತ್ಕಾಲಿಕವಾಗಿ ರಚಿಸಿದ್ದ ಮದುವೆಯ ಮಂಟಪದ ಬಳಿಗೆ ಹೋದರು. ಹಳೆಯ ಪೈಕದವರನ್ನು ರಾಣಿಯವರನ್ನು ತಮ್ಮ ಕಡೆಗೆ ಒಲಿಸಿಕೊಂಡರು. ಕಾರುಗಹಳ್ಳಿಯ ಮಾರನಾಯಕನ ಕಡೆಯ ಮುಖ್ಯಸ್ಥರನ್ನು ಒಬ್ಬೊಬ್ಬರನ್ನಾಗಿ ಮದುವೆಯ ಮಂಟಪಕ್ಕೆ ಬರಮಾಡಿಕೊಂಡು ಮುಗಿಸಿದರು. ವಿಜಯನು ರಾಜಕುಮಾರಿಯ ಕೈ ಹಿಡಿದು ಹಡದಣ ಮತ್ತು ಆಗ ಹೂಡೇವು ಆಗಿದ್ದ ಮೈಸೂರಿಗೆ ಒಡೆಯನಾದನು.[38]

ಮೈಸೂರು ಒಡೆಯರ ಸಂಭಾವ್ಯ ಮೂಲ

ಮೈಸೂರು ಅರಸರು ಅಧಿಕಾರಕ್ಕೆ ಬಂದ ಹಿನ್ನೆಲೆ ಹಾಗೂ ಅಧಿಕಾರಕ್ಕೆ ಒಳಪಟ್ಟ ಪ್ರದೇಶ, ಅಲ್ಲದೆ ಅಂದಿನ ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿದಾಗ, ಅವರು ಬೇರೆಡೆಯಿಂದ ಬಂದಿರಬಹುದೆಂಬ ವಾದಕ್ಕೆ ಸಹ ಆಕರಗಳು ದೊರೆಯುತ್ತವೆ. ಈಗಾಗಲೇ ಪ್ರಕಟವಾಗಿರುವ ಶಾಸನಗಳು ನಮ್ಮ ಈ ಸಂದೇಹಗಳನ್ನು ನಿಚ್ಚಳ ಬೆಳಕಿನತ್ತ ಕೊಂಡೊಯ್ಯುತ್ತವೆ.

ಮೈಸೂರು ಅರಸರ ವಂಶಾವಳಿಯನ್ನು ಉಲ್ಲೇಖಿಸಿರುವ ಎಲ್ಲಾ ಆಕರಗಳು ಒಕ್ಕೊರಲಿನಿಂದ ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರನ್ನು ಪ್ರಥಮವಾಗಿ ಉಲ್ಲೇಖಿಸುತ್ತದೆ. ಪ್ರಾರಂಭಿಕ ಶಾಸನಗಳು ಹಾಗೂ ಐತಿಹಾಸಿಕ ಕೃತಿಗಳಲ್ಲಿ ಸಹ ಈತನೇ ವಂಶದ ಮೂಲ ವ್ಯಕ್ತಿಯಾಗಿ ಪ್ರತಿಪಾದಿತನಾಗಿದ್ದಾನೆ. ಆದರೆ ಈವರೆಗಿನ ಇತಿಹಾಸ ಪುಸ್ತಕಗಳಲ್ಲಿ ರಾಜ ಒಡೆಯರ ಕಾಲದ ಶಾಸನವೇ ಒಡೆಯರ ಮೊದಲ ಶಾಸನವೆಂದು ಕರೆಯಲಾಗಿದೆ. ಆದರೆ ಈಗಾಗಲೇ ಪ್ರಕಟವಾಗಿರುವ ಶಾಸನಗಳಲ್ಲಿ ಮೈಸೂರು ಅರಸರ ಶಾಸನಗಳೆಂದು ಕೆಲವನ್ನು ಗುರುತಿಸಬಹುದಾಗಿದೆ. ಅವುಗಳ ವಿವರಗಳು ಮೈಸೂರು ಅರಸರ ಅನಂತರದ ದಾಖಲೆಗಳೊಂದಿಗೆ ಸಹ ತಾಳೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಈ ಶಾಸನಗಳು ಬಹಳ ಪ್ರಮುಖವಾಗುತ್ತವೆ.

ಮೊದಲಿಗೆ, ಮೈಸೂರು ಅರಸರು ಅಧಿಕಾರಕ್ಕೆ ಬಂದ ಕಾಲದ ಹಾಗೂ ಅವರು ಅಧಿಕಾರ ನಡೆಸಿದರೆನ್ನಲಾದ ಪ್ರದೇಶದ ರಾಜಕೀಯ ವಿವರಗಳನ್ನು ತಿಳಿಯಬೇಕಿದೆ.

ಕ್ರಿ.ಶ. 1511–12 ರಲ್ಲಿ ಉಮ್ಮತ್ತೂರಿನ ನಾಯಕರು, ವಿಜಯನಗರ ಸಾಮ್ರಾಜ್ಯದಿಂದ ಹೊರಬರಲು ಹಾಗೂ ಸ್ವತಂತ್ರರಾಗಲು ಪ್ರಯತ್ನಿಸಿದರು. ಈ ಪ್ರಯತ್ನವನ್ನು ಹತ್ತಿಕ್ಕುವ ಸಲುವಾಗಿ ಕೃಷ್ಣರಾಯ ಶಿವನಸಮುದ್ರ ಹಾಗೂ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿ, ಅವುಗಳನ್ನು ವಶಪಡಿಸಿಕೊಂಡನು. ಆ ನಂತರ ಶ್ರೀರಂಗಪಟ್ಟಣದ ಸೀಮೆಯ ಆಡಳಿತವನ್ನು ಹಲವು ಹಂತದ ಅಧಿಕಾರಿಗಳಲ್ಲಿ ಹಂಚಿ, ಶ್ರೀರಂಗಪಟ್ಟಣ ಪ್ರಾಂತ್ಯದಲ್ಲಿ ಮತ್ತೊಮ್ಮೆ ಪ್ರತಿರೋಧಗಳು ತೋರದಂತೆ ವ್ಯವಸ್ಥೆ ಮಾಡಿದನು.

ಹಾಗಾಗಿ, ಶ್ರೀರಂಗಪಟ್ಟಣ ಪ್ರಾಂತ್ಯದಲ್ಲಿ ಕ್ರಿ.ಶ. 1512 ರ ಅನಂತರದ ಶಾಸನಗಳಲ್ಲಿ ಹಲವಾರು ಆಡಳಿತಗಾರರ ಹೆಸರುಗಳು ಉಲ್ಲೇಖಿತವಾಗಿವೆ. ಆ ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ನಾವು ಮೈಸೂರು ಅರಸರ ಮೂಲವನ್ನು ಹುಡುಕಬಹುದು.

ಈ ಪ್ರಾಂತ್ಯದ ಆಡಳಿತಗಾರರಾದ ಮೈಸೂರು ಒಡೆಯರನ್ನು ಮೈಸೂರು ಎಂಬ ವಿಶೇಷಣದೊಡನೆ ಗುರುತಿಸುವ ಶಾಸನ ಕ್ರಿ.ಶ. 1598ರದ್ದು. ಈ ಶಾಸನದಲ್ಲಿನ ದಿನಾಂಕದ ಉಲ್ಲೇಖ ಹೀಗಿದೆ.

'ಶಾಲಿವಾಹನ ಶಕ ವರುಷ 1520ಸಂದು ವರ್ತಮಾನವಾದ "ಳಂಬಿ ಸಂವತ್ಸರದ ಚುತ್ರ ಶುದ್ದದಲು' ಈ ದಿನಾಂಕ 1598ರ ಮಾರ್ಚ್ 31ಕ್ಕೆ ಸರಿ ಹೊಂದುತ್ತದೆ.[39]

ಅದೇ ಶಾಸನದ ಐದು ಹಾಗೂ ಆರನೆಯ ಸಾಲಿನ ಉಲ್ಲೇಖ ಹೀಗಿದೆ:

"ಆತ್ರೇಯಗೋತ್ರದ ಅಶ್ವಲಾಯನ ಸೂತ್ರದ ಮೂಸೂರ ಚಾ

ಮರಸ ವೊಡೆಯರ ಮಕ್ಕಳು ಬೆಟ್ಟದ ಚಾಮರಸವೊಡೆಯರೂ"

ಅಂದರೆ, ಕ್ರಿ.ಶ. 1598ರ ಹೊತ್ತಿಗೆ, ಮೈಸೂರು ಪ್ರದೇಶವನ್ನು ಆತ್ರೇಯ ಗೋತ್ರದ ಅಶ್ವಲಾಯನ ಸೂತ್ರದ ಚಾಮರಸ ವೊಡೆಯರ ಮಕ್ಕಳಾದ ಬೆಟ್ಟದ ಚಾಮರಸ ವೊಡೆಯರು ಆಳ್ವಿಕೆ ನಡೆಸುತ್ತಿದ್ದುದು ಖಚಿತವಾಗುತ್ತದೆ.

ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತವಾಗಿರುವ ವ್ಯಕ್ತಿಗಳನ್ನು ಮೈಸೂರು ಒಡೆಯರ ವಂಶಾವಳಿಯಲ್ಲಿ ವ್ಯಕ್ತಿಗಳೊಂದಿಗೆ ಗುರುತಿಸಿದ ನಂತರವೇ ಅರಸರ ವಂಶಾವಳಿಯ ಬಗ್ಗೆ ಬೆಳಕು ಚೆಲ್ಲಬಹುದಾಗಿದೆ.

ಶಾಸನೋಕ್ತ ಮೈಸೂರು ಚಾಮರಸ ವೊಡೆಯರು ವಿಜಯನಗರ ಸಾಮ್ರಾಜ್ಯದ ಅರಸನಾದ ಎರಡನೇ ವೆಂಕಟಪತಿ ಮಹಾರಾಯನ (1580–1624) ಸಮಕಾಲೀನರಾಗಿದ್ದರು. ಅದೇ ಕಾಲದಲ್ಲಿ ಈತನ ಹಿರಿಯ ಸಹೋದರರಾದ ರಾಮರಾಜಯ್ಯನವರು ಶ್ರೀರಂಗಪಟ್ಟಣವನ್ನು ಆಳುತ್ತಿದ್ದರು.

ರಾಮರಾಜಯ್ಯನವರು ಮೈಸೂರು ಚಾಮರಾಜ ಒಡೆಯರ ಮಗ ಬೆಟ್ಟದ ಚಾಮರಾಜ ಒಡೆಯರಿಗೆ ಬೆಳಗುಳವನ್ನು ಕೊಟ್ಟದ್ದನ್ನು, ಅದನ್ನೇ ಬೆಟ್ಟದ ಚಾಮರಸ ಒಡೆಯರು ರಾಮನುಜರ ಕೂಟಕ್ಕೆ ದತ್ತಿಯಾಗಿತ್ತಿದ್ದನ್ನು ಉಲ್ಲೇಖಿಸುತ್ತದೆ.

ಶಾಸನವನ್ನು ಮೈಸೂರಿನ ಅರಸರ ವಂಶಸ್ಥರಾದ ಬೆಟ್ಟದ ಚಾಮರಾಜ ಒಡೆಯನೇ ಹಾಕಿಸಿದ್ದರೂ ಶಾಸನದ ಪ್ರಾರಂಭದಲ್ಲಿ ವಿಜಯನಗರದ ಅರಸರನ್ನು ಉಲ್ಲೇಖಿಸಿ ಅವರ ಅಧೀನರಾಗಿ ಕಾರ್ಯನಿರ್ವಹಿಸುತ್ತಿದ್ದುದನ್ನು ಅಂದರೆ,

ಶ್ರೀರಂಗಪಟ್ಟಣದ ರಾಜ್ಯಪಾಲರ ಕೈಕೆಳಗೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದುದನ್ನು ಒಪ್ಪಿಕೊಂಡಿದ್ದಾರೆ. ಶಾಸನೋಕ್ತ ಮೈಸೂರು ಚಾಮರಸರನ್ನು ಮತ್ತು ಬೆಟ್ಟದ ಚಾಮರಸರನ್ನು ಮೈಸೂರು ಅರಸರ ವಂಶಾವಳಿಯಲ್ಲಿ ಗುರುತಿಸಬೇಕಾಗುತ್ತದೆ.

ಮೈಸೂರ ಬೆಟ್ಟದ ಚಾಮರಸ ಒಡೆಯರನ್ನು ಮೈಸೂರು ಅರಸರ ವಂಶಾವಳಿಯಲ್ಲಿನ ಬೋಳ ಚಾಮರಾಜ ಒಡೆಯರೊಂದಿಗೆ ಅಥವಾ ನಾಲ್ವಡಿ ಚಾಮರಾಜ ಒಡೆಯರ್ ಎಂದು ಗುರುತಿಸಬಹುದು. ಹಾಗೂ ಆತನ ಮಗನಾದ ಬೆಟ್ಟದ ಚಾಮರಸ ಒಡೆಯರನ್ನು ರಾಜ ಒಡೆಯರ ಸೋದರನಾದ ಬೆಟ್ಟದ ಚಾಮರಾಜ ಒಡೆಯರು ಎಂದು ಗುರುತಿಸಬಹುದು. ಕಾರಣ ಇವರೀರ್ವರೂ ವಿಜಯನಗರದ ಅರಸ ಹಾಗೂ ಶ್ರೀರಂಗಪಟ್ಟಣದ ಆಡಳಿತಾಧಿಕಾರಿ ರಾಮರಾಜಯ್ಯನ ಸಮಕಾಲೀನರು ಮತ್ತು ವಂಶಾವಳಿಯಲ್ಲಿ ಸಹ ಅದೇ ಕಾಲದಲ್ಲಿ ಉಲ್ಲೇಖಿತರಾಗಿದ್ದಾರೆ.

ನಾಲ್ವಡಿ ಬೆಟ್ಟದ ಚಾಮರಾಜ ಒಡೆಯರು ತನ್ನ ಮಕ್ಕಳಿಗೆ, ತನ್ನ ಅಧಿಕಾರದ ಕಾರ್ಯಕ್ಷೇತ್ರಗಳನ್ನು ವಿಭಾಗಿಸಿ ಕೊಟ್ಟವರು. ಇದು ಅನಂತರದ ದಿನಗಳಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಬೀರಿದ ಪ್ರಭಾವವನ್ನು ಸಹ ಕಾಣುತ್ತವೆ.

ಮೈಸೂರು ಒಡೆಯರು ತಮ್ಮನ್ನು ಸೋಮವಂಶದವರು, ಅತ್ರಿಮುನಿಯ ಗೋತ್ರದವರೆಂದು ಕರೆದುಕೊಂಡಿದ್ದಾರೆ. ಅಲ್ಲದೆ 'ಧರಣಿ ವರಾಹ' ಬಿರುದನ್ನು ಹೊಂದಿದ್ದಾಗಿ ಪ್ರಾಥಮಿಕ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ.

ಇದೇ ಬಗೆಯ ಗೋತ್ರ ಸೂತ್ರ ಹಾಗೂ ಬಿರುದಿನ ವಿವರಗಳನ್ನು ಹೊಂದಿರುವ ಮತ್ತೊಂದು ಶಾಸನ ನಮ್ಮ ಗಮನ ಸೆಳೆಯುತ್ತದೆ. 'ಶಾಲಿವಾಹನ ಶಕ ವರ್ಷ 1451 ಸಂದ ವರ್ತಮಾನವಾದ ಸರ್ವಧಾರಿ ಸಂವತ್ಸರದ ಆಷಾಢ ಶುದ್ಧ 12 ಸೋಮವಾರ' ಅಂದರೆ ಕ್ರಿ.ಶ. 1525 ರ ಜೂನ್ 29ರ ಶಾಸನದಲ್ಲಿ ಮೇಲೆ ಹೇಳಿದ ಎಲ್ಲಾ ವಿವರಗಳು ದೊರೆಯುವ ಬಗೆ ಹೀಗಿದೆ.[40]

ಶಾಸನ

ಗಜಪತಿ ಉರುಳ್ಗೋತ್ರ ಸುರುದಾಣ ಧರಣೀವರಾಮಜಿಯ ಶಾರ್ದೂಲ
ಚಮಟಿಯಂಬಿರು ಮೊದಲಾದ ಬಿರಿದಾವಳಿ ಭೂಷಿತರಾದ ಸೋಮವಂ
ಶಾಭರಣರಾದ ಆತ್ರೇಯಗೋತ್ರದ ಚವಟಿತಿಂಮರಾಜ ಭೂವೀರರಾದ ಸಕಲ
ವಿದ್ಯಾವಿಶಾರದರಾದ ಪ್ರಜಾಪರಿನಾದಿಧರ್ಮಪರಾಯಣರಾದ
ಭೋಗಯದೇವಮಹಾಅರಸರವರು............... ಭಕ್ತಕಾರಿಕನಿತ್ಯ ಕೈಂಕರ್ಯಕ್ಕೆ
ಮತ್ತೂರದಸವಂ (ಎ.ಕ., ಸಂ.6, ಶ್ರೀ.ಪ. 28, 1528, ಅಇ)

ಶಾಸನೋಕ್ತ ಚಮ್ಮಟಿ ತಿಮ್ಮರಾಜನನ್ನು ಧರಣಿ ವರಾಹ ಬಿರುದಾಂಕಿತರಾದ ಮೈಸೂರು ವಂಶಸ್ಥರಾದ ತಿಮ್ಮರಾಜನೆಂದು ಕರೆಯಲ್ಪಡುವ ಮುಮ್ಮಡಿ ಬೆಟ್ಟದ ಚಾಮರಾಜರೆಂದು ಗುರುತಿಸಬಹುದಾಗಿದೆ. ಹಾಗಾಗಿ, ಆತನ ಮಗನಾದ ಭೋಗಯ್ಯದೇವ ಮಹಾ ಅರಸಿನವರನ್ನು ಬೋಳಚಾಮರಾಜ ಒಡೆಯರೆಂದು ಸಮೀಕರಿಸಬಹುದು. ಅಂದರೆ ಬೆಟ್ಟದ ಚಾಮರಾಜ ಒಡೆಯರು, ವಿಜಯನಗರದ ಅರಸ ಕೃಷ್ಣರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ಸೀಮೆಯಲ್ಲಿ ನಾಯಕತನದಲ್ಲಿದ್ದರೆಂದು ಗುರುತಿಸಬಹುದು. ಕಾರಣ ಇವರು ಕೃಷ್ಣರಾಯನ ತಾಯಿ ನಾಗಲಾಂಬಿಕೆಯ ಹೆಸರಿನಲ್ಲಿ ಮೈಸೂರಿನ ಹೊರವಲಯದಲ್ಲಿ ಅಗ್ರಹಾರವನ್ನು ನಿರ್ಮಿಸಿದ್ದನ್ನು ಶಾಸನ ಉಲ್ಲೇಖಿಸುತ್ತದೆ. ಕೆಸರೆ, ವೀರಣನಗೆರೆ 'ವೀರನಗೆರೆ' ಇವರ ಅಧೀನದಲ್ಲಿದ್ದುದನ್ನು ಸಹ ಗುರುತಿಸುತ್ತದೆ. ಮೈಸೂರು ಅರಸರ ಅರಮನೆಯ ಆಕರಗಳ ವಿವರಗಳಲ್ಲಿ ಸಹ ಈ ವಿವರ ಕಂಡುಬರುವುದಿಲ್ಲ. ಆದರೆ, ಈ ಪ್ರದೇಶದಲ್ಲಿ ಅವರ ಪ್ರಭುತ್ವವಿದ್ದುದನ್ನು ಒಪ್ಪಿಕೊಳ್ಳುತ್ತವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಮೈಸೂರು ಅರಸರು ಕ್ರಿ.ಶ. 1512ರ ಕೃಷ್ಣರಾಯರ ಉಮ್ಮತ್ತೂರಿನ ದಾಳಿಯ ನಂತರವೇ ಅಧಿಕಾರಕ್ಕೆ ಬಂದಿರುವುದು ಸಿದ್ದವಾಗುತ್ತದೆ. ಅಂದರೆ ಕೃಷ್ಣರಾಯ ಉಮ್ಮತ್ತೂರಿನ ದಾಳಿಯ ನಂತರ ಶ್ರೀರಂಗಪಟ್ಟಣ ಸೀಮೆಯಲ್ಲಿ ಉಮ್ಮತ್ತೂರಿನ ನಾಯಕರಂತೆ ಯಾರೊಬ್ಬರೂ ಪ್ರಬಲರಾಗದಂತೆ ಹಲವು ಸಣ್ಣ ಆಡಳಿತಗಾರರಿಗೆ ಆಡಳಿತವನ್ನು ವಹಿಸಿ ಅವರನ್ನು ಗಮನಿಸಲು ಶ್ರೀರಂಗಪಟ್ಟಣದಲ್ಲಿ ತನ್ನ ಆಪ್ತರನ್ನು ನೇಮಿಸಿದನು. ಅಲ್ಲದೆ ಕ್ರಿ.ಶ. 1511ರ ನಂತರ ಒರಿಸ್ಸಾ ಮೂಲದ ಅಧಿಕಾರಿಗಳನ್ನು ಮೈಸೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಧಿಕಾರಿಗಳಾಗಿ ನೇಮಿಸಿ, ಅಧಿಕಾರಿಗಳು ಒಂದುಗೂಡದಂತೆ ತಡೆದನು. ಅಂದ ಮೇಲೆ, ಕ್ರಿ.ಶ. 1339ರ ಹೊತ್ತಿಗಾಗಲೇ ಮೈಸೂರು ಅರಸರು ಈ ಪ್ರದೇಶದಲ್ಲಿ ಅಧಿಕಾರದಲ್ಲಿದ್ದರೆನ್ನುವುದನ್ನು ಒಪ್ಪಿಕೊಳ್ಳಲು ಯಾವ ಆಕರಗಳು ದೊರೆಯದ ಹಿನ್ನೆಲೆಯಲ್ಲಿ ಮುಮ್ಮಡಿ ಬೆಟ್ಟದ ಚಾಮರಾಜನನ್ನೇ ಮೈಸೂರು ಒಡೆಯರ ಮೂಲ ಪುರುಷನೆಂದು ಗುರುತಿಸಲಾಗಿದೆ.

ಪರಾಮರ್ಶನಗಳು

1. Mark Wilks, 1930, *Historical Sketches of South of India in an attempt to trace the History of Mysore,* Vol. I, Mysore, pp. 38-54.
2. B.L. Rice, 1889, *Gazetteer of Mysore,* Bangalore, Vol. I.
3. Hayavadana Rao, C., 1943, *History of Mysore,* Vol. I, Mysore, pp. 20-30.
4. Sharma Rao M., 1936, *Modern Mysore,* Vol. I, Bangalore, 1-10.
5. G.R. Josyer, *History of Mysore and the Yadava Dynasty,* Mysore, pp. 27-32.
6. ಗೋವಿಂದ ವೈದ್ಯ, 1971, *ಕಂಠೀರವ ನರಸರಾಜ ವಿಜಯ,* ಆರ್. ಶಾಮಶಾಸ್ತ್ರಿ (ಸಂ.), ಮೈಸೂರು ವಿಶ್ವವಿದ್ಯಾಲಯ, ಮೈಸೂರು ಒಂದರಿಂದ ಮೂರನೆ ಸಂಧಿ.
7. ತಿರುಮಲಾರ್ಯ, 1999, *ಚಿಕ್ಕದೇವರಾಯ ವಂಶಾವಳಿ,* ಮ.ಭಾ. ಬೋಯಿ, (ಅನು.), ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ರಾಜನೃಪ ಚರಿತೆ, ಪು. 1–32.
8. *ಮಹಿಶೂರ ಶ್ರೀ ಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ,* 1887, ಮೈಸೂರು, ಪು. 1–49 (ಮುಂದೆ ವಂಶರತ್ನಾಕರ ಎಂದು ಉಲ್ಲೇಖವಿದೆ.)
9. ಬಿ. ರಾಮಕೃಷ್ಣರಾವ್, 1916, *ಶ್ರೀಮನ್ಮಹಾರಾಜರವರ ವಂಶರತ್ನಾವಳಿ,* ಮೈಸೂರು, ಭಾಗ–1, ಪು. 1–62 (ಮುಂದೆ ವಂಶಾವಳಿ ಎಂದು ಉಲ್ಲೇಖಿಸಿದೆ)
10. ದೇವಚಂದ್ರ, 1998, *ರಾಜಾವಳಿ ಕಥಾಸಾರ,* ಮೈಸೂರು, ಪ್ರಸ್ತಾವನೆ.
11. ನಂಜಮ್ಮಣ್ಣಿ, 1986, *ಅರಸು ಜನಾಂಗ : ಒಂದು ಅಧ್ಯಯನ,* ಮೈಸೂರು, ಪು. 66.
12. A. Sathyanarayana, 1996, *History of the Wodeyars of Mysore* (1610-1748), pp. 3-33.
13. *ಅದೇ.*
14. P.B. Desai, 1980, *History of Karnataka,* Karnatak University, Dharwada Chapter on the Hoysalas.
15. Mark Wilks, 1930, *ಪೂರ್ವೋಕ್ತ,* ಪು. 38–54.
16. Hayavadana Rao, C, 1943, *ಪೂರ್ವೋಕ್ತ,* ಪು. 20–30.
17. S.S. Srinivasa Ritti, 19, *The Yadavas of Devageri,* Dharawada the Chapter on the origin.
18. ಗೋವಿಂದ ವೈದ್ಯ, 1971, *ಪೂರ್ವೋಕ್ತ.*
19. *ಅದೇ.*

20. ದೇವಚಂದ್ರ, 1988, ರಾಜಾವಳಿ ಕಥಾಸಾರ, ಪೀಠಿಕೆ.
21. ನಂಜಮ್ಮಣ್ಣಿ, 1986, ಪೂರ್ವೋಕ್ತ.
22. Mark Wilks, 1930, ಪೂರ್ವೋಕ್ತ.
23. ನಂಜಮ್ಮಣ್ಣಿ, 1986, ಪೂರ್ವೋಕ್ತ.
24. ಎಪಿಗ್ರಾಫಿಯ ಕರ್ನಾಟಿಕ, 3, 4, 5, 6 ಮತ್ತು 7 ಸಂಪುಟಗಳಲ್ಲಿ ಪ್ರಕಟವಾಗಿರುವ ಕಂಠೀರವ ನರಸರಾಜ ಒಡೆಯರ ಶಾಸನಗಳು.
25. ಬಿ.ಎಸ್. ಕುಲಕರ್ಣಿ, 1985, ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನ ಕಾವ್ಯವು, ಧಾರವಾಡ, ಪು. 36–37.
26. ವಂಶಾವಳಿ, ಅಧ್ಯಾಯ–1.
27. ವಂಶರತ್ನಾಕರ, ಅಧ್ಯಾಯ–1.
28. ನಂಜಮ್ಮಣ್ಣಿ, 1986, ಪೂರ್ವೋಕ್ತ, ಪು. 5ff.
29. ಅದೇ.
30. ಅದೇ, ಮುನ್ನುಡಿ, ಜಿ.ಶಂ. ಪರಮಶಿವಯ್ಯ
31. ಅದೇ.
32. ಅದೇ.
33. LKA Iyer, 1988, *The Mysore Tribes and Castes,* Vol. II, pp. 47-73.
34. ವಂಶಾವಳಿ ಮತ್ತು ವಂಶರತ್ನಾಕರ, ಪೂರ್ವೋಕ್ತ.
35. ಹಯವದನರಾವ್, 1943, ಪೂರ್ವೋಕ್ತ, ಪು. 31–43
36. ವಂಶರತ್ನಾಕರ, ಪೂರ್ವೋಕ್ತ, ಅಧ್ಯಾಯ–2, ಪು. 4–17; ವಂಶಾವಳಿ, ಪೂರ್ವೋಕ್ತ, ಅಧ್ಯಾಯ–2, ಪು. 4–12; ಹಯವದನರಾವ್, 1943, ಪೂರ್ವೋಕ್ತ, ಪು. 31–43.
37. ಅದೇ.
38. ದೇವಚಂದ್ರ, 1980, ರಾಜಾವಳಿ ಕಥಾಸಾರ, ಮೈಸೂರು, ಪೀಠಿಕೆ.
39. ಎ.ಕ.
40. ಎ.ಕ.

22. ಅಚ್ಯುತ ಬಜಾರು – ಇತ್ತೀಚಿನ ಶೋಧಗಳ ಒಂದು ಸಮೀಕ್ಷೆ

ಶ್ರೀ ಟಿ.ಎಂ. ಕೇಶವ ಮತ್ತು ಕು. ಕೆ.ಸಿ. ಪ್ರೇಮ

ಪೀಠಿಕೆ

ಇತಿಹಾಸ ವಿದ್ವಾಂಸರುಗಳಿಗೆ, ಶೋಧಕರಿಗೆ, ಇತಿಹಾಸ ಹಾಗೂ ವಿಜಯನಗರ ವಾಸ್ತುಶಿಲ್ಪ ಪ್ರಕಾರಗಳ ವಿದ್ಯಾರ್ಥಿಗಳಿಗೆ, ಪುರಾತತ್ವ ಶಾಸ್ತ್ರಜ್ಞರಿಗೆ, ಸಂರಕ್ಷಣಾ ಪರಿಣಿತರಿಗೆ ತನ್ನ ಪ್ರತಿಯೊಂದು ಓಣಿಯ, ಬೀದಿಯ, ರಾಜವೀಥಿಯ ತಿರುವಿನಲ್ಲೂ, ಸೂರ್ಯನ ಬೆಳಕಿನಲ್ಲಿ ವಿವಿಧ ರೂಪ ತಳೆಯುವ ಹಂಪಿಯಲ್ಲಿನ ಚಿತ್ತಾಕರ್ಷಕ ಬಂಡೆಗಳಂತೆ ವಿಸ್ಮಯಗಳನ್ನು ತನ್ನ ಬರಿದಾಗದ ಒಡಲಿನಿಂದ ಮೊಗೆ-ಮೊಗೆದು ನೀಡುತ್ತಲೇ ಇದೆ ವಿಜಯನಗರ. ಪ್ರಾಯಶಃ ಒಬ್ಬ ವ್ಯಕ್ತಿಯು, ತನ್ನ ಜೀವಮಾನದ ಸಂಶೋಧನೆಯಲ್ಲಿ, ಏಕಲವ್ಯ ಛಲ ಇದ್ದರೆ ಮಾತ್ರ, ಅಪಾರ ಮಾಹಿತಿಯನ್ನು ತನ್ನೊಳಗೆ ಇರಿಸಿಕೊಂಡಿರುವ ವಿಜಯನಗದ ಇತಿಹಾಸದ ಮೇಲೆ ಅಲ್ಪ-ಸ್ವಲ್ಪ ಕ್ರೋಢೀಕರಿಸಿದ ಇತಿಹಾಸದ ರಚನೆಯನ್ನು ಮಾಡಬಹುದೇನೋ. ಹಾಗಿಲ್ಲದಿದ್ದರೆ ಮಾಹಿತಿ ತಂತ್ರಜ್ಞಾನದ ನಾಗಾಲೋಟದ ಕುದುರೆಯನ್ನೇರಿ ವರ್ಷಕ್ಕೊಂದು ಸಂತೆಯ ಹೊತ್ತಿಗೆ ಎಂದು ಲೇಖನಗಳನ್ನು ಪ್ರಸ್ತುತ ಪಡಿಸುತ್ತಿದ್ದರೆ ಮುಂದೊಮ್ಮೆ ಲೇಖನಗಳಿಗಿಂತ ಸ್ನಾತಕೋತ್ತರ ವಿದ್ಯಾರ್ಥಿ ಎಷ್ಟು ಲೇಖನಗಳನ್ನು ಉದ್ಧರಿಸುತ್ತಾನೆ ಎಂಬುದನ್ನು ನೋಡಿ ಅಂಕಗಳನ್ನು ನೀಡುವ ಅಸಹನೀಯ ವೇದನೆಗೆ ಪ್ರಾಧ್ಯಾಪಕರು ಗುರುಯಾಗುತ್ತಾರೆ. ಹಾಗಾಗಿ ಈ ಎಲ್ಲಾ ಆಕರಗಳನ್ನೂ ಕ್ರೋಢೀಕರಿಸುವ ಹಾಗೂ ವಿದ್ಯಾರ್ಥಿಗೆ ತಿಳಿಸಿಹೇಳುವ ಹೆಚ್ಚಿನ ಜವಾಬ್ದಾರಿ ಪ್ರೊಫೆಸರಿಗೆ ಇರುತ್ತದೆ. ಇದು ಹಿಡಿಸದಿದ್ದರೂ ಎಲ್ಲರೂ ಒಪ್ಪಲೇಬೇಕಾದ ಕಟು ಸತ್ಯ. ಇದನ್ನು ಹೇಳಲು ಕಾರಣ ಇತ್ತೀಚಿನ ತನಕ ಸರಿಸುಮಾರು ಎಲ್ಲ ಭಾಷೆಯಲ್ಲಿ ಮೂರು ಸಹಸ್ರಕ್ಕೂ ಮಿಗಿಲಾದ ಲೇಖನಗಳು, ಪುಸ್ತಕಗಳು ವಿಜಯನಗರದ ಇತಿಹಾಸ, ಕಲೆ, ವಾಸ್ತುಶಿಲ್ಪ, ಶಾಸನಗಳ ಪ್ರಕಾರಗಳ ಬಗ್ಗೆ ಹೊರಬಂದಿದ್ದರೂ ಅವುಗಳೆಲ್ಲದರ ವಸ್ತುವನ್ನೂ ಒಂದು ಕಡೆ ಸೇರಿಸಿ ಒಂದು ಸಮಗ್ರ ವಿಜಯನಗರ ಇತಿಹಾಸವನ್ನು ಬರೆಯಲು ಯಾರಾದರೂ ಉಪಕ್ರಮಿಸಬೇಕಾಗಿದೆ. "ವಿಜಯನಗರ ಅಧ್ಯಯನ" ಹೆಸರಿನಲ್ಲಿ ರಾಜ್ಯ ಪುರಾತತ್ವ ಇಲಾಖೆ ಅಮೋಘ ಸರ್ವ ವಿದ್ವಜ್ಜನ ಮಾನ್ಯವಾಗುವ ಲೇಖನಗಳನ್ನು ಪ್ರಕಟಿಸುವ ಉತ್ತಮ ಕಾರ್ಯ ಹಮ್ಮಿಕೊಂಡಿದೆ. ಆದರೆ ವಿಜಯನಗರೋತ್ತರ ಕಾಲದ ಕೆಲವು ಲೇಖನಗಳು ತೀರ ಬಾಲಿಶವಾಗಿದ್ದು ಸ್ಥಳ ಸಂಶೋಧನೆಗಳಲ್ಲಿ ನೋಡಿದ ಅನೇಕ ಖಂಡಿತ ಮೂರ್ತಿಗಳ ಯಾದಿಯಾಗಿದ್ದು ಮೂಲ ವಿಷಯಕ್ಕೆ ಅನೇಕ ಗಾವುದಗಳ ದೂರವಿದ್ದು ವಿಜಯನಗರದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಯಾವುದೇ ಮಹತ್ವ ಮಾಹಿತಿಯನ್ನು ನೀಡದ ಅಪಹಾಸ್ಯ ಲೇಖನಗಳಾಗಿ ಉಳಿಯುತ್ತವೆ. ಈ ನಿಟ್ಟಿನಲ್ಲಿ ಆಯೋಜಕರು ಲೇಖನಗಳ ಗುಣಮಟ್ಟ ಕಾಯ್ದಿರಿಸುವ ಕೆಲಸ ಮಾಡಬೇಕೆಂದು ಸವಿನಯ ಪ್ರಾರ್ಥನೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ತಾನೂ ಸಹಕರಿಸಿ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕಾಗಿದೆ.

ಇಲ್ಲಿಯ ತನಕ

ಮೇಲೆ ಹೇಳಿರುವ ಮನಸ್ಸಿನ ಅನಿಸಿಕೆಗಳಿಗೆ ಮೂರ್ತ ಸ್ವರೂಪ ನೀಡಿದಾಗ ಮಾತ್ರ ಅವುಗಳಿಗೆ ಬೆಲೆ ಬರುತ್ತದೆ. ಇವುಗಳನ್ನು ಒತ್ತಟ್ಟಿಗೆ ಇಟ್ಟು, ಪ್ರಸ್ತುತ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅನೇಕ ಕಡೆಗಳಲ್ಲಿ ನಡೆಸುತ್ತಿರುವ ಉತ್ಖನನ ಹಾಗೂ ಸಂರಕ್ಷಣಾ ಕೆಲಸದಲ್ಲಿ ಹೊರಹೊಮ್ಮಿರುವ ಬಹು ಮುಖ್ಯ ಆಕರಗಳತ್ತ ಒಮ್ಮೆ ಪಕ್ಷಿನೋಟ ಬೀರಿ ಬಂಗಾರದ ಭ್ರಮರ ನೀಡಿದ ಅಚ್ಯುತ ಬಜಾರು ಮಂಟಪಗಳತ್ತ ಒಂದು ನೋಟ ಹರಿಸೋಣ.

1. ಶ್ರೀ ಕೃಷ್ಣದೇವರಾಯನ ಅರಮನೆ : ಪ್ರಥಮವಾಗಿ 1983ರ ಆಸುಪಾಸಿನಲ್ಲಿ ರಾಜಪ್ರಸಾಧಗಳ ಸಂಕೀರ್ಣದಲ್ಲಿರುವ, ಸಾಂಪ್ರದಾಯಿಕವಾಗಿ "ಟಂಕಸಾಲೆ", "ರಂಗಮಹಲ್" ಎಂದು ಗುರುತಿಸಲ್ಪಡುವ ಆವರಣದಲ್ಲಿ ನಡೆಸಿದ ಉತ್ಖನನದಲ್ಲಿ, ನಿರ್ಣಾಯಕ, ಮಹತ್ವಪೂರ್ಣವಾದ, ರಾಜಕುವರ ಶ್ರೀ ತಿರುಮಲರಾಯನ ಹೆಸರು ನಮೂದಿಸಿದ ಬಳಪವೊಂದು ದೊರೆತಿದ್ದು ಇಲ್ಲಿನ ಕಟ್ಟಡಗಳ ಸಮುಚ್ಚಯದ ಪ್ರತಿಯೊಂದು ಕಟ್ಟಡವನ್ನೂ ಶ್ರೀ ಕೃಷ್ಣದೇವರಾಯನ ಅರಮನೆ ಸಂಕೀರ್ಣ "ಟಂಕಸಾಲೆ" ಅಲ್ಲ ಎಂದು ಗುರುತಿಸಲು ಸಾಧ್ಯವಾಗಿರುವುದು. ಈ ಒಂದು ಮಾಹಿತಿ, ಉತ್ಖನನದಲ್ಲಿ ದೊರೆತ ಪುರಾತನ ವಸ್ತುಗಳ ಸಮೀಕ್ಷೆ ನಡೆಸುತ್ತಿದ್ದಾಗ 2008ರಲ್ಲಿ ದೊರಕಿದ್ದು ಇಲ್ಲಿ ಉತ್ಖನನದಲ್ಲಿ ಹೊರಬಿದ್ದ ಸಂಕೀರ್ಣಗಳ ಕಟ್ಟಡಗಳನ್ನು ಮರು ಪರಿಶೀಲಿಸಲು ಪ್ರೇರಣೆ ಆಯಿತು.

2.ಇದರಂತೆ ಅದೇ ಕಾಲದಲ್ಲಿ ಅಂದರೆ 1981–83ರ ಆಸುಪಾಸಿನಲ್ಲಿ ರಾಜಪ್ರಾಂಗಣದ – ರಾಜಸಭೆ (ಕಿಂಗ್ಸ್ ಆಡಿಯೆನ್ಸ್ ಹಾಲ್) "ಭುವನ ವಿಜಯ"ದ ಎದುರು ಹಜಾರ ರಾಮಚಂದ್ರ ಸ್ವಾಮಿ ದೇಗುಲಕ್ಕೆ ಹೋಗುವ ಮಹಾದ್ವಾರಗಳ ನಡುವೆ ಕುದುರೆಯ ಲಾಯಗಳನ್ನು ಗುರುತಿಸಲು ಅನುವಾಗುವಂತೆ ಕುದುರೆಗಳ ಅಸ್ಥಿಪಂಜರಗಳು ದೊರಕಿವೆ.

3. ಶ್ರೀ ವೀರ ಹರಿಹರ ರಾಯನ ಅರಮನೆ: 1993–94ರ ನಡುವೆ, ಸಾಂಪ್ರದಾಯಿಕವಾಗಿ "ಟಂಕಸಾಲೆಯ ಉತ್ತರ ಸಂಕೀರ್ಣಗಳೆಂದೂ" ಸ್ಥೂಲವಾಗಿ ದಂಡನಾಯಕನ ಆವರಣ ಎಂದು ಕರೆಯಲ್ಪಡುತ್ತಿದ್ದ ಸ್ಥಳ ಉತ್ಖನನದಲ್ಲಿ ಒಂದು ವಿಶಾಲವಾದ ವಿಜಯನಗರ ಪ್ರಾರಂಭಿಕ ವಾಸ್ತುಶಿಲ್ಪ ಶೈಲಿಯ ಅರಮನೆಯ ಕಟ್ಟಡಗಳು ಹಜಾರ ರಾಮಚಂದ್ರ ಸ್ವಾಮಿಯ ದೇಗುಲದ ಪಶ್ಚಿಮ ದಿಕ್ಕಿನಲ್ಲಿ ದೊರೆತಿದ್ದು ಪ್ರಪ್ರಥಮ ಬಾರಿಗೆ ಇವುಗಳನ್ನು ಕರಾರುವಾಕ್ಕಾಗಿ ವಿಜಯನಗರವನ್ನಾಳಿದ ಸಂಗಮ ವಂಶದ ಮೂರನೇ ದೊರೆ ವೀರ ಹರಿಹರನ (1337–1399) ಅರಮನೆಯೆಂದು ಹೇಳಲು ಒಂದಕ್ಕೊಂದು ಪೂರಕವಾಗಿರುವ ಎರಡು ಶಿಲಾಶಾಸನಗಳು ದೊರೆತಿದ್ದು ರಾಜವಾಡೆಯಲ್ಲಿರುವ ಸಂಕೀರ್ಣಗಳ ಗುರುತಿಸುವಿಕೆಯಲ್ಲಿ ಹಾಗೂ ಅಬ್ದುರ್ ರಜಾಕನ ವರ್ಣನೆಯಲ್ಲಿ ಬರುವ ವಿವರಣೆಯನ್ನು ತುಲನಾತ್ಮಕವಾಗಿ ನೋಡಲು, ಪರಾಮರ್ಶಿಸಲು ಅನುವಾಯಿತು. ಕ್ಷಣ ಕಾಲ ಅವನ ಮಾತುಗಳನ್ನು ಗಮನಿಸಿದಾಗ "ನಾನು ದಂಡನಾಯಕನ ಮನೆಯ ಮುಂದೆ ನಿಂತಿದ್ದೇನೆ. ಎದುರಿನಲ್ಲಿ "ದರಬ್ ಖಾನ" (ಟಂಕಸಾಲೆ) ಇದೆ. ನನ್ನ ಬಲಗೈ ಭಾಗದಲ್ಲಿ ರಾಜನ ಅರಮನೆ ಇದೆ" ಎಂದು ಆತ ಹೇಳುವುದಲ್ಲದೆ ಮತ್ತೂ ಮುಂದುವರೆಯುತ್ತಾ "ಈಗ ನಾನು ಟಂಕಸಾಲೆಯ ಬಳಿ ನಿಂತಿದ್ದೇನೆ. ಎದುರಿನಲ್ಲಿ ದಂಡನಾಯಕನ ಮನೆಯಿದೆ. ಅದರ ಹಿಂದೆ ಸೈನ್ಯದ ತುಕಡಿಗಳಿವೆ" ಎಂದು ಹೇಳಿದ್ದಾನೆ. ಈ ಸ್ಥಳದ ನಕಾಶೆಯನ್ನು ನಾವು ಗಮನಿಸಿದಾಗ ಉತ್ತರ–ದಕ್ಷಿಣ ರೀತ್ಯಾ ನಿರ್ಮಾಣವಾಗಿರುವ ಒಂದರ ಪಕ್ಕ ಮತ್ತೊಂದು ಹೊಂದಿಕೊಂಡಂತೆ ಇರುವ ಎರಡು ಆವರಣಗಳನ್ನು ಹಜಾರ ರಾಮಚಂದ್ರ ಸ್ವಾಮಿ ದೇಗುಲಕ್ಕೆ ಪಶ್ಚಿಮದಲ್ಲಿ ಕಾಣಬಹುದು. ದೇವಾಲಯದ ಪಶ್ಚಿಮ ಪ್ರಾಕಾರ ಗೋಡೆಗೆ ಹೊಂದಿಕೊಂಡಂತೆ ನಿರ್ಮಿತವಾಗಿರುವ ಸಣ್ಣ ಗುಡಿಗಳನ್ನು ಹಾಗೂ ಮಂಟಪಗಳನ್ನು "ಶಿಲಾ ಮಂಟಪ"ಗಳೆಂದು ಇಲ್ಲಿ ದೊರೆತಿರುವ ಶಾಸನಗಳೇ ಹೇಳುತ್ತವೆ. ಹೀಗಾಗಿ ಆ ಸ್ಥಳವನ್ನು "ಶಿಲಾ ಮಂಟಪ" ಪ್ರದೇಶವೆಂದು ಗುರುತಿಸಲು ಅನುವಾಯಿತು. ಅಲ್ಲೇ ದೊರೆತಿರುವ ಒಂದು ಶಾಸನ "ವೀರ ಹರಿಹರನ ಮನೆಯ ಜಾಗದಿ ತಿಪ್ಪ ಉಡೆಯ ಮಾಡಿಸಿದ ಪ್ರತಿಷ್ಠೆ" ಎಂಬ ಮಾಹಿತಿಯನ್ನು ನೀಡುವುದರಿಂದ ಈ ಶಾಸನ ದೊರೆತ ಸುಮಾರು 20.00 ಮೀ. ಅಂತರದಲ್ಲಿ ಉತ್ತರಕ್ಕೆ ಇರುವ ಒಂದು ಅರಮನೆಯ ಸಂಕೀರ್ಣ ವೀರ ಹರಿಹರನೆಂದು ಸಂದೇಹಕ್ಕಾಸ್ಪದವಿಲ್ಲದಂತೆ ಹೇಳಬಹುದಾಗಿದೆ.

4. 1981–84ರ ಉತ್ಖನನದಲ್ಲಿ ದೊರೆತ ಕಟ್ಟಡಗಳನ್ನು ಶ್ರೀ ಕೃಷ್ಣದೇವರಾಯನ ಅರಮನೆ ಎಂದು ಗುರುತಿಸಲ್ಪಟ್ಟ ನಂತರ ದಂಡನಾಯಕನ ಆವರಣದಲ್ಲಿರುವ ಕಟ್ಟಡಗಳನ್ನು ದಂಡನಾಯಕನ ವಾಸಸ್ಥಳ ಹಾಗೂ ದೈನಂದಿನ ಚಟುವಟಿಕೆಗಳ

ಕಛೇರಿ ಎಂದು ಸುಲಭವಾಗಿ ಅಬ್ದುರ್ ರಜಾಕನ ವಿವರಣೆಯೊಂದಿಗೆ ಗುರುತಿಸಬಹುದು. ಈ ಆವರಣದೊಳಗೆ ಮೂರು ಹಂತಗಳಲ್ಲಿ ಎತ್ತರಿಸಿದ ಪಶ್ಚಿಮಾಭಿಮುಖದ ಹಾಗೂ ಉತ್ತರಾಭಿಮುಖವಾದ ಕಟ್ಟಡಗಳಿದ್ದು ಅದರಲ್ಲಿ ಉತ್ತರಾಭಿಮುಖವಾಗಿರುವ ಕಟ್ಟಡದ ಎದುರಿನಲ್ಲಿ ಟಂಕಸಾಲೆಯ ಅವಶೇಷಗಳೂ ಮತ್ತು ಇತ್ತೀಚಿನ 2008–09ರ ಸಂರಕ್ಷಣೆಯಲ್ಲಿ ಮೇಲ್ನೋಟಕ್ಕೇ ಕಛೇರಿ ಎನ್ನಬಹುದಾದ ಒಂದು ಕಟ್ಟಡದ ಅವಶೇಷ ದೊರೆತಿದೆ. ಈ ಕಟ್ಟಡಗಳ ಬಳಿಯಲ್ಲಿಯೇ ಅಷ್ಟ ಮೂಲೆಗಳ ಗಾಳಿ ಗೋಪುರ (ಬ್ಯಾಂಡ್ ಟವರ್) ಎನ್ನುವ ಕಟ್ಟಡವಿದೆ. ಈ ಸ್ಥಳದಲ್ಲಿ ಉತ್ಖನನ ನಡೆಸುವುದು ಇನ್ನೂ ಬಾಕಿಯಿದ್ದು ಟಂಕಸಾಲೆಗೆ ಸಂಬಂಧಿಸಿದಂತೆ ಅಮೂಲ್ಯ ಮಾಹಿತಿಗಳು ದೊರಕುವುದರಲ್ಲಿ ಸಂಶಯವಿಲ್ಲ.

5. ಅಂಗರಕ್ಷಕ ಪಡೆಯ ತಂಗುದಾಣ ಸ್ಥಳದಲ್ಲಿ ಉತ್ಖನನ : 1999–2000ರಲ್ಲಿ ದಂಡನಾಯಕನ ಆವರಣದ ದಕ್ಷಿಣ ಪ್ರಾಕಾರದ ಗೋಡೆಯ ದಕ್ಷಿಣಕ್ಕೆ ಮತ್ತು ಶ್ರೀ ಕೃಷ್ಣದೇವರಾಯನ ಅರಮನೆ ಸಂಕೀರ್ಣ – ರಂಗಮಹಲ್‌ನ ಪಶ್ಚಿಮಕ್ಕೆ ನಡೆಸಿದ ಪ್ರಾಥಮಿಕ, ಪ್ರಾಯೋಗಿಕ ಉತ್ಖನನದಲ್ಲಿ ಸೈನಿಕರು ಧರಿಸುತ್ತಿದ್ದ ಕಬ್ಬಿಣದ ಶಿರಸ್ತ್ರಾಣಗಳ, ರಕ್ಷಾಕವಚಗಳ ತುಣುಕುಗಳು ದೊರೆತಿದ್ದು ರಜಾಕನ ವಿವರಣೆಯಂತೆ ಆ ಸ್ಥಳ ಸೈನಿಕ – ಕಾವಲುಪಡೆಯ ಮುಖ್ಯ ನೆಲೆಯಾಗಿತ್ತು ಎಂಬುದಕ್ಕೆ ಪುಷ್ಠಿ ನೀಡುತ್ತದೆ. ಈ ನಿಟ್ಟಿನಲ್ಲಿ, ಶ್ರೀ ಕೃಷ್ಣದೇವರಾಯನು ತನ್ನ ಜೈತ್ರಯಾತ್ರೆಯ ನಂತರ 1513ರಲ್ಲಿ ರಾಜಮಾನ್ಯರ ವಸತಿ ಸಮುಚ್ಚಯಗಳ ಈ ಆವರಣಗಳಿಗೆ ಇನ್ನೂ ಹೆಚ್ಚಿನ ರಕ್ಷಣಾ ಗೋಡೆಗಳನ್ನು ನಿರ್ಮಾಣ ಮಾಡಿಸಿರುವುದು ತಿಳಿದ ವಿಷಯವೇ. ಇದಕ್ಕೆ ಪೂರಕವಾಗಿ ಶ್ರೀ ಕೃಷ್ಣದೇವರಾಯನ ಅರಮನೆ ಸಂಕೀರ್ಣ – ರಂಗಮಹಲ್‌ನ ದಕ್ಷಿಣಕ್ಕೆ ಇರುವ ಅಷ್ಟಮೂಲೆಯ ನೀರು ಸರಬರಾಜು, ಕಾವಲು ಮಂಟಪಗಳ ವ್ಯವಸ್ಥೆ, ಯಾವತ್ತೂ ಎಡೆಬಿಡದ ಕಾವಲು ಸೈನ್ಯ ಪಡೆಯ ಭೋಜನ ವ್ಯವಸ್ಥೆಯ ಭೋಜನ ಶಾಲೆ ತಮ್ಮನ್ನು ತಾವು ಕರಾರುವಾಕ್ಕಾಗಿ ಗುರುತಿಸಿಕೊಳ್ಳುತ್ತವೆ.

6. ರಾಜ ಪ್ರಾಂಗಣದ ಎರಡನೇ ಆವರಣದ ಕಾಲಮಾನ : ಈ ವಿಷಯಕ್ಕೆ ಪೂರಕವಾಗಿ ರಾಜ ಪ್ರಾಂಗಣದ ಪೂರ್ವದಿಕ್ಕಿನ ಎರಡನೇ ಆವರಣದ ಗೋಡೆಯ ಸಂರಕ್ಷಣೆ ಮಾಡುವಾಗ ನೆಲ ಮಟ್ಟದಲ್ಲಿ ಜೋಡಿಸಲಾದ ಕಲ್ಲುಗಳ ನಡುವೆ ಶ್ರೀ ಕೃಷ್ಣದೇವರಾಯನು ತಾನು ತನ್ನ ಉದಯಗಿರಿಯ ದಿಗ್ವಿಜಯದ ಸ್ಮರಣಾರ್ಥ ತಿರುಪತಿಯ ವೆಂಕಟೇಶನಿಗೆ ಕನಕಾಭಿಷೇಕ ಮಾಡಿಸಲು ಮುದ್ರಿಸಿದ ಬಂಗಾರದ ವರಹಗಳು ದೊರೆತಿದ್ದು ಇದು ರಾಜಪ್ರಾಂಗಣದ ಹೊರಗಿನ ಎರಡನೇ ಗೋಡೆಯನ್ನು ಕ್ರಿ.ಶ. 1513–14ರಲ್ಲಿ ಕಟ್ಟಿದುದು ಎಂಬುದನ್ನು ತಿಳಿಸುತ್ತದೆಯಲ್ಲದೆ ರಾಜಪ್ರಾಂಗಣದ ಹೆಚ್ಚಿನ ಕಟ್ಟಡಗಳ ಕೆಲಸ ಸಂಪೂರ್ಣವಾಗಿದ್ದಿರಬಹುದು ಎಂದು ಸೂಚಿಸುತ್ತದೆ.

7. ರಾಜಮಾನ್ಯರ ವಸತಿ: ಮೇಲೆ ಹೇಳಿದ ಉತ್ಖನನಗಳಲ್ಲದೆ 1991–92ರಲ್ಲಿ ಹಾಗೂ 1997–98ರಲ್ಲಿ ರಾಜ ಪ್ರಾಂಗಣಗಳ ವ್ಯಾಪ್ತಿಯಿಂದ ಹೊರಗೆ, ಪಾನ್–ಸುಪಾರಿ ಬಜಾರದ ಪೂರ್ವಕ್ಕೆ ಹಾಗೂ ಗುಹಾಲಯದ ಬಳಿ ಮತ್ತು ನೆಲಮಟ್ಟದ ಅಷ್ಟಮೂಲೆ ಸ್ನಾನಗೃಹದ ಬಳಿ ನಡೆಸಿದ ಉತ್ಖನನಗಳಲ್ಲಿ ಎರಡು ಸಂಕೀರ್ಣಗಳು ದೊರೆತಿವೆ. ಅವುಗಳಲ್ಲಿ ಗುಹಾಲಯದ ಬಳಿ ದೊರೆತಿರುವ ಸಂಕೀರ್ಣ ಒಂದು ರಾಜಾಡಳಿತದ ರಾಜಮಾನ್ಯ ವ್ಯಕ್ತಿಯ ವಸತಿಯಾಗಿದ್ದು ತನ್ನದೇ ಆದ ವಾಸಸ್ಥಳ, ಪಾಕಶಾಲೆ, ಭೋಜನಶಾಲೆ, ಸ್ನಾನ ಹಾಗೂ ಶೌಚಗೃಹಗಳನ್ನು ಹೊಂದಿದ್ದಲ್ಲದೆ ಒಂದು ಮೂರು ಸ್ತರದ ಸಭಾಂಗಣ, ಉತ್ತರಾಭಿಮುಖವಾದ ಆಡಳಿತ ಕಛೇರಿಯನ್ನು, ಪೂರ್ವದಿಕ್ಕಿನಲ್ಲಿ ಸುರಕ್ಷಾ ಮಂಟಪಗಳನ್ನು ಒಳಗೊಂಡ ಪ್ರವೇಶ ದ್ವಾರ, ಹಾಗೂ ಆಗ್ನೇಯ ದಿಕ್ಕಿನಲ್ಲಿ ಕುದುರೆ ಲಾಯವನ್ನೂ ಹೊಂದಿದೆ. ವಿಶೇಷವಾಗಿ ಈ ಕಟ್ಟಡ ಪಾನ್–ಸುಪಾರಿ ಬಜಾರಿನ ದೈನಂದಿನ ಗದ್ದಲ–ಗೋಜಲುಗಳಿಂದ ದೂರ. ಆದರೆ ಅಲ್ಲಿ ನಡೆಯುವ ವ್ಯವಹಾರಗಳ ಮೇಲೆ ಒಂದು ಕಾಪಿನ ಗಮನ ನೀಡಲು ಅನುವಾಗುವಂತೆ, ಬಜಾರನ ವ್ಯವಹಾರಗಳನ್ನು ಗಮನಿಸುವ ಒಬ್ಬ ಅಧಿಕಾರಿಯ ವಸತಿ ಹಾಗೂ ಕಛೇರಿಗಳಾಗಿರಬಹುದು. ಅದು ಕೇವಲ ವಸತಿಯಾಗಿದ್ದರೆ 3–4 ಶೌಚ ಗೃಹಗಳ ಅವಶ್ಯಕತೆ ಬರುವುದಿಲ್ಲ.

ಪ್ರಾಯಶಃ ವಿಜಯನಗರಕ್ಕೆ ಬರುವ ಗೌರವಾನ್ವಿತರನ್ನು ರಾಜದರ್ಶನ ದೊರಕುವ ತನಕ ಕೆಲದಿನಗಳು ಉಳಿಸಿಕೊಳ್ಳುತ್ತಿದ್ದ ವಸತಿ ನಿಲಯವಾಗಿರಬಹುದು. ಇಲ್ಲಿನ ಭೋಜನಶಾಲೆಯಲ್ಲಿನ ಗಾರೆ-ಗಚ್ಚಿನ ಶಿಲ್ಪ ವೈವಿಧ್ಯತೆಯನ್ನು ನೋಡಿದಾಗ ತಮ್ಮ ರಾಜಧಾನಿಯ ಕಲಾ ವೈಭವವನ್ನು ಪರಿಚಯ ಮಾಡಿಸಿಕೊಡಲಿಕ್ಕೆ ಈ ಸಿಂಗಾರವಿರಬಹುದೆನ್ನಿಸುತ್ತದೆ. ಈ ಕಟ್ಟಡಗಳ ಸನಿಹವೇ ಒಂದು ಪ್ರವೇಶದ್ವಾರವಿರುವುದು ಈ ಕಟ್ಟಡ ಒಂದು ವಸತಿ ಗೃಹವಾಗಿರಬಹುದೆಂಬುದಕ್ಕೆ ಇಂಬುಕೊಡುತ್ತದೆ.

8. ಪ್ರತಿಮಾಗೃಹ : ನೆಲಮಟ್ಟದ ಅಷ್ಟಮೂಲೆ ಸ್ನಾನಗೃಹದ ಬಳಿ ದೊರೆತಿರುವ ಎರಡು ಕಟ್ಟಡಗಳೂ ಪೂರ್ವಾಭಿಮುಖವಾಗಿದ್ದು ಅವುಗಳ ನಡುವೆ ಒಂದು ವಿಶಾಲವಾದ ಮತ್ತು ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳುಳ್ಳ ಹಜಾರವಿದೆ. ಈ ಹಜಾರದ ಪೂರ್ವಕ್ಕೆ ಉತ್ತರ-ದಕ್ಷಿಣವಾಗಿರುವ ಒಂದು ಬೀದಿಯಿದ್ದು ಅದರ ಪೂರ್ವದಿಕ್ಕಿನ ಪೌಳಿ ಗೋಡೆಯ ನಂತರ ಮೂರು ಸ್ತರಗಳ ಒಂದು ಕಟ್ಟಡವಿದ್ದು ಕಟ್ಟಕಡೆಯ ಸ್ತರದಲ್ಲಿ ವಾಸದ ಕೋಣೆಗಳಿವೆ. ಈ ಕಟ್ಟಡದ ಮುಂದೆ ವಿಶಾಲವಾದ ಆಯತಾಕಾರದ ತೆರೆದಂಗಳವಿದ್ದು ಅದರ ಪೂರ್ವಕ್ಕೆ ಮಗದೊಂದು ದೊಡ್ಡದಾದ ಹೆಚ್ಚು ಕಡಿಮೆ ಚೌಕಾಕಾರದ ಹಜಾರವಿದೆ. ದಕ್ಷಿಣದಲ್ಲಿ ಕಾವಲು ಮಂಟಪಗಳಿರುವ ಪ್ರವೇಶ ದ್ವಾರದ ನಂತರ ಒಂದು ಕುದುರೆ ಲಾಯವನ್ನು ಕಾಣಬಹುದು. ಮೊದಲು ತಿಳಿಸಿದ ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶ ದ್ವಾರಗಳುಳ್ಳ ಹಜಾರದ ದಕ್ಷಿಣದ್ವಾರಕ್ಕೆ ಹೊಂದಿಕೊಂಡಂತೆಯೇ ನೆಲಸ್ತರದ ಅಷ್ಟಮೂಲೆ ಸ್ನಾನಗೃಹವಿದೆ. ಹಜಾರದ ಪಶ್ಚಿಮಕ್ಕೆ ಇರುವ ಎತ್ತರಿಸಿದ ಮತ್ತೊಂದು ಕಟ್ಟಡದ ಕೊನೆಯ ಸ್ತರದಲ್ಲಿ ಕೇವಲ ಒಂದು ಕೋಣೆ ಮಾತ್ರವಿದೆ. ಇದೇ ಅಲ್ಲದೆ ಈ ಕಟ್ಟಡದ ಆವರಣಕ್ಕೆ ಹೊಂದಿಕೊಂಡಂತೆ ಈಶಾನ್ಯ ದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿ ಜಗತಿಯಿದ್ದು ಪಿತೃದೇವತೆಗಳ ಗಾರೆ ಮೂರ್ತಿ ಶಿಲ್ಪಗಳನ್ನು ಹೊಂದಿದ್ದ ದೇವಕೋಷ್ಠಕಗಳನ್ನು ಹೊಂದಿತ್ತು. ಈ ಕಟ್ಟಡಗಳ ವಾಸ್ತು ರಚನೆ, ನೆಲಸ್ತರದ ಅಷ್ಟಮೂಲೆ ಸ್ನಾನಗೃಹ, ಸನಿಹದ ವಿಷ್ಣು ದೇವಾಲಯ (ಈಗಿನ ಸರಸ್ವತಿ) ಎಲ್ಲವೂ ಈ ಕಟ್ಟಡಗಳ ಸಮುಚ್ಚಯ ವಿಜಯನಗರದ ಅರಸರು ಪಿತೃಕರ್ಮ ಮಾಡುತ್ತಿದ್ದ ಪ್ರತಿಮಾಗೃಹ ಎಂಬುದನ್ನು ಸೂಚಿಸುತ್ತದೆ.

ಅಚ್ಯುತ ಬಜಾರಿನ ಸಂರಕ್ಷಣೆಯ ಸಮಯದಲ್ಲಿ ಹೊರಬಿದ್ದ ಅಮೂಲ್ಯ ಪುರಾವಸ್ತುಗಳು

ಅಚ್ಯುತರಾಯ (ತಿರುವೇಂಗಳನಾಥ) ದೇವಾಲಯ, ಉತ್ತರದಲ್ಲಿರುವ ಬಜಾರು ಹಾಗೂ ಬಹುಪಾವಟಿಕೆಗಳ ಅಲಂಕೃತ ಕೊಳ.

ವಿಜಯನಗರದ ವಾಸ್ತುಶಿಲ್ಪದಲ್ಲಿ ಬಹು ವಿಶಾಲವಾದ, ಸ್ವಪ್ರಾಕಾರಗಳ, ಪರಿಪೂರ್ಣವಾಗಿ ದ್ರಾವಿಡ ವಾಸ್ತುಶಿಲ್ಪ ಶೈಲಿಯ ಸಾಂಧಾರ, ಅರ್ಪಿತ ವಿಮಾನ ದೇಗುಲಗಳನ್ನು ಸುತ್ತಾವೃತ ಕಣಶಿಲೆಗಳ (ಸ್ವಾರ್ಮ್ ಆಫ್ ಡೈಕ್ಸ್) ಕೊಳ್ಳಗಳಲ್ಲಿ ನಿರ್ಮಿಸಿ ಅವುಗಳ ಎದುರಿನಲ್ಲಿ ವಿಶಾಲವಾದ, ನೀಳವಾದ ಬಜಾರುಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಹೀಗೆ ನಿರ್ಮಿತಿಗೊಂಡ ಮಾರುಕಟ್ಟೆ ಅಥವಾ ಬಜಾರುಗಳಲ್ಲಿ ಪ್ರಮುಖವಾಗಿ ವಿರೂಪಾಕ್ಷ, ಅಚ್ಯುತ, ವಿಠಲ ಮತ್ತು ಕೃಷ್ಣ ಪ್ರಮುಖ ವ್ಯಾಪಾರೀ ಬಜಾರುಗಳಾಗಿದ್ದವು. ಇದೇ ಅಲ್ಲದೆ ಅರಮನೆಯ ಸಂಕೀರ್ಣಗಳ ಬಳಿ ಇರುವ ಪೆದ್ದಂಗಡೀ ವೀಥಿ, ಪಾನ್-ಸುಪಾರಿ ಬಜಾರುಗಳೂ ರಾಜವಾಸ ಪ್ರಜೆಗಳ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ ಮಾರುಕಟ್ಟೆಗಳಾಗಿದ್ದವು ಎಂಬುದಕ್ಕೆ ಸಮಕಾಲೀನ ಸಾಹಿತ್ಯ, ಪ್ರವಾಸೀ ಕಥನ ಮತ್ತು ಸಾಕಷ್ಟು ಶಾಸನಾಧಾರಗಳಿವೆ. ಡೊಮಿಂಗೋ ಪಾಯೆಸ್ ಹೇಳುವಂತೆ "ನಗರದ ನಾನಾ ಭಾಗಗಳಲ್ಲಿ ದಿನಕ್ಕೊಂದು ಕಡೆ ವಾರವೆಲ್ಲ ಸಂತೆ ನಡೆಯುತ್ತದೆ". ಬಹು ಸೂಕ್ಷ್ಮವಾಗಿ ಗಮನಿಸಿದಾಗ, ವಿಜಯನಗರದಲ್ಲಿ ಕೆಲವೊಂದು ದೇಗುಲಗಳ ನಿರ್ಮಾಣ ಕಣಿವೆಯ ತೆರೆದಭಾಗದಲ್ಲಿದ್ದು, ಅವುಗಳ ಮುಂದೆ ನೀಳವಾದ ಹಾಗೂ ಕಿರಿದಾದ ಭಾಗದಲ್ಲಿ ಸಂಕೀರ್ಣವಾದ ತೇರು ಬೀದಿ ಮತ್ತು ಬಜಾರನ್ನು ನಿರ್ಮಿಸಲಾಗಿದೆ.

ಬಜಾರಿನ ವಾಸ್ತುಶಿಲ್ಪದ ಬಗ್ಗೆ ಗಮನ ಹರಿಸಿದರೆ, ಸಾಮಾನ್ಯವಾಗಿ ದೇವಾಲಯಕ್ಕೆ ಎದುರು ಪ್ರವೇಶದ್ವಾರದಿಂದ ಅನತಿ ದೂರದಲ್ಲಿ ಲಂಬವಾಗಿ ಆಯತಾಕಾರದ ಏಕರೂಪದ ಕಣಶಿಲೆಯ ಕಲ್ಲಿನಿಂದ ಕಟ್ಟಿದ ಸುಮಾರು ಒಂದರಿಂದ ಒಂದೂವರೆ ಮೀಟರ್ ಎತ್ತರದ ಅಧಿಷ್ಠಾನವಿದ್ದು ಅದರ ಮೇಲೆ ತೆರೆದ ಅಂಕಣದಂತೆ ನಾಲ್ಕು ಸಾಧಾರಣ ಶೈಲಿಯ ಕಂಭಗಳನ್ನು ಆಧರಿಸಿದ ಛಾವಣಿಯುಳ್ಳ ಒಂದರ ಹಿಂದೊಂದು ಮಂಟಪಗಳನ್ನು ಎರಡು ಸಾಲಿನಲ್ಲಿ ರಚಿಸಿರುವುದು ಗಮನಕ್ಕೆ ಬರುತ್ತದೆ. ಛಾವಣಿಗಳ ಮೇಲೆ ಸಾಕಷ್ಟು ದಪ್ಪನಾದ ಗಾರೆಯ ಮಾಡನ್ನು ಹಾಕಿ ನಯಗೊಳಿಸಿರುವುದಲ್ಲದೆ ಈ ಮಾಡನ್ನು ಬಜಾರಿನ ನಡುವೆ ಸಜ್ಜುಗೊಳಿಸಿರುವ ಕಲ್ಲಿನ ನೆಲ ಹಾಸುಗೆಯ ರಸ್ತೆಯಲ್ಲಿ ಅಂದರೆ ತೇರು ಬೀದಿಯಲ್ಲಿ ನಡೆಯುವ ಉತ್ಸವಾದಿಗಳನ್ನು ನೋಡುವ ಅಟ್ಟಣಿಗೆಯನ್ನಾಗಿಯೂ ಉಪಯೋಗಿಸುತ್ತಿದ್ದರು. ಇದಕ್ಕೆ ಸಾಕ್ಷಿಯಾಗಿ ದೇವಾಲಯದ ಕಡೆಯಿಂದ, ವಿಠಲ, ಅಚ್ಯುತ ದೇವಾಲಯಗಳ ಬಳಿಯ ಬಜಾರಿನಲ್ಲಿ ವಿಶೇಷವಾಗಿ ನಿರ್ಮಿತವಾಗಿರುವ ಪಾವಟಿಕೆಗಳನ್ನೂ ನೋಡಬಹುದು. ಇದೇ ಅಲ್ಲದೆ ಸುಧೀರ್ಘವಾದ ಬಜಾರು ಮಂಟಪಗಳ ನಡುವೆ ಮಂಟಪಗಳ ಹಿಂಭಾಗಕ್ಕೆ ತೆರಳಲು 0.60–1.00 ಮೀಟರ್ ಅಗಲದ ದಾರಿಯನ್ನೂ ರೂಪಿಸಿದ್ದರು. ಕೃಷ್ಣ ದೇಗುಲದ ಬಜಾರಿನಲ್ಲಿ ಇರುವಂತೆ ಮಾರುಕಟ್ಟೆಗೆ ತಂದ ಬಂಡಿಯ ಅಥವಾ ಚಕ್ಕಡಿಯ ಎತ್ತುಗಳನ್ನು ಕಟ್ಟಿಹಾಕಲು ನೆಲಕ್ಕೆ ಹೂಳಿಸಿದ ಗೂಟ ಕಲ್ಲುಗಳನ್ನೂ, ವಿಠಲ ದೇಗುಲದ ಬಜಾರಿನಲ್ಲಿ ತಂದಿರುವ ಹೇರುಗಳನ್ನು ಇಳಿಸಲು ಅನುವಾಗುವಂತೆ ಕೆಲವೊಂದು ಅಂಕಣಗಳ ಮುಂದಿನ ಕಟ್ಟೆಗಳನ್ನೂ ಈಗಲೂ ನೋಡಬಹುದು. ಬಜಾರಿನ ಒಂದು ಪಾರ್ಶ್ವದಲ್ಲಿ ಆಯತಾಕಾರದ ಪಾವಟಿಕೆಗಳ ಕೊಳಗಳಿದ್ದು ಅವುಗಳ ಮಧ್ಯ ಭಾಗದಲ್ಲಿ ಅಲಂಕೃತ ದ್ರಾವಿಡ ಗೋಪುರವುಳ್ಳ ಮಂಟಪಗಳಿದ್ದು ಉತ್ಸವಾದಿಗಳಲ್ಲೊಂದಾದ ತೆಪ್ಪೋತ್ಸವಕ್ಕೆ ಅನುವು ಮಾಡಿಕೊಡುತ್ತಿದ್ದವು. ಇದೇ ಅಲ್ಲದೆ ಕೊಳದ ನಾಲ್ಕೂ ದಿಕ್ಕಿನಲ್ಲಿ ತೆರೆದ ಮಂಟಪಗಳಿದ್ದು ಅವುಗಳಲ್ಲಿ ಒಂದನ್ನು ಉತ್ಸವ ಮೂರ್ತಿಯನ್ನು ಬಿಜಯಂಗೈಯ್ಯುವ ಉತ್ಸವ ಮಂಟಪವನ್ನಾಗಿ ಉಪಯೋಗಿಸುತ್ತಿದ್ದರು. ಕೃಷ್ಣ ವಿಠಲ ಹಾಗೂ ಪಟ್ಟಾಭಿರಾಮ ದೇವಾಲಯದ ಕೊಳಗಳು ಮೇಲಿನ ಸಾಲಿಗೆ ಸೇರುತ್ತವೆ. ವಿರೂಪಾಕ್ಷ ದೇವಾಲಯದ ಕೊಳವನ್ನು ಮನ್ಮಥ ಹೊಂಡವೆಂದು ದೇವಾಲಯದ ಈಶಾನ್ಯ ದಿಕ್ಕಿನಲ್ಲಿ, ಅಚುತರಾಯ ದೇವಾಲಯದ ಕೊಳವನ್ನು ಉತ್ತರ ದಿಕ್ಕಿನಲ್ಲಿ ಅಳವಡಿಸಲಾಗಿದೆ. ವಿಠಲ ದೇವಾಲಯ ಮತ್ತು ಕೃಷ್ಣ ದೇವಾಲಯದ ಕೊಳಗಳ ಪ್ರವೇಶ ದ್ವಾರವನ್ನು ಭವ್ಯವಾಗಿ ನಿರ್ಮಿಸಲಾಗಿದೆ. ಈ ಕೊಳಗಳ ನಿರ್ಮಿತಿಯಲ್ಲಿ ಅಂದಿನ ವಾಸ್ತುಶಿಲ್ಪಿ ಅತ್ಯಂತ ಸೂಕ್ಷ್ಮವಾಗಿ ನೀರಿನ ಹರಿವು, ಶೇಖರಣಾ ಜಾಗಗಳನ್ನು ನೋಡಿ ಅದರಂತೆ ನಿರ್ಮಿಸಿರುವುದು ಕಂಡು ಬರುತ್ತದೆ. ಈ ವಿಚಾರಕ್ಕೆ ವಿಠಲ ಬಜಾರಿನ ಬಳಿ ನಿರ್ಮಾಣಗೊಂಡಿರುವ ಇನ್ನಿತರ ನೆಲಮಟ್ಟದ, ಒಂದು ಅಥವಾ ಎರಡು ಕಡೆಯಿಂದ ಪಾವಟಿಕೆಗಳಿರುವ ತೆರೆದ ಬಾವಿಗಳೇ ಸಾಕ್ಷಿ. ಇದೇ ಅಲ್ಲದೆ ಬಜಾರಿನ ತೇರು ಬೀದಿಯ ಒಂದು ತುದಿಯಲ್ಲಿ ಉತ್ಸವ ಮೂರ್ತಿಯನ್ನು ಇಳಿಸಿ ಪೂಜಾಕ್ರಮಗಳನ್ನು ಮುಗಿಸಿ ಮತ್ತೆ ಹಿಂದಿರುಗಲು ಅನುವಾಗುವಂತೆ ಮಂಟಪಗಳ ನಿರ್ಮಾಣ ಮಾಡಿರುವುದನ್ನು ವಿಠಲ ಬಜಾರಿನ ಗೆಜ್ಜಾಲೆ ಮಂಟಪದ ರೂಪದಲ್ಲಿ, ಅಚ್ಯುತ ಬಜಾರಿನ ಎದುರಿನ ವರಾಹ (ಶಿವ) ದೇವಾಲಯದ ದಕ್ಷಿಣ ಪೌಳಿ ಗೋಡೆಗೆ ಹೊಂದಿಕೊಂಡಂತೆ ಕಟ್ಟಿರುವ ಕಟ್ಟೆಯಲ್ಲಿ ನಾವು ಕಾಣಬಹುದು. ಇತ್ತೀಚೆಗೆ ಭಾರತೀಯ ಪುರತತ್ವ ಸರ್ವೇಕ್ಷಣ ಸಂರಕ್ಷಣಾ ತತ್ಸಂಭಂದಿ ನಡೆಸಿದ ಕೆಲಸಗಳಲ್ಲಿ ಕೃಷ್ಣ ಬಜಾರಿನ ಪುಷ್ಕರಣಿಯ ದಕ್ಷಿಣಕ್ಕೆ ಉಗ್ರಾಣ ಕೋಠೆಗಳ ಅವಶೇಶಗಳು ದೊರೆತಿದ್ದು ಈ ಬಜಾರಿನ ವಾಸ್ತುಶಿಲ್ಪದ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತದೆ. ಇದಕ್ಕೆ ಪೂರಕವಾಗಿ ಹೇಮಕೂಟದ ಸಾಸಿವೆ ಕಾಳು ಗಣೇಶ ಮಂಟಪದ ದಕ್ಷಿಣದಲ್ಲಿ ಎರಡು ಧಾನ್ಯದ ವರ್ತುಲಾಕಾರದ ಹಗೇವುಗಳು ದೊರೆತಿದ್ದು ಅವುಗಳನ್ನು ಚಂದ್ರಗಿರಿಯಿಂದ ಬಂದಿದ್ದ ಹಿರಿಯ ಸೆಟ್ಟಿಯ ಕುಮಾರ ಚಿನ್ನಸೆಟ್ಟಿ ಕ್ರಿ.ಶ. 1506ರಲ್ಲಿ ಸಾಳುವ ನರಸಿಂಹನ ಕಾಲದಲ್ಲಿ ಕಟ್ಟಿಸಿರುವುದಾಗಿ ತಿಳಿದುಬರುತ್ತದೆಯಲ್ಲದೆ ಅಷ್ಟು ದೂರದಿಂದಲೂ ವ್ಯಾಪಾರಿಗಳು ಬರುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಸಮಕಾಲೀನ ಪ್ರವಾಸ ಕಥಾನಕಗಳಿಂದ, ಶಾಸನಗಳಿಂದ ಈ ಬಜಾರುಗಳಲ್ಲಿ ನಡೆಯುತ್ತಿದ್ದ ವ್ಯಾಪಾರ–ವಹಿವಾಟಿನ ಬಗ್ಗೆ ನಮಗೆ ಹೇರಳ ಮಾಹಿತಿ ದೊರಕುತ್ತದೆ.

ಈ ಬಜಾರುಗಳಲ್ಲಿ, ವಿಶೇಷವಾಗಿ ವಿಠಲ ಮತ್ತು ಅಚ್ಯುತ ಬಜಾರಿನಲ್ಲಿ ಉತ್ಖನನ ಅಥವಾ ಸಂರಕ್ಷಣಾ ಕಾಲದಲ್ಲಿ ಇತ್ತೀಚೆಗೆ ಸಾಕಷ್ಟು ಚಿನ್ನದ, ತಾಮ್ರದ ನಾಣ್ಯಗಳು, ಆಭರಣಗಳು ದೊರೆತಿದ್ದು ಬಜಾರಿನ ದೈನಂದಿನ ವ್ಯವಹಾರದ ಬಗ್ಗೆ ಅಮೂಲ್ಯ ಮಾಹಿತಿಯನ್ನು ನೀಡುತ್ತವೆ.

ಪ್ರಥಮವಾಗಿ ವಿಠಲ ಬಜಾರಿನ ಪಶ್ಚಿಮ-ಪೂರ್ವವಾಗಿ ನಿರ್ಮಿತವಾಗಿರುವ, ಉತ್ತರ ಭಾಗದ ಬಜಾರು ಮಂಟಪಗಳ ಮೇಲ್ಭಾವಣಿಗೆಗೆ ಹೋಗುವ ಅಟ್ಟಣಿಗೆ ಮೆಟ್ಟಿಲುಗಳ ಬೀದಿಯಲ್ಲಿ ಸುಮಾರು 80ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಚಿನ್ನದ ಬಳೆ, ಕಾಸುಗಳು ದೊರೆತಿದ್ದು ಪ್ರಾಯಶಃ ಅಂದಿನ ಕಾಲದಲ್ಲಿ ಅವುಗಳ ಮಾಲೀಕನು ಹಾದಿಯಲ್ಲಿ ಹೋಗುವಾಗ ಕಳೆದುಕೊಂಡಿರುವ ಸಾಧ್ಯತೆಗಳಿವೆ. 2005ರಿಂದ ಇತ್ತೀಚೆಗೆ ಅಚ್ಯುತ ಬಜಾರಿನಲ್ಲಿ ಸಂರಕ್ಷಣಾ ಕಾರ್ಯ ನಡೆದಿದ್ದು ತತ್ಫಲವಾಗಿ ಅನೇಕ ವಿಷಯಗಳು ಹೊಸದಾಗಿ ಬೆಳಕಿಗೆ ಬಂದಿವೆ.

ಅಚ್ಯುತ ಬಜಾರು

ತಿರುವೇಂಗಳನಾಥ ಎಂದು ಶಾಸನಗಳಲ್ಲಿ ಉಕ್ತವಾಗಿರುವ ಈ ದೇವಾಲಯ ಅಚ್ಯುತರಾಯ ದೇವಾಲಯ ಎಂದು ಅದರ ನಿರ್ಮಾತೃವಿನ ಹೆಸರಿನಿಂದ ಹೆಚ್ಚು ಪ್ರಸಿದ್ಧವಾಗಿವೆ. 148.53 ಮೀ. ಉದ್ದ ಮತ್ತು 86.56 ಮೀ. ಅಗಲ (ಹೊರ ಪ್ರಾಕಾರದ ಅಳತೆ) ಇರುವ ಈ ದೇವಾಲಯ ಎರಡು ಪ್ರಾಕಾರಗಳನ್ನು ಹೊಂದಿದ್ದು ಮಾತಂಗ ಪರ್ವತದ ಸೆರಗಿನಲ್ಲಿ ತುಸು ಪೂರ್ವ-ಈಶಾನ್ಯಕ್ಕೆ, ದಕ್ಷಿಣೋತ್ತರವಾಗಿ ನಿರ್ಮಿತವಾಗಿದೆ. ಉತ್ತರದಲ್ಲಿ 43.80 ಮೀ. ಅಗಲವಾದ ಸುಮಾರು 374.64 (375.00) ಮೀಟರ್ ಉದ್ದದ ಬಜಾರು ಇದ್ದು ಅದರಲ್ಲಿ ಸುಮಾರು 22 ಮೀ. ಅಗಲದ ಕಲ್ಲು ಹಾಸಿನ ತೇರು ಬೀದಿಯಿದೆ. ತೇರು ಬೀದಿಯ ಎರಡೂ ಬದಿಗಳಲ್ಲಿ ದೇವಾಲಯದ ಪ್ರಾಕಾರ ಗೋಡೆಗಳ ಹೊರ ಅಳತೆಯ ದಕ್ಷಿಣೋತ್ತರವಾಗಿ ನಾಲ್ಕು ಅಂಕಣಗಳ ಎರಡು ಸಾಲಿನ ಮಂಟಪಗಳ ಬಜಾರನ್ನು ನಿರ್ಮಿಸಲಾಗಿದೆ. ಈ ಬಜಾರು ಮಳಿಗೆಗಳನ್ನು ಪೂರ್ವದ ಮಳಿಗೆಗಳು ಹಾಗೂ ಪಶ್ಚಿಮದ ಮಳಿಗೆಗಳು ಎಂದು ಹೇಳಲಡ್ಡಿಯಿಲ್ಲ. ಪೂರ್ವದ ಮಳಿಗೆಗಳ ಹಿಂಭಾಗದಲ್ಲಿ ಋಷ್ಯಮೂಕ ಮತ್ತು ಗಂಧಮಾಧನ ಪರ್ವತಗಳಿದ್ದರೆ ಪಶ್ಚಿಮದ ಮಳಿಗೆಗಳ ಹಿಂಭಾಗದಲ್ಲಿ ಉತ್ತರಕ್ಕೆ ಮುಂದುವರೆದು, ಯಂತ್ರೋದ್ಧಾರಕ ಆಂಜನೇಯನ ದೇಗುಲಕ್ಕೆ ಸೇರುವ ಮಾತಂಗ ಪರ್ವತದ ಭಾಗವಿದೆ. ಬಜಾರಿನ ಉತ್ತರದಲ್ಲಿ ವರಾಹ (ಶಿವ) ದೇವಾಲಯ ಪೂರ್ವ-ಪಶ್ಚಿಮವಾಗಿ ನಿರ್ಮಿತವಾಗಿದ್ದು ಅದರಾಚೆ ತುಂಗ-ಭದ್ರಾ ನದಿಯ ಮರಳಿನಿಂದಾವೃತ ಬಲದಂಡೆಯಿದೆ. ಬಜಾರಿನ ಉತ್ತರದಲ್ಲಿ ಎರಡೂ ತಿರುವುಗಳಲ್ಲಿ ಸಂಕ್ಷಿಪ್ತ ತಲವಿನ್ಯಾಸಗಳುಳ್ಳ, ಕೋದಂಡರಾಮ, ಸೂರ್ಯ, ಹಸ್ತಗಿರಿ ರಂಗನಾಥ, ಕೃಷ್ಣ ಮತ್ತಿತರ ವೈಷ್ಣವ ದೇಗುಲಗಳಿದ್ದು ಅವೆಲ್ಲವೂ ಕಂಪ-ಭೂಪ ಮಾರ್ಗದೆಡೆಗೆ ತೆರೆದುಕೊಳ್ಳುತ್ತವೆ.

ಅಡಿಟಿಪ್ಪಣಿಗಳು

1. ಟಿ.ಎಂ. ಕೇಶವ ಮತ್ತು ಡಿ.ಸಿ.ಎಸ್. ಶೇಷಾದ್ರಿ, "ಸಿಗ್ನಿಫಿಕೆನ್ಸ್ ಆಫ್ ಅನ್ ಇನ್ಸಿಗ್ನಿಫಿಕೆನ್ಟ್ ಅಂಟಿಕ್ವಿಟಿ", ವಿಜಯನಗರ ಅಧ್ಯಯನ ಸಂಪುಟ-14, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010, ಪು. 436-39.
2. ಟಿ.ಎಂ. ಕೇಶವ, ಎಮ್.ವಿ. ವಿಶ್ವೇಶ್ವರ, ಸಿ.ಎಸ್. ಶೇಷಾದ್ರಿ ಮತ್ತು ಜಿ.ಎಸ್. ನರಸಿಂಹನ್, *ರಾಯಲ್ ರೆಸಿಡೆನ್ಸ್ ಆಫ್ ಶ್ರೀಕೃಷ್ಣದೇವರಾಯ.*
3. ಡಾ. ನರಸಿಂಹಯ್ಯ, *ಡಿಕೇಡ್ ಆಫ್ ಆರ್ಕಿಯಾಲಾಜಿಕಲ್ ರಿಸರ್ಚ್.*
4. *ಇಂಡಿಯನ್ ಆರ್ಕಿಯಾಲಜಿ – ಎ ರಿವ್ಯೂ.*

5. ಟಿ.ಎಂ. ಕೇಶವ, "ರೀಸೆಂಟ್ ಎಕ್ಸ್‌ಕವೇಷನ್ಸ್ ಇನ್ ದಿ ಮಿಂಟ್ ಏರಿಯಾ", ವಿಜಯನಗರ ಅಧ್ಯಯನ ಸಂಪುಟ-8, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2003, ಪು. 42–48.
6. T.M. Keshava, *Identification of Pratimagruha at Vijayanagara,* "Saundaryashri", Ed. Chinna Reddy, 2009, p. 830-833 ff.
7. ಎಸ್.ವೈ. ಸೋಮಶೇಖರ್, ಹಂಪೆಯ ಬಜಾರುಗಳು, ಪು. 347–377.
8. ಪ್ರಸ್ತುತ ಕಮಲಾಪುರ, ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಇವೆ.

23. ಹಂಪಿ ಪರಿಸರದ ಕೂರ್ಮಾವತಾರ ಶಿಲ್ಪಗಳು

ಡಾ. ಸಿ. ಎಸ್. ವಾಸುದೇವನ್

ಎಲ್ಲರಿಂದ ಒಪ್ಪಿತ ಮತ್ತು ಪ್ರಸಿದ್ಧವಾದ ವಿಷ್ಣುವಿನ ಅವತಾರಗಳು ಹತ್ತು. ಅವುಗಳನ್ನು ದಶಾವತಾರ ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರುಗಳಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಇಂತಹ ಅವತಾರಗಳನ್ನು ವಿಷ್ಣುವು ತಾಳಿದನು. ವಿಷ್ಣುವಿನ ದಶಾವತಾರಗಳು ಇಂತಿವೆ: ಮತ್ಸ್ಯ (ಮೀನು), ಕೂರ್ಮ (ಆಮೆ), ವರಾಹ (ಹಂದಿ), ನರಸಿಂಹ (ಮನುಷ್ಯ-ಸಿಂಹ), ವಾಮನ (ಕುಬ್ಜ), ತ್ರಿವಿಕ್ರಮನನ್ನು ಒಳಗೊಂಡಂತೆ ಪರಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವು ಹಿಂದೂ ಸಂಪ್ರದಾಯವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಬಲರಾಮನನ್ನು ಉಲ್ಲೇಖಿಸುತ್ತಾರೆ. ಇವನು ಕೃಷ್ಣನ ಅಣ್ಣ.[1]

ಭೂಮಿಯನ್ನು ರಕ್ಷಿಸಲು ವಿಷ್ಣುವು ಕೂರ್ಮ ಅಥವಾ ಆಮೆಯ ಅವತಾರವನ್ನು ತಾಳಿದನು. ಇದು ವಿಷ್ಣುವಿನ ಎರಡನೆಯ ಅವತಾರವಾಗಿದೆ. ಇನ್ನೊಂದು ಮೂಲದಂತೆ ಭೂಮಿಯಲ್ಲಿರುವ ಜೀವಿಗಳನ್ನು ರಕ್ಷಿಸಲು ಪ್ರಜಾಪತಿಯು ಈ ಅವತಾರವನ್ನು ತಾಳಿದನೆಂದು ಸಹ ಹೇಳಲಾಗುತ್ತದೆ.[2] ಹಾಲ್ಗಡಲನ್ನು ಮಂದರ ಪರ್ವತದಿಂದ ಮಂಥಿಸುವ ಸಂದರ್ಭದಲ್ಲಿ ವಿಷ್ಣುವು ಆಮೆಯ ಅವತಾರ ತಾಳಿ ಮಂದರ ಪರ್ವತವನ್ನು ತನ್ನ ಮೇಲೆ ಇರಿಸಿಕೊಂಡು ಆಸರೆ ನೀಡಿದನು. ಹಾಲಿನ ಕಡಲನ್ನು ಮಂಥಿಸುವಾಗ ಅನೇಕ ವಸ್ತುಗಳು ಕಡಲಿನಿಂದ ಹೊರಬಂದಿತು ಎಂದು ಪುರಾಣಗಳು ಉಲ್ಲೇಖಿಸುತ್ತವೆ. ರಾಮಾಯಣ ಮತ್ತು ಮಹಾಭಾರತಗಳು ಸಹ ಈ ಕಥೆಯನ್ನು ಉಲ್ಲೇಖಿಸುತ್ತವೆ. ವಿಷ್ಣುವಿನ ಮೊದಲ ಎರಡು ಅವತಾರಗಳಾದ ಮತ್ಸ್ಯ ಮತ್ತು ಕೂರ್ಮವನ್ನು ಕುರಿತಾದ ಉಲ್ಲೇಖಗಳು ಸಾಹಿತ್ಯ ಕೃತಿಗಳಲ್ಲಿ ಕಂಡುಬರುವುದಿಲ್ಲ ಹಾಗು ಒಂದೊಮ್ಮೆ ಇದ್ದರೂ ಪೂರ್ಣ ವಿವರಗಳು ದೊರಕದೆ ಅತ್ಯಲ್ಪ ವಿವರಗಳು ಮಾತ್ರವೇ ಸಿಗುತ್ತವೆ.[3] ವಿಷ್ಣುವಿನ ದಶಾವತಾರಗಳಲ್ಲಿ ಈ ಎರಡೂ ಅವತಾರಗಳು ಉಳಿದ ಎಂಟು ಅವತಾರಗಳಿಗೆ ಹೋಲಿಸಿದರೆ ಗೌಣವಾದ ಸ್ಥಾನವನ್ನು ಪಡೆದಿದೆ ಎಂದು ಹೇಳಬಹುದು. ಇವುಗಳನ್ನು ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಅಧಿಕವಾಗಿ ತೋರಿಲ್ಲ. ಕೂರ್ಮ ಅವತಾರದ ಬಿಡಿ ಶಿಲ್ಪಗಳು ಬೆರಳೆಣಿಕೆಯಷ್ಟು ದೊರಕಿದ್ದು ಅವುಗಳು ಇಂದಿಗೂ ಪೂಜೆಗೆ ಒಳಪಟ್ಟಿವೆ.

ಈ ಅವತಾರದಲ್ಲಿ ವಿಷ್ಣುವನ್ನು ಅರ್ಧ ಮನುಷ್ಯ ಮತ್ತು ಅರ್ಧ ಮೃಗ ರೂಪದಲ್ಲಿ ತೋರಲಾಗುತ್ತದೆ. ದೇಹದ ಕೆಳಗಿನ ಅರ್ಧ ಭಾಗವು ಆಮೆಯದಾಗಿದ್ದು (ಕೂರ್ಮ) ನಿಂತ ಭಂಗಿಯಲ್ಲಿ ಆಮೆಯ ಹಿಂಬದಿಯ ಎರಡು ಕಾಲುಗಳ ಮೇಲೆ ಅಥವಾ ಆಮೆಯ ಹೊರ ಕವಚದ ತುದಿಯ ಮೇಲೆ ನಿಂತಿರುವಂತೆ ತೋರಲಾಗುತ್ತದೆ. ಶಿಲ್ಪದಲ್ಲಿ ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿರುತ್ತವೆ. ದೇವತೆಯು ಕಿರೀಟಮಕುಟವನ್ನು ಮತ್ತು ಇತರೆ ಆಭರಣಗಳನ್ನು ಧರಿಸಿರುವನು.

ಹಂಪಿ ಪರಿಸರದಲ್ಲಿ ಕೂರ್ಮ ಅವತಾರದ ಬಿಡಿಶಿಲ್ಪ ಮತ್ತು ಉಬ್ಬುಶಿಲ್ಪಗಳು ದೊರಕಿವೆ. ಹಂಪಿಯ ಕೇಂದ್ರ ವಲಯದಲ್ಲಿ ನರಮೃಗ ಮತ್ತು ಪ್ರಾಣಿ ರೂಪದ ಸುಮಾರು 75 ಶಿಲ್ಪಗಳು ಕಂಡುಬಂದಿವೆ. ಈ 75 ಶಿಲ್ಪಗಳಲ್ಲಿ ನರಮೃಗ ರೂಪದ 29 ಮತ್ತು ಮೃಗರೂಪದ 45 ಶಿಲ್ಪಗಳಿವೆ. ಇಲ್ಲಿನ ಬಹುಪಾಲು ಶಿಲ್ಪಗಳು ಅಧಿಕವಾಗಿ ವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯಗಳಲ್ಲಿಯೂ ಮತ್ತು ಕಡಿಮೆ ಸಂಖ್ಯೆಯಲ್ಲಿ ಇತರ ಧರ್ಮಕ್ಕೆ ಸೇರಿದ ದೇವಾಲಯಗಳ ಗೋಡೆ ಮತ್ತು ಕಂಬಗಳಲ್ಲಿ ತೋರಲಾಗಿದೆ. ಇವುಗಳೊಂದಿಗೆ ಹಂಪಿ ಪರಿಸರದಲ್ಲಿರುವ ದೇವಾಲಯಗಳ ಬಾಗಿಲವಾಡದ

ಲತಾಸುರುಳಿ ಅಲಂಕರಣೆ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳನ್ನು ತೋರುವಾಗ ಕೂರ್ಮನನ್ನು ಕಿರು ಉಬ್ಬುಶಿಲ್ಪಗಳಾಗಿ ತೋರಲಾಗಿದೆ. ಅವುಗಳನ್ನು ಇಲ್ಲಿ ಪರಿಗಣಿಸಿಲ್ಲ. ಪ್ರಧಾನವಾಗಿ ಕಂಡುಬರುವ ಉಬ್ಬುಶಿಲ್ಪಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ಕೂರ್ಮ ಶಿಲ್ಪಗಳ ಕೋಷ್ಟ

	ವಿರೂಪಾಕ್ಷ (ಕ್ರಿ.ಶ. 9–16ನೇ ಶತಮಾನ)	ಪ್ರಸನ್ನ ವಿರೂಪಾಕ್ಷ (ಕ್ರಿ.ಶ. 13–14ನೇ ಶತಮಾನ	ಹಜಾರ ರಾಮಚಂದ್ರ (ಕ್ರಿ.ಶ. 13–14ನೇ ಶತಮಾನ)	ಕೃಷ್ಣ (ಕ್ರಿ.ಶ. 1513)	ವಿಠಲ (ಕ್ರಿ.ಶ. 1422–46)	ಪಟ್ಟಾಭಿರಾಮ (ಕ್ರಿ.ಶ. 1530–40)	ಮಾಲ್ಯವಂತ ರಘುನಾಥ (ಕ್ರಿ.ಶ. 1534–42)	ತಿರುವೇಂಗಳ ನಾಥ (ಅಚ್ಯುತರಾಯ) (ಕ್ರಿ.ಶ.1534)	ಒಟ್ಟು
ನರಮೃಗ ರೂಪದ ಕೂರ್ಮ	0	1	1	1	6	11	7	2	29
ಮೃಗ ರೂಪದ ಕೂರ್ಮ	7	0	0	1	6	5	10	15	44

ಕೋಟಿಲಿಂಗ ಮತ್ತು ಕಮಲಮಹಲದ ಹತ್ತಿರವಿರುವ ನೈಸರ್ಗಿಕ ಕಣಶಿಲೆಯ ಬೆಟ್ಟದಲ್ಲಿರುವ ಒಂದು ಬಂಡೆಯಲ್ಲಿ ದಶಾವತಾರದ ಉಬ್ಬುಶಿಲ್ಪಗಳಿವೆ. ಇದರಲ್ಲಿ ದಶಾವತಾರಗಳನ್ನು ಕ್ರಮವಾಗಿ ಸಾಲಿನಲ್ಲಿ ಕೆತ್ತಲಾಗಿದ್ದು ಕೂರ್ಮಾವತಾರವನ್ನು ಎರಡನೆಯ ಅವತಾರವಾಗಿ ತೋರಲಾಗಿದೆ.[4] ವಿಷ್ಣುವು ದಶಾವತಾರ ತಾಳಿದ ಅನುಕ್ರಮದಂತೆ ಇಲ್ಲಿ ಕೆತ್ತಲಾಗಿದೆ. ಕೂರ್ಮನು ಎರಡನೆಯ ಸ್ಥಾನವನ್ನು ಪಡೆದಿದ್ದಾನೆ. ಈ ಎರಡೂ ಶಿಲಾಫಲಕಗಳು ಕಡಿದಾದ ಕಣಶಿಲೆಯಲ್ಲಿ, ಸುಲಭವಾಗಿ ತಲುಪಲಾಗದ ಎತ್ತರದ ಸ್ಥಳದಲ್ಲಿ ಕೆತ್ತಿರುವುದರಿಂದ ಅವುಗಳು ಒರಟಾಗಿ ಮೂಡಿದೆ. ಈ ಶಿಲ್ಪವು ಸಮಭಂಗಿಯಲ್ಲಿದ್ದು ನಾಲ್ಕು ಕೈಗಳಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದ್ದು, ಕೆಳಗಿನ ಎರಡು ಕೈಗಳು ಕ್ರಮವಾಗಿ ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ದೇವತೆಯು ಧೋತಿಯನ್ನು ಧರಿಸಿದ್ದು, ಕಿರೀಟ ಮಕುಟಧಾರಿಯಾಗಿ ಕಂಠದಲ್ಲಿ ಹಾರವನ್ನು ಧರಿಸಿದ್ದಾನೆ. ಶಿಲ್ಪವು ಒರಟಾಗಿ ಇರುವುದರಿಂದ ದೇವತೆಯ ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ಮುಂತಾದ ಆಭರಣಗಳು ಸ್ಪಷ್ಟವಾಗಿ ಕಾಣುವುದಿಲ್ಲ.

ವಿಠಲ ದೇವಾಲಯದ ಕಲ್ಯಾಣ ಮಂಟಪ, ನೂರು ಕಂಬಗಳ ಮಂಟಪ ಮತ್ತು ರಂಗಮಂಟಪಗಳಲ್ಲಿರುವ ಕಂಬಗಳಲ್ಲಿ ಕೂರ್ಮಾವತಾರದ ಆರು ಉಬ್ಬುಶಿಲ್ಪಗಳು ಇವೆ. ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಇಲ್ಲಿರುವ ಬಹುತೇಕ ಉಬ್ಬುಶಿಲ್ಪಗಳೆಲ್ಲವೂ ಒಂದೇ ರೀತಿಯಲ್ಲಿವೆ. ಆ ಉಬ್ಬುಶಿಲ್ಪಗಳನ್ನು ವಿವಿಧ ಶಿಲ್ಪಿಗಳು ಕೆತ್ತಿರುವುದರಿಂದ ಇಂತಹ ಸಣ್ಣ ಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆ ಎಂದು ಅಭಿಪ್ರಾಯಪಡಬಹುದು. ಆದರೆ ಈ ಎಲ್ಲಾ ಶಿಲ್ಪಗಳಲ್ಲಿಯೂ ಮೂಲತಃ ಕೂರ್ಮಾವತಾರದಲ್ಲಿ ಕಂಡುಬರುವ ಲಕ್ಷಣಗಳಾದ ಮುದ್ರೆಗಳು, ವಸ್ತ್ರವಿನ್ಯಾಸ, ಮುಖಭಾವ ಮತ್ತು ಭಂಗಿಗಳು ಕಂಡುಬರುತ್ತವೆ. ಆಮೆಯ ಕವಚದ ಮೇಲಿರುವ ಮಧ್ಯದ ಉಬ್ಬುಭಾಗದ ಗೆರೆಯು ದುಂಡಗೆ ಅಥವಾ ಕೋನಾಕಾರ ಅಥವಾ ಮೊಟ್ಟೆಯಾಕಾರದಲ್ಲಿದ್ದು ಅದರ ತುದಿಯ ಭಾಗವು ಮೊನಚಾಗಿ ಅಥವಾ ದುಂಡಗೆ ಇರುವಂತೆ ಕೆತ್ತಲಾಗಿದೆ. ಆಮೆಯ ಹಿಂದಿನ ಎರಡು ಕಾಲುಗಳು ಕವಚದ ಎರಡು ಪಾರ್ಶ್ವಗಳಿಂದ ಹೊರಬಂದಿರುವಂತೆ ತೋರಲಾಗುತ್ತದೆ.

ಮೇಲಿನ ಅರ್ಧಭಾಗವನ್ನು ನರರೂಪದಲ್ಲಿ ಮತ್ತು ಕೆಳಗಿನ ಅರ್ಧಭಾಗವನ್ನು ಮೃಗರೂಪದಲ್ಲಿರುವಂತೆ ವಿಠಲ ದೇವಾಲಯದಲ್ಲಿರುವ ಕೂರ್ಮಾವತಾರ ಶಿಲ್ಪಗಳನ್ನು ತೋರಲಾಗಿದೆ. ನರರೂಪದಲ್ಲಿನ ಕೂರ್ಮನು ಮೇಲಿನ ಅರ್ಧಭಾಗದಲ್ಲಿ ನಾಲ್ಕು ಕೈಗಳನ್ನು ಹೊಂದಿದ್ದು ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳನ್ನು ತೋರುತ್ತವೆ. ದೇವತೆಯು ತಲೆಯಲ್ಲಿ ಕಿರೀಟಮಕುಟ, ಕಿವಿಯಲ್ಲಿ ಮಕರಕುಂಡಲ, ಕತ್ತಿನಲ್ಲಿ ಹಾರಗಳು, ಸೊಂಟದಲ್ಲಿ ಕುಚ್ಚುಗಳಿರುವ ಕಟಿಬಂಧ, ಉಂಗುರಗಳು, ಕೈಗಡಗ ಮತ್ತು ಬಾಹುವಳಯಗಳನ್ನು ಧರಿಸಿರುವನು. ಕೂರ್ಮಾವತಾರ ವಿಷ್ಣುವು ನಿಂತ ಸಮಭಂಗಿಯಲ್ಲಿ ಒಂದು ಪೀಠದ ಮೇಲಿರುವಂತೆ ತೋರಲಾಗಿದೆ. ಕೂರ್ಮದ ನಾಲ್ಕು ಕಾಲುಗಳನ್ನು ಪಾರ್ಶ್ವ ಭಾಗದ ಕವಚದಿಂದ ಹೊರಬಂದಿರುವಂತೆ ತೋರಲಾಗಿದೆ. ಉತ್ತಮವಾಗಿ ಕೆತ್ತಲಾಗಿರುವ ಈ ಶಿಲ್ಪಗಳಲ್ಲಿ ಕವಚದ ಮಧ್ಯೆಯಿರುವ ರೇಖೆಯನ್ನು ಸ್ಪಷ್ಟವಾಗಿ ತೋರಲಾಗಿದೆ. ಹಣೆಯಲ್ಲಿ ವೀರತಿಲಕವನ್ನು ಕಾಣಬಹುದು. ವಿಜಯನಗರಪಟ್ಟಣದಲ್ಲಿ ಕಂಡುಬರುವ ಬಹುತೇಕ ವೈಷ್ಣವ ಶಿಲ್ಪಗಳಲ್ಲಿ ಇಂತಹ ವೀರತಿಲಕ ಇರುವುದನ್ನು ಕಾಣಬಹುದು.

ಹಂಪಿ ಪರಿಸರದಲ್ಲಿ ಒಟ್ಟು 45 ಮೃಗರೂಪದ ಕೂರ್ಮಾವತಾರ ಉಬ್ಬುಶಿಲ್ಪಗಳು ಕಂಡುಬಂದಿವೆ. ಈ ಎಲ್ಲಾ ಕೂರ್ಮ ಶಿಲ್ಪಗಳು ನೈಜವಾಗಿರುವ ಆಮೆಯನ್ನು ಹೋಲುತ್ತವೆ ಹಾಗೂ ಕೂರ್ಮದ ಮೇಲಿನ ಭಾಗವನ್ನು ತೋರುತ್ತವೆ, ಕೂರ್ಮದ ಕೆಳಭಾಗವನ್ನು ತೋರುವುದಿಲ್ಲ. ಆಮೆಯ ಮೇಲಿನ ಹೊರಕವಚ ಮತ್ತು ಅದರಿಂದ ಹೊರಬಂದಿರುವ ಮುಖ ಹಾಗೂ ಪಾರ್ಶ್ವಗಳಿಂದ ನಾಲ್ಕು ಕಾಲುಗಳು ಹೊರಬಂದಿರುವಂತೆ ತೋರಲಾಗುತ್ತದೆ. ಕೆಲವೊಮ್ಮೆ ಕವಚದ ಮಧ್ಯೆ ರೇಖೆಯನ್ನು ತೋರಿದರೆ ಬಹುಪಾಲು ಮೃಗರೂಪದ ಆಮೆಗಳಲ್ಲಿ ಈ ಗೆರೆಯನ್ನು ತೋರಿಲ್ಲ. ಹೊರಕವಚವು ಅಂಡಾಕಾರ ಅಥವಾ ದುಂಡಗೆ ತೋರಿ ಅಲಂಕರಣೆಗಳು ಇಲ್ಲದಂತೆ ತೋರಲಾಗಿದೆ. ಕಂಬಗಳಲ್ಲಿರುವ ಚೌಕಾಕಾರ ಭಾಗದಲ್ಲಿ ಆಮೆಯನ್ನು ಕೋನಾಕಾರದಲ್ಲಿ ಕೆತ್ತಿದ್ದು ಅದರ ತಲೆಯು ಚೌಕಾಕಾರ ಭಾಗದ ಒಂದು ಮೂಲೆಯತ್ತ ಇರುವಂತೆ ಕೆತ್ತಿರುವುದು ಕಂಡುಬರುತ್ತದೆ.

ಪ್ರಸನ್ನ ವಿರೂಪಾಕ್ಷ ದೇವಾಲಯದ ಕಂಬದಲ್ಲಿ ಕೆತ್ತಲಾಗಿರುವ ಕೂರ್ಮಾವತಾರ ಉಬ್ಬುಶಿಲ್ಪವು ಸರಳವಾಗಿದ್ದು, ಮೇಲಿನ ಭಾಗವನ್ನು ಸರಳವಾಗಿ ತೋರಲಾಗಿದೆ. ಅದರಂತೆಯೇ ಹಜಾರ ರಾಮಚಂದ್ರ ಮತ್ತು ಕೃಷ್ಣ ದೇವಾಲಯಗಳಲ್ಲಿ ತಲಾ ಒಂದು ಕೂರ್ಮಾವತಾರದ ಉಬ್ಬುಶಿಲ್ಪವನ್ನು ಕಂಬದ ಮೇಲೆ ಕೆತ್ತಲಾಗಿದೆ. ಇವುಗಳಲ್ಲಿ ಆಮೆಯ ತಲೆ ಮತ್ತು ಕಾಲು ಭಾಗಗಳನ್ನು ತೋರಲಾಗಿದೆ. ವಿಠಲ ದೇವಾಲಯದಲ್ಲಿ 6 ಮೃಗರೂಪದ ಕೂರ್ಮಾವತಾರದ ಉಬ್ಬುಶಿಲ್ಪಗಳಿವೆ. ಶಿಲ್ಪಗಳ ಕೆತ್ತನೆಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಹೊರತುಪಡಿಸಿದರೆ, ಈ ಎಲ್ಲಾ ಶಿಲ್ಪಗಳಲ್ಲಿ ಆಮೆಯ ಮೇಲಿನ ಭಾಗವನ್ನು ಮಾತ್ರ ತೋರಲಾಗಿದೆ. ಪಟ್ಟಾಭಿರಾಮ ದೇವಾಲಯದಲ್ಲಿ ಒಟ್ಟು 5 ಆಮೆಯ ಉಬ್ಬುಶಿಲ್ಪಗಳಿವೆ. ಕಲ್ಯಾಣ ಮಂಟಪದಲ್ಲಿ ನರಮೃಗ ಮತ್ತು ಮೃಗರೂಪದ ಕೂರ್ಮಾವತಾರ ಶಿಲ್ಪಗಳು ಕಂಬಗಳಲ್ಲಿ ಕಂಡುಬರುತ್ತವೆ. ಇಲ್ಲಿರುವ ಎಲ್ಲಾ ಶಿಲ್ಪಗಳಲ್ಲಿ ಆಮೆಯ ಮೇಲಿನ ಭಾಗ ಮತ್ತು ಕೆಲವು ಶಿಲ್ಪಗಳಲ್ಲಿ ಮಧ್ಯದ ಗೆರೆಯನ್ನು ತೋರಲಾಗಿದೆ. ಈ ಶಿಲ್ಪಗಳನ್ನು ವಿವಿಧ ಶಿಲ್ಪಿಗಳು ಕೆತ್ತಿರುವುದರಿಂದ ಕೂರ್ಮ ಶಿಲ್ಪಗಳಲ್ಲಿ ಇಂತಹ ಸಣ್ಣ ಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆ. ಪಟ್ಟಾಭಿರಾಮ ದೇವಾಲಯದ ಮುಖಮಂಟಪದಲ್ಲಿ ಕೆಲವು ಕೂರ್ಮಾವತಾರ ಉಬ್ಬುಶಿಲ್ಪಗಳಿವೆ. ಇಲ್ಲಿರುವ ಒಂದು ಕಂಬದಲ್ಲಿರುವ ಆಮೆಯ ಶಿಲ್ಪವು ತನ್ನ ನಾಲ್ಕು ಕಾಲುಗಳನ್ನು ಎತ್ತಿರಿಸಿಕೊಂಡು ನಡೆಯುತ್ತಿರುವಂತೆ ತೋರಲಾಗಿದೆ. ಇದರಲ್ಲಿ ಆಮೆಯ ಕವಚ ಭಾಗದ ಮಧ್ಯೆ ರೇಖೆಯನ್ನು ತೋರಿಲ್ಲ. ತಿರುವೆಂಗಳನಾಥ ದೇವಾಲಯದಲ್ಲಿರುವ ಕಂಬಗಳಲ್ಲಿ ಒಟ್ಟು 16 ಉಬ್ಬುಶಿಲ್ಪಗಳಿವೆ. ಈ ದೇವಾಲಯದಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಮೃಗರೂಪದ ಕೂರ್ಮಾವತಾರ ಅಥವಾ ಆಮೆಯ ಉಬ್ಬುಶಿಲ್ಪಗಳಿವೆ. ಇಲ್ಲಿಯೂ ಸಹ ಉಬ್ಬುಶಿಲ್ಪಗಳಲ್ಲಿ ಕೆಲವೊಂದು ಸಣ್ಣ ಪುಟ್ಟ ವ್ಯತ್ಯಾಸಗಳಿವೆ.

ಆನೆಗೊಂದಿಯಲ್ಲಿರುವ ಚಿಂತಾಮಣಿ ಮಠದ ಬಳಿ ಕೂರ್ಮಾವತಾರ ವಿಷ್ಣುವಿನ ಒಂದು ಬಿಡಿ ಶಿಲ್ಪ ದೊರಕಿದೆ. ಒರಟಾಗಿ ರಚಿಸಿರುವ ಒಂದು ಗರ್ಭಗೃಹ ಆಕಾರದಲ್ಲಿರುವ ರಚನೆಯಲ್ಲಿ ಕಪ್ಪು ಶಿಲೆಯ ಈ ಶಿಲ್ಪವನ್ನು ಇರಿಸಿ ಪೂಜಿಸಲಾಗುತ್ತಿದೆ. ಕಣಶಿಲೆಯ ದೊಡ್ಡ ಹಾಸುಗಲ್ಲುಗಳನ್ನು ಬಳಸಿ ಕೊಠಡಿಯಂತಹ ರಚನೆಯನ್ನು ಮಾಡಲಾಗಿದೆ. ಈ ಶಿಲ್ಪವು ಬಿಡಿಯಾಗಿರುವುದರಿಂದ ಬಹುಶಃ ಇದನ್ನು ಯಾವುದೋ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು ಎಂದು ಊಹಿಸಬಹುದು. ಕಾಲಕ್ರಮದಲ್ಲಿ ಪೂಜೆಯು ತಪ್ಪಿಹೋಗಿ ದೇವಾಲಯ ನಾಶವಾಗಿದ್ದು, ನಂತರ ಅಲ್ಲಿದ್ದ ಶಿಲ್ಪವನ್ನು ಪ್ರಸ್ತುತ ಇರುವ ಜಾಗಕ್ಕೆ ತಂದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಮೂಲ ದೇವಾಲಯದ ಕುರಿತು ಯಾವುದೇ ಮಾಹಿತಿಯು ದೊರಕುವುದಿಲ್ಲ. ಈ ಶಿಲ್ಪವು ಸುಮಾರು 4 ಅಡಿ ಎತ್ತರ ಮತ್ತು 3 ಅಡಿ ಅಗಲವಿದೆ. ಇದು ನರಮೃಗರೂಪದ ಶಿಲ್ಪವಾಗಿದ್ದು, ಅದರಲ್ಲಿ ಅರ್ಧಭಾಗ ನರರೂಪವಾಗಿದೆ. ಶಿಲ್ಪಕ್ಕೆ ನಾಲ್ಕು ಕೈಗಳು ಇದ್ದು ಮೇಲಿನ ಎರಡು ಕೈಗಳು ಚಕ್ರ ಮತ್ತು ಶಂಖವನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ದೇವತೆಯು ಕಿರೀಟಮಕುಟವನ್ನು ಧರಿಸಿರುವನು. ಶಿಲ್ಪದ ಕೆಳಗಿನ ಅರ್ಧಭಾಗವು ಮೃಗರೂಪದಲ್ಲಿದ್ದು ಆಮೆಯ ಕವಚ ಭಾಗದ ತುದಿಯಲ್ಲಿ ನಿಂತಂತೆ ತೋರಲಾಗಿದೆ. ಆಯತಾಕಾರದ ಪೀಠದಂತೆ ಇರುವ ಭಾಗದಲ್ಲಿ ಮೂರ್ತಿಶಿಲ್ಪವು ನಿಂತಂತೆ ತೋರಿರುವುದರಿಂದ ಈ ಶಿಲ್ಪವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿತ್ತು ಎಂದು ಊಹಿಸಬಹುದು. ಇದು ಹಂಪಿ ಪರಿಸರದಲ್ಲಿ ದೊರಕಿರುವ ಏಕೈಕ ಕೂರ್ಮಾವತಾರದ ಬಿಡಿಶಿಲ್ಪವಾಗಿದ್ದು, ಶಿಲ್ಪದ ಶೈಲಿಯ ಆಧಾರದಿಂದ ಇದು ಕ್ರಿ.ಶ. 16–17ನೇ ಶತಮಾನಕ್ಕೆ ಸೇರುತ್ತದೆ.

ಹಂಪಿ ಪರಿಸರದಲ್ಲಿ 75 ಕೂರ್ಮಾವತಾರ ಶಿಲ್ಪಗಳು ದೊರಕಿವೆ. ಇದರಲ್ಲಿರುವ ಒಂದು ಶಿಲ್ಪವನ್ನು ಹೊರತುಪಡಿಸಿ ಉಳಿದೆಲ್ಲವೂ ಉಬ್ಬುಶಿಲ್ಪಗಳಾಗಿವೆ. 29 ನರಮೃಗರೂಪದ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ವಿಜಯನಗರದ ಆರಂಭಿಕ ಕಾಲಘಟ್ಟಗಳಲ್ಲಿ ಕೂರ್ಮಾವತಾರವು ಮನ್ನಣೆ ಪಡೆದಿದ್ದರೂ ತಲಾ 1 ಉಬ್ಬುಶಿಲ್ಪವನ್ನು ಮಾತ್ರ ಪ್ರಸನ್ನ ವಿರೂಪಾಕ್ಷ, ಹಜಾರ ರಾಮಚಂದ್ರ ಮತ್ತು ಕೃಷ್ಣ ದೇವಾಲಯದಲ್ಲಿ ಕಾಣಬಹುದು. ಈ ದೇವಾಲಯಗಳಲ್ಲಿ ಮೃಗರೂಪದ ಶಿಲ್ಪಗಳು ನಮಗೆ ಕಾಣಸಿಗುವುದಿಲ್ಲ. ಮೃಗರೂಪದ ಕೂರ್ಮ ಶಿಲ್ಪಗಳು ಕ್ರಿ.ಶ. 1500ರ ನಂತರವೇ ಕಾಣಿಸಿಕೊಳ್ಳುತ್ತವೆ ಮತ್ತು ನಂತರ ಕಾಲಘಟ್ಟಗಳಲ್ಲಿ ರಚನೆಯಾದ ದೇವಾಲಯಗಳಲ್ಲಿ ಅವುಗಳ ಸಂಖ್ಯೆಯು ಅಧಿಕಗೊಳ್ಳುತ್ತವೆ. ಉದಾಹರಣೆಗೆ ವಿಠಲ ದೇವಾಲಯ 12, ಪಟ್ಟಾಭಿರಾಮ ದೇವಾಲಯ 18, ಮಾಲ್ಯವಂತ ದೇವಾಲಯ 17 ಮತ್ತು ತಿರುವೆಂಗಳನಾಥ ದೇವಾಲಯಗಳಲ್ಲಿ 17 ಕೂರ್ಮಾವತಾರ ಶಿಲ್ಪಗಳಿವೆ. ತಿರುವೆಂಗಳನಾಥ ದೇವಾಲಯದಲ್ಲಿ ನರಮೃಗ ಮತ್ತು ಮೃಗರೂಪದ ಕೂರ್ಮ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಅದರ ಪ್ರಾಮುಖ್ಯತೆಯನ್ನು ತಿಳಿಯಬಹುದು. ಈ ದೇವಾಲಯದಲ್ಲಿ ಶ್ರೀವೈಷ್ಣವ ಪ್ರಭಾವ ಅಧಿಕವಾಗಿದ್ದುದರಿಂದ ಅಧಿಕ ಸಂಖ್ಯೆಯಲ್ಲಿ ಕೂರ್ಮ ಶಿಲ್ಪಗಳು ಕಂಡುಬರುತ್ತವೆ ಎಂದರೆ ತಪ್ಪಾಗಲಾರದು.


ಕೂರ್ಮಾವತಾರ ಶಿಲ್ಪಗಳಲ್ಲಿ ಕಂಡು ಬರುವ ಸಣ್ಣ ಪುಟ್ಟ ವ್ಯತ್ಯಾಸಗಳು ಪ್ರಾಯಶಃ ವಿವಿಧ ಶಿಲ್ಪಿಗಳು ಈ ಶಿಲ್ಪಗಳನ್ನು ಕೆತ್ತಿರುವುದರಿಂದ ಉಂಟಾಗಿದೆ ಎಂದು ಅಭಿಪ್ರಾಯಪಡಬಹುದು. ಶಿಲ್ಪಿಯ ವಿವಿಧ ಶೈಲಿಯನ್ನು ನಾವು ಇಲ್ಲಿ ಗಮನಿಸಬಹುದು. ನರಮೃಗ ರೂಪದ ಕೂರ್ಮಾವತಾರ ಶಿಲ್ಪಗಳಲ್ಲಿ ಮೇಲಿನ ಅರ್ಧಭಾಗವು (ಮುಂಬದಿ) ನರರೂಪವಾಗಿಯು ಮತ್ತು ಕೆಳಗಿನ ಅರ್ಧಭಾಗ ಮೃಗರೂಪವಾಗಿದ್ದು ಇದರಲ್ಲಿ ಮೃಗದ ಮೇಲಿನ ಭಾಗವನ್ನು (ಹಿಂಬದಿ) ತೋರಲಾಗಿದೆ. ಇದು ತದ್ವಿರುದ್ಧವಾಗಿರುವಂತಹ ನಿರೂಪಣೆಯಾಗಿರುತ್ತದೆ. ನರ ಮತ್ತು ಮೃಗರೂಪಗಳಲ್ಲಿ ಎರಡೂ ಭಾಗಗಳಲ್ಲಿ ಮೇಲಿನ ಭಾಗವನ್ನು ಮಾತ್ರ ತೋರುವುದು ಕಷ್ಟಸಾಧ್ಯ. ದೇಹರಚನಾ ಶಾಸ್ತ್ರದಂತೆ (Anatomy) ತೋರುವುದು ಕಷ್ಟವಾಗುತ್ತದೆ. ಕೂರ್ಮಾವತಾರ ವಿಷ್ಣುವಿನ ಪತ್ನಿಯನ್ನು (ದೇವಿ) ಯಾವುದೇ ಶಿಲ್ಪಗಳಲ್ಲಿ ತೋರದೇ ಕೇವಲ ಕೂರ್ಮರೂಪಿ ವಿಷ್ಣುವನ್ನು ಮಾತ್ರ ತೋರಲಾಗಿದೆ. ಹಂಪಿ ಪರಿಸರದಲ್ಲಿ ಕೂರ್ಮಾವತಾರ ವಿಷ್ಣವು ವರಾಹ

ಅವತಾರಕ್ಕಿಂತ ಹೆಚ್ಚು ಪ್ರಸಿದ್ಧಿ ಮತ್ತು ಮನ್ನಣೆಯನ್ನು ಪಡೆದಿತ್ತು ಎಂಬುದು ಅಧಿಕ ಸಂಖ್ಯೆಯಲ್ಲಿ ದೊರತಿರುವ ಕೂರ್ಮಾತಾರ ಶಿಲ್ಪಗಳಿಂದ ದೃಢಪಡುತ್ತದೆ.

ಅಡಿಟಿಪ್ಪಣಿಗಳು

1. ಗೋಪಿನಾಥರಾವ್, ಟಿ.ಎ., *ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ*, ಸಂ. II, ಪು. 120–124; ಸುರೇಶ್ ಕೆ.ಎಂ., *ಸ್ಕಲ್ಪ್‌ಚರಲ್ ಆರ್ಟ್ ಆಫ್ ಹಂಪಿ*, ಪು. 87–88.
2. ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ*, ಪು. 127–128.
3. ನೋಡಿ ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ*, ಪು. 42–43. ತಮಿಳುನಾಡಿನಲ್ಲಿರುವ ಕಾಂಚೀಪುರಂ ಊರಿನ ಹೆಸರನ್ನು ಕುರಿತಂತೆ ಗೋಪಿನಾಥರಾವ್ ಅವರು ಕುತೂಹಲಕಾರಿಯಾದ ಐತಿಹ್ಯವನ್ನು ಉಲ್ಲೇಖಿಸಿದ್ದಾರೆ. ಅದರಂತೆ ಅವರೇ ಹೇಳಿದಂತೆ "ಕೆಲವು ಮುಖ್ಯ ಊರುಗಳಿಗೆ ಕೌತುಕ ಅಥವಾ ಆಕರ್ಷಕವಾದ ಹೆಸರುಗಳನ್ನು ನೀಡಿರುವುದು ಅಥವಾ ಹೆಸರುಗಳಿಂದ ಕರೆಯಲಾಗುವುದರಿಂದ ಹೊಸ ದೇವತೆಗಳೂ ಸೃಜನರಾಗಿ ಅಂತಹ ದೇವತೆಗಳಿಗೆ ಮೂರ್ತಿಶಿಲ್ಪಗಳು ರಚನೆಗೊಂಡಿದೆ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಕಾಂಚೀಪುರಂ ಅನ್ನು ಕಚ್ಚಿ ಎಂದು ಉಲ್ಲೇಖಿಸಲಾಗಿದೆ. ಪ್ರಸ್ತುತ ಕಾಂಚೀಪುರದಲ್ಲಿ ಶಿವನ ಒಂದು ದೇವಾಲಯವಿದ್ದು ಅದನ್ನು ಕಚ್ಚಪ್ಪೇಶ್ವರ ಎಂದು ಕರೆಯಲಾಗುತ್ತದೆ ಮತ್ತು ಆ ಹೆಸರು ಸಂಸ್ಕೃತ ಮೂಲದ್ದಾಗಿದೆ. ಇದರ ಸಾಹಿತ್ಯಿಕ ಅಥವಾ ಪದದ ಅರ್ಥವು "ಕಚ್ಚಪೇಶ್ವರ ದೇವತೆ" ಅಥವಾ "ಶಿವನು ಪ್ರತಿಷ್ಠಾಪಿಸಿದ ಕಚ್ಚಿಯಪ್ಪ" ಎಂಬುದಾಗಿದೆ. ಆದರೆ ಕಚ್ಚಪ್ಪ ಎಂಬುದು ಸಂಸ್ಕೃತ ಪದವಾಗಿದೆ; ಮತ್ತು ಕಚ್ಚಪೇಶ್ವರ ಎಂದರೆ 'ಆಮೆಗಳ ಒಡೆಯ' ಅಥವಾ 'ಆಮೆಗಳ ರಾಜ' ಎಂಬುದಾಗಿಯೂ, ಅದು ಕೂರ್ಮಾವತಾರದ ವಿಷ್ಣುವು ಪೂಜಿಸಿದ ಶಿವ ಎಂದಾಗುತ್ತದೆ. ಇಂತಹ ಕೌತುಕ ಮತ್ತು ಆಕರ್ಷಕ ಹೆಸರಿಗೆ ಅನುಗುಣವಾಗಿ ಒಂದು ಮೂರ್ತಿಶಿಲ್ಪವನ್ನು ಕೆತ್ತಿ ದೇವಾಲಯದ ಪ್ರಾಕಾರದಲ್ಲಿರುವ ಒಂದು ಮರದ ಕೆಳಗೆ ಇರಿಸಲಾಗಿದೆ (ನೋಡಿ ಚಿತ್ರ. ಸಂ. ಡಿ). ಇಂತಹ ಹೊಸರೂಪದ ಮೂರ್ತಿಶಿಲ್ಪವು ಪ್ರಾಚೀನ ದೇವಾಲಯಕ್ಕೆ ಬಂದಿರುವುದನ್ನು ಪೂಜಾರಿಗಳನ್ನು ಒಳಗೊಂಡಂತೆ ಎಲ್ಲರೂ ಮರೆತಿರುವರು ಮತ್ತು ಈ ಶಿಲ್ಪ ಕುರಿತ ಯಾವ ಮಾಹಿತಿಯೂ ಹೇಳುವುದಿಲ್ಲ ಹಾಗೂ ಎಲ್ಲಿಂದ ಬಂದಿತು ಮತ್ತು ಯಾವುದನ್ನು ಪ್ರತಿನಿಧಿಸುತ್ತದೆ ಎಂಬುದು ತಿಳಿಯುವುದಿಲ್ಲ."

   ಇದೇ ದೇವಾಲಯದಲ್ಲಿರುವ ಕಲ್ಯಾಣಮಂಟಪದ ಕಂಬದಲ್ಲಿ ಕೂರ್ಮಾವತಾರದ ವಿಷ್ಣವು ಶಿವನನ್ನು ಪೂಜಿಸುತ್ತಿರುವ ಎರಡು ಶಿಲ್ಪಗಳಿವೆ. ಶಿವನ ಪಾರಮ್ಯವನ್ನು ಎತ್ತಿಹಿಡಿಯಲು ಇಂತಹ ಶಿಲ್ಪಗಳನ್ನು ಇಲ್ಲಿ ಬಳಕೆಗೆ ತಂದರೆಂದು ಗಣಿಸಬಹುದು. ವೈಷ್ಣವ ಧರ್ಮಕ್ಕಿಂತ ಶೈವ ಧರ್ಮವು ಪಾರಮ್ಯ ಅಥವಾ ಉನ್ನತ ಎಂದು ಸಾರಲು ಇವುಗಳನ್ನು ಚಾಲ್ತಿಗೆ ತಂದರು ಎನ್ನಬಹುದು. ಅಥವಾ ಇದನ್ನು ಎರಡು ಧರ್ಮಗಳ ನಡುವೆ ಇದ್ದ ವೈಮನಸ್ಸನ್ನು ತಣಿಸಲು ಸಹ ಬಳಸಿರಬಹುದು. ನೋಡಿ *'ವೈಷ್ಣವ ಸ್ಕಲ್ಪ್‌ಚರ್ಸ್ ಇನ್ ಶಿವ ಟೆಂಪಲ್ಸ್ ಆಫ್ ಕಾಂಚೀಪುರಂ'*, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ತಮಿಳು ವಿಶ್ವವಿದ್ಯಾಲಯ, ತಂಜಾವೂರು, ಪು. 2013.
4. ಹಳೇಬೀಡಿನಲ್ಲಿರುವ ಹೊಯ್ಸಳರ ಕಾಲದ ವಿಷ್ಣುವಿನ ದೇವಾಲಯದಲ್ಲಿ ಜಲಸಾಯಿ ವಿಷ್ಣುವಿನ ಕುತೂಹಲಕಾರಿಯಾದ ಮೂರ್ತಿಶಿಲ್ಪವಿದೆ. ಇದರಲ್ಲಿ ವಿಷ್ಣುವು ಮಲಗಿರುವಂತೆ ತೋರಲಾಗಿದೆ. ವಿಷ್ಣುವಿನ ಪತ್ನಿ ಲಕ್ಷ್ಮಿಯು ಕಾಲ ಬಳಿಯಲ್ಲಿ ಮತ್ತು ಭೂದೇವಿಯು ತಲೆಯ ಬಳಿ ಕುಳಿತಿರುವಳು. ಸಂಸ್ಕೃತ ಪಠ್ಯಗಳಿಗೆ ಅನುಗುಣವಾಗಿ ಈ ರೀತಿಯಾಗಿ ದೇವಿಯರನ್ನು ತೋರಲಾಗಿದೆ. ಜಲಸಾಯಿಯ ಒಂದು ಕೈ ಕಟಕ ಹಸ್ತದಲ್ಲಿದೆ. ಆಯುಧಗಳನ್ನು ಆಯುಧ ಪುರುಷರುಗಳಾಗಿ (ನರರೂಪದಲ್ಲಿ) ತೋರಿಲ್ಲ. ಆದರೆ ನೈಜ ಆಯುಧಗಳಂತೆಯೇ ತೋರಲಾಗಿದೆ. ವಿಷ್ಣುವಿನ ತಲೆಯ ಬಳಿ ಕಾಲುಗಳನ್ನು ಮಡಚಿ (ಪದ್ಮಾಸನ) ಕುಳಿತಿರುವಂತೆ ಒಂದು ಆಕೃತಿಯಿದೆ; ಪ್ರಪಂಚವು ಪ್ರಳಯದಲ್ಲಿ ನಾಶವಾದಾಗಲೂ ಉಳಿದುಬಂದಿರುವ ಚಿರಂಜೀವಿಯಾದ ಮಾರ್ಕಂಡೇಯನ ಶಿಲ್ಪವಾಗಿರಬೇಕು. ಮಲಗಿರುವ ವಿಷ್ಣುವಿನ ಮೇಲಿನ ಭಾಗದಲ್ಲಿ ರೂಪಮಂಡನದಲ್ಲಿ ಉಲ್ಲೇಖಿತವಾಗಿರುವಂತೆ ವಿಷ್ಣುವಿನ ದಶಾವತಾರವನ್ನು ಕೆತ್ತಲಾಗಿದೆ. ಇವುಗಳಲ್ಲಿ ಮತ್ಸ್ಯ ಮತ್ತು ಕೂರ್ಮ ಅವತಾರಗಳನ್ನು ಮೃಗರೂಪದಲ್ಲಿ ತೋರಲಾಗಿದೆ ಮತ್ತು ಬುದ್ಧನನ್ನು ಧ್ಯಾನಿಬುದ್ಧನಾಗಿ ಮತ್ತು ಕಲ್ಕಿಯ ಅವತಾರವನ್ನು ಓರ್ವ ವ್ಯಕ್ತಿಯು (ವಿಷ್ಣು) ಕುದುರೆ ಸವಾರಿ ಮಾಡುತ್ತಿರುವಂತೆ ತೋರಲಾಗಿದೆ. ವಿಷ್ಣವಿನ ಕಾಲ ಬಳಿಯಿರುವ ಆಕೃತಿಯು ಅಂಜಲಿ ಮುದ್ರೆಯಲ್ಲಿರುವುದರಿಂದ ಅದು ಗರುಡನೆಂಬುದು ಸ್ಪಷ್ಟವಾಗುತ್ತದೆ. ನೋಡಿ ಗೋಪಿನಾಥರಾವ್, ಟಿ.ಎ., *ಪೂರ್ವೋಕ್ತ*, ಪು. 264–268.
5. ವಾಸುದೇವನ್ ಸಿ.ಎಸ್, *ಟೆಂಪಲ್ಸ್ ಆಫ್ ಆಂಧ್ರಪ್ರದೇಶ್*, ಪು. 81–100.
6. ರಾಮಚಂದ್ರ ರಾವ್ ಎಂ.ಎಸ್, *ಶ್ರೀಕೂರ್ಮಂ ಟೆಂಪಲ್*, ಆಂಧ್ರ ವಿಶ್ವವಿದ್ಯಾಲಯ, ವಿಶಾಖಪಟ್ಟಣಂ, 1991, ಪು. 28–139.




ಚಿತ್ರ 1. ದಶಾವತಾರ ನಿರೂಪಣಾ ಉಬ್ಬುಶಿಲ್ಪಗಳು, ಕೋಟಿಲಿಂಗದ ಸಮೀಪ, ಹಂಪಿ



ಚಿತ್ರ 2. ಕೂರ್ಮವತಾರ ವಿಷ್ಣು, ದಶಾವತಾರ ನಿರೂಪಣಾ ಉಬ್ಬುಶಿಲ್ಪಗಳು, ಕೋಟಿಲಿಂಗದ ಸಮೀಪ, ಹಂಪಿ




ಚಿತ್ರ 3. ನರಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ




ಚಿತ್ರ 4. ನರಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ




ಚಿತ್ರ 5. ನರಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ




ಚಿತ್ರ 6. ನರಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ 7. ನರಮೃಗ ರೂಪದ ಕೂರ್ಮನ ಬಿಡಿ ಶಿಲ್ಪ, ಒರಟು ರಚನೆಯ ಗರ್ಭಗೃಹ ಒಂದರಲ್ಲಿ. ಆನೆಗೊಂದಿ




ಚಿತ್ರ 8. ಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ 9. ಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ 10. ಮೃಗ ರೂಪದ ಕೂರ್ಮ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ 11. ಮೃಗ ರೂಪದ ಕೂರ್ಮ, ಮಹಾಮಂಟಪದ ಒಂದು ಕಂಬದಲ್ಲಿ, ಪಟ್ಟಾಭಿರಾಮ ದೇವಾಲಯ, ಕಮಲಾಪುರ

24. ಹಂಪೆ ವಿರೂಪಾಕ್ಷ ದೇವಾಲಯದ ನಟರಾಜ ಶಿಲ್ಪ

ಶ್ರೀ ಶ್ರೀಶೈಲ ಮನಗುತ್ತಿ

ಪ್ರಸ್ತಾವನೆ

ಕ್ರಿ.ಶ. 13ನೆಯ ಶತಮಾನದ ಅಂತ್ಯದ ವೇಳೆಗೆ ದಕ್ಷಿಣ ಭಾರತದಲ್ಲಿ ಸ್ಥಳೀಯ ಅರಸರ ಮೇಲೆ ಮುಸ್ಲಿಂರ ಆಕ್ರಮಣಗಳು ನಡೆದವು. ಅವರ ಆಕ್ರಮಣಗಳನ್ನು ಎದುರಿಸಲು ವಿಜಯನಗರ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹಕ್ಕ–ಬುಕ್ಕರೆಂಬ ಸಹೋದರರಿಂದ ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸ್ಥಾಪನೆಯಾಯಿತು. ಈ ಸಾಮ್ರಾಜ್ಯವು ಎರಡೂವರೆ ಶತಮಾನಗಳ ಕಾಲ ಜನರ ಬದುಕಿನಲ್ಲಿ ಸುವರ್ಣಯುಗವನ್ನು ಸೃಷ್ಟಿಸಿತು. ವಿಜಯನಗರದ ಅಧಿದೈವ ವಿರೂಪಾಕ್ಷನಿರುವ ಈ ಸ್ಥಳವು ಸಾಮ್ರಾಜ್ಯದ ಪ್ರಮುಖ ಕೇಂದ್ರವಾಯಿತು. ವಿರೂಪಾಕ್ಷ ದೇವಾಲಯವು ಪ್ರಾಚೀನ ಕಾಲದಿಂದಲೂ ಪೂಜ್ಯನೀಯ ದೇವಾಲಯವಾಗಿದೆ.

ವಿಜಯನಗರದ ದಕ್ಷ ಅರಸರುಗಳೊಂದಿಗೆ ಈ ಹಿಂದೂ ಸಾಮ್ರಾಜ್ಯವು ಬಲಶಾಲಿಯಾಗಿ ವರ್ಧಿಸಿ ಸಾಕಷ್ಟು ಬದಲಾವಣೆಯನ್ನು ಮಾಡಿತು. ವಿಜಯನಗರದ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶದ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹವನ್ನು ನೀಡಿದ್ದರು ಎಂಬುದಕ್ಕೆ ಅವರು ನಿರ್ಮಿಸಿದ ಸ್ಮಾರಕಗಳು ಮತ್ತು ಶಿಲ್ಪಗಳು ಸಾಕ್ಷಿಯಾಗಿವೆ. ಈ ಅರಸರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಹಿಂದೆ ಕಂಡರಿಯದಷ್ಟು ಪ್ರಮಾಣದಲ್ಲಿ ವಾಸ್ತುಶಿಲ್ಪ ನಿರ್ಮಾಣ ಚಟುವಟಿಕೆಗಳು ಇಲ್ಲಿ ನಡೆದವು. ಶಿಲ್ಪಿಗಳು ರಚಿಸಿರುವ ಕೌಶಲ್ಯಪೂರ್ಣ ದೇವಾಲಯಗಳು ಮತ್ತು ಶಿಲ್ಪಗಳು ವಿಜಯನಗರ ವಾಸ್ತು ಶೈಲಿಯ ಅನನ್ಯತೆ ಮತ್ತು ವಿಶೇಷತೆಯಾಗಿವೆ.[1]

ಪ್ರಸ್ತುತ ಹಂಪೆ ವಿರೂಪಾಕ್ಷ ದೇವಾಲಯದಲ್ಲಿರುವ ನಟರಾಜ ಶಿಲ್ಪ ಪ್ರತಿಮಾ ಲಕ್ಷಣಗಳನ್ನು ಗುರುತಿಸಿ ಈ ಶಿಲ್ಪವು ಆಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ರಚನೆಯಾಗಿದೆಯೋ ಎಂಬುದನ್ನು ಚರ್ಚಿಸುವುವುದು ಈ ಪ್ರಬಂಧದ ಉದ್ದೇಶವಾಗಿದೆ.

ವಿರೂಪಾಕ್ಷ ದೇವಾಲಯದ ಎರಡನೇ ಪ್ರಾಕಾರದಲ್ಲಿ ನೈರುತ್ಯ ದಿಕ್ಕಿನಲ್ಲಿ ಕಲ್ಯಾಣಮಂಟಪದಲ್ಲಿರುವ 108 ಕಂಭಗಳಲ್ಲಿ ಮೊದಲನೆಯ ಕಂಭದ ಮೇಲ್ಭಾಗದಲ್ಲಿ ಉತ್ತರ ದಿಕ್ಕಿಗೆ ಈ ಶಿಲ್ಪವನ್ನು ಕೆತ್ತಲಾಗಿದೆ. ಶೈವ ಶಿಲ್ಪಗಳ ಪ್ರಕಾರಗಳಲ್ಲಿ ಇರುವ ನೃತ್ಯ ಪ್ರಕಾರದ ಈ ಶಿಲ್ಪವು ವಿಶೇಷತೆಯಿಂದ ಕೂಡಿದೆ.

ನಟರಾಜ ಶಿಲ್ಪದ ಪ್ರಾಚೀನತೆ

ನಾಟ್ಯದ ಅಧಿದೈವವಾದ ಶಿವನು ನೂರಾಯೆಂಟು ವಿಧಗಳ ನರ್ತನ ಮಾಡಿರುವನೆಂದು ಭರತನ ನಾಟ್ಯಶಾಸ್ತ್ರವು ಶಿವನ ನಾಟ್ಯದ ನೂರಾಯೆಂಟು ಕರಣಗಳನ್ನು ತಿಳಿಸಿದ್ದು, ಇವು ಶಿವನ ನೂರಾಯೆಂಟು ವಿಧಗಳೆಂಬಂತೆ ಇವೆ. ಈ ವಿಧವಾದ ಶಿವನ ನರ್ತನ ಶಿಲ್ಪಗಳು ದಕ್ಷಿಣ ಭಾರತದಲ್ಲಿ ವಿಶೇಷವಾಗಿ ನಟರಾಜನ ಆರಾಧನೆಯು ಬೆಳೆದುಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಚಿದಂಬರಂ ನಟರಾಜನ ಪ್ರಸಿದ್ಧವಾದ ಕ್ಷೇತ್ರವಾಗಿದೆ. ತಮಿಳುನಾಡಿನಲ್ಲಿ ಕ್ರಿ.ಶ. 850ರಲ್ಲಿ ನಟರಾಜನ ಕಂಚಿನ ಮೂರ್ತಿಗಳ ರಚನೆ ಪ್ರಾರಂಭವಾಯಿತು. ಊರ್ಧ್ವಜಾನು ಭಂಗಿಯಲ್ಲಿರುವ ಕೂರಂ ನಟರಾಜನ

ಶಿಲ್ಪವು ತಮಿಳುನಾಡಿನಲ್ಲಿ ದೊರೆತ ಪ್ರಾಚೀನ ಶಿಲ್ಪವಾಗಿದೆ. ಚೋಳರಾಜ ಪಾರಂತಕನ ಕಾಲದಲ್ಲಿ ನಟರಾಜನ ಶಿಲ್ಪ ನಿರ್ಮಾಣ ಕೌಶಲ್ಯವು ಪರಾಕಾಷ್ಠತೆಯನ್ನು ತಲುಪಿತು.[2]

ಶಿವನ ನಟರಾಜನ ಸ್ವರೂಪದ ಪ್ರತಿಮಾ ಪರಿಕಲ್ಪನೆಯು ಮೊದಲು ಕಾಶ್ಮೀರ ಗ್ರಂಥಗಳಲ್ಲಿ ಕಂಡುಬರುತ್ತದೆ. ಶೈವ ಸಿದ್ಧಾಂತದಲ್ಲಿ ಶಿವನ ಪಂಚಕೃತ್ಯಗಳಾದ ಸೃಷ್ಟಿ, ಸ್ಥಿತಿ, ಲಯ, ತಿರೋಭಾವ ಮತ್ತು ಅನುಗ್ರಹವನ್ನು ಇದು ಪ್ರತಿಬಿಂಬಿಸುತ್ತದೆ. ಈ ಐದು ಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬ್ರಹ್ಮ, ವಿಷ್ಣು, ರುದ್ರ, ಮಹೇಶ್ವರ ಮತ್ತು ಸದಾಶಿವರು ನಿರ್ವಹಿಸುವ ಕ್ರಿಯೆಗಳಾಗಿವೆ. ನಟರಾಜನ ಮೇಲಿನ ಬಲಗೈಯಲ್ಲಿರುವ ಡಮರುಗವು ಸೃಷ್ಟಿ ಪ್ರಕ್ರಿಯೆಯನ್ನು, ಹರಡಿರುವ ಜಟಾಭಾರವು ಸ್ಥಿತಿಕಾರ್ಯವನ್ನು, ಮೇಲಿನೆಡಗೈಯಲ್ಲಿರುವ ಅಗ್ನಿಪಾತ್ರೆಯು ಸಂಹಾರ ಕ್ರಿಯೆಯನ್ನು, ಎದೆಯ ಬಳಿ ಅಡ್ಡವಾಗಿರುವ ಎಡಗೈಯು ತಿರೋಭಾವ (ಶಾಶ್ವತವಾದ ಸ್ಥೈರ್ಯ) ಕ್ರಿಯೆಯನ್ನು, ಮೇಲಿನ ಕೆಳ ಬಲಗೈಯಲ್ಲಿರುವ ಅಭಯ ಹಸ್ತವು ಅನುಗ್ರಹವನ್ನು ಸೂಚಿಸುತ್ತದೆ. ಅದಕ್ಕನುಗುಣವಾಗಿ ಶಿವನ ವಿವಿಧ ರೂಪದ ನೃತ್ಯಗಳನ್ನು ಗುರುತಿಸಬಹುದಾಗಿದೆ. ಗುಪ್ತರ ಕಾಲದಲ್ಲಿ ನಟರಾಜನ ಶಿಲ್ಪಗಳು ಲಭ್ಯವಾಗಿವೆ. ಸಾಂಕೋರ ಎಂಬಲ್ಲಿರುವ ದೇವಾಲಯದ ದ್ವಾರಬಂಧದ ಲಲಾಟಫಲಕದಲ್ಲಿ ಶಿವನ ನಾಟ್ಯ ಶಿಲ್ಪವಿದೆ. ಇದು ಕೂಡಾ ಪ್ರಾಚೀನ ಶಿಲ್ಪವಾಗಿದೆ.[3]

ಕರ್ನಾಟಕದಲ್ಲಿ ಐಹೊಳೆ, ಬಾದಾಮಿ, ಬನವಾಸಿ ಪಟ್ಟದಕಲ್ಲು ಮೊದಲಾದೆಡೆಗಳಲ್ಲಿ ನಟರಾಜನ ಆರಾಧನೆಯು ಕ್ರಿ.ಶ. ಐದನೆಯ ಶತಮಾನದಲ್ಲಿ ಇದ್ದುದನ್ನು ತಿಳಿಸುತ್ತದೆ. ಶಿಲ್ಪಶಾಸ್ತ್ರಗಳ ರಚನೆಗಿಂತಲೂ ಮೊದಲು ಬಾದಾಮಿ ಚಾಲುಕ್ಯರು ನಟರಾಜನ ಶಿಲ್ಪವನ್ನು ರಚಿಸಿದರು ಎಂದು ಹೇಳಿದರೆ ತಪ್ಪಾಗಲಾರದು. ಶಿವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹದಲ್ಲಿ ಲಿಂಗ ಪ್ರತಿಷ್ಠೆಯಾಗಿದ್ದು, ನಂದಿ, ಗಣೇಶ ಭೈರವಿ ಮತ್ತು ನಟರಾಜನ ಶಿಲ್ಪಗಳು ಇರುತ್ತವೆ. ಶಿವಾಲಯದಲ್ಲಿ ನಟರಾಜನ ಕಂಚಿನ ಮೂರ್ತಿಯನ್ನು ಉತ್ಸವ ಮೂರ್ತಿಯನ್ನಾಗಿ ಬಳಸುವುದು ಗಮನಾರ್ಹ. ದೊಡ್ಡ ಶಿವಾಲಯವಾಗಿದ್ದರೆ, ಕೋಷ್ಠಗಳಲ್ಲಿ ಇರಿಸಲಾಗುತ್ತದೆ. ನಂತರದ ಕಾಲದಲ್ಲಿ ದೇವಾಲಯದ ಪ್ರವೇಶ ದ್ವಾರಬಂಧದಲ್ಲಿ ನಟರಾಜನ ಶಿಲ್ಪವನ್ನು ಕೆತ್ತಲಾಗಿರುತ್ತದೆ.[4]

ಪ್ರತಿಮಾ ಶಾಸ್ತ್ರದ ವಿವರಗಳು

ಶೈವಾಗಮವಾದ ಕಾರಣಾಗಮವು ಏಳು ಬಗೆಯ ಶಿವನ ನೃತ್ಯದ ಪ್ರಭೇದಗಳನ್ನು ತಿಳಿಸಿದೆ. ಅವುಗಳೆಂದರೆ – ಆನಂದತಾಂಡವ, ಸಂಧ್ಯಾತಾಂಡವ, ಉಮಾತಾಂಡವ, ಗೌರಿತಾಂಡವ, ಕಾಳಿಕಾತಾಂಡವ, ತ್ರಿಪುರತಾಂಡವ ಮತ್ತು ಸಂಹಾರತಾಂಡವ ನೃತ್ಯಗಳು. ಕಾಶ್ಯಪಶಿಲ್ಪಶಾಸ್ತ್ರ ಗ್ರಂಥವು ಶಿವನ ಹದಿನೆಂಟು ಬಗೆಯ ನಾಟ್ಯಭಂಗಿಗಳನ್ನು ತಿಳಿಸಿದೆ. ಶಿಲ್ಪರತ್ನವು ಒಂಭತ್ತು ವಿಧದ ನಾಟ್ಯಗಳನ್ನು ತಿಳಿಸಿದೆ.[5]

ವಿರೂಪಾಕ್ಷ ದೇವಾಲಯದಲ್ಲಿರುವ ಈ ನಟರಾಜನ ಶಿಲ್ಪವು ಶಿವನ ಏಳು ತಾಂಡವ ನೃತ್ಯಗಳಲ್ಲಿ ಮೊದಲನೆಯದನ್ನು ಬಿಂಬಿಸುತ್ತದೆ. ಹಂಪಿ ಪರಿಸರದಲ್ಲಿರುವ ಶಿವನ ನಾಟ್ಯ ಶಿಲ್ಪಗಳಲ್ಲಿ ಇದು ವಿಶೇಷವಾಗಿದೆ. ದಕ್ಷಿಣ ಭಾರತದ ದೇವಾಲಯಗಳಲ್ಲಿ ಆನಂದತಾಂಡವ ನೃತ್ಯ ಶಿಲ್ಪಗಳು ಹೆಚ್ಚಾಗಿ ನಿರ್ಮಾಣವಾಗಿವೆ.

ಸಕಲಾಧಿಕಾರ, ಅಂಶುಮದ್ಭೇದಾಗಮ ಮತ್ತು ಕಾಮಿಕಾಗಮ ಮುಂತಾದ ಶಿಲ್ಪಶಾಸ್ತ್ರ ಗ್ರಂಥಗಳು ಆನಂದ ತಾಂಡವ ನೃತ್ಯ ನಟರಾಜನ ಲಕ್ಷಣಗಳನ್ನು ವಿವರಿಸಿವೆ. ಆಗಮಗಳಲ್ಲಿ ಪ್ರಬಲವಾದ ಆಗಮ ಅಂಶುಮದ್ಭೇದಾಗಮವು ನಟರಾಜನ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ವಿವರಿಸುತ್ತದೆ.[6]

ನಟರಾಜನ ಶಿಲ್ಪವು ಉತ್ತಮ ದಶಾತಲದಲ್ಲಿದ್ದು, ಸರ್ವಾಂಗವನ್ನು ಬಿಡಿಸಿರಬೇಕು. ಉತ್ತರಕಾಮಿಕಾಗಮವು ತಿಳಿಸಿರುವಂತೆ ನಟರಾಜನ ಬಿಂಬಕ್ಕೆ ನಾಲ್ಕು ಕೈಗಳಿರಬೇಕು. ಬಲ ಮೇಲಿನ ಕೈಯಲ್ಲಿ ಡಮರು. ಬಲ ಕೆಳಗಿನ ಕೈ

ಅಭಯ ಹಸ್ತವಾಗಿ ಎಡ ಮೇಲಿನ ಕೈಯಲ್ಲಿ ಅಗ್ನಿಯನ್ನು ಹಿಡಿದಿರಬೇಕು, ಎಡ ಕೆಳಗಿನ ಕೈ ಗಜಹಸ್ತವಾಗಿರಬೇಕು ಎಂಬ ನಿಯಮವಿದೆ. ನಟರಾಜನ ತೋಳುಗಳಲ್ಲಿ ನಾಗವಲಯವಿರಬೇಕು. ನಟರಾಜನ ಬಲಗಾಲು ಅಪಸ್ಮಾರನ ಮೇಲೆ ಸ್ಥಿರಪಾದವಾಗಿದ್ದು, ತುಸು ಬಾಗಿರಬೇಕು. ದತ್ತೂರ, ಅರ್ಕ ಹೂಗಳು, ಚಂದ್ರಬಿಂಬ, ನಾಗಫಣಿ, ರತ್ನಪಟ್ಟ ಇರಬೇಕು. ಬಲಗಡೆ ಗಂಗೆಯ ಅಲಂಕರಣೆ ಇರಬೇಕು. ಜಟೆಗಳು ಭುಜದ ಮೇಲೆ ಹರಡಿರಬೇಕು. ಶಿವನಿಗೆ ಸಕಲಾಭರಣಗಳು ಇದ್ದು, ವ್ಯಾಘ್ರಾಜಿನವನ್ನು ಧರಿಸಿರಬೇಕು. ಶಿವನ ಬಲಗಾಲ ಕಡೆ ಅಪಸ್ಮಾರ ಪುರುಷನು ಮುಖ ಮಾಡಿರುವಂತಿರಬೇಕು. ಇವನ ಕೈಯಲ್ಲಿ ನಾಗಫಣಿಯು ಇರಬೇಕು, ಮತ್ತೊಂದು ಕೈ ನಾಗಮುದ್ರೆಯಲ್ಲಿರಬೇಕು ಎಂದು ತಿಳಿಸಿದೆ. ಶಿವನ ಮುಖವು ಪ್ರಸನ್ನಭಾವದಿಂದ ಕೂಡಿರಬೇಕು. ಆನಂದತಾಂಡವ ನೃತ್ಯ ನಟರಾಜನ ಶಿಲ್ಪವು ಈ ಲಕ್ಷಣಗಳನ್ನು ಹೊಂದಿರಬೇಕು. ಶಿಲ್ಪರತ್ನವು ನಟರಾಜನ ಶಿರದ ಹಿಂದೆ ಪ್ರಭಾಮಂಡಲವಿರಬೇಕೆಂದಿದೆ. ಶಿವನ ಬಲಗಿವಿಯಲ್ಲಿ ಮಕರ ಕುಂಡಲವಿರಬೇಕು, ಎಡಗಿವಿಯಲ್ಲಿ ಪತ್ರಕುಂಡಲವಿರಬೇಕು ಎಂಬ ನಿಯಮವಿದೆ. ದಕ್ಷಿಣ ಭಾರತದ ಶಿವಾಲಯಗಳಲ್ಲಿ ನಟರಾಜನ ಶಿಲ್ಪಗಳು ಸಾಮಾನ್ಯವಾಗಿ ಹೀಗೆಯೇ ಇರುತ್ತವೆ. ಏಳು ತಾಂಡವ ನೃತ್ಯಗಳಲ್ಲಿ ವಿಶೇಷವಾಗಿರುವುದು ಆನಂದತಾಂಡವ. ಶಿವಾಲಯಗಳಲ್ಲಿ ಉತ್ಸವ ಮೂರ್ತಿಯು ಆನಂದತಾಂಡವ ಮೂರ್ತಿಯಾಗಿರಬೇಕೆಂಬ ನಿಯುಮವಿದೆ. ಇದು ಕಂಚಿನಿಂದ ನಿರ್ಮಾಣವಾಗಿರಬೇಕು. ಶಿವನು ಗಜಾಸುರ, ಅಂಧಕಾಸುರ ಮತ್ತು ಜಲಂಧರ ಈ ಎಲ್ಲಾ ಅಸುರರನ್ನು ಸಂಹಾರ ಮಾಡಿದ ಮೇಲೆ ವಿಜಯೋತ್ಸವದಿಂದ ನರ್ತಿಸುತ್ತಾನೆ. ಶಿವನ ಈ ಸಂಹಾರ ನೃತ್ಯವನ್ನು ತಾಂಡವ ನೃತ್ಯ ಎಂದು ಕರೆಯಲಾಗಿದೆ. ಲಾಸ್ಯನೃತ್ಯವು ಶೃಂಗಾರ ಭಾವವುಳ್ಳದ್ದಾಗಿದ್ದು, ವಿಶೇಷವಾಗಿ ಸ್ತ್ರೀಯರು ನರ್ತಿಸುವ ನೃತ್ಯವಾಗಿದೆ. ತಾಂಡವನೃತ್ಯವು ರೌದ್ರಭಾವವುಳ್ಳದ್ದಾಗಿದ್ದು, ಪುರುಷರಿಗೆ ಸಾಧ್ಯವಾಗುವ ನೃತ್ಯವಾಗಿದೆ. ಆದರೆ ಶಿವನು ಸರ್ವಸಾಧಕನಾಗಿದ್ದು ಎರಡೂ ನೃತ್ಯಗಳನ್ನು ಮಾಡಿ ನಟಶೇಖರನೆನಿಸಿದ್ದಾನೆ.[7]

ನಟರಾಜ ಶಿಲ್ಪದ ಪ್ರತಿಮಾ ಲಕ್ಷಣದ ವಿವರಗಳು

ವಿರೂಪಾಕ್ಷ ದೇವಾಲಯದಲ್ಲಿರುವ ನಟರಾಜನ ಶಿಲ್ಪವು ಆನಂದತಾಂಡವ ಎಂಬ ನೃತ್ಯದ ಪ್ರಭೇದಕ್ಕೆ ಸೇರಿದ್ದಾಗಿದೆ. ಈ ಶಿಲ್ಪವು ಭದ್ರಪೀಠದ ಮೇಲೆ ನೃತ್ಯ ಭಂಗಿಯಲ್ಲಿದ್ದು ನಾಲ್ಕು ಕೈಗಳನ್ನು ಹೊಂದಿದ್ದು, ಬಲ ಮೇಲಿನ ಕೈಯಲ್ಲಿ ಡಮರು, ಬಲ ಕೆಳಗಿನ ಕೈಯು ಅಭಯ ಹಸ್ತವಾಗಿದ್ದು, ಎಡ ಮೇಲಿನ ಕೈಯಲ್ಲಿ ಅಗ್ನಿ, ಎಡ ಕೆಳಗಿನ ಹಸ್ತವು ಗಜಹಸ್ತವಾಗಿದೆ. ಬಲಗಾಲು ಆಕುಂಚಿತವಾಗಿ ತುಸು ಬಾಗಿ ಅಪಸ್ಮಾರ ಪುರುಷನ ಮೇಲೆ ಇಡಲಾಗಿದೆ. ಈ ಭಂಗಿಯನ್ನು ಭುಜಂಗಾತ್ರಾಸ ಭಂಗಿಯೆಂದು ಕರೆಯಲಾಗಿದೆ. ಈ ನೃತ್ಯದ ಭಂಗಿಯನ್ನು ಆನಂದತಾಂಡವ ನೃತ್ಯವೆಂದು ಗುರುತಿಸಲಾಗಿದೆ. ಶಿವನ ಎಲ್ಲಾ ನೃತ್ಯದ ಪ್ರಕಾರಗಳು ಆನಂದತಾಂಡವ ನೃತ್ಯದಲ್ಲಿ ಲೀನವಾಗಿದೆ ಎಂಬುದು ಗಮನಾರ್ಹ ಅಂಶವಾಗಿದೆ. ಈ ನೃತ್ಯ ಭಂಗಿಯು ಶಿವ ಪಾರಮ್ಯವನ್ನು ಸೂಚಿಸುವ ಪಂಚಾಕ್ಷರಿ (ಶಿವಾಯನಮಃ) ಮಂತ್ರದ ಸಂಕೇತವಾಗಿದೆ. ತಾಂಡವ ನೃತ್ಯ ಭಂಗಿಯಲ್ಲಿರುವ ಶಿವನ ಡಮರುಗವುಳ್ಳ ಹಸ್ತವು 'ಶಿ' ಕಾರವನ್ನು, ಗಜಹಸ್ತವು 'ವ' ಕಾರವನ್ನು, ಅಭಯ ಹಸ್ತವು 'ಯ' ಕಾರವನ್ನು, ಅಗ್ನಿಹಸ್ತವು, 'ನ' ಕಾರವನ್ನು, ಬಲ ಪಾದವು 'ಮ' ಕಾರವನ್ನು ಸೂಚಿಸುತ್ತದೆ.

ಆಭರಣಗಳು

ಕೊರಳಲ್ಲಿ ಕಂಠಿಕೆ, ಬಲಗಿವಿಯಲ್ಲಿ ಪತ್ರ ಕುಂಡಲ, ಎಡಗಿವಿಯಲ್ಲಿ ಮಕರಕುಂಡಲವಿದೆ. ಜಟಾಮುಕುಟ. ಶಿರಶ್ಚಕ್ರ, ಯಜ್ಞೋಪವೀತ, ಪದಕ ಹಾರ, ಭುಜಬಂಧ, ಪಾದವಲಯ ಕಟಕ ಮುಂತಾದ ಆಭರಣಗಳನ್ನು ನಟರಾಜ ಶಿಲ್ಪದಲ್ಲಿ ಕೆತ್ತಲಾಗಿದೆ.


ಈ ನಟರಾಜ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗಮನಿಸಿದಾಗ ಆಗಮಗಳು ಮತ್ತು ಶಿಲ್ಪಶಾಸ್ತ್ರ ಗ್ರಂಥಗಳ ನಿಯಮವನ್ನು ಅನುಸರಿಸಿ ಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪಿಯು ಶಿಲ್ಪವನ್ನು ಕೆತ್ತುವ ಕಲೆಯನ್ನ ಕರಗತ ಮಾಡಿಕೊಳ್ಳುವುದರ ಜೊತೆಗೆ ನಾಟ್ಯಶಾಸ್ತ್ರದ ಲಕ್ಷಣಗಳನ್ನು ಅಭ್ಯಾಸ ಮಾಡಿಯೇ ಈ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಕೆಲವೊಮ್ಮೆ ಶಿಲ್ಪಿಯು ತನ್ನ ಅಭಿರುಚಿಗೆ ತಕ್ಕಂತೆ ಆಯುಧಗಳಲ್ಲಿ ಬದಲಾವಣೆಯನ್ನು ಮಾಡಿರುತ್ತಾನೆ. ಆದರೆ ಈ ಶಿಲ್ಪದಲ್ಲಿ ಬಹುತೇಕ ಶಿಲ್ಪಶಾಸ್ತ್ರದ ನಿಯಮದಲ್ಲಿ ಪ್ರಮುಖವೆನಿಸುವ ಅಂಶಗಳನ್ನು ನಿರೂಪಿಸಲಾಗಿದೆ. ಈ ದಿಸೆಯಲ್ಲಿ ವಿರೂಪಾಕ್ಷ ದೇವಾಲಯದ ಕಲ್ಯಾಣಮಂಟಪದಲ್ಲಿರುವ ನಟರಾಜ ಶಿಲ್ಪವು ವಿಶೇಷತೆಯಿಂದ ಕೂಡಿದೆ.

ಉಪಸಂಹಾರ


ಒಟ್ಟಾರೆಯಾಗಿ ವಿರೂಪಾಕ್ಷ ದೇವಾಲಯದಲ್ಲಿರುವ ಈ ಆನಂದತಾಂಡವ ನೃತ್ಯ ಶಿಲ್ಪವು ವಿಶಿಷ್ಟತೆಯಿಂದ ಕೂಡಿದೆ. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗಮನಿಸಿದಾಗ ವಿಜಯನಗರದ ಶಿಲ್ಪಿಗಳು ಆಗಮಗಳು ಮತ್ತು ಶಿಲ್ಪಶಾಸ್ತ್ರ ಗ್ರಂಥಗಳ ನಿಯಮವನ್ನು ಅನುಸರಿಸಿದ್ದಾರೆ ಎಂಬುದಕ್ಕೆ ಈ ಶಿಲ್ಪವೇ ಸಾಕ್ಷಿಯಾಗಿದೆ.

ಅಡಿಟಿಪ್ಪಣಿಗಳು


1. ಪಿ.ಬಿ. ದೇಸಾಯಿ, *ಕರ್ನಾಟಕದ ಇತಿಹಾಸ*, ಪು. 48–50.
2. ಟಿ.ಎ. ಗೋಪಿನಾಥರಾವ್, *ಎಲಿಮೆಂಟ್ಸ್ ಆಫ್ ಹಿಂದೂ ಐಕೋನೊಗ್ರಫಿ*, ಸಂಪುಟ 2, ಭಾಗ 1, ಪು. 223–227.
3. ಟಿ.ಎ. ಗೋಪಿನಾಥರಾವ್, *ಪೂರ್ವೋಕ್ತ*, ಪು. 239–235.
4. ಎಸ್.ಕೆ. ರಾಮಚಂದ್ರರಾವ್, *ಮೂರ್ತಿ ಶಿಲ್ಪದ ನೆಲೆ ಹಿನ್ನೆಲೆ*, ಪು. 120.
5. ಎಸ್.ಕೆ. ರಾಮಚಂದ್ರರಾವ್, *ಪೂರ್ವೋಕ್ತ*, ಪು. 122.
6. ಕೆ. ವಸಂತಲಕ್ಷ್ಮೀ, *ಕರ್ನಾಟಕದ ಶೈವ ಶಿಲ್ಪಗಳು*, ಪು. 125–129.
7. ಸಿ. ಶಿವರಾಮಮೂರ್ತಿ, *ಡಾನ್ಸ್ ಇನ್ ಶಿವಾ*, ಪು. 75–81.



ಕಲ್ಯಾಣ ಮಂಟಪ



ಕಲ್ಯಾಣ ಮಂಟಪದ ಸ್ತಂಭಗಳು



ನಟರಾಜ ಶಿಲ್ಪ



ನಟರಾಜ ಶಿಲ್ಪದ ಪ್ರತಿಮಾ ಲಕ್ಷಣಗಳು



ನಟರಾಜ ಶಿಲ್ಪದಲ್ಲಿ ಆಭರಣಗಳು

25. ಅನಂತಶಯನ ದೇವಾಲಯದ ತ್ರೈಪುರುಷ ಶಿಲ್ಪ

ಶ್ರೀಮತಿ ಪದ್ಮಜಾ ದೇಸಾಯಿ

ಪ್ರಸ್ತಾವನೆ

ಹೊಸಪೇಟೆಯ ಹೊರವಲಯದಲ್ಲಿರುವ ಗ್ರಾಮ ಅನಂತಶಯನಗುಡಿ. ಇಲ್ಲಿ ವಿಷ್ಣುವಿಗೆ ಸಂಬಧಿಸಿದ ಅನಂತಶಯನ ದೇವಾಲಯವಿದೆ. ಈ ಗ್ರಾಮವನ್ನು ದೇವಾಲಯದ ಹೆಸರಿನಲ್ಲೆ ಕರೆಯಲಾಗಿದೆ. ಕ್ರಿ.ಶ. 1524ರ ದೇವಾಲಯದ ಶಾಸನವು, ಕೃಷ್ಣದೇವರಾಯನು ತನ್ನ ಮಗ ತಿರುಮಲರಾಯನ ನೆನಪಿಗಾಗಿ ಸಾಲೆ ತಿರುಮಲರಾಯಪುರ ಎಂಬ ಪಟ್ಟಣವನ್ನು ರಚಿಸಿ, ಅಲ್ಲಿ ದೇವಾಲವೊಂದನ್ನು ನಿರ್ಮಿಸಿ ಅನಂತಪದ್ಮನಾಭ ದೇವರನ್ನು ಪ್ರತಿಷ್ಠಾಪಿಸಿದನು ಎಂದು ಹೇಳುತ್ತಿದೆ.[1]

ಪ್ರಸ್ತುತ ಪ್ರಬಂಧ "ಅನಂತಶಯನ ದೇವಾಲಯದಲ್ಲಿರುವ ಅಪರೂಪದ ತ್ರೈಪುರುಷ ಶಿಲ್ಪ"ದ, ಪ್ರತಿಮಾ ಲಕ್ಷಣಗಳನ್ನು ಗುರುತಿಸಿ ಈ ಶಿಲ್ಪವು ತ್ರೈಪುರುಷ ಶಿಲ್ಪವೆಂಬುದನ್ನು ಚರ್ಚಿಸುವ ಉದ್ದೇಶವನ್ನು ಹೊಂದಿದೆ.

ಅನಂತಶಯನ ದೇವಾಲಯ

ಉತ್ತರರಾಭಿಮುಖವಾಗಿರುವ ಅನಂತಶಯನ ದೇವಾಲಯದ ಮಹಾಮಂಟಪದಲ್ಲಿರುವ 56 ಕಂಬಗಳಲ್ಲಿ 21ನೆಯ ಕಂಬದ ಎರಡನೆಯ ಭಾಗದಲ್ಲಿ ಪೂರ್ವ ದಿಕ್ಕಿಗೆ ಈ ತ್ರೈಪುರುಷರ ಉಬ್ಬು ಶಿಲ್ಪವಿದೆ. ಈ ಶಿಲ್ಪವು ಅಪರೂಪದ್ದಾಗಿದೆ. ಸಾಮಾನ್ಯವಾಗಿ ತ್ರೈಪುರುಷರನ್ನು ತ್ರಿಮೂರ್ತಿ (ಬ್ರಹ್ಮ, ವಿಷ್ಣು, ಮತ್ತು ಮಹೇಶ್ವರ) ರೂಪದಲ್ಲಿ ತೋರಿಸಲಾಗುತ್ತದೆ. ಒಂದೇ ಪೀಠದಲ್ಲಿ ಮೂರು ದೇವರುಗಳನ್ನು ಸ್ಥಾಪಿಸಲಾಗಿರುತ್ತದೆ. ಮತ್ತೊಂದು ವಿಧದಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಈ ದೇವರುಗಳಿಗೆ ತ್ರಿಕೂಟ ದೇವಾಲಯವನ್ನು ನಿರ್ಮಿಸಿ ಮೂರು ಗರ್ಭಗೃಹಗಳಲ್ಲಿ ಮೂರು ಮೂರ್ತಿಗಳನ್ನು ಸ್ಥಾಪಿಸಲಾಗುತ್ತದೆ. ಆದರೆ ಈ ಅನಂತಶಯನ ದೇವಾಲಯದಲ್ಲಿರುವ ತ್ರೈಪುರುಷ ಶಿಲ್ಪವು ಉಬ್ಬು ಶಿಲ್ಪಾಗಿರುವುದು ಗಮನಾರ್ಹ. ಹಂಪೆಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿರುವ ಕನಕಗಿರಿಯ ಗೋಪುರದ ದಕ್ಷಿಣ ದಿಕ್ಕಿಗೆ ಇರುವ ಗೋಪುರದ ಮೊದಲನೆಯ ತಲದ ಕೆಳಭಾಗದಲ್ಲಿ ತ್ರೈಪುರುಷ ದೇವರುಗಳ ವಾಹನಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಕ್ರಮವಾಗಿ ಬ್ರಹ್ಮನ ವಾಹನ ಹಂಸವಿದೆ, ವಿಷ್ಣುವಿನ ವಾಹನ ಗರುಡವಿದೆ ಮತ್ತು ಮಹೇಶ್ವರರ ವಾಹನ ನಂದಿ ಇದೆ. ವಿರೂಪಾಕ್ಷ ದೇವಾಲಯದ ಆವರಣದಲ್ಲಿರುವ ಭುವನೇಶ್ವರಿ ದೇವಾಲಯದ ಗರ್ಭಗೃಹದ ಲಲಾಟಫಲಕದ ಮೇಲ್ಭಾಗಲ್ಲಿ ವಾಹನ ಮತ್ತು ಪತ್ನಿ ಸಹಿತವಾಗಿರುವ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಉಬ್ಬು ಶಿಲ್ಪಗಳು ಬಹು ಸುಂದರವಾಗಿ ಕೆತ್ತಲ್ಪಟ್ಟಿವೆ. ನಿಂಬಾಪರದ ಸೌಮ್ಯಸೋಮೇಶ್ವರ ದೇವಾಲಯದ ನವರಂಗದಲ್ಲಿರುವ ಕಂಭದಲ್ಲಿ ತ್ರೈಪುರುಷ ಶಿಲ್ಪವಿದೆ. ಈ ರೀತಿಯ ಹಲವಾರು ಉಬ್ಬು ಶಿಲ್ಪಗಳನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ಹಂಪಿ ಪರಿಸರದಲ್ಲಿ ತ್ರೈಪುರುಷರಿಗಾಗಿ ಸ್ವತಂತ್ರ ದೇವಾಲಯಗಳಿದ್ದುದರ ಕುರುಹುಗಳು ಕಂಡುಬಂದಿಲ್ಲ. ಆದರೆ ಉಬ್ಬು ಶಿಲ್ಪಗಳಿವೆ. ಹಿಂದೂ ದೇವತೆಗಳ ಸಾಲಿನಲ್ಲಿ ಬ್ರಹ್ಮ ಸೃಷ್ಟಿಕರ್ತ, ವಿಷ್ಣು ರಕ್ಷಕ ಮತ್ತು ಶಿವ ಲಯಕರ್ತ. ಈ ಮೂರು ಹಿಂದೂ ದೇವತೆಗಳನ್ನು ಪೂಜೆಗೆ ಒಳಪಡುವ ದೇವತೆಗಳೆಂದು ಪರಿಗಣಿಸಲಾಗಿದೆ.[2]

ತ್ರೈಪುರುಷ ದೇವಾಲಯದ ಪ್ರಾಚೀನತೆ

ಬಾದಾಮಿ ಚಾಲುಕ್ಯರ ಕಾಲದಲ್ಲಿ ಮೊಟ್ಟಮೊದಲ ತ್ರೈಪುರುಷ ದೇವಾಲಯ ಜಂಬುಲಿಂಗೇಶ್ವರ ದೇವಾಲಯವನ್ನು ಕ್ರಿ.ಶ. 699ರಲ್ಲಿ ವಿನಯಾದಿತ್ಯನ ತಾಯಿ ವಿನಯವತಿಯು ನಿರ್ಮಿಸಿದಳು. ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳು

ಇದ್ದು, ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗಾಗಿ ನಿರ್ಮಾಣವಾದ ಪ್ರಾಚೀನವಾದ ತ್ರೈಪುರುಷ ದೇವಾಲಯವಾಗಿದೆ. ಆದರೆ ವಿಜಯನಗರ ಕಾಲದಲ್ಲಿ ತ್ರೈಪುರುಷರಿಗಾಗಿ ದೇವಾಲಯಗಳಿದ್ದ ಕುರುಹುಗಳು ಕಂಡುಬಂದಿಲ್ಲ. ಆದರೆ ಇಲ್ಲಿರುವ ಉಬ್ಬು ಶಿಲ್ಪಗಳಿಂದ ತ್ರೈಪುರುಷರ ದೇವಾಲಯ ಮತ್ತು ತ್ರೈಪುರುಷರ ಆರಾಧನೆ ಈ ಪರಿಸರದಲ್ಲಿ ಇದ್ದಿರಬೇಕು ಎಂದು ತಿಳಿಯುತ್ತದೆ.

ತ್ರೈಪುರುಷ ಶಿಲ್ಪದ ಪ್ರತಿಮಾ ಲಕ್ಷಣಗಳು

ಅನಂತಶಯನ ದೇವಾಲಯದಲ್ಲಿರುವ ಮುಖಮಂಟಪದ ಕಂಬಗಳಲ್ಲಿರುವ ಈ ತ್ರೈಪುರುಷ ಶಿಲ್ಪದ ಮೂರು ಮುಖಗಳು ಸ್ಪಷ್ಟವಾಗಿವೆ. ಮತ್ತು ಈ ಶಿಲ್ಪದ ಮೂರು ಮುಖಗಳು ಗಡ್ಡಧಾರಿಯಾಗಿರುವುದು ಗೋಚರಿಸುತ್ತದೆ. ಬ್ರಹ್ಮ, ವಿಷ್ಣು ಮತ್ತು ಶಿವ ಇವರ ಮೂರು ತಲೆಗಳ ಮೇಲೆ ಕಿರೀಟಮುಕುಟಗಳಿವೆ. ಶಿಲ್ಪವು ಪದ್ಮಾಸನ ಭಂಗಿಯಲ್ಲಿದ್ದು, ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಬಲಗೈಯಲ್ಲಿ ಪಾಶ (ಇದು ಶಿವನ ಮುಖದ ಭಾಗ), ಮೇಲಿನ ಎಡಗೈಯಲ್ಲಿ ಶಂಖವನ್ನು ಹಿಡಿದಿದೆ (ಇದು ವಿಷ್ಣುವಿನ ಮುಖದ ಭಾಗ). ಮುಂದಿನ ಎರಡು ಕೈಗಳ ಹಸ್ತಗಳು ಒಂದರ ಮೇಲೆ ಒಂದಿದ್ದು ಧ್ಯಾನ ಮುದ್ರೆಯಲ್ಲಿವೆ (ಇದು ಬ್ರಹ್ಮನ ಮುಖದ ಭಾಗ). ಬ್ರಹ್ಮನ ಕೊರಳಲ್ಲಿ ಕಂಠ ಹಾರಗಳು, ಕೊರಳ ಹಾರಗಳು, ಯಜ್ಞೋಪವೀತ, ಬಾಹುಬಂಧಗಳಿವೆ, ಕೆಯೂರ, ಕೈಗಡಗಳು ಕಾಲುಗಡಗಳು, ಇವೆ ಸೊಂಟದ ಕೆಳ ಭಾಗದಿಂದ ಇರುವ ಧೋತಿಯ ನೆರಿಗೆಗಳು ಸ್ಪಷ್ಟವಾಗಿ ಕೆತ್ತಲ್ಪಟ್ಟಿವೆ. ಪದ್ಮಾಸದ ಮೇಲೆ ಕುಳಿತ ಈ ಶಿಲ್ಪವು ವಿಶೇಷವಾಗಿದೆ. ತ್ರೈಪುರುಷನು ಹಿಡಿದಿರುವ ಆಯುಧಗಳಲ್ಲಿ ವಕ್ರ ದಂಡ ಇದು ಶಾಸ್ತನು ಹಿಡಿದಿರುವ ಆಯುಧವಾಗಿದೆ. ಮತ್ತೊಂದು ವಿಷ್ಣುವಿನ ಆಯುಧವಾದ ಶಂಖವಾಗಿದೆ. ಇಂಥಹ ಆಯುಧಗಳನ್ನು ಹಿಡಿದಿರುವ ಈ ಶಿಲ್ಪವು ವಿಶೇಷವಾಗಿದೆ.[3]

ಬ್ರಹ್ಮನನ್ನು ಪೌರಾಣಿಕವಾಗಿ ತೋರಿಸುವ ಸಂದರ್ಭದಲ್ಲಿ ಶಿವನ ತ್ರಿಪುರಾಂತಕ ಕಥೆಯಲ್ಲಿ ಲಿಂಗೋದ್ಭವ ಮೂರ್ತಿಯಲ್ಲಿ ತೋರಿಸಲಾಗಿರುತ್ತದೆ. ವೈಷ್ಣವ ಶಿಲ್ಪದ ಪ್ರತಿಮಾ ಲಕ್ಷಣಗಳಲ್ಲಿ ರಂಗನಾಥನ ಶಿಲ್ಪದ ನಾಭಿಯಿಂದ ಹೊರಬಂದ ಬ್ರಹ್ಮನ ಶಿಲ್ಪವನ್ನು ತೋರಿಸಲಾಗಿರುತ್ತದೆ. ಹಂಪಿ ಪರಿಸರದಲ್ಲಿರುವ ರಂಗನಾಥನ ಶಿಲ್ಪಗಳಲ್ಲಿ ನಾಭಿ ಬ್ರಹ್ಮನ್ನು ತೋರಿಸಲಾಗಿದೆ. ಆದರೆ ಈ ಶಿಲ್ಪದಲ್ಲಿ ಬ್ರಹ್ಮನ ಶಿಲ್ಪದ ಸಂಪೂರ್ಣ ಭಾಗ ಕಾಣಿಸುತ್ತದೆ. ಬ್ರಹ್ಮನ ತಲೆ ಭಾಗ ಪೂರ್ವಕ್ಕೆ, ದಕ್ಷಿಣಕ್ಕೆ ಶಿವನ ತಲೆ ಭಾಗ ಮತ್ತು ಉತ್ತರಕ್ಕೆ ವಿಷ್ಣುವಿನ ತಲೆ ಭಾಗವಿದೆ. ಈ ರೀತಿಯಾಗಿ ತ್ರೈಪುರುಷರ ಶಿಲ್ಪವನ್ನು ಕೆತ್ತಿರುವುದು ವಿಜಯನಗರದ ಶಿಲ್ಪಿಯ ಕೈಚಳಕವಾಗಿದೆ.

ಒಟ್ಟಾರೆಯಾಗಿ ಹಂಪಿ ಪರಿಸರದಲ್ಲಿ ತ್ರೈಪುರುಷನಿಗಾಗಿ ಸ್ವತಂತ್ರ ದೇವಾಲಯಗಳು ಇರದಿದ್ದರೂ ಉಬ್ಬು ಶಿಲ್ಪಗಳಿರುವುದು ದಿಟವಾದ ಸಂಗತಿ ಎಂಬುವುದಕ್ಕೆ ಈ ಶಿಲ್ಪವೇ ಸಾಕ್ಷಿಯಾಗಿದೆ. ಇಂಥಹ ದೇವಾಲಯಗಳ ನಿರ್ಮಾಣ ಶಿಲ್ಪಗಳ ರಚನೆಯು ಅಂದಿನ ಧಾರ್ಮಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಈ ಮೂರು ಹಿಂದೂ ದೇವತೆಗಳ ಸ್ಥಾಪನೆಯು ಸರ್ವಧರ್ಮದ ಸಮನ್ವಯದ ಸಂಕೇತವಾಗಿದೆ.

ಅಡಿಟಿಪ್ಪಣಿಗಳು

1. ಸಿ. ಮಹದೇವ, ಮಾಧವ ಪೆರಾಜೆ, ಸುಬ್ಬಣ್ಣ ರೈ, *ಹೊಸಪೇಟೆ ತಾಲೂಕು ದರ್ಶನ*, ಪು. 42–45.
2. ಟಿ.ಎ. ಗೋಪಿನಾಥರಾವ್, *ಎಲಿಮೆಂಟ್ಸ ಆಫ್ ಹಿಂದೂ ಐಕೋನೋಗ್ರಫಿ*, ಭಾಗ–2, ಪು. 157–160.
3. ಎಸ್.ಕೆ. ರಾಮಚಂದ್ರರಾವ್, *ಮೂರ್ತಿ ಶಿಲ್ಪದ ಹಿನ್ನೆಲೆ*, ಪು. 56–62.



ಅನಂತಶಯನ ದೇವಾಲಯ



ತ್ರೈಪುರುಷ ಶಿಲ್ಪದ ಪ್ರತಿಮಾ ಲಕ್ಷಣಗಳು

26. ವಿಜಯನಗರ ದೊರೆಗಳು ಮತ್ತು ಶಿವಗಂಗಾ ಕ್ಷೇತ್ರ

ಡಾ. ಬಿ.ನಂಜುಂಡಸ್ವಾಮಿ

ಕನ್ನಡನಾಡಿನ ಇತಿಹಾಸದ ಬೆಳವಣಿಗೆಗೆ ವಿಶೇಷ ಕೊಡಗೆಯನ್ನು ಕೊಟ್ಟವರು ವಿಜಯನಗರದ ದೊರೆಗಳು. ದಕ್ಷಿಣಕಾಶಿ ಎಂದು ಪ್ರಸಿದ್ಧವಾದ ಶಿವಗಂಗಾ ಕ್ಷೇತ್ರದಲ್ಲಿ ವಿಜಯನಗರದ ಅರಸು ಮನೆತನಕ್ಕೆ ಸಂಬಂಧಪಟ್ಟ ನಾಲ್ಕು ಪ್ರಮುಖ ಶಾಸನಗಳನ್ನು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

74

ಶಿವಗಂಗೆ ಗ್ರಾಮದಲ್ಲಿ ಮಠದ ಬಾಗಿಲಲ್ಲಿ ಪೂರ್ವ ಕಡೆ ಕಂಭದ ಮೇಲೆ

1. ಶುಭಮಸ್ತು ಸ್ವಸ್ತಿಶ್ರೀವಿಜೆಯಾ
2. ಭ್ಯುದಯ ಶಾಲಿವಾಹನಶಕ
3. 1650ನೆಯ ಸರ್ವಧಾರಿಸಂವ
4. ಚ್ಚರದ ಕಾರ್ತಿಕ ಶು 10 ಗುರುವಾ
5. ರದಲು ರಾಜಾಧಿರಾಜರಾಜಪರ
6. ಮೇಶ್ವರಕೃಷ್ಣರಾಯಮಹಾರಾಯನ
7. ಮನೆಯ ಕುದುರೆ ಚಾಕಲಬೋವನ
8. ಮಗ ಚಂನಣನು. . . . . .ಗಂ
9. ಗಾ[ಧ]ರದೇವರ ಬಿಡೆ
10. ಉ. . . . .

E.C., IXರಲ್ಲಿ 74ನೇ ಶಾಸನವಾಗಿ ಪ್ರಕಟವಾದಾಗ ಈ ಶಾಸನವನ್ನು ಓದುವುದರಲ್ಲೇ ತಪ್ಪಾಗಿರುವುದನ್ನು ಗಮನಿಸಿ ಶಿವಗಂಗೆ ಸಾಹುಕಾರ ರೇವಣ್ಣನವರು ಸರ್ಕಾರದ ಶಾಸನ ಇಲಾಖೆ ಜೊತೆ ಪತ್ರವ್ಯವಹಾರ ಮಾಡಿರುವುದನ್ನು ನಾನು ನೋಡಿದ್ದೆ. ಆ ನಂತರ ಶಾಸನವನ್ನು ಇಲಾಖೆಯವರು ಮತ್ತೆ ಮರು ಓದಿಗೆ ಒಳಪಟ್ಟು ಪ್ರಕಟಿಸಿದರು. ಇಲಾಖೆಯಿಂದ ಶಿವಗಂಗೆ ಸಾಹುಕಾರ ರೇವಣ್ಣನವರಿಗೆ ಬಂದ ಅಧಿಕೃತ ಶಾಸನದ ಪಾಠದ ಪ್ರತಿ ಮತ್ತು ಪತ್ರವನ್ನು ಅವರ ಮೊಮ್ಮಗ ಡಾ. ಸಿದ್ಧಲಿಂಗಪ್ಪನವರ ಸಂಗ್ರಹದಲ್ಲಿ ಇತ್ತು. ಈಗ ಅವರು ದಿವಂಗತರಾಗಿದ್ದಾರೆ.

ಪರಿಷ್ಕೃತ ಶಾಸನ ಪಾಠ

1. ಶುಭಮಸ್ತು ಸ್ವಸ್ತಿಶ್ರೀ ವಿಜೆಯಾ
2. ಭ್ಯುದಯಶಾಲಿವಾಹನಶಕ
3. 1450ನೆಯ ಸರ್ವಧಾರಿಸಂವ
4. ಚ್ಚರದ ಕಾರ್ತಿಕ ಶು 10 ಗುರುವಾರ
5. ರದಲು ರಾಜಾಧಿರಾಜಪರ
6. ಮೇಶ್ವರಕುಷ್ಣರಾಯಮಹಾರಾಯನ
7. ಮನೆಯ ಕುದುರೆಬಹರಿಚನಮ
8. ಲಿಸಟಿರಮಗ ಚಂನಣಸಟರು ಗಂ
9. ಗಾಧರದೇವರ ಮಜನದ. . . . ಕಿದ
10. ವಾಗಿ. . . .ಚಂನಂಣ. . .ಕೊ
11. ಲೆಗೋಪುರ ವಿಜಯಾಪುರದರಾ
12. ಚಂದ್ರಪಂಡಿತರಮಗ ಚಂದರ್ಸರ ಕಾಲ

ಕರ್ನಾಟಕರಾಜ್ಯ ರಮಾರಮಣ ವಿಜಯನಗರ ಸಾಮ್ರಾಜ್ಯದ ಅಪ್ರತಿಮವೀರ ಪ್ರಜಾಸೇವಾ ಕಿಂಕರನಾದ ಶ್ರೀಕೃಷ್ಣದೇವರಾಯ ಮಹಾರಾಯನ (1509–1529) ಕಾಲಮಾನದ ಈ ಶಾಸನ ಅಗಸ್ತ್ಯತೀರ್ಥ ದ್ವಾರದ ಹತ್ತಿರ ಇದ್ದ ರಾಯಗೋಪುರದ ಕಂಭದ ಮೇಲೆ ಕೆತ್ತಲ್ಪಟ್ಟಿತ್ತು. ಅನ್ಯ ಕಾರಣ ನಿಮಿತ್ತ ಶಿವಗಂಗಾ ಶೃಂಗೇರಿ ಮಠದವರು ಅಥವಾ ಶಿವಗಂಗಾ ಶ್ರೀಮಠದವರು ಈ ಗೋಪುರವನ್ನು ಕೆಡವಿಸಿದರು. ಲಿಂ॥ ಸಾಹುಕಾರ್ ರೇವಣ್ಣನವರಿಗೆ ಈ ಶಾಸನದ

ಮಹತ್ತ್ವ ತಿಳಿದಿದ್ದರಿಂದ ಸರ್ಕಾರದ ಕಡೆಯಿಂದ ಕಂಭಗಳನ್ನು ಅಮಾನತ್ತಿನಲ್ಲಿ ಇಡಿಸಿದರು. ಈಗಲೂ ಈ ಶಾಸನ ಇರುವ ಕಂಬ ಅಗಸ್ತೇಶ್ವರ ತೀರ್ಥದ ದ್ವಾರದಲ್ಲಿ ಇದೆ. ಇತ್ತೀಚೆಗೆ ಅಲ್ಲಿಂದ ತೆಗೆದು ಮೂಲೆಯಲ್ಲಿ ಇಟ್ಟಿದ್ದಾರೆ. ಈ ವಿಷಯ ತಿಳಿಯದ ಜನ ಶಾಸನವನ್ನು ಎಷ್ಟು ಹುಡುಕಿದರೂ ಲಭ್ಯವಾಗುವುದಿಲ್ಲ.

ಈ ಶಾಸನದಿಂದ ತಿಳಿದುಬರುವುದು ಏನೆಂದರೆ ಶಾಲಿವಾಹನ ಶಕ 1450ನೆಯ ಸರ್ವಧಾರಿ ಸಂವತ್ಸರದ ಕಾರ್ತಿಕ ಶು. 10 ಗುರುವಾರದ ದಿನ ರಾಜಾಧಿರಾಜ ರಾಜಪರಮೇಶ್ವರ ಕೃಷ್ಣರಾಯಮಹಾರಾಯನ ಮನೆಯ ಕುದುರೆ ಬಹರಿ ಚೆನ್ನಮಲ್ಲಸೆಟ್ಟಿಯ ಮಗ ಚಂನಣ್ಣಸೆಟ್ಟಿಯು ಗಂಗಾಧರದೇವರ ಮಜ್ಜನದ ಕೊಳ್ಳಕ್ಕೆ ಕಟ್ಟಿಸಿದ ಕೋಲೆಗೋಪುರ. ಈ ಗೋಪುರದ ನಿರ್ಮಾಣಕ್ಕೆ ಮೇಲು ಉಸ್ತವಾರಿ ವಿಜಯಪುರದ ರಾ[ಮ]ಚಂದ್ರಪಂಡಿತರ ಮಗ ಚಂದರ್ರಸ.

ಇಲ್ಲಿ ಉಲ್ಲೇಖವಾಗಿರುವ ಚನ್ನಮಲ್ಲಸೆಟ್ಟರ ಮತ್ತು ಮಗ ಚೆನ್ನಣ್ಣಸೆಟ್ಟರು ಇಂದಿಗೂ ಶಿವಗಂಗೆಯಲ್ಲಿ ಇರುವ ಶಿವಗಂಗೆ ಪೇಟೆಮನೆ ಶೆಟ್ಟರ ವಂಶಸ್ಥರೇ ಇರಬೇಕು. ಈ ಶಾಸನದ ಕಾಲ 22–9–1528ರ ಕಾಲಮಾನಕ್ಕೆ ಹೊಂದಿಕೊಳ್ಳುತ್ತದೆ.

ಗಂಗಾಧರೇಶ್ವರ ದೇವಸ್ಥಾನದ ಮಾಳಿಗೆ ಗುಂಡಿನ ದಕ್ಷಿಣಾಭಿಮುಖದ ಶಾಸನ
E.C.IX ಅನುಬಂಧ ನೆಲಮಂಗಲ 116

1. ಶುಭಮಸ್ತು ॥ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಷಕವರ್ಷ
2. 1450ನೆಯ ಸರ್ವಧಾರಿಸಂವತ್ಸರದಚಯಿತ್ರ ಬ 1ಲು ಶ್ರೀಕೃಷ್ಣರಾಯನಕಾ
3. ಲದಲಿ ಚೆಂನಮಲಿಸೆಟಿಯರ ಮಕ್ಕಳು ಚಂನಣಸೆಟಿಯರು ಮಾಡಿ
4. ಸಿದ ಪಲ್ಲಕಿಯಪ್ರದಕ್ಷಿಣ ವಿಜಯಾಪುರದ ರಾಮಚಂದ್ರಪಂಡಿತರ
5. ಮಕಳುಚಂದರಸ ಪಂಡಿತರ ಪಾರುಪತ್ಯದಲ್ಲಿ ಶ್ರೀಶ್ರೀಶ್ರೀ

ಕ್ರಿ.ಶ. 1529ರ ಕಾಲಮಾನದ ಈ ಶಾಸನ ಕರ್ನಾಟಕರಾಜ್ಯರಮಾರಮಣ ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ಚೈತ್ರ ಬಹುಳ ಚನ್ನಮಲ್ಲಶೆಟ್ಟರ ಮಕ್ಕಳು ಚೆನ್ನಶೆಟ್ಟರು ಮಾಡಿಸಿದ ಪಲ್ಲಕ್ಕಿ ಮುಂದಿನ ಪದ ಪ್ರದಕ್ಷಿಣೆ ಎಂದಿದೆ. ಅದು [ಗಿರಿ] ಪ್ರದಕ್ಷಿಣೆ. ಗಂಗಾಧರೇಶ್ವರಸ್ವಾಮಿಗೆ ಪ್ರತಿವರ್ಷ ಗಿರಿಪ್ರದಕ್ಷಿಣೆ ಸೇವೆ ಸಲ್ಲುತ್ತದೆ. ಈ ಗಿರಿಪ್ರದಕ್ಷಿಣೆ ಸೇವೆಗೆ ಪಲ್ಲಕ್ಕಿಯನ್ನು ಸಿದ್ಧಪಡಿಸಿದವರು ವಿಜಯಾಪುರದ ರಾಮಚಂದ್ರಪಂಡಿತರ ಮಕ್ಕಳು. ಚಂದರಸಪಂಡಿತರ ಪಾರುಪತ್ಯದಲ್ಲಿ ಅರ್ಥಾತ್ ಮೇಲ್ವಿಚಾರಣೆಯಲ್ಲಿ ಪಲ್ಲಕ್ಕಿ ಸಿದ್ಧವಾಗಿದೆ. ಈಗ ನಮಗೆ ನೋಡಲು ಪಲ್ಲಕ್ಕಿ ಉಳಿದಿಲ್ಲ. ಈ ಪಲ್ಲಕ್ಕಿಯನ್ನು ಮಾಡಿಸಿದವರು ಶಿವಗಂಗೆಯಲ್ಲಿ ಇಂದೂ ಇರುವ ಪೇಟೆಮನೆಯ ಶೆಟ್ಟರ ವಂಶಸ್ಥರೇ ಇರಬೇಕು. ಈ ಶಾಸನದ ಕಾಲ ಕ್ರಿ.ಶ. 1529 ಮಾರ್ಚ್. ಈ ಮನೆತನದ ಇನ್ನೂ ಸ್ವಲ್ಪ ಮಾಹಿತಿ ಕಂಬಾಳ ಸಿದ್ಧಗಂಗಯ್ಯನವರ ಸಂಗ್ರಹದಲ್ಲಿರುವ ತಾಮ್ರಶಾಸನದಲ್ಲಿ ಈ ರೀತಿ ಇದೆ. ಬೆಟ್ಟದಕೋಟೆ ಪ್ರಭು ಚೆಂನರಾಜಯ್ಯನವರ ಪೌತ್ರರಾದ ಬಸವರಾಜೈಯ್ಯನವರ ಪುತ್ರರಾದ ಚಿಕ್ಕದೇವರಾಯದುರ್ಗದ ಚೆಂನರಾಜಯ್ಯನವರ ಸಹೋದರರಾದಂತ ಸಿದ್ಧರಾಜೈಯ್ಯನವರು ಶಿವಗಂಗೆ ಸ್ಥಳದ ಹೊಂನಶೆಟ್ಟರಿಂದಾ ದಿನ 1ಕ್ಕೆ ಬಿಲ್ವಪತ್ರೆ ದಳ 108 ಗಂಗಾಧರಶೆಟ್ಟರಿಂದ ತುಂಬೆ ಹೂಉ ಅಳತೆಯಲ್ಲಿ ಸೇರು 1 ಅರ್ಪಿಸುವಂತೆ ಇಡುಗಂಟನ್ನು ಶಾಲೀವಾಹನ ಶಕ 1629ನೇ ಸರ್ವಜಿತ್ ಸಂವತ್ಸರದ ಆಶ್ವೀಜ ಶುದ್ಧ 1ರಲು ಕೊಟ್ಟ ವಿಷಯ ತಾಮ್ರಶಾಸನದಲ್ಲಿ ಲಿಖಿತವಾಗಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಶಿವಗಂಗೆ ಶೆಟ್ಟರ ವಂಶಸ್ಥರು ಮೇಲಿನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ವಂಶಸ್ಥರು ಇಬ್ಬರೂ ಒಂದೇ ವಂಶದವರಾಗಿರಬಹುದು. ಹೆಚ್ಚಿನ ದಾಖಲೆಗಳಿಂದ ಈ ವಿಷಯವನ್ನು ಸ್ಪಷ್ಟಪಡಿಸಬೇಕಾಗುತ್ತದೆ.

83

ಶಿವಗಂಗೆ ಗಂಗಾಧರೇಶ್ವರ ದೇವಾಲಯದ ನಂದಿಮಂಟಪದ ಕಂಭದಲ್ಲಿ

1. ಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರುಷ 1454 ನೆಯನಂದ
2. ನಸಂವತ್ಸರದಪ್ರತಮಭಾದ್ರಪದ 30 ಸೂರ್ಯ್ಯೋಪರಾಗಪುಣ್ಯಕಾಲದಲ್ಲುಶ್ರೀ
3. ಮಂನ್ಮಹಾರಾಜಾಧಿರಾಹರಾಜಪರಮೇಶ್ವರಕಠಾರಿಸಾಲ್ವಶ್ರೀವೀರಪ್ರತಾಪಶ್ರೀ
4. ಅಚ್ಯುತರಾಯಮಹಾರಾಯಪೃಥ್ವೀರಾಜ್ಯಂಗೆಯಿಉತ್ತಯಿಹಕಾಳದಲ್ಲು
5. ಶ್ರೀದಕ್ಷಿಣಾಕಾಶೀನಿವಾಸಶ್ರೀಗಂಗಾಧರದೇವರಅಭಿಷೇಕಪೂಜೆನಯಿವೇ
6. ದ್ಯದೀಪಾರಾಧನೆಮೊದಲಾದಅಮೃತಪಡಿಗೆಸಾರ್ವ್ವಕಾಲದಲ್ಲುಸಲ್ಲಬೇಕೂಎಂ
7. ದುಅವರಕಟ್ಟಿಗೆಯಕಾಮಣನಾಯ್ಕರೂಶ್ರೀಅಚ್ಯುತರಾಯರಿಗೆಧರ್ಮ್ಮವಾ
8. ಗಬೇಕೂಎಂದುಶ್ರೀಪತಿಹಳ್ಳಿಯಂಬಗ್ರಾಮವನುಪುರವಾಗಿ ಕೊಟ್ಟು
9. ಆಗ್ರಾಮಕ್ಕೆಸಲ್ಲುವಚತ್ತಸೀಮೆವೊಳಗಣಸರ್ವ್ವಸ್ವಾಂಮ್ಯವನುಸಹಿರಣ್ಯೋದ
10. ಕಧಾರಾಪೂರ್ವ್ವಕದಿಂಶ್ರೀಗಂಗಾಧರದೇವರಿಗೆಸಮರ್ಪ್ಪಣೆಮಾಡಿದೆ
11. ಉಯಿಧರ್ಮ್ಮಕ್ಕೆಅವನಾನೊಬ್ಬನುಅಳುಪಿದರೆವಾರಣಾಸಿಯಗಂಗೆಯ
12. ತಡಿಯಲಿಗೋವಕೊಂದಪಾಪಕ್ಕೆಹೋಹರುಗುರುಹತಿಯಮಾಡಿದ
13. ದೋಶಕ್ಕೆಹೋಹರು

ಶಿವಗಂಗೆ ಗಂಗಾಧರೇಶ್ವರನ ಗುಹಾಂತರ ದೇವಾಲಯದ ದ್ವಾರದ ನಂದಿಮಂಟಪದಲ್ಲಿ ಇರುವ ಈ ಶಿಲಾಶಾಸನ ಪ್ರತಿನಿತ್ಯ ಶಿವಗಂಗೆ ಗಂಗಾಧರೇಶ್ವರನ ಅಭಿಷೇಕ ಮತ್ತು ಪೂಜೆಗೆ ಶ್ರೀಮನ್ ಮಹಾರಾಜಧಿರಾಜ ರಾಜಪರಮೇಶ್ವರ ಕಠಾರಿ ಸಾಳ್ವ ಶ್ರೀ ವೀರಪ್ರತಾಪ ಶ್ರೀ ಅಚ್ಯುತರಾಯ ಮಹಾರಾಯ ಪೃಥ್ವೀ ರಾಜ್ಯಭಾರ ಮಾಡುತ್ತಾ ಇರುವ ಕಾಲದಲ್ಲು ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಕ ವರುಷ 1454ನೆಯ ನಂದನಾಮ ಸಂವತ್ಸರದ ಪ್ರಥಮ ಭಾದ್ರಪದ ಬಹುಳ 30 ಸೂರ್ಯ್ಯೋಪರಾಗ ಪುಣ್ಯಕಾಲದಲ್ಲು ಶ್ರೀದಕ್ಷಿಣಕಾಶೀ ನಿವಾಸ ಶ್ರೀಗಂಗಾಧರದೇವರ ಅಭಿಷೇಕ ಪೂಜೆ ನೈವೇದ್ಯ ದೀಪಾರಾಧನೆ ಮೊದಲಾದ ಅಮೃತಪಡಿಗೆ ಸರ್ವಕಾಲದಲ್ಲು ಸಲ್ಲಬೇಕು ಎಂದು ಅವರ ಕಟ್ಟಿಗೆಯ ಕಾಮಣ್ಣನಾಯ್ಕ, ಶ್ರೀ ಅಚ್ಯುತರಾಯರಿಗೆ ಧರ್ಮವಾಗಬೇಕು ಎಂದು ಶ್ರೀಪತಿಹಳ್ಳಿಯೆಂಬ ಗ್ರಾಮವನ್ನು ಪುರವಾಗಿ ಕೊಟ್ಟು ಆ ಗ್ರಾಮಕ್ಕೆ ಸಲ್ಲುವ ಚತುಸೀಮೆಯೊಳಗಣ ಸರ್ವಸ್ವಾಮ್ಯವನ್ನು ಸಹಿರಣ್ಯೋದಕವಾಗಿ ಶ್ರೀಗಂಗಾಧರೇಶ್ವನಿಗೆ ಸಮರ್ಪಣೆ ಮಾಡಿದ್ದಾನೆ. ಯಾರಾದರೂ ಈ ಧರ್ಮಕ್ಕೆ ತೊಂದರೆ ಮಾಡಿದರೆ ವಾರಣಾಸಿಯ ಗಂಗೆಯ ದಡದಲ್ಲಿ ಗೋಹತ್ಯೆ ಮಾಡಿದ ಪಾಪಕ್ಕೆ ಗುರಿಯಾಗುತ್ತಾರೆ. ಅದೇ ರೀತಿ ಆ ಗಂಗಾನದಿ ದಡದಲ್ಲಿ ಗುರುಹತ್ಯೆ ಮಾಡಿದ ದ್ರೋಹಕ್ಕೆ ಗುರಿಯಾಗುತ್ತಾರೆ ಎಂದು ಎಚ್ಚರಿಸಿದ್ದಾನೆ. ಈ ಶಾಸನದ ಕಾಲ ಕ್ರಿ.ಶ. 30–8–1532. ಈ ಶಾಸನದಲ್ಲಿ ಪುರ ಶಬ್ದ ಪ್ರಯೋಗವಾಗಿದೆ. ಅಂದಿನ ದಿನಮಾನದಲ್ಲಿ ಗಂಗಾಧರೇಶ್ವರನ ಪೂಜಾದಿಗಳನ್ನು ವೀರಶೈವ ಮತದವರು ಮಾಡುತ್ತಾ ಇದ್ದಿರಬೇಕು. ಹೆಚ್ಚಿನ ವಿವರ ಲಭ್ಯವಿಲ್ಲ.

81

ಗಂಗಾಧರೇಶ್ವರ ದೇವಾಲಯದ ಮಹಾದ್ವಾರದ ಪೂರ್ವಕ್ಕೆ ನೆಟ್ಟಿರುವ ಕಲ್ಲು

ಪ್ರಮಾಣ 4'6"x2'

1. ಶುಭಮಸ್ತುಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರು
2. ಷ 1466ನೆಯಕ್ರೋಧಿಸಂವತ್ಸರದಮಾಘಬ14ಆ॥ಶ್ರೀಮ
3. ಹಾರಾಜಾಧಿರಾಜಪರೇಶ್ವರಶ್ರೀವೀರಪ್ರತಾಪಶ್ರೀವೀರಸದಾಸಿವದೇವ
4. ಮಹಾರಾಯರುಪ್ರಥ್ವೀಸಾಂಬ್ರಾಜ್ಯಂಗೈಉತ್ತಿರಲು
5. ಭಂಡಿಯಬಸವಣನಾಯಕರಸರಮಗಸದಾಶಿವ
6. ದೇವಮಹಾರಾಯರುಅಮರನಾಯಕತನಕೆಪಾಲಿಸಿದಮ
7. ಲೆನಾಡಗೂಳೂರುಮಂಣೆಯಸೀಮೆಯಲಿಶಿವಗಂಗೆಯ
8. ಗಂಗಾಧರದೇವರಿಗೆಸಲುವಪುರಗಳುಹೊಂನಂಮನಸಿ
9. ಹ್ಯಾಸನಮಹತ್ತಿಗೆಸಲುವಪುರಗಳುಮೇಲಣಗವಿ
10. ಸಿಂಹ್ವಾಸನಕೆಸಲುವಪುರಗಳುಚಿಂನದಕಥೆಯ
11. ಮಠಕೆಸಲುವಪುರಗಳುಧರ್ಮದಗವಿಯಪುರನಬಯ
12. ಲಬಸವನಗವಿಯಪುರಕಂಬಾಳಮುರುಳಸಿದ್ಧಯದೇವ
13. ರಪುರಯಿವರೆಲ್ಲರಿಗೆಸಲುವಚೆಲುಪಾನಕೊಡಗಿಗಳು
14. ಯಿವೆಲ್ಲವಕೂಜೋಡಿಬೇಡಿಗಿಯೆಲ್ಲವನೂಸರ್ವ್ವಮಾ
15. ಂನ್ಯವಾಗಿಬಿಟ್ಟುಸದಾಶಿವರಾಯರಿಗೆಪುಣ್ಯವಾಗ
16. (ವಾಗ)ಬೇಕೆಂದುಸಿವರಾತ್ರಿಪುಣ್ಯಕಾಲದಲುಕೊರ
17. ಮರಮರುಗನಾಥಪ್ರತಿ. . .ಸೆಟಿಯರುರಾಮೆಯ
18. ಗಲುಡರುಹಲಗೆಸೆಟಿಯರನುಮತದಿಂದಭಂಡಿಯ
19. ಬಸವಂಣನಾಯ್ಕರುಸಹಿರಣ್ಯೋದಕದಾನಧಾರಾಪೂ
20. ರ್ವ್ವಕವಾಗಿಸಮರ್ಪಿಸ್ತಶಿಲಾಶಾಸನಇಧರ್ಮಕೆಅಳುಪಿದವರು
21. ಗಂಗೆಯತೀರದಲಿಕವಿಲೆಯಕೊಂದಪಾತಕಕೆಹೋಹರು
22. ವಾರಣಾಸಿಯಲಿಮಾತ್ರುಗಮನಮಾಡಿದಪಾಪಕೆಹೋ
23. ಹರು ದಾನಪಾಲನಯೋರ್ಮಧ್ಯೇ । ದಾನಾಛ್ರೇಯೋನುಪಾಲ
24. ನಂದಾನಾಸ್ವರ್ಗಮವಾಪ್ನೋತಿಪಾಲನಾದಚ್ಯುತಂಪದಂಶ್ರೀ

ಶಿವಗಂಗೆ ಗಂಗಾಧರೇಶ್ವರ ಮತ್ತು ಹೊನ್ನಾದೇವಿ ದೇವಾಲಯದ ಮಹಾದ್ವಾರದ ಪೂರ್ವಕ್ಕೆ ನೆಟ್ಟಿರುವ ಶಿಲಾಶಾಸನದ ಪ್ರಾರಂಭದಲ್ಲಿ ಕಾಲದ ಉಲ್ಲೇಖವಾಗಿದೆ. ಕ್ರಿ.ಶ. 1544ರ ಕಾಲಮಾನದ ಈ ಶಾಸನದಲ್ಲಿ ಶಿವಗಂಗೆ ಪರಿಸರದಲ್ಲಿ ಇರುವ ಪ್ರಸಿದ್ಧ ವೀರಶೈವಮಠಗಳ ಉಲ್ಲೇಖವನ್ನು ಮಾಡಲಾಗಿದೆ. ಈ ಹಿಂದೆ ಶಿವಗಂಗೆ ಗಂಗಾಧರೇಶ್ವರ ಸನ್ನಿಧಿಯಲ್ಲಿ ಗಂಗಾಧರೇಶ್ವರ ಮಹತ್ತಿನ ಸಿಂಹಾಸನ ಮಠ ಇತ್ತು. ಇದೇ ಶಾಸನದಲ್ಲಿ ಹೇಳಿರುವ 'ಹೊಂನಮನ ಸಿಹ್ವಾಸ ಮಹತ್ತಿಗೆ' ಇಂದು ಶಿವಗಂಗೆಯಲ್ಲಿ ಹೊನ್ನಾದೇವಿ ಗುಹಾಂತರ ದೇವಾಲಯಕ್ಕೆ ಹೊಂದಿಕೊಂಡು ಇರುವ ಹೊನ್ನಮ್ಮಗವಿ ಮಠ. ಈ ಮಠದವರು ಹೊನ್ನಾದೇವಿ ಜಾತ್ರೆಯಲ್ಲಿ ಒಕ್ಕಳಕ್ಕಿ ಆರತಿ–ಮಡೆ ವಿಶೇಷವಾಗಿ ನಡೆಸುತ್ತಾರೆ. ಇದೇ ಶಾಸನದಲ್ಲಿ ಮೇಲಣಗವಿಯ ಸಿಂಹ್ವಾಸನ ಉಲ್ಲೇಖವಿದ್ದು ಶಿವಗಂಗೆ ಬೆಟ್ಟದ ಮಧ್ಯಭಾಗದಲ್ಲಿ ಒಳಕಲ್ಲುತೀರ್ಥ ಎಂದು ಪ್ರಸಿದ್ಧಿ ಪಡೆದ ಗುಹಾಂತರ ಮೇಲಣಗವಿಮಠ. ಈ ಮಠ ಪರಂಪರೆ ಉಳಿದುಕೊಂಡು ಬಂದಿದೆ. 'ಚಿಂನದಕಂಥೆಯಮಠ' ಶಿವಗಂಗೆ ಪೇಟೆಬೀದಿ ಹಿಂಭಾಗ ಚಿನ್ನದಕಂಥೆಯ ಮಠ ಉಳಿದಿದೆ. ಆದರೆ ಪರಂಪರೆ ನಷ್ಟವಾಗಿದೆ. 'ಧರ್ಮದ ಗವಿಯ ಪುರ' ಶಿವಗಂಗೆ ಬೆಟ್ಟದ ಮೇಲೆ ಇರುವ ಧರ್ಮದ ಗವಿಯ ಮಠ. ಆದರೆ ಪರಂಪರೆ ನಷ್ಟವಾಗಿ ಹೋಗಿದೆ.

ಬಯಲ ಬಸವನ ಗವಿಯಪುರ ಮಠ ಶಿವಗಂಗೆ ಬೆಟ್ಟದ ಮೇಲೆ ಉಳಿದುಕೊಂಡು ಬಂದಿದೆ. ಮಠ ಪರಂಪರೆ ನಷ್ಟವಾಗಿ ಹೋಗಿದೆ. ಈ ಮಠಕ್ಕೆ ಸೇರಿದ ವಂಶಸ್ಥರು ಪೂಜಾದಿಗಳನ್ನು ಮಾಡಿಕೊಂಡು ಬರುತ್ತಾ ಇದ್ದಾರೆ. ಈ ಮಠದಲ್ಲಿ ತೋಂಟದ ಸಿದ್ಧಲಿಂಗೇಶ್ವರರು ಶಿವಗಂಗಾ ಕ್ಷೇತ್ರಕ್ಕೆ ಬಂದಾಗ ಅನುಷ್ಠಾನ ಮಾಡಿದ್ದನ್ನು ಬಯಲುಮಠದ ಪರಂಪರೆಯವರು ಹೇಳಿಕೊಂಡು ಬಂದಿದ್ದಾರೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ 'ಕಂಬಾಳ ಮರುಳಸಿದ್ಧೇಶ್ವರ ಪುರ' ಶಿವಗಂಗೆ ಪಕ್ಕದ ಕಂಬಾಳ ಗ್ರಾಮದ ಪ್ರಸಿದ್ಧ ಮಠದ ಕರ್ತೃ ಮರುಳಸಿದ್ಧೇಶ್ವರರು. ಆ ಕಾಲದಲ್ಲಿ ಅವರು ಇನ್ನೂ ಜೀವಂತವಾಗಿದ್ದಿರಬೇಕು. ಭವ್ಯವಾದ ಮಠ ಮತ್ತು ಪರಂಪರೆ ಉಳಿದುಕೊಂಡು ಬಂದಿದೆ.

ಈ ಶಾಸನವು ಸದಾಶಿವರಾಯರಿಗೆ ಪುಣ್ಯವಾಗಬೇಕೆಂದು ಶಿವರಾತ್ರಿ ಪುಣ್ಯಕಾಲದಲ್ಲಿ ಭಂಡಿಯ ಬಸವಣ್ಣನಾಯಕರವರ ನೀಡಿದ ಶಾಸನ. ಬಸವಣ್ಣನಾಯಕರಿಗೆ ಸದಾಶಿವದೇವ ಮಹಾರಾಯ ಅಮರನಾಯಕತ್ವಕ್ಕೆ ನೀಡಿದ್ದು ಶಾಸನದ 5ನೇ ಸಾಲಿನಲ್ಲಿ 'ನಿಮಗೆ' ಎಂದು ಇರಬೇಕಾದಲ್ಲಿ 'ರಮಗ' ಎಂದು ತಪ್ಪಾಗಿ ಓದಿರಬಹುದು. ಇದನ್ನು ಮರುಪರಿಶೀಲಿಸಬೇಕು. ಈ ಶಾಸನದಲ್ಲಿ 'ಮಲೆನಾಡ' ಶಬ್ದ ಪ್ರಯೋಗವನ್ನು ವಿದ್ವಾಂಸರು ಗಮನಿಸಿರಬೇಕು. ನಮಗೆ ತಿಳಿದಿರುವಂತೆ ಮಣ್ಣೆ ಶಿವಗಂಗೆ ಬಹಳ ಹತ್ತಿರ ಇರುವಂತಹುದು. ಗೂಳೂರು ತುಮಕೂರು ಸನಿಹ ಇರುವಂತಹದು. ಅಂದಿನ ದಿನ ಈ ಪ್ರದೇಶವನ್ನು 'ಮಲೆನಾಡು' ಎಂದು ಕರೆಯುತ್ತಾ ಇದ್ದರು ಎಂಬುದನ್ನು ಶಾಸನ ಸ್ಪಷ್ಟವಾಗಿ ತಿಳಿಸುತ್ತದೆ. ಈ ಶಾಸನದ ಕಾಲ 10–2–1545.

ಪರಾಮರ್ಶನ ಗ್ರಂಥಗಳು

1. ಡಾ. ಬಿ.ನಂಜುಂಡಸ್ವಾಮಿ, *ಶಿವಗಂಗಾ ಕ್ಷೇತ್ರ ಹಾಗೂ ವೀರಶೈವ ಮಠಗಳು*, ಶ್ರೀ ಸಿದ್ಧಗಂಗಾ ಪ್ರಕಾಶನ, ಸಿದ್ಧಗಂಗಾ ಮಠ, ತುಮಕೂರು 2008.

2. ಡಾ. ಬಿ.ನಂಜುಂಡಸ್ವಾಮಿ, ಬೆಟ್ಟದ ಕೋಟೆ ಪ್ರಭುಗಳ ವಂಶಸ್ಥರು : ಶಿವಗಂಗೆ ಗಂಗಾಧರೇಶ್ವರನಿಗೆ ಕೊಟ್ಟ ಪೂಜಾದತ್ತಿ ತಾಮ್ರಶಾಸನ, *ಇತಿಹಾಸ ದರ್ಶನ*, ಸಂ. 13, 1999.

27. ಕಾಲಕಾಲೇಶ್ವರದ ನಂದಿ ಸ್ಮಾರಕ ಸ್ತಂಭ – ಒಂದು ಟಿಪ್ಪಣಿ

ಡಾ. ಮಲ್ಲಿಕಾರ್ಜುನ ಕುಂಬಾರ

ಪ್ರಾಚೀನರು ತಮ್ಮ ಹೆಸರನ್ನು ಅಜರಾಮರವಾಗಿರಿಸಿಕೊಳ್ಳಲು ಶಾಸನ, ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಅದರ ಜೊತೆಗೆ ನಂದಿ ಸ್ತಂಭಗಳನ್ನು ಕೂಡ ನಿರ್ಮಿಸುವ ಪದ್ಧತಿಯನ್ನು ಹಾಕಿಕೊಂಡಿದ್ದರು. ಎತ್ತರವಾದ ಚೌಕಾಕಾರದ ಶಿಲಾ ಸ್ತಂಭದ ಮೇಲೆ ಮಲಗಿದ ನಂದಿಯನ್ನು ಕೆತ್ತಿಸುತ್ತಿದ್ದರು. ಈ ನಂದಿಯು ಕೆಲವು ಸಲ ಮೃತನ ಸ್ಮಾರಕವೂ ಕೂಡ ಆಗಿರುತ್ತಿತ್ತು. ಅಂತಹ ಶಿಲ್ಪಗಳು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಸಿಗುತ್ತವೆ. ಮಹಾರಾಷ್ಟ್ರದಲ್ಲಿ ಚೌಕಾಕಾರದ ಕಂಬಗಳಲ್ಲಿ ವಚನಗಳನ್ನು ಕೆತ್ತಿದ್ದಾರೆ. ಅಂತಹ ಶಿಲ್ಪಗಳು ಸೊಲ್ಲಾಪೂರದಲ್ಲಿವೆ. ಅದರ ಮೇಲೆ ಶರಣ ಸಿದ್ಧರಾಮನ ವಚನಗಳನ್ನು ಕೆತ್ತಿದ್ದಾರೆ.

ಗದಗ ಜಿಲ್ಲೆಯ ರೋಣ ತಾಲೂಕಿನ ಗಜೇಂದ್ರಗಡ ಸನಿಹದ ಕಾಲಕಾಲೇಶ್ವರ ಕ್ಷೇತ್ರದಲ್ಲಿ ಒಂದೆರಡು ನಂದಿ ಸ್ಮಾರಕ ಶಿಲ್ಪಗಳಿವೆ. ಈ ಶಿಲ್ಪವು ದೇವಾಲಯದ ತಪ್ಪಲಿನ ಮತ್ತು ಕಾಲಕಾಲೇಶ್ವರ ಗ್ರಾಮದ ಸನಿಹದ ಕುರುಚಲು ಗಿಡಗಳ ಮಧ್ಯದಲ್ಲಿವೆ. ಇದನ್ನು ಸ್ಥಳೀಕರು 'ನಂದಿಕೋಲ ಬಸವಣ್ಣ'ನೆಂದು ಕರೆಯುತ್ತಾರೆ. ಇದರಲ್ಲಿ ಒಂದು ಶಿಲಾಸ್ತಂಭದ ಸುತ್ತಲು ಚೌಕಾಕಾರದ ಕಲ್ಲಿನಕಟ್ಟೆ ಇದೆ. ಈ ನಂದಿ ಸ್ತಂಭದ ಎತ್ತರ 4.2 ಅಡಿ, ಅಗಲ 1.1x0.7 ಅಡಿ. ಚೌಕಾಕಾರದ ಸ್ತಂಭದ ನಡುವೆ ಉಬ್ಬು ಶಿಲ್ಪದಲ್ಲಿ ಒಬ್ಬ ವ್ಯಕ್ತಿಯು ಕೈಮುಗಿದು ನಿಂತಿದ್ದಾನೆ. ಆತನ ಎರಡು ಬದಿಗಳಲ್ಲಿ ಇಬ್ಬರು ಸ್ತ್ರೀಯರಿದ್ದಾರೆ. ಅವರು ಆತನ ಪತ್ನಿಯರಾಗಿರಬೇಕು. ಇವರ ಕೆಳಗೆ ನಾಗ ಶಿಲ್ಪವಿದೆ. ಸ್ತಂಭದ ಮೇಲೆ ಮಲಗಿದ ಸುಂದರವಾದ ನಂದಿಯನ್ನು ಕೆತ್ತಲಾಗಿದೆ. ಅದರ ಎತ್ತರ 1.1 ಅಡಿ ಇದೆ. ಈ ಶಿಲ್ಪವು ಕಾಲಕಾಲೇಶ್ವರ ದೇವಾಲಯಕ್ಕೆ ಮುಖಮಾಡಿದೆ. "ಈ ರೀತಿ ನಂದಿ ಸ್ತಂಭವನ್ನು ನಡೆಸುವದು ಉತ್ತರಕಾಲೀನ ವಿಜಯ ನಗರ ಕಾಲದಿಂದ, ಅದರಲ್ಲೂ ವಿಶೇಷವಾಗಿ ಇದು ವೀರಶೈವರಿಂದ ಆರಂಭಿಸಲಾಯಿತೆಂದು" ಖ್ಯಾತ ಇತಿಹಾಸ ತಜ್ಞರಾದ ಡಾ. ಅ.ಸುಂದರ ಅವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಪುಷ್ಠಿ ನೀಡುವಂತೆ ಕಾಲಕಾಲೇಶ್ವರದಲ್ಲಿರುವ ಶಾಸನವೊಂದು ವಿಜಯನಗರ ಅರಸರಿಗೆ ಸೇರಿದೆ. ಅವರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಇದಕ್ಕೆ ಅನೇಕ ದತ್ತಿಗಳನ್ನು ನೀಡಿದ್ದನ್ನು ಶಾಸನವು ಉಲ್ಲೇಖಿಸುತ್ತದೆ. ಇಲ್ಲಿನ ಸನಿಹದ ಕಣಿವೆಯಲ್ಲಿ ವಿಜಯನಗರದ ಕಾಲದ 'ಆನೆಗುಂದಿ ಬಸವಣ್ಣ' ಎಂದು ಕರೆಯುವ ಬೃಹದಾಕಾರದ, ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವಂತಹ ನಂದಿ ಶಿಲ್ಪವಿದೆ.

ಈ ಸ್ಮಾರಕ ನಂದಿ ಸ್ತಂಭದಲ್ಲಿ ಯಾವುದೇ ಬರಹವಿರದಿದ್ದರೂ ಇಲ್ಲಿರುವ ದ್ವಿಪತ್ನಿ ಸಮೇತನಾಗಿರುವ ವ್ಯಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಈತನು ವಿಜಯನಗರ ಕಾಲಕ್ಕೆ ಸೇರಿದ್ದಾನೆ. ಇಲ್ಲಿರುವ ಶಾಸನವು ವಿಜಯನಗರದ ಎರಡನೆಯ ಹರಿಹರನ (1377–1404) ಕಾಲಕ್ಕೆ ಸೇರಿದ್ದರಿಂದ ಈ ನಂದಿ ಸ್ಮಾರಕ ಶಿಲ್ಪವು 14–15ನೆಯ ಶತಮಾನಕ್ಕೆ ಸೇರುತ್ತದೆ. ಆದರೆ ಆ ವ್ಯಕ್ತಿ ಯಾರೆಂದು ಹೇಳಲಾಗದು. ಈತನು ಆ ಕಾಲದ ರಾಜ ಪ್ರಮುಖ, ಇಲ್ಲವೇ ಕಾಲಕಾಲೇಶ್ವರನ ಅಪ್ಪಟ ಭಕ್ತನಾಗಿರಬೇಕು. ಅಂತೆಯೇ ಮೇಲೆ ನಂದಿಯನ್ನು ಹೊತ್ತು ಕೈಮುಗಿದು ನಿಂತು, ದೇವಾಲಯಕ್ಕೆ ಮುಖ ಮಾಡಿದ್ದಾನೆ. ಅಂದಿನ ಕಾಲದಲ್ಲಿ ರಾಜ ಪ್ರಮುಖರು ಮಡಿದಾಗಲೂ ಕೂಡಾ ಅದರ ದ್ಯೋತಕವಾಗಿ ನಂದಿ ಶಿಲ್ಪವನ್ನು ನಿಲ್ಲಿಸುತ್ತಿದ್ದರೆಂಬ ಅಭಿಪ್ರಾಯ ಕೂಡ ಇದೆ. ಈ ಶಿಲ್ಪದ ಪಕ್ಕದಲ್ಲಿಯೇ ಮತ್ತೊಂದು ಇಂತಹದೇ ಸ್ಮಾರಕವುಳ್ಳ ಶಿಲ್ಪವಿದೆ. ಅದು ಭಗ್ನಗೊಂಡಿದ್ದು

ಅದರ ಮೇಲ್ಭಾಗದಲ್ಲಿ ನಂದಿ ಶಿಲ್ಪ ಇಲ್ಲ. ಅದರ ಎತ್ತರ 3.6 ಅಡಿ ಇದೆ. ಇದು ವೃತ್ತಾಕಾರದಲ್ಲಿದ್ದು, ಇದರ ಸುತ್ತಳತೆ 3.4 ಅಡಿ ಇದೆ. ಇಲ್ಲಿ ಕೂಡಾ ಸನಿಹದ ಸ್ಮಾರಕದಲ್ಲಿರುವಂತೆ ದ್ವಿಪತ್ನಿ ಸಮೇತನಾದ ಕೈಮುಗಿದ ವ್ಯಕ್ತಿಯ ಉಬ್ಬು ಶಿಲ್ಪವಿದೆ. ಇದು ಅಪೂರ್ಣಗೊಂಡ ಒರಟಾಗಿ ಕೆತ್ತಿದ ಶಿಲ್ಪವಾಗಿದೆ. ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ.




ಕಾಲಕಾಲೇಶ್ವರದಲ್ಲಿರುವ ನಂದಿ ಶಿಲ್ಪ ಸ್ಥಂಭ



ದೇವಸ್ಥಾನಕ್ಕೆ ಮುಖಮಾಡಿರುವ ನಂದಿ ಶಿಲ್ಪ ಸ್ಥಂಭ



ನಂದಿ ಶಿಲ್ಪ, ನಂದಿ ಸ್ಥಂಭದ ಸನಿಹದಲ್ಲಿರುವ ತುಂಡಾದ ಮತ್ತೊಂದು ಸ್ಥಂಭ

28. ಸಂಗಮರ ಶಾಸನಗಳಲ್ಲಿ ನೀರಾವರಿ ವ್ಯವಸ್ಥೆ

ಡಾ. ಡಿ.ಎಂ. ನಾಗರಾಜು

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಶ್ರೇಯಸ್ಸು ಯಾದವ ವಂಶದ ಸಂಗಮ ಎಂಬ ಸಣ್ಣ ಸಾಮಂತ ಅಥವಾ ಪಾಳೇಗಾರನ ಐವರು ಪುತ್ರರಾದ ಹರಿಹರ, ಹಕ್ಕ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಎಂಬುವರಿಗೆ ಸಲ್ಲಬೇಕು.

ವಿಜಯನಗರ ಆಡಳಿತಾವಧಿಯಲ್ಲಿ ಜನಸಾಮಾನ್ಯರು, ಅಧಿಕಾರಿಗಳು ಹಾಗೂ ಆಳರಸರು ಸಂದರ್ಭಗಳಿಗನುಗುಣವಾಗಿ ಸಾಮ್ರಾಜ್ಯದ ಮತ್ತು ಪ್ರಜೆಗಳ ಕ್ಷೇಮಾಭಿವೃದ್ಧಿಗಳ ಸದುದ್ದೇಶಕ್ಕಾಗಿ ನೀರಾವರಿ ಕಾಮಗಾರಿಗಳ ಮೂಲಕ ಹೇಗೆ ಶ್ರಮಿಸಿದರು ಮತ್ತು ಅದು ತಂದುಕೊಟ್ಟ ಶ್ರೇಯಸ್ಸಿಗೆ ಹೇಗೆ ಕೀರ್ತಿಭಾಜನರಾದರೆಂಬುದನ್ನು ಅನೇಕ ಸಮಕಾಲೀನ ಆಧಾರಗಳಿಂದ ವಿಶೇಷವಾಗಿ ಶಾಸನಾಧಾರಗಳಿಂದ ಇಲ್ಲಿ ಪ್ರಸ್ತುತಪಡಿಸಲಾಗಿದೆ. ಸಾಮ್ರಾಜ್ಯದ ಸಂಪದಭಿವೃದ್ಧಿ ಏಳಿಗೆಗೆ, ನೀರಾವರಿ ಸಂಬಂಧಿತ ಕಾಮಗಾರಿ ಚಟುವಟಿಕೆಗಳು ಸಹಾಯವಾದುದನ್ನು, ಅವುಗಳಿಂದಾಗಿ ಸಾಮ್ರಾಜ್ಯದಾದ್ಯಂತ ಶಾಂತಿ, ಸಮೃದ್ಧಿ, ಸುಭಿಕ್ಷೆಗಳು ನೆಲೆಸಿದ್ದರ ಪರಿಣಾಮವಾಗಿ ವಿಜಯನಗರ ಕಾಲದ ಸಾಧನೆಗಳು ಅಪಾರ ಹಾಗೂ ಅನುಕರಣೀಯವೆಂದೇ ಹೇಳಬೇಕು. ಅವರು ನಿರ್ಮಿಸಿದ ಅನೇಕ ಅಣೆಕಟ್ಟುಗಳು, ನೂರಾರು ಕೆರೆಗಳು, ಬಾವಿಗಳು, ಕಾಲುವೆಗಳು ಇಂದಿಗೂ ಎಂದರೆ ಐದರಿಂದ ಆರುನೂರು ವರ್ಷಗಳು ಗತಿಸಿದ ನಂತರವೂ ಉಪಯೋಗದಲ್ಲಿದ್ದು ಬೇಸಾಯಗಾರರ ಜೀವನಾಧಾರಗಳಾಗಿವೆ.

ದಕ್ಷಿಣ ಭಾರತದ ಇತಿಹಾಸದ ಅಧ್ಯಾಯದಲ್ಲಿ ವಿಜಯನಗರದ ಇತಿಹಾಸ ಅಧ್ಯಯನ ಪ್ರಮುಖವಾಗಿದೆ. ಅದರಲ್ಲಿಯೂ ಅಂದಿನ ನೀರಾವರಿ ಹಾಗೂ ವ್ಯವಸಾಯ ಕ್ರಮಗಳ ಅಧ್ಯಯನ ಮಹತ್ವವಾದುದು. ಇದಕ್ಕೆ ಕಾರಣಗಳಿವೆ. ಮೊದಲನೆಯ ಅಥವಾ ಪ್ರಥಮ ಕಾರಣವೆಂದರೆ ಮೊದಲ ಬಾರಿಗೆ ವಿಜಯನಗರ ಅರಸರು ಸಮಸ್ತ ದಕ್ಷಿಣ ಭಾರತವನ್ನು ಅಂದರೆ ತುಂಗಭದ್ರಾ ಮತ್ತು ಕೃಷ್ಣನದಿಗಳ ದಕ್ಷಿಣ ಭಾಗ ಮತ್ತು ಅಲ್ಪಕಾಲ ಸಿಂಹಳ ದ್ವೀಪದವರೆಗೂ ಆಡಳಿತ ನಡೆಸಿದರು.

ವಿಜಯನಗರ ಸಾಮ್ರಾಜ್ಯ ಕನ್ನಡ, ತೆಲುಗು, ತಮಿಳು ಪ್ರದೇಶಗಳನ್ನು ಒಳಗೊಂಡಿತ್ತು. (ಸಮಗ್ರ ದ್ರಾವಿಡ ಭಾಷೆಗಳ ಪ್ರದೇಶಗಳು ಮತ್ತು ಶಾಸನಗಳು ಬಹಳ ಮುಖ್ಯವಾದವು.) ವಿಜಯನಗರ ಅರಸರ ಭವ್ಯ ಸಾಧನೆಗಳು, ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅಗಾಧವಾಗಿದ್ದು ಅವು ಇಂದಿನವರೆಗೂ ಜನತೆಯ ಮನದಲ್ಲಿ ಹಚ್ಚಹಸಿರಾಗಿ ಉಳಿದಿವೆ. ಇದಲ್ಲದೆ ಸಮಕಾಲೀನ ಸಾಹಿತ್ಯ, ಶಾಸನಗಳ ಮತ್ತು ತಾಮ್ರಪಟಗಳ ದಾಖಲೆಗಳಿಂದಲೂ ಈ ವಿಷಯ ತಿಳಿದುಬರುತ್ತದೆ.

ವಿಜಯನಗರ ಆಡಳಿತದ ಸಮಯದಲ್ಲಿ ನಿರ್ಮಿಸಲಾದ ನೀರಾವರಿ ರಚನೆಗಳು ಇಂದಿಗೂ ಜಾರಿಯಲ್ಲಿದೆ. ಅವುಗಳು ನಿರ್ಮಾಣವಾಗಿ ಶತಮಾನಗಳಾಗಿದ್ದರೂ ಉಸ್ತುವಾರಿ ಹಾಗೂ ದುರಸ್ತಿ ಕ್ರಮಗಳಿಂದಾಗಿ ಉಳಿದುಕೊಂಡು ಬಂದು ಕಾಲ ಕಾಲದ ಜನರಿಗೆ ಉಪಯುಕ್ತವಾಗಿವೆ. ಇದರಲ್ಲಿ ಪ್ರಮುಖವಾದ ವಿಷಯ ಎಂದರೆ ನೀರಾವರಿ ಕಾರ್ಯಗಳು. ಈ ಕಾರ್ಯಗಳು ಸಮಾಜದಲ್ಲಿ ನೂತನ ಯುಗವೊಂದಕ್ಕೆ ಸಹಕಾರಿಯಾದುದಲ್ಲದೆ ವ್ಯವಸಾಯ ಉತ್ಪನ್ನಗಳ ಅಗಾಧ ವಿಕಾಸಕ್ಕೆ ಎಡೆಮಾಡಿ ರಾಜ್ಯದ ಸಂಪತ್ತಿನ ಅಭ್ಯುದಯಕ್ಕೆ ನಾಂದಿಯಾದವು. ವಿಜಯನಗರದ ಅರಸರು ಹಿಂದಿನವರು ಅನುಸರಿಸಿರಬಹುದಾದ ಮಾರ್ಗವನ್ನೇ ಅನುಸರಿಸಿ ನೀರನ್ನು ಉಪಯೋಗಿಸಿಕೊಂಡರು. ಹೀಗಾಗಿ ಅವರು ನೀರಾವರಿಗೆಂದೇ ನದಿ, ಕಾಲುವೆ, ಬಾವಿ ಹಾಗೂ ಅಂತರ್ಜಲವನ್ನು ಬಳಸಿಕೊಂಡಿದ್ದನ್ನು ಕಾಣುತ್ತೇವೆ. ಈ ಮಾದರಿಯ ನೀರಾವರಿ

ಕಾರ್ಯಕ್ರಮ ಅಂದರೆ ನದಿ, ಕಾಲುವೆ ಮತ್ತು ಬಾವಿಗಳಿಂದ ಬೇಸಾಯ ಜರುಗಿಸಬಹುದು. ಬೇಸಾಯವೇ ಆದಿಕಾಲದಿಂದ ಈ ದೇಶದ ಪ್ರಮುಖ ಉದ್ಯೋಗ ಎಂಬುದನ್ನು ಅರಿತಿದ್ದ ವಿಜಯನಗರದ ಅರಸರು ಅದರ ವಿಕಾಸಕ್ಕೆ ಆದ್ಯತೆ ನೀಡಿದರು. ಈ ದಿಶೆಯಲ್ಲಿ ಅವರು ಕೈಗೆತ್ತಿಕೊಂಡ ಎರಡು ಪ್ರಮುಖ ಕಾರ್ಯಗಳೆಂದರೆ ಮೊದಲನೆಯದಾಗಿ ಅಣೆಕಟ್ಟು, ಕೆರೆ, ಸರೋವರಗಳನ್ನು ನಿರ್ಮಿಸಿ, ನೀರಾವರಿ ಆಧಾರಿತ ಕೃಷಿಗೆ ಪ್ರೋತ್ಸಾಹಿಸಿದ್ದು. ಎರಡನೆಯದಾಗಿ ಕಾಡುಗಳನ್ನು ಕಡಿದು, ಆ ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಂಡಿದ್ದು.

ಇನ್ನು ಕೆಲವು ಮುಖ್ಯ ಶಾಸನಗಳನ್ನು ಗಮನಿಸಿದಾಗ ತಿಳಿದುಬರುವಂತೆ ಕ್ರಿಶ. 1357ರಲ್ಲಿ ಮೊದಲನೇ ಬುಕ್ಕರಾಯನು ರಾಜಕುಮಾರನಿದ್ದಾಗ ಮಹಾವಡ್ಡ ವ್ಯವಹಾರಿಯಾದ ಮಹದೇವಣ್ಣ ಅರಸನಿಂದ ಅಪ್ಪಣೆ ಪಡೆದು ಲಕ್ಷ್ಮೀಪುರ ಎಂಬ ಹಳ್ಳಿ ಮತ್ತು ಕೆರೆಯನ್ನು ನಿರ್ಮಿಸಿದ. ಈ ಕೆರೆಯಿಂದ ಹೊರಟ ಕಾಲುವೆಗೆ "ರಾಜ ಕಾಲುವೆ" ಎಂದು ಕರೆಯಲಾಗುತ್ತಿತ್ತು. ಕ್ರಿ.ಶ. 1358ರ ಒಂದನೇ ಬುಕ್ಕರಾಯನ ಕಾಲದಲ್ಲಿ ಕೀರ್ತಿದೇವನ ಮಗ ಭಟ್ಟರ ಬಾಚಪ್ಪನು ನಾಲ್ಕು ಕಡೆಯಲ್ಲಿ, ಬುಕ್ಕರಾಯಸಮುದ್ರ, ಬುಕ್ಕರಾಯನ ಹೆಸರಿನಲ್ಲಿ, ಕೀರ್ತಿಸಮುದ್ರ ಬಾಚಪ್ಪನ ಕೆರೆ ಬಾಚಪ್ಪನ ಹೆಸರಿನಲ್ಲಿ, ಮಾಳವಕೆಱೆಗಳನ್ನು ಕಟ್ಟಿಸಿ ನಾಲ್ಕು ದಿಕ್ಕುಗಳಲ್ಲಿ ಸಾಲುಮರಗಳು, ಕೆರೆ, ಸೇತುವೆ ತೂಬುಗಳನ್ನು ಕಟ್ಟಿಸಿದ ದಾಖಲೆಯಿದೆ. ಕ್ರಿ.ಶ. 1360ರ ಬುಕ್ಕರಾಯನ ಆಳ್ವಿಕೆಯ ಅವಧಿಯ ಒಂದು ದಾಖಲೆ ಎಂದರೆ ಇಬ್ಬೆಯನಾಯಕನು, ಮರಣ ಹೊಂದಿದ ತನ್ನ ತಂದೆಯ ಸ್ಮಾರಕವಾಗಿ ಒಂದು ಕೆರೆ ನಿರ್ಮಿಸಿ ಅದಕ್ಕೆ ಭುವನಸಮುದ್ರ ಎಂದು ನಾಮಕರಣ ಮಾಡಿದ್ದು. ಕ್ರಿ.ಶ. 1364ರ ಅನಂತರಸ ಒಡೆಯನೆಂಬ ಮಂತ್ರಿ ಕಟ್ಟಿಸಿದ ದೊಡ್ಡಕೆರೆಯನ್ನು ಬುಕ್ಕರಾಯಸಮುದ್ರ ಎಂದು ಕರೆಯುತ್ತಿದ್ದರು. ಬಹುಶಃ ಅರಸು ಬುಕ್ಕನ ಸ್ಮರಣೆಗೆಂದೇ ಕಟ್ಟಿಸಿರಬಹುದು. ಕ್ರಿ.ಶ. 1367ರಲ್ಲಿ ಹರಿಹರಪುರದ ಕಲ್ಲಂಗೆಱೆಯ ಶ್ರೀಮದ್‌ಶೇಷ ಮಹಾಜನಗಳು ಸಹಐಕ್ಯಮತವಾಗಿ ಕೆರೆಯ ಭಂಡಿಯ ನಿರ್ವಹಣೆಗೆ ದಾನ ನೀಡಿದ ವಿವರವಿದೆ. ಕ್ರಿ.ಶ. 1369ರಲ್ಲಿ ಬುಕ್ಕರಾಯನ ಮಗನಾದ ರಾಜಕುಮಾರಭಾಸ್ಕರನು ಪೋರುಮಾಮಿಲ್ಲಾ ಕೆರೆಗೆ ನಾಲ್ಕು ತೂಬುಗಳನ್ನು ನಿರ್ಮಿಸಿದ್ದು, ಅವುಗಳನ್ನು ಬ್ರಹ್ಮಜಲಗತಿ ಎಂದು ಕರೆದನು. ಕ್ರಮವಾಗಿ ವಿಘ್ನೇಶ್ವರ, ಈಶ್ವರ, ವಿಷ್ಣು, ಭೈರವ ಮತ್ತು ದುರ್ಗ ಪ್ರತಿಮೆಗಳಿಗೆ ತೂಬುಗಳ ಬಳಿಯಲ್ಲಿ ಸ್ಥಾನ ನೀಡಿದ್ದನು. ಕ್ರಿ.ಶ. 1369ರ ಮೇಲುಕೋಟೆ ಶಾಸನದಲ್ಲಿ ಕಿರುನಾರಾಯಣಪುರದ ವೈಷ್ಣವರು ಗ್ರಾಮದ ನಾರಯಣದೇವರಿಗೆ ಮಯಿಲನಹಳ್ಳಿ ಕಾಡಿನಲ್ಲಿ ಕೆರೆಯನ್ನು ದಾನವಾಗಿ ನೀಡಿದ ದಾಖಲೆಯಿದೆ. ಕ್ರಿ.ಶ. 1377ರಲ್ಲಿ ಲಖಂಣವೊಡೆಯರ ಕುಂಕುಶನಾಡು ಆಳುತ್ತಿರುವಾಗ ಕೆರೆ ದೇವಾಲ್ಯ ಜೀರ್ಣೋದ್ಧಾರಕ್ಕೆ ಆಶೇಷಮಹಾಜನಗಳಿಗೆ 100 ಹೊನ್ನನ್ನು ಕೊಟ್ಟ ದಾಖಲೆಯಿದೆ. ಕ್ರಿ.ಶ. 1377ರ ಹಂಪಿ ಶಾಸನವು ಹೇಳುವಂತೆ ಭಕ್ತರನಾಗಪ್ಪ ಎಂಬುವನು ಒಂದು ಬಾವಿಯನ್ನು, ಅದರ ಬಳಿಯಲ್ಲಿ ಒಂದು ಅಶ್ವತ್ಥ ವೃಕ್ಷವನ್ನು ನೆಡಿಸಿದನು. ಈ ಕಾರಣದಿಂದಾಗಿ ಈ ಸ್ಥಳವನ್ನು ಒಂದು ತೀರ್ಥವೆಂದೇ ಭಾವಿಸಿದರು. ಕ್ರಿ.ಶ. 1377ರ ಬುಕ್ಕರಾಯನ ಒಂದು ದಾಖಲೆಯಂತೆ "ಸೇತು" ಎಂದರೆ "ಒಡ್ಡು" ಎಂಬ ಅರ್ಥ. ಬುಕ್ಕರಾಯನ ಅರಸನ ಮಹಾಪ್ರಧಾನ ಹೇಳಿಕೆಯಂತೆ "ಅವನಂತಸೇತು" ಎಂಬ ನದಿ ಕಾಲುವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1379ರ ಹರಿಹರಬುಕ್ಕರು ಕಾಲುವೆಗಳಿಂದ ಕೂಡಿದ ಅಗ್ರಹಾರವನ್ನು ದಾನ ಮಾಡಿದರು. ಅಂತಹ ಹರಿಯುವ ನದಿಯ ನೀರಿನಿಂದ ಕೂಡಿದ ಕಾಲುವೆಗಳಿಂದ ಕಂಗೊಳಿಸುತ್ತ ಪ್ರಶಸ್ತವಾಗಿದ್ದವು. ಈ ಕಾಲುವೆಗಳು ತುಂಗೆಯ ನೀರಿನಿಂದ ತುಂಬಿ ಹರಿಯುತ್ತ ಭಗೀರಥನು ಭೂಮಿಗೆ ದೇವಗಂಗೆಯನ್ನು ತಂದಂತೆ ಹರಿಹರನು ತುಂಗೆಯನ್ನು ಕಾಲುವೆಗಳ ಮೂಲಕ ಹರಿಯುವಂತೆ ಮಾಡಿದ. ದೂರದರ್ಶಿತ್ವ ಹಾಗೂ ಅನೇಕ ಯೋಜನೆಗಳನ್ನು ಹೊಂದಿದ್ದ ರಾಜನು ಪ್ರವಾಹಕ್ಕೆ ಸೇತುವೆಗಳನ್ನು ಕಟ್ಟಿಸಿದನು. ಕ್ರಿ.ಶ. 1379ರ ಎರಡನೆಯ ಹರಿಹರನ ತಾಮ್ರಪತ್ರದ ಶಾಸನದಲ್ಲಿ ತಿಳಿಸಲಾದಂತೆ ಸಂಗಮನೆಂಬ ಸೈನ್ಯಾಧಿಕಾರಿ ವೈರಿಯನ್ನು ಬೆನ್ನಟ್ಟಿ ಸೆರೆಹಿಡಿಯುವುದಕ್ಕಾಗಿಯೇ ಕಾವೇರಿ ನದಿಯ ಮೇಲೆ ಒಂದು ಅಣೆಕಟ್ಟನ್ನು

ನಿರ್ಮಿಸಿದನಂತೆ. ಕ್ರಿ.ಶ. 1380ರ ಎರಡನೇ ಹರಿಹರರಾಯನು ಆಳುತ್ತಿದ್ದಾಗ "ಒರ್ತೆಕುಂಡ"ವನ್ನು ಬಡ್ಡೆಯನಾಯಕ ಎಂಬ ಬೇಟೆಗಾರ ಯಡವಂಕ ಎಂಬಲ್ಲಿದ್ದ ಊಟಿಯ ಬಳಿ ಕೊಳವೊಂದನ್ನು ನಿರ್ಮಿಸಿದ. ಅವನು ಅರಸನ ಆಸ್ಥಾನದ ಸೇವಕನಾಗಿದ್ದ. ಈ ಊಟಿಯ ಬಾವಿಯನ್ನು ಮೈಲಾರದೇವನ ಪವಿತ್ರ ಅಭಿಷೇಕದ ನೀರಿಗೆಂದೇ ಅಗೆಸಲಾಗಿತ್ತು. ಹೀಗಾಗಿ ಆ ದೇವರನ್ನು ಮೈಲಾರದೇವನೆಂದೇ ಕರೆಯಲಾಯಿತು. ಕ್ರಿ.ಶ. 1385ರ ಎರಡನೇ ಹರಿಹರನ ಅವಧಿಯ ಕರ್ನೂಲು ಜಿಲ್ಲೆ ತೆಲುಗು ಶಾಸನದಲ್ಲಿ ಹೇಳುವಂತೆ ಗಂಗಾವತಿ ಮತ್ತು ಪುಲ್ಲೇರು (ವ್ಯಾಘ್ರಪಾಗ) ಉಪನದಿಗಳನ್ನು ಜೋಡಣೆ ಮಾಡಿ ದೇವರಾಯ ನದಿಯನ್ನು ನಿರ್ಮಿಸಿ ಅದಕ್ಕೆ ವೀರಹರಿಹರರಾಯನ ಮಗನಾದ ವೀರದೇವರಾಯನ ಹೆಸರನ್ನು ಇಡಲಾಯಿತು. ಕ್ರಿ.ಶ. 1385ರ ಶಾಸನದಲ್ಲಿ ಇದನ್ನು ಕಾಣಬಹುದು. ಅದರಲ್ಲಿಯ ವಿವರಣೆಯಂತೆ, ಗಂಧವಾಟಿಕೆರೆಯನ್ನು ಅರಸನ ಮಗನಾದ ವೀರದೇವರಾಯನ ಅಭ್ಯುದಯಕ್ಕಾಗಿ, ಬೋಧಕಭಿಕ್ಷಾವೃತ್ತಿ ಸಿದ್ಧಯ್ಯನಿಗೆ ದಾನ ಮಾಡಲಾಯಿತು. ಕ್ರಿ.ಶ. 1385ರಲ್ಲಿ ಎರಡನೇ ಹರಿಹರನ ರಾಜಕುಮಾರ ಭೂಪತಿ ಒಡೆಯನು ಪ್ರಾಂತ್ಯಾಧಿಕಾರಿಯಾಗಿದ್ದ ಬೊಮ್ಮನ್ನ ಅಧಿಕಾರಿಯ ಪ್ರೇರಣೆಯಂತೆ ಅಣೆಕಟ್ಟು ಕಟ್ಟಿದ್ದನ್ನು ತಿಳಿಸಲಾಗಿದೆ. ಕ್ರಿ.ಶ. 1387ರಲ್ಲಿ ಅನಂತಪುರ ಜಿಲ್ಲೆಯ ಮಾರೆಡಿಪಲ್ಲಿಯ ಪ್ರಾಂತೀಯ ಅಧಿಕಾರಿಯಾಗಿದ್ದ ಪೊಲಿಯನಾಡು, ಅವರು ಬೈರಪೋಜ ಮತ್ತು ಚಿನ್ನಪೋಜರಿಗೆ ದಸವಂದಗದ್ದೆಯನ್ನು, ಆ ಹಳ್ಳಿಗೆ ಕೆರೆ ಚಿರೇರು ನದಿಯಿಂದ ನೀರು ಹರಿಸುವ ಕಾಲುವೆ ಅಗೆದುದಕ್ಕೆ ದಾನ ನೀಡಿದ್ದನ್ನು ವಿವರಿಸುತ್ತದೆ. ಕ್ರಿ.ಶ. 1388ರಲ್ಲಿ ರಾಜನಿಗೆ ಪುಣ್ಯವಾಗಬೇಕೆಂದು ಬುಕ್ಕರಾಯನ ಬಂಟ ಸೇವಕ ವಿಠಲನಾಥವೆಂಬುವನು ತನ್ನ ರಾಜನಿಗೆ ಪುಣ್ಯ ಲಭಿಸಬೇಕೆಂದು ಒಂದು ಕೆರೆ ಕಾಲುವೆಯನ್ನು ನಿರ್ಮಿಸಿದನು. ಕ್ರಿ.ಶ. 1389ರ ಹಿರೆಬದನೂರು ಶಾಸನದಲ್ಲಿ ಹೆನ್ನನದಿಗೆ ಅಣೆಕಟ್ಟನ್ನು ಸಂಗಯ್ಯಭಟ್ಟ ಎಂಬ ನೀರಾವರಿ ಎಂಜಿನಿಯರ್ ಎರಡನೇಬುಕ್ಕನ ಕಾಲದಲ್ಲಿ ನಿರ್ಮಿಸಿದನೆಂದು ತಿಳಿಸುತ್ತದೆ. ಕ್ರಿ.ಶ. 1389ರ ಬುಕ್ಕರಾಯನ ಶಾಸನದಲ್ಲಿ 'ಜಲಸೂತ್ರ'ದ ನೀರಾವರಿ ಇಂಜಿನಿಯರ್ ಬಗ್ಗೆ ಪ್ರಸ್ತಾಪಿಸಲಾಗಿದೆ. ಪೆನುಗೊಂಡೆಯ ಶಿರಿಊರು ಕೆರೆಗೆ ನೀರುಣಿಸುವ ಕಾಲುವೆಯನ್ನು ಸಿಂಗಯ್ಯಭಟ್ಟನೆಂಬ ಜಲಸೂತ್ರಧಾರಿ ನಿರ್ಮಿಸಿದನೆಂದು ಹೇಳಲಾಗಿದೆ. ಕ್ರಿ.ಶ. 1392ರ ಚಿಮ್ಮತ್ತೂರುಕಲ್ಲು (ಚಿತ್ರದುರ್ಗದ ಬಳಿ) ಬಳಿಯಲ್ಲಿರುವ ಜನ್ನಿಗೆಹಳ್ಳಕ್ಕೆ ಲಕ್ಷ್ಮೀಧರನ ಪುತ್ರನಾದ ಕಂಪನ್ನ ಎಂಬುವನು ಭೀಮಸಮುದ್ರಕ್ಕೆ ನೀರು ಹಾಯಿಸಲೆಂದೇ ಒಡ್ಡನ್ನು ನಿರ್ಮಿಸಿದಂತೆ ಅಲ್ಲಿ ದೊರೆತ ಶಾಸನ ತಿಳಿಸುತ್ತದೆ. ಕ್ರಿ.ಶ. 1393ರಲ್ಲಿ ತಂದೆಯ ಪುಣ್ಯ ಸ್ಮರಣೆಗೆಂದೆ ಅರಸು ಎರಡನೆಯ ಹರಿಹರರಾಯನ ಮಗ ಶ್ರೀ ವೀರದೇವರಾಯ ದೇವರಾಯ ಸಮುದ್ರವನ್ನು ನಿರ್ಮಿಸಿದನಂತೆ. ಕ್ರಿ.ಶ. 1397ರ ಪೆನುಗೊಂಡೆ ಪ್ರದೇಶದ ಅಧಿಕಾರಿಯ ಪತ್ನಿ ಮೊದಲನೆಯ ಬುಕ್ಕರಾಜನ ಮೊಮ್ಮಗಳಾದ ಬೊಮ್ಮಲದೇವಿಯು ತಿರುಮನಿಕೆರೆಗೆ ಒಂದು ಉಪಕಾಲುವೆಯನ್ನು ಅಗೆಸಿದ್ದಳು. ಈ ಕಾಲುವೆಯನ್ನು ಅಗೆಸಲು 130 ಗದ್ಯಾಣ ಬಂಗಾರದ ನಾಣ್ಯಗಳನ್ನು ನೀಡಬೇಕೆಂದು ಆದೇಶವಿಟ್ಟು ತನ್ನ ಮಂತ್ರಿಗಳಾದ ನಾಗರಾಜ ಮತ್ತು ಮಾಯನಮನಿ ಎಂಬುವರನ್ನು ನೇಮಿಸಿದಳಂತೆ. ಎರಡನೇ ಬುಕ್ಕರಾಯ 1399–1406ರಲ್ಲಿ ನೀರಿನ ಪೂರೈಕೆಗೆಂದು ತುರ್ತು ಅಣೆಕಟ್ಟನ್ನು ನಿರ್ಮಿಸಿದ. ಈ ಅಣೆಕಟ್ಟು ವಿರೂಪಾಕ್ಷ ದೇವಾಲಯದ ಉತ್ತರ ಭಾಗದಲ್ಲಿದೆ. ಕ್ರಿ.ಶ. 1403ರ ಒಂದನೇ ದೇವರಾಯನ ಕಾಲದ ಶಾಸನದಲ್ಲಿ ಪದ್ಮನಾಭನ ಮಗ ಬಾಯಣ್ಣ ಹಿರಿಯಗಂಡಸೆ ಸ್ಥಳದೊಳಗೆ ತಮ್ಮ ಜನನಿಯ ನಾಮದಿಂದ ಮಂಗಪುರ ಗ್ರಾಮವನ್ನು ರಚಿಸಿ ಅದಕ್ಕೆ ಮಂಗಸಮುದ್ರವೆಂಬ ತಟಾಕಮಂ ಕಟ್ಟಿಸಿ ಆ ತಟಾಕದ ದಕ್ಷಿಣ ಭಾಗದ ಕೋಡಿಯಂ ಜೀರ್ಣೋದ್ಧಾರ ಮಾಡಿದ ದಾಖಲೆಯಿದೆ. ಕೆಳಗೆರೆ ಶಾಸನದಲ್ಲಿ ಶ್ರೀವರದರಾಜಪುರವಾದ ಭಟ್ಟಾರಕದೇವನ ಕಲ್ಲಂಗೆಱೆಯ ಹಿರಿಯ ಹೊನೆಯನಾಯಕರ ಮಗ ವರದನಾಯಕನೂ ಈ ಊರ ಮುಂದಣ ಶ್ರೀ ಮಲ್ಲಿಕಾರ್ಜುನದೇವರ ದೇವಲ್ಯವನ್ನು ಗರ್ಭಗೃಹ, ಸುಖನಾಸಿ, ರಂಗಮಂಟಪ ಮುಂತಾದ ಮಲ್ಲಿಕಾರ್ಜುನದೇವರ ಶ್ರೀಪಾದಸೇವೆಯನ್ನು ಮಾಡಿ, ಈ ಗ್ರಾಮ, ಶೂದ್ರವಾಡವಾಗಿದ್ದನ್ನು ಅಗ್ರಹಾರ ಮಾಡಿ ಈ ಊರಕೆಱೆಯನ್ನು ಜೀರ್ಣೋದ್ಧಾರ ಮಾಡಿ ಕನ್ನಂಗೆಱೆಯ

ವರದರಾಜಸಮುದ್ರವನ್ನು ಕಟ್ಟಿ ದೇವರಿಗೆ ಸೇವೆ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1403ರ ನೂತನವಾಗಿ ನಿರ್ಮಾಣಗೊಂಡ ವೀರಭದ್ರ ದೇವಸ್ಥಾನದೊಂದಿಗೆ ಆರು ಕೆರೆಗಳನ್ನು ನಿರ್ಮಿಸಿದಂತೆ ಶಾಸನವು ತಿಳಿಸುತ್ತದೆ. ಕ್ರಿ.ಶ. 1405ರಲ್ಲಿ ಎರಡನೆಯ ದೇವರಾಯನ ಹಂಪಸಮುದ್ರದಲ್ಲಿ ಒಂದು ನೂತನವಾದ ತೂಬನ್ನು ರಾಮರಸನೆಂಬ ಅಧಿಕಾರಿಯೊಬ್ಬನು ನಿರ್ಮಿಸಿದ್ದನ್ನು ಶಾಸನವು ತಿಳಿಸುತ್ತದೆ.

ಮೊದಲನೇ ದೇವರಾಯ ಕ್ರಿ.ಶ. 1410ರಲ್ಲಿ ಪುರಾತನ ಅಣೆಕಟ್ಟನ್ನು ಕಟ್ಟಿಸಿದನು. ಇಂದಿನ ಕರ್ನಾಟಕದ ಹರಿಹರನಗರ ಹರಿಹರಕ್ಷೇತ್ರದ ಬಳಿಯಲ್ಲಿರುವ ಹರಿದ್ರಾನದಿಯ ಮೇಲೆ ಇದನ್ನು ಕಟ್ಟಲಾಯಿತು. ಇದೇ ಕಾಲದ ಶಾಸನ ರಚಿಸಿದ ಮಧುರಕವಿಯು, ಲಕ್ಷ್ಮೀಧರನ ತಾಯಿಯು ಅವರ ಕಿವಿಯಲ್ಲು ಉಸುರಿಸಿದ ಏಳು ಉತ್ತಮ ಒಳ್ಳೆಗುಣಗಳನ್ನು ವರ್ಣಿಸಿದ್ದಾನೆ. ಇದರಲ್ಲಿ ಕೆರೆ ಹಾಗೂ ಬಾವಿಗಳಿಗೆ ವಿಶೇಷ ಮಹತ್ವ ಕೊಟ್ಟು ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ಎಂದೇ ವರ್ಣಿಸಿದ್ದನ್ನು ಕಂಡಾಗ, ಮಾನವರ ಕಲ್ಯಾಣದಲ್ಲಿ ಇವುಗಳ ಪಾತ್ರ ಏನಿತ್ತು ಎಂದು ಅರಿಯಬಹುದಾಗಿದೆ. ಕ್ರಿ.ಶ. 1431ರ ಶಿವಮೊಗ್ಗ ಜಿಲ್ಲೆಯ ರಾಜಹರಿಹರನ ಶಾಸನ ಹೇಳುವಂತೆ, ಯಾರಾದರೂ 'ಜೀರ್ಣಾಯಮ್ ಉದರೆ' ಅಂದರೆ ಒಡೆದ ಕೆರೆಯ, ಬಾವಿಯ ಜೀರ್ಣೋದ್ಧಾರ, ರಾಜ್ಯದ ಶರಣಾಗತಿಗೆ ಬಂದವರನ್ನು ರಕ್ಷಿಸುವ, ದೇವಸ್ಥಾನವನ್ನು ನಿರ್ಮಿಸುವ ಕಾರ್ಯಗಳನ್ನು ಮಾಡಿದರೆ ಅವು ಆದರ್ಶ ಉತ್ತಮ ಮಾನವ ಗುಣಗಳೆಂದೇ ಭಾವಿಸಲಾಗಿತ್ತು. ಕ್ರಿ.ಶ. 1417ರ ಶಾಸನ ತ್ರಿಯಂಬಕಪುರ ತ್ರಿಯಂಬಕೇಶ್ವರ ದೇವರಿಗೆ ಸುತ್ತಮುತ್ತಲಿನ ಕೆರೆಗಳನ್ನು ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಕ್ರಿ.ಶ. 1419ರ ಶಾಸನದಲ್ಲಿ ಲಖಪನಮಗ ಹರಿಹಣನು ಪಾಂಡ್ಯನಾದ ನೊಣಬಿನರಸಿಯ ಕೆರೆಯನ್ನು ಹರಿಯಣ್ಣನು ಹರಿಸಮುದ್ರ ಗ್ರಾಮವನ್ನು ಶ್ರೋತ್ರಿಯ ಅಗ್ರಹಾರವಾಗಿ ದಾನ ನೀಡುತ್ತಾನೆ. ಅಲ್ಲಿಯ ಜನರು ಆ ಗ್ರಾಮದ ಭೂಮಿಯನ್ನು ಸರಿಪಡಿಸಿ ಕೆರೆಯನ್ನು ಕಟ್ಟಿಸುತ್ತಾರೆ. ಈ ಕೆಜೆಯ ಕೆಳಗೆ ಬೆಳೆಯುವ ಗದ್ದೆ, ಬೆದ್ದಲು, ಅಡಕೆ, ತೆಂಗು, ಹಲಸು, ಮಾವು, ಕಬ್ಬು, ಬಾಳೆ, ಎಲೆಯಬಳ್ಳಿ, ಆಲ, ಅರಿಶಿಣ, ಕುಂಕುಮ, ಕಾಡಾರಂಬ, ಉಪ್ಪಿನ ಮೋಳಿ, ಸಿದ್ಧಾಯ ದಣಾಯರ ಸಾಮ್ಯ ಮುಂತಾದವುಗಳ ಮೇಲೆ ತೆರಿಗೆಯನ್ನು ತೆಗೆದುಹಾಕುತ್ತಾನೆ. ಕ್ರಿ.ಶ. 1422ರ ಹರಿಹರನ ಕಾಲದಲ್ಲಿ ವಾಸುದೇವ ದೇವರಿಗೆ ಮಲೆಯೂರು ಗ್ರಾಮದ ಎಲ್ಲಾ ಭೂಮಿಗಳನ್ನು ಮತ್ತು ಆದಾಯಗಳಿಂದ ಕೆರೆಯ ಹೊರತುಪಡಿಸಿ ದೇವರಾಯನ ಮಗ ಮೂರನೇ ಹರಿಹರರಾಯನ ಕನಕಗಿರಿ ಶ್ರೀವಿಜಯ ದೇವರಿಗೆ ದಾನ ನೀಡಿದ ವಿವರವಿದೆ. ಇದೇ ಕಾಲದ ಒಂದನೇ ದೇವರಾಯನ ಮಂತ್ರಿಯಾಗಿದ್ದ ಇರುಗಪ್ಪನು ಜೈನದೇವತೆಯಾದ ಶ್ರವಣಬೆಳಗೊಳದ ಗೊಮ್ಮಟೇಶ್ವರನಿಗೆ ಸ್ವನಿರ್ಮಿತ ಒಂದು ಕೆರೆಯನ್ನು, ಬೆಳ್ಗೊಳವನ್ನು ಅರ್ಪಿಸಿದುದಲ್ಲದೆ, ಒಂದು ತೋಟ, ಭತ್ತ ಬೆಳೆಯುವ ಗದ್ದೆ ಮುಂತಾದವನ್ನು ಜೈನಗುರುವಾದ ಸೃತುಮುನಿಯ ದ್ವಾರ ಮಾಡಿಸಿದ.

ಕ್ರಿ.ಶ. 1428ರ ದೇವರಾಯನ ಒಂದು ದಾಖಲೆಯಂತೆ ಈ ವಿಧವಾಗಿ ಕೆರೆ ಮತ್ತು ಇತರ ಕಲ್ಯಾಣ ಕಾರ್ಯಗಳಿಂದ ದಾನಿಗಳಿಗೆ, ಪೋಷಕರಿಗೆ ಕಲ್ಯಾಣ ಉಂಟಾಗುತ್ತಿತ್ತು ಎಂದೇ ನಂಬಿಕೆ ಹೊಂದಿದ್ದರು. ಉದಾಹರಣೆಗೆ ದೇವರಾಯ ಮಹಾರಾಯರಿಗೆ ಧರ್ಮವಾಗಬೇಕೆಂದು ದಾನ ನೀಡಿದ ವಿವರವಿದೆ. ಇದೇ ಕಾಲದ ಶಾಸನದಲ್ಲಿ ಎರಡನೆಯ ದೇವರಾಯನ ಮಂತ್ರಿಯಾಗಿದ್ದ ಲಕ್ಕಣ್ಣ ಒಡೆಯನು ಸಿಂಗರಸನ ಪುತ್ರ ಅನ್ನದಾತನಿಗೆ ನೀಡಿದ ದಾನಪತ್ರವನ್ನು, ಡಣಕನಿದೇವಿಯು ಒಂದು ಕೆರೆಯನ್ನು ಕಟ್ಟಿಸಿದ್ದನ್ನು ದಾಖಲಿಸಿದೆ.

ಕ್ರಿ.ಶ. 1467ರಲ್ಲಿ ಇಮ್ಮಡಿ ವಿರೂಪಾಕ್ಷ ಆಡಳಿತ ನಡೆಸುತ್ತಿದ್ದ ಸಮಯದಲ್ಲಿ ದೇವರಾಜ ಎಂಬ ರಾಮಚಂದ್ರ ದೇವಸ್ಥಾನದ ಅಧಿಕಾರಿ ಹಾಗೂ ಹೊಸಹಳ್ಳಿಯ ಎಪ್ಪತ್ತೆರಡು ಮಹಾಜನರುಗಳ ನಡುವೆ ಒಪ್ಪಂದವಾಗಿದೆ. ಅದರಂತೆ ನೀರಾವರಿ ಉದ್ದೇಶಕ್ಕೆಂದೇ ಕಾಲುವೆಯನ್ನು ನಿರ್ಮಿಸಿದ್ದಕ್ಕಾಗಿ ಈ ಅಧಿಕಾರಿಗೆ ಹೊಸಹಳ್ಳಿಯ ಯಜಮಾನ ಭೋಗವನ್ನು

ನೀಡಲಾಯಿತು. ಕ್ರಿ.ಶ. 1568ರಲ್ಲಿ ರಾಮಚಂದ್ರ ದೇವಾಲಯದ ಅಧಿಕಾರಿ ಮತ್ತು ಎಪ್ಪತ್ತಾರು ಮಹಾಜನರು ಒಂದು ಅಣೆಕಟ್ಟನ್ನು ಕಾವೇರಿ ನದಿಗೆ ಕಟ್ಟಿದ್ದನ್ನು ತಿಳಿಸುತ್ತದೆ.

ಉಪಸಂಹಾರ

ಸಮುದ್ರ, ನದಿ, ನೀರಾವರಿ ಅಣೆಕಟ್ಟುಗಳು, ಕಾಲುವೆಗಳು, ಕೆರೆ, ಬಾವಿ ಮತ್ತು ಊಟಿಬಾವಿ ನೀರಾವರಿ, ತೂಬುಗಳು ಅಂದಿನ ಶಾಸನಗಳಲ್ಲಿನ ಈ ಪದಪ್ರಯೋಗಗಳನ್ನು ಗಮನಿಸಬೇಕು. ವಿಜಯನಗರ ಅವಧಿಯಲ್ಲಿ ನೀರಾವರಿಗೆ ನೀಡಿದ ಪ್ರಾಮುಖ್ಯವನ್ನು ಎತ್ತಿ ತೋರಿಸುತ್ತದೆ. ಈ ಎಲ್ಲಾ ಮಾಹಿತಿಯಿಂದ ನೀರಾವರಿಯನ್ನು ಧಾರ್ಮಿಕ ಮನೋಭಾವನೆಯಿಂದ ನೋಡುತ್ತಿದ್ದರು ಮತ್ತು ಮಾನವನ ಅಭ್ಯುದಯಕ್ಕೆ ಅದು ಅನಿವಾರ್ಯ ಎಂಬ ಸಂಗತಿ ಮನವರಿಕೆಯಾಗದೇ ಇರಲಾರದು. ಈ ದಿಶೆಯಲ್ಲಿ ವಿಜಯನಗರದ ಆಡಳಿತದಲ್ಲಿ ಅದರಲ್ಲಿಯೂ ಸಂಗಮ ಮನೆತನದ ಶಾಸನಗಳಲ್ಲಿ ವಿಪುಲ ದಾಖಲೆಗಳು ದೊರೆತಿವೆ.

ಪರಾಮರ್ಶನ ಗ್ರಂಥಗಳು

1. *ಎ.ಆರ್.ಐ.ಇ.*
2. *ಎ.ಕ. ಸಂಪುಟಗಳು*
3. *ಎಪಿಗ್ರಾಫಿಯಾ ಇಂಡಿಕಾ.*
4. *ಎಸ್.ಐ.ಐ. ಸಂಪುಟಗಳು.*
5. *ಎಂ.ಎ.ಆರ್. ಸಂಪುಟಗಳು*
6. *ಹೈದರಾಬಾದ್ ಎ.ಪಿ. ಸಿರೀಸ್.*
7. ಸಿವೆಲ್ ಆರ್., *ಎ ಫರ್‌ಗಾಟನ್ ಎಂಪೈರ್ (ವಿಜಯನಗರ)*, ಲಂಡನ್, 1900.
8. ವಸುಂಧರ ಎಸ್., *ದಿ ವಿಜಯನಗರ ಎಂಪೈರ್ – ಡಿ.ಪೇಸ್ ಅಂಡ್ ಎಫ್–ನ್ಯೂನಿಜ್*, ನ್ಯೂ ದೆಹಲಿ, 1977.

29. ವಿಜಯನಗರ ಕಾಲದ ಜಲವಿವಾದಗಳು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಕನ್ನಡ ನಾಡಿನಲ್ಲಿ ಬಾವಿಗಳನ್ನು ಅಗೆಯುವುದು, ಕೆರೆಗಳನ್ನು ಕಟ್ಟುವುದು ಒಂದು ಪುಣ್ಯ ಕೆಲಸವೆಂದು ಜನರು ನಂಬಿದ್ದರು. ಅರಸರು, ಅರಸಿಯರು, ರಾಜನ ಅಧಿಕಾರಿಗಳು ಮತ್ತು ಶ್ರೀಮಂತರು ದೇವಸ್ಥಾನವನ್ನು ಕಟ್ಟಲು ತೋರಿದ ಭಕ್ತಿ ಭಾವದಿಂದಲೇ ಕೆರೆ ಮತ್ತು ಜಲಾಶಯಗಳನ್ನು ಕಟ್ಟಿಸುತ್ತಿದ್ದರು. ಐತಿಹಾಸಿಕವಾಗಿ ದೋರಸಮುದ್ರ, ಬಲ್ಲಾಳರಾಯನ ಸಮುದ್ರ, ದೇವರಾಯ ಸಮುದ್ರ, ಭರಮಸಾಗರ ಮೊದಲಾದ ಕೆರೆಗಳನ್ನು ಕಟ್ಟಿರುವುದು ಅವಿಸ್ಮರಣೀಯ. ರಾಜಪ್ರಭುತ್ವದಲ್ಲಿ ಅರಸರು ಜಲಮಾರ್ಗಗಳನ್ನು ನಿರ್ಮಾಣ ಮಾಡಿದ್ದರು. ಹರಿವ ನದಿಗೆ ಸೇತುವೆ, ಕೆರೆ–ಕಟ್ಟೆ, ಅಣೆಕಟ್ಟುಗಳನ್ನು ಕಟ್ಟಿದ್ದರು.

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ಪ್ರದೇಶಗಳು ಸಂಪದ್ಭರಿತವಾಗಿದ್ದು, ಹಲವು ಯುದ್ಧಗಳಿಗೆ, ವಿವಾದಗಳಿಗೆ ಕಾರಣವಾಗಿದ್ದವು. ಈ ಕಾಲದಲ್ಲಿ ರೈತರು ಕಡಪ, ಅನಂತಪುರಗಳಲ್ಲಿ ಉಳುಮೆ ಮಾಡಲು ಅರಣ್ಯ ಕಡಿದರು. ಭಾಸ್ಕರ ಎಂಬ ಸಂಗಮ ವಂಶದ ರಾಜ ಪ್ರತಿನಿಧಿ ದೊಡ್ಡ ಗಾತ್ರದ 'ಪೊರು ಮಾಮಿಳ್ಳ' ಎಂಬ ಕೆರೆಯನ್ನು ಕಡಪ ಜಿಲ್ಲೆಯ ಬದ್ವಾಲ್‌ನಲ್ಲಿ ಕಟ್ಟಿಸಿದ್ದಾನೆ. ಒಂದನೇ ಬುಕ್ಕರಾಯ ಸಹಸ್ರಾರು ಕೆಲಸಗಾರರಿಂದ ಕೆರೆಗಳನ್ನು ಕಟ್ಟಿಸುತ್ತಿದ್ದ. ಇವನು ಕಡಪದ ಕಲುಚಪಲ್ಲಿ ಹತ್ತಿರ ತನ್ನಿಬ್ಬರ ಅಧಿಕಾರಿಗಳ ಮೂಲಕ ಕೆರೆಗಳನ್ನು ನಿರ್ಮಿಸುತ್ತಾನೆ. ಎರಡನೇ ಬುಕ್ಕ ಮತ್ತು ಒಂದನೇ ದೇವರಾಯನ ಕಾಲದಲ್ಲಿ ವಿಜಯನಗರ ಪಟ್ಟಣದಲ್ಲಿ ದೊಡ್ಡ ಜಲಾಶಯವನ್ನು ತುಂಗಭದ್ರಾ ನದಿಗೆ ಕಟ್ಟಿದರು. ಇಂದಿಗೂ ಹಳೆಯ ಕಾಲದ ಕಾಲುವೆಗಳಿವೆ. ನ್ಯೂನಿಜ್‌ನು ತುಂಗಭದ್ರಾ ನದಿಯಿಂದ ಐದು ಸಣ್ಣ ಕಾಲುವೆಗಳ ಮೂಲಕ ಹರಿದು ಹೋಗುವ ನೀರಿನ ಬಗ್ಗೆ ಹೇಳುತ್ತಾ, ತುರ್ತು ಕಾಲುವೆ ಹನ್ನೊಂದು ಮೈಲು ನೀರಾವರಿ ಪ್ರದೇಶಕ್ಕೆ ನೀರುಣಿಸುತ್ತಿದ್ದ ಬಗ್ಗೆ ಉಲ್ಲೇಖಿಸುತ್ತಾನೆ. ಇದರ ಕಾರ್ಯವನ್ನು ಎರಡನೆಯ ಬುಕ್ಕನ ಜಲಸೂತ್ರಧಾರಿ ಸಿಂಗೆಯಭಟ್ಟನು ಪ್ರತಾಪ ಬುಕ್ಕರಾಯನ ಆಜ್ಞೆಯಂತೆ ಮಾಡಿದ್ದ. ಅವನು ಮಂಡಲ, ಪೆನುಗೊಂಡ, ಸಿರುವಾರ ಕೆರೆಗಳಿಗೆ ಕಾಲುವೆ ನಿರ್ಮಿಸಿದನೆಂದು ತಿಳಿಸುತ್ತಾನೆ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಬುಕ್ಕಂಬುಧಿ ಕೆರೆಯು ವಿಜಯನಗರದ ಬುಕ್ಕರಾಯನ ಕಾಲದ್ದಾಗಿದೆ. ಬುಕ್ಕಸಾಗರ, ಬುಕ್ಕಸಮುದ್ರ ಎಂದು ಕರೆಯುವ ಕೆರೆಗಳಿವೆ.

ಎರಡನೇ ಬುಕ್ಕನ ನಂತರ ಎರಡನೇ ಹರಿಹರ ಕಾಲದಲ್ಲಿ ಅತೀವ ಬರಗಾಲ ವ್ಯಾಪಿಸಿತು. ಇವನು ಪ್ರಜೆಗಳ ಯೋಗಕ್ಷೇಮಕ್ಕಾಗಿ ಕೆರೆ, ಕಾಲುವೆಗಳ ನಿರ್ಮಾಣ ಕೈಗೊಂಡನು. ಎಂಜಿನಿಯರುಗಳ ಮೂಲಕ (ಹೈಡ್ರಲಿಕ್) ಹೆನ್ನೆ ನದಿಯಿಂದ ಒಂದು ಕಾಲುವೆ ನಿರ್ಮಿಸಿ ಪೆನುಗೊಂಡೆಗೆ ನೀರು ಒದಗಿಸಿದ.

ಬುಕ್ಕನ ರಾಣಿ ಚೊಮ್ಮದೇವಿ (ಪೆನುಗೊಂಡ ರಾಜ್ಯದ ಬುಕ್ಕರಾಯನ ಮಗಳು). ಪದುಮಲದೇವಿ ಎಂತಲೂ ಈಕೆಗೆ ಕರೆಯುತ್ತಾರೆ. 1397ರಲ್ಲಿ ಇವಳು ಪ್ರಜಾಕಲ್ಯಾಣಕ್ಕಾಗಿ ತಿರುಮಣಿಯೂರು ಎಂಬ ಗ್ರಾಮದಲ್ಲಿ ಒಂದು ಕೆರೆಗೆ ನೀರು ಹರಿದು ಬರಲು ಕಾಲುವೆಯನ್ನು ಅಗೆಸಬೇಕೆಂದು ಆಶಿಸಿ ತನ್ನ ಮಂತ್ರಿಗಳಾದ ನಾಗರಾಜ ಮತ್ತು ಮಾಯಾನಯನಿಗಳಿಗೆ ಆದೇಶಿಸುತ್ತಾಳೆ. ಯುವರಾಣಿಯ ನಿರೂಪದಂತೆ ಮಂತ್ರಿಗಳು ಪೆದ್ದ ಭೈರವೋಜ ಮತ್ತು ಚಿನ್ನ ಭೋರವೋಜರೆಂಬ ಇಬ್ಬರು ಕರ್ಮಿಗಳಿಗೆ ಆ ಕೆಲಸವನ್ನು ವಹಿಸುತ್ತಾರೆ. ಈ ಕಾರ್ಯವನ್ನು ಅವರಿಗೆ ವಹಿಸುವಾಗ ಕೆರೆಯ ನೀರು ನಾಲೆಯಲ್ಲಿ ಸರಿಯಾಗಿ ಹರಿಯಬೇಕೆಂದು ಷರತ್ತು ವಿಧಿಸುತ್ತಾಳೆ. ಈ ಬಗ್ಗೆ ಹೆಚ್ಚಿನ ಕಟ್ಟಳೆ/ಬಹುಮಾನಗಳನ್ನು ವಿಧಿಸುತ್ತಾಳೆ.

ವಿಜಯನಗರ ಕಾಲದಲ್ಲಿ ಜಲವಿವಾದಗಳಿದ್ದವು. 1406ರ ಇಮ್ಮಡಿ ಬುಕ್ಕರಾಯನ ಶಾಸನವು ಕೆರೆ ನೀರಿನ ಬಳಕೆ ಕುರಿತಂತೆ ಆಳತ್ತೂರ್ ಮತ್ತು ಅತ್ತಿಪಪ್ಪಿ ಗ್ರಾಮಗಳ ನಡುವೆ ಉಂಟಾದ ವಿವಾದವನ್ನು ಮಹಾಪ್ರಧಾನಿ ತಿಮರಶ್‌ರ್‌ನ ಸನ್ನಿಧಿಯಲ್ಲಿ ಬಗೆಹರಿಸಿಕೊಂಡಿದ್ದನ್ನು ತಿಳಿಸುತ್ತದೆ.

ಸಾಳುವ ನರಸಿಂಹನ ರಾಣಿ ಶ್ರೀರಂಗಾಂಬಾದೇವಿ ನೀರಾವರಿಗಾಗಿ ಕಾಲುವೆ ತೋಡಿಸಿ (1467) ನೀರಾವರಿ ಕಾಲುವೆ ಅಗೆಯಲು ರಂಗಾಂಬಾದೇವಿಯಮ್ಮ ದೇವಸ್ಥಾನಕ್ಕೆ ಒಂದು ಹಳ್ಳಿಯನ್ನು ದಾನ ನೀಡಿದಳು.

ಈ ಕಾಲದ ನೀರಿನ ಅಭಾವ ನೀಗಿಸಲು ಬಾವಿಗಳನ್ನು ತೋಡುವುದು ಅವ್ಯಾಹತವಾಗಿ ನಡೆದಿತ್ತು. ಹೆಗ್ಗಡೆಸೋವಣ್ಣ ಅಣ್ಣನು ಕ್ರಿ.ಶ. 1405ರಲ್ಲಿ ಮಲಪನಗುಡಿಯಲ್ಲಿ ಮಾಳಿಗೆಯುಳ್ಳ (ಮಾಳಿಗೆ ಕೂಪರಾಮ) ಬಾವಿಯನ್ನು ಕಟ್ಟಿಸಿದನು. ಹೆಗಡೆ ವಿತಲಬಾಗಿಲ ಬಸವಣ್ಣ ಅಣ್ಣನು ಅರಸನ ಆಜ್ಞೆಯ ಮೇರೆಗೆ ಕಾಲುವೆ ಕಟ್ಟಿಸಿದ ವಿಷಯ ತಿಳಿದು ಬರುತ್ತದೆ. ಆಗಿನ ಸಂದರ್ಭದಲ್ಲಿ ಅಧಿಕ ಭೂಮಿ ನೀರಾವರಿಗೆ ಪರಿವರ್ತನೆಯಾಯಿತು.

ವಿಜಯನಗರದ ಅರಸ ಪ್ರೌಢಪ್ರತಾಪರಾಯನ (1406–1422) ಮಂತ್ರಿಯಾದ ಲಕ್ಷ್ಮೀಧರನು ಮಗುವಾಗಿದ್ದ ಅವಧಿಯಲ್ಲಿ ಆತನ ತಾಯಿ ಹಾಲೆರೆಯುವಾಗ ಹಾಡಿದ ನೀತಿಪಾಠ ಶಾಸನದಲ್ಲಿ ಹೀಗಿದೆ:

ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ (೦)
ಯೆರೆದಳ್ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

ಎಂದು ಆದರ್ಶದ ನೀತಿ ತಿಳಿದುಬರುತ್ತದೆ. ಹರಿಹರದ ಹತ್ತಿರ ಹರಿದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಪ್ರಜೆಗಳು ಕಟ್ಟಿದ್ದಕ್ಕಾಗಿ ಮೊದಲನೇ ದೇವರಾಯನು 1410ರಿಂದ ಅನೇಕ ವರ್ಷ ಹೊಸದಾಗಿ ಜಾರಿಗೆ ತಂದ ನೀರಾವರಿ ಭೂಮಿಗಳಿಗೆ ಕಂದಾಯ ರಿಯಾಯಿತಿ ತೋರಿಸಿ ಅವರಿಗೆ ಉತ್ತೇಜನ ಕೊಟ್ಟನು. ತರುವಾಯ 1424ರಲ್ಲಿ ಈ ಅಣೆಕಟ್ಟು ಕೊಚ್ಚಿ ಹೋದಾಗ ಎರಡನೇ ದೇವರಾಯನು ಅದರ ದುರಸ್ತಿಗಾಗಿ ಉದಾರವಾಗಿ ವ್ಯಯ ಮಾಡಿದ. ಕಮಲಾಪುರದ ಕೆರೆಯನ್ನು ಈ ಅರಸನು ಮಡದಿಯ (ಕಾಮಲಾದೇವಿ) ಸ್ಮರಣೆಗಾಗಿ ಕಟ್ಟಿಸುತ್ತಾನೆ. ಇದೇ ರೀತಿ ಈ ಹಿಂದೆ ಬುಕ್ಕರಾಯನು ಹೆನ್ನೆ (ಪೆನ್ನಾರ್–ಪಿನಾಕಿನಿ) ನದಿಯ ನೀರನ್ನು ತಿರುಗಿಸಿ ಕಾಲುವೆ ಮೂಲಕ ಪೆನುಗೊಂಡೆಗೆ ನೀರು ಬರುವಂತೆ ಮಾಡಿದ್ದ. ಮಂಡಲದ ಕಾಲುವೆ ಎಂದು ಅದರ ಹೆಸರು.

ಹಾಗೆಯೇ 1426ರ ದೇವರಾಯನ ಶಾಸನವು ವಡೆನೆನ್ ಮಲ್ಲೈನ ಊರ ಜನರು ತಮ್ಮ ಜಮೀನುಗಳಿಗೆ ನೀರುಣಿಸುವುದಕ್ಕಾಗಿ ನದಿಯಿಂದ ನೀರು ಹರಿಸಿಕೊಳ್ಳುವುದರ ಕುರಿತ ಕೆಲವು ನಿರ್ಬಂಧಗಳ ಬಗ್ಗೆ ಇತರ ಆರು ಗ್ರಾಮಗಳೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಉಲ್ಲೇಖಿಸುತ್ತದೆ.

1435ರ ಶಾಸನವೊಂದು ನದಿ ಕಾಲುವೆ ನೀರನ್ನು ಬಳಸಿಕೊಳ್ಳುವ ವಿಚಾರದಲ್ಲಿ ಕೀಲ್‌ಕುರೈನ ಚಾಟ್ಟು ಅಗರಂನ ಮಹಾಜನಗಳು ಹಾಗೂ ಪೂನ್ನೈನ ಊರವರ ನಡುವೆ ಆದ ಒಪ್ಪಂದವನ್ನು ದಾಖಲಿಸುತ್ತದೆ.

1489ರಲ್ಲಿ ಸಾಳುವ ನರಸಿಂಹರಾಯ ಅನಂತಪುರದ ಹತ್ತಿರ ಕಣಿವೆಯಲ್ಲಿ ನರಸಿಂಭುದಿ ಕೆರೆ ಕಟ್ಟಿಸಿದ. ನಂತರ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅನೇಕ ಕೆರೆಕಟ್ಟೆಗಳು ನಿರ್ಮಾಣಗೊಂಡವು. ಹೊಸಪೇಟೆ ಸಮೀಪದ ರಾಯರಕೆರೆ ಇವನ ಹೆಮ್ಮೆಯ ಯೋಜನೆ. ಇದರ ಬಗ್ಗೆ ನ್ಯೂನಿಜ್, ಡೊಮಿಂಗೊಪಾಯಸ್ ತಿಳಿಸಿದ್ದಾರೆ. ತುರ್ತು ಕಾಲುವೆ ಅಣೆಕಟ್ಟನ್ನು

ಚಿಂತಾಯಕ ದೇವಣ್ಣನು ಮತ್ತು ಬೊಮೋಜನು ಕಟ್ಟಿಸಿದ ಸಂಗತಿ ಶಾಸನಗಳಿಂದ ಲಭ್ಯ. ಹಿರಿಯ ಕಾಲುವೆಯನ್ನು (ತುರ್ತು) ಹೆಗಡೆ ಹಿತಲಬಾಗಿಲ ಬಸವಣ್ಣನು ಅರಸ ವಿರೂಪಾಕ್ಷನ ಆಜ್ಞೆಯ ಮೇರೆಗೆ ಕಟ್ಟಿಸಿದ. ಇನ್ನೊಂದು ಕಾಲುವೆಯನ್ನು ಅವಿಕಥವಿಪ್ಪರಸನು ಬುಕ್ಕಸಾಗರದಲ್ಲಿ ಕಟ್ಟಿಸಿದ್ದನು. ನಾಗಾಂಬಿಕಾ ಸಮುದ್ರವೆಂಬ ಕೆರೆಯನ್ನು ನಾಗೇನಹಳ್ಳಿಯಲ್ಲಿ ಕ್ರಿ.ಶ.1516ರಲ್ಲಿ ನಿರ್ಮಿಸಿದ್ದು ತಾಯಿಯ ಸ್ಮರಣೆಗಿರಬೇಕು. ಇನ್ನೊಂದು ಕೆರೆಯನ್ನು ಸೀತಾರಾಮತಾಂಡದ ಹತ್ತಿರ 1539ರಲ್ಲಿ ಕಟ್ಟಿಸಲಾಗಿದೆ. ಈ ಅರಸರು ನಿರ್ಮಿಸಿದ ಸುಮಾರು 80ಕ್ಕೂ ಹೆಚ್ಚು ಕೆರೆಗಳು ಹೊಸಪೇಟೆ ತಾಲೂಕಿನಲ್ಲಿಯೇ ಕಂಡುಬರುತ್ತವೆ. ದರೋಜಿ, ಕಮಲಾಪುರ, ಅಳ್ಳಿಕೆರೆ, ದಣ್ಣಾಯಕನ ಕೆರೆ ಮತ್ತು ರಾಯರಕೆರೆ ಬೃಹತ್ ಗಾತ್ರದಲ್ಲಿ ನಿರ್ಮಾಣಗೊಂಡಿವೆ. ಕುಡಿಯುವ ನೀರಿಗಾಗಿ ಬಿಸಿಲಹಳ್ಳಿ ಕಣಿವೆ ಮತ್ತು ಬಡವಲಿಯ ಕಣಿವೆ ಹೆದ್ದಾರಿಗಳು ಕೂಡುವಲ್ಲಿ ಮಾಳಿಗೆಯುಳ್ಳ ಬಾವಿ ತೋಡಿಸಿ ವನ ಬೆಳೆಸಿದ್ದು ಗಮನಾರ್ಹ. ಇಂದಿಗೂ ಈ ಬಾವಿಯನ್ನು ನೋಡಬಹುದು. ಇದರ ಕೆಲಸ ಮಾಡಿದ ಕೆಲಸಗಾರರಿಗೆ ಭೂದಾನ ಮಾಡಿದ್ದರು. ವಿಜಯನಗರ ಕಾಲದಲ್ಲಿ ನೀರಾವರಿ ಉತ್ಕೃಷ್ಟ ಬೆಳೆಗೆ ಪೂರಕವಾಗಿ ಉಚ್ಛ್ರಾಯ ಸ್ಥಿತಿಗೆ ಕಾರಣವಾಯಿತು. ಜನರು ಪ್ರತಿರೋಧ ಒಡ್ಡಿದಾಗ ರಾಜ ಅಣೆಕಟ್ಟು, ಕೆರೆ-ಕಟ್ಟೆಗಳನ್ನು ಕಟ್ಟಿಸುತ್ತಿದ್ದ ಎನ್ನಬಹುದು. ಅರ್ಕಾವತಿ ನದಿಗೆ 1533ರಲ್ಲಿ ಅಚ್ಯುತ ದೇವರಾಯ ದೊಡ್ಡ ಕೆರೆಯನ್ನು ಕಟ್ಟಿಸುತ್ತಾನೆ. ಈ ನದಿಗೆ ಕಾಲುವೆಗಳನ್ನು ತೋಡಿಸಿ ಬೆಂಗಳೂರಿಗೆ ನೀರು ಸರಬರಾಜು ಮಾಡಲಾಗುತ್ತಿತ್ತು. ಕಟ್ಟು-ಕೊಡಗೆ, ದೇಣಿಗೆ ಮುಂತಾದ ನೀರಾವರಿ ಕೆಲಸಗಳನ್ನು ರಾಜರು ಮಾಡುತ್ತಿದ್ದರು.

30. ಅಳಿಯ ರಾಮರಾಯನ ರುಂಡ : ಪುನರ್ವಿಮರ್ಶೆ

ಪ್ರೊ. ಲಕ್ಷ್ಮಣ್ ತೆಲಗಾವಿ

ವಿಜಯನಗರ ಇತಿಹಾಸದಲ್ಲಿ ಅಳಿಯ ರಾಮರಾಯನ ಪ್ರಸಂಗವು ವರ್ಣರಂಜಿತವೂ ರಕ್ತರಂಜಿತವೂ ದುರಂತಮಯವೂ ಆದುದೆಂಬುದು ಸ್ಪಷ್ಟ. ದಕ್ಷಿಣ ಭಾರತದಲ್ಲಿ ಪ್ರಜ್ವಲಿಸಿ ಉರಿಯುತ್ತಿದ್ದ ಸ್ವಾಭಿಮಾನಿ ನೆಲೆಯ ಸಂಸ್ಕೃತಿಜ್ಯೋತಿಯು ರಾಮರಾಯನ ಅವಸಾನದೊಡನೆ ತಟಕ್ಕನೇ ನಂದಿಹೋದುದು ಕನ್ನಡಿಗರ ಪಾಲಿಗೆ ಇಂದಿಗೂ ಒಂದು ಕರಾಳ ನೆನಪು. ಇದನ್ನೆ 'ಕನ್ನಡಿಗರ ಕಾಳರಾತ್ರಿ'ಯೆಂತಲೂ 'ಕನ್ನಡಿಗರ ಕರ್ಮಕಥೆ'ಯೆಂತಲೂ ವರ್ಣಿಸಿರುವುದು. ಭಾರತೀಯ ಪರಂಪರೆಯ ಪ್ರತೀಕವಾಗಿ, ಪ್ರತಿನಿಧಿಯಾಗಿ ತಲೆಯೆತ್ತಿ ನಿಂತಿದ್ದ ಹೆಮ್ಮೆಯ ವಿಜಯನಗರವು, ವಿರೋಧಿ ರಾಜಕೀಯ ಶಕ್ತಿಯ ಪ್ರಹಾರಕ್ಕೆ ತುತ್ತಾಗಿ, ಏಕಾಏಕಿ ಕುಸಿದುಬಿದ್ದುದು ದಕ್ಷಿಣ ಭಾರತ ಇತಿಹಾಸದಲ್ಲಿ ಸಂಭವಿಸಿದ ವಿರಳ ವಿಷಾದನೀಯ ಘಟನೆಯೆಂದೆನ್ನಲೇಬೇಕು.

1. ಅಳಿಯ ರಾಮರಾಯ (ಕ್ರಿ.ಶ. 1543–1565)

ರಾಮರಾಯನು ಸಾಮ್ರಾಟ ಕೃಷ್ಣದೇವರಾಯನ (ಕ್ರಿ.ಶ. 1509–1529) ಅಳಿಯ; ಆದ್ದರಿಂದಲೇ ಅವನನ್ನು ಅಳಿಯ ರಾಮರಾಯನೆಂದು ಇತಿಹಾಸ ಗುರುತಿಸಿದೆ. ಈತನ ವಿವಾಹ ಜರುಗಿದುದು ಕೃಷ್ಣದೇವರಾಯನ ಮಗಳು ತಿರುಮಲಾಂಬೆಯೊಡನೆ. ಮೊದಲಿಗೆ ರಾಮರಾಯನು ಗೊಲ್ಕೊಂಡದ ಸೈನ್ಯದಲ್ಲಿದ್ದು, ಆ ನಂತರ ವಿಜಯನಗರಕ್ಕೆ ಬಂದು ಕೃಷ್ಣದೇವರಾಯನ ಸೇವೆಯಲ್ಲಿ ತೊಡಗಿದ; ದಕ್ಷ ದಂಡನಾಯಕನೆನಿಸಿದ. ತೆಲುಗುಪ್ರದೇಶಗಳಲ್ಲಿ ವಿಜಯನಗರದ ರಾಜಪ್ರತಿನಿಧಿಯಾಗಿಯೂ ಸೇವೆ ಸಲ್ಲಿಸಿದ್ದ. ರಾಮರಾಯನನ್ನು ವಿಜಯನಗರ ಸಾಮ್ರಾಜ್ಯದ ಆಡಳಿತ ಸೂತ್ರಗಳನ್ನು ಸಂಪೂರ್ಣ ಹಿಡಿತದಲ್ಲಿರಿಸಿಕೊಂಡಿದ್ದ ಮಹಾಮಂಡಲೇಶ್ವರನೆಂತಲೇ ಹೇಳಲಾಗುತ್ತದೆ. ಈತನ ರಾಜ್ಯಾಧಿಕಾರತ್ವದ ಅವಧಿ ಕ್ರಿ.ಶ. 1543ರಿಂದ 1565. ಕೃಷ್ಣದೇವರಾಯನ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲೊಬ್ಬನಾಗಿದ್ದ ರಾಮರಾಯ, ಕೃಷ್ಣದೇವರಾಯನ ಅವಸಾನದ ತರುವಾಯ ವಿಜಯನಗರದಲ್ಲಿ ಜರುಗಿದ ಅತ್ಯಂತ ಜಟಿಲ ರಾಜಕೀಯ ಸನ್ನಿವೇಶದಲ್ಲಿ ನಿರ್ಣಾಯಕ ಪಾತ್ರವಹಿಸಿದ. ಅಂತಿಮವಾಗಿ, ತುಳುವ ವಂಶದ ಅಚ್ಯುತರಾಯನ ತಮ್ಮ ರಂಗನ ಮಗ ಸದಾಶಿವರಾಯನಿಗೆ (ಕ್ರಿ.ಶ. 1543–1570) ಕ್ರಿ.ಶ. 1543ಲ್ಲಿ ಪಟ್ಟಕಟ್ಟುವುದರೊಡನೆ ಸಮಸ್ತ ರಾಜಕೀಯ ಶಕ್ತಿಯನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡ. ವಿಜಯನಗರ ನಾಮಮಾತ್ರ ಸಾಮ್ರಾಟನೆನಿಸಿದ ಸದಾಶಿವರಾಯನು ಸರ್ವಾಧಿಕಾರಿ ರಾಮರಾಯನ ಅಧೀನದಲ್ಲಿದ್ದು ಆಡಳಿತಕಾರ್ಯ ನಿರ್ವಹಿಸಬೇಕಾಯಿತು; ಆ ನಂತರ ಸ್ವತಂತ್ರವಾಗಿ ಆಡಳಿತಕಾರ್ಯ ನಿರ್ವಹಿಸಲು ಪ್ರಯತ್ನಿಸಿ, ರಾಮರಾಯನ ಅವಕೃಪೆಗೆ ಪಾತ್ರನೆನಿಸಿ ಸೆರೆವಾಸವನ್ನನುಭವಿಸಬೇಕಾಯಿತು. ಮುಂದೆ ಕ್ರಿ.ಶ. 1565ರ ರಕ್ಕಸಗಿ ತಂಗಡಗಿ ಮಹಾಯುದ್ಧದಲ್ಲಿ ಹತನಾಗುವವರೆಗೆ, ಸುಮಾರು 15 ವರ್ಷಗಳ ಕಾಲ, ರಾಮರಾಯನು ಸ್ವಯಂ ಸಾಮ್ರಾಟನಂತೆ ವೈಭವದಿಂದ ಸರ್ವಾಧಿಕಾರಿ ಪ್ರಭುತ್ವವನ್ನು ನಿರ್ವಹಿಸಿದ.

ಅಳಿಯ ರಾಮರಾಯನಿಗೆ ಸಂಬಂಧಿಸಿದಂತೆ, ತೆಲುಗು ಭಾಷೆಯಲ್ಲಿ ವೆಂಕಟನೆಂಬವನು ರಚಿಸಿರುವ 'ರಾಮರಾಜೀಯಮು' ಕಾವ್ಯಕೃತಿಯು ಅಧಿಕೃತ ಮಾಹಿತಿಯನ್ನು ನೀಡುತ್ತದೆ. ರಾಮರಾಯನಿಗಿದ್ದ ಅಸಂಖ್ಯ ಬಿರುದುಗಳ ಸಂಪೂರ್ಣ ಯಾದಿ 'ಬಿರುದಗದ್ಯಮು' ಅಥವಾ ಬಿರುದಾವಳಿ (Stringe of Titles) ದೊರೆಯುವುದು ಈ ಕಾವ್ಯದಲ್ಲಿಯೇ. ರಾಮರಾಯನೆಂಥಾ ವರ್ಚಸ್ವಿ ಆಡಳಿತಗಾರನಾಗಿದ್ದನೆಂಬುದು ಇಲ್ಲಿ ಸ್ಪಷ್ಟಪಡುತ್ತದೆ.

2. ರಕ್ಕಸಗಿ ತಂಗಡಗಿ ಮಹಾಕದನ (23 ಜನವರಿ 1565)

ಇತಿಹಾಸಕಾರರು ನಿರ್ಣಯಿಸಿರುವಂತೆ, ರಕ್ಕಸಗಿ ತಂಗಡಗಿ ಅಥವಾ ತಾಳಿಕೋಟೆ ಮಹಾಕದನ ಸಂಭವಿಸಿದುದು 1565 ಜನವರಿ 23ರಂದು. ವಿಜಯನಗರ ವಿನಾಶದ ಮುನ್ನುಡಿ ಬರೆಯಲ್ಪಟ್ಟುದು ಇದೇ ತೇದಿಯಂದು ! ಈ ನಿರ್ಣಾಯಕ ಯುದ್ಧವು ಒಟ್ಟು 27 ದಿವಸಗಳ ಕಾಲ ನಡೆಯಿತೆಂದು ದಾಖಲಿಸಿದೆ 'ರಾಮರಾಜನ ಬಖೈರು'. ದಕ್ಷಿಣದ ಐವರ ಸುಲ್ತಾನರ (ಪಂಚಶಾಹಿಗಳು) ಮಹಾಮೈತ್ರಿ ಕೂಟದ ಫಲವಾಗಿ ವಿಜಯನಗರಕ್ಕೆ ಗಂಡಾಂತರ ಒದಗಿತು. ದಕ್ಷಿಣದ ಸುಲ್ತಾನರ ಒಕ್ಕೂಟವು ಅಹ್ಮದ್‌ನಗರದ ನಿಜಾಂಶಾಹಿ (ಹುಸೇನ್ ನಿಜಾ಼ಂಶಾಹ್), ಬಿಜಾಪುರದ ಆದಿಲ್ ಶಾಹಿ (ಅಲಿ ಆದಿಲ್‌ಶಾಹ್), ಬೀದರ್‌ನ ಬರೀದ್‌ಶಾಹಿ (ಅಲಿ ಬರೀದ್‌ಶಾಹ್), ಗೋವಳಕೊಂಡದ ಕುತ್ಬ್‌ಶಾಹಿ (ಇಬ್ರಾಹಿಂ ಕುತ್ಬ್‌ಶಾಹ್) ಹಾಗೂ ಬೀರಾರ್‌ನ (ಎಲ್ಲಿಚಪುರ) ಬುರ್ಹಾದ್ ಇಮದ್‌ಶಾಹಿಗಳನ್ನು (ತುಫಾಲಖಾನ್) ಒಳಗೊಂಡಿದ್ದಿತು. ಈ ಐದು ರಾಜ್ಯಗಳೊಡನೆ ಅಕ್‌ಬರ್‌ಶಾಹ್ ಪಾದಶಾಹಿಯೆಂಬ ಆರನೇ ಶಕ್ತಿಯನ್ನು ಪ್ರಸ್ತಾಪಿಸುತ್ತದೆ 'ರಾಮರಾಜನ ಬಖೈರು.' ರಾಮರಾಯನು ಈ ಸುಲ್ತಾನರ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕಿದುದು, ಅವರಲ್ಲಿ ಪರಸ್ಪರ ವೈಮನಸ್ಸು ಮೂಡಿಸಲು ಮತ್ತು ಒಟಕನ್ನುಂಟುಮಾಡಲು ಪ್ರಯತ್ನಿಸುತ್ತಿದ್ದುದು ಹಾಗೂ ಮುಖ್ಯವಾಗಿ ದುರಹಂಕಾರದಿಂದ ವರ್ತಿಸುತ್ತಿದ್ದುದು ಇತ್ಯಾದಿ ಕಾರಣಗಳಿಂದಾಗಿ ಈ ಸುಲ್ತಾನರು ವಿಜಯನಗರದ ವಿರುದ್ಧ ಒಕ್ಕೂಟ ರಚಿಸಿಕೊಳ್ಳಲು ಮತ್ತು ಮಹಾಯುದ್ಧ ನಡೆಸಲು ಅವಕಾಶವಾಯಿತು.

ರಕ್ಕಸಗಿ ತಂಗಡಗಿ ಮಹಾಸಮರದಲ್ಲಿ ರಾಮರಾಯನು ಕೊಲೆಗೀಡಾದ. ಈತನ ಅಂತ್ಯ ಕುರಿತು ಈವರೆಗೆ ಉಳಿದುಬಂದಿದ್ದ ಜಿಜ್ಞಾಸೆಗಳು ಇಂದಿಗೂ ಪೂರ್ತ ಪರಿಹಾರಗೊಂಡಂತಿಲ್ಲ. ವಿಜಯನಗರದ ನಿರ್ಣಾಯಕ ಯುದ್ಧ ನಡೆದ ಖಚಿತ ಸ್ಥಳ; ರಾಮರಾಯ ಸತ್ತ ಬಗೆ ಹಾಗೂ ಆತನನ್ನು ಕೊಂದವರ ನಿರ್ದಿಷ್ಟ ಮಾಹಿತಿ; ರಾಮರಾಯ ಸತ್ತ ಹಾಗೂ ನಿರ್ಣಾಯಕ ಯುದ್ಧ ನಡೆದ ನಿಶ್ಚಿತ ದಿನ – ಇವು ಕೆಲವು ಉದಾಹರಣೆಗಳು. ಆದರೆ ಕೆಲವು ಇತಿಹಾಸಕಾರರಾದರೂ ಈ ನಿಟ್ಟಿನಲ್ಲಿ ಶ್ರಮವಹಿಸಿದ್ದು, ಈ ಕೆಳಗಿನಂತೆ ತಕ್ಕಮಟ್ಟಿನ ಪರಿಹಾರಗಳನ್ನು ಸೂಚಿಸಿದ್ದಾರೆ. ಈ ಪರಿಹಾರಗಳೇ ವಾಸ್ತವವೆಂದಾಗಲೀ ಅಂತಿಮವೆಂದಾಗಲೀ ಭಾವಿಸುವಲ್ಲಿ ಕೆಲವು ತೊಡಕುಗಳಿವೆ. ಸದ್ಯಕ್ಕೆ ನಮ್ಮ ಮುಂದಿರುವ ಕೆಲವು ವಿವರಣೆಗಳು:

1. ಕ್ರಿ.ಶ. 1565ರ ನಿರ್ಣಾಯಕ ಯುದ್ಧವು ತಂಗಡಗಿ ಮತ್ತು ನಾಲ್ವತ್ತುವಾಡಗಳ ಮಧ್ಯೆ 1565 ಜನವರಿ 23ರಂದು ಜರುಗಿತು.
2. ಈ ಮಹಾಯುದ್ಧ ನಡೆದುದು ಕೆಲವು ಗಂಟೆಗಳು ಮಾತ್ರ.
3. ಈ ಯುದ್ಧ ಸಂದರ್ಭದಲ್ಲಿ ರಾಮರಾಯನು ಆಕಸ್ಮಿಕವಾಗಿ ಅಹ್ಮದ್‌ನಗರದ ಹುಸೇನ್ ನಿಜಾಂಶಾಹನ ದಳಪತಿಗಳಲ್ಲೊಬ್ಬನಾಗಿದ್ದ ಚೆಲಬಿ ರೂಮೀಖಾನನ ಕೈಗೆ ಸಿಕ್ಕಿಬಿದ್ದ. ರೂಮೀಖಾನ್ ಏರಿ ಕುಳಿತಿದ್ದ 'ಗುಲಾಮ್‌ಅಲಿ' ಎಂಬ ಆನೆಯು ಗಾಯಾಳುವಾಗಿ ಬಿದ್ದಿದ್ದ ರಾಮರಾಯನನ್ನು ಎತ್ತಿಕೊಂಡು ತನ್ನ ಬೆನ್ನಮೇಲಿನ ರೂಮೀಖಾನನ ವಶಕ್ಕೆ ಒಪ್ಪಿಸಿತು. ರೂಮೀಖಾನನು ಇನ್ನೂ ಜೀವಂತವಿದ್ದ ರಾಮರಾಯನನ್ನು ತಂದು ನಿಜಾಂಶಾಹನ ವಶಕ್ಕೆ ಕೊಟ್ಟ.
4. ನಿಜಾಂಶಾಹನು ಸೆರೆಸಿಕ್ಕ ರಾಮರಾಯನ ತಲೆಯನ್ನು ಕತ್ತರಿಸಲು ಆಜ್ಞೆ ಮಾಡಿದ. ಅವನ ಸೈನಿಕರಲ್ಲೊಬ್ಬನು ರಾಮರಾಯನ ಕೊರಳನ್ನು ಕತ್ತರಿಸಿದ. ರಾಮರಾಯನ ದೇಹದಿಂದ ಬೇರ್ಪಡಿಸಿದ ರುಂಡವನ್ನು ಉದ್ದನೆಯ ಭಲ್ಲೆಗೆ ಚುಚ್ಚಿ, ಅದೇ ಆನೆಯ ಮೇಲೆ (ಗುಲಾಮ್‌ಅಲಿ ಎಂಬ ಆನೆ) ಎತ್ತರವಾಗಿ ಇಟ್ಟು, ಅದನ್ನು ಯುದ್ಧಭೂಮಿಯಲ್ಲಿ

ಪ್ರದರ್ಶಿಸಲಾಯಿತು. ಇದರಿಂದ ಆಘಾತಗೊಂಡ ವಿಜಯನಗರದ ಸೇನೆಯು ರಣಾಂಗಣದಿಂದ ಪಲಾಯನ ಮಾಡಿತು.

5. ರಾಮರಾಯನ ಶಿರಶ್ಚೇದನವಾದುದು ತಂಗಡಗಿ ಗ್ರಾಮದಲ್ಲಿ, ಅಂದರೆ ತಂಗಡಗಿ ರಣಾಂಗಣದಲ್ಲಿ.

6. ಬಿಜಾಪುರದ ಅಲಿ ಆದಿಲ್‌ಶಾಹನ ಸೂಚನೆಯ ಮೇರೆಗೆ ರಾಮರಾಯನ ರುಂಡವನ್ನು ಕಾಶಿಗೆ ಕಳುಹಿಸಿ ಕೊನೆಯ ಗೌರವ ಸಲ್ಲಿಸಲಾಯಿತು.

3. ರಾಮರಾಯನ ರುಂಡ ಕುರಿತ ಚರ್ಚೆಗಳು

ಸಮಕಾಲೀನ ಮತ್ತು ಆ ನಂತರದ ಕನ್ನಡ ಮತ್ತು ಪರ್ಶಿಯನ್ ಆಕರಗಳು ರಕ್ಕಸಗಿ ತಂಗಡಗಿ ನಿರ್ಣಾಯಕ ಯುದ್ಧ ಸಂದರ್ಭದ ಬಗೆಗೆ – ಮುಖ್ಯವಾಗಿ, ರಾಮರಾಯನ ಅಂತ್ಯದ ಬಗೆಗೆ ಸೂಚನೆ ನೀಡುತ್ತವೆ. ಆದರೆ ಇಲ್ಲಿಯ ಜಿಜ್ಞಾಸೆಯು ರಾಮರಾಯನ ರುಂಡವನ್ನು ಆತನ ದೇಹದಿಂದ ಬೇರ್ಪಡಿಸಿದ ವಿಧಾನ ಕುರಿತದ್ದು. ಲಭ್ಯವಿರುವ ಆಕರಗಳಲ್ಲಿ 'ಶಿರಶ್ಚೇದನಗೈದು', 'ತಲೆಕೊಯಿದು', 'ತಲೆಯನ್ನು ಬೇರ್ಪಡಿಸಿ', 'ತಲೆಯನ್ನು ಕಡಿದು', 'ಕೊರಳನ್ನು ಕೊಯಿದು' ಇತ್ಯಾದಿಯಾಗಿ ವರ್ಣಿಸಲಾಗಿದೆ. ಆದರೆ ಇವುಗಳೊಡನೆ 'ಫಿರಂಗಿಯನ್ನು ಹಾರಿಸಿ (ಫಿರಂಗಿಯಿಂದ ಹೊಡೆದು) ರಾಜಭೂವರನ ತಲೆಯನ್ನು ಹೊಯಿದು' ಎಂಬ ಗೊಂದಲದ ಪಾಠಾಂತರವೂ ಸೇರಿಕೊಂಡು ಕೆಲವು ಇತಿಹಾಸಕಾರರ ದಿಕ್ಕು ತಪ್ಪಿಸಿದೆ. ಒಟ್ಟಿನಲ್ಲಿ ರಕ್ಕಸಗಿ ತಂಗಡತಿ ನಿರ್ಣಾಯಕ ಯುದ್ಧದಲ್ಲಿ ವಿರೋಧಿಗಳು ರಾಮರಾಯನ ರುಂಡವನ್ನು ಕತ್ತರಿಸಿದುದು ಸ್ಪಷ್ಟ.

ಬಿಜಾಪುರದ ಅಲಿ ಆದಿಲ್‌ಶಾಹನು ರಾಮರಾಯನ ಸಾಕುಮಗನಾಗಿ ಬೆಳೆದವನು. ಅವರ ಪೋಷಣೆಗಾಗಿ ರಾಮರಾಯನು ರಾಯಚೂರು, ಮುದಗಲ್ಲು ಮತ್ತು ಆದವಾನಿಗಳನ್ನು ಬಿಟ್ಟುಕೊಟ್ಟಿದ್ದ. ರಾಮಾಜಿ ತಿರುಮಲ ಹರಿಕಾರೆಯ 'ರಾಮರಾಜನ ಬಖೈರು' ಪ್ರಕಾರ, ರಣರಂಗದಲ್ಲಿ ರಾಮರಾಯನು ಸೆರೆಸಿಕ್ಕಿದ್ದು ತನ್ನ 'ಸಾಕುಮಗ' ಬಿಜಾಪುರದ ಆದಿಲ್ ಶಾಹನಿಗೇ. ಹತನಾದದ್ದು ಸಹಾ ಈ ಸಾಕುಮಗನ ಸ್ವಂತ ಕೈಯಿಂದಲೇ ! ವೆಂಕಯ್ಯನ 'ರಾಮರಾಜೀಯಮು' ತೆಲುಗು ಕಾವ್ಯಕೃತಿಯನ್ನು ಹೊರತುಪಡಿಸಿದರೆ, ಕನ್ನಡದಲ್ಲಿ ದೊರೆಯುವುದು 'ರಾಮರಾಜನ ಬಖೈರು' ಮಾತ್ರ. ಪರ್ಶಿಯನ್ ಆಕರಗಳು ಒದಗಿಸುವ ಮಾಹಿತಿಯ ಆಚೆಗೆ ಈ ಬಖೈರು ನೀಡುವ ಮಾಹಿತಿಯನ್ನು ಇತಿಹಾಸಕಾರರು ಆದ್ಯಂತವಾಗಿ ಪರಿಶೀಲಿಸಿಲ್ಲವಾದ್ದರಿಂದ, ಅಲಿ ಆದಿಲ್‌ಶಾಹ್ – ವಿಜಯನಗರ – ರಾಮರಾಯರ ಅಂತರ್‌ಸಂಬಂಧಗಳನ್ನು ವಿಮರ್ಶಿಸುವುದು ಸುಲಭವೆನಿಸುವುದಿಲ್ಲ. ಬಖೈರು ಸೂಚಿಸಿರುವಂತೆ, ಅಲಿ ಆದಿಲ್‌ಶಾಹನು 'ಪಂಚಶಾಹಿ'ಗಳ ಒಕ್ಕೂಟದ ಭಾಗವಾಗುವ ಪ್ರಸಂಗ ಒದಗಿದುದು, ಇನ್ನಿತರ ಸುಲ್ತಾನರು ಅವನಿಗೆ ಒಡ್ಡಿದ ಆಕ್ರಮಣದ ಬೆದರಿಕೆಯ ಕಾರಣವಾಗಿ. 'ನೀನು ನಮ್ಮ ಸಂಗಡ ಬಾರದಿದ್ದರೆ, ಮೀರಿದ ಕಾಲಕ್ಕೆ ನಿನ್ನನ್ನು ಮತ್ತು ರಾಮರಾಯನನ್ನು ಎದುರಿಸಿ ಲಡಾಯಿ ಮಾಡುತ್ತೇವೆಂಬ' ಸಂದೇಶವು ಇತರ ಸುಲ್ತಾನರಿಂದ ಅಲಿ ಆದಿಲ್‌ಶಾಹಗೆ ತಲುಪಿದ್ದಿತೆಂದು ಹೇಳಲಾಗಿದೆ.

ಆದರೆ ಅಲಿ ಆದಿಲ್‌ಶಹನು ಸ್ವಯಂ ಇತರ ಸುಲ್ತಾನರೊಡನೆ ಸೇರಿ ರಾಮರಾಯನ ವಿರುದ್ಧ ಪಿತೂರಿ ಮಾಡಿದ್ದಿರಬಹುದೆಂಬ ಸಂಗತಿಗಳೂ ಕಂಡುಬರುತ್ತದೆ. ಉದಾಹರಣೆಗೆ, ಲಿಂಗಣ್ಣ ಕವಿಯು ತನ್ನ 'ಕೆಳದಿನೃಪವಿಜಯಂ' ಚಂಪೂಕಾವ್ಯದಲ್ಲಿ "ಬಳಿಕ್ಕಂ ವಿಜಾಪುರದ ಅಲ್ಲಅದುಲಷಹನ ಸಂಚಿನಮೇಲಾ ಪಾತುಶಾಹರೊಂದಾಗಿ ಮೋಸದ ಮೇಲೆ ಶಾಲಿವಾಹನ ಶಕವರ್ಷ 1483ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳದಲ್ಲಿ ರಕ್ಕಸದಂಗಡಿಯೆಂಬ ಸ್ಥಳದಲ್ಲಿ ರಾಮರಾಯರಂ ಪಿಡಿದು ಶಿರಶ್ಚೇದನಂಗೈದು" (ಚತುರ್ಥಾಶ್ವಾಸಂ) ಎನ್ನುತ್ತಾನೆ. ಈ ಅಲಿ ಆದಿಲ್‌ಶಾಹನು ದಕ್ಷಿಣದ ಸುಲ್ತಾನರ ಒಕ್ಕೂಟದ ಪರವಾಗಿದ್ದು, ರಕ್ಕಸಗಿ–ತಂಗಡಗಿ ಯುದ್ಧಾರಂಭದ ಮುನ್ನ ತಾನು ಕಳೆದುಕೊಂಡಿದ್ದ ಪ್ರದೇಶಗಳನ್ನು

ಹಿಂದಿರುಗಿಸಲು ರಾಮರಾಯನನ್ನು ಕೇಳಿದ್ದನೆಂಬುದನ್ನು ಗಮನಿಸಬಹುದು. 'ರಾಮರಾಜನ ಬಖೈರು' ಸಹ ರಾಮರಾಯನ ವಿರುದ್ಧ ದಂಡೆತ್ತಿ ಬರುತ್ತಿದ್ದ ಇತರ ಮೂವರು ಸುಲ್ತಾನರ ಸಮಸ್ತ ಸೇನೆಯು ತನ್ನ ರಾಜ್ಯದ ಮೂಲಕವೇ ಹಾದು ಮುಂದುವರೆಯಲು ಅಲಿ ಆದಿಲ್‌ಶಾಹನು ಅವಕಾಶವಿತ್ತುದನ್ನು ಸ್ಪಷ್ಟಪಡಿಸುತ್ತದೆ.

ಬಿಜಾಪುರದ ಅಲಿ ಆದಿಲ್‌ಶಾಹನು ರಣಾಂಗಣದಲ್ಲಿ ರಾಮರಾಯನನ್ನು ಕೊಂದಿರುವ ಸಾಧ್ಯತೆ ಕಡಿಮೆಯೆನ್ನುವ ಇತಿಹಾಸಕಾರರು, ಕ್ಯಾಪ್ಟನ್ ಬ್ರಿಗ್ಸ್ ಎಂಬುವರು ತಮ್ಮ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಗತಿಯನ್ನು ಪರಿಶೀಲಿಸಲೆತ್ನಿಸಿದ್ದಾರೆ. 'ಶಿರಶ್ಚೇದಕನ ವಂಶಜರು' ಬಿಜಾಪುರದಲ್ಲಿ ಮಾಡುತ್ತಿದ್ದ 'ರಾಮರಾಯನ ರುಂಡದ ಪೂಜೆ'ಯು, ರಾಮರಾಯನನ್ನು ಅಲಿ ಆದಿಲ್‌ಶಾಹನ ಪಾಳಯದಲ್ಲೆ ಕೊಂದಿರಬಹುದೆಂಬ ಸಂಶಯವನ್ನು ವ್ಯಕ್ತಪಡಿಸುತ್ತಾರೆ ಬ್ರಿಗ್ಸ್. ಆದರೆ ರಾಮರಾಯನ 'ಕಲ್ಲಿನತಲೆ'ಯ ಬಗೆಗೂ ಪ್ರತ್ಯೇಕ ಚರ್ಚೆಯಾಗಬೇಕೆನ್ನುತ್ತಾರೆ ಇತಿಹಾಸಕಾರರು. ಈ ಕಲ್ಲಿನ ರುಂಡ ಕುರಿತು ಈವರೆಗೆ ನಡೆದಿರುವ ಒಂದೆರಡು ಚರ್ಚೆಗಳು ಸಮಾಧಾನಕರವಲ್ಲದವು. ಒಟ್ಟಿನಲ್ಲಿ, ರಾಮರಾಯನು ಎಲ್ಲಿ, ಹೇಗೆ ಮತ್ತು ಯಾರಿಂದ ಕೊಲೆಯಾದನೆಂಬುದು ಇನ್ನೂ ಸ್ಪಷ್ಟವಾಗಿಲ್ಲವೆಂಬ ಕೆಲವು ಇತಿಹಾಸಕಾರರ ಅಭಿಪ್ರಾಯವನ್ನು ಗಮನಿಸುವುದು ಅಗತ್ಯ.

ರಣಭೂಮಿಯಲ್ಲಿ ಸೆರೆಸಿಕ್ಕನಂತರ ರಾಮರಾಯನು ಅಲಿ ಆದಿಲ್ ಶಾಹನೊಂದಿಗೆ ನಡೆಸಿದ ಸಂವಾದ ಮತ್ತು ತನ್ನ ರುಂಡವನ್ನು ಬಲಿಕೊಟ್ಟ ಸಂದರ್ಭಗಳನ್ನು 'ರಾಮರಾಜನ ಬಖೈರು' ದಾಖಲಿಸಿರುವುದು ಹೀಗೆ: "ಅರಸು (ರಾಮರಾಯ) ಅಲಿಆದಿಲ್‌ಶಾಹಗೆ ಆಡಿದ್ದು: 'ನೀನಾದರೂ ನನ್ನ ಮಗನೆನಿಸಿಕೊಂಡು ಯೀ ಪ್ರಕಾರ ಮಾಡೋದು ಯುಕ್ತವಲ್ಲಾ. ನೀನಾದರೆ ಧರ್ಮವಂತ. ಸಾಕಿದ ತಂದಿಗೆ ಹಡದ ತಂದಿಗೆ ದಗೆಮಾಡಿದ ತರವಾಯ ಬೆಳದಿ. ಮುಂದೆ ದೊಡ್ಡ ಭಕ್ತಾವಾನನಾದಿ. ಗುರುದ್ರೋಹಿ ಪಿತೃದ್ರೋಹಿತನಕ್ಕೆ ಹೇಸಲಿಲ್ಲಾ, ಹಿಂದುಳಿಯಲಿಲ್ಲ. ಬಹಳ ಕೀರ್ತಿ ಬಂತು. ನಾಮೋಸಿಕಿ ಬಂತು. ಯಿನ್ನು ಮೇಲೆ ನನ್ನ ಯತ್ನವೇನು? ದಂಡೆಲ್ಲಾ ಮುಳುಗಿಹೋಯಿತು. ರಣಮಂದಿಯೆಲ್ಲಾ ಸತ್ತುಬಿತ್ತು. ಮಗನೆಂದು ನಾನು ನಂಬಿಯಿದ್ದೆನು. ನನ್ನ ಸಂಗಡ ಮೋಸಾಮಾಡನೆಂದು ನಂಬಿಯಿದ್ದೆನು; ಮತ್ತು ನೀನು ಬೇಮಾನಾಗಿ ಹೋದೆ. ನನ್ನನು ದಗೆ ಮಾಡಿದೆ. ವಳ್ಳೆದು, ಯೇನಾಯಿತು? ನೀನು ಮಗನಾದುದಕ್ಕು ನಮ್ಮನ ವೈರಿಕೈಗೆ ಕೊಟ್ಟು ತಲೆಹೊಯಿಸಬೇಡ. ನೀನೆ ನಮ್ಮ ಪಿರಂಗಿ ತೆಗೆದುಕೊಂಡು ತಲೆ ಶಿರಶ್ಚೇದಮಾಡುವದು... ನಿನ್ನ ಮನಸಿನಂತೆ ಆಯಿತು; ಯಿನ್ನು ಯತ್ನ ನಡೆಯಲಿಕೆ ಇಲ್ಲವು. ನಮ್ಮ ಮರಣಗಾಲ ಬಂತು. ಯಿನ್ನು ಯತ್ನ ನಡಿಯಲಿಕೆ ಇಲ್ಲವು. ನೀನು ಮಗನಾದದಕ್ಕು ವೈರಿಕೈಗೆ ನನ್ನನ ಕೊಡದೆ ನೀನೆ ಕತ್ತಿ ತೆಗೆದು ವಂದೆ ಏಟಿಗೆ ಕತ್ತೀಲಿ ಹೊಡದು ಬಿಡುವದು. ಯರಡನೆ ಕಡತಕ್ಕೆ ಮಜೂರು ಮಾಡಲಾಗದು' ಯಂದು ದೊಡ್ಡ ಆಣೆಯಿಟ್ಟು ತನ್ನ ದೇವರ ಸ್ಮರಣೆ ಮಾಡಿದನು. ಆ ತರುವಾಯ ಅಲ್ಲಿಯದುಲಶಾಹನು ಯಿದ್ದಲಿಗೆ ಬಂದು ಯದುರಿಗೆ ಕೂತುಕೊಂಡನು. (ಅಲಿ ಆದಿಲ್‌ಶಾಹನು) ಖಾಸಾ ತಾನೇ ಪಿರಂಗಿ ತೆಗೆದುಕೊಂಡು ರಾಜಭೂವರ (ರಾಮರಾಯ)ನ ತಲೆಹುಯಿದನು. ಈ ಸಮಾಚಾರ ಮೂರು ಮಂದಿ ಪಾದಶಹರು ಕೇಳಿ ಸಂತೋಷಿತರಾದರು."

'ರಾಮರಾಜನ ಬಖೈರು' ಕೊಡುವ ಈ ಮೇಲಿನ ಮಾಹಿತಿಯ ಹಿನ್ನೆಲೆಯಲ್ಲಿ ಸ್ಪಷ್ಟಗೊಳ್ಳುವ ಸಂಗತಿಯೆಂದರೆ, ರಾಮರಾಯನನ್ನು ಸೆರೆಹಿಡಿದವನು ಮತ್ತು ಆತನ ಶಿರಶ್ಚೇದ ಮಾಡಿದವನು ಆತನ 'ಸಾಕುಮಗ' ಬಿಜಾಪುರದ ಅಲಿ ಆದಿಲ್‌ಶಾಹನಲ್ಲದೆ ಬೇರೆ ಅಲ್ಲ. ರಾಜರಾಯನನ್ನು ಸೆರೆಹಿಡಿಯುವ ಮುನ್ನ ಈತನ ಸೇನೆಯು ವಿಜಯನಗರದವರ ಮೇಲೆ ತೀವ್ರತನದ ದಾಳಿ ನಡೆಸಿದುದನ್ನು ಬಖೈರು ಎತ್ತಿತೋರಿಸಿದೆ.

4. ಪಿರಂಗಿ (ಫಿರಂಗಿ) ಕತ್ತಿಯ ವಿಚಾರ

ರಾಮರಾಯನು ಹೊಂದಿದ್ದ ಆಯುಧವನ್ನು 'ಪಿರಂಗಿ' ಎಂದು ಗುರುತಿಸಿದೆ 'ರಾಮರಾಜನ ಬಖೈರು'. ಅದರ ಪ್ರಕಾರ, ಬಿಜಾಪುರದ ಅಲಿ ಆದಿಲ್‌ಶಾಹನು ರಾಮರಾಯನ 'ತಲೆಯನ್ನು ಕಡಿದದ್ದು' ಇದೇ ಆಯುಧದಿಂದ. ಇದನ್ನು

ಕತ್ತಿಯೆಂದು ಕರೆದಿರುವುದರಿಂದ, ಈ ಕತ್ತಿಯ ಸ್ವರೂಪ ಕುರಿತು ಅರಿಯುವುದು ಅಗತ್ಯ. ವಿಜಯನಗರದ ಸರ್ವಾಧಿಕಾರಿ ಅಳಿಯ ರಾಮರಾಯನಂಥಾ ಪ್ರಭಾವಿ ವ್ಯಕ್ತಿಯು ಅಧಿಕೃತವಾಗಿ ಹೊಂದಿದ್ದ ಆಯುಧ ಇದಾಗಿದ್ದ ಪಕ್ಷದಲ್ಲಿ, ಇದು ಉತ್ಕೃಷ್ಟ ಲೋಹದಲ್ಲಿ ತಯಾರಿಸಲಾದ ಶ್ರೇಷ್ಠದರ್ಜೆಯ ಕತ್ತಿಯಾಗಿರಲೇಬೇಕು. ಈಗರ್‌ಟನ್ ಆಫ್ ಟ್ಯಾಟನ್ ಅವರು ಪಿ(ಫಿ)ರಂಗಿ ಕತ್ತಿಯ ಮಹತ್ವವನ್ನು ವರ್ಣಿಸಿರುವುದು ಹೀಗೆ: "This is chiefly used by good swordsmen of cavalry, and occassionally by men of high rank; a favourite weaon with good soldiers." ಇಂಥಾ ಶ್ರೇಷ್ಠದರ್ಜೆಯ ಕತ್ತಿಯೊಂದು ರಾಮರಾಯನ ಬಳಿಯಲ್ಲಿ ಅವನ ಪ್ರತಿಷ್ಠೆಗನುಗುಣವಾಗಿಯೇ ಇದ್ದಿತೆನ್ನಲಡ್ಡಿಯಿಲ್ಲ. ವಿಜಯನಗರ (Vizianagaram) ಮೂಲದಿಂದ ಸಂಗ್ರಹಿಸಿಕೊಳ್ಳಲಾದ ಆಯುಧವೊಂದಕ್ಕೆ 'ಫರಂಗ್‌ಕತ್ತಿ' (Farang Katti) ಎಂಬ ಹೆಸರಿದ್ದುದನ್ನು ಈಗರ್‌ಟನ್ ಅವರು ಗುರುತಿಸಿಕೊಟ್ಟಿದ್ದಾರೆ.

ಮೊದಲಿಗೆ, 1922–23ರಲ್ಲಿ, ರಾಮರಾಜನ ಮೂಲ ಬಖೈರನ್ನು ಸಂಗ್ರಹರೂಪದಲ್ಲಿ ಹಾಗೂ ಸರಳಗನ್ನಡದಲ್ಲಿ ಪ್ರಕಟಿಸಿದವರು ಪ್ರಸಿದ್ಧ ವಿದ್ವಾಂಸ ತಿ.ತಾ.ಶರ್ಮಾ ಹಾಗೂ 1932ರಲ್ಲಿ ಮರಾಠೀಭಾಷೆಯಲ್ಲಿರುವ ಇದೇ ಬಖೈರನ್ನು ಪರಾಮರ್ಶಿಸುವುದರೊಡನೆ, ತಿ.ತಾ ಶರ್ಮಾ ಅವರು ಪ್ರಕಟಿಸಿದ ಕನ್ನಡ ಬಖೈರ್‌ಗೆ ಪೂರಕ ಟಿಪ್ಪಣಿಗಳನ್ನೊದಗಿಸಿದವರು ಸಮರ್ಥ ಸಂಶೋಧಕ ನಾ. ಶ್ರೀ. ರಾಜಪುರೋಹಿತ. 1931ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಹಾಗೂ ತಿ.ತಾ. ಶರ್ಮಾ ಅವರು ಸಂಪಾದಿಸಿದ 'ಚಾರಿತ್ರಿಕ ದಾಖಲೆಗಳು' ಎಂಬ ಸಂಗ್ರಹದಲ್ಲಿ 'ಹೈದರಾನಾಮೆ (ಬಖೈರು)' ಮತ್ತು 'ವೀರರಾಜೇಂದ್ರರ ಪತ್ರ'ಗಳೊಡನೆ 'ರಾಮರಾಯನ ಬಖೈರು' ಇನ್ನೊಮ್ಮೆ ಪ್ರಕಟಗೊಂಡಿತು. ವಾಸ್ತವದಲ್ಲಿ ತಿ.ತಾ. ಶರ್ಮಾ ಅವರ 'ರಾಮರಾಯನ ಬಖೈರು' ಪಾಠವು ಮೂಲಪಾಠದ ಸಂಗ್ರಹರೂಪವೇ ವಿನಾ ಸಮಗ್ರವಾದುದಲ್ಲ. ಮೂಲ ಬಖೈರ್‌ನ ಪಾಠವನ್ನೇ ಸರಳೀಕರಿಸಿ ಹೇಳುವ ಪ್ರಯತ್ನದಲ್ಲಿ ಶರ್ಮಾ ಅವರಿಂದ ಸಣ್ಣ ಲೋಪವೊಂದು ಘಟಿಸಿದುದು ವಿಷಾದನೀಯ. ಇಂಥಾ 'ಪಾಠಾಂತರ ಪ್ರಕ್ರಿಯೆ'ಯಲ್ಲಿ ಕೆಲವೊಮ್ಮೆ ದೋಷಗಳುಂಟಾಗುವುದು ಸಹಜ. ಉದಾಹರಣೆಗೆ, 'ರಾಮರಾಜನ ಬಖೈರು'ನ ಮೂಲಪಾಠದಲ್ಲಿ, ರಾಮರಾಯನು ಅಲಿ ಆದಿಲ್‌ಶಹನಿಗೆ, "ನೀನು ಮಗನಾದದಕ್ಕು ನಮ್ಮನ ವೈರಿಕೈಗೆ ಕೊಟ್ಟು ತಲೆ ಹೊಯಿಸಬೇಡ, ನೀನೆ ನನ್ನನ್ನು ಪಿರಂಗಿ ತೆಗೆದುಕೊಂಡು ತಲೆ ಶಿರಚ್ಛೇದಾಮಾಡುವುದು ... ನೀನೆ ಕತ್ತಿ ತೆಗೆದು ವಂದೇಏಟಿಗೆ ಕತ್ತೀಲಿ ಹೊಡೆದುಬಿಡುವದು... (ಅಲಿ ಆದಿಲ್‌ಶಾಹನು) ಖಾಸಾ ತಾನೇ ಪಿರಂಗಿ ತೆಗೆದುಕೊಂಡು ರಾಜಭೂವರನ (ರಾಮರಾಯನ) ತಲೆ ಹುಯಿದನು" ಎಂದಿದೆ.

ಈ ಮಾತನ್ನು ತಮ್ಮ ಪಾಠಾಂತರದಲ್ಲಿ, ತಿ.ತಾ. ಶರ್ಮಾ ಅವರು, "ಮಗನಾದುದಕ್ಕೆ ನನಗೊಂದು ಉಪಕಾರ ಮಾಡು. ನನ್ನನ್ನು ವೈರಿಕೈಗೆ ಕೊಟ್ಟು ತಲೆಹೊಯಿಸಬೇಡ, ನೀನೆ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು ಎಂದನು. ಆದಿಲಶಹನು ಕೊಂಚ ನಿಧಾನಿಸಿ ತರುವಾಯ ತಾನೆ ಫಿರಂಗಿಯನ್ನು ಹಾರಿಸಿ ರಾಜಭೂವರನ ತಲೆಯನ್ನು ಹೊಯಿದನು" ಎಂದು ಪರಿವರ್ತಿಸಿದ್ದಾರೆ. ತಿ.ತಾ. ಶರ್ಮಾ ಅವರ ಇಂಥಾ ಪಾಠವನ್ನೆ ನಾ.ಶ್ರೀ ರಾಜಪುರೋಹಿತರು ಬಳಸಿಕೊಂಡು ಅದರಲ್ಲಿರುವ ಕೆಲವಂಶಗಳಿಗೆ ಟಿಪ್ಪಣಿಗಳನ್ನೊದಗಿಸಿದ್ದಾರೆ. ಮೂಲಪಾಠವನ್ನು ಸರಳೀಕರಿಸುವ ನೆಪದಲ್ಲಿ ಕೆಲವೊಮ್ಮೆ ಈ ರೀತಿಯಲ್ಲಿ ವಿರೂಪಿಸಿರುವ ಸಂದರ್ಭಗಳು ಸಾಕಷ್ಟಿವೆ.

ಪ್ರಸ್ತುತ ಚರ್ಚೆಗೆ ಸಂಬಂಧಿಸಿದಂತೆ, ರಾಮರಾಯನ ಕೊನೆಗಾಲದ ಸನ್ನಿವೇಶವನ್ನು ಚಿತ್ರಿಸುವ ನಿಟ್ಟಿನಲ್ಲ, 'ಕತ್ತಿಯಿಂದ ಕೊಲ್ಲುವ' ಅಥವಾ 'ಫಿರಂಗಿಯನ್ನು ಹಾರಿಸಿ ಕೊಲ್ಲುವ' ಪ್ರಸಂಗವು ವಸ್ತುನಿಷ್ಠ ಇತಿಹಾಸ ಬರವಣಿಗೆಗೆ ಅಡ್ಡಿಯನ್ನುಂಟುಮಾಡುತ್ತವೆನ್ನಬಹುದು. ರಾಮರಾಯನ ಕಡೆಗಾಲದ ವೃತ್ತಾಂತ ಕುರಿತು ಬರೆದಿರುವವರಲ್ಲಿ ಕೆಲವರು ಇತಿಹಾಸಕಾರರು, 'ಫಿರಂಗಿಯನ್ನು ಹಾರಿಸಿ ರಾಮರಾಯನನ್ನು ಹತ್ಯೆ ಮಾಡಲಾಯಿತೆಂಬ' ತಿ.ತಾ. ಶರ್ಮಾ ಅವರ ಪಾಠಾಂತರವನ್ನೇ ನೇರವಾಗಿ ಅನುಸರಿಸಿದ್ದಾರೆ. ಆದರೆ ಡಾ. ಅ. ಸುಂದರರಂಥ ವಿದ್ವಾಂಸರು ಈ ಅಂಶವನ್ನು ಒಪ್ಪದೆ.

ರಾಮರಾಯನನ್ನು ಫಿರಂಗಿಯಿಂದ (Canon) ಹತ್ಯೆ ಮಾಡಿದುದನ್ನು ಈ ಮುಂದಿನಂತೆ ಸ್ಪಷ್ಟವಾಗಿ ಅಲ್ಲಗಳೆಯುತ್ತಾರೆ: "If Ramaraya was hit fatally with a canon, chances of getting his body or head that is said to have been sent later to Kasi to put in the Ganga, are very remote" (*The Vijayanagara Heritage:* 1996: 109). ಆದ್ದರಿಂದ 'ಫಿರಂಗಿಯನ್ನು ಹಾರಿಸಿ ರಾಮರಾಯನ ತಲೆಯನ್ನು ಹೊಯಿದ' ವಿಚಾರವು ಅವಾಸ್ತವಿಕವಾದುದೆಂಬುದು ಸ್ಪಷ್ಟ. 'ಪಿ(ಫಿ)ರಂಗಿ' ಎಂಬ ಕತ್ತಿಯಿಂದಲೇ ರಾಮರಾಯನ ರುಂಡವನ್ನು ಹಾರಿಸಲಾಯಿತೆಂಬುದಕ್ಕೆ 'ರಾಮರಾಜನ ಬಖೈರ್'ನ ಮೂಲಪಾಠವು ಸಮರ್ಥನೆ ಒದಗಿಸುತ್ತದೆ.

ಪಿ(ಫಿ)ರಂಗಿ' ಎಂಬುದರ ವಿವಿಧ ರೂಪಗಳು ದಾಖಲೆಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಫರಂಗ್ (Farang), ಫಿರಂಗಿ (Firangi), ಫರಂಗ್‌ಕತ್ತಿ (Farang Katti), ಬಿಚ್ಚುಫಿರಂಗಿ (Unsheathed Sword) ಎಂಬ ರೂಪಗಳು ಮುಖ್ಯವಾದವು. ಪಿ(ಫಿ)ರಂಗಿಕತ್ತಿಯು ವಿಜಯನಗರದಲ್ಲಿ ಮಾತ್ರವಲ್ಲದೆ, ಶ್ರೀರಂಗಪಟ್ಟಣ, ಚಿತ್ರದುರ್ಗ, ತಂಜಾವೂರು, ಗ್ವಾಲಿಯರ್, ಲಾಹೋರ್, ಮೊದಲಾದೆಡೆಗಳಲ್ಲಿಯೂ ದೊರೆತಿದೆ. ಈ ಕತ್ತಿಗಳನ್ನು ಅಧ್ಯಯನಿಸಿರುವ ಪರಿಣತರು, ಇವುಗಳ ಸ್ವರೂಪ, ಮಹತ್ವ, ವೈಶಿಷ್ಟ್ಯ ಇತ್ಯಾದಿ ಕುರಿತು ಸಾಕಷ್ಟು ವಿವರಣೆ ಒದಗಿಸಿದ್ದಾರೆ. ಡಬ್ಲ್ಯು.ಎಫ್. ಸಿಂಕ್ಲೇರ್ ಅವರು (1873) ಪಿ(ಫಿ)ರಂಗಿ ಕತ್ತಿಯು ಯುರೋಪಿನಿಂದ ಪೋರ್ಚುಗೀಸರ ಮೂಲಕ ಭಾರತಕ್ಕೆ ಬಂದಿತೆನ್ನುತ್ತಾರೆ. ಎಜ್.ಜೆ. ವಾಲ್‌ಹೌಸ್ ಅವರು (1878) ಸಹಾ ಇಂಥಾ ಕತ್ತಿಗಳು (Blades) ಯೂರೋಪಿನಿಂದಲೇ ಆಮದಾದುವೆಂಬುದನ್ನು ದೃಢೀಕರಿಸುತ್ತಾರೆ. ಲಾಹೋರ್, ಗ್ವಾಲಿಯರ್, ಶ್ರೀರಂಗಪಟ್ಟಣ ಮೊದಲಾದೆಡೆಗಳಲ್ಲಿರುವ ವಿವಿಧ ಕತ್ತಿಗಳನ್ನು (Swords) ಪರಿಶೀಲಿಸಿ ಅವುಗಳ ವಿವರಣೆಯೊಡನೆ ಕೃತಿ ರಚಿಸಿರುವ, ಇಲ್ಲಿ ಈಗಾಗಲೇ ಪ್ರಸ್ತಾಪಗೊಂಡಿರುವ, ಈಗರ್ಟನ್ ಆಫ್ ಟ್ಯಾಟನ್ ಅವರು (1896), 1817ರಲ್ಲಿ ಹೋಳ್ಕರನ ಸೇನೆಯಿಂದ ಹಾಗೂ 1799ರಲ್ಲಿ ಶ್ರೀರಂಗಪಟ್ಟಣದ ಮೇಲೆ ಇಂಗ್ಲಿಷರು ನಡೆಸಿದ ದಾಳಿಯ ಸಂದರ್ಭದಲ್ಲಿ ಸಂಗ್ರಹಿಸಿಕೊಂಡ 'ಫರಂಗ್‌ಕತ್ತಿ'ಗಳ ವಿವರಣೆ ನೀಡುತ್ತಾರೆ. ಶ್ರೀರಂಗಪಟ್ಟಣದಲ್ಲಿ ದೊರೆತ ಉಕ್ಕಿನ ಹಿಡಿ ಮತ್ತು ಬಂಗಾರದ ಕುಸುರಿ ಕೆಲಸದಿಂದ ಕೂಡಿರುವ 'ಫರಂಗ್‌ಕತ್ತಿ'ಯ ಮೇಲೆ ಹೈದರ್ ಅಲಿಯ ಹೆಸರಿರುವುದು ಗಮನಾರ್ಹ. ಇನ್ನೊಂದು ಕತ್ತಿಯನ್ನು 'ಫಿರಂಗಿ'ಯೆಂದೇ ಗುರುತಿಸಲಾಗಿದ್ದು, ಇದನ್ನೂ ಶ್ರೀರಂಗಪಟ್ಟಣದ ಮುತ್ತಿಗೆಯ ಸಂದರ್ಭದಲ್ಲೇ ಸಂಗ್ರಹಿಸಿಕೊಳ್ಳಲಾಯಿತು.

'ಬಿಚ್ಚುಫಿರಂಗಿ'ಯೆಂಬ ಪ್ರಯೋಗವು ಚಿತ್ರದುರ್ಗ ಇತಿಹಾಸದಲ್ಲಿ ಕಂಡುಬರುತ್ತದೆ. ದುರ್ಗದ ಎರಡನೇ ದೊರೆ ಒಂದನೇ ಓಬಣ್ಣನಾಯಕ ಅಥವಾ ಗಡ್ಡದ ಮದಕರಿನಾಯಕನು (ಕ್ರಿ.ಶ. 1589–1603), ತನ್ನ ತಂದೆ ಮತ್ತು ತಿಮ್ಮಣ್ಣನಾಯಕನ ತರುವಾಯ ದುರ್ಗದ ಸಿಂಹಾಸನವನ್ನೇರಿದ ಸಂದರ್ಭದಲ್ಲಿ, ಆತನಿಗೆ 'ಬಿಚ್ಚುಫಿರಂಗಿ' ಹಿಡಿಸಿ ಗೌರವಿಸಲಾಯಿತು. ದುರ್ಗದ ಹತ್ತನೇ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನನ್ನು (ಕ್ರಿ.ಶ. 1689–1721) ಜನಪದಕವಿಗಳು "ವೀರಮದಕರಿಯ ಸುಕುಮಾರ ಬಿಚ್ಚುಫಿರಂಗಿ । ಭಾರಿ ನಿಗಳಾಂತ ಬಲವಂತಾ । ಬಾಳು ಸಿರಿವಂತಾ ಭಲರೇ ನಿಶ್ಚಿಂತ ॥" ಎಂದೇ ಹಾಡಿ ಹೊಗಳಿದ್ದಾರೆ. 'ಬಿಚ್ಚುಗತ್ತಿ'ಯೆಂಬುದು 'ಬಿಚ್ಚುಫಿರಂಗಿ'ಯ ಇನ್ನೊಂದು ರೂಪವಿದ್ದಿರಬಹುದು. ಫಿರಂಗಿಕತ್ತಿ, ಬಿಚ್ಚುಫಿರಂಗಿಗಳು ರಾಜಗೌರವದ ಹಾಗೂ ಪ್ರತಿಷ್ಠೆಯ ಪ್ರತೀಕವೂ ಆಗಿದ್ದುದನ್ನು ಈ ಅಂಶಗಳು ಪುಷ್ಟೀಕರಿಸುತ್ತವೆ.

5. ಕೆಲವು ಗ್ರಹಿಕೆಗಳು

1. ರಕ್ಕಸಗಿ ತಂಗಡಗಿ ಮಹಾಯುದ್ಧ ಸಂದರ್ಭದಲ್ಲಿ ರಾಮರಾಯನು ಅಹ್ಮದ್‌ನಗರದ ಹುಸೇನ್ ನಿಜಾಂಶಾಹನ ದಳಪತಿ ಚೆಲಬಿ ರೂಮೀಖಾನನಿಗೆ ಸೆರೆಸಿಕ್ಕು, ನಿಜಾಂಶಾಹನ ಪಾಳಯದಲ್ಲೆ ಹತ್ಯೆಗೀಡಾದನೆಂಬುದನ್ನು ಸಾರಿ ಹೇಳುತ್ತವೆ ದಕ್ಷಿಣದ ಸುಲ್ತಾನರ ಪರವಾದ ಪರ್ಶಿಯನ್ ಗ್ರಂಥಗಳು. ಆದರೆ ರಾಮರಾಜನ ಶಿರಶ್ಛೇದನವಾದುದು

ಆತನ ಸಾಕುಮಗ ವಿಜಾಪುರದ ಅಲಿ ಆದಿಲ್‌ಶಾಹನ ಸಮ್ಮುಖದಲ್ಲಿ ಮತ್ತು ಸ್ವತಃ ಅವನ ಕೈಯಿಂದಲೇ ಎಂಬುದನ್ನು ಸ್ಪಷ್ಟಪಡಿಸುತ್ತದೆ ವಿಜಯನಗರ ಪರವಾದ 'ರಾಮರಾಜನ ಬಖೈರು'. ಕೆಲವು ಆಕರಗಳು ಈ ಅಂಶವನ್ನು ಪರೋಕ್ಷವಾಗಿ ಸಮರ್ಥಿಸುತ್ತವೆ.

2. ರಾಮರಾಯನ ಶಿರಶ್ಛೇದನವಾದುದು ಸ್ವತಃ ಆತನ 'ಪಿ(ಫಿ)ರಂಗಿಕತ್ತಿ'ಯಿಂದಲೇ ವಿನಾ, ಕೆಲವು ಇತಿಹಾಸಕಾರರು ಭಾವಿಸುವಂತೆ ಪಿರಂಗಿ(Canon) ಹಾರಿಸಿದುದರಿಂದಲ್ಲ.


3. ರಾಮರಾಯನ ಕತ್ತರಿಸಲಾದ ರುಂಡವನ್ನು ಅಲಿ ಆದಿಲ್‌ಶಹರ ಸೂಚನೆಯ ಮೇರೆಗೆ, ಅಂತಿಮವಾಗಿ ಕಾಶಿ–ವಾರಣಾಸಿಗೆ ಕಳುಹಿಸಿ ಕೊನೆಯ ಗೌರವ ಸಲ್ಲಿಸಲಾಯಿತೆಂದು ಹೇಳುತ್ತದೆ 'ರಾಮರಾಜನ ಬಖೈರು'. ರಾಮರಾಯನ 'ಶಿರಶ್ಛೇದಕನ ವಂಶಜರು' ಬಿಜಾಪುರದಲ್ಲೆ ಇದ್ದರೆಂಬುದು ಅನ್ಯಮೂಲಗಳಿಂದ ವ್ಯಕ್ತಪಡುತ್ತದೆ.

4. ಪರ್ಶಿಯನ್ ಮತ್ತು ಕನ್ನಡ ಆಕರಗಳು ರಾಮರಾಯನ ಹತ್ಯೆ ಕುರಿತು ವಿಧವಿಧವಾಗಿ ವರ್ಣಿಸುವುದರಿಂದ, ಅವುಗಳಲ್ಲಿ ಒಮ್ಮತದಿಲ್ಲದಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದ, ಈ ಆಕರಗಳನ್ನು ಪುನರ್ವಿಮರ್ಶಿಸುವ ಅಗತ್ಯವಿದೆ.

5. ಈ ಸಂಬಂಧದಲ್ಲಿ ನಡೆಯಬಹುದಾದ ಹೆಚ್ಚುವರಿ ಅಧ್ಯಯನಗಳಿಂದ ಈ ಜಿಜ್ಞಾಸೆ ಬಗೆಹರಿದೀತೆನ್ನಬಹುದಷ್ಟೆ.

ಆಕರಸೂಚಿ

1. J.R. Ramanurthy (Ed.), 1996, The Vijayanagara Heritage, Sri Vidya Vijayanagara Hampi Heritage Trust, Anegondi, Hospet.
2. Egerton of Tatton, 1896 (2001), A Description of Indian and Oriental Armour, Asian Educational Services, New Delhi.
3. W.F. Sinclair, 'List of Weapons Used in the Dakhan and Khandesh', The Indian Antiquary, Vol. II, August, 1873.
4. M.J. Walhouse, 'The Old Tanjor Armoury', The Indian Antiquary, Vol. VII, August, 1878.
5. ತಿ.ತಾ. ಶರ್ಮಾ (ಸಂ.), 1971, *ಚಾರಿತ್ರಿಕ ದಾಖಲೆಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಕೃಷ್ಣ ಕೊಲ್ಹಾರ ಕುಲಕರ್ಣಿ, 2002, *ಬಿಜಾಪುರ ಆದಿಲ್‌ಶಾಹಿ* (ಕ್ರಿ.ಶ. 1489–1986), ಸಿಕ್ಯಾಬ, ಆದಿಲಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ.
7. ಕೃಷ್ಣ ಕೊಲ್ಹಾರ ಕುಲಕರ್ಣಿ (ಸಂ.), 2008, *ನಾ.ಶ್ರೀ. ರಾಜಪುರೋಹಿತರ ಸಂಶೋಧನ ಲೇಖನಗಳು* (1887–1953), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
8. ಲಕ್ಷ್ಮಣ್ ತೆಲಗಾವಿ (ಸಂ.), 2011, *ರಾಮಾಜಿ ತಿರುಮಲ ಹರಿಕಾರೆಯ ರಾಮರಾಜನ ಬಖೈರು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.



ಫಿರಂಗಿ – ಫಿರಂಗಿಕತ್ತಿ (Firang (Firangi) Katti) [Length 3ft., 6 inch; Width 1½ inch]

31. ಸೌಮ್ಯ ಸೋಮೇಶ್ವರ ದೇವಾಲಯ ನಿರ್ಮಾಣದಲ್ಲಿ ಸಂಕೇತಾಕ್ಷರಗಳು

ಡಾ. ಜಗದೀಶ

ಹಂಪಿಯ ವಿಠಲದಿಂದ ವೆಂಕಟಾಪುರಕ್ಕೆ ಹೋಗುವ ರಸ್ತೆಯಲ್ಲಿರುವ ನಿಂಬಾಪುರ ಗ್ರಾಮದಲ್ಲಿ ಸೌಮ್ಯ ಸೋಮೇಶ್ವರ ದೇವಾಲಯವಿದೆ. ಇದು ತಂಗಭದ್ರಾನದಿಯ ಬಲ ದಂಡೆಯ ಮೇಲಿದೆ. ದೇವಾಲಯದ ಹಿಂಬದಿಯಲ್ಲಿ ಸಣ್ಣ ಕಲ್ಲುಗಳಿಂದ ಕೂಡಿದ ಗುಡ್ಡವಿದೆ. ಬಂಡೆಯೊಂದರ ಮೇಲಿರುವ ಶಾಸನವು ಸೌಮ್ಯ ಸೋಮೇಶ್ವರ ದೇವಾಲಯವನ್ನು ಉಲ್ಲೇಖಿಸುತ್ತದೆ. ನಿಂಬಾಪುರದ ಕಪಿಲಾಶ್ರಮದ ಬಳಿಯ ಶಾಸನವನ್ನು ಪ್ರೌಢದೇವರಾಯನ ಕಾಲದಲ್ಲಿ 31–12–1455ರಲ್ಲಿ ಹೊರಡಿಸಲಾದ್ದು ತುಂಗಭದ್ರಾನದಿಯ ದಕ್ಷಿಣ ತೀರದಲ್ಲಿ ಕುಮಾರಗಿರಿ ಅಗ್ರಹಾರದ ಬಳಿ ಸೋಮಲಾಪುರದಲ್ಲಿ ಹೊಸದಾಗಿ ಪ್ರತಿಷ್ಠೆಯಾದ ಸೌಮ್ಯ ಸೋಮೇಶ್ವರ ದೇವರ ಪೂಜೆಗಾಗಿ ಗ್ರಾಮ ದತ್ತಿಯನ್ನು ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ದೇವಾಲಯವನ್ನು ರಾಯಪಣ್ಣ ಎಂಬುವನು ಕಟ್ಟಿಸುತ್ತಾನೆ. ದೇವಾಲಯದ ಉಸ್ತುವಾರಿಯನ್ನು ಹುಲಿಗೆರೆಯ ಮಂಗಣ್ಣ ಅಯ್ಯನ ಮಗ ನಾಗಣ್ಣ ಅಯ್ಯನಿಗೆ ನೀಡುತ್ತಾನೆ. ಶಾಸನದಲ್ಲಿ ಸೋಮೇಶ್ವರ ದೇವಾಲಯ, ಗೋಪುರ, ರಂಗಮಂಟಪ, ದೀಪದಾನ ಸ್ಥಂಭ, ಸಂಧ್ಯಾಮಂಟಪಗಳನ್ನು ಕಟ್ಟಿಸಿದ ಉಲ್ಲೇಖವಿದೆ.

ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗ ಹೊಂದಿದೆ. ದೇವಾಲಯವು ಏಕತಲ ಶಿಖರವನ್ನು ಹೊಂದಿದ್ದು ದ್ರಾವಿಡ ಮಾದರಿಯಲ್ಲಿದೆ. ಮೇಲ್ಕಟ್ಟಡವು ಇಟ್ಟಿಗೆ ಮತ್ತು ಗಾರೆಯಿಂದ ಕೂಡಿದೆ. ನವರಂಗದ ಕೆಲ ಭಾಗದಲ್ಲಿ ನೆಲಹಾಸು ಇದೆ. ಗರ್ಭಗೃಹದಲ್ಲಿ ಮೂಲ ವಿಗ್ರಹ ಇರುವುದಿಲ್ಲ. ದೇವಾಲಯದ ಎಡ ಭಾಗದಲ್ಲಿ ಅಮ್ಮನವರ ದೇವಾಲಯ ಇದೆ. ಇದು ಇಟ್ಟಿಗೆಯ ದೇವಾಲಯವಾಗಿದ್ದು, ಈಗ ಕುಸಿದು ಬಿದ್ದಿದೆ. ಎರಡೂ ದೇವಾಲಯಗಳು ಪೂರ್ವಾಭಿಮುಖವಾಗಿವೆ. ದೇವಾಲಯದ ಮುಂಬಾಗದಲ್ಲಿ ಎತ್ತರವಾದ ದೀಪದ ಕಂಭವಿದೆ. ಮೇಲ್ಭಾಗದಲ್ಲಿದ್ದ ಕಮಲದ ಫಲಕವು ಕೆಳಗೆ ಬಿದ್ದು ಹೋಗಿದೆ. ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ತೆರದ ಮಂಟಪಗಳು ನೆಲಮಟ್ಟದಲ್ಲಿವೆ. ದಕ್ಷಿಣ ದ್ವಾರಮಂಟಪದ ಮಧ್ಯದಲ್ಲಿ ದ್ವಾರವಿದ್ದು ಅಕ್ಕ ಪಕ್ಕದಲ್ಲಿ ಎರಡೆರಡು ಅಂಕಣಗಳಿವೆ. ಉತ್ತರ ದ್ವಾರಮಂಟಪವು ತುಂಗಭದ್ರಾ ನದಿಯ ಕಡೆ ಮುಖಮಾಡಿದ್ದು, ಈಗ ಮೂರು ಅಂಕಣಗಳು ಕಂಡುಬರುತ್ತದೆ. ಇವು ದ್ವಾರದ ಒಂದು ಬದಿ ಎಂದು ತೋರುತ್ತದೆ. ಪ್ರಾಯಶಃ ಪ್ರವೇಶದ್ವಾರದ ಇನ್ನೊಂದು ಬದಿಯು ಇದೇ ಮಾದರಿಯಲ್ಲಿತ್ತೆಂದು ತೋರುತ್ತದೆ.

ದೇವಾಲಯದ ಕಂಬ, ಅರೆಕಂಬ, ತೊಲೆ, ಬಾಗಿಲು ಮುಂತಾದವುಗಳ ಮೇಲೆ ತಮಿಳು ಅಕ್ಷರಗಳು ಮತ್ತು ಸಂಖ್ಯೆಗಳು ಇವೆ ಎಂದು ಡಾ. ಎಸ್.ಎನ್.ಶಿವರುದ್ರಸ್ವಾಮಿ ಅವರು ಉಲ್ಲೇಖಿಸುತ್ತಾರೆ (*Vijayangara Temples in Karnataka,* S.N. Shivarudraswamy, Directorate of Archaeology and Museums, Myosre, 1996, p. 204). ತಮಿಳುನಾಡಿನ ಶಿಲ್ಪಿಗಳು ಕೆಲಸ ಮಾಡಿರಬಹುದು ಬಗ್ಗೆ ಮತ್ತು ಮೊದಲು ವಿವಿಧ ಅಂಗಗಳ ಕಲ್ಲುಗಳ ಕೆತ್ತನೆ ಮಾಡಿ ಅನಂತರ ಸಂಕೇತಾಕ್ಷರ ನೀಡಿರಬಹುದು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀಮತಿ ಅಭಾ ನಾರಾಯಣ್ ಲಾಂಬಾ ಅವರು ಕೂಡಾ ತಮಿಳು ಅಕ್ಷರಗಳಿರುವ ಬಗ್ಗೆ ತಾವು ಜಿಂದಾಲ್ ಕಂಪನಿಗೆ ಸಲ್ಲಿಸಿದ ತಮ್ಮ ಅಧ್ಯಯನ ವರದಿಯಲ್ಲಿ ಉಲ್ಲೇಖಿಸುತ್ತಾರೆ. ಡಾ. ಎಚ್.ತಿಪ್ಪೇಸ್ವಾಮಿಯವರು (ಇತಿಹಾಸ ದರ್ಶನ ಸಂಪುಟ 29, ನಿಂಬಾಪುರದ ಪ್ರಾಚ್ಯಾವಶೇಷಗಳು, ಪು. 326) ಕೂಡಾ ತಮಿಳು ಅಕ್ಷರಗಳು ಮತ್ತು ಸಂಖ್ಯೆಗಳನ್ನು ಉಲ್ಲೇಖಿಸುತ್ತಾರೆ.

ದೇವಾಲಯದ ನವರಂಗದಲ್ಲಿನ ಕಂಬಗಳ ಎಲ್ಲ ಭಾಗಗಳಲ್ಲಿ, ಒಳಗಿನ ಭಿತ್ತಿಯ ಕಲ್ಲುಗಳಲ್ಲಿ, ಮಾಳಿಗೆಯ ಕಲ್ಲುಗಳಲ್ಲಿ ಮತ್ತು ಹೊರಭಾಗದ ಅದಿಷ್ಠಾನ, ಭಿತ್ತಿ ಮತ್ತು ಕಪೋತ ಕಲ್ಲುಗಳಲ್ಲಿ ಸಂಕೇತಾಕ್ಷರಗಳಿವೆ. ಗರ್ಭಗೃಹ ಮತ್ತು

ಅಂತರಾಳದ ಒಳಗಡೆ ಸಂಕೇತಾಕ್ಷರಗಳಿಲ್ಲ. ದೇವಾಲಯದ ಒಳ ಭಾಗಕ್ಕೆ ಸುಣ್ಣದ ಗಾರೆಯನ್ನು ಬಳಸಲಾಗಿತ್ತೆಂದು ತೋರುತ್ತದೆ. ಏಕೆಂದರೆ ಮಾಳಿಗೆಯ ಕಲ್ಲುಗಳ ಮೇಲೆ ಬಳಸಲಾಗಿದ್ದ ಸುಣ್ಣದ ಗಾರೆಯು ಕೆಲವು ಕಡೆ ಬಿದ್ದು ಹೋಗಿ, ಗಾರೆಯ ಹಿಂದೆ ಅಡಗಿದ್ದ ಅಕ್ಷರಗಳು ಕಂಡು ಬಂದಿವೆ ಮತ್ತು ಕೆಲವು ಕಡೆ ಭಾಗಶಃ ಅಕ್ಷರಗಳು ಕಂಡು ಬರುತ್ತಿವೆ. ಅಂದು ಕಲ್ಲುಗಳನ್ನು ಸುಲಭವಾಗಿ ಗುರ್ತಿಸಲು ಕೆಮ್ಮಣ್ಣಿನ ಬಣ್ಣ ಬಳಸುತ್ತಿದ್ದರು. ಕಪೋತದ ಕೆಳಗಿನ ಕೆಲವು ಕಲ್ಲುಗಳಲ್ಲಿ ಕೆಂಪು ಬಣ್ಣ ಇಂದಿಗೂ ಕಾಣಬಹುದು. ಮೇಲಿನ ಕಾರಣದಿಂದಾಗಿ ಈ ದೇವಾಲಯದಲ್ಲಿ ಬಳಸಲಾಗಿರುವ ಸಂಕೇತಾಕ್ಷರಗಳು ನಿರ್ಮಾಣ ಹಂತದಲ್ಲಿ ಬಳಸಲಾಗಿದ್ದವು ಎಂದ ತಿಳಿಯಬಹುದು. ಇನ್ನೊಂದು ಕುರುಹು ಎಂದರೆ ಅಂದು ಬಳಸಲಾಗಿದ್ದ ಇಟ್ಟಿಗೆಯ ಮೇಲ್ಕಟ್ಟಡವು ಇನ್ನೂ ಹಾಗೇ ಬದಲಾವಣೆ ಇಲ್ಲದೆ ಉಳಿದು ಬಂದಿದೆ. ಅದ್ದರಿಂದ ದೇವಾಲಯ ಮರುಜೋಡಣಗೆ ಒಳಪಟ್ಟಿಲ್ಲ ಎಂದು ನಂಬಬಹುದು.

ಬಹುಪಾಲು ಸಂಕೇತಾಕ್ಷರಗಳು ತಮಿಳು ಗ್ರಂಥ ಲಿಪಿಯಲ್ಲಿವೆ. ಕೆಲವಡೆ ತಮಿಳು ಅಕ್ಷರಗಳಿವೆ. ಅಪರೂಪಕ್ಕೆ ಒಂದು ನಾಗರಿ ಅಕ್ಷರ ಕೂಡಾ ಇದೆ. ಸಂಕೇತಾಕ್ಷರಗಳನ್ನು ಎರಡು ಮಾದರಿಯಲ್ಲಿ ಬಳಸಲಾಗಿದೆ. ನವರಂಗ ಭಾಗಕ್ಕೆ ಒಂದು ಪದ್ಧತಿ ಹಾಗೂ ಗರ್ಭಗೃಹ ಮತ್ತು ಅಂತರಾಳಕ್ಕೆ ಮತ್ತೊಂದು ಪದ್ಧತಿಯನ್ನು ಬಳಸಲಾಗಿದೆ. ದೇವಾಲಯದಲ್ಲಿ ಇರುವ ಅಂಗಗಳನ್ನು ಕೆಳಗಿನಿಂದ ಮೇಲಕ್ಕೆ (ಊರ್ಧ್ವ ಕ್ರಮದಲ್ಲಿ) ನವರಂಗ ಭಾಗದಲ್ಲಿ ನೋಡಿದರೆ ಅಧಿಷ್ಠಾನ, ಭಿತ್ತಿ, ಕಪೋತ ಮತ್ತು ಹಾರ ಎಂಬ ಅಂಗಗಳಿವೆ. ಗರ್ಭಗೃಹದಲ್ಲಿ ಅಧಿಷ್ಠಾನ, ಭಿತ್ತಿ, ಕಪೋತ, ಕರ್ಣ ಮತ್ತು ಭದ್ರ ಭಾಗಗಳು, ಅನಂತರ ಮೊದಲ ತಲ, ಗಲ ವೇದಿ ಮತ್ತು ಶಿಖರ ಇದೆ. ಅಧಿಷ್ಠಾನದಲ್ಲಿ ಐದು ಅಂಗಗಳಾದ ಊರ್ಧ್ವಪದ್ಮ, ಖುರ, ತ್ರಿಪಟ್ಟ, ಕಂಪ ಮತ್ತು ವೇದಿ ಇವೆ. ಗರ್ಭಗೃಹದ ಹೊರ ಭಿತ್ತಿಯ ಮೂರೂ ದಿಕ್ಕುಗಳಲ್ಲಿ ದೇವಕೋಷ್ಠಗಳಿವೆ. ಅಂತರಾಳ ಭಾಗದಲ್ಲಿ ದೇವಕೋಷ್ಠದ ರೂಪವನ್ನು ಉಬ್ಬು ಕೆತ್ತನೆಯಲ್ಲಿನ ಮೂಡಿಸಲಾಗಿದೆ. ನವರಂಗವು ಮೂರು ದಿಕ್ಕುಗಳಲ್ಲಿ ಪ್ರವೇಶದ್ವಾರ ಹೊಂದಿವೆ. ಮೂರೂ ದಿಕ್ಕುಗಳ ಪ್ರವೇಶದ್ವಾರಗಳ ಅಕ್ಕ ಪಕ್ಕದ ಭಿತ್ತಿಯಲ್ಲಿ ದೇವ ಕೋಷ್ಠಗಳಿವೆ. ದೇವಕೋಷ್ಟಗಳ ಮೇಲೆ ಸಿಂಹ ಮುಖದ ಅಲಂಕರಣೆ ಇದೆ. ದೇವಕೋಷ್ಟದಲ್ಲಿ ವಿಗ್ರಹಗಳಿರುವುದಿಲ್ಲ. ಭಿತ್ತಿಯಲ್ಲಿ ಅರೆಗಂಬಗಳನ್ನು ಮೂಡಿಸಲಾಗಿದೆ. ಉಳಿದಂತೆ ಭಿತ್ತಿಯು ಯಾವುದೇ ಅಲಂಕರಣೆ ಹೊಂದಿಲ್ಲ. ನವರಂಗದ ದಕ್ಷಿಣ ಮತ್ತು ಪೂರ್ವ ಪ್ರವೇಶದ್ವಾರಗಳಲ್ಲಿ ದ್ವಾರಪಾಲರನ್ನು ಕೆತ್ತಲಾಗಿದೆ. ನವರಂಗದ ಒಳ ಭಾಗದಲ್ಲಿ ಕಂಭಗಳ ಮೇಲೆ ಶಿವನ ವಿವಿಧ ಲೀಲೆಗಳ, ಬ್ರಹ್ಮ, ವಿಷ್ಣು, ಗಣಪತಿ, ಷಣ್ಮುಖ, ಬೇಡರ ಕಣ್ಣಪ್ಪ, ಕಾಳಿಂಗ ಮರ್ದನ ಕೃಷ್ಣ, ಭೃಂಗಿ, ಋಷಿಗಳ ಹಾಗೂ ಭಕ್ತರ ಉಬ್ಬು ಶಿಲ್ಪಗಳಿವೆ.


ನವರಂಗದ ಹೊರಭಾಗದಲ್ಲಿ ಪ್ರತಿ ಹಂತದಲ್ಲಿರುವ (ತರ) ಕಲ್ಲುಗಳ ಸಂಖ್ಯೆಯನ್ನು ನೈಋತ್ಯ ಮೂಲೆಯಂದ ಪ್ರಾರಂಭಿಸಿ, ದಕ್ಷಿಣ ಮುಖ, ಪೂರ್ವ ಮುಖ, ಉತ್ತರ ಮುಖಗಳಲ್ಲಿ ಮುಂದುವರಿದು ವಾಯವ್ಯ ಮೂಲೆಯಲ್ಲಿ ಕೊನೆಗೊಳ್ಳುವಂತೆ ನಮೂದಿಸಲಾಗಿದೆ. ಭಿತ್ತಿಯ ಭಾಗದಲ್ಲಿ ಮೂರು ಕಲ್ಲುಗಳಿದ್ದು ಮೊದಲ, ಎರಡನೆಯ ಮತ್ತು ಮೂರನೆಯ ತರಕ್ಕೆ ಕ್ರಮವಾಗಿ ಮಾ, ನ ಹಾಗೂ ತ ಅಕ್ಷರಗಳನ್ನು ಬಳಸಲಾಗಿದೆ. ಈ ಅಕ್ಷರಗಳ ಮುಂದೆ ಕಲ್ಲುಗಳ ಸಂಖ್ಯೆಯನ್ನು ಎಡದಿಂದ ಬಲಕ್ಕೆ ಎಣಿಕೆ ಕ್ರಮದಲ್ಲಿ ನಮೂದಿಸಲಾಗಿದೆ. ದೇವಕೋಷ್ಠದ ಒಳಭಾಗದ ಕಲ್ಲುಗಳಿಗೆ ಸಂಕೇತಾಕ್ಷರ ಮತ್ತು ಸಂಖ್ಯೆಯನ್ನು ನೀಡಿಲ್ಲ, ಆದರೆ ಎಣಿಕೆಲ್ಲಿ ಆ ಭಾಗವನ್ನು ಒಂದು ಕಲ್ಲು ಎಂದು ಪರಿಗಣಿಸಿದ್ದಾರೆ.


ಅಂತರಾಳ ಮತ್ತು ಗರ್ಭಗೃಹ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಪ್ರತಿ ಹಂತದಲ್ಲಿ (ತರ) ಕಲ್ಲುಗಳ ಮೇಲಿರುವ ಸಂಕೇತಾಕ್ಷರಗಳು ಕ,ಖ,ಗ,ಘ,ಙ, ಚ,ಛ,ಜ,ಝ,ಞ. ಇವುಗಳ ಬಳ್ಳಿಗಳು (ಕಾಗುಣಿತ) ಮತ್ತು ಸಂಖ್ಯೆಗಳು ದಕ್ಷಿಣ ಮುಖದಲ್ಲಿನ ಅಂತರಾಳದ ವಾಯವ್ಯ ಮೂಲೆಯಿಂದ ಪ್ರಾರಂಭಿಸಿ, ಪಶ್ಚಿಮ ಮುಖ, ಉತ್ತರ ಮುಖಗಳಲ್ಲಿ


ಮುಂದುವರಿದು ಅಂತರಾಳದ ನೈಋತ್ಯ ಮೂಲೆಯಲ್ಲಿ ಕೊನೆಗೊಳ್ಳುತ್ತದೆ. ದಕ್ಷಿಣ ಭಾಗದ ನವರಂಗದ ದ್ವಾರದ ಮೇಲಿನ ತೊಲೆಯಲ್ಲಿ "ಚೇತ್ತವನ್ ವರವಲಿ" ಎಂಬ ಲಘು ಶಾಸನವಿದೆ. ಪ್ರಾಯಶಃ ಇದು ಶಿಲ್ಪಿಯ ಹೆಸರು ಇರಬಹುದು.

ನವರಂಗದ ಕಂಬಗಳಿಗೆ ಇ, ವಾ, ನ, ಆ ಎಂಬ ಅಕ್ಷರಗಳನ್ನು ಪೀಠ, ಕಂಬ, ಫಲಕಗಳಲ್ಲಿ ಬಳಸಲಾಗಿದೆ. ಇವು ಈಶಾನ್ಯ, ವಾಯವ್ಯ, ನೈಋತ್ಯ ಮತ್ತು ಆಗ್ನೇಯ ದಿಕ್ಕುಗಳ ಮೊದಲ ಅಕ್ಷರಗಳಾಗಿವೆ ಮತ್ತು ಕಂಬಗಳ ದಿಕ್ಕುಗಳನ್ನು ಗುರ್ತಿಸಲು ಸಹಾಯಕವಾಗಿವೆ. ಭಿತ್ತಿಯಲ್ಲಿ ಒಂದರ ಮೇಲೊಂದರಂತೆ ನಾಲ್ಕು ಕಲ್ಲುಗಳಿವೆ, ಅವುಗಳಿಗೆ ಕ್ರಮವಾಗಿ ಕೆಳಗಿನಿಂದ ಮೇಲಕ್ಕೆ 1, 2, 3, 4 ಸಂಖ್ಯೆಗಳನ್ನು ನೀಡಲಾಗಿದೆ. ನವರಂಗದ ಪೂರ್ವ ಭಿತ್ತಿಯ ಪ್ರವೇಶದ್ವಾರದ ಎಡಗಡೆ ಮತ್ತು ಬಲಗಡೆ ಕಲ್ಲಿನ ಸಂಖ್ಯೆಯ ಮೊದಲ ಕ್ರಮವಾಗಿ ಮ ಮತ್ತು ಮಿ ಅಕ್ಷರಗಳನ್ನು ಬಳಸಲಾಗಿದೆ. ಇದೇ ರೀತಿಯ ಕ್ರಮವನ್ನು ಉಳಿದ ಮೂರು ದಿಕ್ಕುಗಳಿಗೆ ಬಳಸಲಾಗಿದೆ.

ವಿಜಯನಗರದ ಬಹುಪಾಲು ದೇವಾಲಯಗಳು ದ್ರಾವಿಡ ಮಾದರಿಯಲ್ಲಿವೆ. ದೇವಾಲಯ ನಿರ್ಮಾಣಕ್ಕೆ ಕಣಶಿಲೆ ಬಳಸಲಾಗಿದೆ. ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ಹೊಯ್ಸಳ ಕಾಲದ ಸೂಕ್ಷ್ಮಕೆತ್ತನೆಯಲ್ಲಿ ಪರಿಣಿತರಾದ ಶಿಲ್ಪಿಗಳ ಬೇಡಿಕೆ ಕಡಿಮೆಯಾಯಿತೆಂದು ತೋರುತ್ತದೆ. ಈ ಶಿಲ್ಪಿಗಳು ನಿರ್ಮಾಣ ಮಾಧ್ಯಮದಲ್ಲಾದ ಬದಲಾವಣೆಗೆ ಹೊಂದಿಕೊಳ್ಳಲಿಲ್ಲವೆಂದು ತೋರುತ್ತದೆ. ಪ್ರಾಯಶಃ ತಮಿಳುನಾಡಿನ ಶಿಲ್ಪಿಗಳು ಕೆಲಸ ಮಾಡಿರುವುದನ್ನು ಸಂಕೇತಾಕ್ಷರಗಳು ತೋರಿಸುತ್ತಿರಬಹುದು. ಮಹಾನವಮಿ ದಿಬ್ಬದ ಕೆಲಸವು ಮೂರು ಹಂತಗಳಲ್ಲಿ ಆಗಿರಬಹುದೆಂದು ಗುರ್ತಿಸುತ್ತಾರೆ. ಮೂರನೆಯ ಹಂತದಲ್ಲಿ ಪಶ್ಚಿಮ ಭಾಗಕ್ಕೆ ಹೊದಿಸಲಾಗಿರುವ ಕಪ್ಪು ಕಲ್ಲಿನ ಕೆಲಸವು ತಮಿಳು ಶಿಲ್ಪಿಗಳಿಂದ ಆಗಿರಬಹುದೆನ್ನುವ ಅಂಶವನ್ನು ನೈಋತ್ಯ ಮೂಲೆಯಲ್ಲಿರುವ ಕೆಲವು ಕಲ್ಲುಗಳ ಮೇಲೆ ಇರುವ ತಮಿಳು ಸಂಕೇತಾಕ್ಷರಗಳು ಸೂಚಿಸುತ್ತಿರಬಹುದು.






ಉತ್ತರ
ಉತ್ತರ ದ್ವಾರ
ಕೋಷ್ಠ
ಮಾ 25
ಮಾ 24
5
ಮಾ 23
ಮಾ 25 ?
ಜ 20 + ?
ಉತ್ತರ ಗರ್ಭಗೃಹ
ಪಶ್ಚಿಮ ಗರ್ಭಗೃಹ
ದಕ್ಷಿಣ ಗರ್ಭಗೃಹ
ಅಂತರಾಳ
6

32. ರಾಯಚೂರಿನ ಕೋಟೆಯಲ್ಲಿ ವಿಜಯನಗರದ ಸ್ಮಾರಕಗಳು

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಸಿಂಧನೂರು

ಕೋಟೆ

ಎರಡು ಸುತ್ತಿನ ಕೋಟೆಯನ್ನು ಬೇರೆ ಬೇರೆ ಕಾಲದಲ್ಲಿ ಕಟ್ಟಿಸಲಾಗಿದೆ. ಈ ಎರಡು ಕೋಟೆ ಗೋಡೆಗಳು ನಗರವನ್ನು ಬಳಸಿ ದಕ್ಷಿಣ ದಿಕ್ಕಿನಲ್ಲಿರುವ ಬೆಟ್ಟದಲ್ಲಿ ಕೊನೆಗೊಳ್ಳುತ್ತವೆ. ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿ ಹೆಚ್ಚು ವಿಸ್ತಾರವಾಗಿ ಪಶ್ಚಿಮದಲ್ಲಿ ಕಡಿಮೆ ಸ್ಥಳ ಹೊಂದಿ, ಹೀಗೆ ಮೂರು ದಿಕ್ಕಿನಲ್ಲಿ ಸುತ್ತುವರೆದು ಕೊನೆಗೆ ದಕ್ಷಿಣ ದಿಕ್ಕಿನ ಬೆಟ್ಟದ ಮೇಲೆ ಮುಗಿಯುತ್ತದೆ.

ಎರಡು ಕೋಟೆ ಗೋಡೆಗಳು

ಈಗಾಗಲೆ ಹೇಳಿದಂತೆ ಎರಡು ಕೋಟೆಗಳನ್ನು ಒಳಗಿನ ಕೋಟೆ (ಅಂದರೂನ್ ಕಿಲಾ) ಎಂದೂ ಮತ್ತು ಹೊರಗಿನ ಕೊಟೆ (ಬಹರೂನ್ ಕಿಲಾ) ಎಂದು ಕರೆದು ಗುರುತಿಸಲಾಗುತ್ತದೆ. ಒಳಗಿನ ಕೋಟೆ ಕ್ರಿ.ಶ. 1294ರಲ್ಲಿ ಕಾಕತಿಯ ರುದ್ರಮ ರಾಣಿಯ ದಂಡನಾಯಕ ಗೋರೆಗನ್ನಯ್ಯನ ಕೈಕೆಳಗಿನ ಅಧಿಕಾರಿ ರಾಜವಿಠ್ಠಲನು ಕಟ್ಟಿಸಿದನೆಂದು ಪಶ್ಚಿಮ ಗೋಡೆಯಲ್ಲಿಯ ಶಾಸನ ತಿಳಿಸುತ್ತದೆ. ಈ ಕೋಟೆ ಬೃಹದ್ ಕಣಶಿಲೆಯ ಕಲ್ಲುಗಳಿಂದ ಜೋಡಿಸಿ, ಗಾರೆ ಸಿಮೆಂಟ್ ಸಹಾಯವಿಲ್ಲದೆ ಕಟ್ಟಿದ ಗಟ್ಟಿಮುಟ್ಟಾದ ಕೋಟೆ. ಇದು ಸಂಪೂರ್ಣ ಹಿಂದೂ ವಾಸ್ತು ಶೈಲಿಯಲ್ಲಿ ರಚಿಸಿದೆ. ಅಲ್ಲಿಯ ಕೊತ್ತಲು ಹಾಗೂ ಅಗಸಿ ದ್ವಾರಗಳು ಇದಕ್ಕೆ ಸಾಕ್ಷಿಯಾಗಿವೆ.

ಇನ್ನು ಎರಡನೆಯ ಹೊರಗಿನ ಕೋಟೆಯು (ಬಹರೂನ್ ಕಿಲಾ) ಸುಮಾರು ಎರಡು ಶತಮಾನದ ನಂತರ ಕ್ರಿ.ಶ. 1482ರಲ್ಲಿ ಕಟ್ಟಲಾಗಿದೆ. ಬಹುಮನಿಯ ಮೂರನೆಯ ಮಹ್ಮದ್‌ಶಾಹನ ಕಾಲದಲ್ಲಿ ಈ ಕೋಟೆ ರಚನೆಯಾಯಿತು. ವಿಜಯನಗರದ ಸಂಗಮ ವಂಶದ ಕೊನೆಯ ಅರಸರು ದುರ್ಬಲರಾಗಿದ್ದಾಗ ವಿಜಯನಗರಕ್ಕೆ ಪ್ರಬಲ ವಿರೋಧವಾಗಿ ಈ ಬಹರೂನ ಕೋಟೆ ರಚನೆಯಾಯಿತು. ಇದು ಹಿಂದು-ಇಸ್ಲಾಮಿಕ ವಾಸ್ತುಶೈಲಿಯಲ್ಲಿ (ಇಂಡೋ-ಸಾರ್ಸೆನಿಕ್) ರಚನೆಯಾಗಿರುವುದು ಬತ್ತೇರಿ ಅಗಸಿ ಬಾಗಿಲುಗಳಲ್ಲಿ ಕಾಣಬಹುದು. ಇಸ್ಲಾಮಿಕ್ ಶೈಲಿಯಲ್ಲಿ ರಚನೆಯಾದ ಈ ಕೋಟೆಯಲ್ಲಿ ಕಾಲಕ್ರಮೇಣ ವಿಜಯನಗರದ ಹಿಂದೂ ವಾಸ್ತುಶಿಲ್ಪದ ರಚನೆಯ ಸ್ಮಾರಕಗಳು ಕಂಡುಬರುತ್ತವೆ.

ಶ್ರೀಕೃಷ್ಣದೇವರಾಯನು ಬಿಜಾಪೂರ ಆದಿಲ್ ಶಾಹಿಯ ಮೇಲೆ ಕ್ರಿ.ಶ. 1520ರಲ್ಲಿ ಯುದ್ಧ ಸಾರಿ, ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು. ಈ 'ರಾಯಚೂರು ವಿಜಯ', ವಿಜಯನಗರದ ಇತಿಹಾಸದಲ್ಲಿ ಮಹತ್ವದ ಘಟನೆ. ಶ್ರೀಕೃಷ್ಣದೇವರಾಯನ ನಂತರವೂ ರಾಯಚೂರು ಕೆಲವು ವರ್ಷಕಾಲ ವಿಜಯನಗರದ ಸ್ವಾಧೀನದಲ್ಲಿದ್ದ ಕಾಲಘಟ್ಟದಲ್ಲಿ ಬಹರೂನ್ ಕಿಲಾದಲ್ಲಿ ಹಿಂದೂ ವಾಸ್ತುಶೈಲಿಯ ಮಾರ್ಪಾಡುಗಳಾದವು. ಮೂಲದ ಕೋಟೆಯ ಸ್ವರೂಪಕ್ಕೆ ಧಕ್ಕೆಯಾಗದಂತೆ ತಮ್ಮ ವಾಸ್ತುಶಿಲ್ಪವನ್ನು ಗೋಡೆಗಳಲ್ಲಿ ಅಳವಡಿಸಿ, ಅಗತ್ಯವೆನಿಸಿದಲ್ಲಿ ಪ್ರತ್ಯೇಕವಾಗಿ ಕಟ್ಟಿಸಿ ಕೆತ್ತಿಸುವ ಮೂಲಕ ವಿಜಯನಗರದ ವಾಸ್ತುವನ್ನು ಇಲ್ಲಿ ಮೆರೆದಿದ್ದಾರೆ. ವಿಶೇಷವಾಗಿ ಶ್ರೀಕೃಷ್ಣದೇವರಾಯನು ಈ ವಾಸ್ತು ರಚನೆಗೆ ಹೆಚ್ಚು ಆಸಕ್ತಿ ವಹಿಸಿದ್ದನು. ಹೀಗೆ ಕೋಟೆಯಲ್ಲಿ ವಿಜಯನಗರದ ವಾಸ್ತುಶಿಲ್ಪ ರಚನೆ ಮೂರು ವಿಧಾನದಲ್ಲಿ ಕಾಣಲಾಗುವುದು.

1. ಉತ್ತರ ದಿಕ್ಕಿನ ನವರಂಗ ದರ್ವಾಜ, 2. ಕೋಟೆಯ ಮೇಲಿನ ಕೈಪಿಡಿಗಳು, 3. ನವರಂಗ ದರ್ವಾಜದ ಪೂರ್ವ ದಿಕ್ಕಿನಲ್ಲಿರುವ ಅಗಸಿ, 4. ಬುರುಜು ಮತ್ತು 5. ಮಾರುತಿ ದೇವಾಲಯ ಹಾಗೂ ದಕ್ಷಿಣ ದಿಕ್ಕಿನ ಬೆಟ್ಟದ ಮೇಲಿನಲ್ಲಿ ಪೂರ್ವದ ಅಗಸಿ ಬಾಗಿಲು. ಇವು ವಿಜಯನಗರದ ಸ್ಮಾರಕಗಳು.

1. ಉತ್ತರದಿಕ್ಕಿನ ನವರಂಗ ಅಗಸೆ:

ಬಹುಮನಿ ಸುಲ್ತಾನರು ಕಟ್ಟಿಸಿದ ಬಹರೂನ್ ಕಿಲಾ ಕೋಟೆಗೆ ಮೂರು ಪ್ರಮುಖ ಅಗಸಿಗಳು. 1) ಉತ್ತರ ದಿಕ್ಕಿನಲ್ಲಿನ ನವರಂಗ ದರ್ವಾಜ, 2) ದಕ್ಷಿಣ ದಿಕ್ಕಿನಲ್ಲಿನ ಕೋಟೆ ದರ್ವಾಜ (ಮುಳ್ಳಗಸಿ) ಮತ್ತು 3) ಪಶ್ಚಿಮ ದಿಕ್ಕಿನಲ್ಲಿರುವ ಮೆಕ್ಕಾ ದರ್ವಾಜ. ಇವು ಇಂಡೋಸಾರ್ಸೆನಿಕ್ ವಾಸ್ತುವಿನಲ್ಲಿದೆ. ನವರಂಗ ದರ್ವಾಜ ಮತ್ತು ಕಾಟೆಬೇಸ್ ದರ್ವಾಜಗಳು ಸುರಕ್ಷಿತವಾಗಿ ಭದ್ರವಾಗಿವೆ. ಆದರೆ ಮೆಕ್ಕಾ ದರ್ವಾಜ ಸಂಪೂರ್ಣ ಹಾಳಾಗಿ ಪಾರ್ಶ್ವದ ಎರಡು ಗೋಡೆಗಳು ಮಾತ್ರ ಉಳಿದುಕೊಂಡು ಇಲ್ಲಿ ದರ್ವಾಜ ಇತ್ತೆಂದು ಸಾಕ್ಷಿ ನುಡಿಯುತ್ತವೆ.

ನವರಂಗ ದರ್ವಾಜ್

ಉತ್ತರದಿಕ್ಕಿನ ಅಗಸಿಯನ್ನು ಪ್ರವೇಶಿಸಿದರೆ ನವರಂಗ ಸ್ಥಳ ಸಿಕ್ಕುತ್ತದೆ. ಸುಮಾರು 80–60 ಅಡಿ ಆಯತಾಕಾರದಲ್ಲಿ ವಿಸ್ತಾರವಾಗಿ ಹರಡಿದ ಪ್ರಾಂಗಣ ಇದರ ಮೂರು ದಿಕ್ಕಿನಲ್ಲಿ ವಿಶಾಲವಾದ ಗೋಡೆ, ಗೋಡೆಗೆ ಮಂಟಪಗಳು. ಮಂಟಪಗಳಿಗೆ ಸುಂದರವಾದ ಕಮಾನಾಕಾರದ ಬಾಗಿಲು. ಪಶ್ಚಿಮ ದಿಕ್ಕಿನಲ್ಲಿ ನಗರ ಪ್ರವೇಶದ್ವಾರ ಅಗಸಿ, ಮಂಟಪದ ಕಮಾನಾಕಾರದ 14 ಬಾಗಿಲುಗಳ ಮೇಲೆ ಸುಂದರವಾದ ಉಬ್ಬು ಕೆತ್ತನೆಯ ಪಟ್ಟಿಕೆಗಳು. ವಿಜಯನಗರದರಸರು ಈ ಶಿಲ್ಪಚಿತ್ರಗಳ ಪಟ್ಟಿಕೆಯನ್ನು ಗೋಡೆಗಳಿಗೆ ಅಳವಡಿಸಿ ಶೃಂಗರಿಸಿದ್ದು, ನವರಂಗವಾಗಿ ಮಾರ್ಪಟ್ಟಿದೆ.

ಶ್ರೀಕೃಷ್ಣದೇವರಾಯ ತುಂಬ ಆಸಕ್ತಿವಹಿಸಿ, ವಿಜಯನಗರದ ವೈಭವವನ್ನು ಇಲ್ಲಿಯ ಶಿಲ್ಪ ವೈಭವದಲ್ಲಿ ಪ್ರದರ್ಶಿಸಿರುವುದು ಗಮನಕ್ಕೆ ಬರುತ್ತದೆ. ಮುಖ್ಯವಾಗಿ ಇಲ್ಲಿ ಹೇಳಬೇಕಾದದ್ದು ಪಟ್ಟಿಕೆಗಳ ಮೇಲಿನ ಚಿತ್ರಗಳ ವರ್ಣನೆ. 14 ಮಂಟಪಗಳ ಕಮಾನು ಬಾಗಿಲಗಳ ಮೇಲೆ 14 ಉಬ್ಬು ಶಿಲ್ಪಗಳ ಪಟ್ಟಿಕೆಯನ್ನು ಅಳವಡಿಸಿದೆ. ಇಲ್ಲಿಯ ಉಬ್ಬು ಶಿಲ್ಪಗಳು ರಾಮಾಯಣ, ಮಹಾಭಾರತ ಕಾವ್ಯಗಳ ಮತ್ತು ಭಾಗವತ ಹಾಗೂ ಶಿವಪುರಾಣಗಳ ಅಂತರ್ಗತ ಕಥಾ ಚಿತ್ರಗಳಿವೆ. ಸೀತೆ ಮಾಯಾಜಿಂಕೆ, ರಾಮಲಕ್ಷ್ಮಣಸೀತೆ ಪರ್ಣಕುಟೀರದಲ್ಲಿ, ಆಂಜನೇಯನ ಸಮುದ್ರಲಂಘನ. ರಾಮರಾವಣರ ಯುದ್ಧ ಇತ್ಯಾದಿ ಕಥಾ ಪ್ರಸಂಗಗಳು ಮನೋಹರವಾಗಿವೆ. ಮಹಾಭಾರತಕ್ಕೆ ಸಂಬಂಧಿಸಿದ ಕರ್ಣಾರ್ಜುನ ಕಾಳಗ, ಹಿಡಿಂಬಾ ವಧಾ, ವನವಾಸದಲ್ಲಿ ಪಾಂಡವರು ಮುಂತಾದ ಚಿತ್ರಗಳು ಮನಸೆಳೆಯುತ್ತವೆ. ಭಾಗವತ–ಶಿವಪುರಾಣಕ್ಕೆ ಸಂಬಂಧಿಸಿದ ಕಥಾಪ್ರಸಂಗಗಳು ಚಿತ್ತಾಕರ್ಷಕವಾಗಿವೆ. ಬಾಲಕೃಷ್ಣನ ಲೀಲೆಗಳು, ಯಶೋಧೆ ಕೃಷ್ಣನಿಗೆ ಹಾಲುಕುಡಿಸುವುದು, ಗೋಪಿಕಾ ಸ್ತ್ರೀಯರು ಯಶೋಧೆಗೆ ಕೃಷ್ಣನ ಬಗ್ಗೆ ದೂರುವುದು, ಹಸು ಶಿವಲಿಂಗಕ್ಕೆ ಹಾಲು ಸುರಿಸುವುದು, ಬೇಡರ ಕಣ್ಣಪ್ಪ ಶಿವನಿಗೆ ತನ್ನ ಕಣ್ಣು ಕೊಡುವುದು, ಹೀಗೆ ಕಥಾ ಪ್ರಸಂಗಗಳು ಮನಮೋಹಕವಾಗಿವೆ. ಯುದ್ಧದ ಚತುರಂಗ ಬಲಗಳಾದ ಆನೆ, ಕುದುರೆ, ರಥ, ಕಾಲ್ದಳಗಳು, ಯುದ್ಧದೃಶ್ಯಗಳು, ಸ್ತ್ರೀಯರ ಕೇಶಶೃಂಗಾರ, ಉಡುಪುಗಳು ವಿಜಯನಗರ ಕಾಲದ ವೈಭವವನ್ನು ಸಾರುತ್ತವೆ. ಅಲ್ಲಿರುವ ಒಂದೆರಡು ಮಿಥುನ ಶಿಲ್ಪಗಳು ನಮ್ಮ ಚಿತ್ತವನ್ನು ಸೂರೆಗೊಳ್ಳುತ್ತವೆ. ಇವು ನವರಂಗ ದರ್ವಾಜದಲ್ಲಿರುವ ವಿಜಯನಗರದರಸರ ಸ್ಮಾರಕಗಳು.

2. ಕೈಪಿಡಿಗಳು:

ಕೋಟೆಯ ಮೇಲೆ ವೀಕ್ಷಣೆಯ ಮಾಡಗಳಿಗೆ ಕೆಳಗೆ ಇರಿಸಿದ ಕೈಪಿಡಿಗಳು (ಬೋದು) ಸಾಮಾನ್ಯವಾಗಿ ಯಾವ ಅಲಂಕಾರವಿಲ್ಲದ ಸಾದಾ ಆಕಾರದಲ್ಲಿ ಕೋಟೆಯ ಎಲ್ಲಾ ಭಾಗದಲ್ಲಿ ಕಂಡುಬರುತ್ತವೆ. ಆದರೆ ನವರಂಗ ದರ್ವಾಜ

ಮತ್ತು ಅದರ ಸುತ್ತಲಿರುವ ಕೈಪಿಡಿಗಳು (ಬೋದು) ಮಾತ್ರ ಸುಂದರವಾದ ಕಲಾಕೃತಿಯಾಗಿದೆ. ಇಲ್ಲಿಯ ಕೈಪಿಡಿಗಳು ಸಿಂಹ ಮುಖದ ಶಿಲ್ಪಾಕಾರವಾಗಿದ್ದು ವಿಜಯನಗರದ ಶಿಲ್ಪ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ಸಿಂಹಮುಖ ಅಥವಾ ಗೋಲಾಕಾರದ ಕಲಾಕೃತಿಯ ಕೈಪಿಡಿಗಳು ವಿಜಯನಗರದ ಸ್ಮಾರಕಗಳಾಗಿವೆ.

3. ಅಗಸಿಗಳು:

ಬಹುಮನಿ ಸುಲ್ತಾನರು ನಿರ್ಮಿಸಿದ ಇಂಡೋಸಾರ್ಸೆನಿಕ್ ವಾಸ್ತುಶೈಲಿಯ ಅಗಸಿಗಳನ್ನು ಹೊರತುಪಡಿಸಿ ವಿಜಯನಗರದವರು ಎರಡು ಅಗಸಿಗಳನ್ನು ಕಟ್ಟಿಸಿದ್ದಾರೆ. ಈ ಅಗಸಿಗಳು ಹಿಂದೂವಾಸ್ತುಶೈಲಿಯಲ್ಲಿವೆ. ಬಾಗಿಲ ತೋಳುಮೇಲೆ ಲಲಾಟ ಪಟ್ಟಿಕೆ ಬೋದುಗೆಗಳು ಉದ್ದನೆಯ ಬಂಡೆಗಳಂತೆ ಹೊದಿಸಿದ ಛಾವಣಿ. ಇದು ವಿಜಯನಗರ ಅಗಸಿಯ ರಚನೆ. ನಗರ ಬಲಬಾಗದ ಬೆಟ್ಟದ ಮೇಲೆ ಹಬ್ಬಿದ ಕೋಟೆಯಲ್ಲಿ ಪೂರ್ವದಿಕ್ಕಿನ ಅಗಸಿ. ಇದು ವಿಜಯನಗರದ ಅಗಸಿ. ಅದರ ಕೆಳಭಾಗದಲ್ಲಿ ದೇವಾಲಯವಿದೆ. ಮತ್ತೊಂದು ನವರಂಗ ದರ್ವಾಜ ಪ್ರದೇಶಕ್ಕೆ ಮೊದಲು ಪೂರ್ವಾಭಿಮುಖವಾಗಿ ಅಗಸಿ ಇದೆ. ಇದು ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿಸಿದ್ದು.

4. ಬುರುಜು (ಕೊತ್ತಲು)

ಬಹುಮನಿ ಸುಲ್ತಾನರು ನಿರ್ಮಿಸಿದ ಕೋಟೆಯ ಬುರುಜುಗಳು ಗೋಲಾಕಾರವಾಗಿ ಬಹುದೊಡ್ಡದಾದ ಆಕಾರ ಹೊಂದಿರುತ್ತವೆ. ರಾಯಚೂರು ಕೋಟೆಗೆ ಹೊಂದಿದ ಬುರುಜುಗಳು ಬೃಹದಾಕಾರವಾಗಿರುವುದು ಗಮನಕ್ಕೆ ಬರುತ್ತದೆ. ಈ ಚೌಕಾಕಾರ ಕಟ್ಟುವುದು ವಿಜಯನಗರದ ಮಾದರಿಯಾಗಿದೆ. ಅಂತೆಯೇ ಇಲ್ಲಿ ಚೌಕಾಕಾರ ಕಟ್ಟುವುದು ವಿಜಯನಗರದ ನಿರ್ಮಾಣ. ಈ ಮಾದರಿಯ ಬುರುಜುಗಳು ಕೋಟೆಯ ಪಶ್ಚಿಮ ದಿಕ್ಕಿನಲ್ಲಿ ಬಸ್ ನಿಲ್ದಾಣಕ್ಕೆ ಹೋಗುವ ಮಾರ್ಗದಲ್ಲಿದೆ. ಶ್ರೀಕೃಷ್ಣದೇವರಾಯನು ರಾಯಚೂರನ್ನು ವಶಪಡಿಸಿಕೊಳ್ಳಲು ಪಶ್ಚಿಮ ದಿಕ್ಕಿನಿಂದ ಲಗ್ಗೆ ಹಾಕಿದ ಪರಿಣಾಮ ಕೋಟೆಗೋಡೆ ಧಕ್ಕೆಗೆ ಒಳಗಾಯಿತು. ಹಾಳಾದ ಭಾಗವನ್ನು ಪುನಃ ಕಟ್ಟಿಸಿದ್ದು ಚೌಕಾಕಾರದ ಬುರುಜು ಮಾದರಿಯಲ್ಲಿದೆ.

5. ಮಾರುತಿ ದೇವಾಲಯ

ಹಿಂದೂಶಾಸ್ತ್ರದ ಪ್ರಕಾರ ಕೋಟೆಯ ಹತ್ತಿರ ಮಾರುತಿ ದೇವಸ್ಥಾನವಿರುವುದು ವಾಡಿಕೆ. ನವರಂಗ ದರ್ವಾಜದಿಂದ ನಗರ ಪ್ರವೇಶ ಮಾಡಿದ ಹಿಂದಿನ ಕೋಟೆ ಗೋಡೆಗೆ ಮಾರುತಿ ದೇವಾಲಯವಿದೆ. ಹಾಗೆಯೇ ಬೆಟ್ಟದ ಮೇಲೆ ಪೂರ್ವ ದಿಕ್ಕಿನ ಅಗಸಿಯ ಒಳಗೆ ಮಾರುತಿ ಗುಡಿ ಇದೆ. ಇವೆರಡು ದೇವಸ್ಥಾನಗಳು ವಿಜಯನಗರದ ಆಳ್ವಿಕೆಯಲ್ಲಿ ಕಟ್ಟಿಸಿದವು.

ಇಂದಿಗೂ ಕೋಟೆಯಲ್ಲಿ ಅಳವಡಿಸಿದ ವಿಜಯನಗರದ ಸ್ಮಾರಕಗಳನ್ನು ಕಾಣಬಹುದು.

33. ವಿಜಯನಗರ ಮತ್ತು ಕೊಡೇಕಲ್ಲ ಪರಂಪರೆ

ಡಾ. ಕೆ. ರವೀಂದ್ರನಾಥ

12ನೇ ಶತಮಾನದ ಬಸವಕಲ್ಯಾಣ ಶಿವಶರಣ ಕಾರ್ಯಕ್ಷೇತ್ರ. ಅಂದಿನ ಆ ಕಲ್ಯಾಣದ ಪರಂಪರೆ ಬಸವೋತ್ತರ ಯುಗದಲ್ಲಿ ಹಂಪಿಯಲ್ಲಿ ವಿಜಯಕಲ್ಯಾಣ ಎಂಬ ಹೆಸರಿನಿಂದ ಶಹಪೂರ ತಾಲ್ಲೂಕಿನ ದಿಗ್ಗಿಯಲ್ಲಿ ಅಮರಕಲ್ಯಾಣದ ಹೆಸರಿನಿಂದ, ನಾಗಾವಿಯಲ್ಲಿ ಧರ್ಮಕಲ್ಯಾಣದ ಹೆಸರಿನಿಂದ, ಕೊಡೇಕಲ್ಲಿನಲ್ಲಿ ಕಡೆಯ ಕಲ್ಯಾಣದ ಹೆಸರಿನಿಂದ ಬೆಳೆದು ಬಂದಿದೆ. ಬಸವಕಲ್ಯಾಣದ ನಂತರ ಕಲ್ಯಾಣ ಪರಂಪರೆಯ ಎರಡನೇ ಕೇಂದ್ರ ಹಂಪಿ ಅಥವಾ ವಿಜಯಕಲ್ಯಾಣ. ಹೀಗಾಗಿ ಬಸವಕಲ್ಯಾಣ ಹಾಗೂ ವಿಜಯಕಲ್ಯಾಣಗಳ ಸ್ಥಾಪನೆಯಲ್ಲಿ "ಸಾಮೂಹಿಕ ಪ್ರಯತ್ನ" ಕಂಡುಬರುತ್ತದೆ. ಅಲ್ಲಿ ರಾಜಕೀಯವಾಗಿ ಬಿಜ್ಜಳ, ಇಲ್ಲಿ ಪ್ರೌಢರಾಯ, ಅಲ್ಲಿ ಸಾಹಿತ್ಯಿಕವಾಗಿ ವಚನಕಾರರು, ಇಲ್ಲಿ ವಚನ ಸಂಕಲನಕಾರರು ಮತ್ತು ಕವಿಗಳು ಎಂಬುದು ಸ್ಥೂಲವಾದ ಸಾಮ್ಯತೆಯನ್ನು ಪ್ರಕಟಿಸುತ್ತದೆ. ಆದರೆ ವಿಜಯಕಲ್ಯಾಣದ ಸ್ಥಾಪನೆಯಲ್ಲಿ "ಸಾಮೂಹಿಕ ಪ್ರಯತ್ನ' ಇದೆಯಾದರೂ "ಸಮಷ್ಠಿಹಿತ" ಇದ್ದಂತೆ ತೋರುವುದಿಲ್ಲ. ಈ ಕಾರಣವಾಗಿ ಕೊಡೇಕಲ್ಲ ಪರಂಪರೆಯ ಸ್ಥಾಪಕ "ಕೊಡೇಕಲ್ಲ ಬಸವಣ್ಣ" ಹಂಪಿಯವನು. ಆದರೆ ಹಂಪಿಬಿಟ್ಟು ಬಳ್ಳಿಗಾವೆಗೆ, ಅಲ್ಲಿಂದ ಕೊಡೇಕಲ್ಲಿಗೆ ಹೋಗಿ ನೆಲೆಸಿದ್ದುದು ಏಕೆ? ಎಂಬ ಪ್ರಶ್ನೆಯ ಮೂಲಕ ವಿಜಯಕಲ್ಯಾಣದ ಸಾಹಿತ್ಯಿಕ, ಧಾರ್ಮಿಕ ಮತ್ತು ಮತಪಂಥಗಳನ್ನು ಕುರಿತು ತಾತ್ವಿಕ ಚರ್ಚೆಯನ್ನು ವಿದ್ವಾಂಸರ ನಡುವೆ ಹುಟ್ಟುಹಾಕುವ ಪ್ರಯತ್ನ ನನ್ನ ಪ್ರಬಂದದ್ದಾಗಿದೆ.

ಕೊಡೇಕಲ್ಲ ಬಸವಣ್ಣನ ಚಾರಿತ್ರಿಕ ಬದುಕನ್ನು ಕಟ್ಟಿಕೊಡುವ ಕೃತಿಗಳಲ್ಲಿ ಮುಖ್ಯವಾದ ಆಕರವೆಂದರೆ ಕೊಡೇಕಲ್ಲ ಬಸವಣ್ಣನ ನಾಲ್ಕನೇ ತಲೆಮಾರಿನವನಾದ ವೀರಸಂಗಯ್ಯ ವಿರಚಿತ "ನಂದಿಯಾಗಮಲೀಲೆ". ಈ ಕೃತಿಯ ಪ್ರಕಾರ ಕೊಡೇಕಲ್ಲ ಬಸವಣ್ಣ

> ಪೊಡವಿಗಧಿಕವು ವಿಜಯನಗರವು
> ಮಡದಿಲಿಂಗಮ್ಮ ಮಲ್ಲಿಶೆಟ್ಟಿಯು
> ಹಡೆದಮಕ್ಕಳು ಅಳಿದು ಹೋಗೆ ತಮ್ಮ ಕಡೆಯ ಬಂಧುಗಳು ॥

ಎನ್ನುವಲ್ಲಿ ವಿಜಯನಗರದ ಮಲ್ಲಿಸೆಟ್ಟಿ-ಲಿಂಗಮ್ಮರ ಮಗನಾಗಿ ಕೊಡೇಕಲ್ಲ ಬಸವಣ್ಣ ಜನಿಸುತ್ತಾನೆ. ಮುಂದೆ ವಡ್ಡಿನ ಪಟ್ಟಣಶೆಟ್ಟಿ ಲಿಂಗಣ್ಣ ಆತನ ಹೆಂಡತಿ ಸಂಗಾಜಮ್ಮರ ಮಗಳು ಕಾಶಮ್ಮನೊಂದಿಗೆ ಮದುವೆಯಾಗುತ್ತದೆ. ವಡ್ಡಿಗ್ರಾಮವನ್ನು ಮಧುರಚೆನ್ನರು ಹುಬ್ಬಳ್ಳಿ ಕಡೆ ಸೂಚಿಸುತ್ತಾರೆ. ಆದರೆ ಹಂಪಿಗೆ ಹತ್ತಿರವಿರುವ ಸೊಂಡೂರು ತಾಲ್ಲೂಕಿನ 'ವಡ್ಡು' ಗ್ರಾಮವೇ 'ವಡ್ಡಿ' ಆಗಿರಬೇಕು. ಕ್ಷೇತ್ರಕಾರ್ಯದ ಮೂಲಕ ಇನ್ನೂ ಮಾಹಿತಿ ಕಲೆ ಹಾಕುವ ಅಗತ್ಯವಿದೆ. ಅದೇನೇ ಇರಲಿ ಇದು ಕೊಡೇಕಲ್ಲ ಬಸವಣ್ಣನ ಹಂಪಿ ಪರಿಸರದ ಲೌಕಿಕ ಜೀವನವಾಗಿದೆ. ಮುಂದೆ ಸಂತನೊಬ್ಬನ ಸಂಪರ್ಕದಿಂದ ಈತನ ಜೀವನ ಪಾರಮಾರ್ಥಿಕದ ಕಡೆಗೆ ವಾಲುತ್ತದೆ.

> ಬಿಟ್ಟ ಮಂಡೆಯ ಮ್ಯಾಲೆ ಕಿರಿಜಡೆ
> ಸುಟ್ಟು ಉರಿವ ನಯನನೊಸಲಲಿ
> ಮೆಟ್ಟಿದ ಹಾವುಗೆಯು ಪಾದದಿ ಕಮಲಲೋಚನವು !
> ಮುಟ್ಟಿ ಹಸ್ತದಿ ನಾಗದಂಡವು

ಕಟ್ಟಿದ ಕಟಿಸೂತ್ರ ಕೈಪವು
ಇಟ್ಟ ಸರ್ವಾಂಗದಲಿ ಭಸಿತವು ಆರೂಢ ರೂಪಿನಲಿ ॥

ಬಸವಣ್ಣ ಬಳ್ಳಿಗಾವೆಗೆ ಬರುತ್ತನೆ. ಆಗ ಅಲ್ಲಿ ಪಂಚವಣಿಜರಾದ ಸಿದ್ದಯ್ಯ-ಚೆನ್ನಮ್ಮರ ಮಗಳಾದ ದೇವಮ್ಮನನ್ನು ಮದುವೆಯಾಗುತ್ತಾನೆ. ಈ ಹೊತ್ತಿಗೆ ಮೊದಲ ಹೆಂಡತಿ ಕಾಶಮ್ಮ ತೀರಿಹೋಗಿರುತ್ತಾಳೆ. ಕಲ್ಯಾಣದ ಬಸವಣ್ಣನೇ ಕೊಡೇಕಲ್ಲ ಬಸವಣ್ಣನೆಂಬ ಭಾವನೆಯಿಂದ ಜನರು ಹೆಂಡತಿ ಮಹಾದೇವಮ್ಮನನ್ನು ನೀಲಲೋಚನೆಗೆ ಸಮೀಕರಿಸುತ್ತಾರೆ. ಈ ದಂಪತಿಗಳಿಗೆ ರಾಚಪ್ಪ, ಗುಹೇಶ್ವರ ಮತ್ತು ಸಂಗಯ್ಯ ಎಂಬ ಮೂರು ಜನ ಮಕ್ಕಳು ಜನಿಸುತ್ತಾರೆ. ಮುಂದೆ ಬಳ್ಳಿಗಾವೆಯಿಂದ ಉತ್ತರಕ್ಕೆ ಲೋಕಯಾತ್ರೆ ಕೈಗೊಳ್ಳುತ್ತಾರೆ. ಕಾಲಜ್ಞಾನದ ಕಟ್ಟಳೆ ಎಂಬ ಕೃತಿಯಲ್ಲಿ "ಸಮಯಕಲ್ಯಾಣದಲ್ಲಿದ್ದ (ಬಸವಕಲ್ಯಾಣದಲ್ಲಿದ್ದ) ಗುಪ್ತವಾದ ಮಂತ್ರದ ಸುರುಳಿಯನ್ನು ತೆಗೆದುಕೊಂಡು ಕೊಡೇಕಲ್ಲಿಗೆ ಬಂದನು" ಎನ್ನುವಲ್ಲಿ ಕಲ್ಯಾಣದ ಶರಣಸಾಹಿತ್ಯವನ್ನು ಅವಲೋಕಿಸಿರಬೇಕು.

ಇದಿಷ್ಟು ಪೂರ್ತಿ ಪೀಠಿಕೆಯನ್ನು ನೀಡಿ ಇತಿಹಾಸತಜ್ಞರ ಮುಂದೆ ಕೆಲವು ಚಾರಿತ್ರಿಕ ಅಂಶಗಳನ್ನು ಪ್ರಸ್ತುತಪಡಿಸುತ್ತೇನೆ.

1. ಹಂಪಿ ಅಥವಾ ವಿಜಯನಗರ ಮೂರು ರೀತಿಯಿಂದ ಜನಮಾನಸದಲ್ಲಿ ಹೆಸರಾಗಿತ್ತು. ಇದನ್ನು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯ ಸಂಧಿ 38, ಪದ್ಯ 205 ಹೀಗೆ ಉಲ್ಲೇಖಿಸುತ್ತದೆ.

ಶಿವಾನುಭವಿಗಳಪರಿಮಿತ ಗೃಹಂ
ಪರಿಕಿಪರಿಗಿದು ವಿಜಯಕಲ್ಯಾಣವಾದುದೀ
ಧರೆಯರೆಯೇ ದೇವರಾಜೇಂದ್ರಪುರವೆಂಬವರ ಶರಣಾಂಬುಜಕೆ ಶರಣು ।

ಪ್ರಾಯಶಃ ಕೊಡೇಕಲ್ಲ ಬಸವಣ್ಣನ ಜನನಕ್ಕಿಂತ ಮೊದಲು ಶಿವಕವಿಗಳಿಂದ ಶಿವಾನುಭವಿಗಳಿಂದ ಶೈವ ಕೇಂದ್ರವಾಗಿತ್ತು. ಹರಿಹರ, ರಾಘವಾಂಕ, ಚಾಮರಸರಂಥ ಕೆಲವರು ಶರಣರ ಜೀವನ ಕಾರ್ಯಗಳನ್ನು ಬರೆದಿರುವುದನ್ನು ಬಿಟ್ಟರೆ; ಕೆರೆಯ ಪದ್ಮರಸ, ಮಗ್ಗೆಯ ಮಾಯಿದೇವ, ಜಕ್ಕಣಾರ್ಯ, ಗುಬ್ಬಿ ಮಲ್ಲಣ್ಣ ಮುಂತಾದವರು ಶಿವಾನುಭವಸೂತ್ರ ದೀಕ್ಷಾಬೋಧೆಗಳಂಥ ಆಗಮ ಕೃತಿಗಳನ್ನು ರಚಿಸಿದರಲ್ಲದೆ; ವಚನಗಳಿಗೂ ಆಗಮಗಳಿಗೂ ಸಂಬಂಧ ಕಲ್ಪಿಸಿ "ವಚನಾಗಮ" ಎಂಬ ವಿಶೇಷಣದಿಂದ ಕರೆದರು. ಚನ್ನಬಸವಣ್ಣನನ್ನು ಪುರಾಣವ್ಯಕ್ತಿಯಾಗಿ, ಪ್ರಭುದೇವನನ್ನು ಲೀಲಾಪುರುಷನಾಗಿ ಚಿತ್ರಿಸುವುದರ ಮೂಲಕ ಅನುಭಾವಿಗಳ ಚರಿತ್ರೆ ಆಗಮ ಸಾಹಿತ್ಯವಾಗಿ ಶಿವಾನುಭವಿಗಳ ಕೈಯಲ್ಲಿ ರೂಪಾಂತರಗೊಂಡಿತು. ಉಡಿಯಲಿಂಗಬಿಟ್ಟು, ಗುಡಿಯಲಿಂಗವ ನಂಬಿ ನಡೆಯುವ ಭಕ್ತಸಮೂಹದ ಕೇಂದ್ರವಾಗಿತ್ತು. ಇದರಿಂದ ಹಂಪಿ ಶಿವಾನುಭವಿಗಳ ಪರಿಮಿತ ಗೃಹ ಸಕಲಾಗಮ ಪುರಾಣಕೋವಿದರ ನೆಲೆಯಾಗಿತ್ತು.

2. ಶಿವನಿಷ್ಠರಾದ ನಾಥಪಂಥ ಮಹಾರಾಷ್ಟ್ರದಲ್ಲಿ ಮತ್ತು ಬಂಗಾಲದಲ್ಲಿ ಸಂತ ಸಂಪ್ರದಾಯವಾಗಿ ಬೆಳೆದರೆ, ಕರ್ನಾಟಕದಲ್ಲಿ ಶಾಂತ ಸಂಪ್ರದಾಯವಾಗಿ ಕಾಣಿಸಿಕೊಂಡಿದ್ದು ಹಂಪಿಯಲ್ಲಿ. ನೂರೊಂದು ವಿರಕ್ತರು ಈ ಸಂಪ್ರದಾಯದವರು. ಡಂಗುರಶಾಂತ, ಕೋಲಶಾಂತ. ಕುದುರೆಶಾಂತ – ಹೀಗೆ 'ಶಾಂತ' ವಿಶೇಷಣದಿಂದ ಕೊನೆಗೊಳ್ಳುವ ಈ ವಿರಕ್ತರು ಶರಣ ಸಂಪ್ರದಾಯದ ವಿರಕ್ತರಲ್ಲ; ಶಾಂತ ಸಂಪ್ರದಾಯದ ಅವಧೂತರು. ಈ ಶಾಂತ ಸಂಪ್ರದಾಯವನ್ನೇ ಹೊತ್ತು ಕೊಡೇಕಲ್ಲಿಗೆ ನಡೆದ ಬಸವಣ್ಣ ಹಂಪೆಯುವನೆಂಬುದನ್ನು ಲಕ್ಷಿಸಬೇಕು. ಲಕ್ಕಣದಂಡೇಶ ಹೇಳುವಂತೆ "ಪರಿಕಿಪರಿಗಿದು ವಿಜಯಕಲ್ಯಾಣ"ವಾಯಿತು. ಹೀಗಾಗಿ ಹಂಪಿಯನ್ನು ವಿಜಯಕಲ್ಯಾಣವೆಂದು ಕರೆಯಬೇಕಾದುದು 'ನೂರೊಂದು ವಿರಕ್ತರ' ಚೌಕಟ್ಟಿನೊಳಗೆ ಮಾತ್ರ.

3. ಕೊಡೇಕಲ್ಲ ಬಸವಣ್ಣನಿಗೆ ತನ್ನೂರಿನಲ್ಲಿಯೇ ನಾಥ ಸಂಪ್ರದಾಯ ಮರೆಯಾದಾಗ ಅದರ ಸ್ವರೂಪ ತಿಳಿಯಲು ಚಾಮರಸನ ಕಥಾನಾಯಕ ಅಲ್ಲಮನ ಬಳ್ಳಿಗಾವೆ ಮತ್ತು ಬಸವಣ್ಣ ಕಲ್ಯಾಣಕ್ಕೆ ಹೋಗಿ ಬರುತ್ತಾನೆನಿಸುತ್ತದೆ. ಅದೇ ವೇಳೆಗೆ ಆರೂಢ ಪರಮಾನಂದರು, ಆರೂಢ ಸಂಗಮನಾಥರ ಪ್ರಭಾವದಿಂದ ನಾಗಾವಿಯ ಗುಂಡಬಸವೇಶ್ವರನ ಹೇಳಿಕೆಯಂತೆ "ಹಳೆಯ ಸಗರನಾಡಹೊರಗೆ ಮಠವ ಕಟ್ಟಿಸಿ ಅಮರಕಲ್ಯಾಣವನ್ನು ಆರೂಢ ಸಂಗಮನಾಥನಂತೆ ಕೊಡೇಕಲ್ಲಿನಲ್ಲಿ ಕಡೆಯಕಲ್ಯಾಣ ಸ್ಥಾಪಿಸುತ್ತಾನೆ; ಬಸವಣ್ಣ.

4. ಇಷ್ಟ ಲಿಂಗವನ್ನು ನಿಷ್ಠೆಯಿಂದ ಜಂಗಮಲಿಂಗವನ್ನಾಗಿಸಿದ ಬಸವಕಲ್ಯಾಣದ ಶರಣಲಿಂಗಾಯತ ಪಂಥದ ಆಶಯದಿಂದ ಹಂಪಿಯಲ್ಲಿ ಸ್ಥಾವರಲಿಂಗಕ್ಕೆ ಮಹತ್ವ ದೊರೆಯಿತು. ಇದರಿಂದ ಬೇಸರಗೊಂಡ ಶಾಂತ ಸಂಪ್ರದಾಯದವರು ಬಹಿರಂಗದಲ್ಲಿ ಲಿಂಗವನ್ನು ಬಿಟ್ಟು ಅಂತರಂಗದಲ್ಲಿ ಅಷ್ಟಾವರಣವನ್ನು ಆಚರಿಸುವಂತಾದರು. ಇದರಿಂದ ಇವರು ಶಾಂತಲಿಂಗಾಯತರೆನಿಸಿಕೊಂಡರು. ಈ ಶಾಂತಲಿಂಗಾಯತರೆಂಬ ಪಂಥಕ್ಕೆ ಮೂಲಕೇಂದ್ರ ವಿಜಯನಗರ ಎಂಬುದು ಲಕ್ಷಿಸಬೇಕಾದ ಸಂಗತಿ.

34. ವಿಜಯನಗರ ಕಾಲದಲ್ಲಿ ಶ್ರೀರಂಗಪಟ್ಟಣ ಸೀಮೆ

ಶ್ರೀ ಲಿಂಗರಾಜು, ತಂಡಸನಹಳ್ಳಿ

ಪೀಠಿಕೆ

ಇಂದು ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾದ ಶ್ರೀರಂಗಪಟ್ಟಣ ಸಮುದ್ರ ಮಟ್ಟದಿಂದ 711 ಮೀಟರ್ ಎತ್ತರವಾಗಿದೆ. ಕಾವೇರಿ ನದಿಯಿಂದ ಸುತ್ತುವರಿಯಲ್ಪಟ್ಟಿರುವ ಸುಂದರ ದ್ವೀಪವಾಗಿದ್ದು, ಐದು ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಶ್ರೀರಂಗಪಟ್ಟಣವೆಂದರೆ ಜಗದೊಡೆಯನಾದ ಶ್ರೀ ರಂಗನಾಥರಾಯನು ನೆಲೆಸಿರುವ ಪಟ್ಟಣ. ಶಾಸನಗಳು ಶ್ರೀರಂಗಪಟ್ಟಣವನ್ನು 'ಶ್ರೀರಂಗಪುರ' (ಎ.ಕ., 06, ಶ್ರೀ.ಪ. 01) 'ತಿರುವ ರಂಗನಾರಾಯಣ ಚತುರ್ವೇದಿ ಮಂಗಲ' (ಎ.ಕ., 06, ಶ್ರೀ.ಪ. 01) 'ಗೌತಮ ಕ್ಷೇತ್ರ', 'ಉಭಯ ಕಾವೇರಿ ಮಧ್ಯವರ್ತಿ' (ಎ.ಕ., 06, ಕೃ.ಪೇ. 65) ಎಂದು ಉಲ್ಲೇಖಿಸಿವೆ. ಅಲ್ಲದೆ 'ಕರಿವರದರಾಜ ಪುರ', 'ಆದಿ ರಂಗ' 'ಪಶ್ಚಿಮ ರಂಗ ಕ್ಷೇತ್ರ', ಹೈದರ್ ಟಿಪ್ಪು ಕಾಲದಲ್ಲಿ 'ಗುಲ್‌ಶನೆ' ಹಾಗೂ ಬ್ರಿಟೀಷ್‌ರ ದಾಖಲೆಗಲ್ಲಿ 'ಸೆರಿಂಗಪಟ್ಟಣ' ಎಂದು ಉಲ್ಲೇಖಿಸಲ್ಪಟ್ಟಿದೆ.

ಶ್ರೀರಂಗಪಟ್ಟಣದ ಚಾರಿತ್ರಿಕ ಹಿನ್ನಲೆ

ಭಾರತದ ಹಾಗೂ ಕರ್ನಾಟಕದ ಇತಿಹಾಸದಲ್ಲಿ ಶ್ರೀರಂಗಪಟ್ಟಣದ ಬಗ್ಗೆ ಅಧ್ಯಯನ ಮಾಡಿದಾಗ ಇದೊಂದು ಪುರಾಣ ಪ್ರಸಿದ್ಧವಾದ ಹಾಗೂ ಐತಿಹಾಸಿಕವಾದ ಪ್ರದೇಶವೆಂಬುದನ್ನು ಅನೇಕ ಆಕರಗಳಿಂದ ತಿಳಿದುಕೊಳ್ಳಬಹುದು. ಇಂತಹ ಶ್ರೀರಂಗಪಟ್ಟಣ ಪ್ರಾಚೀನ ಹಾಗೂ ಮಧ್ಯಕಾಲೀನ ಕಾಲದಲ್ಲಿ ವಿವಿಧ ರಾಜ ಮನೆತನಗಳ ಆಡಳಿತ ಕೇಂದ್ರವಾಗಿ, ರಾಜಧಾನಿಯಾಗಿ, ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಬೆಳವಣಿಗೆ ಹೊಂದಿತ್ತು. ಶ್ರೀರಂಗಪಟ್ಟಣವು ವಿವಿಧ ರಾಜಮನೆತನಗಳ ಕಾಲದಲ್ಲಿ ಒಂದು ಪ್ರಮುಖ ರಾಜಕೀಯ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆದುಕೊಳ್ಳುವುದಕ್ಕೆ ಕಾರಣ ಸಂಪನ್ಮೂಲದ ಪೂರೈಕೆ ಸಾಕಷ್ಟು ಇದ್ದುದು, ನೀರಿನ ಅಭಾವ ಇಲ್ಲದೆ ಇದ್ದುದು, ರಕ್ಷಣೆಯ ದೃಷ್ಟಿಯಿಂದ ಶ್ರೀರಂಗಪಟ್ಟಣ ಉತ್ತಮವಾದ ಸ್ವಾಭಾವಿಕ ಆಯಕಟ್ಟಿನ ನೆಲೆಯಾಗಿದ್ದಿದ್ದು.

ಚಾರಿತ್ರಿಕವಾಗಿ ಶ್ರೀರಂಗಪಟ್ಟಣವು 'ಗಂಗವಾಡಿ–96,000' ಎಂದು ಕರೆಯಲ್ಪಡುವ ಗಂಗ ರಾಜ್ಯಕ್ಕೆ ಒಳಪಟ್ಟಿದ್ದಿತು. ಗಂಗರ ಸಾಮಂತ ತಿರುಮಲಯ್ಯ ಕ್ರಿ.ಶ. 894ರಲ್ಲಿ ಶ್ರೀರಂಗನಾಥ ದೇವಾಲಯವನ್ನು ನಿರ್ಮಿಸಿ 'ಶ್ರೀರಂಗಪುರ'ವೆಂದು ಹೆಸರಿಟ್ಟನೆಂದು ಶಾಸನಗಳಿಂದ ತಿಳಿದುಬರುತ್ತದೆ. ಗಂಗರ ಪ್ರಮುಖ ಆಡಳಿತ ಕೇಂದ್ರವಾಗಿ ಶ್ರೀರಂಗಪಟ್ಟಣ ಪ್ರವರ್ಧಮಾನಕ್ಕೆ ಬಂದಿತು. ರಾಷ್ಟ್ರಕೂಟರ ಕಾಲದಲ್ಲಿ ಕಾವೇರಿ ನದಿಯು ರಾಷ್ಟ್ರಕೂಟ ಸಾಮ್ರಾಜ್ಯದ ದಕ್ಷಿಣ ಭಾಗದ ಗಡಿಯಾಗಿರುವುದನ್ನು ಕವಿರಾಜ ಮಾರ್ಗದಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಶ್ರೀರಂಗಪಟ್ಟಣ ಪ್ರದೇಶ ರಾಷ್ಟ್ರಕೂಟರ ನೇರ ಆಳ್ವಿಕೆಗೆ ಒಳಪಟ್ಟಿತ್ತೇ ಅಥವಾ ಗಂಗರ ಆಳ್ವಿಕೆಗೆ ಒಳಪಟ್ಟಿತ್ತೇ ಎಂಬುದನ್ನು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಶ್ರೀರಂಗಪಟ್ಟಣದ ಕೆಲವು ಶಾಸನಗಳ ಪ್ರಕಾರ (ಶ್ರೀ.ಪ. 67, 78, 87) ಶ್ರೀರಂಗಪಟ್ಟಣ ಪ್ರದೇಶ ಕೆಲವು ವರ್ಷಗಳ ಕಾಲ ಚೋಳರ ಆಧಿಪತ್ಯಕ್ಕೆ ಒಳಪಟ್ಟಿದ್ದಿತ್ತೆಂದು ತಿಳಿದುಬರುತ್ತದೆ.

ಚೋಳ ರಾಜ್ಯದಲ್ಲಿ ಕಿರುಕುಳಕ್ಕೊಳಗಾದ ಶ್ರೀರಾಮಾನುಜಾಚಾರ್ಯರು ಶ್ರೀರಂಗಪಟ್ಟಣ ಪ್ರದೇಶಕ್ಕೆ ಬಂದು ನೆಲೆಸಿದ್ದರಿಂದ ಕ್ರಿ.ಶ. 1117ರಲ್ಲಿ ಹೊಯ್ಸಳ ದೊರೆ ಬಿಟ್ಟಿದೇವ ಕಾವೇರಿ ತೀರದ ಅಷ್ಟಗ್ರಾಮಗಳನ್ನು ಬಿಟ್ಟುಕೊಟ್ಟು, ಈ

ಗ್ರಾಮಗಳ ಮೇಲ್ವಿಚಾರಣೆಗೆ 'ಹೆಬ್ಬಾರರು' ಅಥವಾ 'ಪ್ರಭು'ಗಳೆಂಬ ಅಧಿಕಾರಿಗಳನ್ನು ನೇಮಿಸಿದನು.[1] ವಿಷ್ಣುವರ್ಧನನ ಸಹೋದರ ವಿನಯಾಧಿತ್ಯ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದಾಗ ಬಲವಾದ ಕೋಟೆಯೊಂದನ್ನು ಕ್ರಿ.ಶ. 1120ರಲ್ಲಿ ನಿರ್ಮಿಸಿದನೆಂದು ಶಾಸನಾಧಾರಗಳಿಂದ ತಿಳಿದು ಬರುತ್ತದೆ. ಹೀಗೆ ಹೊಯ್ಸಳರು ಶ್ರೀರಂಗಪಟ್ಟಣವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಅದನ್ನು ಒಂದು ಅಷ್ಟಗ್ರಾಮವನ್ನಾಗಿ ಪರಿವರ್ತಿಸಿದರು. ಮೇಲಿನ ಅಂಶಗಳಿಂದ ಹೊಯ್ಸಳರ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶ ಹೋಯ್ಸಳರ ಆಳ್ವಿಕೆಗೊಳಪಟ್ಟಿದ್ದ ಆಡಳಿತ ಘಟಕವಾಗಿತ್ತೆಂದು ತಿಳಿದುಬರುತ್ತದೆ. ಹೊಯ್ಸಳರ ಪತನಾನಂತರ ಶ್ರೀರಂಗಪಟ್ಟಣ ಸೀಮೆ ವಿಜಯನಗರ ಅರಸರ ಆಳ್ವಿಕೆಗೊಳಪಟ್ಟಿತ್ತು. ಗಂಗರು, ಚೋಳರು, ಹೊಯ್ಸಳರ ಕಾಲದಲ್ಲಿ ಪ್ರಚಲಿತದಲ್ಲಿದ್ದ ನಾಡುಗಳು ಕ್ರಿ.ಶ.1400ರ ನಂತರ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳಲ್ಲಿ 'ಸೀಮೆ' ಎಂಬ ಪ್ರತ್ಯಯವನ್ನು ಪಡೆದವು. ಆದರೆ ಕ್ರಿ.ಶ. 1400ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ 'ಸೀಮೆ' ಎಂಬುದು ಎಲ್ಲೆ ಎಂಬರ್ಥದಲ್ಲೇ ಪ್ರಯೋಗವಾಗಿದೆ. ವಿಜಯನಗರ ಕಾಲಕ್ಕೆ ಹಲವು ಸ್ಥಳಗಳ ಗುಂಪನ್ನು ಸೀಮೆ ಅಥವಾ ನಾಡೆಂದು ಕರೆಯಲಾಗುತ್ತಿತ್ತು.[2] ಆದ್ದರಿಂದ ವಿಜಯನಗರ ಅರಸರ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶ ಯಾವ ರೀತಿಯ ಆಡಳಿತ ವ್ಯವಸ್ಥೆಗೆ ಒಳಪಡುವುದರ ಮೂಲಕ, ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದಿತ್ತು ಎಂದು ಸೂಕ್ಷ್ಮವಾಗಿ ಅವಲೋಕಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ಪ್ರದೇಶ ವಿಜಯನಗರ ಅರಸರ ನೇರ ಆಳ್ವಿಕೆಗೊಳಪಡದೆ, ಊಳಿಗಮಾನ್ಯ ಸ್ವರೂಪದ ಆಡಳಿತ ವ್ಯವಸ್ಥೆಯ ಮೂಲಕ ವಿಜಯನಗರ ಅರಸರ ಕಾಲದ ಒಂದು ಆಯಕಟ್ಟಿನ ಪ್ರದೇಶವಾಗಿ ಅಸ್ತಿತ್ವದಲ್ಲಿತ್ತು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಈ ಪ್ರಬಂಧವನ್ನು ಮಂಡಿಸುತ್ತಿದ್ದೇನೆ.

ವಿಜಯನಗರ ಅರಸರ ಕಾಲದ ಆಡಳಿತ ಸ್ವರೂಪ

ವಿಜಯನಗರ ಅರಸರು ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ರಾಜ್ಯಗಳೆಂಬ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿಕೊಂಡಿದ್ದರು. ಇವುಗಳನ್ನು ಮಹಾಲಿಂಗಂರವರು ಮಂಡಲಗಳೆಂದು, ಸಾಲೆತೊರೆರವರು ನಾಡುಗಳೆಂದು ಕರೆದಿದ್ದಾರೆ.[3] ಪ್ರಾಂತ್ಯಗಳನ್ನು ರಾಜ್ಯ, ಮಂಡಲ, ಮತ್ತು ನಾಡುಗಳೆಂದು ಕರೆಯುತ್ತಿದ್ದರು. ಈ ಆಡಳಿತ ಘಟಕಗಳನ್ನು ಸೀಮೆ ಅಥವಾ ನಾಡು, ಸ್ಥಳ ಎಂದು ಕರೆಯುತ್ತಿದ್ದರು.[4] ಈ ಘಟಕಗಳ ಅನುಕ್ರಮವು ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲೂ ಒಂದೇ ಆಗಿದ್ದರೂ ಘಟಕಗಳ ಹೆಸರುಗಳು ಬೇರೆ ಬೇರೆ ಯಾಗಿರುತ್ತಿದ್ದವು. ಉದಾ: ಕೊಟ್ಟಂ, ನಾಡು, ವಳನಾಡು ಮತ್ತು ಮಂಡಲಂ ಇವು ಚೋಳರ ಆಳ್ವಿಕೆಯಲ್ಲಿದ್ದವು.[5] ಅನೇಕ ಶಾಸನಗಳಲ್ಲಿ ರಾಜ್ಯದ ಬದಲು ಸೀಮೆ, ಸ್ಥಳ ವಳಿತ ಮತ್ತು ವೇಂಠೆ ಎಂಬ ಪದಗಳನ್ನು ಉಪಯೋಗಿಸಲಾಗಿದೆ.[6] ಹಲವು ಸ್ಥಳಗಳನ್ನು ಒಗ್ಗೂಡಿಸಿ ಸೀಮೆ ಅಥವಾ ನಾಡು ಎಂದು ಕರೆಯಲಾಗುತ್ತಿತ್ತು. ಡಾ. ಎನ್.ವೆಂಕಟರಮಣಯ್ಯನವರ ಪ್ರಕಾರ ಅಷ್ಟಗ್ರಾಮ ಸೀಮೆ ಮತ್ತು ಬಾಗೂರು ಸೀಮೆಯಲ್ಲಿ ಸೀಮೆ ಎಂಬ ಪದವನ್ನು ವಿಶಾಲ ಪ್ರದೇಶ ಸೂಚಕವಾಗಿ ಬಳಸಿದರೆ, ವೃತ್ತಿಯ ಸೀಮೆ ಮತ್ತು ಸಕಲ ಸೀಮೆಗಳಲ್ಲಿ ಸರ್ಕಾರ ಆಡಳಿತಾನುಕೂಲಕ್ಕಾಗಿ ರಚಿಸಿದ ಕೃತಕ ಗ್ರಾಮ ಸಮೂಹ ಸೂಚಕವಾಗಿ ಬಳಸಲಾಗುತ್ತಿತ್ತೆಂದು ತಿಳಿಸಿದ್ದಾರೆ. ಕನ್ನಡ ಪ್ರದೇಶದಲ್ಲಿ ನಾಡು ಎಂಬ ವಿಭಾಗವನ್ನು ತೆಲುಗು ಪ್ರದೇಶದಲ್ಲಿ ಸೀಮೆ ಎಂದು ಕರೆಯುತ್ತಿದ್ದರು.[7] ಪ್ರತಿಯೊಂದು ಗ್ರಾಮ ಅಥವಾ ಹಳ್ಳಿ ಪ್ರಾಂತೀಯ ಆಡಳಿತ ವ್ಯವಸ್ಥೆಯ ಅತ್ಯಂತ ಚಿಕ್ಕ ಘಟಕವಾಗಿತ್ತು. ಪ್ರತಿಯೊಂದು ಗ್ರಾಮವು ಒಂದು ಆಡಳಿತ ಘಟಕವಾಗಿತ್ತು. ಕೆಲವು ಗ್ರಾಮಗಳು ಒಟ್ಟುಗೂಡಿ ಒಂದು ಸ್ಥಳವಾಗುತ್ತಿತ್ತು. ಕೆಲವು ಸ್ಥಳಗಳು ಒಟ್ಟುಗೂಡಿ ಒಂದು ಸೀಮೆ ಅಥವಾ ನಾಡು ಆಗಿರುತ್ತಿತ್ತು.[8] ನಾಡು ಎಂಬುದು ಪ್ರಬಲವಾದ ಆಡಳಿತ ಘಟಕ. ನಾಡಿನ ಶಾಂತಿ, ಸುವ್ಯವಸ್ಥೆ ಪಾಲನೆ, ಸಂಪನ್ಮೂಲ ಕ್ರೋಢೀಕರಣ, ಸೈನ್ಯಕ್ಕೆ ಯೋಧರನ್ನು ಸೇರಿಸಿಕೊಳ್ಳುವುದು, ರಾಜರ ಅನುಮತಿ ಪಡೆದು ಕೋಟೆ, ಕೊತ್ತಲ, ಸೈನ್ಯ ಕಟ್ಟುವ ಜವಾಬ್ದಾರಿ ಹೊಂದಿತ್ತು. ಕರೆ ಬಂದಾಗ ಸೈನ್ಯ ಮತ್ತು ಸಾಮಾಗ್ರಿಗಳ ನೆರವು

ಒದಗಿಸಲು ನಾಡಪ್ರಭು ಬದ್ದನಾಗಿದ್ದನು.[9] ಈ ಹಿನ್ನಲೆಯಲ್ಲಿ ಶ್ರೀರಂಗಪಟ್ಟಣ ಪ್ರದೇಶ ವಿಜಯನಗರ ಅರಸರ ಕಾಲದಲ್ಲಿ ಯಾವ ರೀತಿಯಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿತ್ತೆಂಬುದನ್ನು ತಿಳಿದುಕೊಳ್ಳಬಹುದು.

ವಿಜಯನಗರ ಅರಸರ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶದ ಆಡಳಿತ

ವಿಜಯನಗರ ಅರಸರಿಗೆ ವಿಶಾಲವಾದ ಸಾಮ್ರಾಜ್ಯದಾದ್ಯಂತ ಏಕರೂಪದ ಆಡಳಿತ ವ್ಯವಸ್ಥೆಯೊಂದನ್ನು ಸ್ಥಾಪಿಸಲು ಕಾಲ ಮತ್ತು ರಾಜಕೀಯ ಸ್ಥಿರತೆಯ ಕೊರತೆ ಅಡ್ಡಿಪಡಿಸಿರಬಹುದು. ಈ ಹಿನ್ನಲೆಯಲ್ಲಿ ಇಡೀ ವಿಜಯನಗರ ಅರಸರ ಆಡಳಿತ ಸ್ವರೂಪ ವಿವಿಧ ಕಾಲಘಟ್ಟಗಳಲ್ಲಿ ಶ್ರೀರಂಗಪಟ್ಟಣ ಪ್ರದೇಶದ ಮೇಲೆ ಯಾವ ರೀತಿಯ ಛಾಪು ಮಾಡಿಸಿತ್ತೆಂದು ಕೆಳಗಿನ ಅಂಶಗಳಿಂದ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಶ್ರೀರಂಗಪಟ್ಟಣ ಪ್ರದೇಶದಲ್ಲಿ ಕ್ರಿ.ಶ. 14ನೇ ಶತಮಾನದಿಂದ 17ನೇ ಶತಮಾನದ ಪ್ರಾರಂಭದವರೆಗೂ ವಿಜಯನಗರದ ಪ್ರತಿನಿಧಿ ಅಥವಾ ವೈಸರಾಯಿ ಆಳ್ವಿಕೆ ನಡೆಸುತ್ತಿದ್ದ ವಿಷಯ ದಾಖಲೆಗಳಿಂದ ತಿಳಿದುಬರುತ್ತದೆ. ಎಂ.ಎಚ್. ಕೃಷ್ಣರವರ ಪ್ರಕಾರ ಕ್ರಿ.ಶ 15ನೇ ಶತಮಾನದ ಆರಂಭದಲ್ಲಿ ತಿರುಮಲದೇವನೆಂಬ ಪಾಳೆಯಗಾರ ವಿಜಯನಗರದ ದೇವರಾಯನ ಅನುಮತಿ ಪಡೆದು ಶ್ರೀರಂಗಪಟ್ಟಣದಲ್ಲಿ ಒಂದು ಕೋಟೆಯನ್ನು ನಿರ್ಮಿಸಿದನು. ಕ್ರಿ.ಶ. 1430, ಶ್ರೀರಂಗಪಟ್ಟಣದ ತಾಮ್ರಶಾಸನ (25, ಎ.ಕ., 6) ಪ್ರಕಾರ 2ನೇ ದೇವರಾಯನು ರತ್ನಧೇನು ಮಹಾದಾನವನ್ನು ಮಾಡುವ ಸಂದರ್ಭದಲ್ಲಿ ತೋರಿನಾಡವೇಂಠೆಯದ ಮೇನಾಪುರ ಮಾಗಣಿಯೊಳಗಣ ಚಂದಿಗಾಲ ಗ್ರಾಮವನ್ನು ವೃತ್ತಿಗಳಾಗಿ ವಿಭಜಿಸಿ ಹಲವಾರು ಬ್ರಾಹ್ಮಣರಿಗೆ ದಾನ ಮಾಡಿರುವುದನ್ನು ತಿಳಿಸುತ್ತದೆ. ಈ ಶಾಸನವು ಸಂಸ್ಕೃತ ಮತ್ತು ನಾಗರಿಲಿಪಿಯಲ್ಲಿದೆ. ಇದನ್ನು ಬರೆದಾತ ವರದಾಚಾರ್ಯ. ದಾನ ಗ್ರಾಮದ ಮೇರೆಗಳನ್ನು ಮಾತ್ರ ಕನ್ನಡ ಭಾಷೆಯಲ್ಲಿ ಹೇಳಿದೆ. ಅಲ್ಲದೆ ಶ್ರೀರಂಗಪಟ್ಟಣ ಪ್ರದೇಶದ ಚೆಂದಿಗಾಲ ಗ್ರಾಮವನ್ನು 'ಪ್ರತಾಪ ದೇವರಾಯ ಪುರವೆಂದು' ಹೆಸರಿಸಲಾಗಿದೆ.

ಕ್ರಿ.ಶ. 1431ರ ಶ್ರೀರಂಗಪಟ್ಟಣ ಶಾಸನವು (03, ಎ.ಕ. 6.), ಅರಸನ ನಿರೂಪದಿಂದ ದೇವರಾಜ ಒಡೆಯರು ಶ್ರೀರಂಗಪುರದ ಶ್ರೀ ವೈಷ್ಣವರು ಕೊಡುತ್ತಿದ್ದ ಅಡಿಕೆ, ಸುಂಕ, ಮಗ್ಗ, ವುಮಾರ, ಕಾಣಿಕೆ, ಮೊದಲಾದ ತೆರಿಗೆಗಳಿಂದ ಬರುತ್ತಿದ್ದ ಆದಾಯವನ್ನು ಸೌಮ್ಯರಾಜನೆನಿಸಿದ ಶ್ರೀರಂಗನಾಥ ದೇವರಿಗೆ ವಸಂತೋತ್ಸವ ಪೂಜೆಗಾಗಿ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಬರುವ ತೆರಿಗೆಗಳಲ್ಲಿ ವುಮಾರ ಕಾಣಿಕೆ ಎಂಬ ಪದ ಗಮನಾರ್ಹ. ವುಮಾರ ಎಂಬ ಪದ ಕನ್ನಡದಲ್ಲಿಲ್ಲ. ಆದರೆ ಮೈಸೂರಿನಲ್ಲಿ ಪ್ರಚಲಿತವಾಗಿರುವ ತಮಿಳು ಆಡು ಮಾತಿನಲ್ಲಿ ವುಮಾರ ಎಂಬ ಪದವನ್ನು ಹೊಸತಿಲು ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ. ಪ್ರಾಕೃತದಲ್ಲಿ 'ಉಮ್ಮಾರ', ಪಾಳಿಯಲಿ 'ಉಮ್ಮಾರ'ಎಂಬ ಪದ ಪ್ರಯೋಗವಿದ್ದು ಇದರ ಅರ್ಥ ಹೊಸತಿಲು ಎಂದಾಗುತ್ತದೆ. ಸಂಸ್ಕೃತದಲ್ಲಿ ಉಮ್ಮಾರ ಎಂಬ ಪದಕ್ಕೆ ಬಾಗಿಲುವಾಡದ ಮೇಲಿನ ಮರಕಟ್ಟು ಎಂಬ ಅರ್ಥವಿದೆ. 'ವುಮಾರ' ಎಂಬುದು ಈ ಉಮ್ಮಾರದಿಂದ ಬಂದಿರಬಹುದು. ಆದ್ದರಿಂದ ವುಮಾರ ಕಾಣಿಕೆ ಎಂಬುದು ಪ್ರಾಕೃತದಿಂದ ಪ್ರಭಾವಿತವಾದ ಪದವಿದ್ದು ಹೊಸತಿಲು ಹಣ ಎಂಬುದಕ್ಕೆ ಸಮನಾದ ಪದವೆನ್ನಬಹುದು. ಇದೇ ಶಾಸನದಲ್ಲಿನ 'ತಿರುನಾಳು'ಎಂಬ ತಮಿಳು ಪದದ ಪ್ರಯೋಗವನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಕ್ರಿ.ಶ. 1430 (ಎ.ಕ., 06, ಶ್ರೀ.ಪ. 25), ಕ್ರಿ.ಶ. 1431 (ಎ.ಕ. 06, ಶ್ರೀ.ಪ. 03) ಮತ್ತು ಕ್ರಿ.ಶ. 1447 (ಎ.ಕ. 06, ಶ್ರೀ.ಪ. 21)ರ ಶಾಸನಗಳು. ಅದೇ ತಾಲ್ಲೂಕಿನ ನೆಲಮನೆ ಗ್ರಾಮದ ಕ್ರಿ.ಶ. 1458ರ ಶಾಸನ (ಎ.ಕ. 06, ಶ್ರೀ.ಪ. 93), ಮಳವಳ್ಳಿ ಕ್ಯಾತನಹಳ್ಳಿಯ ಕ್ರಿ.ಶ. 1439ರ ಶಾಸನ (ಎ.ಕ. 07, ಮವ. 133), ಅದೇ ತಾಲ್ಲೂಕಿನ ಕಿರಗಸೂರು ಗ್ರಾಮದ ಕ್ರಿ.ಶ. 1440ರ ಶಾಸನಗಳು (ಎ.ಕ. 07, ಮವ. 102), ವಿಜಯನಗರದ

ದೊರೆ ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು ಅವನ ಅಧಿಕಾರಿಗಳ ನೇತೃತ್ವದಲ್ಲಿ ಶ್ರೀರಂಗಪಟ್ಟಣ, ಮೇಲುಕೋಟೆ ಮುಂತಾದ ಸ್ಥಳಗಳ ದೇವಾಲಯಗಳಲ್ಲಿನ ಪೂಜಾ ಕೈಂಕರ್ಯಗಳಿಗೆ ಹಾಗೂ ಉತ್ಸವಗಳಿಗೆ ಅನೇಕ ದಾನ ದತ್ತಿಗಳನ್ನು ನೀಡಿರುವ ವಿವರಗಳು ಇವುಗಳಲ್ಲಿ ಕಂಡುಬಂದಿವೆ.

ಕ್ರಿ.ಶ. 1448ರ ಪಾಂಡವಪುರದ 179ನೇ ಶಾಸನ, ಶ್ರೀರಂಗಪಟ್ಟಣದ 93ನೇ ಶಾಸನಗಳು (ಎ.ಕ. 06) 2ನೇ ದೇವರಾಯನ (ಮಲ್ಲಿಕಾರ್ಜುನ) ಆಳ್ವಿಕೆಯಲ್ಲಿ ತಿಮ್ಮಣ್ಣ ದಣ್ಣಾಯಕನ ಪತ್ನಿ ರಂಗಾಂಭಿಕೆ 'ರಂಗಮಠವನ್ನು' ಕಟ್ಟಿಸಿ ಅದರಲ್ಲಿ ದಿನಂಪ್ರತಿ 24 ಶ್ರೀ ವೈಷ್ಣವರಿಗೆ ಅನ್ನದಾನ ಮಾಡಬಯಸಿದಳೆಂದು ತಿಳಿಸುತ್ತವೆ. ತಿಮ್ಮಣ್ಣ ದಣ್ಣಾಯಕನು ನಾಗಮಂಗಲದ ಪ್ರಭುವಾದ ಲೋಹಿತ ವಂಶದ ಸಿಂಗಣ್ಣನ ಮಗನೆಂದು ತಿಳಿದುಬರುತ್ತದೆ. ಮೇಲ್ಕಂಡ ಶಾಸನಗಳಲ್ಲಿನ ಪ್ರಮುಖ ಅಂಶಗಳಿಂದ ಶ್ರೀರಂಗಪಟ್ಟಣ ಪ್ರದೇಶದಲ್ಲಿ 2ನೇ ದೇವರಾಯನ ಆಳ್ವಿಕೆಯ ಪ್ರಭಾವವಿರುವುದನ್ನು ಗುರ್ತಿಸಬಹುದು.

ಕ್ರಿ.ಶ. 1454ರಲ್ಲಿ ಶ್ರೀರಂಗಪಟ್ಟಣ ಪ್ರದೇಶ ನಾಗಮಂಗಲದ ಪ್ರಭು ತಿಮ್ಮಣ್ಣನಿಗೆ ವರ್ಗವಾಗಿ ವಿಜಯನಗರದ ಅರಸರಿಂದ 'ಡಣ್ಣಾಯಕ' ಎಂಬ ಗೌರವಕ್ಕೆ ಪಾತ್ರನಾಗಿದ್ದನು.[10] ತಿಮ್ಮಣ್ಣ ಡಣ್ಣಾಯನು ವಿಜಯನಗರ ಅರಸರ ಒಪ್ಪಿಗೆ ಪಡೆದು ಶ್ರೀರಂಗಪಟ್ಟಣದಲ್ಲಿ ಪಶ್ಚಿಮ ಭಾಗದ ಕೋಟೆ ಹಾಗೂ ಕಂದಕಗಳನ್ನು ನಿರ್ಮಿಸಿ ಅಲ್ಲಿಯ ಶ್ರೀರಂಗನಾಥ ದೇವಾಲಯವನ್ನು ವಿಸ್ತರಿಸಿದನು. ಈತನು ಮಲ್ಲಿಕಾರ್ಜುನನ ಮಹಾಪ್ರಧಾನನೂ ಆಗಿದ್ದನು.[11] ಪ್ರಾಂತೀಯ ಆಡಳಿತದ ಸೇನಾಮುಖ್ಯಸ್ಥರಾಗಿ ದಣ್ಣಾಯಕರನ್ನು ನೇಮಿಸಲಾಗುತ್ತಿತ್ತು. ದಣ್ಣಾಯಕ ಎಂದರೆ ದಂಡನಾಯಕ ಅಥವಾ ಸೇನಾಪತಿ, ಎಂಬರ್ಥವಿದೆ. ಮಹಾಮಂಡಲೇಶ್ವರರ ಆಡಳಿತಕ್ಕೆ ಸಹಕರಿಸಬೇಕಾಗಿದ್ದ ಇಂತಹ ದಣ್ಣಾಯಕರು ಸೈನಿಕ ಚಟುವಟಿಕೆ, ಆಕ್ರಮಣ ಮತ್ತಿತರ ರಕ್ಷಣಾ ಜವಬ್ದಾರಿಗಳ ಮೇಲ್ವಿಚಾರಕರಾಗಿದ್ದರು.[12]

ವಿಜಯನಗರಸರ ಕಾಲದಲ್ಲಿ ಆಳ್ವಿಕೆ ನಡೆಸಿದ ತಿಮ್ಮಣ್ಣ ಡಣಾಯಕನ ಬಗ್ಗೆ ಅರಿಕುಟಾರ ಗ್ರಾಮ ಕೈಫಿಯತ್ತಿನಲ್ಲಿರುವ ವಿವರ ಪು. 12, 13, 14 ಅನೇಕ ಐತಿಹಾಸಿಕ ಮಾಹಿತಿಗಳನ್ನು ಒಳಗೊಂಡಿದೆ.

"ಸ್ವಾಮಿ, ಶೀಗೆ [>ಶಿಗ್ಗಿ] ಹೆಬ್ಬಾರರವಿಗೆ ಭಾರಧ್ವಾಜ ಗೋತ್ರ ಈ ಬಗ್ಗೆ ಪ... ತನದಲ್ಲಿ ಈಗಲು ನಾಲ್ಕು ಐದು ಒಕ್ಕಲು ಇವೆ.

ಕಡೇ ಮನೆ ತಿಮ್ಮಣ್ಣ ಹೆಬ್ಬಾರರವರಿಗೆ ಲೋಹಿತ (?) ಗೋತ್ರ, ಈ ಬಗ್ಯೆ ಸಂತತಿಯಲ್ಲಿ ನಾ (?) (ಈ)ಗಲು ಹತ್ತು ಒಕ್ಕಲು ಇವೆ.

ಕಡೇ ಮನೆ ತಿಮ್ಮಣ್ಣ ಹೆಬ್ಬಾರರವರಿಗೆ ಲೋಹಿತ (?) ಗೋತ್ರ. ಈ ಬಗ್ಗೆ ಸಂತತಿಯಲ್ಲಿ ನಾ (?) (ಈ)ಗಲು ಹತ್ತು ಒಕ್ಕಲು ಇವೆ. ಈ ತಿಮ್ಮಣ್ಣಹೆಬ್ಬಾರರ ಬಳಿಯಲ್ಲಿ ಇರುವ ಜೀತದ ಆಳು ಚಿಕ್ಕೇಗೌಡ ಸಹ ಇಬ್ಬರೂ ತೋಟದಲ್ಲಿ ವ್ಯವಸಾಯ ಮಾಡಿಕೊಂಡು ಇರುವಲ್ಲಿ. ತೋಟದಲ್ಲಿ ಒಂದು ನಲ್ಲಿ ಮರದಡಿಯಲ್ಲಿ ಮೈಮರೆತು ಮಲಗಿರಲಾಗಿ, ಬಿಸಿಲು ಬಂದು ಮುಖದ ಮೇಲೆ ತಾಕುತ್ತ ಇರಲಾಗಿ. ಒಂದು ಕೃಷ್ಣ ಸರ್ಪವು ಆ ಬಿಸಿಲಿಗೆ ಮರೆಯಾಗಿ ತನ್ನ ಹೆಡೆಯನ್ನು ಬಿಚ್ಚಿ ಮರೆಮಾಡಿರುವುದನ್ನು ಈ ಜೀತಗಾರ ಚಿಕ್ಕೇಗೌಡನು ಕಂಡು ಆಶ್ಚರ್ಯಪಟ್ಟು. ದೂರದಲ್ಲಿ ನಿಂತಿರಲಾಗಿ ಅ ಕೃಷ್ಣಸರ್ಪವು ಬಿಸಿಲು ತಂಪಿದ ಮೇಲೆ ತನ್ನ ಇಚ್ಚೆಯಲ್ಲಿ ಹರಿದುಹೋದ ಕಾರಣ. ಈ ಚಿಕ್ಕೇಗೌಡನು ತನ್ನ ಒಡೆಯನನ್ನು ಎಚ್ಚರವನ್ನು ಮಾಡಿ. ಸ್ವಾಮಿ! ಇಷ್ಟು ಹೊತ್ತು ಮರೆತು ಮಲಗುವರೆ?" ಎಂದು ಈ ಪೂರ್ವೋತ್ತರಗಳು ಯಾವತ್ತು ಅವರಿಗೆ ಹೇಳದೆ ತನ್ನಲ್ಲಿಯೇ ಇರಿಸಿಕೊಂಡು. ಒಂದಾನೊಂದು ದಿವಸದಲ್ಲಿ ಈ ಚಿಕ್ಕೇಗೌಡನು ತನ್ನ ಒಡೆಯನಾದ ತಿಮ್ಮಣ್ಣ ಹೆಬ್ಬಾರರವರನ್ನು "ನಿಮಗೆ ಮಹದೈಶ್ವರ್ಯವು ಬಂದರೆ ನನಗೆ ಏನು ಕೊಟ್ಟೀರಿ?" ಎಂದು ಕೇಳಲಾಗಿ.

"ನಾವು ಈ ಬಗ್ಗೆ ಕಷ್ಟ ಅನುಭವಿಸುವುದಿಲ್ಲ ನಮಗೆ ದೊರೆತನ ಬರುವ ಬಗೆ ಹೇಗೆ?" ಎಂದು ಕೇಳಲಾಗಿ "ಸ್ವಾಮಿ! ಮುಂದೆ ಕಾರಣ ಉಂಟು" ಎಂದು ಈ ಪೂರ್ವೋತ್ತರಗಳ ಹೇಳಿದ ಕಾರಣ. "ಆ ದೊರೆತನ ನಮಗೆ ಬಂದರೆ ನಿನಗೆ ದಳವಾಯಿತನ"ವೆಂದು ಹೇಳಲಾಗಿ. ಆ ಬಗ್ಯೆಲ್ಲ ನಂಬಿಕೆ ತೆಗೆದುಕೊಂಡು ಇರುವಲ್ಲಿ. ಆಮೇಲೆ ಕೆಲವು ದಿವಸವಾದ ಬಳಿಕ ಒಬ್ಬ ಪರಮಹಂಸನು ಗ್ರಾಸಕ್ಕೆ ಕೇಳಲಾಗಿ ತಮ್ಮ ಮನೆಯವರಿಗೆಲ್ಲ ಮಾಡಿದ ಅಡಿಗೆಯನ್ನು ದೇವತಾರ್ಚನೆ ಆಗುವುದಕ್ಕೆ ಮೊದಲೆ ಆ ಪರಮಹಂಸನ ಮೇಲಿನ ಭಕ್ತಿಯಿಂದ ಆದ ಅಡಿಗೆ ಕಾರ್ಪಣ್ಯವೇನು?" ಎಂದು ದಯೆಯಿಂದ ರಹಸ್ಯದಲ್ಲಿ ಬಂದು, ನಿಮಗದೆ ಒಂದು ಸಿದ್ದಮೂಲಿಕೆ ಕೊಡುತ್ತೇನೆಂದು ಕೊಟ್ಟು, ಅಲ್ಲಿ ಒಂದು ಬಾವಿಯನ್ನು ಇಳಿದು ಯಾರಿಗೂ ಕಾಣಿಸಿಕೊಳ್ಳದೆ ಅದೃಶ್ಯನಾಗಿ ಹೋದನು.

ಆ ಮೂಲಕ ಸಿದ್ದಮೂಲಿಕಾ ಪ್ರಯೋಗದಿಂದ ಕಬ್ಬಿಣಗಳು ಸುವರ್ಣವಾಗುವುದನ್ನು ಕಂಡು, ಈ ಕಡೇಮನೆ ತಿಮ್ಮಣ್ಣನವರು ಚಿಕ್ಕೇಗೌಡ ಸಹ ವಿಜಯನಗರಕ್ಕೆ ಹೋಗಿ, ಈ ಪೂರ್ವೋತ್ತರಗಳನ್ನು ವಿಸ್ತಾರವಾಗಿ ಬಿನ್ನಹ ಮಾಡಲಾಗಿ, ಸಂತೋಷಪಟ್ಟು ತಿಮ್ಮಣನವರಿಗೆ ತಿಮ್ಮಣ್ಣ ಡಣಾಯಕರು ಎಂಬ ನಾಮಾಂಕಿತವ ಕೊಟ್ಟು ಅಭಯ ಹಸ್ತ ಆಭರಣ ಉಡುಗೊರೆ ಸಹ ಕೊಟ್ಟು, ಇವರಿಗೆ ಕಾವೇರಿ ಉಭಯಪಾರ್ಶ್ವದಲ್ಲಿ ಇರುವ ಅಷ್ಟಗ್ರಾಮ ಪ್ರಭುಗಳು ಮುಂತಾದವರಿಗೆಲ್ಲಾ ದಣಿಯಾಗಿ ಡಣಾಯಕತ್ವ ಮಾಡಿಕೊಂಡು, ಕಾವೇರಿ ಉಭಯಪಾರ್ಶ್ವದಲ್ಲಿ ಇರುವ ಸೀಮೆಗಳನ್ನು ಇವರ ವಳಿತ ಮಾಡಿ, ಈ ಬಗ್ಯೆ ಸಿದ್ಧ ಮೂಲಿಕಾ ಪ್ರಯೋಗದಿಂದ ಆಗುವಂಥ ದ್ರವ್ಯಗಳು(ಳಿಂದ) [ಆಳು] ಮಂದಿ ಕುದುರೆಗಳು ಸಹ ಕಟ್ಟಿಕೊಂಡು, ಸೀಮೆ ಸಾದಿಸಿಕೊಂಡು ಇರುವ ಹಾಗೆ ನೇಮಕ ಮಾಡಿದರಾದ ಕಾರಣ ಈ ತಿಮ್ಮಣ್ಣ ಡಣಾಯಕರು ಅದೇ ಪ್ರಕಾರ ಆಳು ಮಂದಿ ಕುದುರೆ ಸಹ ಹರಿವಿನ ಸ್ಥಳಕ್ಕೆ ಬಂದು. ಅಪ್ಪಣ್ಣ ಹೆಬ್ಬಾರರವರು ರಂಗನಾಡು ಸ್ಥಳಕ್ಕೆಲ್ಲಾ ಪ್ರಭುವಾಗಿರುವುದರಿಂದ ಅವರ ಸಂಗಡ ಆಲೋಚನೆಯಂ ಮಾಡಿ, ಈ ಕಾವೇರಿ ಮಧ್ಯದಲ್ಲಿ ಪೂರ್ವದಲ್ಲೂ ಗೌತಮಋಷೀಶ್ವರರಿಗೆ ಪ್ರಸನ್ನರಾದ ಶ್ರೀ ರಂಗನಾಥ ಸ್ವಾಮಿಯವರ ಅಭ್ಯುದಯದ ಕಾಲವನ್ನು ಕೇಳಿ, ಸ್ವಾಮಿ ಸೇವೆಯನ್ನು ಮಾಡಿ, "ಈ ಮಧ್ಯದಲ್ಲಿ ಪಟ್ಟಣವನ್ನು ನಿರ್ಮಿಸಬೇಕು" ಎಂದು ಉಭಯಪಾರ್ಶ್ವದಲ್ಲಿರುವ ಪ್ರಭುಗಳನ್ನೆಲ್ಲಾ ಕರೆಯಿಸಿ, ಅಪ್ಪಣ್ಣ ಹೆಬ್ಬಾರರವರ ಸಂಗಡ ಆಲೋಚನೆ, ಈ ಪಟ್ಟಣ ಕಟ್ಟಿಸುವುದಕ್ಕೆ ಕರುವಗಲ್ಲು ನೆಡುವಲ್ಲಿ, ಅಷ್ಟಗ್ರಾಮಗಳು ನಷ್ಟವೆಂದು(?) ಕರುವಗಲ್ಲು ನೆಡೆಸಿದರು. ಸ್ವಾಮೀ ಆ ಮೇಲೆ ಆ ಪಟ್ಟಣಕ್ಕೆ ಶ್ರೀರಂಗಪಟ್ಟಣವೆಂದು ನಾಮಾಂಕಿತವ ಮಾಡಿ, ತಿರುಮಳ ದೇವರನ್ನು ಪ್ರತಿಷ್ಟೆಯನ್ನು ಮಾಡಿ ಆ ಬೀದಿಯಲ್ಲಿ ಅಗ್ರಹಾರವನ್ನು ಮಾಡಿಸಿದರು. ಸ್ವಾಮಿ ಪೂರ್ವದಲ್ಲಿ ತಿಮ್ಮಣ್ಣ ಡಣಾಯಕರ ಸ್ಥಳ ಚತುರ್ವೇದಿ ಮಂಗಳವನ್ನು ಕೋಟೆ ಹಾಕಿಸಿ ನಾಗಮಂಡಲವೆಂದು ನಾಮಾಂಕಿತವ ಮಾಡಿಸಿದರು. ಈ ಹರವಿನ ಸ್ಥಳದ ಅಪ್ಪಣ್ಣ ಹೆಬ್ಬಾರವರು ತಿಮ್ಮಣ್ಣ ಡಣಾಯಕರು ಯೀ ಕರ್ತರೂ (ಇಬ್ಬರೂ) ಏಕವಾಗಿ ಕಾವೇರಿಕಟ್ಟೆಯನ್ನು ಕಟ್ಟಿಸಿ ಕಾಲುವೆಯನ್ನು ತಂದರು. ಈ ಪಟ್ಟಣವನ್ನು ತಿಮ್ಮಣ್ಣ ಡಣಾಯಕ(ರು) ವಶವಾಗಿ (ಮಾಡಿಕೊಂಡು) ದೊರೆತನವನ್ನು ಆಳಿ(ಮಾಡಿ)ಕೊಂಡು ಇದ್ದರು.

ಹರವಿನ ಸ್ಥಳದಲ್ಲೂ ತಿಮ್ಮಣ್ಣ ಡಣಾಯಕರು ತೆಗೆಯಿಸಿದ ಕಾಲುವೆ (1) ಕೇತನಹಳ್ಳಿಯಾದಿಯಾಗಿ ಇನ್ನೂರು ಎಲ್ಲೆ ಕಟ್ಟಿನ ಪರಿಯಂತ್ರಕ್ಕೆ ಹೋಬಳಿ2[>7]ಕ್ಕೆ ಇವರ ಕೇತನಹಳ್ಳಿ ಹೋಬಳಿ 1, ಕಿರುಮಂಗೂರು ಹೋಬಳಿ 1, ನೆಲಮನೆ ಅಮೃತಸಾಗರ ಹೋಬಳಿ 1, ಸಬ್ಬಣಕುಪ್ಪೆ ಹೋಬಳಿ 1, ಅಲ್ಲಾಪಟ್ಟಣದ ಹೋಬಳಿ 1, ಅರಕೆರೆ ಹೋಬಳಿ 1, ಬನ್ನೂರು ಹೋಬಳಿ 1, ಅ(ಂ)ತು ಚಿಕ್ಕದೇವರಾಯ ಸಾಗರದ ಕಾಲುವೆ ಸೂತ್ರಸಾಗಿದ ಪರಿ(ರ್ಯಂತ)ಕ್ಕೆ ಹೋಬಳಿ ಸ್ಥಳ ಏಳು 7, ಕಾವೇರಿಗೆ ತೆಂಕ ದಿಕ್ಕಿನಲ್ಲು ಬ್ರಹ್ಮಸಮುದ್ರದ ಕಾಲುವೆ ಆದಿತ್ಯವಾರದ ಪೇಟೆಯಾದಿಯಾಗಿ ಹದಿನಾರು ಎಲ್ಲೆಕಟ್ಟಿನ ಪರ್ಯಂತ ಹೋಬಳಿ 6ಕ್ಕೆ ವಿವರ: ಚಂದುಕಾಲ ಹೋಬಳಿ 1, ನರುವನಹಳ್ಳಿ ಹೋಬಳಿ 1, ಅಂತು ವಿರಜಾ ನದಿ ಹೋಬಳಿ ಕಾಲುವೆ ಸುತ್ರೆ ಸಾಗಿದ ಪರ್ಯಂತಕ್ಕೆ ಹೋಬಳಿ 6"[13] ತಿಮ್ಮಣ್ಣ ದಣ್ಣಾಯಕನು ಊಳಿಗಮಾನ್ಯ ಪ್ರತಿನಿಧಿಯಾಗಿ

ಶ್ರೀರಂಗಪಟ್ಟಣ ಪ್ರದೇಶದ ಮೇಲೆ ವಿಜಯನಗರ ಅರಸರ ಆಳ್ವಿಕೆಯ ಛಾಪು ಮೂಡಿಸಿದ್ದಾನೆ. ಪರಿಣಾಮವಾಗಿ ಕ್ರಿ.ಶ. 1454ರಿಂದ 1495ರವರೆಗೆ ಶ್ರೀರಂಗಪಟ್ಟಣ ಪ್ರದೇಶ ವಿಜಯನಗರ ಅರಸರ ಪ್ರಾಂತೀಯ ಆಡಳಿತದ ಸೇನಾ ಮುಖ್ಯಸ್ಥರ ಕೇಂದ್ರವಾಗಿ ದಣ್ಣಾಯಕರ ಆಳ್ವಿಕೆಗೊಳಪಟ್ಟಿರುವುದನ್ನು ಗಮನಿಸಬಹುದು.

ಕ್ರಿ.ಶ. 1468ರಲ್ಲಿ ಶ್ರೀರಂಗಪಟ್ಟಣ ತಾಲ್ಲೋಕಿನ ರಾಮ–ಸೀತಾಪುರದಲ್ಲಿ 76 ಮಹಾಜನರಿದ್ದರು.[14] ಹೀಗೆ ಕ್ರಿ.ಶ. 15ನೇ ಶತಮಾನದ ಕೊನೆಯ ವೇಳೆಗೆ ವಿಜಯನಗರ ಅರಸರು ಶ್ರೀರಂಗಪಟ್ಟಣವನ್ನು ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡು ಪ್ರಾಂತ್ಯಾಧಿಕಾರಿಯ ಆಳ್ವಿಕೆಗೊಳಪಡಿಸಿದರು. ಪಲ್ಲವರು, ಚೋಳರು, ಮತ್ತು ಹೊಯ್ಸಳರು ರಾಜವಂಶದವರನ್ನು ಪ್ರಾಂತ್ಯಾಧಿಕಾರಿಗಳನ್ನಾಗಿ ಅಥವಾ ಮಹಾಮಂಡಲೇಶ್ವರರಾಗಿ ನೇಮಿಸುತ್ತಿದ್ದ ಪದ್ಧತಿಯನ್ನು ವಿಜಯನಗರ ಅರಸರು ಮುಂದುವರಿಸಿದರು.[15] ಕಾಲಾನಂತರ ಉಮ್ಮತ್ತೂರು ಅರಸರು ಶ್ರೀರಂಗಪಟ್ಟಣ ಪ್ರದೇಶವನ್ನು ವಶಪಡಿಸಿಕೊಂಡಿದ್ದರು.

ನಾಗಮಂಗಲ ಪ್ರಭುಗಳ ಪಥನಾನಂತರ ಕ್ರಿ.ಶ. 1495ರಿಂದ ಶ್ರೀರಂಗಪಟ್ಟಣ ವಿಜಯನಗರದರಸರ ಪ್ರಾಂತೀಯ ಕೇಂದ್ರವಾಗಿದ್ದಿತ್ತೆಂದು ತಿಳಿದುಬರುತ್ತದೆ. ಸಾಳ್ವ ನರಸಿಂಹ (1485–1503) ಉಮ್ಮತ್ತೂರು ದೊರೆಗಳನ್ನು ಸೋಲಿಸಿ, ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡನು. ಪೆನುಗೊಂಡೆಯಂತೆ ಶ್ರೀರಂಗಪಟ್ಟಣವು ವಿಜಯನಗರ ಕಾಲದಲ್ಲಿ ಒಂದು ಪ್ರಮುಖ ಉಪರಾಜಧಾನಿಯಾಗಿತ್ತು. ಅಂತೆಯೇ ಕ್ರಿ.ಶ. 1500ರ ಮಳವಳ್ಳಿ ತಾಲ್ಲೋಕಿನ ವಡಗಲಪುರದ ಶಾಸನವು 'ಶ್ರೀರಂಗಪಟ್ಟಣದ ರಾಜ್ಯಾಧಿಪತಿ' ಎಂದು ಉಲ್ಲೇಖಿಸಿದೆ. ಬಹುಶಃ ಸಾಳ್ವ ನರಸಿಂಹನನ್ನು ಕುರಿತು ಉಲ್ಲೇಖಿಸಿರಬಹುದು. ಈ ಹಿನ್ನಲೆಯಲ್ಲಿ ಮುಂದೆ ಶ್ರೀರಂಗಪಟ್ಟಣ ಪ್ರದೇಶ ಒಂದು ಪ್ರಬಲ ರಾಜಕೀಯ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು.[16]

ಸಾಳುವ ನರಸಿಂಹನ ದಂಡನಾಯಕನಾದ ತುಳುವ ನರಸನಾಯಕನು ತುಂಬಿ ಹರಿಯುತ್ತಿದ್ದ ಕಾವೇರಿ ನದಿಗೆ ತಾತ್ಕಾಲಿಕವಾಗಿ ಸೇತುವೆಯನ್ನು ನಿರ್ಮಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಅಂಶವನ್ನು ಕ್ರಿ.ಶ. 1509ರ ತಾಮ್ರಶಾಸನವು ದಾಖಲಿಸಿದೆ.[17] ಶ್ರೀರಂಗಪಟ್ಟಣದ 26ನೇ ಶಾಸನ ಈಶ್ವರ ಕ್ಷಿತ ಪಾಲಕ ದೇವಕಿನಂದ ನಾದವ । ಕಾವೇರಿ ಮಾಶು ಬಧ್ವಾ ಬಹಲ ಜಲತರಾಂ ಯೋ, ವಿಲ್ಲಘೈವ ಶತ್ರು ಜೀವಗಹಂ ಗೃಹತ್ವ । ಕೃತ್ವ ಶ್ರೀರಂಗಪಟ್ಟಣಂ ತದಪಿ ನಿಜವಶೇ ಪಟ್ಟಣಂ ಯೋಬ ಭಾಶೇ ಕೀರ್ತಿ ಸ್ತಂಭಂ । ಅಂದರೆ ಉಕ್ಕಿ ಹರಿಯುತ್ತಿದ್ದ ಕಾವೇರಿ ನದಿಗೆ ಸೇತುವೆಯೊಂದನ್ನು ನಿರ್ಮಿಸಿ ದಾಟಿ ಅಲ್ಲಿದ್ದ ರಾಜನನ್ನು ಜೀವಂತ ಸೆರೆಹಿಡಿದು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅಲ್ಲಿ ವಿಜಯಸ್ತಂಭವೊಂದನ್ನು ನೆಟ್ಟನೆಂದು ಶಾಸನದಿಂದ ತಿಳಿದುಬರುತ್ತದೆ. ಆದರೆ ಈ ವಿಜಯ ಸ್ತಂಭ ಯಾವುದೆಂದು ತಿಳಿದುಬರುವುದಿಲ್ಲ. ಬಹುಶಃ ಕೋಟೆಯ ಆಗ್ನೇಯ ಭಾಗದಲ್ಲಿರುವ ಝುಂಡಾ ಬತೇರಿಯಿರಬಹುದು. ನರಸನಾಯಕ ಶ್ರೀರಂಗಪಟ್ಟಣ ಕೋಟೆಯನ್ನು ಒಂದು ಬಲಿಷ್ಠ ಕೇಂದ್ರವನ್ನಾಗಿ ಮಾಡಿಕೊಂಡಿದ್ದರಿಂದ ಮುಂದೆ ಶ್ರೀರಂಗಪಟ್ಟಣ ವಿಜಯನಗರ ಅರಸರ ಒಂದು ಉಪರಾಜಧಾನಿಯಾಗಿ ಪ್ರವರ್ಧಮಾನಕ್ಕೆ ಬಂದಿತು.

ಕೃಷ್ಣದೇವರಾಯನು ಕ್ರಿ.ಶ. 1511ರಲ್ಲಿ ಉಮ್ಮತ್ತೂರಿನ ಪಾಳೆಯಗಾರ ಗಂಗರಾಜನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತ ಕುಮಾರ ವೀರಯ್ಯನ ಪುತ್ರಿಯಾದ ತಿರುಮಲಾದೇವಿಯನ್ನು ವಿವಾಹವಾದನು. ಇವಳು ಕೃಷ್ಣದೇವರಾಯನ ಮೂವರು ರಾಣಿಯರಲ್ಲಿ ಒಬ್ಬಳಾಗಿದ್ದಳೆಂದು ತಿಳಿದುಬರುತ್ತದೆ.[18] ಈ ಕುಮಾರ ವೀರಯ್ಯನು ಉಮ್ಮತ್ತೂರಿನ ಗಂಗರಾಜನ ತಮ್ಮನೆಂದು ತಿಳಿದುಬರುತ್ತದೆ. (ಕೃಷ್ಣದೇವರಾಯನು ತಿರುಮಲದೇವಿಯನ್ನು ಕ್ರಿ.ಶ. 1498ರಲ್ಲಿ ವಿವಾಹವಾದನೆಂದು ಹಲವಾರ ಅಭಿಪ್ರಾಯ.) ಕ್ರಿ.ಶ. 1521ರ ಏಪ್ರಿಲ್ 17ರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಾಮಿಡಿಹಳ್ಳಿ ಶಾಸನವು ಕೃಷ್ಣದೇವರಾಯನ ಮೂವರು ರಾಣಿಯರಲ್ಲಿ

ಒಬ್ಬಳಾದ (ಮತ್ತೊಬ್ಬಳು ಒರಿಸ್ಸಾದ ರಾಜಕುಮಾರಿ ಜಗಮೋಹಿನಿ) ಚಿನ್ನಾದೇವಿಯು ವೇಶ್ಯೆಯಲ್ಲವೆಂದು ಅವಳು ವಿಜಯನಗರದ ಅಧಿಕಾರಿಗಳ ಕುಟುಂಬದವಳೆಂದು ತಿಳಿಸುತ್ತದೆ. (ಶ್ರೀರಂಗಪಟ್ಟಣದ ರಾಜನಾಗಿರುವ ಸಾಮಂತನ ಪುತ್ರ)[19] ಶಾಸನದ ಪ್ರಕಾರ ರಾಣೀ ಚಿನ್ನಾದೇವಿಯ ತಂದೆ ವೀರಪ್ಪೊಡೆಯ, ತಾತ ಚಿಕ್ಕಣ್ಣ ನಾಯಕ ಹಾಗೂ ಮುತ್ತಾತ ಚೊಕ್ಕನಾಯಕನೆಂದು ತಿಳಿದುಬರುತ್ತದೆ. ಈ ಶಾಸನದ ಪ್ರಕಾರ ಇವಳ ತಂದೆ ಶ್ರೀರಂಗಪಟ್ಟಣವನ್ನಲ್ಲದೆ, ನಾಗಮಂಗಲ ಸ್ಥಳವನ್ನು ಆಳುತ್ತಿದ್ದನೆಂದು ಉಲ್ಲೇಖಿಸಿದೆ.[20] ಕ್ರಿಶ. 1516ರ ಮೈಸೂರು ಜಿಲ್ಲೆಯ ಗುರೂರು ಶಾಸನದಲ್ಲೂ ಶ್ರೀರಂಗಪಟ್ಟಣದ ಸಾಳುವ ಗಜಸಿಂಹ ಚಿಕ್ಕೊಡೆಯರ ಮಗ ವೀರಪ್ಪೊಡೆಯನ ಉಲ್ಲೇಖವಿದೆ.

ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ವಿಜಯನಗರ ಸಾಮ್ರಾಜ್ಯದಾದ್ಯಂತ ಸು. 65ಕ್ಕೂ ಹೆಚ್ಚು ಸೀಮೆಗಳ ಉಲ್ಲೇಖಗಳಿವೆ.[21] ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ 'ನಾಡಿಗೆ' ಪರ್ಯಾಯವಾಗಿ 'ಸೀಮೆ' ಎಂಬ ಪ್ರತ್ಯಯವನ್ನು ಹೊಂದಿರುವ ಅನೇಕ ಆಡಳಿತ ಘಟಕಗಳು ತಲೆಯೆತ್ತಿದವು. ಬಹುಮಟ್ಟಿಗೆ ಸೀಮೆಗಳು ಮಂಡ್ಯ ಜಿಲ್ಲೆಯ ಮಟ್ಟಿಗೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಆರಂಭಗೊಂಡು ಮುಂದೆ ಹೆಚ್ಚು ಬಳಕೆಗೆ ಬಂದವು. ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಾಣಿಸಿಕೊಂಡ ಅಂತಹ ಸೀಮೆಗಳಲ್ಲಿ ಸಿಂಧಘಟ್ಟ ಸೀಮೆ, ವೆಳ್ಳೂರು ಸೀಮೆ, ಬೆಳ್ಳೂರು ಸೀಮೆ, ಶ್ರೀರಂಗಪಟ್ಟಣ ಸೀಮೆ, ಕನ್ನಂಬಾಡಿ ಸೀಮೆ, ತಲಕಾಡು ಸೀಮೆ, ಕೊಪ್ಪದ ಸೀಮೆ, ಮೈಸೂರು ಸೀಮೆ, ಮದ್ದೂರು ಸೀಮೆ, ಎಂಬವು ಮುಖ್ಯವಾದವು. (ಗೋಪಾಲ್ ಆರ್. (ಸಂ) ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–2008, ಪು. 282) ಇಂತಹ ಸೀಮೆಗಳಲ್ಲಿ ಶ್ರೀರಂಗಪಟ್ಟಣ ಸೀಮೆ ವಿಜಯನಗರ ಅರಸರ ಕಾಲದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿರುವುದು ಗಮನಾರ್ಹ ಸಂಗತಿಯೆನಿಸಿದೆ.

ಕ್ರಿ.ಶ. 1516 ಮಂಡ್ಯ 7ನೇ ತಾಮ್ರ ಶಾಸನ (ಎ.ಕ., 07) ಕೃಷ್ಣದೇವರಾಯನು ಶ್ರೀರಂಗಪಟ್ಟಣ ಸೀಮೆಯ ಮಂಠೇಯ(ಇಂದಿನ ಮಂಡ್ಯ)ವನ್ನು 'ಕೃಷ್ಣರಾಯಪುರ'ವೆಂದು ಮರು ಹೆಸರಿಟ್ಟು ಸುತ್ತಮುತ್ತಲಿನ ಗ್ರಾಮಗಳಾದ ಚಿಕ್ಕಮಂಠೆಯ, ಕಲ್ಲಹಳ್ಳಿ, ಹೊಸಹಳ್ಳಿ, ತಣ್ಣಸೇಹಳ್ಳಿ, ಹಾಗೂ ಕೋನೇಹಳ್ಳಿ ಮೊದಲಾದವನ್ನು ವರದಾಚಾರ್ಯರ ಮಗ ಗೋವಿಂದರಾಜರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಇಂದು ಮಂಡ್ಯ ಜಿಲ್ಲಾ ಕೇಂದ್ರವಾಗಿದ್ದರೂ ಅಂದು ಶ್ರೀರಂಗಪಟ್ಟಣ ಸೀಮೆಯ ಆಡಳಿತಕ್ಕೊಳಪಟ್ಟಿತ್ತೆಂಬ ಅಂಶವನ್ನು ಈ ಶಾಸನದಿಂದ ತಿಳಿಯಬಹುದು.

ಕ್ರಿ.ಶ.1528 ಶ್ರೀರಂಗಪಟ್ಟಣದ 2ನೇ ಶಾಸನದಲ್ಲಿ (ಎ.ಕ., 6) ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣ ಸೀಮೆಗೆ ಸೇರಿದಂತೆ ಕುರುವಂಕನಾಡು ಅಸ್ತಿತ್ವದಲ್ಲಿದ್ದ ಸಂಗತಿ ತಿಳಿದುಬರುತ್ತದೆ. ಈ ನಾಡನ್ನು ಅಹೋಬಳದೇವನ ಮಗ ಕೃಷ್ಣರಾಯನಾಯಕನು ಆಳುತ್ತಿದ್ದನು. ಈತನಿಗೆ ಕುರುವಂಕನಾಡಿನ ಒಡೆತನ ನೀಡಿದವನು ಕೃಷ್ಣದೇವರಾಯನಿರಬೇಕು. ಅದಕ್ಕಾಗಿ ಕೃಷ್ಣರಾಯನಾಯಕನು ವಿಜಯನಗರದ ರಾಜನ ಸ್ಮರಣಾರ್ಥ ಆತನ ಅಪ್ಪಣೆ ಪಡೆದು ಶ್ರೀರಂಗನಾಥದೇವರಿಗೆ ಪ್ರತಿನಿತ್ಯ 25 ಅತಿರಸಗಳನ್ನು ನೈವೇದ್ಯ ಮಾಡಲೆಂದು ನಿತ್ಯ ಪೂಜೆಯ ಹೂಮಾಲೆಗೆಂದು ಕುರುವಂಕನಾಡಿಗೆ ಸೇರಿದ ಬೀರಸೆಟ್ಟಿಹಳ್ಳಿಯನ್ನು ದತ್ತಿನೀಡಿದನೆಂದು ತಿಳಿದುಬರುತ್ತದೆ.

ಕ್ರಿ.ಶ. 1528ರ ಶ್ರೀರಂಗಪಟ್ಟಣದ 8ನೇ ಶಾಸನದಲ್ಲಿ (ಎ.ಕ., 6) ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ಸೀಮೆಯನ್ನು ಭೋಗಯದೇವ ಮಹಾ ಅರಸನು ಆಳುತ್ತಿದ್ದನು. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಿಂದ ಶ್ರೀರಂಗಪಟ್ಟಣಕ್ಕೆ ನೇಮಕಗೊಂಡ ರಾಜಪ್ರತಿನಿಧಿಗಳನ್ನು ಶಾಸನಗಳು ಮಹಾಅರಸು (ಎ.ಕ. 9. ಮಾಗಡಿ, 28), ಸಲಹಾರಾಜ (ಎ.ಕ., 9, ಮಾಗಡಿ, 67), ಮೊದಲಾದ ಹೆಸರಿನಿಂದ ಉಲ್ಲೇಖಿಸಿವೆ. ಭೋಗಯ ದೇವ ಮಹಾಅರಸನು ಶ್ರೀಮನ್ಮಹಾಮಂಡಲೇಶ್ವರ, (ರಾಜಪ್ರತಿನಿಧಿಯ ಅಧೀನಾಧಿಕಾರಿಯೇ ಮಹಾಮಂಡಲೇಶ್ವರ. ಅರಸರಿಂದ ನೇಮಕಗೊಂಡ ಇವರನ್ನು ಮಹಾಪ್ರಧಾನ ಅಥವಾ ಪ್ರಧಾನ ಮಂತ್ರಿಯೆಂದು ಕರೆಯಬಹುದು. ಪ್ರಾಂತೀಯ ರಾಜ್ಯಪಾಲರಂತಿದ್ದ ಇವರ

ಅಧೀನದಲ್ಲಿ ಅನೇಕ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು.[22]) ಆರಿವೆಂಟಿ ಗಜಪತಿ, ಸಕಲ ವಿದ್ಯಾ ವಿಶಾರದ, ಪ್ರಜಾಪಾಲನಾದಿ ಧರ್ಮಪರಾಯಣ ಮೊದಲಾದ ಬಿರುದುಗಳನ್ನು ಧರಿಸಿದ್ದನೆಂದು ಶಾಸನ ತಿಳಿಸುತ್ತದೆ. ಇವನು ಅರಸನ ಅನುಮತಿ ಪಡೆದು ಶ್ರೀರಂಗಪಟ್ಟಣ ಸೀಮೆಯ ಗುಮ್ಮನವೃತ್ತಿ ಸ್ಥಳದ ದೇವಪುರಿಯೆಂಬ ಹಳ್ಳಿಯನ್ನು ನಾಗಾಂಬ ಅಮ್ಮನ ನೆನಪಿಗೆ ನಾಗಲಾಪುರವೆಂದು ಮರುಹೆಸರಿಟ್ಟು ಶ್ರೀರಂಗನಾಯಕಿದೇವಿಯರ ಸೇವೆಗಾಗಿ ಸಮರ್ಪಿಸುತ್ತಾನೆಂದು ತಿಳಿಸುತ್ತದೆ.[23]

ಮೇಲಿನ ಶಾಸನಗಳ ವಿವರಣೆಯಿಂದ ಅನೇಕ ವಿಷಯಗಳು ಸ್ಪಷ್ಟವಾಗುತ್ತವೆ. ಕ್ರಿ.ಶ. 1528ರ ವೇಳೆಗೆ ಶ್ರೀರಂಗಪಟ್ಟಣ ಸೀಮೆ ಆಡಳಿತ ಕೇಂದ್ರವಾಗಿತ್ತು. ಶ್ರೀರಂಗಪಟ್ಟಣ ಸೀಮೆಯೊಳಗೆ ಅನೇಕ ಸ್ಥಳಗಳೆಂಬ ಆಡಳಿತ ವಿಭಾಗಗಳಿದ್ದವು. ಅನೇಕ ಗ್ರಾಮಗಳು ಸೇರಿ ಸ್ಥಳವೆಂಬ ಆಡಳಿತ ವಿಭಾಗವಾಗಿತ್ತು. ಉದಾ: ಗುಮ್ಮನವೃತ್ತಿ ಸ್ಥಳವು ಶ್ರೀರಂಗಪಟ್ಟಣ ಸೀಮೆಯಲ್ಲಿ ಇದ್ದು ಆ ಸ್ಥಳದಲ್ಲಿ ನಾಗಲಪುರವೆಂಬ ಗ್ರಾಮವಿದ್ದಿತು ಎಂಬುದಾಗಿ ಶ್ರೀರಂಗಪಟ್ಟಣದ ಶಾಸನದಿಂದ ಗೊತ್ತಗುತ್ತದೆ (ಶ್ರೀ.ಪ. 8ನೇ ಶಾಸನ).

ಈ ವೇಳೆಗೆ ಶ್ರೀರಂಗಪಟ್ಟಣವು ಅಮರನಾಯಕ ವ್ಯವಸ್ಥೆಗೆ ಒಳಪಟ್ಟಿದ್ದಿತು. ಅಮರನಾಯಕರು ವಿಜಯನಗರ ಸಾಮ್ರಾಜ್ಯದ ಆಧಾರಸ್ತಂಭಗಳಾಗಿದ್ದರು. ಕ್ರಿ.ಶ. 1528ರ ಶ್ರೀ.ಪ. 8ನೇ ಶಾಸನ ಹೇಳುವಂತೆ (ಎ.ಕ., 6) ಮಹಾಮಂಡಲೇಶ್ವರ ಚಮ್ಮಟಬೋಗಯ್ಯ ದೇವ ಮಹಾರಾಜ ಎಂಬುವವನು ಶ್ರೀರಂಗಪಟ್ಟಣ ಸೀಮೆಯ ಅಮರನಾಯಕನಾಗಿದ್ದನು. ಈತನು ಅರವೀಡು ವಂಶಕ್ಕೆ ಸೇರಿದವನಾಗಿದ್ದನೆಂದು ಶಾಸನವು ತಿಳಿಸುತ್ತದೆ. ರಂಗನಾಥ ಸ್ವಾಮಿಯ ದೇವಾಲಯಕ್ಕೆ ಈ ಪ್ರದೇಶದ ಅಮರನಾಯಕರು ದಾನದತ್ತಿಗಳನ್ನು ನೀಡುತ್ತಿದ್ದರು ಎಂಬುದಕ್ಕೆ ಸಾಕಷ್ಟು ನಿರ್ದನಗಳಿವೆ. ಶ್ರೀರಂಗಪಟ್ಟಣ ಸೀಮೆಯಲ್ಲಿ ವಿವಿಧ ಕಾಲದಲ್ಲಿ ಬೇರೆ ಬೇರೆ ಅಮರನಾಯಕರು ಆಡಳಿತ ನಡೆಸುತ್ತಿದ್ದರು ಎಂಬುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ. ಅಮರನಾಯಕರ ನಿಯಂತ್ರಣದಲ್ಲಿ ಪ್ರಭುಗೌಡರು ಮತ್ತು ಸೇನಾಭೋವರು ಇರುತ್ತಿದ್ದರು. ಇವರು ಸ್ಥಳೀಯ ಮುಖಂಡರಾಗಿದ್ದು ತೆರಿಗೆಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ವಿಜಯನಗರದ ಅಧಿಕಾರಿಗಳಿಗೆ ಸಹಾಯರಾಗಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣವು ವಿಜಯನಗರ ಸಾಮ್ರಾಜ್ಯದ ಪ್ರಾಂತೀಯ ಕೇಂದ್ರವಾಯಿತು. ಒಂದು ಶತಮಾನಕ್ಕೂ ಹೆಚ್ಚು ಕಾಲ ವಿಜಯನಗರದ ಅರಸರ ಅಧೀನದಲ್ಲಿ ಶ್ರೀರಂಗಪಟ್ಟಣ ಪ್ರವರ್ಧಮಾನಕ್ಕೆ ಬಂದಿತು.

ವಿಜಯನಗರ ಅರಸರ ಕಾಲದಲ್ಲಿದ್ದ ದಾಸ ಶ್ರೇಷ್ಟರ ಕೀರ್ತನೆಗಳು ಧಾರ್ಮಿಕ ನೆಲಗಟ್ಟಿಡಿಯಲ್ಲಿ ಭಕ್ತಿ ಪೂರ್ಣವಾಗಿ, ಮಾರ್ಮಿಕವಾಗಿ ರಚಿಸಲ್ಪಟ್ಟು ಕಾವೇರಿ ನದಿಯಿಂದ ಸುತ್ತುವರಿಯಲ್ಪಟ್ಟಿರುವ ಶ್ರೀರಂಗಪಟ್ಟಣದ ಐತಿಹಾಸಿಕತೆಯ, ಹಾಗೂ ಧಾರ್ಮಿಕ ಪ್ರಾಮುಖ್ಯತೆಯ ಬಗ್ಗೆ ಪ್ರಸ್ತಾಪಿಸುತ್ತವೆ. ದಾಸಶ್ರೇಷ್ಟರಾದ ಶ್ರೀವಾದಿರಾಜರ 'ಕಂಡನು ಕಾವೇರಿ ರಂಗನ' ಎಂಬ ಕೀರ್ತನೆ ಶ್ರೀರಂಗಪಟ್ಟಣದ ಶ್ರೀರಂಗನಾಥನ ಬಗ್ಗೆ ಉಲ್ಲೇಖಿಸಿದ್ದರೆ, ಪುರಂದರ ದಾಸರು "ತೂಗಿರೆ ರಂಗನ ತೂಗಿರೆ ಕೃಷ್ಣನ. ತೂಗಿರೆ ಕಾವೇರಿ ರಂಗಯ್ಯನ, ನೀನೆ ದಯಾ ಸಂಪನ್ನನೋ ಕಾವೇರಿ ರಂಗ ಧರೆಗೆ ದಕ್ಷಿಣ ಕಾವೇರಿ ತೀರ"[24] ಎಂದೂ ಕನಕದಾಸರು ಶ್ರೀರಂಗಪಟ್ಟಣದ ಶ್ರೀರಂಗನಾಥನನ್ನು ಕುರಿತು ಹಾಡಿರುವ ಕೀರ್ತನೆ "ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೇ । ಜಗದೇಕೆ ವಿಖ್ಯಾತ ಪಶ್ಚಿಮ ರಂಗನಾಥ, ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ ನಿನ್ನನ್ನೆಬ್ಬಿಸುವರೊಬ್ಬರನೂ ಕಾಣೇ, ಉನ್ನತ ಕಾಗಿನೆಲೆಯಾದಿ ಕೇಶವರಾಯಚೆನ್ನ ಶ್ರೀರಂಗಪಟ್ಟಣದ ರಂಗಧಾಮ" ಎಂದೂ ವರ್ಣಿಸಿದ್ದಾರೆ.[25]

ಶ್ರೀರಂಗಪಟ್ಟಣದ ಪೇಟೆ ರಾಮನ ದೇವಾಲಯದಲ್ಲಿನ ಕ್ರಿ.ಶ. 1537ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ (ಕ್ರಿ.ಶ. 1530–1543) ಮಹಾಮಂಡಲೇಶ್ವರ ರಾಜರಾಜಯ್ಯ ಮಹಾ ಅರಸು ಶ್ರೀರಂಗಪಟ್ಟಣ ಸೀಮೆಯ ನಾಯಿಂದರಿಗೆ ಕೆಲವು ಸುಂಕಗಳನ್ನು ಮನ್ನಾ ಮಾಡಿದ ಅಂಶವನ್ನು ತಿಳಿಸುತ್ತದೆ.

ಅಚ್ಯುತರಾಯನ ಕಾಲದ ಕ್ರಿ.ಶ. 1542ರ ಶ್ರೀ.ಪ. 05ನೇ (ಎ.ಕ., 06) ಶಾಸನ ಅಚ್ಚರಿಯ ಸಂಗತಿಯೊಂದನ್ನು ಉಲ್ಲೇಖಿಸಿದೆ. ಶ್ರೀರಂಗಪಟ್ಟಣ ಸೀಮೆಯನ್ನು ಅಮರಮಾಗಣಿಯಾಗಿ ರಾಮಾಭಟ್ಟಯ್ಯನಿಂದ ಅಪ್ಪಾಜಿಯ ಮಗನಾದ ಪೆದ್ದಿರಾಜನು ಪಡೆದಿರುತ್ತಾನೆ. ಈ ಸೀಮೆಯ ದಳವಾಯಿ ಅಗ್ರಹಾರಗಳೂ, ಮಾನ್ಯ ಗ್ರಾಮಗಳು, ಕರಗ್ರಾಮಗಳಲ್ಲಿದ್ದ ಮಾನ್ಯಗಳು ಹಾಗೂ ಸತ್ರ ದೇವಸ್ಥಾನಗಳಿಂದ ಸುಂಕವನ್ನು ಪಾರುಪತ್ಯ ಮಾಡುತ್ತಿದ್ದ ಕಾಮಪ್ಪನಾಯಕನು ವಸೂಲು ಮಾಡಿರುತ್ತಾನೆ. ಹೀಗೆ ವಸೂಲಿ ಮಾಡಿದ ಒಟ್ಟು ಹಣ 300 ಗದ್ಯಾಣಗಳು. ಆದರೆ ಇದು ಪೂರ್ವದಲ್ಲಿ ಇರಲಿಲ್ಲ. ಆದ್ದರಿಂದ ಅನುಚಿತವಾಗಿ ಬಂದ ಈ ಹಣವನ್ನು ಪೆದ್ದಿರಾಜನು ಶ್ರೀರಂಗಪಟ್ಟಣದ ದೇವರಿಗೆ, ರಾಯರಿಗೂ, ರಾಮಭಟ್ಟಯ್ಯನಿಗೂ ಪುಣ್ಯವಾಗಬೇಕೆಂದು ದಾನ ಮಾಡಿದನು. ಅಲ್ಲದೆ ಇನ್ನು ಮುಂದೆ ಇಂತಹ ಸುಂಕವನ್ನು ಪ್ರಜೆಗಳು ಕೊಡಬಾರದೆಂದು ನಿರೂಪ ನೀಡಿದನೆಂದೂ ಶಾಸನ ತಿಳಿಸುತ್ತದೆ. ಇದರಿಂದ ಅಡಿಕೆಯ ಸುಂಕವನ್ನು ಮಹಾಜನರು ತೆರುತ್ತಿದ್ದರೆಂದು ತಿಳಿದುಬರುತ್ತದೆ.

ವಿಜಯನಗರದ ಸದಾಶಿವರಾಯನ (ಕ್ರಿ.ಶ.1543–1571) ಕಾಲದ ಕ್ರಿ.ಶ. 1544ರ ಪಾಂ.ಪು. 130ನೇ ಶಾಸನ (ಎ.ಕ., 06) ಮಹಾಮಂಡಲೇಶ್ವರ ನಾರಯದೇವ ಮಹಾಅರಸನು ಶ್ರೀರಂಗಪಟ್ಟಣ ಸೀಮೆಯನ್ನು ಅರಸನಿಂದ ನಾಯಕತನಕ್ಕೆ ಪಡೆದಿದ್ದನೆಂದು ತಿಳಿಸುತ್ತದೆ. ಸದಾಶಿವರಾಯನ ಆಳ್ವಿಕೆಯ ಕ್ರಿ.ಶ. 1545ರ ನಾ.ಮಂ. 107ನೇ ಶಾಸನದಲ್ಲಿ ಚಾರಿತ್ರಿಕ ಅಂಶಗಳು ಉಲ್ಲೇಖಿತವಾಗಿವೆ. ಶ್ರೀರಂಗಪಟ್ಟಣ ಸೀಮೆಯ ಕಾವೇರಿ ಕಟ್ಟು ಕಾಲುವೆಯೊಳಗಿರುವ ಬಲ್ಲಾಳಪುರ ಸ್ಥಳವನ್ನು ಹಾಗೂ ಕನ್ನಂಬಾಡಿ ಸೀಮೆಯ ವರಾಹನಾಥ ಕಲ್ಲಹಳ್ಳಿಗಳನ್ನು ದತ್ತಿ ಬಿಟ್ಟ ಸಂಗತಿಯನ್ನು ಅದು ತಿಳಿಸುತ್ತದೆ. ಅಲ್ಲದೆ ನಾರಯದೇವ ಮಹಾಅರಸನು ಶ್ರೀರಂಗಪಟ್ಟಣ ಸೀಮೆಯನ್ನು ಅರಸನಿಂದ ನಾಯಕತನಕ್ಕೆಂದು ಪಡೆದಿದ್ದನ್ನೆಂದು ಉಲ್ಲೇಖಿಸುತ್ತದೆ. ಸದಾಶಿವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನಗಳು ಅರವೀಡು ಮನೆತನಕ್ಕೆ ಸೇರಿದ ನಂದ್ಯಾಲದ ನಾರಸಿಂಗದೇವ ಮಹಾ ಅರಸುವಿನ ಮಗ ಮಹಾಮಂಡಲೇಶ್ವರ ನಾರಯದೇವ ಮಹಾ ಅರಸ ಮಾಡಿದ ಧರ್ಮ ಶಾಸನಗಳನ್ನು ಹೆಸರಿಸುತ್ತದೆ.

ತಾಳಿಕೋಟೆ ಕದನಾನಂತರ ರಾಮರಾಯನ ಸೋದರ ತಿರುಮಲರಾಯನು ವಿಜಯನಗರ ಸಾಮ್ರಾಜ್ಯವನ್ನು ಭಾಷಾವಾರು ಆಧಾರದ ಮೇಲೆ ಮೂರು ವಿಭಾಗಗಳನ್ನಾಗಿ ವಿಂಗಡಿಸಿ ಅವುಗಳನ್ನು ತನ್ನ ಮಕ್ಕಳಿಗೆ ಅರೆ–ಸ್ವತಂತ್ರ ಸ್ಥಾನಮಾನವನ್ನು ನೀಡಿ ವಹಿಸಿಕೊಟ್ಟನು. ಶ್ರೀರಂಗನು ಆಂಧ್ರದ ಪೆನುಗೊಂಡದಲ್ಲಿ, ಶ್ರೀರಾಮನು(3ನೇ ರಾಮ/ರಾಮರಾಜಯ್ಯ) ಕನ್ನಡನಾಡಿನ ಶ್ರೀರಂಗಪಟ್ಟಣದಲ್ಲಿ, 2ನೇ ವೆಂಕಟನು ತಮಿಳುನಾಡಿನ ಚಂದ್ರಗಿರಿಯಲ್ಲಿ ಆತನ ಪ್ರತಿನಿಧಿಗಳಾಗಿದ್ದರು. ತಿರುಮಲನ ನಿವೃತ್ತಿಯ ನಂತರ ಕ್ರಿ.ಶ. 1572ರಲ್ಲಿ ಶ್ರೀರಂಗರಾಯನು ಅಧಿಕಾರಕ್ಕೆ ಬಂದು 1585ರವರೆಗೆ ಆಳ್ವಿಕೆ ನಡೆಸಿದನು.[26] 1ನೇ ತಿರುಮಲರಾಯನ ಮಗ ಶ್ರೀರಾಮ/ರಾಮ ರಾಜಯ್ಯದೇವ/3ನೇರಾಮ ಹೊಸದಾಗಿ ಅಸ್ತಿತ್ವಕ್ಕೆ ಬಂದ ಶ್ರೀರಂಗಪಟ್ಟಣ ಅರಸೊತ್ತಿಗೆಯ ಗವರ್ನರ್ ಆಗಿದ್ದನು. ಕ್ರಿ.ಶ. 1571ರ ಶ್ರೀ.ಪ. 06ನೇ ಶಾಸನ (ಎ.ಕ., 06) ತಿರುಮಲರಾಯನ ಮಗ ರಾಮರಾಜನು ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶದ ಅಧಿಕಾರಿಯಾಗಿದ್ದನೆಂದು ತಿಳಿಸುತ್ತದೆ. ಮೈಸೂರಿನ ಒಡೆಯರು ಹಾಗೂ ಇಕ್ಕೇರಿಯ ನಾಯಕರು ಶ್ರೀರಂಗಪಟ್ಟಣ ಪ್ರಾಂತ್ಯದ ಗವರ್ನರ್ ಆದ ರಾಮರಾಜಯ್ಯನ ಅಧೀನರಾದರು. ಇವನ ಮರಣಾನಂತರ ಇವನ ಮಗನಾದ ಎರಡನೇ ತಿರುಮಲನು ಕ್ರಿ.ಶ. 1584ರಲ್ಲಿ ಶ್ರೀರಂಗಪಟ್ಟಣ ಪ್ರಾಂತ್ಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು.[27] ತಾಳಿಕೋಟೆ ಕದನಾನಂತರ ಅರವೀಡು ವಂಶದ ಕಾಲದಲ್ಲಿ ಶ್ರೀರಂಗಪಟ್ಟಣ ವಿಜಯನಗರ ಅರಸರ ಪ್ರತಿನಿಧಿಯ ಆಡಳಿತ ಕೇಂದ್ರವಾಯಿತು (M.H.Krishna, *A Guide to Srirangapattana*, Mysore, 1937, p.3), ಈ ಅವಧಿಯಲ್ಲಿ ಸ್ಥಳೀಯವಾಗಿ ಹದಿನಾಡು, ಮೈಸೂರು ಪಾಳೆಯಗಾರರು ಪ್ರಬಲರಾಗಿ ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು. ಮೈಸೂರಿನ ಬೋಳ ಚಾಮರಾಜನು ರಾಜ ಪ್ರತಿನಿಧಿಯಾಗಿದ್ದ ದಳವಾಯಿ ವೆಂಕಟಾದ್ರಿಯನ್ನು

ಸೋಲಿಸಿದ್ದರಿಂದ ರಾಜಪ್ರತಿನಿಧಿಯು ಬೋಳಚಾಮರಾಜರೊಡನೆ ಸಂಧಿ ಮಾಡಿಕೊಳ್ಳಬೇಕಾಯಿತು. ಹೀಗೆ ಬೋಳ ಚಾಮರಾಜ ಒಡೆಯರ ಆಳ್ವಿಕೆಯ ಕಾಲದಲ್ಲೇ ಮೈಸೂರಿನ ಒಡೆಯರು ಕರ್ನಾಟಕದ ಮೇಲೆ ಆಧಿಪತ್ಯ ಸ್ಥಾಪಿಸಲು ಹೋರಾಟ ನಡೆಸಿದರು. ಅವನ ಮಗ ರಾಜ ಒಡೆಯರ ಕಾಲದಲ್ಲಿ ಈ ಹೋರಾಟ ಮತ್ತಷ್ಟು ತೀವ್ರಗೊಂಡಿತು.[28] ಶ್ರೀರಂಗಪಟ್ಟಣ ಸುಮಾರು ಒಂದು ಶತಮಾನ ವಿಜಯನಗರದರಸರ ಪ್ರತಿನಿಧಿಗಳ ಆಳ್ವಿಕೆಗೊಳಪಟ್ಟಿತ್ತು. ವಿಜಯನಗರದರಸರ ಕಾಲದಲ್ಲಿ ಒಂದು ಪ್ರಾಂತ್ಯವಾಗಿ ಪ್ರಮುಖ ರಾಜಕೀಯ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು. ಒಟ್ಟಾರೆ ವಿಜಯನಗರ ಅರಸರು ನಾನಾ ಪಾಳೆಯಗಾರರಿಗೆ, ನಾಡಪ್ರಭುಗಳಿಗೆ ಸಣ್ಣಪುಟ್ಟ ಪ್ರದೇಶಗಳನ್ನು ವಾರ್ಷಿಕ ಪೊಗದಿ ಮತ್ತು ಸೈನಿಕ ಸಹಾಯಕ್ಕಾಗಿ ನೀಡಿದ್ದರು. ಉತ್ತರ ಭಾಗದ ಪಾಳೆಯಪಟ್ಟುಗಳು ರಾಜಧಾನಿಯ ಆಳ್ವಿಕೆಗೊಳಪಟ್ಟಿದ್ದರೆ, ದಕ್ಷಿಣ ಭಾಗದ ಪಾಳೆಯ ಪಟ್ಟುಗಳು ಮಹಮಂಡಲೇಶ್ವರನ ಆಳ್ವಿಕೆಯಲ್ಲಿದ್ದವು. ಆದ್ದರಿಂದ ಶ್ರೀರಂಗಪಟ್ಟಣ ದಕ್ಷಿಣ ಭಾಗದಲ್ಲಿ ಮಹಾಮಂಡಲೇಶ್ವರನ ರಾಜಧಾನಿಯಾಗಿ ಪ್ರವರ್ಧಮಾನಕ್ಕೆ ಬಂದಿತ್ತು.[29] ಎಂದು ಹೇಳಬಹುದು. ಈ ಮೂಲಕ ಶ್ರೀರಂಪಗಪಟ್ಟಣ ಪ್ರದೇಶದಲ್ಲಿ ವಿಜಯನಗರ ಅರಸರು ತಮ್ಮ ಪ್ರಾಬಲ್ಯವನ್ನು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಆಡಳಿತ ಸ್ವರೂಪದ ಮೂಲಕ ಸ್ಥಾಪಿಸಿಕೊಂಡಿದ್ದರೆಂದು ಹೇಳಬಹುದು.

ವಿಜಯನಗರ ಅರಸರ ಕಾಲದ ಶ್ರೀರಂಗಪಟ್ಟಣ ಸೀಮೆ/ಪ್ರದೇಶ ಎಂಬ ಲೇಖನದಿಂದ ಕ್ರೋಢಿಕರಿಸಬಹುದಾದ ಪ್ರಮುಖ ಅಂಶಗಳೆಂದರೆ:

1) 15ನೇ ಶತಮಾದ ಪ್ರಾರಂಭದಲ್ಲೇ ತಿರುಮಲದೇವನೆಂಬ ಪಾಳೆಯಗಾರ ವಿಜಯನಗರದ ದೇವರಾಯನ ಅನುಮತಿ ಪಡೆದು ಶ್ರೀರಂಗಪಟ್ಟಣದಲ್ಲಿ ಒಂದು ಕೋಟೆ ನಿರ್ಮಿಸಿರುವುದು ಕಂಡುಬರುತ್ತದೆ.

2) ಶ್ರೀರಂಗಪಟ್ಟಣ ಮತ್ತು ಪಾಂಡವಪುರಗಳಲ್ಲಿನ ಕೆಲವು ಶಾಸನಗಳ ಆಧಾರದ ಮೇಲೆ ಶ್ರೀರಂಗಪಟ್ಟಣ ಪ್ರದೇಶದಲ್ಲಿ 2ನೇ ದೇವರಾಯನ ಆಳ್ವಿಕೆಯ ಪ್ರಭಾವವಿರುವುದನ್ನು ಗುರ್ತಿಸಬಹುದು.

3) 15ನೇ ಶತಮಾನದ ಮಧ್ಯಭಾಗದ ವೇಳೆಗೆ ಶ್ರೀರಂಗಪಟ್ಟಣ ಪ್ರದೇಶ ನಾಗಮಂಗಲದ ಪ್ರಭು ತಿಮ್ಮಣ್ಣ ಡಣ್ಣಾಯಕನ ಆಳ್ವಿಕೆಗೊಳಪಡುವುದರ ಮೂಲಕ ರಾಜಕೀಯವಾಗಿ ಒಂದು ಆಯಕಟ್ಟಿನ ಪ್ರದೇಶವಾಗಿ ಪ್ರವರ್ಧಮಾನಕ್ಕೆ ಬಂದಿತು.

4) ಮಳವಳ್ಳಿಯ ವಡಗಲಪುರದ ಶಾಸನವು ಸಾಳ್ವ ನರಸಿಂಹನನ್ನು 'ಶ್ರೀರಂಗಪಟ್ಟಣದ ರಾಜ್ಯಾಧಿಪತಿ' ಎಂದು ಉಲ್ಲೇಖಿಸಿರುವುದು ಸಾಳ್ವ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶ ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತೆಂಬುದಕ್ಕೆ ನಿದರ್ಶನವಾಗಿದೆ.

5) ಶ್ರೀರಂಗಪಟ್ಟಣ ಪ್ರದೇಶ ಸ್ವಲ್ಪ ವರ್ಷಗಳ ಕಾಲ ಉಮ್ಮತ್ತೂರಿನ ಪಾಳೆಯಗಾರರ ಆಳ್ವಿಕೆಗೊಳಪಟ್ಟಿರುವುದನ್ನು ಕಾಣಬಹುದು.

6) ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯದಾದ್ಯಂತ ಇದ್ದ 65ಕ್ಕೂ ಹೆಚ್ಚು ಸೀಮೆಗಳಲ್ಲಿ ಶ್ರೀರಂಗಪಟ್ಟಣ ಸೀಮೆಯು ಒಂದಾಗಿದ್ದು, ಶ್ರೀರಂಗಪಟ್ಟಣ ಸೀಮೆಯೊಳಗೆ ಕುರುವಂಕನಾಡು, ಹಾಗೂ ಅನೇಕ ಸ್ಥಳಗಳೆಂಬ ಆಡಳಿತ ವಿಭಾಗಗಳಿದ್ದವೆಂದು ತಿಳಿದುಬರುತ್ತದೆ.

7) ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣ ಪ್ರದೇಶವು ಅಮರನಾಯಕರ ವ್ಯವಸ್ಥೆ ಒಳಪಟ್ಟಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಕೃಷ್ಣದೇವರಾಯನ ಆಳ್ವಿಕೆಯ ನಂತರ ದೊರೆಗಳ ಕಾಲದಲ್ಲಿ ಶ್ರೀರಂಗಪಟ್ಟಣ ಮಹಾಮಂಡಲೇಶ್ವರರ

ಆಡಳಿತ ಕೇಂದ್ರವಾಗಿ ಅಮರನಾಯಕರ/ಮಹಾಮಂಡಲೇಶ್ವರರ ಆಳ್ವಿಕೆಗೊಳಪಟ್ಟಿರುವುದು ಗಮನಾರ್ಹ ಸಂಗತಿಯಾಗಿದೆ.

8) ಕೃಷ್ಣದೇವರಾಯನ ಮೂವರು ರಾಣಿಯರಲ್ಲಿ ತಿರುಮಲದೇವಿ ಹಾಗೂ ಚಿನ್ನಾದೇವಿ ಶ್ರೀರಂಗಪಟ್ಟ ಪ್ರದೇಶದ ಸಾಮಂತರ ಪುತ್ರಿ ಅಥವಾ ವಿಜಯನಗರ ಅಧಿಕಾರಿಗಳ ಕುಟುಂಬಕ್ಕೆ ವರ್ಗಕ್ಕೆ ಸೇರಿದವರೆಂದು ತಿಳಿದುಕೊಳ್ಳಬಹುದು.

9) ವಿಜಯನಗರ ಅರಸರ ಕಾಲದಲ್ಲಿದ್ದ ದಾಸ ಶ್ರೇಷ್ಠರು ಶ್ರೀರಂಗಪಟ್ಟಣ ಪ್ರದೇಶದ ಐತಿಹಾಸಿಕತೆಯ ಹಾಗೂ ಧಾರ್ಮಿಕ ಪ್ರಾಮುಖ್ಯತೆಯ ಬಗ್ಗೆ ತಮ್ಮ ಕೀರ್ತನೆಗಳಲ್ಲಿ ಪ್ರಸ್ತಾಪಿಸಿರುವುದನ್ನು ಗಮನಿಸಬಹುದು.

10) ತಾಳೀಕೋಟೆ ಕದನಾನಂತರ ವಿಜಯನಗರ ಸಾಮ್ರಾಜ್ಯ ಭಾಷಾವಾರು ಆಧಾರದ ಮೇಲೆ ಮೂರು ವಿಭಾಗಗಳಾಗಿ ವಿಭಜನೆಯಾದಾಗ ಕನ್ನಡ ನಾಡಿನ ಪ್ರದೇಶಕ್ಕೆ ಶ್ರೀರಂಗಪಟ್ಟಣ ಆಡಳಿತ ಕೇಂದ್ರವಾಗಿ ವಿಜಯನಗರ ಅರಸರ ಪ್ರತಿನಿಧಿಯ ಆಳ್ವಿಕೆಗೊಳಪಡುತ್ತದೆ.

11) ರಾಜ ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದ ಮೇಲೆ ವಿಜಯನಗರ ಪ್ರತಿನಿಧಿಗಳ ಆಧಿಪತ್ಯ ಕೊನೆಗೊಂಡು ಮೈಸೂರು ಒಡೆಯರ ರಾಜಧಾನಿಯಾಗಿ ಪ್ರವರ್ಧಮಾನಕ್ಕೆ ಬರುವುದನ್ನು ಕಾಣುತ್ತೇವೆ.

12) ಒಟ್ಟಾರೆ ಶ್ರೀರಂಗಪಟ್ಟಣ ಪ್ರದೇಶ ವಿಜಯನಗರ ಅರಸರ ಆಳ್ವಿಕೆಯಲ್ಲಿ ಊಳಿಗಮಾನ್ಯ ಸ್ವರೂಪದ ಆಡಳಿತ ಕುರುಹುಗಳನ್ನು ಒಳಗೊಂಡಿತ್ತೆಂದು ಗುರುತಿಸಬಹುದು.

ಉಪಸಂಹಾರ

ಹೀಗೆ ವಿಜಯನಗರ ಅರಸರ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣ ಪ್ರದೇಶದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಯಾವ ರೀತಿಯ ಆಡಳಿತ ಸ್ವರೂಪವಿತ್ತು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಕ್ರಿ.ಶ. 15ನೇ ಶತಮಾನದಲ್ಲಿ ವಿರಳವಾಗಿ ಪ್ರಾರಂಭವಾದ ಸೀಮೆಗಳು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅಧಿಕವಾಗಿರುವುದನ್ನು ಗಮನಿಸಬಹುದು. ಸೀಮೆ ಎಂಬ ಆಡಳಿತ ವಿಭಾಗ ಹೊಯ್ಸಳರ ಕಾಲದ ಕೊನೆಯ ಕಾಲದ ಶಾಸನಗಳಲ್ಲಿ ಕಂಡು ಬರುತ್ತದೆ. ಬಹುಶಃ ನಾಡಿಗೆ ಬದಲಾಗಿ ಸೀಮೆ ಎಂಬ ಆಡಳಿತ ವಿಭಾಗ ರಚನೆಯಾಗಿದ್ದಿರಬಹುದು. ವಿಜಯನಗರ ಅರಸರ ಕಾಲದಲ್ಲಿ ಹೆಚ್ಚಾಗಿ ಕಂಡು ಬರುವ ಸೀಮೆಗಳು/ನಾಡುಗಳು ಬಹು ದೊಡ್ಡ ಆಡಳಿತ ವಿಭಾಗಗಳಾಗಿ ನಾಯಕತನ ಅಥವಾ ಅಮರನಾಯಕತನಕ್ಕೆ ಒಳಪಟ್ಟಿದ್ದುವು. ವಿಜಯನಗರ ಕಾಲದ ಶಾಸನಗಳಲ್ಲಿ ಸೀಮೆಯ ಉಪವಿಭಾಗವಾಗಿ ನಾಡನ್ನೋ ಅಥವಾ ನಾಡಿನ ಉಪವಿಭಾಗವಾಗಿ ಸೀಮೆಯನ್ನು ಉಲ್ಲೇಖಿಸಿರುವುದುಂಟು. ಹೀಗೆ ಹೊಯ್ಸಳರ ಕಾಲದ ಪ್ರಮುಖ ಆಡಳಿತ ವಿಭಾಗವಾಗಿದ್ದ ನಾಡುಗಳನ್ನು ವಿಜಯನಗರ ಅರಸರು ರದ್ದುಮಾಡಿ ಅದನ್ನು ಸೀಮೆ ಅಥವಾ ಸ್ಥಳ ಎಂದು ಬದಲಾಯಿಸಿಕೊಂಡರೆಂದು ಹೇಳಬಹುದು. ಕೆಲವು ಸಂದರ್ಭಗಳಲ್ಲಿ ಸ್ಥಳಗಳು ಸೀಮೆಗಳಾಗಿ ಅಥವಾ ಸೀಮೆಯೇ ಸ್ಥಳವಾಗಿ ಪರಿವರ್ತನೆಯಾಯಿತೆಂದು ಹೇಳಬಹುದು. ಒಟ್ಟಾರೆ ಗಂಗರು, ಹೊಯ್ಸಳರು, ವಿಜಯನಗರ ಅರಸರ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶವು ಈ ಭಾಗದ ಪ್ರಮುಖ ನೆಲೆವೀಡು ಅಥವಾ ಉಪರಾಜಧಾನಿ ಅಥವಾ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು. ಅದರಲ್ಲೂ ವಿಜಯನಗರ ಕಾಲದಲ್ಲಿ ಶ್ರೀರಂಗಪಟ್ಟಣ ಸೀಮೆಯು ಪ್ರಮುಖ ಆಡಳಿತ ಕೇಂದ್ರವಾಗಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಆದ್ದರಿಂದ ವಿಜಯನಗರ ಅರಸರ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರದೇಶದಲ್ಲಿ ಊಳಿಗ ಮಾನ್ಯ ಸ್ವರೂಪದ ಆಡಳಿತ ಲಕ್ಷಣಗಳನ್ನು ಗುರುತಿಸಬಹುದು.

ಆಧಾರ ಗ್ರಂಥಗಳು

1. ಎಪಿಗ್ರಾಫಿಯ ಕರ್ನಾಟಕ, ಸಂಪುಟ–06 ಮತ್ತು 07, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1977.
2. ಗೋಪಾಲ್. ಆರ್., ಚಿಕ್ಕಮಾರೇಗೌಡ. ಬಿ.ಎಂ, ಗಂಗಾಧರ. ಟಿ.ಎಸ್. (ಸಂ), ವಿಜಯನಗರ ಅಧ್ಯಯನ ಸಂಪುಟಗಳು. ಕರ್ನಾಟಕ ಸರ್ಕಾರ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಅಡಿ ಟಿಪ್ಪಣಿಗಳು

1. ತಿಮ್ಮ ಕವಿ, *ಪಶ್ಚಿಮ ರಂಗ ಮಹಾತ್ಮೆ*, ಪು. 9 ಮತ್ತು *ಚಿಕ್ಕದೇವರಾಜ ವಂಶಾವಳಿ* (ಸಂ), ಎಂ.ಪಿ. ಮಂಜಪ್ಪ ಶೆಟ್ಟಿ, ಕ.ಅ.ಸಂ. ಮೈಸೂರು, ಪು. 37.
2. ಮುನಿರಾಜಪ್ಪ ಡಾ., *ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ*, ಸ್ಪೂರ್ತಿ ಪ್ರಕಾಶನ, ಮಾಗಡಿ, 2005, ಪು. 69.
3. ವೆಂಕಟರತ್ನಂ. ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974, ಪು. 09.
4. ನಾಗರಾಜು ಎಚ್.ಎಂ., *ವಿಜಯನಗರದ ಇಮ್ಮಡಿ ದೇವರಾಯ*, ಸಂವಹನ ಪ್ರಕಾಶನ, ಮೈಸೂರು, 1999, ಪು. 83.
5. ಅದೇ, ಪು. 83.
6. ವೆಂಕಟರತ್ನಂ. ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974, ಪು. 11.
7. ಅದೇ, ಪು. 22.
8. ನಾಗರಾಜು ಎಚ್.ಎಂ., *ವಿಜಯನಗರದ ಇಮ್ಮಡಿ ದೇವರಾಯ*, ಸಂವಹನ ಪ್ರಕಾಶನ, ಮೈಸೂರು, 1999, ಪು. 83.
9. ಮುನಿರಾಜಪ್ಪ. ಡಾ., *ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ*, ಸ್ಪೂರ್ತಿ ಪ್ರಕಾಶನ, ಮಾಗಡಿ, 2005, ಪು. 70.
10. ತಿಮ್ಮ ಕವಿ, *ಪಶ್ಚಿಮ ರಂಗ ಮಹಾತ್ಮೆ*, ಪು. 9. ಮತ್ತು *ಚಿಕ್ಕದೇವರಾಜ ವಂಶಾವಳಿ*, (ಸಂ) ಎಂ.ಪಿ. ಮಂಜಪ್ಪ ಶೆಟ್ಟಿ, ಕ.ಅ.ಸಂ. ಮೈಸೂರು, ಪು. 37–38.
11. ಗೋಪಾಲ್ ಆರ್. (ಸಂ), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–2008, ಪುಟ–203
12. ಮುನಿರಾಜಪ್ಪ ಡಾ., *ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ*, ಸ್ಪೂರ್ತಿ ಪ್ರಕಾಶನ, ಮಾಗಡಿ, 2005, ಪು. 68–69.
13. ಪುಟ್ಟಸ್ವಾಮಿ, *ಕರ್ನಲ್ ಮೆಕೆಂಝಿ ಮತ್ತು ಕೈಫಿಯತ್ತುಗಳು*, ಮನೋಜ್ ಪಬ್ಲಿಕೇಷನ್, ಬೆಂಗಳೂರು, 2012, ಪು. 87–88.
14. ವೆಂಕಟರತ್ನಂ ಎ.ವಿ., *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, 1974, ಪು. 64.
15. ಅದೇ, ಪು. 12.
16. ಗೋಪಾಲ್ ಆರ್. (ಸಂ), *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2008, ಪು. 282.
17. ರಾಮಕೃಷ್ಣೇಗೌಡ. ಕೋ.ವೆಂ., *ಕರ್ನಾಟಕ ಕಾವೇರಿ ಸಂಸ್ಕೃತಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2011, ಪು. 47.
18. ರಾಜೇಗೌಡ. ಹ.ಕ.(ಸಂ), *ಸಿಂಗಾರ*, 1988, *ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ*, ಜಿ.ಆರ್. ರಂಗಸ್ವಾಮಯ್ಯ, ಪು. 144–145.
19. ಪರಶಿವಮೂರ್ತಿ ಡಿ.ಪಿ. (ಸಂ), *ಕೃಷ್ಣದೇವರಾಯನ ಶಾಸನಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 23.
20. ಅದೇ, ಪು. 65.

21. ಅದೇ, ಪು. 67.
22. ಮುನಿರಾಜಪ್ಪ. ಡಾ., *ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ*, ಸ್ಫೂರ್ತಿ ಪ್ರಕಾಶನ, ಮಾಗಡಿ, 2005, ಪು. 68.
23. ಪರಶಿವಮೂರ್ತಿ ಡಿ.ವಿ. (ಸಂ), *ಕೃಷ್ಣದೇವರಾಯನ ಶಾಸನಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 505.
24. ನಂಜರಾಜು ಹೊಂಗನೂರು, *ಕನ್ನಡದ ಕಾವೇರಿ*, ಸಂಜಯ್ ಪ್ರಕಾಶನ, ಮೈಸೂರು, 2009, ಪು. 12.
25. ದೇಜಗೌ (ಪ್ರ.ಸಂ), *ಸಿರಿಯೊಡಲು*, ಮಂಡ್ಯ, 1994, ಪು. 77.
26. *ಕರ್ನಾಟಕ ಪರಂಪರೆ*, ಸಂಪುಟ–02, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1992, ಪು. 50.
27. ರಾಜೇಗೌಡ ಹ.ಕ.(ಸಂ), *ಸಿಂಗಾರ*, ಮಂಡ್ಯ, 1988, *ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ*, ಜಿ.ಆರ್.ರಂಗಸ್ವಾಮಯ್ಯ, ಪು. 145.
28. ಷೇಕ್ ಅಲಿ. ಬಿ (ಪ್ರ.ಸಂ), ಶಿವಣ್ಣ. ಕೆ.ಎಸ್, (ಸಂ), *ಕರ್ನಾಟಕ ಚರಿತ್ರೆ*, ಸಂಪುಟ 03, ಪ್ರಸಾರಾಂಗ, ಹಂಪಿ, 1997, ಪು. 267.
29. ರೈಸ್ ಬಿ.ಲೆವಿಸ್, ಮೈಸೂರು, ಸಂಪುಟ 01, ವೆಸ್ಟ್ ಮಿನಿಸ್ಟರ್, 1987, ಪು. 356.

35. ಹಂಪೆಯ ಶಾರದಾಪೀಠವನ್ನೇರಿದ ಸಪ್ತಕಾವ್ಯದ ಗುರುಬಸವ – ಒಂದು ಅಧ್ಯಯನ

ಶ್ರೀ ಜಯದೇವಪ್ಪ ಜೈನಕೇರಿ

ವಿಜಯನಗರ ಸಾಮ್ರಾಜ್ಯದ ಉದಯ ಸಂಗಮ ವಂಶದ ಹಕ್ಕಬುಕ್ಕರಿಂದ ಕ್ರಿ.ಶ. 1336ರಲ್ಲಿ ಆಯಿತು. ಶ್ರೀ ವಿದ್ಯಾರಣ್ಯರ ಕೃಪೆ ಮತ್ತು ಪ್ರೋತ್ಸಾಹದಿಂದ ರಾಜ್ಯ ಸ್ಥಾಪಿಸಿ ವಿಜಯನಗರ, ವಿದ್ಯಾನಗರ ಎಂಬ ರಾಜಧಾನಿಯನ್ನಾಗಿಸಿ ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅತ್ಯಂತ ಸಮರ್ಥವಾಗಿ ವೈಭವದಿಂದ ಆಳಿದರು. ಉತ್ತರದ ಮುಸ್ಲಿಂ ದಾಳಿಯನ್ನು ಎದುರಿಸಿದರು. ಈ ಮೊದಲು ಕರ್ನಾಟಕವನ್ನು ಆಳಿದ ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಚೋಳರು, ಚೇರರು ಮುಂತಾದ ರಾಜವಂಶಗಳ ವ್ಯಾಪ್ತಿಯ ಪ್ರದೇಶಗಳು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಅಭಿವೃದ್ಧಿ ಸಾಧಿಸಿದವು. ಸಂಗೀತ, ನೃತ್ಯ, ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹ ದೊರಕಿತು. ಕನ್ನಡ ಸಾಹಿತ್ಯಕ್ಕೂ ವಿಶೇಷ ಮನ್ನಣೆ ದೊರಕಿದ್ದು ಇತಿಹಾಸ.

ಶೃಂಗೇರಿಯ ಅದ್ವೈತ ಮಠದ ಜೊತೆಗೆ ಕಾಳಾಮುಖ ಪಂಥಕ್ಕೆ ಸೇರಿದ ಶೈವ ಆರಾಧಕರಾದ ಕ್ರಿಯಾಶಕ್ತಿ ಪಂಡಿತ, ಕಾಶಿವಿಲಾಸ ಕ್ರಿಯಾಶಕ್ತಿ ಮಲ್ಲಿಕಾರ್ಜುನ ಕ್ರಿಯಾಶಕ್ತಿ ಮುಂತಾದವರು ಸಂಗಮ ವಂಶದ ದೊರೆಗಳಿಗೆ ಆಧ್ಯಾತ್ಮಿಕ, ಧಾರ್ಮಿಕ ಮಾರ್ಗದರ್ಶಕರಾಗಿದ್ದರು. ಬಹುಸಂಖ್ಯಾತ ಲಿಂಗಾಯತ/ವೀರಶೈವರೂ ಶಿವನ ಆರಾಧಕರಾಗಿದ್ದರಿಂದಾಗಿ ಅವರನ್ನೂ ಪ್ರೋತ್ಸಾಹಿಸಲಾಯಿತು. ಇಮ್ಮಡಿ ದೇವರಾಯನ ಕಾಲದಲ್ಲಿ ವೀರಶೈವ/ಲಿಂಗಾಯತ ಮಠ ಕಟ್ಟುವುದು, ಧರ್ಮಪ್ರಸಾರ ಮತ್ತು ಪುರಾಣ ಸಾಹಿತ್ಯ, ವಚನ ಸಾಹಿತ್ಯಗಳ ಅಭಿವೃದ್ಧಿಗೆ ವಿಶೇಷ ಅವಕಾಶ ದೊರಕಿತು. ಯಾವುದೇ ಮತಧರ್ಮಗಳಿಗೆ ರಾಜಾಶ್ರಯ ಮುಖ್ಯ.

ಶಿವಮೊಗ್ಗ ಜಿಲ್ಲೆಯ ತೆಂಗಿನಪುರ ಶಾಸನದಲ್ಲಿ ಇಮ್ಮಡಿ ದೇವರಾಯನನ್ನು "ವೀರಶೈವಾಗಮ ಸಂಪನ್ನ" ಎಂದು ಉಲ್ಲೇಖಿಸಲಾಗಿದೆ. ಈತ ಶ್ರೀಶೈಲಮಲ್ಲಿಕಾರ್ಜುನನ ಪರಮಭಕ್ತನಾಗಿದ್ದನೆಂಬ ದಾಖಲೆಗಳಿವೆ. ಎಲ್ಲ ರಾಜರಂತೆ ಇಮ್ಮಡಿ ದೇವರಾಯನು ಎಲ್ಲ ಮತಧರ್ಮದವರಿಗೂ ದಾನದತ್ತಿಗಳನ್ನು ನೀಡಿದ್ದಾನೆ. ಸಂಗಮ ವಂಶದ ದೊರೆಗಳು ವೀರಶೈವ ಧರ್ಮ, ಸಾಹಿತ್ಯ ಮತ್ತು ಮಠ ಸಂಸ್ಥೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದರಿಂದಾಗಿ ಅದರ ಸರ್ವತೋಮುಖ ಅಭಿವೃದ್ಧಿಗೆ ಬಲವಾದ ಪ್ರೇರಣೆ ಸಿಕ್ಕಿತು. ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಪಂಥಗಳ ಆಚಾರ್ಯರು ಹಾಗೂ ವಿಶ್ವಗುರು ಬಸವಣ್ಣನವರ ಅನುಯಾಯಿಗಳ ನಡುವೆ ಪರಸ್ಪರ ಅರಿವನ್ನುಂಟುಮಾಡಿ, ವಿಭಿನ್ನ ಪಂಥಗಳ ನಡುವೆ ಸಾಮರಸ್ಯವನ್ನುಂಟುಮಾಡಿ, ವೀರಶೈವ/ಲಿಂಗಾಯತ ಗುರು–ವಿರಕ್ತ ಪರಂಪರೆಯ ಮಠಗಳ ಕರ್ತವ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಅವಕಾಶ ಕಲ್ಪಿಸಲಾಯಿತು. ವೀರಶೈವ ಕವಿಗಳು ಪ್ರಾಚೀನ ಗ್ರಂಥಗಳ ಪುನಾರಚನೆಯಲ್ಲಿ ತೊಡಗಿದರು. ಲಿಂಗಾಯಿತ ಕವಿಗಳು ವಚನ ಸಾಹಿತ್ಯ ಸಂಗ್ರಹ ಪ್ರತಿ ಮಾಡುವುದು, ವಚನಗಳನ್ನು ಆಧರಿಸಿ ಶೂನ್ಯಸಂಪಾದನೆ ಕೃತಿಗಳ ರಚನೆಗೆ ತೊಡಗಿದರು. ಸಂಗಮರ ಆಳ್ವಿಕೆಯಲ್ಲಿ ಅನೇಕ ವೀರಶೈವರಿಗೆ ವಿಶೇಷ ತರಬೇತಿ ನೀಡಿ ಸೈನ್ಯದಲ್ಲಿ ಪ್ರಮುಖ ಹುದ್ದೆಗಳಲ್ಲಿ ನೇಮಿಸಲಾಯಿತು. ಆಡಳಿತ ಕೌಶಲ್ಯ ತರಬೇತಿ ನೀಡಿ, ಆಡಳಿತದಲ್ಲಿಯೂ ಪ್ರಮುಖ ಸ್ಥಾನ ನೀಡಲಾಯಿತು. ವಿವಿಧ ಕಾಯಕ ಜೀವಿಗಳಿಗೆ ವೃತ್ತಿಕೌಶಲ್ಯ ಕಲಿಸಿ ಅವರವರ ಕಾಯಕವನ್ನು ಸಮರ್ಥವಾಗಿ ನಡೆಯುವಂತೆ ಮಾಡಿ, ರಾಜ್ಯದ ಅಭಿವೃದ್ಧಿಯಲ್ಲಿ ತೊಡಗಿಸಲಾಯಿತು. ಸಂಗಮರ ಆಳ್ವಿಕೆಯಲ್ಲಿ ಅನೇಕ ವೀರಶೈವರು ಆಡಳಿತದಲ್ಲಿ

ಮತ್ತು ಸೈನ್ಯದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದರು. ಅವರಲ್ಲಿ ಲಕ್ಕಣ್ಣ ದಂಡೇಶ, ಅರಿಯಪ್ಪ ದಂಡನಾಯಕ, ಭಂಡಾರಿ ಜಕ್ಕಪ್ಪ ಮುಂತಾದವರು ರಾಜರ ಗೌರವಕ್ಕೆ ಪಾತ್ರರಾಗಿ ಅನೇಕ ವೀರಶೈವ/ಲಿಂಗಾಯಿತ ಯುವಕರನ್ನು ಪ್ರೋತ್ಸಾಹಿಸಿದರು.

ಇಮ್ಮಡಿ ದೇವರಾಯನ ಕಾಲದಲ್ಲಿ ವೀರಶೈವ/ಲಿಂಗಾಯಿತ ಸಾಹಿತ್ಯ ಶಕ್ತಿಶಾಲಿಯಾಗಿ ರೂಪುಗೊಂಡಿತು. ವಚನ ಸಾಹಿತ್ಯ, ಪುರಾಣಗಳು, ದರ್ಶನ ಗ್ರಂಥಗಳು, ಶತಕಸಾಹಿತ್ಯ, ನಿಘಂಟು, ಶೂನ್ಯ ಸಂಪಾದನೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಮಹತ್ವದ ಕೃತಿಗಳು ಮೂಡಿಬಂದವು. ವಚನಗಳ ವ್ಯಾಖ್ಯಾನ, ಪರಿಷ್ಕರಣೆ, ವಚನಕಾರರ ಚರಿತ್ರೆ, ವರ್ಗೀಕರಣ ನಡೆಯಿತು. ಈ ಕಾಲದ ನೂರೊಂದು ವಿರಕ್ತರು ಸಾಹಿತ್ಯ ಸೇವೆಯಲ್ಲಿ ತೊಡಗಿ ವೀರಶೈವ/ಲಿಂಗಾಯತ ಸಾಹಿತ್ಯವನ್ನು ಜನಪ್ರಿಯಗೊಳಿಸಿದರು. ಇವರಲ್ಲಿ ಕರಸ್ಥಲದ ನಾಗಿದೇವನಿಗೆ ಮಹತ್ವದ ಸ್ಥಾನವಿದೆ. ಅವರಷ್ಟೇ ಪ್ರಭಾವಶಾಲಿಯಾದ ಇನ್ನೊಬ್ಬ ವ್ಯಕ್ತಿ ಎಂದರೆ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಾಧ್ಯಕ್ಷರಾಗಿದ್ದ ಹಂಪೆಯ ನಾಗಿದೇವನ ಸಮಕಾಲೀನ ಕವಿಯೂ ಆದ ಸಪ್ತಕಾವ್ಯದ ಗುರುಬಸವ ಕರಸ್ಥಲದ ವೀರಣ್ಣೊಡೆಯರು ಪ್ರೌಢದೇವರಾಯನಿಗೂ, ಕರಸ್ಥಲದ ನಾಗಿದೇವನಿಗೂ ಗುರುಗಳಾಗಿದ್ದವರು. ಗುರುಬಸವನ ಅರಮನೆಯು (ಮಠ) ವಿಜಯನಗರದಲ್ಲಿದ್ದಿತ್ತು. ಕರಸ್ಥಲ ನಾಗಿದೇವರು ಒಮ್ಮೆ ಜೀವನದಲ್ಲಿ ಜಿಗುಪ್ಸೆ ತಾಳಿ, ಸಂಸಾರ ತ್ಯಜಿಸಿ, ದಿಗಂಬರನಾಗಿ ದೇಶ ಸಂಚಾರ ಮಾಡಿ ಪುನಃ ಹಂಪೆಗೆ ಬಂದು ಪ್ರೌಢದೇವರಾಯನಿಗೆ ದರ್ಶನ ಕೊಡುತ್ತಾರೆ. ನಾಗಿದೇವರು ಗುರುಬಸವ ಕವಿಯ ಮಠಕ್ಕೆ ಬಂದಾಗ, ಆತ ಪೂಜೆಯಲ್ಲಿ ನಿರತನಾಗಿರುತ್ತಾರೆ. ಪೂಜೆಯಲ್ಲಿದ್ದರೂ ಗುರುಬಸವನ ಮನಸ್ಸು ಲಿಂಗಧ್ಯಾನದಲ್ಲಿ ಲೀನವಾಗಿಲ್ಲ ಎಂಬುದನ್ನು ತಮ್ಮ ದಿವ್ಯಜ್ಞಾನದಿಂದ ಅರಿತ ನಾಗಿದೇವರು, ಅನುಭಾವದ ಅರಿವನ್ನು ತಿಳಿಸಿದಾಗ ಗುರುಬಸವ ಅವರಿಗೆ ನಮಿಸಿ, ಗುರುವಿರಕ್ತರು ಸಮಾನರೆಂದು ನಿರೂಪಿಸುತ್ತಾನೆ.

"ಸಪ್ತಕಾವ್ಯದ ಗುರುಬಸವ ಕವಿ" ವೇದಾಂತದಲ್ಲಿ ಬಲ್ಲಿದನಾಗಿದ್ದು ಶಿವಯೋಗ ಶಕ್ತಿಯಿಂದ ಅನೇಕ ಪವಾಡಗಳನ್ನು ಮೆರೆದ ಮಹಿಮಾ ಪುರುಷ. ಆತನಿಗೆ ಯೋಗದ ಗುರುಬಸವನೆಂಬ ಉಪಾಧಿಯೂ ಇತ್ತು. ಈತನು ಪ್ರೌಢದೇವರಾಯನ ಸಮ್ಮುಖದಲ್ಲಿ "ಪರವಾದಿಗಳೊಡನೆ ವಾದ ಮಾಡಿ ಗೆದ್ದು ಹಂಪೆಯ ಶಾರದೆ ಪೀಠವನ್ನು ಏರಿದನು." ಅಲ್ಲದೇ ತನ್ನ ಖೇಚರ ಶಕ್ತಿಯನ್ನು ಪ್ರದರ್ಶಿಸಿ, ಇತರ ಯೋಗಿಗಳಿಗಿಂತಲೂ ತಾನೇ ಮೇಲೆಂಬುದನ್ನು ಪ್ರತ್ಯಕ್ಷ ತೋರಿದನೆಂಬ ಒಂದು ಪದ್ಯವಿದೆ.

ಪರಮಗುರುಬಸವೇಶನಧಿಕತರವಾದದಿಂ
ದಿರದೆ ಶಾರದೆಯ ಪೀಠವನೇರಿ ಗೆಲವಿನಿಂ
ಮರಳಿ ಬಂದಾ ಪ್ರೌಢನಗರಮನೆಯೊಳಿರಲೋರ್ವಯೋಗಿ ಖೇಚರಪವನದೆ
ಇರಲರಸನತಿ ಚೋದ್ಯದಿಂ ನೋಡುತಿರಲರಿದು
ಗುರುಬಸವನವನಿಗಿಂ ಮೇಲಕ್ಕೆ ಪೋಗಿ ಖೇ
ಚರದಲ್ಲಿ ಸಕಲರಾಗಂಗಳಂ ಪಾಡಿ ಬಳಿಕಿರದೆ ನಿರವಯಲಪ್ಪನು

ಇಲ್ಲಿ "ಶಾರದಾಪೀಠ" ಯಾವುದು? ಎಂಬುದು ಮಹತ್ವದ ಪ್ರಶ್ನೆ? ಶಂಕರಾಚಾರ್ಯ ಪರಂಪರೆಯ ಶಾರದಾ ಪೀಠ ಹಂಪೆಯಲ್ಲಿ ಇದ್ದಿರಬಹುದಾದ ಸಾಧ್ಯತೆಯನ್ನು ಊಹಿಸಬಹುದಾಗಿದೆ. ಈ ಶಾರದಪೀಠ ಬ್ರಾಹ್ಮಣರ ಒಂದು ಮಠವಾಗಿರಬಹುದೆಂದು ಶ್ರೀ ಎಂ.ಎ. ನಾರಾಯಣಶಾಸ್ತ್ರಿಗಳು ತಿಳಿಸಿದ್ದಾರೆ. [ಮನೋವಿಜಯ ಮುನ್ನುಡಿ ಪು. 4] ಗುರುಬಸವನು ಖೇಚರ ಪವನದಲ್ಲಿದ್ದುಕೊಂಡು, ಸಕಲ ರಾಗಂಗಳಂ ಪಾಡಿ ನಿರವಯನಾದನೆಂಬ ಸಂಗತಿ. ಚನ್ನಬಸವ

ಪುರಾಣ, ಸಂಧಿ 63 ಪದ್ಯ 35ರಲ್ಲಿ ಉಲ್ಲೇಖವಾಗಿದೆ). ಮಹತ್ವಪೂರ್ಣವಾಗಿದೆ. ಬಯಲೊಳಗೆ ಬಯಲಾಗುವುದೇ ವೀರಶೈವ/ಲಿಂಗಾಯತದ ಅಂತಿಮ ಗುರಿ. ಇದರಿಂದಾಗಿ ವಿಜಯನಗರದಲ್ಲಿ ಇದ್ದಾಗಲೇ ಗುರುಬಸವ ಕವಿ ಲಿಂಗೈಕ್ಯನಾದನೆಂದು ಅರಿಯಬಹುದಾಗಿದೆ. ಇಲ್ಲಿ ಮತ್ತೊಂದು ಪ್ರಶ್ನೆ ಎದುರಾಗುತ್ತದೆ. ಹಾಗಾದರೆ ಗುರುಬಸವ ಕವಿಯೊಡನೆ ವಾದಕ್ಕೆ ನಿಂತ ವ್ಯಕ್ತಿ ಯಾರು? ಇದಕ್ಕೆ ಉತ್ತರವಾಗಿ ಸಿದ್ಧೇಶ್ವರ ಪುರಾಣ ಸಂಧಿ 5, ಪದ್ಯ 35ರಲ್ಲಿ ಹೀಗಿದೆ.

"ಮತ್ತೆ ಕೇಳ್ ಗುರುಬಸವನೆಂಬ ಯೋಗಿಯ ಕೂಡೆ
ಮತ್ತನೆನಿಸುವ ಚಂದ್ರಜೊಗಿ ವಾದಿಪೆನೆಂದು
ಹತ್ತೆ ಸಾರ್ದಾಕಾಶಕಡರಿ ತಾಳಪ್ರಮಾಣದೊಳೆ ಕುಳ್ಳಿರೆ ಕಾಣುತೆ
ಉತ್ತಮೋತ್ತಮನಾತ್ಮ ಪಾದುಕೆಯನಿಡೆಯವನ
ನೆತ್ತಿಯಿಂ ಮೇಲೆ ಮೊಳದೊಂದರಳತೆಯೊಳಿರಲ್
ಚಿತ್ತದೊಳ್ ನಾಣ್ಚಿ ಧರೆಗಿಳಿದು ಕರುಣಂಬಡೆದುದಂ ಕೇಳ್ವರಿದುದಿಲ್ಲವೇ.

ಮೇಲಿನ ಪದ್ಯದಿಂದ ಚಂದ್ರಜೋಗಿ ಎಂಬುವನು ಗುರುಬಸವನೊಡನೆ ವಾದಿಸಿದನೆಂಬುದನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಸಾಮಾನ್ಯವಾಗಿ ವಿರಕ್ತರಾದವರು ತಮ್ಮ ಪೂರ್ವಾಶ್ರಮವನ್ನು ಹೇಳಿಕೊಳ್ಳುವುದಿಲ್ಲ. ಅದರಂತೆ ಗುರುಬಸವನು ವಿಜಯನಗರಕ್ಕೆ ಬರುವ ಪೂರ್ವದಲ್ಲಿ ಎಲ್ಲಿದ್ದರು? ಅವರ ಮೂಲಮಠ ಯಾವುದು? ತಂದೆ, ತಾಯಿ ಯಾರು? ಹುಟ್ಟಿದ ಊರು ಪ್ರದೇಶ ಯಾವುದು? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಪ್ರೌಢದೇವರಾಯನ ಕಾಲದಲ್ಲಿ ಹಂಪೆಯಲ್ಲಿ ಸೇರಿದ ನೂರೊಂದು ವಿರಕ್ತರು ನಾಡಿನ ನಾನಾ ಮೂಲೆಗಳಲ್ಲಿ ಜನಿಸಿ, ವೇದಾಂತ ಸಾರಯುಕ್ತರಾಗಿ ರಾಜಾಶ್ರಯವನ್ನರಸಿ ಹಂಪೆಗೆ ಬಂದಿರುವ ಸಾಧ್ಯತೆಗಳಿವೆ. ವಿದ್ವಾಂಸರೆಲ್ಲ ಒಂದೆಡೆ ಸೇರಿ ತಮ್ಮ ವಿದ್ವತ್ ಪ್ರದರ್ಶಿಸಿ ರಾಜಮನ್ನಣೆ ಪಡೆಯುವ ಹಂಬಲ ಸಹಜವಾದದ್ದು.

ಕವಿ ಗುರುಬಸವನು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು, ಕ್ಯಾಸನೂರು (ಈಗ ಮಂಗನಕಾಯಿಲೆಗೆ ಪ್ರಸಿದ್ಧವಾದ ಊರು) ಮಠಾಧ್ಯಕ್ಷನಾಗಿದ್ದನೆಂದೂ, ಕ್ಯಾಸನೂರು ವಿಜಯನಗರ ಅರಸರ ಕಾಲದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಧಾರ್ಮಿಕ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಕ್ಯಾಸನೂರು ಎಂದರೆ ಖೇಚರ ಪುರಿ ಎಂಬ ಹೆಸರೂ ಇದೆ. ಈತನ ಗುರುಗಳು "ಭದ್ರ ಗುರುಬಸವಲಿಂಗ ಸ್ವಾಮಿಗಳು" ಎಂದು ಆರ್. ತಿಪ್ಪಯ್ಯ ಶಾಸ್ತ್ರಿ ಹೇಳಿದ್ದಾರೆ. ಕವಿ ಗುರುಬಸವ ಶಿವಯೋಗಿಯಾಗಿ, ಯೋಗ ಸಾಮರ್ಥ್ಯದಿಂದ ಖೇಚರಿಯಾಗಿ ಸಂಚರಿಸುತ್ತಿದ್ದರಿಂದ ಖೇಚರಿಪುರಿ ಎಂಬ ಹೆಸರಾಯಿತೆಂದೂ ಕ್ರಮೇಣ ರೂಢಿಯಲ್ಲಿ ಅಪಭ್ರಂಶವಾಗಿ ಕ್ಯಾಸನೂರು ಎಂದಾಗಿದೆ ಎಂದು ಪಂಡಿತರತ್ನ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಶರಣ ಸಾಹಿತ್ಯ ಕೃತಿ ಸಂ. 7, ಸಂ. 7ರಲ್ಲಿ ಉಲ್ಲೇಖಿಸಿದ್ದಾರೆ.

ಈ ಉಲ್ಲೇಖಗಳಿಗೆ ಹೆಚ್ಚಿನ ಆಧಾರ ದೊರೆತರೆ ನೂರೊಂದು ವಿರಕ್ತರಲ್ಲಿ ಬಹುಮುಖ್ಯನಾದ ಕವಿ ಗುರುಬಸನವ ಬದುಕಿನ ಬಗ್ಗೆ ತಿಳಿಯಬಹುದು. ಮಾತ್ರವಲ್ಲದೇ ಆತ ಹಂಪೆಯಲ್ಲಿ ಪರವಾದಿಗಳನ್ನು ಸೋಲಿಸಿ ಏರಿದ ಶಾರದಾಪೀಠದ ಕುರಿತು ಹೆಚ್ಚಿನ ಮಾಹಿತಿಗಳು ದೊರಕುತ್ತವೆ. ಈತನ ಕಾಲ ಸು. ಕ್ರಿ.ಶ. 1430. ಈತ ತನ್ನ ಅಂತಿಮ ಕಾಲವನ್ನು ಹಂಪೆಯಲ್ಲೇ ಕಳೆದು ನಿರವಲಯನಾದನೆಂದು ಹೇಳಬಹುದಾಗಿದೆ.

ಕನ್ನಡದಲ್ಲಿ ವೇದಾಂತ ವಿಷಯ ಕುರಿತು ಬರೆದ ಕವಿಗಳು ಅಪರೂಪ, ಅಲ್ಲದೆ ಕವಿ ಗುರುಬಸವ "ಯೋಗಾಂಗ ವಿಭೂಷಣ"ನೂ ಆಗಿ ಪ್ರಖ್ಯಾತಿ ಪಡೆದಿರುವುದು ವಿಶೇಷ. ವೇದಶಾಸ್ತ್ರ ತಿಳಿಯಬೇಕಾದರೆ ಸಂಸ್ಕೃತವೇ ಗತಿ, ಕನ್ನಡದಲ್ಲಿ

ಏನಿದೆ? ಎಂದು ಕೇಳುವವರ ಬಾಯಿ ಮುಚ್ಚುವಂತೆ ಶ್ರೀ ನಿಜಗುಣ ಶಿವಯೋಗಿ, ಮಗ್ಗೆಯ ಮಾಯಿದೇವರು, ಮಹಲಿಂಗರಂಗ, ಗುರುಬಸವಾರ್ಯ ಮುಂತಾದ ಪಂಡಿತರು ಸಲ್ಲಿಸಿರುವ ಸೇವೆ ಗಮನಾರ್ಹವಾದದ್ದು.

ಕವಿ ಗುರುಬಸವ, ಸಕಲ ಶಾಸ್ತ್ರ ಪ್ರವೀಣವಾದುದರಿಂದ ಆತನು ರಚಿಸಿರುವ ಸಪ್ತಕಾವ್ಯಗಳಾದ "ಶಿವಯೋಗಾಂಗ ವಿಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ ಮತ್ತು ಮನೋವಿಹಯ" ಕೃತಿಗಳಿಂದ ಈತನಿಗೆ ಸಪ್ತಕಾವ್ಯದ ಗುರುಬಸವನೆಂಬ ಹೆಸರಿಗೆ. ಅಲ್ಲದೆ ಈತ ಕೆಲವು ಸ್ವರ ವಚನಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ. ಕವಿ ಗುರುಬಸವನಿಗೆ "ಭಕ್ತ ಜನಮನೋಮಂದಿರ, ಶಿವಯೋಗಿ ಜನ ಸೇವಿತ ಚರಣಾರವಿಂದ, ಷಟ್‌ಸ್ಥಲ ಜ್ಞಾನ ಪ್ರಭಾಪುಂಜ ರಂಜಿತಾಂತರಂಗ, ವೀರಶೈವ ಮತ ಸ್ಥಾಪನಾಚಾರ್ಯ ಎಂಬ ಬಿರುದುಗಳಿದ್ದವೆಂದು ಈತನ ಮನೋವಿಜಯ ಕೃತಿಗೆ ತಾತ್ಪರ್ಯ, ಅರ್ಥವನ್ನು ಬರೆದಿರುವ ವಿರಕ್ತ ತೋಂಟದಾರ್ಯರು ದಾಖಲಿಸಿದ್ದಾರೆ.

ವಿಜಯನಗರದ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಆಳಿದ ಇಮ್ಮಡಿ ದೇವರಾಯನ ಆಳ್ವಿಕೆ ಕಾಲ ಕ್ರಿ.ಶ. 1419ರಿಂದ 1446 ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಈತನು ಪ್ರೌಢದೇವರಾಯನೆಂದೂ ಪ್ರಸಿದ್ಧನಾಗಿದ್ದಾನೆ.

36. ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ತೆರಿಗೆ

ಡಾ॥ ಟಿ.ವಿ. ನಾಗರಾಜ

ಪ್ರಾಚೀನ ಸಂಸ್ಕೃತಿ ಮತ್ತು ನಾಗರೀಕತೆಗಳ ಉಗಮ ಹಾಗೂ ವಿಕಸನ ಪ್ರಕ್ರಿಯೆಯಲ್ಲಿ ಕೃಷಿಗೆ ಪೂರಕವಾಗಿ ನೀರಾವರಿ ಚಟುವಟಿಕೆಗಳು ಮಹತ್ವ ಪಡೆದಿವೆ. ನೀರಾವರಿ ಚಟುವಟಿಕೆಗಳಲ್ಲಿ ರಾಜರು, ಸಾಮಂತರು, ಅಧಿಕಾರಿಗಳು, ವ್ಯಾಪಾರಿಗಳು, ಅಲ್ಲದೆ ಸ್ಥಳೀಯ ನಾಯಕತ್ವ ಮತ್ತು ಜನಸಮುದಾಯಗಳು ಸಕ್ರಿಯವಾಗಿ ಪಾಲ್ಗೊಳ್ಳುವುದರೊಂದಿಗೆ ವಿಸ್ತರಣೆ ಹೊಂದುತ್ತಾ ಬಂದಿದೆ. ಧಾರ್ಮಿಕ ಮಹೋನ್ನತಿಯ ಉದ್ದೇಶಗಳ ಪ್ರತೀಕವಾಗಿ ಕೃಷಿ–ನೀರಾವರಿ ಚಟುವಟಿಕೆಗಳು ಪ್ರೋತ್ಸಾಹ ಪಡೆದವು. ಈ ಪ್ರಕ್ರಿಯೆ ವಿಜಯನಗರದ ಸಾಮ್ರಾಜ್ಯದ ಕಾಲಘಟ್ಟಕ್ಕೆ ಉಚ್ಛ್ರಾಯ ಸ್ಥಿತಿ ತಲುಪಿದ್ದಿತು. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ಕೃಷ್ಣದೇವರಾಯ ನೀರಾವರಿ ಚಟುವಟಿಕೆಗಳನ್ನು ಕೈಗೊಂಡರೆ, ಕೃಷಿ ಪ್ರಗತಿಹೊಂದಿ ರಾಜ್ಯಾದಾಯ ಅಭಿವೃದ್ಧಿಗೊಳ್ಳುತ್ತದೆ ಎಂದು ಅಪೇಕ್ಷೆ ಪಟ್ಟಿದ್ದರು. ಭೂಕಂದಾಯದ ನೆಲೆಯಲ್ಲಿ ವಿಜಯನಗರದ ಅರಸರು ಪೂರ್ವಮರ್ಯಾದೆಯನ್ನು ಅನುಸರಿಸಿದರು ಎಂದು ಆ ಕಾಲದ ಶಾಸನಗಳು ಸಾರಿಕೊಂಡಿವೆ. ಭೂಕಂದಾಯದ ವ್ಯವಸ್ಥೆಯಲ್ಲಿ ತೆರಿಗೆ ಪ್ರಮಾಣ ನಿಗದಿ, ತೆರಿಗೆ ಹೇರಿಕೆ, ವಸೂಲಿಕ್ರಮ ಅವುಗಳ ಸ್ವರೂಪ ಮಹತ್ವದ ಪಾತ್ರ ವಹಿಸುತ್ತವೆ. ಭೂಕಂದಾಯದ ವ್ಯವಸ್ಥೆ ಗ್ರಾಮಮಟ್ಟದಿಂದ ಪ್ರಭುತ್ವದ ತುತ್ತತುದಿಯವರೆಗೂ ಅತ್ಯಂತ ಕ್ರಮಬದ್ಧವಾಗಿ ರೂಪುಹೊಂದಿತ್ತು. ಕೃಷಿ ಆದಾಯ ರಾಜ್ಯದ ಆದಾಯದಲ್ಲಿ ಗಣನೀಯವಾಗಿದ್ದು, ಅದರ ನಿರ್ವಹಣೆ ಸ್ವಾಭಾವಿಕವಾಗಿ ಆದ್ಯತಾವಲಯವೂ ಆಗಿದ್ದಿತು. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಕುರಿತಂತೆ ಈಗಾಗಲೆ ಹಲವು ಅರ್ಥಪೂರ್ಣ ಅಧ್ಯಯನ–ಚರ್ಚೆಗಳು ವ್ಯಾಪಕವಾಗಿ ನಡೆದಿವೆ.

ರಾಜ್ಯಾದಾಯದ ಪ್ರದಾನ ಮೂಲಗಳಲ್ಲಿ ಒಂದಾದ ಕೃಷಿ ಮತ್ತು ಕೃಷಿಯೇತರ ತೆರಿಗೆಗಳು ಆರ್ಥಿಕ ಇತಿಹಾಸದ ನೆಲೆಯಲ್ಲಿ ಚರ್ಚೆಗೆ ಒಳಪಟ್ಟಿವೆ. 'ದಶವಂದ', 'ಕಟ್ಟುಕೊಡುಗೆ', 'ಮಾನ್ಯ' – ಇತ್ಯಾದಿ ರಿಯಾಯಿತಿ ಹಾಗೂ ಸವಲತ್ತುಗಳು ಸಹ ಚರ್ಚೆಗೆ ಒಳಗಾಗಿವೆ. ಈ ಹಿನ್ನೆಲೆಯಲ್ಲಿ ಕೃಷಿ ವಲಯದ "ನೀರಾವರಿ ತೆರಿಗೆ/ಶುಲ್ಕ" ವಿಜಯನಗರ ಕಾಲಘಟ್ಟದಲ್ಲಿ ಜಾರಿಯಲ್ಲಿ ಇದ್ದಿತೆ? ಇದ್ದಲ್ಲಿ ಅದರ ಸ್ವರೂಪ, ಪ್ರಮಾಣ ಮುಂತಾದ ಆಯಾಮಗಳನ್ನು ಪ್ರಸ್ತುತ ಪ್ರಬಂದದಲ್ಲಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಪ್ರಾಚೀನ ಭಾರತದಲ್ಲಿ ಪ್ರಭುತ್ವಗಳು ನೀರಾವರಿ ಶುಲ್ಕ/ತೆರಿಗೆ ವಿಧಿಸಿದ್ದವೆ? ಇಲ್ಲವೆ? ಎಂಬ ಪ್ರಶ್ನೆ ಪುನಃ ಪುನಃ ಚರ್ಚೆಗೆ ಒಳಗಾಗುತ್ತಿದೆ. ಕೃಷಿಪ್ರಧಾನ ಭಾರತೀಯ ಅರ್ಥವ್ಯವಸ್ಥೆಯಲ್ಲಿ ನೀರಾವರಿ ಆಧಾರಿತ ಕೃಷಿ ಚೌಕಟ್ಟಿನ ಮೇಲೆ ಹೊಂದಿದ್ದ ಹತೋಟಿ ಪ್ರಭುತ್ವಗಳ ಪ್ರಾಬಲ್ಯದ ಸಂಕೇತವೂ ಆಗಿದ್ದಿತು. ಕೃಷಿ ತೆರಿಗೆಗಳು ರೈತರ ಪಾಲಿಗೆ ಹೊರೆಯಾಗಿದ್ದವು. ಈ ನಿಟ್ಟಿನಲ್ಲಿ ವಿದ್ವಾಂಸರಾದ ಎಂ.ಎಚ್. ಗೋಪಾಲ್‌ರವರು 'ನೀರು ತೆರಿಗೆ' ಅಥವಾ 'ಉದಗಬಾಗ' ಎಂಬ ತೆರಿಗೆ ವಿಧಿಸಲಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ನೀರಾವರಿ ಭೂಮಿಯ ಸಾಗುವಳಿದಾರರು 1/5 ಭಾಗ; ನೀರು ಶುಲ್ಕ, ಏತ ನೀರಾವರಿಯ ಉತ್ಪನ್ನದ 1/3 ಭಾಗ; ನದಿ, ಸರೋವರ, ಕೆರೆ, ಬಾವಿಗಳಿಂದ ಉತ್ಪನ್ನದ 1/3 ಭಾಗ ಹಾಗು ಭುಜದ ಮೇಲೆ ನೀರನ್ನು ಹೊರುವ ಸಾಗುವಳಿದಾರರು ಉತ್ಪನ್ನದ 1/4 ಭಾಗ ಸಲ್ಲಿಸಬೇಕಾಗಿತ್ತು ಎಂದು ಅರ್ಥಶಾಸ್ತ್ರದ ಉಲ್ಲೇಖವನ್ನು ಪ್ರತಿಪಾದಿಸುತ್ತಾರೆ. ಈ ಉಲ್ಲೇಖ ಪ್ರಭುತ್ವ ಒಡೆತನ ಕೃಷಿ ಭೂಮಿಗಳಾಗಿದ್ದು, ಪ್ರಭುತ್ವದ ಕೃಷಿ ಅಧಿಕಾರಿಗಳು ನಿರ್ವಹಿಸುತ್ತಿದ್ದರೂ ಸಹ ಪ್ರಭುತ್ವ ಒಡೆತನೇತರ ಭೂಮಿಗಳಿಗೂ ಈ ತೆರವಾದ ತೆರಿಗೆ ವಿಧಿಸಲಾಗುತ್ತಿತ್ತೆ? ಎಂಬುದಕ್ಕೆ ಉಲ್ಲೇಖ ಇಲ್ಲ.

ಪ್ರಾಯಶಃ ಇಲ್ಲಿ ನೀರಾವರಿ ಕಾಮಗಾರಿಗಳು ಪ್ರಭುತ್ವದ ವತಿಯಿಂದ ಬಂಡವಾಳ ಹೂಡಿಕೆಯನ್ನು ಬಯಸುವುದಾದ್ದರಿಂದ ಪ್ರತ್ಯೇಕ ನೀರಾವರಿ ಶುಲ್ಕ/ತೆರಿಗೆ ವಿಧಿಸಲಾಗುತ್ತಿತ್ತು. ಮೆಗಾಸ್ತನೀಸ್‌ನ 'ಇಂಡಿಕಾ'ವನ್ನು ಉಲ್ಲೇಖಿಸುತ್ತಾ ಭೂ ತೆರಿಗೆಯಲ್ಲದೆ ಸಾಗುವಳಿದಾರರು ಖಜಾನೆಗೆ 1/4 ಭಾಗವನ್ನು ಸಲ್ಲಿಸಬೇಕಾಗಿದ್ದಿತು, ಇದು 'ನೀರಾವರಿ ತೆರಿಗೆ'ಯಾಗಿದ್ದಿತು ಎಂದು ಎಂ.ಎಚ್. ಗೋಪಾಲ್ ಅಭಿಪ್ರಾಯಪಡುತ್ತಾರೆ. ಈ ಬಗೆಯ ತೆರಿಗೆ ಸಾಮಾನ್ಯವಾದ ತೆರಿಗೆಯಾಗಿರಲಿಲ್ಲ ಎಂದಿದ್ದಾರೆ. ಇದು ಯಾವುದೇ ಸಮಕಾಲೀನ ಶಾಸನಗಳಲ್ಲಾಗಲಿ ಉಲ್ಲೇಖಿತಗೊಂಡಿಲ್ಲ. ವಿವಿಧ ಬಗೆಯ ತೆರಿಗೆಗಳು ಅನೇಕ ಬಾರಿ ಉಲ್ಲೇಖಗೊಂಡಿದ್ದರೂ ಸಹ ನೀರಾವರಿ ತೆರಿಗೆ ಉಲ್ಲೇಖಗೊಂಡಿರಲಿಲ್ಲ. ರುದ್ರದಾಮನ ಗಿರಿನಾರ್ ಶಾಸನದಲ್ಲಿ ಜನರಿಂದ ಯಾವುದೇ ಬಗೆಯ ತೆರಿಗೆಯಾಗಲಿ ಅಥವಾ ಬಿಟ್ಟಿ ಸೇವೆಯಾಗಲಿ ಪಡೆಯದ ರಾಜನೇ ಸ್ವಂತ ಹಣದಿಂದ ನಿರ್ಮಿಸಲಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಹಲವು ಕೃಷಿಕರು ಸ್ವಂತ ಪರಿಶ್ರಮದಿಂದ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದರು. ಹೀಗಾಗಿ ನೀರಾವರಿ ತೆರಿಗೆ ವಿಧಿಸುವ ಪದ್ಧತಿ ಇರಲಿಲ್ಲ. ಜೊತೆಗೆ ನೀರಾವರಿ ಕಾಮಗಾರಿಗಳನ್ನು ಜಾರಿಗೊಳುಸುವುದು ರಾಜನ ಕರ್ತವ್ಯವೂ ಆಗಿದ್ದಿತು. ಈ ಹಿನ್ನೆಲೆಯಲ್ಲಿ ಪ್ರಾಚೀನ ಕಾಲಘಟ್ಟದಲ್ಲಿ ನೀರಾವರಿ ತೆರಿಗೆ/ಶುಲ್ಕ ಇರಲಿಲ್ಲ ಎಂಬ ವಾದವೂ ಇದೆ.

ವಿಜಯನಗರ ಕಾಲಘಟ್ಟದಲ್ಲಿ ಈಗಾಗಲೆ ತಿಳಿಸಿರುವಂತೆ ವ್ಯಾಪಕ ಪ್ರಮಾಣದ, ಅತ್ಯಂತ ವ್ಯವಸ್ಥಿತ ನೀರಾವರಿ ಚೌಕಟ್ಟು ಅಸ್ತಿತ್ವ ಪಡೆದಿದ್ದಿತು. ಈ ಕಾಲಘಟ್ಟದಲ್ಲಿ ಕೃಷಿ ತೆರಿಗೆಯಂತೆ "ನೀರಾವರಿ ತೆರಿಗೆ/ಶುಲ್ಕ" ಎಂಬ ಪರಿಕಲ್ಪನೆ ಇದ್ದಿತೆ? ಇಲ್ಲವೆ? ವಿಜಯನಗರದ ಶಾಸನಗಳಲ್ಲಿ "ಏರಿಆಯಂ" (ತಮಿಳು ಶಾಸನಗಳು) "ಚೆರುವು-ಪಿಂಚಲು" (ಆಂಧ್ರದ ತೆಲುಗು ಶಾಸನಗಳು), "ನೀರು-ಬಂದ" (ಕನ್ನಡದ ಶಾಸನಗಳು) ಉಲ್ಲೇಖನ ಇದ್ದು 'ವಸ್ತುರೂಪದ' ತೆರಿಗೆ/ಶುಲ್ಕ ಜಾರಿಯಲ್ಲಿದ್ದುದು ಕಂಡುಬರುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ಕಾಮಗಾರಿಗಳ ನಿರ್ವಹಣೆಗಾಗಿ ನೀರಾವರಿ ಸೌಲಭ್ಯ ಹೊಂದಿದ ಸಾಗುವಳಿದಾರರು 'ನೀರಾವರಿ' ತೆರಿಗೆ/ಶುಲ್ಕ ಪಾವತಿಸುತ್ತಿದ್ದರು. ಈ ತೆರನಾದ ತೆರಿಗೆ ಸಾಮಾನ್ಯವಾಗಿ ವಸ್ತುರೂಪದಲ್ಲಿದ್ದಿತು. ಸಾಮ್ರಾಜ್ಯದಲ್ಲಿ ಬಹುತೇಕ ನೀರಾವರಿ ಕಾಮಗಾರಿಗಳ ನಿರ್ವಹಣೆಗಾಗಿ ಕೂಲಿಕಾರರಿಗೆ-ಶ್ರಮಜೀವಿಗಳಿಗೆ ಧಾನ್ಯದ ರೂಪದಲ್ಲಿ ಪಾವತಿ ಮಾಡುತ್ತಿದ್ದುದು ಸಾಮಾನ್ಯ. ಸ್ಥಳೀಯ ಹಂತದಲ್ಲಿ ಅನುಷ್ಠಾನಗೊಳ್ಳುತ್ತಿದ್ದಂತಹ ಕಾಮಗಾರಿಗಳಿಗೆ, ಸ್ಥಳೀಯ ಹಂತದಲ್ಲಿ ತೆರಿಗೆ ಹೇರುವ, ಸಂಗ್ರಹಿಸುವ, ಮತ್ತು ಪಾವತಿಸುವ ಸಾಂಸ್ಥಿಕ ಚಟುವಟಿಕೆಯಿದ್ದಿತು. ಪ್ರತಿ 'ಪುಟ್ಟಿ'ಗೆ ಒಂದು 'ಕುಂಚ'ದಷ್ಟು ಧಾನ್ಯವನ್ನು ನೀರಾವರಿ ತೆರಿಗೆ ರೂಪದಲ್ಲಿ ಕಾಮಗಾರಿಗಳ ನಿರ್ವಹಣೆಗಾಗಿ ವಿಧಿಸಲಾಗುತ್ತಿತ್ತು. ನಲ್ಲೂರು ಜಿಲ್ಲೆಯ ಅನೇಕ ಶಾಸನಗಳು ಈ ಬಗ್ಗೆ ಸ್ಪಷ್ಟ ಬೆಳಕು ಚೆಲ್ಲುತ್ತಿವೆ. ಹೀಗಾಗಿ ವಿಜಯನಗರ ಕಾಲಘಟ್ಟದಲ್ಲಿ "ನೀರಾವರಿ" ತೆರಿಗೆ/ಶುಲ್ಕ ಎಂಬುದು ಅಸ್ತಿತ್ವದಲ್ಲಿದ್ದಿತು. ಇಂತಹ ನೀರಾವರಿ ತೆರಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಹೆಸರುಗಳಿಂದ ಕರೆಯಲಾಗುತ್ತಿತ್ತು. ಉದಾ: 'ಏರಿ ಆಯಂ' (ತಮಿಳುನಾಡು), ಚೆರುವು-ಪಿಂಚಲು (ಆಂಧ್ರಪ್ರದೇಶ), ಮತ್ತು 'ನೀರು ಬಂದ' (ಕರ್ನಾಟಕ).

ಹಲವು ಸಂದರ್ಭಗಳಲ್ಲಿ ರಾಜರು, ಆಡಳಿತಗಾರರು, ಕೃಷಿಗೆ ಅದರಲ್ಲೂ ವಿಶೇಷವಾಗಿ ನೀರಾವರಿ ಆಧಾರಿತ ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹಿಸಿ ವಿವಿದ ಬಗೆಯ ರಿಯಾಯಿತಿಗಳನ್ನು ವಿಸ್ತರಿಸಿರುವುದು ಕಂಡುಬಂದಿದೆ. ಹೊಸ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ಸಂದರ್ಭಗಳಲ್ಲಿ, ಅಚ್ಚುಕಟ್ಟನ್ನು ಸಮತಟ್ಟುಗೊಳಿಸುವುದು, ಬದುಗಳನ್ನು ಹಾಕುವುದು, ಕಾಲುವೆಗಳನ್ನು ನಿರ್ಮಿಸುವುದು ಅಗತ್ಯವಾಗಿದ್ದವು. ಬಹುತೇಕ ಸಂದರ್ಭಗಳಲ್ಲಿ ಅಚ್ಚುಕಟ್ಟುದಾರರರು ಸ್ವಯಂಪ್ರೇರಿತರಾಗಿ ಕಾರ್ಯೋನ್ಮುಖರಾಗುತ್ತಿದ್ದರು. ಪ್ರಾರಂಭದಲ್ಲಿ ಇಂತಹ ಕಾಮಗಾರಿಗಳು ಲಾಭದಾಯಕವಾಗಿರುವುದಿಲ್ಲ. ಹೀಗಾಗಿ ಆಡಳಿತಗಾರರು ಸಾಗುವಳಿದಾರರಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿರುವುದು ಕಂಡುಬಂದಿದೆ. ಇಂತಹ ರಿಯಾಯಿತಿ ಹಲವು ಸಂದರ್ಭಗಳಲ್ಲಿ ಕೆಲವು ಆರಂಭಿಕ ವರ್ಷಗಳಲ್ಲಿ ಮಾತ್ರ ಸೀಮಿತವಾಗಿತ್ತು.

ಎರಡನೇ ದೇವರಾಯನ ಕಾಲದ ಕ್ರಿ.ಶ. 1497ರ ನೆಲ್ಲೂರು ಜಿಲ್ಲೆಯ ಕೊಂಡದ ಶಾಸನದಲ್ಲಿ ದೇವಾಲಯದ ಭೂಮಿಯ ಸಾಗುವಳಿಗಾಗಿ ಕೆರೆ ನೀರನ್ನು ನೀಡಿದ್ದು, ಅದಕ್ಕಾಗಿ ತೆರಿಗೆ ವಿಧಿಸಿದ್ದನ್ನು ದಾಖಲಿಸಿದೆ. ಅದರಲ್ಲೂ ಪ್ರತಿ 'ಪುಟ್ಟಿ'ಗೆ ಐದು 'ತೂಮು' ತೆರಿಗೆ ವಿಧಿಸಿದೆ. ಈ ಹಿಂದೆ ವಿಧಿಸಿದ್ದ ತೆರಿಗೆಯನ್ನು ದೇವಾಲಯದ ಸಂದರ್ಭದಲ್ಲಿ ವಿನಾಯಿತಿ ನೀಡಿತ್ತು. ಕ್ರಿ.ಶ. 1471ರ ಶಾಸನವೊಂದರಲ್ಲಿ ಅಧಿಕಾರಿಯು ಕೆರೆಯ ದುರಸ್ತಿ ಕೈಗೊಂಡಿದ್ದಕ್ಕಾಗಿ ತೆರಿಗೆ ರಿಯಾಯಿತಿ ನೀಡಿದ್ದನ್ನು ದಾಖಲಿಸಿದೆ. "ಏರಿ ಆಯಂ" (ಕೆರೆ-ಶುಲ್ಕ) ಎಂಬ ಸ್ಥಳೀಯ ತೆರಿಗೆಯನ್ನು ಸಾಗುವಳಿದಾರರು ಕೆರೆಯಲ್ಲಿ ನಿಂತಿದ್ದ ನೀರನ್ನು ತಮ್ಮ ಜಮೀನುಗಳಿಗೆ ಕಾಲುವೆಗಳನ್ನು ತೋಡಿ ಹರಿಸಿಕೊಂಡಿದ್ದಕ್ಕೆ ಸಂಗ್ರಹಿಸಿ, ನಿರ್ವಹಣೆಗಾಗಿ ಬಳಸಿಕೊಂಡಿರುವುದು ಕಂಡುಬಂದಿದೆ. ಎರಡು ತಮಿಳುಶಾಸನಗಳಲ್ಲಿ 'ನೀರುಕುಳಿ' ಎಂಬ ತೆರಿಗೆಯ ಪ್ರಸ್ತಾಪ ಇದೆ. ಚೆಂಗಲ್ ಪೇಟೆ ಜಿಲ್ಲೆಯ ಕೊಡೆಯಂಗಿ ಶಾಸನದಲ್ಲಿ ಭಟ್ಟವೃತ್ತಿ ಭೂಮಿಗೆ 'ನೀರ್-ಕುಳಿ' ಪ್ರಮಾಣವನ್ನು ರಾಜಪ್ರಧಾನಿ ಅಂಗಮಯ್ಯನಯನಾರ್ ನಿಗದಿ ಪಡಿಸಿದ್ದನ್ನು ದಾಖಲಿಸಿದೆ. ಹೀಗಾಗಿ ಭಟ್ಟವೃತ್ತಿ ಮಾನ್ಯದ ನೀರಾವರಿ ಭೂಮಿಗಳಿಗೂ ನೀರಾವರಿ ತೆರಿಗೆಯಿಂದ ವಿನಾಯಿತಿ ಇರಲಿಲ್ಲ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಉತ್ತರ ಆರ್ಕಾಟ್ ಜಿಲ್ಲೆಯ ರಾಯರ್‌ರೋಪೆರಂನ ಶಾಸನದಲ್ಲಿ 'ನೀರ್-ಕುಳಿ' ವಿನಾಯಿತಿ ದಾಖಲಾಗಿದೆ. ನೆಲ್ಲೂರು ಜಿಲ್ಲೆಯ ಶಾಸನವೊಂದರಲ್ಲಿ ಸಾಳುವ ಮೊಪರಸಯ್ಯ ಕೆರೆಯ ದುರಸ್ತಿಗೆ ಜಮ್ಮಲಮಡವು ಗ್ರಾಮಸ್ಥರು ಸಂಗ್ರಹಿಸಿದ ಆರು ಕುಂಚಲು "ಚೆರುವು-ಕುಂದಲು" ತೆರಿಗೆಗಳನ್ನು ನೀಡುತ್ತಾನೆ. ಹಂಪೆಯ ಕ್ರಿ.ಶ. 1513ರ ಶಾಸನದಲ್ಲಿ ವಿರೂಪಾಕ್ಷ ದೇವಾಲಯದ ಪರವಾಗಿ ಹೇರಿದ್ದ ತೆರಿಗೆ ಕಾಲುವೆಯ "ನೀರ್-ಬಂದ" ಉಲ್ಲೇಖಿತವಾಗಿದೆ. ಇಲ್ಲಿ ಕಾಲುವೆಯಿಂದ ಅಥವಾ ಕೆರೆ-ಕಾಲುವೆ ಮೂಲಕ ಸರಬರಾಜಾದ ನೀರಿಗೆ ತೆರಿಗೆ ವಿಧಿಸಿರುವುದು ದೃಢಪಟ್ಟಿದೆ. ಕೆಂಪಣ್ಣ ಒಡೆಯನ ಕಾಲದಲ್ಲಿ ತಿರುವಂಗೈದಾಸಲ್‌ನ ಕೆರೆ ಒಡೆದುಹಾಳಾಗಿದ್ದಿತು. ಇದಕ್ಕಾಗಿ 'ಪಡಿಕ್ಕಾವಲ್' ಎಂಬ ನೀರ-ತೆರಿಗೆಯನ್ನು ಕೆರೆಯ ದುರಸ್ತಿಗಾಗಿ ವಿನಿಯೋಗಿಸಿದ್ದನ್ನು ದಾಖಲಿಸಿದೆ.

ನೆಲ್ಲೂರು ಜಿಲ್ಲೆಯ ಹಲವು ಶಾಸನಗಳಲ್ಲಿ ಕೆರೆಗಳ ನಿರ್ವಹಣೆಗಾಗಿ ವಾರ್ಷಿಕ ಪ್ರತಿ "ಪುಟ್ಟಿ"ಗೆ ಒಂದು "ಕುಂಚ"ದ ಪ್ರಮಾಣದ ಧಾನ್ಯರೂಪದ ತೆರಿಗೆ ವಿಧಿಸುತ್ತಿದ್ದುದು ಪ್ರಸ್ತಾಪವಾಗಿದೆ. ಚಿತ್ತೂರು ಜಿಲ್ಲೆಯ ಧರಣೆವರಾಹಪುರಂ ಶಾಸನದಲ್ಲಿ ಇದೇ ತೆರವಾದ ನೀರು ತೆರಿಗೆ ವಿಧಿಸಿದ್ದನ್ನು ಉಲ್ಲೇಖಿಸಿದೆ. ನೆಲ್ಲೂರು ಜಿಲ್ಲೆಯ ಪಲ್ಲೆರು ಶಾಸನದಲ್ಲಿ ನೀರಾರಂಭದ ಉತ್ಪನ್ನದ ನಾಲ್ಕರಲ್ಲಿ ಒಂದು ಪಾಲು ಪ್ರಭುತ್ವಕ್ಕೂ, ಎರಡು ಪಾಲು ಸಾಗುವಳಿದಾರರಿಗೂ ಹಂಚಿಕೆಯಾಗುತ್ತಿತ್ತು. ಪ್ರಭುತ್ವದ ಪಾಲಿನ ಹಣವನ್ನು ನೀರಾವರಿ ಕಾಮಗಾರಿಗಳ ನಿರ್ವಹಣೆಗೆ ವಿನಿಯೋಗಿಸಲಾಗುತ್ತಿತ್ತು. ಕ್ರಿ.ಶ. 1565ರ ಶಾಸನವೊಂದು ಧಾನ್ಯರೂಪದ ತೆರಿಗೆ ಪ್ರಸ್ತಾಪಿಸುತ್ತಾ, ಕೆರೆಯ ನಿರ್ವಹಣೆಯ ವೆಚ್ಚಕ್ಕಾಗಿ ಭರಿಸಲು ವಿಧಿಸಲಾಗುತ್ತಿತ್ತು ಎಂದು ದಾಖಲಿಸಿದೆ. ಈ ಹಿಂದೆ ಇಲ್ಲಿನ ಧಾನ್ಯರೂಪದ ನೀರಾವರಿ ತೆರಿಗೆ ಪ್ರತಿ 'ಪುಟ್ಟಿ'ಗೆ ಒಂದು 'ಕುಂಚಲು' ವಿಧಿಸಲಾಗುತ್ತಿದ್ದು, ಅದನ್ನು ಪ್ರತಿ 'ಪುಟ್ಟಿ'ಗೆ ಇನ್ನು ಮುಂದೆ ಎರಡು 'ಕುಂಚಲು'ಗೆ ಪರಿಷ್ಕರಣೆಗೊಂಡಿದ್ದನ್ನು ದಾಖಲಿಸಿದೆ. ಉದಯಗಿರಿ ಸೀಮೆಯ ಜುಟೂರು ಗ್ರಾಮದ ಕೆರೆಯ ನಿರ್ವಹಣೆಗೆ ಪ್ರತಿ 'ಪುಟ್ಟಿ' ಉತ್ಪನ್ನಕ್ಕೆ ಒಂದು 'ಕುಂಚಲು' ಮೊರ ಸಂಗ್ರಹಿಸುತ್ತಿದ್ದುದನ್ನು ನೆಲ್ಲೂರು ಜಿಲ್ಲೆಯ ತಲ್ಲಿಪಾಲೆಂನ ಕ್ರಿ.ಶ. 1636ರ ಶಾಸನ ದಾಖಲಿಸಿದೆ. ಇದೇ ರೀತಿ ಕ್ರಿ.ಶ. 1645ರ ಕೊಡೂರು ಶಾಸನದಲ್ಲಿ ಎಲ್ಲಾ ಬಗೆಯ ಕೃಷಿ ಉತ್ಪನ್ನಗಳ ಮೇಲೆ ಒಂದು 'ಕುಂಚಲು' 'ಮೊರ' ವಿಧಿಸಿ, ಕೆರೆಯ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿತ್ತು ಎಂದು ಉಲ್ಲೇಖಿಸಿದೆ. ದರಬಾಡ-ಪಾಡುವಿನ ಕೆರೆಯ ಅಚ್ಚುಕಟ್ಟಿನ ಎಲ್ಲಾ ಬಗೆಯ ಭೂಮಿಗಳ ಮೇಲೂ (ದೇವಾಲಯ, ಬ್ರಹ್ಮದೇಯ, ಮಾನ್ಯದ ಭೂಮಿ - ಇತ್ಯಾದಿ) ವೇಲಂಗೋಟ ವೆಂಕಟಪತಿನಾಯನಗಾರು ಧಾನ್ಯರೂಪದಲ್ಲಿ ಮೇರ ಸಂಗ್ರಹಿಸಲು ಆದೇಶಿಸಿದ್ದು ದಾಖಲಾಗಿದೆ. ಇಲ್ಲಿ ಸಹ ಪ್ರತಿ 'ಪುಟ್ಟಿ'ಗೆ ಒಂದು 'ಕುಂಚಲು' ಪ್ರಮಾಣದ ತೆರಿಗೆ ಪ್ರಸ್ತಾಪ ಇದೆ.

ಆದರೆ ತುಮ್ಮಲಕಲಾಪುರದ ಶಾಸನದಲ್ಲಿ ಪ್ರತಿ 'ಪುಟ್ಟಿ'ಗೆ ಎರಡು 'ಕುಂಚಲು' ವಿಧಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಪ್ರಾಯಶಃ ಇಲ್ಲಿ ನಿರ್ವಹಣಾ ಕಾರ್ಯದ ಅಗಾಧತೆ ತೆರಿಗೆ ಪ್ರಮಾಣದ ಹೆಚ್ಚಳಕ್ಕೂ ಕಾರಣವಾಗಿರಬೇಕು.

ಮಧ್ಯಕಾಲೀನ ಯುಗದ ಆರಂಭಿಕ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ತೆರಿಗೆ/ಶುಲ್ಕದ ಪ್ರಸ್ತಾಪಗಳು ಸ್ಪಷ್ಟವಾಗಿ ಕಂಡುಬಂದಿದೆ. ನೀರಾವರಿ ಕಾಮಗಾರಿಗಳು ಪ್ರಭುತ್ವಕ್ಕೆ ವೆಚ್ಚದ ಬಾಬುಗಳಾಗಿರುವುದಲ್ಲದೆ, ಅವು ಕೃಷಿಕರಿಗೆ ಲಾಭದಾಯಕವೂ ಆಗಿದ್ದವು. ಹೀಗಾಗಿ ಉತ್ಪನ್ನದ ಸ್ವಲ್ಪ ಭಾಗವನ್ನು ತೆರಿಗೆ/ಶುಲ್ಕ ರೂಪದಲ್ಲಿ ಸಲ್ಲಿಸುವುದು ಅಸಂಭವವಾಗಿರಲಿಲ್ಲ ಎಂದು ಅಭಿಪ್ರಾಯಪಡಬಹುದಾಗಿದೆ. ಏನೇ ಆದರೂ ಇದನ್ನು "ಹೆಚ್ಚುವರಿ ಆದಾಯ ಕ್ರೋಡೀಕರಿಸುವ ಒಂದು ಮಾದರಿಯಾಗಿದ್ದಿತು" ಎಂದು ಅಭಿಪ್ರಾಯಪಡಬಹುದು. ಈ ಬಗೆಯ ನೀರಾವರಿ ತೆರಿಗೆ/ಶುಲ್ಕ ರೈತರ–ಕೃಷಿಕರ--ಸಾಗುವಳಿದಾರರ ಪಾಲಿಗೆ ಹೊರೆಯಾಗಿದ್ದಿತೆ? ನೀರಾವರಿ ಆಧಾರಿತ ಭೂಮಿಗಳು ಕಂದಾಯದ ಪ್ರಮಾಣದ ಉತ್ಪನ್ನದ ಅರ್ಧಪಾಲು ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ಹಿನ್ನೆಲೆಯಲ್ಲಿ ಕೆರೆ, ಕಾಲುವೆ, ನದಿ ಮೂಲಗಳಿಂದ ನೀರಾವರಿ ಸೌಲಭ್ಯಹೊಂದಿರುವ ಭೂ ಸಾಗುವಳಿದಾರರು ಸ್ವಲ್ಪಮಟ್ಟಿನ ಹೆಚ್ಚಿನ ತೆರಿಗೆ ಬಾರ ಹೊಂದಿದ್ದುದು ಅಸಂಭವವೇನಲ್ಲ ! ತಿರುಚಿನಾಪಳ್ಳಿ ಜಿಲ್ಲೆಯ ಅಡುಯರೈ ಶಾಸನದಲ್ಲಿ ಊಗಳೂರು ಕರಂಜರಸಲ್ಲೈನ ಹನ್ನೆರಡು ಗ್ರಾಮದ ಸಾಗುವಳಿದಾರರು ದುಬಾರಿ ತೆರಿಗೆ ಪಾವತಿಮಾಡಲಾಗದೆ, ಸಾಗುವಳಿ ಬಿಟ್ಟುಕೊಂಡುದನ್ನು ದಾಖಲಿಸುತ್ತಾ, ಸ್ಥಳೀಯ ಪ್ರತಿನಿಧಿ ಪ್ರತಿ 'ಕುಳಿ' ನೀರಾವರಿ ಭೂಮಿಗೆ ಎಂಟು ಪಣ ಪುನಃ ನಿಗದಿಮಾಡಿದನ್ನು ದಾಖಲಿಸಿದೆ.

ವಿಜಯನಗರ ಕಾಲದಲ್ಲಿ ನೀರಾವರಿ ತೆರಿಗೆ/ಶುಲ್ಕ ಏಕರೂಪವಾಗಿದ್ದಿತೆ? ಸಾಮ್ರಾಜ್ಯದಾದ್ಯಂತ ನೀರಾವರಿ ತೆರಿಗೆ ಏಕರೂಪದ್ದಾಗಿರಲಿಲ್ಲ. ಇದು ಪ್ರದೇಶದಿಂದ ಪ್ರದೇಶಕ್ಕೆ ಅಷ್ಟೆ ಅಲ್ಲದೆ, ಭೂಮಿಯ ಸ್ವರೂಪ, ಮಣ್ಣಿನ ಫಲವತ್ತತೆ ಉತ್ಪನ್ನದ ಪ್ರಮಾಣ ಹಾಗು ಲ್ಯಾಂಡ್ ರೆವಿನ್ಯೂಗಳನ್ನು ಅವಲಂಬಿಸಿದ್ದಿತು. ಒಂದು 'ತೂಬು' ಬಿತ್ತನೆ ಪ್ರಮಾಣದ ಭೂಮಿಯನ್ನು ಒಂದು 'ಘಟಕ'ವಾಗಿ ಪರಿಗಣಿಸಿ, 8 ವರಾಹ ಪ್ರಮಾಣದ ನೀರಾವರಿ ತೆರಿಗೆ/ಶುಲ್ಕ ವಿಧಿಸಲಾಗುತ್ತಿತ್ತು. ಈ ತೆರವಾದ ನೀರಾವರಿ ತೆರಿಗೆ ಏಕರೂಪ ಆಗಿರಲಿಲ್ಲ ಮತ್ತು ಎಲ್ಲಾ ನೀರಾವರಿ ಬೆಳೆಗಳಿಗೂ ಒಂದು ರೂಪದಲ್ಲಿ ಅನ್ವಯವಾಗುತ್ತಿರಲಿಲ್ಲ !

ಪ್ರಸ್ತುತ ಅಧ್ಯಯನದಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ, ನೀರಾವರಿ ತೆರಿಗೆ/ಶುಲ್ಕವನ್ನು ವಿಧಿಸುತ್ತಿದ್ದುದು, ಸಂಗ್ರಹಿಸುತ್ತಿದ್ದುದು, ವಿನಿಯೋಗಿಸುತ್ತಿದ್ದುದು ಸ್ಥಳೀಯ ಹಂತದಲ್ಲಿಯ, ಸಾಮ್ರಾಜ್ಯದ ಪ್ರಮುಖ ಆದಾಯದ ಮೂಲವಾದ ಕೃಷಿ, ಭೂ ಕಂದಾಯ ಪಟ್ಟಿಯಲ್ಲಿ ಕೇಂದ್ರೀಕೃತಿಗೊಂಡಿದ್ದರೆ, ನೀರಾವರಿ ತೆರಿಗೆ/ಶುಲ್ಕ ವಿಕೇಂದ್ರಿಕೃತಿಗೊಂಡಿದ್ದು ಗಮನಾರ್ಹವಾದುದು. ಜೊತೆಗೆ ಸ್ಥಳೀಯ ಹಂತದಲ್ಲಿ ಸಂಗ್ರಹಿಸಲಾಗುತ್ತಿದ್ದ ವಸ್ತುರೂಪದ 'ಧಾನ್ಯ'ವನ್ನು ಕಾಮಗಾರಿಗಳ ನಿರ್ವಹಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದುದು ಸಾಮಾನ್ಯ ಪ್ರಕ್ರಿಯೆ ಆಗಿದ್ದಿತು. ಈ ತೆರನಾದ ಆದಾಯದ ನಿರ್ವಹಣೆಗೆ ಪ್ರಭುತ್ವ ಯಾವುದೇ ಬಗೆಯ ಆಡಳಿತಾತ್ಮಿಕ ವೆಚ್ಚದಿಂದ ಮುಕ್ತವಾಗಿದ್ದಿತು. ತೆರಿಗೆ ಸುಧಾರಣಾ ಪ್ರಕ್ರಿಯಗಳಲ್ಲಿ ಇಂತಹದೊಂದು ಪ್ರಯೋಗ ಅನುಕರಣೀಯವಲ್ಲವೆ ?

ಗ್ರಂಥಋಣ

1. *Annual Reports for Indian Epigraphy.*
2. *South Indian Inscriptions* volumes.
3. *Epigraphia Carnatika* volumes
4. *Inscriptions of Vijayanagara Empire.*

5. Appadorai A., *Economic Conditions in South India,* 2 vols., Madras.
6. Das D., *Economic History of the Deccan.*
7. Gopal B.R., *Vijayanagara Inscriptions,* Mysore.
8. C.T.M. Kotraiah, *Irrigation Systems under Vijayanagar Empire.*
9. Mahalingam T.V., *Administration and Social Life Under Vijayanagar,* Madras.
10. Mahalingam T.V., *South Indian Polity*, Madras.
11. Saletore B.A., *Social and Political Life under Vijayanagar,* Madras.
12. ಎನ್.ಎಸ್. ವಾಸುದೇವ್, ಹಂಪಿ ಪರಿಸರದ ಕೆರೆಗಳು.
13. ನಾಗರಾಜ ಟಿ.ವಿ., ಮೈಸೂರು ಸಂಸ್ಥಾನದಲ್ಲಿ ನೀರಾವರಿ
14. ದೀಕ್ಷಿತ್ ಜಿ.ಎಸ್., ಕರ್ನಾಟಕದಲ್ಲಿ ಕೆರೆ ನೀರಾವರಿ
15. Dominic J. and Jenli Kiris, *The Irrigation and Water Supply Systems of Vijayanagara,* Delhi.

37. ತುಮಕೂರು ಜಿಲ್ಲೆಯಲ್ಲಿ ವಿಜಯನಗರ ಕಾಲದ ಸೀಮೆಗಳು

ಡಾ. ಎನ್. ನಂದೀಶ್ವರ

ತುಮಕೂರು ಜಿಲ್ಲೆ ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಹೊಂದಿಕೊಂಡಂತಿದ್ದು ಕೇವಲ 71 ಕಿ.ಮೀ. ದೂರದಲ್ಲಿದ್ದು, ಬಯಲು ಸೀಮೆಯ ಒಂದು ಪ್ರಮುಖವಾದ ಜಿಲ್ಲೆಯಾಗಿದೆ. ವಿದ್ಯಾಕ್ಷೇತ್ರದಲ್ಲಿ ಜಿಲ್ಲೆಯು ಮಹತ್ತರ ಸ್ಥಾನವನ್ನು ಹೊಂದಿದ್ದು, ವೈದ್ಯಕೀಯ, ತಾಂತ್ರಿಕ ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಹೊಂದಿ, ಪ್ರಮುಖ ಸ್ಥಾನ ಪಡೆದಿದೆ. ಜಿಲ್ಲೆಯು ಹತ್ತು ತಾಲ್ಲೂಕುಗಳನ್ನು ಹೊಂದಿ ಇವು ತುಮಕೂರು, ಮಧುಗಿರಿ, ತಿಪಟೂರು ಎಂಬ ಮೂರು ಉಪ ವಿಭಾಗಗಳನ್ನು ಹೊಂದಿವೆ. ತುಮಕೂರು ಉಪವಿಭಾಗದಲ್ಲಿ ತುಮಕೂರು, ಕುಣಿಗಲ್ ಮತ್ತು ಗುಬ್ಬಿ; ಮಧುಗಿರಿ ಉಪವಿಭಾಗದಲ್ಲಿ ಮಧುಗಿರಿ, ಸಿರ, ಕೊರಟಗೆರೆ ಮತ್ತು ಪಾವಗಡ ಹಾಗೂ ತಿಪಟೂರು ಉಪವಿಭಾಗದಲ್ಲಿ ತಿಪಟೂರು, ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು ಸೇರಿರುತ್ತವೆ. ಜಿಲ್ಲೆಯು ಉತ್ತರಕ್ಕೆ ಚಿತ್ರದುರ್ಗ ಹಾಗೂ ಆಂಧ್ರಪ್ರದೇಶದ ಅನಂತಪುರ; ದಕ್ಷಿಣಕ್ಕೆ ಮಂಡ್ಯ; ಪೂರ್ವಕ್ಕೆ ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಪಶ್ಚಿಮಕ್ಕೆ ಹಾಸನ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದೆ. ಬ್ರಿಟಿಷ್ ಕಮೀಶನರುಗಳ ಕಾಲದಲ್ಲಿ 1832ರಲ್ಲಿ ತುಮಕೂರು ಡಿವಿಜನ್ ಆಗಿತ್ತು. 1863ರಲ್ಲಿ ಈ ಡಿವಿಜನ್ ರದ್ದಾಗಿ ತುಮಕೂರು ಜಿಲ್ಲೆಯನ್ನು ನಂದಿದುರ್ಗ ಡಿವಿಜನ್‌ಗೆ ಸೇರಿಸಲಾಗಿತ್ತು. ಮತ್ತೆ 1886ರಲ್ಲಿ ಚಿತ್ರದುರ್ಗವನ್ನು ಜಿಲ್ಲೆಯನ್ನಾಗಿ ಮಾರ್ಪಡಿಸಿದಾಗ ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆಯಲ್ಲಿ ಸೇರ್ಪಡೆಯಾಯಿತು. ತರುವಾಯ ಈ ಜಿಲ್ಲೆ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಒಂದಾಯಿತು.

ಹೊಯ್ಸಳರ ಅವನತಿಯ ನಂತರ ತುಮಕೂರು ಜಿಲ್ಲೆಯನ್ನೊಳಗೊಂಡ ಹೊಯ್ಸಳ ರಾಜ್ಯವು ವಿಜಯನಗರ ಸಾಮ್ರಾಜ್ಯದೊಡನೆ ವಿಲೀನಗೊಂಡಿತು. ಈ ಕಾಲದ ವಿಷಯವನ್ನು ಹೊರಗೆಡಹುವ ನೂರಮೂವತ್ತನಾಲ್ಕಕ್ಕೂ ಅಧಿಕ ಶಾಸನಗಳು ದೊರೆತಿವೆ.

ಶಾಸನಗಳಲ್ಲಿ ಗಮನಿಸಬೇಕಾದ ಒಂದು ಮುಖ್ಯ ಸಂಗತಿಯೆಂದರೆ 'ಸೀಮೆ'ಯೆಂದು ಪ್ರಯೋಗವಾಗಿರುವ ಆಡಳಿತ ಘಟಕಗಳು ಸು. ಕ್ರಿ.ಶ. 1400ರ ನಂತರದವಾಗಿರುವುದು. ಅಂದರೆ ಸು. ಕ್ರಿ.ಶ. 1400ರ ನಂತರದಲ್ಲಿ ವಿಜಯನರದ ಅರಸರ ಕಾಲದಲ್ಲಿ ಹೊಸದಾಗಿ ಸೇರ್ಪಡೆಯಾದ ನಾಡಿನ ಸಮಾನಾಂತರದ ಆಡಳಿತ ಘಟಕವೇ 'ಸೀಮೆ'. ಆದ್ದರಿಂದ 'ಸೀಮೆ' ಎಂಬುದು ಕೇವಲ ತೆಲುಗು ಪ್ರದೇಶಗಳಿಗೆ ಮಾತ್ರ ಸೀಮಿತವಾದವು ಎಂಬ ಅಭಿಪ್ರಾಯ ತಪ್ಪಾಗುತ್ತದೆ.[1] ಹಾಗೇ ಸೀಮೆಯ ಕೆಳಗಿನ ಸ್ತರದಲ್ಲಿ ಹೋಬಳಿ, ಸ್ಥಳ ಎಂದು ಉಲ್ಲೇಖವಾಗಿರುವುದು ವಿಜಯನಗರೋತ್ತರ ಕಾಲದ ಬೆಳವಣಿಗೆಯಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಅಂದರೆ ಹಲವಾರು ಸ್ಥಳಗಳನ್ನು ಒಟ್ಟುಗೂಡಿಸಿ ಸೀಮೆ ಎಂದು ಕರೆಯಲಾಗುತ್ತಿತ್ತು. ಸೀಮೆ ಎಂಬ ಪ್ರದೇಶವಾಚಕ ಪದವನ್ನು ನಾಡಿಗೆ ಪರ್ಯಾಯವಾಗಿ ಬಳಸಿರುವುದು ಉಂಟು.[2] ಆದುದರಿಂದ ಇದನ್ನು ನಾಡು ಎಂಬುದಕ್ಕೆ ಪರ್ಯಾಯ ಪದವಾಗಿ ಬಳಸಲಾಗುತ್ತದೆ. ಅಲ್ಲದೆ ಆಡಳಿತದ ಅನುಕೂಲಕ್ಕಾಗಿ ರಚಿಸಿಕೊಂಡ ಗ್ರಾಮಗಳ ಒಂದು ಕೃತಕ ಗುಂಪನ್ನು ಸೂಚಿಸುವಂತಹದು.

ತುಮಕೂರುಸೀಮೆ

ಗುಬ್ಬಿ ತಾಲ್ಲೂಕು ಚೇಳೂರಿನ ವೆಂಕಟಪತಿ ಜೋಯಿಸರ ವಶದಲ್ಲಿದ್ದ ತಾಮ್ರಶಾಸನವು 1403ರ ಕಾಲದ್ದಾಗಿದೆ. (ಕೃಷ್ಣರಾಯರ ತಂದೆ) ಅಚ್ಯುತರಾಯರು ಪೆನಗೊಂಡೆಯಿಂದ ರಾಜ್ಯಭಾರಮಾಡುತ್ತಿರುವಾಗ ವೆಂಕಟಸೋಮಯ್ಯಾಜಿಗಳಿಗೆ

ಪಿತೃಗಳಿಗೆ ಸ್ವರ್ಗಾದಿಭೋಗಗಳಾಗಬೇಕೆಂದು ತುಮಕೂರು ಸೀಮೆಯ ಚೇಳೂರು ಹೋಬಳಿಯ ಕೊಡಿಯಾಲ ಗ್ರಾಮವನ್ನು ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.[3] ತುಮಕೂರು ಸೀಮೆಯಾಗಿದ್ದು, ಮುಂದೆ ಇದು ಜಿಲ್ಲಾ ಕೇಂದ್ರವಾಗಿದೆ. ಈ ಸೀಮೆಗೆ ಗುಬ್ಬಿ ತಾಲ್ಲೂಕಿನ ಚೇಳೂರು ಹಾಗೂ ಕೋಡಿಯಾಲ ಗ್ರಾಮವು ಸೇರಿತ್ತು.

ಆಲೂರುಸೀಮೆ

ಗುಬ್ಬಿ ತಾಲ್ಲೂಕಿನ ಕಡಬದ ಅಮಾನಿಕೆರೆಯ ಪೂರ್ವಕೋಡಿಯ ಬಳಿ ನೆಟ್ಟಿರುವ ಕ್ರಿ.ಶ. 1468ರ ಕಲ್ಲು ಶಾಸನವು ಮಹಾಸಾಮಂತಾಧಿಪತಿ ಆಲೂರು ಸೀಮೆಯ ಗಂಡೆಯ ಮಾದೆಯ ನಾಯಕನು ಮದಗವನು ಕೆರೆಯ ಕಲ್ಲು ಕಟ್ಟೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[4] ಇಂದು ಆಲೂರು ತುಮಕೂರು ತಾಲ್ಲೂಕಿನಲ್ಲಿ ಕಂಡುಬರುತ್ತದೆ.

ಗೂಳೂರುಸೀಮೆ

ತುಮಕೂರು ತಾಲ್ಲೂಕು ಕೆಸ್ತೂರು ಶ್ರೀನಿವಾಸಾಚಾರ್ಯರ ವಶದಲ್ಲಿರುವ ತಾಮ್ರಶಾಸನವು ವಿಜಯನಗರದ ತಿರುಮಲ ಮಹಾರಾಯನ ಅಂದರೆ ಕ್ರಿ.ಶ. 1571, ಕಾಲದ್ದಾಗಿದೆ. ಈ ಶಾಸನದಲ್ಲಿ ಗೂಳೂರು ಸೀಮೆಯ ಮಲ್ಲಸಂದ್ರವನ್ನು ಬ್ರಾಹ್ಮಣರಿಗೆ ದಾನ ಕೊಟ್ಟ ಉಲ್ಲೇಖವಿದೆ.[5] ಇದೇ ಗೂಳೂರು ಸೀಮೆಯ ಉಲ್ಲೇಖ ತುಮಕೂರು 11 ಶಾಸನದಲ್ಲಿ ಕಂಡುಬರುತ್ತದೆ.[6] ಇಂದು ಗೂಳೂರು ಗ್ರಾಮವು ತುಮಕೂರು ತಾಲ್ಲೂಕು ಕಸಬಾದಲ್ಲಿದೆ.

ಸಿದ್ಧಾಪುರಸೀಮೆ

ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಹೋಬಳಿ ದೊಡ್ಡಮಾಲೂರು ಗ್ರಾಮದ 190ನೇ ನಂಬರು ಜಮೀನಿನಲ್ಲಿ ಕ್ರಿ.ಶ. 1510ರ ಬಂಡೆ ಮೇಲಿನ ಶಾಸನವು ವಿಜಯನಗರ ಕಾಲದ ಕೃಷ್ಣದೇವರಾಯನ ಕಾಲದ್ದಾಗಿದೆ. ಶಾಸನದಲ್ಲಿ ಸಿದ್ಧಾಪುರ ಸೀಮೆ ಹಾಗೂ ಚಂದ್ರಗಿರಿ ರಾಜ್ಯ ಎಂಬ ಉಲ್ಲೇಖವಿದೆ.[7] ಇಂದಿನ ಮಧುಗಿರಿ ಕಸಬಾ ಹೋಬಳಿಯ ಸಿದ್ಧಾಪುರವು ಒಂದು ಸೀಮೆಯಾಗಿತ್ತು.

ರಾಮನಾಯ್ಕನಸೀಮೆ

ಮಧುಗಿರಿ ತಾಲ್ಲೂಕು ಪುರವಾದ ಹೋಬಳಿಯ ಹಂದರಾಳು ಗ್ರಾಮದ ರಂಗನಾಥ ದೇವಾಲಯದ ಎದುರಿಗೆ ಕ್ರಿ.ಶ. 1510ರ ನೆಟ್ಟಕಲ್ಲು ಶಾಸನವು ಶ್ರೀ ಕೃಷ್ಣದೇವರಾಯ ಸಾಮ್ರಾಜ್ಯವಾಳುತ್ತಿರುವ ಸಮಯದಲ್ಲಿ ಯೆಲ್ಲಪ್ಪನಾಯ್ಕನು ಹಂದರಹಾಳ ತಿರುಮಲದೇವರಿಗೆ ಕೊಟ್ಟಂತಹ ಸಿಚರಾಮನಾಯ್ಕನಹಳ್ಳಿಯ ಸೀಮೆಗೆ ಸಲುವ ಹಂದರಹಾಳ ಗ್ರಾಮವನ್ನು ಅಂಗರಂಗ ವೈಭೋಗ ನೈವೇದ್ಯ ನಂದಾದೀಪದೇವರಿಗೆ ನಡೆಯಬೇಕೆಂದು ದಾನವಾಗಿ ಕೊಟ್ಟದ್ದನ್ನು ತಿಳಿಸುತ್ತದೆ.[8] ಸಿಚರಾಮನಾಯ್ಕನಹಳ್ಳಿ ಇಂದು ಎಲ್ಲಿದೆ ಎಂದು ತಿಳಿದುಬರದೇ ಇದ್ದರೂ, ಇದು ಸಾಮಾನ್ಯವಾಗಿ ಹಂದರಾಳು ಹತ್ತಿರದಲ್ಲಿರುವ ಚಿಕ್ಕನಾಯ್ಕನಪಾಳ್ಯವಿರಬಹುದು. ಈ ಸೀಮೆಗೆ ಸೇರಿದ ಹಂದರಾಳು ಗ್ರಾಮವು ಮಧುಗಿರಿ ತಾಲ್ಲೂಕಿನ ಪುರವರ ಹೋಬಳಿಯಲ್ಲಿದೆ.

ಮಣ್ಣೆಕೋಳಾಲಸೀಮೆ

ಕೊರಟಗೆರೆ ತಾಲ್ಲೂಕು ಕೋಳಾಲ ಸುಬ್ಬಾಭಟ್ಟರ ವಶದಲ್ಲಿರುವ ತಾಮ್ರಶಾಸನವು ಅಚ್ಯುತರಾಯನ ಅಂದರೆ ಕ್ರಿ.ಶ. 1539ರ ಕಾಲದ್ದಾಗಿದೆ. ಈ ಶಾಸನದಲ್ಲಿ ಮಣ್ಣೆಕೋಳಾಲ ಸೀಮೆಯ ಹುಲುಕೂಡಾಂನಾಡಿನ ಉಲ್ಲೇಖವಿದೆ.[9] 1539ರ ಕಾಲದಲ್ಲಿ ಮಣ್ಣೆ ಕೋಳಾಲ ಸೀಮೆ ಇದ್ದುದು, ಕ್ರಿ.ಶ. 1543ರ ಕಾಲಕ್ಕೆ ಕೋಳಾಲ ಸೀಮೆಯಾಗಿರುತ್ತದೆ. ಕೋಳಾಲವು ಇಂದು ಕೊರಟಗೆರೆ ತಾಲ್ಲೂಕಿನಲ್ಲಿದ್ದರೆ, ಮಣ್ಣೆಯು ಪಕ್ಕದ ತಾಲ್ಲೂಕಾದ ನೆಲಮಂಗಲ ತಾಲ್ಲೂಕಿನಲ್ಲಿದೆ.

ಕೋಳಾಲಸೀಮೆ

ತುಮಕೂರು 59ರ ಶಾಸನವು ವಂಚಿಹಳ್ಳಿಯ ರಂಗನಾಥ ದೇವಸ್ಥಾನದ ದಕ್ಷಿಣ ಗೋಡೆಗೆ ನೆಟ್ಟ ಕಲ್ಲು ಶಾಸನವು ವಿಜಯನಗರ ಅಚ್ಯುತದೇವರಾಯನ ಕ್ರಿ.ಶ. 1543ರ ಕಾಲದ್ದಾಗಿದೆ. ಶೀತಕಲ್ಲು ಗಂಗಪ್ಪನಾಯಕನಿಗೆ ನಾಡಗೌಡಿಕೆಯನ್ನು ಕೊಟ್ಟು ಕೋಳಾಲ ಸೀಮೆಗೆ ಸಲ್ಲುವ ವೊಂಮಚಿಹಳ್ಳಿ (ವಂಚಿಹಳ್ಳಿ) ದಂಡಿಗೆ ಉಂಬಳಿ ಕೊಟ್ಟಂತೆ ತಿಳಿಸುತ್ತದೆ.[10] 1539ರ ಕಾಲದಲ್ಲಿ ಮಣ್ಣೆ ಕೋಳಾಲ ಸೀಮೆ ಇದ್ದುದು, ಕ್ರಿ.ಶ. 1453ರ ಕಾಲಕ್ಕೆ ಕೋಳಾಲ ಸೀಮೆಯಾಗಿರುತ್ತದೆ. ಕೋಳಾಲವು ಇಂದು ಕೊರಟಗೆರೆ ತಾಲ್ಲೂಕಿನಲ್ಲಿದ್ದರೆ, ಮಣ್ಣೆಯು ಪಕ್ಕದ ತಾಲ್ಲೂಕಾದ ನೆಲಮಂಗಲ ತಾಲ್ಲೂಕಿನಲ್ಲಿದೆ.

ನಿಡಗಲ್ಲುಸೀಮೆ

ಇಂದಿನ ಪಾವಗಡ ತಾಲ್ಲೂಕಿನ ನಿಡಗಲ್ಲು ಹೋಬಳಿಯ ಕೇಂದ್ರ. ಇದು ವಿಜಯನಗರ ಕಾಲದಲ್ಲಿ ಒಂದು ಸೀಮೆಯಾಗಿತ್ತು. ನಿಡಗಲ್ಲು ಸೀಮೆಯಾದುದರ ಉಲ್ಲೇಖ ಪಾವಗಡ 46, 62, ಸಿರಾ 31ರ ಶಾಸನಗಳಲ್ಲಿ ಕಂಡುಬರುತ್ತದೆ. ಪಾವಗಡ 62ರ ಸುಮಾರು ಕ್ರಿ.ಶ. 1515ರ ಶಾಸನವು ನಿಡಗಲ್ಲು ಜಕ್ಕನಾಯಕನು ನಿಡಗಲ್ಲು ಬೆಟ್ಟದ ಮೇಲಿನ ವೀರೇಶ್ವರ ದೇವರ ನೈವೇದ್ಯ ದೀಪಾರಾಧನೆಗೆ, ಅಂಗರಂಗವೈಭವಗಳಿಗೆ ಕೆಲವು ಭೂಮಿಗಳನ್ನು ದತ್ತಿಯಾಗಿ ಬಿಟ್ಟು ನಿಡಗಲ್ಲು ಸೀಮೆಗೆ ಸಲ್ಲುವ ಗೊಲ್ಲನಕುಂಟೆ ಗ್ರಾಮಕ್ಕೆ ಪ್ರತಿನಾಮವಾಗಿ ವೀರಭದ್ರಪುರವೆಂದು ನಾಮಕರಣ ಮಾಡಿದನು ಎಂದು ತಿಳಿಸುತ್ತದೆ.[11] ನಿಡಗಲ್ಲು ಸೀಮೆಗೆ ಪಾವಗಡ ತಾಲ್ಲೂಕಿನ ಗೊಲ್ಲನಕುಂಟೆಯು ಸೇರಿತ್ತೆಂದು ಈ ಶಾಸನವು ತಿಳಿಸುತ್ತದೆ.

ಇಂದಿನ ಮಡಕಶಿರಾ ತಾಲ್ಲೂಕಿನ ಶಿವರದ ಹತ್ತಿರದ ಪೇಲುಬಂಡೆ ಗುಡ್ಡದ ಮೇಲಿನ ರಂಗನಾಥಸ್ವಾಮಿಯ ದೇವಸ್ಥಾನದಲ್ಲಿನ ಶಾಸನವು ಕ್ರಿ.ಶ. 1556ರ ಕಾಲದ್ದಾಗಿದೆ. ವಿಜಯನಗರ ಅರಸ ಸದಾಶಿವರಾಯನು ಸಾಮ್ರಾಜ್ಯವಾಳುತ್ತಿರುವ ಸಮಯದಲ್ಲಿ ಅವನ ಮಹಾಮಂಡಲೇಶ್ವರ ರಾಮರಾಜ ತಿರುಮಲ ದೇವರಾಯನ (ಗುತ್ತಿ) ನಿರೂಪದಿಂದ (ಅನುಮತಿಯಿಂದ) ನಿಡಗಲ್ಲು ಮಹಾನಾಯಕಾಚಾರ್ಯ ತಿಮ್ಮಣ್ಣನಾಯಕನು ನಿಡಗಲ್ಲು ಸೀಮೆಯ ತೈಲಂಗೆರೆಯ ಗೌಡ ಶಾನುಭೋಗರು ಗುತ್ತಿ ತಿರುಮಲರಾಜಯ್ಯನವರ ಮುದ್ರೆ ಮನುಷ್ಯ ಕೆಂಚನಾಯಕರ ಮುಂದಿಟ್ಟುಕೊಂಡು ಸ್ವಾಮಿಗೆ ನಿತ್ಯಪೂಜೆ ನೈವೇದ್ಯ ಮಾಸ ಪೂಜೆ, ಪಂಚಪರ್ವ ನಂದಾದೀಪ ಅಂಗರಂಗ ವೈಭವ ರಥೋತ್ಸವಗಳಿಗೆ ದಾರಾಪೂರ್ವಕವಾಗಿ ದಾನಕೊಟ್ಟ ಶಾಸನ.[12] ತೈಲಂಗೆರೆ ಅಂದರೆ ಇಂದಿನ ಮಡಕಶಿರಾ ತಾಲ್ಲೂಕಿನ ಅಮರಾಪುರ ಪಕ್ಕದ ಬೇಚರಾಕು ಗ್ರಾಮವು ನಿಡಗಲ್ಲು ಸೀಮೆಗೆ ಸೇರಿತ್ತು.

ಪಾವಗಡ 46 ಶಾಸನವು ಕ್ರಿ.ಶ. 1670 ಕಾಲದ್ದಾಗಿದೆ. ವಿಜಯನಗರವನ್ನು ಅರಸ ವೆಂಕಟಪತಿರಾಯರು ಅಳುತ್ತಿರುವ ಸಮಯದಲ್ಲಿ ಮಹಾನಾಯಕಾಚಾರ್ಯ ಹರತಿ ಹೊಟ್ಟಣ್ಣ ನಾಯಕರಿಗೆ ದೊಡ್ಡೇರಿ, ಸಿರಾಹ (ಸೀರಾ), ಹಿರಿಯೂರು, ಐಮಂಗಲ, ನಿಡಗಲ್ಲುದುರ್ಗ ಸೀಮೆಗಳನ್ನು ರಾಯಸ್ಥ ನಿರೂಪವಾಗಿ (ಸರ್ಕಾರದ ಸಹಾಯಧನದ) ಕೊಟ್ಟರು. ಈ ಮೇಲಿನ ಶಾಸನಗಳನ್ನು ಪರಿಶೀಲಿಸಿದಾಗ ನಿಡಗಲ್ಲು ಸೀಮೆಗೆ ಮಡಕಶಿರಾ ತಾಲ್ಲೂಕಿನ ಗಡಿಯಲ್ಲಿನ ಗೊಲ್ಲನಕುಂಟೆ (ವೀರಭದ್ರಪುರ), ತೈಲಂಗೆರೆಗಳು (ಅಮರಾಪುರ ಪಕ್ಕದ ಬೇಚರಾಕು ಗ್ರಾಮ) ಸೇರಿದ್ದವೆಂದು ಶಾಸನೋಕ್ತವಾಗಿ ತಿಳಿದುಬರುತ್ತದೆ. ಈ ಶಾಸನದಲ್ಲಿ ಬರುವ ದೊಡ್ಡೇರಿಯು ಚಿತ್ರದುರ್ಗ ಜಿಲ್ಲೆಯ ದೊಡ್ಡೇರಿಯಾಗಿರುತ್ತದೆ.[13]

ಬಿದರೆಸೀಮೆ

ಗುಬ್ಬಿ ತಾಲ್ಲೂಕು ಮೂಕನಾಯಕನಕೋಟೆ ರಂಗನಾಥ ದೇವಾಲಯದ ಉತ್ತರಕ್ಕೆ ನೆಟ್ಟಿರುವ ಕ್ರಿ.ಶ. 1572ರ ಕಲ್ಲು ಶಾಸನವು ಉಂಬಳಿ ಹೊಲವನ್ನು ಬಿದರೆಸೀಮೆಗೆ ಸೇರಿರುವ ಮೂಕನಾಯಕನ ಕೋಟೆಯ ನಾಗೇನಹಳ್ಳಿಯಲ್ಲಿ ನೀಡಿದ

ವಿಷಯ ತಿಳಿಸುತ್ತದೆ.[14] ಜಿಂದಗೆರೆಯ ಗುಬ್ಬಿ ಸಿದ್ದಪ್ಪನ ಹೊಲವೊಂದರಲ್ಲಿ ನೆಟ್ಟಿರುವ ಕಲ್ಲು ಶಾಸನವು ವಿಜಯನಗರದ ಕೃಷ್ಣದೇವರಾಯನು ಆಳುತ್ತಿರುವಾಗ ಬಿದರೆಯ ಸೀಮೆಯೊಳಗಣ ಕಗೆರೆಯನ್ನು ಎಲಪನಾಯಕನಿಗೆ ಸತಿಗೆಯ ಕೊಡುಗೆಯಾಗಿ ಕೊಟ್ಟ ವಿಷಯ ತಿಳಿಸುತ್ತದೆ.[15] ಇಂದಿನ ಗುಬ್ಬಿ ತಾಲ್ಲೂಕಿನ ಬಿದಿರೆ ಸೀಮೆಯಲ್ಲಿ ಕಗೆರೆಯು ಸೇರಿತ್ತೆಂದು ತಿಳಿಯುತ್ತದೆ. ಈ ಸೀಮೆಯು ಕ್ರಿ.ಶ. 1642ರ ದೇವರಾಜ ಒಡೆಯರ ಕಾಲದಲ್ಲಿ ಇದ್ದು, ಇದಕ್ಕೆ ಮಾದಾಪುರ ಗ್ರಾಮವು ಸೇರಿತ್ತೆಂದು ತಿಳಿಸುತ್ತದೆ.[16]

ನೊಣವಿನಕೆರೆ

ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ಕೈದಾಳು ಶಾಸನವು 1523ರ ಕಾಲದ್ದಾಗಿದೆ. ವಿಜಯನಗರದ ಕೃಷ್ಣದೇವರಾಯನ ನಿಜ ಸೇವಕನಾದ ಮಾರಪ್ಪನಾಯಕ ಒಡೆಯರಿಗೆ ಧರ್ಮವಾಗಬೇಕೆಂದು ನೊಣವಿನಕೆರೆಯ ಗೋಪಿನಾಥ ದೇವರಿಗೂ ತಿರುಮಲ ದೇವರ ಅಮೃತಪಡಿಗೆ ಅಂಗರಂಗವೈಭೋಗ ರಥೋತ್ಸವಗಳಿಗೆ ನೊಣವಿನಕರೆಯ ಗೋಪಿನಾಥ ದೇವರಿಗೂ ತಿರುಮಲ ದೇವರ ಅಮೃತಪಡಿಗೆ ಅಂಗರಂಗವೈಭೋಗ ರಥೋತ್ಸವಗಳಿಗೆ ನೊಣವಿನಕೆರೆಯ ಸೀಮೆಯ ಕೈದಾಳ ಎಂಬ ಗ್ರಾಮವನ್ನು ಕೃಷ್ಣದೇವರಾಯರು ಕೊಟ್ಟ ಧರ್ಮ ಶಾಸನ.[17] ತಿಪಟೂರು ತಾಲ್ಲೂಕಿನ ನೊಣವಿನಕೆರೆಯ ಸೀಮೆಗೆ ಇದೇ ತಾಲ್ಲೂಕಿನ ಕೈದಾಳವು ಸೇರಿದ ವಿಷಯವನ್ನು ಈ ಶಾಸನವು ತಿಳಿಸುತ್ತದೆ.

ಮಲೆಯೂರು

ಮಲೆಯೂರು ಸೀಮೆಯು ಕ್ರಿ.ಶ. 1525ರ ಕಾಲಕ್ಕೆ ಸೀಮೆಯಾಗಿದ್ದರ ಉಲ್ಲೇಖ ಕುಣಿಗಲ್ 23ರ ಶಾಸನದಲ್ಲಿ ಕಂಡುಬರುತ್ತದೆ.[18]

ಪೊಯಸಳಸೀಮೆ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೋಗಿಹಳ್ಳಿಯ ದಳವಾಯಿ ಮಠದಲ್ಲಿರುವ ಕ್ರಿ.ಶ. 1623ರ ಕಲ್ಲು ಶಾಸನವು ವಿಜಯನಗರ ವೀರ ರಾಮದೇವರಾಯನು ಘನಗಿರಿನಗರದಲ್ಲಿ (ಆನೆಗೊಂದಿ) ರಾಜ್ಯವಾಳುತ್ತಿದ್ದಾಗ ಘನಗಿರಿನಗರದ ಪಶ್ಚಿಮಕ್ಕೆ ಇರುವ ಪೊಯಸಳದ ಸೀಮೆಯ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಮುದಿಯಪ್ಪನಾಯಕೇಂದ್ರನು ರಾಜ್ಯವಾಳುತ್ತಿದ್ದನೆಂದು ತಿಳಿಸುತ್ತದೆ. ಈ ಸೀಮೆಗೆ ಇಂದು ತಾಲ್ಲೂಕು ಕೇಂದ್ರವಾದ ಚಿಕ್ಕನಾಯಕನಹಳ್ಳಿಯು ಸೇರಿತ್ತು.[19]

ಬೂದಿಹಾಳುಸೀಮೆ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೂದಿನಾಳು ಗ್ರಾಮದ ಪುರಾಣಿಕ ನರಸಿಂಹಭಟ್ಟರಲ್ಲಿದ್ದ ತಾಮ್ರಶಾಸನ ಕ್ರಿ.ಶ. 1525, ವಿಜಯನಗರದ ಕೃಷ್ಣದೇವರಾಯನ ಕಾಲದ್ದಾಗಿದೆ. ಶಾಸನದಲ್ಲಿ ಮಗರೇನಾಡುವೇಂಠ್ಯದ ಬೂದಿಹಾಳು ಸೀಮೆಯ ವೊಮಯನಹಳ್ಳಿ, ತುಂಬಿನಕೆರೆ ಗ್ರಾಮಗಳು ಸೇರಿದ್ದವೆಂದು ತಿಳಿದುಬರುತ್ತದೆ.[20]

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೂದಿನಾಳು ಗ್ರಾಮದ ಕೋಟೆ ಬಸವಣ್ಣನ ಗುಡಿಯ ಬಳಿ ಇದ್ದ ಕಲ್ಲು ಶಾಸನವು ಕ್ರಿ.ಶ. 1535ರ ಕಾಲದ್ದಾಗಿದೆ. ವಿಜಯನಗರದ ಅಚ್ಯುತರಾಯನು ರಾಜ್ಯವಾಳುತ್ತಿರುವಾಗ ಮನೆಯ ಬಯಕಾರ ರಾಮಪ್ಪಯ್ಯನವರು ಬೂದಿಹಾಳು ಸೀಮೆಯ ಮದುವೆಯ ಸುಂಕವನ್ನು ಬಿಟ್ಟುಕೊಟ್ಟ ವಿಷಯವನ್ನು ತಿಳಿಸುತ್ತದೆ.[21]

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೂದಿನಾಳು ಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದ ಬಳಿ ಇರುವ ಎರಡನೆಯ ಕಲ್ಲು ಶಾಸನವು ಕ್ರಿ.ಶ. 1554ರ ಕಾಲದ್ದಾಗಿದೆ. ವಿಜಯನಗರದ ಸದಾಶಿವರಾಯನು ರಾಜ್ಯವಾಳುತ್ತಿರುವಾಗ ಶ್ರೀಪತಿರಂಗದೇವ ಮಹಾಅರಸುಗಳಿಗೆ ಅಮರನಾಯಕತನಕ್ಕೆ ಪಾಲಿಸಿದ ಬೂದಿನಾಳು ಸೀಮೆ ಎಂದು ತಿಳಿಸುತ್ತದೆ.[22]

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೂದಿನಾಳು ಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದ ಬಳಿ ಇರುವ ಒಂದನೆಯ ಕಲ್ಲು ಶಾಸನವು ಕ್ರಿ.ಶ. 1555ರ ಕಾಲದ್ದಾಗಿದೆ. ವಿಜಯನಗರದ ಸದಾಶಿವರಾಯನು ರಾಜ್ಯವಾಳುತ್ತಿರುವಾಗ ಶ್ರೀಪತಿರಂಗದೇವ ಮಹಾಅರಸುಗಳಿಗೆ ಅಮರನಾಯಕತನಕ್ಕೆ ಪಾಲಿಸಿದ ಮಗರನಾಡ ವೇಂಠೆಯ ಬೂದಿನಾಳು ಸೀಮೆಯ ಗೌಡ, ಶಾನುಭೋಗ ಮೊದಲಾದವರು ಲಕ್ಷ್ಮೀನಾರಾಯಣ ದೇವರ ಪೂಜಾಪಡಿಗಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ತೇಖಲವಟ್ಟಿ, ನೇರಲೆಕೆರೆ, ಹೆಗ್ಗೆರೆ, ಹೆಂಣವೆಗೆರೆ, ಹೊಸಹಳ್ಳಿ, ತಂಡಗ, ಮಾಳವನಹಳ್ಳಿ, ಬೆಲಗೂರು, ಸಿಂಗಟಗೆರೆ, ಕಂಚಿಗಲ್ ಗ್ರಾಮಗಳು ಸೇರಿದ್ದ ವಿಷಯ ತಿಳಿಸುತ್ತದೆ.[23]

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೂದಿಹಾಳು ಗ್ರಾಮದ ಆಂಜನೇಯ ದೇವಸ್ಥಾನದಲ್ಲಿರುವ ಕಲ್ಲು ಶಾಸನವು ಕ್ರಿ.ಶ. 1573ರ ಕಾಲದ್ದಾಗಿದೆ. ವಿಜಯನಗರದ ಶ್ರೀರಂಗದೇವಮಹಾರಾಯರು ಪೆನಗೊಂಡೆ ಪಟ್ಟಣದಿಂದ ರಾಜ್ಯವಾಳುತ್ತಿದ್ದಾಗ ಮಹಾಮಂಡಲೇಶ್ವರ ಶ್ರೀಪತಿರಾಜವಲ್ಲಭ ಮಹಾಅರಸುಗಳು ಬೂದಿಹಾಳು ಸೀಮೆಯ ರಂಗರಾಜಯ್ಯನವರಿಗೆ ಪುಣ್ಯವಾಗಲೆಂದು ಐದು ಕೈವಾಡದವರಿಗೆ ದಾನ ಕೊಟ್ಟ ವಿಷಯ ತಿಳಿಸುತ್ತದೆ.[24] ಈ ಮೇಲಿನ ಶಾಸನಗಳನ್ನು ಪರಿಶೀಲಿಸಿದಾಗ ಇಂದಿನ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಬೂದಿಹಾಳು ಒಂದು ದೊಡ್ಡ ಸೀಮೆಯಾಗಿತ್ತು. ಇದು ಮಗರನಾಡ ವೇಂಠೆಗೆ ಸೇರಿತ್ತು. ಬೂದಿಹಾಳು ಸೀಮೆಯಲ್ಲಿ ವೊಮಯನಹಳ್ಳಿ, ತುಂಬಿನಕೆರೆ, ತೇಖಲವಟ್ಟಿ, ನೇರಲೆಕೆರೆ, ಹೆಗ್ಗೆರೆ, ಹೆಂಣವೆಗೆರೆ, ಹೊಸಹಳ್ಳಿ, ತಂಡಗ, ಮಾಳವನಹಳ್ಳಿ, ಬೆಲಗೂರು, ಸಿಂಗಟಗೆರೆ, ಕಂಚಿಗಲ್ ಗ್ರಾಮಗಳು ಸೇರಿದ್ದವು.

ಶೆಟ್ಟೀಕೆರೆಸೀಮೆ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪಂಕಜನಹಳ್ಳಿಯ ಮಲ್ಲಿಕಾರ್ಜುನ ಮಹಾದ್ವಾರದ ಬಲಗಡೆ ಇರುವ ಕಲ್ಲು ಶಾಸನವು ಕ್ರಿ.ಶ. 1529ರ ಕಾಲದ್ದಾಗಿದೆ. ವಿಜಯನಗರದ ಕೃಷ್ಣದೇವರಾಯನು ರಾಜ್ಯವಾಳುತ್ತಿರುವಾಗ ಬಾನವಾಡಿಯ ಚೆಂಬಿಸೆಟಿಯು ಕೃಷ್ಣದೇವರಾಯನಿಗೆ ಒಳ್ಳೆಯದಾಗಲೆಂದು ಶೆಟ್ಟಿಕೆರೆ ಸೀಮೆಯ ಪಂಕಜನಹಳ್ಳಿ ಮಲ್ಲಿಕಾರ್ಜುನ ದೇವರಿಗೆ ಅಮೃತಪಡಿ ಅಂಗರಂಗ ವೈಭೋಗಕ್ಕೆ ಪಂಕಜನಹಳ್ಳಿ ಗ್ರಾಮವನ್ನು ದಾನವಾಗಿ ಕೊಟ್ಟಿರುತ್ತಾನೆ.[25] ಇಂದಿನ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟೀಕೆರೆ ಸೀಮೆಗೆ ಪಂಕಜನಹಳ್ಳಿಯು ಸೇರಿತ್ತೆಂದು ತಿಳಿದುಬರುತ್ತದೆ.

ಕಂದಿಕೆರೆಸೀಮೆ

ಚಿಕ್ಕನಾಯಕನಹಳ್ಳಿ 44ರ ಶಾಸನವು ಕಂದಿಕೆರೆಸೀಮೆಯಾಗಿದ್ದರ ಮಾಹಿತಿ ತಿಳಿಸುತ್ತದೆ.[26]

ಹೊನ್ನವಳ್ಳಿಯಸೀಮೆ

ತಿಪಟೂರು 129 ಶಾಸನವು ಕ್ರಿ.ಶ. 1548ರಲ್ಲಿ ಇಂದಿನ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯು ಸೀಮೆಯಾಗಿದ್ದರ ಮಾಹಿತಿ ತಿಳಿಸುತ್ತದೆ.[27]

ಸಂಪಗೆಸೀಮೆ

ತಿಪಟೂರು 6ರ ಶಾಸನವು ಕ್ರಿ.ಶ. 1550ರಲ್ಲಿ ತುರುವೇಕೆರೆ ತಾಲ್ಲೂಕಿನ ಸಂಪಗೆಯು ಸೀಮೆಯಾಗಿದ್ದರ ವಿಷಯ ಕಂಡುಬರುತ್ತದೆ.[28]

ಹುಳಿಯಾರುಸೀಮೆ

ಚಿಕ್ಕನಾಯಕನಹಳ್ಳಿ 39ರ ಶಾಸನವು ಕ್ರಿ.ಶ. 1559ರ ಕಾಲದ್ದಾಗಿದ್ದು ಹುಳಿಯಾರು ಸೀಮೆ ಉಲ್ಲೇಖ ಕಂಡುಬರುತ್ತದೆ.[29]

ದೊಡ್ಡೇರಿಸೀಮೆ

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿ ಗೊಲ್ಲಹಳ್ಳಿ ಗ್ರಾಮದ ಕ್ರಿ.ಶ. 1569ರ ಮಧ್ಯದಲ್ಲಿ ನೆಟ್ಟ ಕಲ್ಲು ಶಾಸನದಲ್ಲಿ ತಿರುಮಲದೇವರಾಯನು ರಾಜ್ಯವಾಳುತ್ತಿರುವಾಗ ಪೆನಗೊಂಡೆ ರಾಜ್ಯಕ್ಕೆ ಸೇರುವ ರಾಯದುರ್ಗದ ಸ್ಥಳದ ದೊಡ್ಡೇರಿ ಸೀಮೆಯ ಗೊಲಹಳ್ಳಿಯ ಪ್ರಸ್ತಾಪ ಬರುತ್ತದೆ.[30] ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಸೀಮೆಯಲ್ಲಿ ಗೊಲ್ಲಹಳ್ಳಿಯು ಸೇರಿದ ವಿಷಯವನ್ನು ತಿಳಿಸುತ್ತದೆ.

ಹೆಂಜೇರುಸೀಮೆ

ಸಿರಾ ತಾಲ್ಲೂಕು ಹುಲಿಕುಂಟೆ ಹೋಬಳಿ ವಾಜರಹಳ್ಳಿಯ ಹಳೇಕಟ್ಟೆ ಏರಿ ಕೆಳಗೆ ಬಿದ್ದಿರುವ ಸು. ಕ್ರಿ.ಶ. 1557 ಕಲ್ಲು ಶಾಸನವು ನಿಡಗಲ್ಲು ಚಿಕ್ಕತಿಮ್ಮನಾಯಕನ ಕಾಲದಲ್ಲಿ ಹೆಂಜೇರ ಸೀಮೆಯೊಳಗಿನ ಅಗ್ರಹಾರದ ತಿಮ್ಮನಾಯಕನು ಕುಂಟೆ ಒಡೆದಾಗ ದುರಸ್ತಿ ಮಾಡಲು ಹೆಂಜೇರಿನ ಬೊಮ್ಮಯ್ಯಗೌಡ, ತಿಮ್ಮಗೌಡರವರಿಗೆ ಕೆಲವು ಭೂಮಿಗಳನ್ನು ಮಾನ್ಯವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಸಿರಾ ತಾಲ್ಲೂಕಿನ ಗಡಿಯಲ್ಲಿರುವ ಹೆಂಜೇರು (ಹೇಮಾವತಿ) ಇದಕ್ಕೆ ಇಂದಿನ ಹುಲಿಕುಂಟೆ ಹೋಬಳಿಯ ಅಗ್ರಹಾರವು ಸೇರಿತ್ತೆಂದು ತಿಳಿಸುತ್ತದೆ.[31]

ಹಿರಿಯರಸೀಮೆ

ಸಿರಾ ತಾಲ್ಲೂಕು ಬುಕ್ಕಾಪಟ್ಟಣದಲ್ಲಿ ಊರಬಾಗಲ ಬಳಿ ಬಿದ್ದಿರುವ ಕ್ರಿ.ಶ. 1609ರ ಕಲ್ಲು ಶಾಸನವು ವಿಜಯನಗರದ ವೀರವೆಂಕಟಪತಿದೇವ ಮಹಾರಾಯರು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ, ಮಹಾನಾಯಕಾಚಾರ್ಯ ಹರತಿ ಇಮ್ಮಡಿ ಕೆಂಚಪ್ಪನಾಯಕ ಐಯ್ಯನವರು ತಮಗೆ ಅಮರಮಾಗಣೆ ಬಂದಂತ ಹಿರಿಯೂರು ಸೀಮೆಗೆ ಸಲ್ಲುವ ಬುಕ್ಕಾಪಟ್ಟಣ ಸ್ಥಳದೊಳಗಣ ಹುಯಿಲುದೊರೆ ಗ್ರಾಮ, ಹೊನ್ನೇನಹಳ್ಳಿ ಗ್ರಾಮಗಳನ್ನು ತಾವರೇಕೆರೆ ದಳವಾಯಿ ಬಸವಿನಾಯಕನ ಮಗ ಚಿಕ್ಕ ಬಸವಣ್ಣನಿಗೆ ತೇರ ಮಲ್ಲಿಕಾರ್ಜುನಸ್ವಾಮಿಯ ಸನ್ನಿಧಿಯಲ್ಲಿ ತಮಗೆ ಪುಣ್ಯವಾಗಬೇಕೆಂದು ಕೊಟ್ಟ ದಾನ.[32] ಹಿರಿಯೂರು ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾದರೆ, ಬುಕ್ಕಾಪಟ್ಟಣವು ಸಿರಾ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದೆ.

ಶಿರಾಸೀಮೆ

ಶಿರಾ ಒಂದು ತಾಲ್ಲೂಕು ಕೇಂದ್ರವಾಗಿದೆ. ನಾಗಮಂಗಲ ತಾಲ್ಲೂಕು ಬೆಳ್ಳೂರಿನ ಬ್ರಹ್ಮಸೂರಪ್ಪನವರಲ್ಲಿದ್ದ ತಾಮ್ರ ಶಾಸನವು[33] ಕ್ರಿ.ಶ. 1680ರ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನವು ಸಿರಾಸೀಮೆಗೆ ಸೇರಿದ ಸಂತೇದೊಡ್ಡೇರಿ ಹೋಬಳಿಗೆ ಸೇರಿದ ಬಡವನಹಳ್ಳಿ ಸ್ಥಳದ ಆಪನಹಳ್ಳಿ ಗ್ರಾಮವನ್ನು ವೀರಸೇನ ಭಟ್ಟಾರಕರ ಶಿಷ್ಯರಾದ ಲಕ್ಷ್ಮೀಸೇನ ಭಟ್ಟಾರಕರೆಂಬ ಜೈನ ಮಠಾಚಾರ್ಯರಿಗೆ ದಾನವನ್ನು ಕೊಟ್ಟಂತೆ ತಿಳಿಸುತ್ತದೆ. ಅಂದರೆ ಮಧುಗಿರಿ ತಾಲ್ಲೂಕಿನ ದೊಡ್ಡೇರಿ, ಬಡವನಹಳ್ಳಿ, ಆಪನಹಳ್ಳಿ, ಸಿರಾಸೀಮೆಗೆ ಸೇರಿತ್ತೆಂದು ತಿಳಿಸುತ್ತದೆ. ಈ ಕಾಲಕ್ಕಾಗಲೇ ಸಿರೆಯನ್ನು ಸೀಮೆ ಎಂದು ಕರೆದರೂ ಮುಂದಿನ ಶಾಸನದಲ್ಲಿಯೂ ಮತ್ತೆ ಸಿರೆನಾಡಿನ ಸ್ಪಷ್ಟ ಉಲ್ಲೇಖವಿರುವುದನ್ನು ಕಾಣಬಹುದು.

ಶಾಸನದಲ್ಲಿ ಸಿರಾ ಪ್ರದೇಶವನ್ನು ಸೀರೆನಾಡು,[34] ಸೀರೆ ಮುನ್ನೂರು,[35] ಸಿರೆಸೀಮೆ[36] ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಸಿರೆನಾಡಿನಲ್ಲಿ ದೊರೆತ ಸ್ಥಳಗಳು ಮತ್ತು ಶಾಸನೋಕ್ತ ಸ್ಥಳಗಳನ್ನು ನಕ್ಷೆಯ ಮೇಲೆ ಗುರುತಿಸಿದರೆ, ಸಿರೆನಾಡಿಗೆ ಬರಗೂರು (ಇಂದಿನ ಸಿರಾ ತಾಲ್ಲೂಕು), ಬಡವನಹಳ್ಳಿ (ಇಂದಿನ ಮಧುಗಿರಿ ತಾಲ್ಲೂಕು), ನಿಡಗಲ್ಲು (ಇಂದಿನ ಪಾವಗಡ ತಾಲ್ಲೂಕು), ತೈಲಂಗೆರೆ (ಅಮರಾಪುರ ಕೆರೆಯಲ್ಲಿನ ಬೇಚರಾಕು ಗ್ರಾಮ), ನಾದೂರು, ಹೆಂಜೇರು

(ಹೇಮಾವತಿ, ಹಿಂದಿನ ಮಡಕಶಿರಾ ತಾಲ್ಲೂಕು), ಸುಳಿಯನೂರು, ಮಲೆಯೂರು, ಕುಂದಿರ್ಪೆ (ಹಿಂದಿನ ಕಲ್ಯಾಣದುರ್ಗ ತಾಲ್ಲೂಕಿನ ಸ್ಥಳಗಳು) ಸ್ಥಳಗಳನ್ನು ಒಳಗೊಂಡ ವಿಶಾಲವಾದ ನಾಡಾಗಿತ್ತು. ಸಿರೆನಾಡಿಗೆ ಪೂರ್ವಕ್ಕೆ ಪರವೆನಾಡು ಮತ್ತು ರೊದ್ದನಾಡು; ಪಶ್ಚಿಮಕ್ಕೆ ಹಡುವಗೆರೆನಾಡು; ಉತ್ತರಕ್ಕೆ ಕಣಿಯಕಲ್ಲುನಾಡು; ದಕ್ಷಿಣಕ್ಕೆ ಮರುಗೆರೆನಾಡುವರೆಗೆ ವಿಸ್ತಾರವನ್ನು ಹೊಂದಿತು. ಸೀರೆನಾಡು 9ನೇ ಶತಮಾನದಿಂದ (ಕ್ರಿ.ಶ. 878) 18ನೇ ಶತಮಾನದವರೆಗೆ (ಕ್ರಿ.ಶ. 1773) ಅಸ್ತಿತ್ವದಲ್ಲಿತ್ತು. ಸಿರೆನಾಡು ಬಹುಶಃ ಗಂಗರ ಮತ್ತು ನೊಳಂಬರ ಕಾಲದಲ್ಲಿಯೇ ಒಂದು ನಾಡಾಗಿರಬಹುದು. ನಂತರ ಈ ನಾಡಿನಲ್ಲಿ ಸೇರಿದ ಹೇಮಾವತಿ, ನಿಡಗಲ್ಲು, ಬರಗೂರು ಸ್ಥಳಗಳು ಮುಂದೆ ಪ್ರಭುದ್ಧಮಾನಕ್ಕೆ ಬಂದು ರಾಜಧಾನಿ ಅಥವಾ ಉಪರಾಜಧಾನಿಗಳಾಗಿ ಬೆಳೆದಿದ್ದು ವಿಶೇಷ.

ರತ್ನಗಿರಿಸೀಮೆ

ಸಿರಾದಲ್ಲಿ ಇರುವ ಅವಧೂತ ಶಾಮಾಚಾರ್ಯರ ಮಕ್ಕಳು ಹನುಮಂತಾಚಾರ್ಯರ ವಶದಲ್ಲಿದ್ದ ಕ್ರಿ.ಶ. 1621 ತಾಮ್ರಶಾಸನವು ಶ್ರೀ ಮನ್ಮಹಾಮಂಡಲೇಶ್ವರ ಹರತಿ ಸಿಂಹಾಸನಾಂಕ ಸರಜಾ ಕೃಷ್ಣಪ್ಪರಾಜರವರ ಮಗ ರಂಗಪ್ಪರಾಜ, ಇವನ ಮಗನಾದ ಕಸ್ತೂರಿ ರಂಗಪ್ಪ ರಾಜರವರು ತಿರುಮಲ ದೀಕ್ಷಿತರ ಪುತ್ರರಾದ ಸಿಂಹಾದಿ ಭಟ್ಟರ ಪುತ್ರರಾದ ನರಸಿಂಹ ಜೋಯಿಸರಿಗೆ ನಮ್ಮ ಪಿತೃಗಳಿಗೆ ಸ್ವರ್ಗಾದಿ ಭೋಗಗಳಾಗಬೇಕೆಂದು ರಾಯದುರ್ಗಪೇಟೆಗೆ ಸಲ್ಲುವ ದೇವಣ ಸೀರ್ಯದ ಸೀಮೆಗೆ ಸಲ್ಲುವ ರತ್ನಗಿರಿ ಸೀಮೆಯ ಬಡವನಹಳ್ಳಿ ಹೋಬಳಿಯ ಕೂನನಹಳ್ಳಿ ಗ್ರಾಮಕ್ಕೆ ಸಲ್ಲುವ ಪರಿಸರದ ಭೂಮಿ ಎಂದು ಶಾಸನದಲ್ಲಿ ತಿಳಿಸುತ್ತದೆ.[37] ದೇವಣ ಸೀರ್ಯದ (ಸಿರಾ) ಸೀಮೆಗೆ ಸಲ್ಲುವ ರತ್ನಗಿರಿ ಸೀಮೆಯ ಬಡವನಹಳ್ಳಿ ಹೊಬಳಿಯ ಕೂನನಹಳ್ಳಿ ಎಂಬ ಗ್ರಾಮದ ಉಲ್ಲೇಖ ಕಂಡುಬರುತ್ತದೆ.

ಕೊರಟಗೆರೆಸೀಮೆ

ಇಂದಿನ ಕೊರಟಗೆರೆಯು ತಾಲ್ಲೂಕು ಕೇಂದ್ರವಾಗಿದೆ. ಈ ತಾಲ್ಲೂಕು ಕೇಂದ್ರ ವಿಜಯನಗರ ಅರಸರ ಕಾಲದಲ್ಲಿ ಸೀಮೆಯಾದುದರ ಉಲ್ಲೇಖ ಎರಡು ಶಾಸನಗಳಲ್ಲಿ ಕಂಡುಬರುತ್ತದೆ. ಇಂದಿನ ಕೊರಟಗೆರೆ ಪಟ್ಟಣದ ಶೇಕದಾರರ ಹತ್ತಿರವಿರುವ ತಾಮ್ರಶಾಸನವು ಕ್ರಿ.ಶ. 1627ರ ಕಾಲದ್ದಾಗಿದೆ. ಇಮ್ಮಡಿ ರಣಭೈರೇಗೌಡನು ಬಾಬುರಾಯನಿಗೆ ಕೊರಟಗೆರೆ ಸೀಮೆಯ ಹುಲಿಕುಂಟೆ ಗ್ರಾಮವನ್ನು ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಹುಲಿಕುಂಟೆಯು ಕೊರಟಗೆರೆ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಸೇರಿರುತ್ತದೆ.[38]

ಕೊರಟಗೆರೆ ತಾಲ್ಲೂಕಿನ ಕಸಬಾ ಹೋಬಳಿಯ ಅಕ್ಕಾಜಿಪಲ್ಲಿ ಗ್ರಾಮದ ಆಂಜನೇಯ ದೇವಾಲಯದ ಮುಂದೆ ನೆಟ್ಟ ಕಲ್ಲು ಶಾಸನವು ಕ್ರಿ.ಶ. 1680ರ ಶಾಸನವು ಕೊರಟಗೆರೆ ಗಂಗಾಧರಸ್ವಾಮಿ ದೇವಸ್ಥಾನಕ್ಕೆ ರಣಬೈಚಗೌಡಯ್ಯನವರ ಪುತ್ರರಾದ ದಾಸರಹಳ್ಳಿ ಬೈಚಗೌಡಯ್ಯನವರ ಪುತ್ರರಾದ ಇಮ್ಮಡಿ ರಣಬೈರೇಗೌಡರು ತಮ್ಮ ಆಳ್ವಿಕೆಗೆ ಸೇರುವ ಕೊರಟಗೆರೆಸೀಮೆಯ ಅಕ್ಕಾಜಂಮನಹಳ್ಳಿ ಗ್ರಾಮವನ್ನು ದಾನ ಕೊಟ್ಟ ವಿಷಯ ತಿಳಿಸುತ್ತದೆ.[39] ಕೊರಟಗೆರೆ ತಾಲ್ಲೂಕು ಅಂದು ಸೀಮೆಯಾಗಿದ್ದು, ಇದಕ್ಕೆ ಅಕ್ಕಾಜಂಮನಹಳ್ಳಿಯು ಸೇರಿತ್ತು.

ಬರಗೂರುಸೀಮೆ

ಸಿರಾ ತಾಲ್ಲೂಕು ಹುಲಿಕುಂಟೆ ಹೋಬಳಿ ರಂಗಾಪುರ ಗ್ರಾಮಕ್ಕೆ ನೈರುತ್ಯದಲ್ಲಿ ಸು. ಕ್ರಿ.ಶ. 1556 ಉಪ್ಪಾರ ನರಸನ ಹೊಲದಲ್ಲಿರುವ ಶಾಸನವು ನಿಡಗಲ್ಲು ರಾಜ್ಯವನ್ನಾಳುತ್ತಿದ್ದ ಮಹಾನಾಯಕಾಚಾರ್ಯ ಮಲ್ಲನಾಯಕನು

ಲಕ್ಷ್ಮ[ಲಚುಮ]ನಾಯಕನು ಶ್ರೀನಾಥಭಟ್ಟನಿಗೆ ಬರಗೂರು ಸೀಮೆಯನ್ನು ಧಾರೆ ಎರೆದುಕೊಟ್ಟ ವಿಷಯ ತಿಳಿಸುತ್ತದೆ.[40] ಬರಗೂರು ಇಂದು ಸಿರಾ ತಾಲ್ಲೂಕಿಗೆ ಸೇರಿದ ಗ್ರಾಮವಾಗಿದೆ.

ಕುಳಗುಣಸೀಮೆ

ಕ್ರಿ.ಶ. 1671ರ ಶಾಸನದಲ್ಲಿ ದೇವರಾಜ ಒಡೆಯರು ಕುಳಗುಣ (ಇಂದಿನ ಕುಣಿಗಲ್) ಸೀಮೆಯನ್ನು ಉದಯನಾಯಕನಿಗೆ ನೀಡಿದ್ದನ್ನು ತಿಳಿಸುತ್ತದೆ.[41]

ಮೇಲಿನ ಸೀಮೆಗಳನ್ನು ಪರಿಶೀಲಿಸಿದಾಗ ಕೆಲವು ಊರುಗಳು ಅನೇಕ ಬಾರಿ ಹಲವು ಕಾಲದಲ್ಲಿ ಸೀಮೆಗಳಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದುದು ತಿಳಿದುಬರುತ್ತದೆ. ಉದಾಹರಣೆಗೆ ಗೂಳೂರು ಸೀಮೆಯು ಕ್ರಿ.ಶ. 1426ರಿಂದ 1571ರ ವರೆಗೆ ಸೀಮೆಯಾಗಿಯೆ ಮುಂದುವರೆದಿರುವುದು ಕಂಡುಬರುತ್ತದೆ. ಮತ್ತು ಮೇಲಿನ ಸೀಮೆಗಳನ್ನು ನೋಡಿದಾಗ ಎಲ್ಲಾ ಸೀಮೆಗಳು ವಿಜಯನಗರ ಕಾಲದಲ್ಲಿ ಸ್ಥಾಪಿತವಾದವುಗಳೆ ಎಂದು ಹೇಳಬಹುದು.

ಪ್ರತಿಯೊಂದು ನಾಡು/ಸೀಮೆಗಳಲ್ಲಿ ಹಲವಾರು ಸ್ಥಳಗಳು ಅಂತರ್ಗತವಾಗಿರುತ್ತವೆ. ಆಡಳಿತ ಘಟಕಗಳಲ್ಲಿ 'ಸ್ಥಳ' ಎಂಬುದು ಕೂಡ, ವೇಂಠೆ, ಸೀಮೆಗಳಂತೆ ವಿಜಯನಗರ ಅರಸರ ವಿಶಿಷ್ಟ ಕೊಡುಗೆಯೆಂದೇ ಹೇಳಬಹುದಾಗಿದೆ. ಹಾಗೇ ಪ್ರತಿಯೊಂದು ಸ್ಥಳದಲ್ಲೂ ಹಲವಾರು ಉಪಗ್ರಾಮಗಳು ಸಮಾವೇಶಗೊಂಡಿರುತ್ತಿದ್ದವು.

ಹೀಗೆ ಒಂದು ಸಣ್ಣ ಪ್ರದೇಶ ಮೂಲತಃ ನೈಸರ್ಗಿಕ ಕಾರಣದಿಂದ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿದ್ದರೂ, ಕಾಲಾಂತರದಲ್ಲಿ ಒಂದು ಪ್ರಾದೇಶಿಕ ವಿಭಾಗವಾಗಿ, ಆಡಳಿತ ಘಟಕವಾಗಿ ತನ್ನತನ ಉಳಿಸಿಕೊಂಡಿದ್ದಿತು. ವಿಜಯನಗರದ ಅರಸರ ಆಳ್ವಿಕೆಯ ಪೂರ್ವಾರ್ಧದ ಅವಧಿ ಹಾಗೂ ನಂತರ ಇಲ್ಲಿ ಪಾಳೆಪಟ್ಟು ಹಾಗೂ ಸುಭೇದಾರರ ಆಡಳಿತ ಪ್ರಾರಂಭವಾಗಿ ಸಿರಾ, ಮಧುಗಿರಿ, ನಿಡಗಲ್ಲು ರಾಜಧಾನಿಯಾದುದು.

ತುಮಕೂರು ತಾಲ್ಲೂಕಿನಲ್ಲಿ ತುಮಕೂರು ಸೀಮೆ, ಆಲೂರು ಸೀಮೆ, ಗೂಳೂರು ಸೀಮೆಗಳು; ಸಿರಾ ತಾಲ್ಲೂಕಿನಲ್ಲಿ ಶಿರಾ ಸೀಮೆ, ಬರಗೂರು ಸೀಮೆಗಳು; ಮಧುಗಿರಿ ತಾಲ್ಲೂಕಿನಲ್ಲಿ ಸಿದ್ಧಾಪುರ ಸೀಮೆ, ರಾಮನಾಯ್ಕನ ಸೀಮೆ, ದೊಡ್ಡೇರಿ ಸೀಮೆಗಳು; ಕೊರಟಗೆರೆ ತಾಲ್ಲೂಕಿನಲ್ಲಿ ಕೊರಟಗೆರೆ ಸೀಮೆ, ಕೋಳಾಲ ಸೀಮೆ, ಮಣ್ಣೆಕೋಳಾಲ ಸೀಮೆಗಳು; ಪಾವಗಡ ತಾಲ್ಲೂಕಿನಲ್ಲಿ ನಿಡಗಲ್ಲು ಸೀಮೆ; ಗುಬ್ಬಿ ತಾಲ್ಲೂಕಿನಲ್ಲಿ ಬಿದರೆ ಸೀಮೆ; ತಿಪಟೂರು ತಾಲ್ಲೂಕಿನಲ್ಲಿ ನೊಣವಿನಕೆರೆ ಸೀಮೆ, ಹೊನ್ನವಳ್ಳಿ ಸೀಮೆಗಳು; ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪೊಯಸಳದ ಸೀಮೆ, ಶೆಟ್ಟೀಕೆರೆ ಸೀಮೆ, ಕಂದಿಕೆರೆ ಸೀಮೆ, ಹುಳಿಯಾರು ಸೀಮೆಗಳು; ಕುಣಿಗಲ್ ತಾಲ್ಲೂಕಿನಲ್ಲಿ ಕುಣಿಗಲ್ ಸೀಮೆ, ಯಲೆಯೂರು ಸೀಮೆಗಳು; ತುರುವೇಕೆರೆ ತಾಲ್ಲೂಕಿನಲ್ಲಿ ಸಂಪಗೆ ಸೀಮೆ; ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಹಿರಿಯೂರು ಸೀಮೆ; ಹೊಸದುರ್ಗ ತಾಲ್ಲೂಕಿನಲ್ಲಿ ಬೂದಿನಾಳು ಸೀಮೆ; ಇಂದಿನ ಮಡಕಶಿರಾ ತಾಲ್ಲೂಕಿನಲ್ಲಿ ಹೆಂಜೇರು ಸೀಮೆ, ರತ್ನಗಿರಿಸೀಮೆಗಳ ಹೆಸರು ತುಮಕೂರು ಜಿಲ್ಲೆಯ ವಿಜಯನಗರದ ಶಾಸನಗಳಲ್ಲಿ ಕಂಡುಬರುತ್ತದೆ. 22 ಸೀಮೆಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. ತುಮಕೂರು ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ 4 ಸೀಮೆಗಳು ಕಂಡುಬರುತ್ತವೆ.

ತುಮಕೂರು ಪ್ರದೇಶದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಉಲ್ಲೇಖಗೊಂಡಿರುವ ಸೀಮೆ ಎಂಬ ಪದವು ಅವರ ಆಡಳಿತ ವಿಭಾಗಕ್ಕೆ ಪ್ರಯೋಗವಾದ ಪದವಾಗಿದ್ದು, ಅದು 1400ರ ನಂತರ ಕಾಣಿಸಿಕೊಂಡಿದೆ. ಈ ಪ್ರದೇಶದ 1400ರ ಹಿಂದಿನ ಕೇವಲ ಎರಡು ಶಾಸನಗಳಲ್ಲಿ ಉಲ್ಲೇಖವಾಗಿರುವ ಈ ಪದವನ್ನು ಎಲ್ಲೆ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಡಾ. ಆರ್. ಗೋಪಾಲ್ (ಸಂ.), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕೃತಿಯಲ್ಲಿ ಡಾ. ಪಿ.ವಿ. ಕೃಷ್ಣಮೂರ್ತಿಯವರ 'ಪ್ರಾಚೀನ ಆಡಳಿತ ವಿಭಾಗಗಳು' ಲೇಖನ, ಪು. 203.
2. ಎ.ವಿ. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. 22–95.
3. ಎ.ಕ., ಸಂ. 12, ತುಮಕೂರು ಜಿಲ್ಲೆ, ಗುಬ್ಬಿ–46.
4. ಎ.ಕ., ಸಂ. 12, ಗುಬ್ಬಿ–18.
5. ಎ.ಕ., ಸಂ. 12, ತುಮಕೂರು–1.
6. ಎ.ಕ., ಸಂ. 12, ತುಮಕೂರು–11.
7. ಎ.ಕ., ಸಂ. 12, ಮಧುಗಿರಿ–64.
8. ಎ.ಕ., ಸಂ. 12, ಮಧುಗಿರಿ–58.
9. ಎ.ಕ., ಸಂ. 12, ತುಮಕೂರು–50.
10. ಎ.ಕ., ಸಂ. 12, ತುಮಕೂರು–59.
11. ಎ.ಕ., ಸಂ. 12, ಪಾವಗಡ–62.
12. ಎ.ಕ., ಸಂ. 12, ಶಿರಾ–31.
13. ಎ.ಕ., ಸಂ. 12, ಪಾವಗಡ–46.
14. ಎ.ಕ., ಸಂ. 12, ಗುಬ್ಬಿ–17.
15. ಎ.ಕ., ಸಂ. 12, ಗುಬ್ಬಿ–51.
16. ಎ.ಕ., ಸಂ. 12, ಗುಬ್ಬಿ–52.
17. ಎ.ಕ., ಸಂ. 12, ತಿಪಟೂರು–50.
18. ಎ.ಕ., ಸಂ. 12, ಕುಣಿಗಲ್–23.
19. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–1.
20. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–10.
21. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–5.
22. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–7.
23. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–6.
24. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–8.
25. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–83.
26. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–44.
27. ಎ.ಕ., ಸಂ. 12, ತಿಪಟೂರು–129.
28. ಎ.ಕ., ಸಂ. 12, ತಿಪಟೂರು–6.
29. ಎ.ಕ., ಸಂ. 12, ಚಿಕ್ಕನಾಯಕನಹಳ್ಳಿ–39.
30. ಎ.ಕ., ಸಂ. 12, ಮಧುಗಿರಿ–10.
31. ಡಾ. ಎನ್. ನಂದೀಶ್ವರ, ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರ, 2008, ಸಂಖ್ಯೆ 52; ಎ.ಕ., ಸಂ. 12, ಸಿರಾ–18.

32. ಡಾ. ಎನ್. ನಂದೀಶ್ವರ, *ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು*, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರ, 2008, ಸಂಖ್ಯೆ 74.
33. ಎ.ಕ., (ಪರಿಷ್ಕೃತ ಮಂಡ್ಯ ಜಿಲ್ಲೆ), ಸಂ. 7, ನಾಗಮಂಗಲ–96.
34. ಎ.ಕ., ಸಂ. 11, ಚಳ್ಳಕೆರೆ–21.
35. ಎ.ಕ., ಸಂ. 12, ಸಿರಾ–7 ಮತ್ತು ಸಿರಾ–54.
36. ಲಕ್ಷ್ಮಣ ತೆಲಗಾವಿ (ಸಂ.), *ಹರತಿಸಿರಿ*, ಪು. 306.
37. ಎ.ಕ., ಸಂ. 12, ಸಿರಾ–64; *ಸಿರಾ ತಾಲ್ಲೂಕಿನ ಶಾಸನಗಳು ಹಾಗೂ ಸ್ಮಾರಕಗಳು*, ಶಾ.ಸಂ. 77.
38. ಎ.ಕ., ಸಂ. 12, ಮಧುಗಿರಿ–32.
39. ಎ.ಕ., ಸಂ. 12, ಮಧುಗಿರಿ–45.
40. *ಸಿರಾ ತಾಲ್ಲೂಕಿನ ಶಾಸನಗಳು ಹಾಗೂ ಸ್ಮಾರಕಗಳು*, ಶಾ.ಸಂ. 50.
41. ಎ.ಕ., ಸಂ. 12, ಕುಣಿಗಲ್–5.

38. ವಿಜಯನಗರಕಾಲದ ಸಂಗೀತ ಕೃತಿಗಳು ಮತ್ತು ಶಾಸ್ತ್ರ ಕೃತಿಗಳು ಹಾಗೂ ಕೀರ್ತನೆಗಳಲ್ಲಿ ಐತಿಹಾಸಿಕ ಅಂಶಗಳು

ಶ್ರೀ ಪಿ. ಜಯಸಿಂಹ

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕರ್ನಾಟಕ ಸಂಗೀತ ತನ್ನ ಬಹುಮುಖೀ ಬೆಳವಣಿಗೆಯನ್ನು ಕಂಡಿತು, ಅನೇಕ ಪ್ರತಿಭಾವಂತ ಶಾಸ್ತ್ರಕಾರರು ತಮ್ಮ ಶಾಸ್ತ್ರಕೃತಿಗಳನ್ನು ಈ ಕಾಲದಲ್ಲಿ ರಚಿಸಿದರು. ಈ ಕೃತಿಗಳಲ್ಲಿ ಆಶ್ರಯದಾತ ರಾಜನನ್ನು, ಆಗಿನ ಯುದ್ಧಗಳ ವಿವರಗಳನ್ನು ಮತ್ತು ಇತರ ಅಂಶಗಳನ್ನು ದಾಖಲಿಸಿದ್ದಾರೆ. ಈ ಸಮಯದಲ್ಲಿ ರಚಿತವಾದ ಅನೇಕ ಕೀರ್ತನೆಗಳಲ್ಲಿಯೂ ಐತಿಹಾಸಿಕ ವಿವರಗಳಿವೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಈ ಕಾಲ ಒಂದು ಮೈಲಿಗಲ್ಲು. ವಿಜಯನಗರ ಸಾಮ್ರಾಜ್ಯವು ತನ್ನ ಭೌಗೋಳಿಕ-ರಾಜಕೀಯ ಪ್ರಭಾವಗಳಿಂದ ಹಲವು ಧಾರ್ಮಿಕ, ಕಲೆ ಮತ್ತು ಸಾಂಸ್ಕೃತಿಕ ಅಂಶಗಳ ಸಂಗಮ ಕೇಂದ್ರವಾಗಿತ್ತು. ಈ ಅವಧಿಯಲ್ಲಿ ಹಲವು ಸಂಗೀತಗಾರರು, ಸಂತರು ಮತ್ತು ಸಂಗೀತ ಶಾಸ್ತ್ರಜ್ಞರು ತಮ್ಮ ಸಮೃದ್ಧ ಕೊಡುಗೆಗಳನ್ನು ನೀಡಿರುವುದನ್ನು ಕಾಣಬಹುದು. ವಿಜಯನಗರ ಕಾಲದ ಸಂಗೀತ ಶಾಸ್ತ್ರ ಗಂಥಗಳಲ್ಲಿನ ಮತ್ತು ಕೀರ್ತನೆಗಳಲ್ಲಿನ ಐತಿಹಾಸಿಕ ಅಂಶಗಳನ್ನು ಕುರಿತು ಸಂಶೋಧಕರ ಗಮನ ಸೆಳೆಯುವುದೇ ಈ ಕಿರುಲೇಖನದ ಉದ್ದೇಶ.

* ವಿದ್ಯಾರಣ್ಯರು (ಕ್ರಿ.ಶ.ಸು 1333–1386) ಸಂಗೀತಸಾರವೆಂಬ ಕೃತಿಯನ್ನು ರಚಿಸಿದ್ದಾರೆ. ದುರದೃಷ್ಟವಶಾತ್ ಈ ಕೃತಿ ಲಭ್ಯವಾಗಿಲ್ಲ. ತಂಜಾವೂರಿನ ದೊರೆ ಚೆವ್ವಪ್ಪನಾಯಕನ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತನು (ಕ್ರಿ.ಶ.ಸು 1600) ಸಂಗೀತ ಸುಧಾ ಎಂಬ ಗ್ರಂಥವನ್ನು ರಚಿಸಿದ್ದಾನೆ, ಇದರಲ್ಲಿ ವಿದ್ಯಾರಣ್ಯರು ಸಂಗೀತಸಾರವನ್ನು ಬರೆದಿರುವ ಸಂಗತಿಯನ್ನು ಸೂಚಿಸಿರುವುದೇ ಅಲ್ಲದೆ 'ಕರ್ನಾಟಕ ಸಿಂಹಾಸನ ಭಾಗ್ಯ ವಿದ್ಯಾರಣ್ಯಾಭಿಧ ಶ್ರೀಚರಣಾಗ್ರಣೀಭ್ಯಃ' ಎಂಬ ವಾಕ್ಯಗಳನ್ನು ಬರೆದಿದ್ದಾನೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವನ್ನು ಅಲ್ಲಗಳೆಯುವ ವಿದ್ವಾಂಸರು ಇಂತಹ ಅಂಶಗಳನ್ನು ಗಮನಿಸಿರುವುದಿಲ್ಲ.

* ಸಾರಂಗದೇವನ (ಕ್ರಿ.ಶ. ಸು 1230) ಸಂಗೀತ ರತ್ನಾಕರಕ್ಕೆ ವ್ಯಾಖ್ಯಾನವನ್ನು ರಚಿಸಿರುವ ಕಲ್ಲಿನಾಥ ಅಥವಾ ಕಲ್ಲಪ್ಪನು ಪ್ರೌಢದೇವರಾಯನ (ಕ್ರಿ.ಶ.1424–1449) ಆಸ್ಥಾನದಲ್ಲಿದ್ದವನು. ಇವನು ವಲ್ಲಭದೇವನ ಮೊಮ್ಮಗ, ಲಕ್ಷ್ಮೀಧರ – ನಾರಾಯಣೀದೇವಿಯರ ಮಗ. ಈತನು ಪ್ರೌಢದೇವರಾಯನ ಕೋರಿಕೆಯಂತೆ ಸಂಗೀತ ರತ್ನಾಕರಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾನೆ, ಈ ವ್ಯಾಖ್ಯಾನದ ಆರಂಭದಲ್ಲಿ ಕರ್ನಾಟ ದೇಶವನ್ನು ವರ್ಣಿಸಿ ವಿದ್ಯಾನಗರವನ್ನು ಸ್ತುತಿಸಿ ಪ್ರೌಢದೇವರಾಯನನ್ನು ಹೊಗಳಿದ್ದಾನೆ. ಹಾಗೆಯೆ ಪ್ರೌಢದೇವರಾಯನ ಕಲಾಭಿಜ್ಞತೆಯನ್ನು ಹೊಗಳಿ ರಾಜನಿಂದ ಅಭಿನವ ಭರತಾಚಾರ್ಯ ಮತ್ತು ರಾಯಬಯಕಾರ ಎಂಬ ಬಿರುದುಗಳನ್ನೂ ಸ್ವರ್ಣಮಯ ತೊಡರನ್ನು ಪಡೆದಿದ್ದವನು. ವಿಜಯನಗರ ಸಾಮ್ರಾಜ್ಯದ ರಾಜರ ಕಲಾಪೋಷಣೆಯನ್ನು, ಸ್ವತಃ ರಾಜರಿಗಿದ್ದ ಸಂಗೀತ ಶಾಸ್ತ್ರ ಪಾಂಡಿತ್ಯವನ್ನು ಅರಿಯಲು ಇಂತಹ ಕೃತಿಗಳು ಸಹಾಯ ಮಾಡುತ್ತವೆ.

* ಈಗ ರಾಷ್ಟ್ರಪ್ರಸಿದ್ಧವಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಚಿಂತಲಪಲ್ಲಿ (ಹುಣಸನಹಳ್ಳಿ) ಸಂಗೀತ ಪರಂಪರೆಯ ಪೂರ್ವಿಕರಲ್ಲಿ ಒಬ್ಬರು ಚೆಲಿವೆಂದಲ ಗವಿರಂಗದಾಸರೆಂಬುವರು. ಪ್ರೌಢದೇವರಾಯನ ಕಾಲದಲ್ಲಿ ಇದ್ದ ಇವರು ಪ್ರೌಢದೇವರಾಯನನ್ನು ಕುರಿತು ಕೀರ್ತನೆಯನ್ನು ರಚಿಸಿದ್ದಾರೆ, ಇತಿಹಾಸಕಾರರು

ಇದನ್ನು ಗಮನಿಸಹೋಗಿಲ್ಲ. ಇಮ್ಮಡಿ ದೇವರಾಯನ ವ್ಯಕ್ತಿತ್ವವನ್ನು ಕರ್ನಾಟಕದ ವೈಭವವನ್ನು ವರ್ಣಿಸುವ ಇದನ್ನು ಇತಿಹಾಸದ ವಿಶ್ಲೇಷಣೆಯಲ್ಲಿ ಬಳಸಿಕೊಳ್ಳಬೇಕು. ಇದರ ಪೂರ್ಣಪಾಠವಿಂತಿದೆ.

ದೇವರಾಯುಡೇ ಮನ ಸದಾಶಿವುಡು
ಪಾವನ ಗಂಗಾಧರುಡು ಗಜವೇಟಕಾರುಡು॥

ಅ.ಪ॥ ಶ್ರೀವಿಜಯ ವಿದ್ಯಾನಗರವು
ರೀ ವಿಶೇಷ ಸ್ಥಿತುಡೇ ಧರಹಾಸುಡೇ॥
ನವಾವರಣ ಸಾಲಕೃತ ಸಾಲಂಕಾರುಡೇ
ಭಾವುಕ ಜನ ರಕ್ಷಕುಡೇ ಕರ್ನಾಟದೇಶಾಧಿಪುಡೆ ॥

ಚ ॥ ಭಸ್ಮಮೆಗಾಕ ಮಲಯ ಯವನಾದಿ ಸುಗಂಧ ಧರುಡೇ॥
ವಿಸ್ಮಯಾಕಾರುಡೇ ಭುವ । ನೇಶ್ವರೀ ಧವುಡೇ॥
ಅಶ್ವಗಜ ಪದಾತಿ ರಥಾದಿ ಚತುರಂಗ ವಿತುಡೇ ॥
ವಿಶ್ವ ವಿಜಯ ದಶಮೀ ದಶದಿಕ್ಪಾಲಕನುತುಡೇ ॥ ಪರಿಪೂರ್ಣುಡೇ ॥
ಮತ್ಸ್ಯಶರಭ ಸಾಲ್ವಗಂಡ ಭೇರುಂಡಾದ್ಯನೇಕ ಬಿರುದಾಧಿಷ್ಠಿತುಡೇ ॥
ಮತ್ಸ್ಯಗಿರೀನಾಮಕ ಚಲುವಿಂದಲ ಗಿರೀಶ ಸಖುಡೇ ॥

* ಭಂಡಾರು ಲಕ್ಷ್ಮೀನಾರಾಯಣನು ಸಂಗೀತ ಸೂರ್ಯೋದಯವೆಂಬ ಕೃತಿಯನ್ನು ರಚಿಸಿದ್ದಾನೆ. ಈತ ಕೃಷ್ಣದೇವರಾಯನ ಆಸ್ಥಾನಿಕ, ತನ್ನ ಕೃತಿಯಲ್ಲಿ ಕೃಷ್ಣದೇವರಾಯನ ದಿಗ್ವಿಜಯವನ್ನು ವರ್ಣಿಸಿದ್ದು ಇಂತಿದೆ:

ದುರ್ಗಂ ಜಿತ್ವಾऽಥ ಸೋऽಸಾವುದಯ
ಗಿರಿವರಂ ತತ್ರ ರಾಹುತ್ತರಾಜಂ
ಬಂದೀಕೃತ್ವಾ ತು ಹೃತ್ವಾ ಯುಧಿ
ನಗರವರೇ ಕೊಂಡವಿಡ್- ಕೊಂಡಪಲ್ಲ್ಯಾ ।

ಜೀವಗ್ರಾಹಂ ಗೃಹೀತ್ವಾ ಗಜಪತಿ
ತನಯಂ ಪೋಟ್ಟು - ಸೂರ್ - ಪಟ್ಟಣಾಗ್ರೇ
ऽಶ್ವಸ್ಸಾ ಳ್ಘ್ಯಪ್ರತಾಪೋ ಬಿರುದಯುತ
ಜಯಸ್ತಂಭಮುಚ್ಚೈರ್ ನ್ಯಖಾನಿರ್ ॥

* ತಾಳ್ಳಪಾಕ ಅನ್ನಮಾಚಾರ್ಯರು ತಮ್ಮ ಅನೇಕ ಕೀರ್ತನೆಗಳಲ್ಲಿ ತಾವು ಸಂಚರಿಸಿದ ವಿವಿಧ ಕ್ಷೇತ್ರಗಳ ದೇವತೆಗಳನ್ನು ಸ್ತುತಿಸಿದ್ದಾರೆ. ಇದರಿಂದಾಗಿ ವಿಜಯನಗರ ಕಾಲದ ಅನೇಕ ದೇವತೆಗಳ ಬಗೆಗಿನ ಗೊಂದಲಗಳನ್ನು ಹೆಸರಿನ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿದೆ. ಉದಾಹರಣೆಗೆ ಕೃಷ್ಣದೇವರಾಯನು ಕಳಿಂಗದ ಮೇಲೆ ದಿಗ್ವಿಜಯ ಯಾತ್ರೆಗೆ ಹೋದಾಗ ನೆಲ್ಲೂರು ಪ್ರಾಂತ್ಯದ ಉದಯಗಿರಿಯಲ್ಲಿದ್ದ ಬಾಲಕೃಷ್ಣನ ವಿಗ್ರಹವನ್ನು ಹಂಪೆಗೆ ತಂದು ಪ್ರತಿಷ್ಠಾಪಿಸುತ್ತಾನೆ. ಇದೇ ಇಂದು ಪ್ರಸಿದ್ಧವಾಗಿರುವ ಕೃಷ್ಣದೇವಾಲಯ. ಈ ದೇವಾಲಯದಲ್ಲಿ ಈಗ ಮೂರ್ತಿ ಕಂಡುಬರುವುದಿಲ್ಲ. ಅನ್ನಮಾಚಾರ್ಯರು ಈ ಕೃಷ್ಣನನ್ನು ಉದ್ದಗಿರಿ ಕೃಷ್ಣ ಎಂದು ಉಲ್ಲೇಖಿಸಿದ್ದಾರೆ. ಈಗ

ಉಗ್ರನರಸಿಂಹನೆಂದು ನಾವು ತಪ್ಪಾಗಿ ಕರೆಯುತ್ತಿರುವ ಯೋಗಲಕ್ಷ್ಮೀನರಸಿಂಹ ಮೂರ್ತಿಯನ್ನು ಅನ್ನಮಾಚಾರ್ಯರು ಸುಗ್ರೀವ ನರಸಿಂಹನೆಂದು ಕರೆದಿದ್ದಾರೆ, ಇಂತಹ ಉಲ್ಲೇಖಗಳನ್ನು ಶಿಲ್ಪಗಳ ಅಧ್ಯಯನಕ್ಕೆ ಬಳಸಿಕೊಳ್ಳಬೇಕು.

* ಪುರಂದರದಾಸರು ಕರ್ನಾಟಕ ಸಂಗೀತ ಪಿತಾಮಹರು, ಇವರ ಅನೇಕ ಕೃತಿಗಳಲ್ಲಿ ವಿಜಯನಗರ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿದ್ದ ದೇವ ದೇವತೆಗಳ ಸ್ತುತಿಗಳು ಕಂಡುಬರುತ್ತವೆ. ಇದಕ್ಕೆ ಪ್ರಸಿದ್ಧ ಉದಾಹರಣೆಗೆ ಹೇಮಕೂಟದ ಮೇಲಿರುವ ಗಣೇಶನ ಸ್ತುತಿ. 'ಲಂಬೋದರ ಲಕುಮಿಕರ ಅಂಬಾಸುತ ಅಮರವಿನುತ' ಈ ಪಿಳ್ಳಾರಿ ಗೀತೆಯಲ್ಲಿ ಹೇಮಕೂಟ ಸಿಂಹಾಸನದ ಮೇಲಿನಿಂದ ಕಾಣುವ ವಿರೂಪಾಕ್ಷನ ಮಂದಿರವನ್ನು ವರ್ಣಿಸಿದ್ದಾರೆ. ಇಂತಹ ವರ್ಣನೆಗಳು ಅಂದಿನ ಭೌಗೋಳಿಕ ಸ್ಥಿತಿಯನ್ನು ಅರಿಯಲು ಸಹಾಯ ಮಾಡುತ್ತವೆ.

* ಸ್ವರಮೇಳ ಕಲಾನಿಧಿ ಎಂಬ ಕೃತಿಯನ್ನು ರಚಿಸಿರುವ ಬಯಕಾರ ರಾಮಪ್ಪಯ್ಯ/ರಾಮಮಂತ್ರಿಯು ಅಳಿಯ ರಾಮರಾಯನ ಆಸ್ಥಾನದಲ್ಲಿದವನು. ಈತನ ತಂದೆ ತಿಮ್ಮರಸ. ರಾಮಪ್ಪಯ್ಯನು ಸಂಗೀತರತ್ನಾಕರಕ್ಕೆ ವ್ಯಾಖ್ಯಾನವನ್ನು ರಚಿಸಿದ ಕಲ್ಲಿನಾಥನ ಮಗಳ ಮಗ. ತನ್ನ ಕೃತಿಯಲ್ಲಿ ಅಳಿಯ ರಾಮರಾಯನ ಆಸ್ಥಾನ ವೈಭವವನ್ನು ಅಲ್ಲಿ ನಡೆಯುತ್ತಿದ್ದ ಸಂಗೀತ, ಸಾಹಿತ್ಯ ವಿನೋದ ಕಾರ್ಯಕ್ರಮಗಳನ್ನು ವರ್ಣಿಸಿದ್ದಾನೆ ಮತ್ತು ಈ ಕೃತಿ ರಚನೆಗೆ ರಾಮರಾಯ ಪ್ರಭುವೇ ಕಾರಣನೆಂದು ಸಾರಿದ್ದಾನೆ. ರಾಮರಾಯನು ರಾಮಪ್ಪಯ್ಯನನ್ನು ಜೇಲೂರಿ ಸಿಂಹಾಸನ ಪಟ್ಟಣದ ಒಡೆಯನೆಂದು ಸಾರಿ ಎಣೆಯಿಲ್ಲದ ಐಶ್ವರ್ಯವನ್ನು ಕೊಟ್ಟನು. ರಾಮಪ್ಪಯ್ಯನು ತನ್ನ ಮಕ್ಕಳ ಹೆಸರಿನಲ್ಲಿ ಅನೇಕ ಕಡೆ ಕೆರೆಗಳನ್ನು ಅಗ್ರಹಾರಗಳನ್ನು ನಿರ್ಮಿಸಿದನು. ಇದನ್ನು ಸಾರುವ 20ಕ್ಕೂ ಮೇಲ್ಪಟ್ಟ ಶಾಸನಗಳು ದೊರೆತಿವೆ. ರಾಮರಾಯನ ಆಳ್ವಿಕೆಯ ಒಂದು ಮಜಲನ್ನು ನಾವು ಈ ಕೃತಿಯಿಂದ ತಿಳಿಯಬಹುದು.

ಈ ಮೇಲಿನ ಉಲ್ಲೇಖಗಳಲ್ಲದೆ ವ್ಯಾಸರಾಯರು, ಶ್ರೀಪಾದರಾಜರು, ಕನಕದಾಸರು ಮುಂತಾದ ದಾಸಶ್ರೇಷ್ಠರ ಕೃತಿಗಳಲ್ಲಿಯೂ ದೇವ, ದೇವತೆಗಳ ಸ್ತುತಿಗಳು, ನಗರ ವರ್ಣನೆ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮುಂತಾದ ಹಲವು ವಿವರಗಳು ಕಂಡುಬರುತ್ತವೆ. ಸಂಗೀತ ಶಾಸ್ತ್ರಕೃತಿಗಳಲ್ಲಿಯೂ ಅನೇಕ ಅಂಶಗಳು ಕಂಡುಬರುತ್ತವೆ. ಈ ಕೃತಿಗಳಲ್ಲಿ ಬಹುಪಾಲು ಅಪ್ರಕಟಿತ ಸ್ಥಿತಿಯಲ್ಲಿಯೇ ಇವೆ. ಈ ಎಲ್ಲ ಆಕರಗಳಲ್ಲಿ ದೊರಕುವ ಮಾಹಿತಿಗಳನ್ನು ಮತ್ತು ಶಾಸನಗಳು ಹಾಗೂ ಇತರ ಆಕರಗಳಲ್ಲಿ ದೊರಕುವ ಮಾಹಿತಿಗಳನ್ನು ಒಂದೆಡೆ ಸಂಕಲಿಸಿ ಪರಸ್ಪರ ಹೋಲಿಸಿದಾಗ ಮಾತ್ರ ಇತಿಹಾಸದ ವಿವರಗಳನ್ನು ಸಮರ್ಪಕವಾಗಿ ರಚಿಸಲು ಸಾಧ್ಯವಾಗುತ್ತದೆ. ಈ ಲೇಖನದಲ್ಲಿ ಕಿರಿದಾಗಿ ಇಂತಹ ಸಾಧ್ಯತೆಗಳ ಬಗೆಗೆ ಗಮನ ಸೆಳೆಯಲು ಪ್ರಯತ್ನಿಸಲಾಗಿದೆ. ನಮ್ಮ ಬರವಣಿಗೆಯಲ್ಲಿ ಕೆಲವು ಲೋಪದೋಷಗಳೂ ಇರಬಹುದು. ಈ ಲೇಖನದಲ್ಲಿ ಸಂಬಂಧವಾದ ಉಲ್ಲೇಖವಾದ ಅಂಶಗಳ ಸಂಶೋಧನೆ ಕೆಲವು ಶೀಘ್ರವಾಗಿ ನಡೆಯಲೆಂದು ಹಾರೈಸುತ್ತೇನೆ.

ಆಧಾರಸೂಚಿ

1. ಡಾ. ರಾ. ಸತ್ಯನಾರಾಯಣ, *ಕರ್ನಾಟಕ ಸಂಗೀತ ವಾಹಿನಿ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2001, ದ್ವಿತೀಯ ಮುದ್ರಣ.
2. ಶ್ರೀಕಾಂತಂ ನಾಗೇಂದ್ರ ಶಾಸ್ತ್ರೀ (ಸಂ), *ಚೆಲಿವಿಂದಲ ಗವಿರಂಗದಾಸರ ಸಮಗ್ರ ಕೃತಿರತ್ನ ಮಾಲಿಕಾ*, ಚಿಂತಲಪಲ್ಲಿ ಪರಂಪರಾ ಟ್ರಸ್ಟ್, ಬೆಂಗಳೂರು–2009
3. ಪಂಡಿತ ಎಸ್. ಸುಬ್ರಹ್ಮಣ್ಯ ಶಾಸ್ತ್ರಿ (ಪುನರ್ ಪರಿಷ್ಕರಣ–ಶ್ರೀಮತಿ ಎಸ್. ಶಾರದಾ) (ಸಂ.), *ಶಾರ್ಙ್ಗದೇವನ ಸಂಗೀತ ರತ್ನಾಕರ* [ಸಂಪುಟ–1], ಅಡ್ಯಾರ್ ಲೈಬ್ರರಿ ಅಂಡ್ ರಿಸರ್ಚ್ ಸೆಂಟರ್, ಮದ್ರಾಸ್–1992 ದ್ವಿತೀಯ ಮುದ್ರಣ (ಕಲ್ಲಿನಾಥನ ವ್ಯಾಖ್ಯಾನದೊಡನೆ)
4. ಎಸ್. ಆರ್. ರಾಮಸ್ವಾಮಿ, *ಸಾಹಿತಿ ಸಮರಾಂಗಣ ಸಾರ್ವಭೌಮ ಕೃಷ್ಣದೇವರಾಯ*, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು, 2009.
5. R. Satyanarayana, The Sangeetha Suryodaya of Bhandaru Lakshminarayana : A Study in History.

39. ಸಗರ ನಾಡಿನಲ್ಲಿ ವಿಜಯನಗರದ ಹೆಜ್ಜೆ ಗುರುತುಗಳು

ಶ್ರೀ ರಮೇಶ ನಾಯಕ

ಕೃಷ್ಣಾ ಮತ್ತು ಭೀಮಾನದಿಗಳ ನಡುವೆ ವ್ಯಾಪಿಸಿರುವ ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ, ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಹಾಗೂ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಸಿಂದಗಿ ತಾಲೂಕು ಪ್ರದೇಶವನ್ನು ಸ್ಥೂಲವಾಗಿ ಸಗರ ನಾಡೆಂದು ಕರೆಯಲಾಗುತ್ತದೆ. ಸ್ಥಳೀಯವಾಗಿ ಸಗರ ಗಡ್ಡೆಯೆಂತಲೂ ಕರೆಯುವರು. ಪುರಾಣ ಪ್ರಸಿದ್ಧನೂ ಮಹಾ ಬಲಶಾಲಿಯೂ ಪರಮ ದೈವಭಕ್ತನಾದ ಸಗರ ಚಕ್ರವರ್ತಿಯು ಸಗರವನ್ನು ತನ್ನ ರಾಜಧಾನಿ ಮಾಡಿಕೊಂಡು ಈ ವಿಸ್ತಾರವಾದ ಪ್ರದೇಶವನ್ನು ಆಳ್ವಿಕೆ ಮಾಡಿದನೆಂಬ ಪ್ರತೀತಿಯಿದೆ (*ಗುಲ್ಬರ್ಗಾ ಗ್ಯಾಸೆಟಿಯರ್*, ಪು. 33–34).

ಸಗರನಾಡು ಬಹು ವಿಶಾಲ ವ್ಯಾಪ್ತಿಯನ್ನು ಹೊಂದಿರುವುದು. ಆದರೂ ಪ್ರಸ್ತುತ ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲೂಕು ಪ್ರದೇಶವು ಈ ನಾಡಿನ ಹೃದಯಭಾಗವಾಗಿತ್ತೆಂಬ ವಿವರಗಳಿವೆ. ಅಲ್ಲದೇ ಶಹಾಪುರ ತಾಲೂಕಿನ ಸಗರ ಎಂಬ ಹೆಸರಿನ ಪ್ರಾಚೀನ ಪಟ್ಟಣವು ಇದರ ಮುಖ್ಯರಾಜಧಾನಿಯಾಗಿದ್ದಿರುವ ಉಲ್ಲೇಖಗಳು ದಾಖಲಾಗಿವೆ. ಕೆಲವು ಅಧ್ಯಯನಕಾರರು ಪ್ರಸ್ತುತ ಶಹಾಪುರ ಪಟ್ಟಣವೇ ಪ್ರಾಚೀನ ಸಗರವಾಗಿತ್ತೆಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ (*ಸಗರನಾಡು ದರ್ಶನ*, ಪು. 1–10). ಇಂಥ ವಾದಗಳ ಸತ್ಯಾಸತ್ಯತೆ ಏನೇ ಇರಲಿ ಈ ಪ್ರದೇಶವು ಪ್ರಾಚೀನ ಶಿಲಾಯುಗ ನಾಗರಿಕತೆಯ ವಿವಿಧ ಹಂತಗಳಿಂದ ಹಿಡಿದು ಈವರೆಗೂ ಹಲವಾರು ಮಹತ್ವದ ಸಂಗತಿಗಳನ್ನು ತನ್ನ ಒಡಲಲ್ಲಿ ಪೋಷಿಸಿಕೊಂಡು ಬೆಳೆದುಬಂದಿದೆ. ಕರ್ನಾಟಕ ಚರಿತ್ರೆಯಲ್ಲಿ ತನ್ನದೇ ಆದ ಮಹತ್ವದ ಸ್ಥಾನಮಾನ ಉಳಿಸಿಕೊಂಡಿರುವಂಥದ್ದು ಮಾತ್ರ ನಿರ್ವಿವಾದದ ಸಂಗತಿಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಅಲ್ಲದೇ ಲಭ್ಯವಿರುವ ಶಾಸನಗಳಲ್ಲಿಯೂ ಸಹ ಸಗರನಾಡು ಕುರಿತಿರುವ ಸ್ಪಷ್ಟ ಉಲ್ಲೇಖಗಳಂತೂ ಅಗಣಿತ ಸಂಖ್ಯೆಯಲ್ಲಿ ದಾಖಲಾಗಿರುವುದನ್ನು ಕಾಣುತ್ತೇವೆ. ಪ್ರಾಚೀನ ಕಾಲದಿಂದಲೂ ಬೆಲೆಯುಳ್ಳ ಸ್ಥಾನ ಪಡೆದಿರುವ ಈ ಆಡಳಿತ ವಿಭಾಗವು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಸೇವುಣರ ಕಾಲದಲ್ಲಿ ಮಹತ್ವದ ಅತೀ ಮುಖ್ಯ ಪಾತ್ರವಹಿಸಿರುವುದನ್ನು ಗಮನಿಸಬಹುದು. ಆದರೆ ವಿಜಯನಗರ ಆಡಳಿತಗಾರರ ಸುಪರ್ದಿಗೆ ಒಳಗಾಗಿರುವುದು ಮಾತ್ರ ತುಂಬಾ ವಿರಳ ಬಾರಿ. ಅಂಥ ಸಂಗತಿಗಳ ಕುರಿತು ವಿವೇಚಿಸುವ ಆಲೋಚನೆ ಈ ಲೇಖನದ ಉದ್ದೇಶವಾಗಿದೆ.

ಹದಿನಾಲ್ಕರಿಂದ ಹದಿನಾರನೆಯ ಶತಮಾನದಲ್ಲಿ ಇಡೀ ದಕ್ಷಿಣ ಭಾರತವನ್ನು ತಮ್ಮ ಭದ್ರಬಾಹುಗಳಲ್ಲಿ ಹಿಡಿದಿಟ್ಟುಕೊಂಡಿದ್ದ ವಿಜಯನಗರ ಅರಸರು ಪ್ರಾಚೀನ ಕನ್ನಡ ನಾಡಿನ ಈಶಾನ್ಯ ಪ್ರಾಂತಗಳನ್ನು ಮಾತ್ರ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನದಲ್ಲಿ ಸಂಪೂರ್ಣ ಯಶಸ್ಸು ಸಾಧಿಸಲಿಲ್ಲವೆಂದೇ ಅಭಿಪ್ರಾಯಿಸಬಹುದು. ಆದರೆ ಸಾಮ್ರಾಜ್ಯ ಸ್ಥಾಪನೆಯ ಬಹುಕಾಲದ ನಂತರ ಅಂದರೆ ಕೃಷ್ಣದೇವರಾಯನು ಕೈಗೊಂಡ ಪ್ರಚಂಡ ಸಾಹಸಗಳಿಂದ ಸಗರನಾಡಿನಲ್ಲಿ ವಿಜಯನಗರದ ಸೈನ್ಯ ಮೊದಲು ಬಾರಿ ಪ್ರವೇಶಿಸುವಂತಾಯಿತು. ಪ್ರಾಚೀನ ಪ್ರಾಮುಖ್ಯತೆಯನ್ನು ಪಡೆದಿದ್ದ ಈ ನಾಡಿನಲ್ಲಿ ವಿಜಯನಗರ ಮೂಡಿಸಿದ ಹೆಜ್ಜೆ ಗುರುತು ಹಾಗೂ ಆ ಸಂದರ್ಭದ ಇನ್ನಿತರ ವಿವರಗಳನ್ನು ಕೆಲವು ವಿಶೇಷ ಆಧಾರಗಳ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಲ್ಲದೇ ಪ್ರಸ್ತುತ ಲೇಖನದಲ್ಲಿ ಸಗರನಾಡಿನ ಯಾದಗಿರಿ ಜಿಲ್ಲೆಯ ಪ್ರದೇಶಗಳ ಮೇಲೆ ಘಟಿಸಿದ ಪ್ರಭಾವಗಳನ್ನು ಮಾತ್ರ ಅನುಲಕ್ಷಿಸಿ ಲೇಖನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಪೂರ್ವದ ಸಂದರ್ಭಗಳು

ವಿಜಯನಗರ ಸ್ಥಾಪನೆಯ ಪೂರ್ವದಲ್ಲಿಯೇ ಕುಮ್ಮಟದ ಅರಸರು ಈ ನಾಡಿನ ಮೇಲೆ ತಮ್ಮ ಪ್ರಭಾವವನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದರು. ಅದಕ್ಕೆ ಕೆಲವು ರಾಜಕೀಯ ಕಾರಣಗಳಿದ್ದವು. ಮುಖ್ಯವಾಗಿ ಪ್ರಬಲವಾದ ಸೈನಿಕ ದಾಳಿಗಳ ಮೂಲಕ ಉತ್ತರದಿಂದ ದಕ್ಷಿಣಕ್ಕೆ ಪ್ರವೇಶಿಸಿಸುತ್ತಿದ್ದ ಮುಸ್ಲಿಂ ಅಥವಾ ದೆಹಲಿ ಸುಲ್ತಾನರನ್ನು ತಡೆಗಟ್ಟುವುದಾಗಿತ್ತು. ಅಲ್ಲದೇ ಉತ್ತರದ ದಾಳಿಕೋರರಿಂದ ದಕ್ಷಿಣ ಭಾರತದ ಭೂಮಂಡಲವನ್ನು ರಕ್ಷಿಸುವ ಮುಖ್ಯ ಇರಾದೆ ಕುಮ್ಮಟದ ಅರಸರದಾಗಿತ್ತು. ಕಾರಣ ಅವರ ಪ್ರವೇಶಕ್ಕೆ ಇದ್ದಿರಬಹುದಾದ ಮೊದಲ ಹೆಬ್ಬಾಗಿಲು ಇದೇ ಸಗರವೇ ಆಗಿತ್ತು. ಹಾಗಾಗಿ ಸಗರ ಪ್ರದೇಶವನ್ನು ವಶಪಡಿಸಿಕೊಳ್ಳುವುದು ಕುಮ್ಮಟ ಅರಸರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿ ಮಾರ್ಪಟ್ಟಿತ್ತು. ಆದರೂ ಮೊದಮೊದಲು ದೆಹಲಿಯ ದಾಳಿಕೋರರೇ ಮೇಲುಗೈ ಪಡೆಯುತ್ತಾ ಮುನ್ನಡೆದರು. ಅಂಥ ಪರಿಣಾಮಕಾರಿ ಜಯಗಳ ಮೂಲಕವೇ ಮುಂದಿನ ದಿನಗಳಲ್ಲಿ ದೆಹಲಿಯ ಈ ಯವಣರು (ಮುಸ್ಲಿಂ) ಹೊಯ್ಸಳರ ದೊರಸಮುದ್ರ (ಹಳೇಬೀಡು) ಮತ್ತು ಪಾಂಡ್ಯರ ಮಧುರೈಯನ್ನು ಕೊಳ್ಳೆ ಹೊಡೆಯುವ ಮಾರ್ಗವನ್ನು ಸಗರ ಮೂಲಕವೇ ನಿರ್ಮಿಸಿಕೊಂಡರು. ಆದರೆ ಅವರ ದಾಳಿಗಳೂ ಸಹ ಸಂಘಟಿತವಾಗಿರದೇ ಅವು ಕೇವಲ ತಾತ್ಕಲಿಕವಾಗಿದ್ದವು ಎಂಬ ಅಭಿಪ್ರಾಯಗಳು ದಾಖಲಾಗಿವೆ. ಹಾಗಾಗಿ ಬಹಳ ವರ್ಷಗಳ ಕಾಲ ಈ ಜಯದ ಮಾಲೆ ಸದಾ ಓಲಾಡುತ್ತಲೇ ಇತ್ತು. ಅಲ್ಲದೇ ದೆಹಲಿ ಸೈನ್ಯದ ಎದುರು ಸೋತು ಅಸಹಾಯಕರಾಗಿದ್ದ ಸ್ಥಳೀಯ ಅರಸರು ಮತ್ತು ಸಣ್ಣಪುಟ್ಟ ಅಧಿಕಾರ ವರ್ಗವೂ ತಮ್ಮ ಛಲ ಬಿಡದೇ ಅಷ್ಟಿಷ್ಟು ಅಸ್ತಿತ್ವ ಉಳಿಸಿಕೊಂಡು ಬಂದಿದ್ದ ಹೊಸ ಅತಿಥಿಗಳಿಗೆ ನಿರಂತರವಾಗಿ ಕಿರುಕುಳ ಕೊಡುತ್ತಲೇ ಇದ್ದರು. ಇಂಥ ಅಸಹನೀಯವಾದ ಅವಘಡಗಳನ್ನು ತಪ್ಪಿಸಲು ಸಗರನಾಡಿನ ಪ್ರಮುಖ ಪಟ್ಟಣ ಸಗರದಲ್ಲಿ ಶಾಶ್ವತ ಮಿಲಟರಿ (ಸೈನ್ಯ) ಕೇಂದ್ರವನ್ನು ಸ್ಥಾಪಿಸುವ ಮೂಲಕ ತನ್ನ ಅಧಿಕಾರವನ್ನು ಭದ್ರಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ಮಹ್ಮದ ಬಿನ್ ತುಘಲಕ ಫಲಪ್ರದವಾಗಿ ಯೋಚಿಸಿ ಇಲ್ಲೊಂದು ಸೈನಿಕ ಠಾಣೆ ಸ್ಥಾಪಿಸುವ ಯೋಜನೆಯನ್ನು ಕಾರ್ಯಗತಗೊಳಿಸಿದ.

ಪ್ರಯತ್ನಪೂರ್ವಕ ಆಲೋಚನೆಗಳೊಂದಿಗೆ ತನ್ನ ದಾಯಾದಿ ಘಿಯಾಸುದ್ದೀನ್‌ನ ಅಕ್ಕನ ಮಗನಾದ ಬಹುಉದ್‌ದೀನ್ ಗುರಷಾಸ್ಪನನ್ನು ವಿಸ್ತಾರವಾದ ಸಗರನಾಡಿನ ರಾಜ್ಯಪಾಲನನ್ನಾಗಿ ನೇಮಿಸಿ ತನ್ನ ಅಧಿಕಾರ ಸುಭದ್ರಗೊಳಿಸಿಕೊಂಡನು. ಆದರೆ ದುರದೃಷ್ಟವಶಾತ್ ಅವನ ಪ್ರತಿನಿಧಿಯಾಗಿ ನೇಮಕಗೊಂಡಿದ್ದ ಆ ರಾಜ್ಯಪಾಲನೆ ಸುಲ್ತಾನನ ವಿರುದ್ಧ ಸಿಡಿದೆದ್ದು ಹಲವು ಸ್ಥಿತ್ಯಂತರಗಳಿಗೆ ಕಾರಣನಾದ. ಅದೇ ಸಂದರ್ಭದ ನಿರೀಕ್ಷೆಯಲ್ಲಿದ್ದ ಕುಮ್ಮಟದ ಅರಸ ಕಂಪಿಲ ಹಾಗೂ ಅವನ ಮಗ ಕುಮಾರರಾಮನು ಸುಲ್ತಾನನ ವಿರುದ್ಧ ಬಂಡೆದ್ದಿದ್ದ ಗುರುಷಾಸ್ಪನಿಗೆ ಬೆಂಬಲವಾಗಿ ನಿಂತರು. ತಲೆದೋರಿದ್ದ ಅಸ್ಥಿರತೆಯನ್ನು ನಿವಾರಿಸಲು ಕುಮಾರರಾಮನು ಬಲಿಷ್ಠ ಸೈನ್ಯ ಸಮೇತನಾಗಿ ಸಗರನಾಡನ್ನು ಪ್ರವೇಶಿಸಿ ವಿಷಮಗೊಂಡಿದ್ದ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದ. ತಮ್ಮನ್ನು ಬೇಡಿ ಬಂದು ಆಶ್ರಯ ಪಡೆದಿದ್ದ ಗುರುಷಾಸ್ಪನಿಗೆ ದೆಹಲಿ ಸೈನ್ಯದೆದುರು ಜಯ ದೊರಕುವಂತೆ ಮಾಡಿ ಸುಲ್ತಾನನ ಅಧಿಕಾರವನ್ನು ಧಿಕ್ಕರಿಸಿ ತನ್ನ ಪ್ರಾಬಲ್ಯ ಸ್ಥಾಪಿಸಿದನು. ಆದರೂ ಈ ಗೆಲುವಿನ ಲಾಭವು ಸಹ ನಿರೀಕ್ಷಿಸಿದಷ್ಟು ಫಲ ನೀಡಲಿಲ್ಲ. ಅದೇ ವೇಳೆಗೆ ಈ ಘಟನೆಯು ಆ ಕಾಲದ ರಾಜಕೀಯ ಚರಿತ್ರೆಗೆ ಕೆಲವು ಹೊಸ ತಿರುವುಗಳನ್ನು ಕಲ್ಪಿಸಿತ್ತು. ಪ್ರಮುಖವಾಗಿ ಮುಂದಿನ ದಿನಗಳಲ್ಲಿ ಉತ್ತರ ಮತ್ತು ದಕ್ಷಿಣ ಭಾರತ ರಾಜರುಗಳ ಮಧ್ಯೆ ಎಡೆಯಿಲ್ಲದ ನಿರಂತರ ಹೋರಾಟಗಳಿಗೆ ಶಾಶ್ವತವಾದ ವೇದಿಕೆಯೊಂದನ್ನು ಇಂಥ ಘಟನೆ ನಿರ್ಮಿಸಿದಂತಾಯಿತು. ಅಲ್ಲದೆ ಎಲ್ಲಕ್ಕಿಂತ ಮುಖ್ಯವಾಗಿ ದಕ್ಷಿಣ ಭಾರತ ವ್ಯಾಪ್ತಿಯೊಳಗೆ ಕೆಲವೇ ವರ್ಷಗಳ ಅಂತರದಲ್ಲಿ ಎರಡು ಹೊಸ ರಾಜ್ಯಗಳ ಉದಯಕ್ಕೆ ಈ ಘಟನೆಯು ಕಾರಣವಾಯಿತು. ಇಂಥ ಪರಿಣಾಮಗಳಿಂದ ಈ ಪ್ರದೇಶದಲ್ಲಿ ಬದಲಾವಣೆಗಳು ಮತ್ತು ಯುದ್ಧಗಳು ಕೊನೆಯಿಲ್ಲದಂತೆ ಘಟಿಸಲಾರಂಭಿಸಿದವು. ಒಟ್ಟಾರೆ ಅಭಿಪ್ರಾಯಿಸಿ ಹೇಳುವುದಾದರೆ ಕಂಪ್ಲಿ, ಹಂಪಿ ಅಥವಾ ವಿಜಯನಗರ ಪ್ರದೇಶದಲ್ಲಿ ಆಳುತ್ತಿದ್ದ ಅರಸನೊಬ್ಬ ಸಗರನಾಡನ್ನು ಪ್ರವೇಶಿಸಿದ

ಮೊಟ್ಟಮೊದಲ ಸಂಗತಿ ಕುಮಾರರಾಮನ ಹೆಸರಿನಲ್ಲಿ ದಾಖಲಾಯಿತು. ಅಲ್ಲದೇ ಅದರ ಪರಿಣಾಮಗಳು ಸಹ ಮುಂದಿನ ದಿನಗಳಲ್ಲಿ ಹಲವು ಅನಾಹುತಕ್ಕೆ ಕಾರಣವಾದವು.

ಅಪಾಯಗಳನ್ನು ಆ ಮೊದಲೇ ಅರಿತಿದ್ದ ಕುಮಾರರಾಮ ತನ್ನ ಮಾತಿಗೆ ಬದ್ಧನಾಗಿ ತುಘಲಕನ ಯುದ್ಧಾತಿ ದಳಗಳನ್ನೆಲ್ಲ ಎದುರಿಸಿ ಹೋರಾಡಿದ. ಆದರೆ ಬಲಾಢ್ಯವಾಗಿದ್ದ ದೆಹಲಿ ಸುಲ್ತಾನನ ಸೈನ್ಯವು ಕುಮ್ಮಟವನ್ನು ಕೆಲವೇ ದಿನಗಳಲ್ಲಿ ನಿರ್ನಾಮ ಮಾಡಿ ತನಗಾಗಿದ್ದ ಸೇಡನ್ನು ತೀರಿಸಿಕೊಂಡಿತು. ಈ ಸೋಲು ಎಂಥ ಪರಿಣಾಮಕ್ಕೆ ಎಡೆಮಾಡಿಕೊಟ್ಟಿತು ಎಂದರೆ ಆ ನಂತರ ಇತಿಹಾಸದಲ್ಲಿ ಸುಮಾರು ಇನ್ನೂರು ವರ್ಷಗಳ ಕಾಲ ಹಂಪಿ ಪ್ರದೇಶದ ಯಾವೊಬ್ಬ ಅರಸನು ಕುಮಾರರಾಮನ ನಂತರ ಸಗರ ನಾಡಿನ ಮೇಲೆ ದಾಳಿ ಮಾಡಿ ಒಂದು ಸಣ್ಣ ಗೆಲುವನ್ನು ಪಡೆಯುವಲ್ಲಿ ಯಶಸ್ವಿಯಾಗಲಿಲ್ಲವೆಂದೇ ಅಭಿಪ್ರಾಯಿಸಬಹುದು. ಆದರೆ ಕ್ರಿ.ಶ. 1509ರಲ್ಲಿ ವಿಜಯನಗರ ಸಿಂಹಾಸನವನ್ನೇರಿದ್ದ ಪ್ರಚಂಡ ಸಾಹಸಿ ಕೃಷ್ಣದೇವರಾಯನು ತಾನಾಗಿಯೇ ಸೃಷ್ಟಿಗೊಂಡಿದ್ದ ಇಂಥ ಅಪಜಯದಿಂದ ಕೂಡಿದ್ದ ಲಕ್ಷ್ಮಣರೇಖೆಯನ್ನು ಅಳಿಸಿ ಹಾಕಿ ಹೊಸ ಇತಿಹಾಸ ಬರೆದ. ಕೃಷ್ಣೆಯನ್ನು ದಾಟಿದ ಅವನು ಸಗರನಾಡಿನಲ್ಲಿದ್ದ ಬಹಮನಿಗಳನ್ನು ಛಿದ್ರಮಾಡಿ ತನ್ನ ಪ್ರಾಬಲ್ಯ ಮೆರೆದನು.

ವಿಜಯನಗರ ರಾಜ್ಯಪ್ರಾರಂಭ ಕಾಲಾವಧಿಯಿಂದ (ಕ್ರಿ.ಶ.1336) ಕ್ರಿ.ಶ. 1522–23ರ ವರೆಗೆ ಇಂಥದ್ದೊಂದು ಸಾಹಸಗೈಯಲು ಯಾವ ರಾಜನಿಗೂ ಸಾಧ್ಯವಾಗಿರಲಿಲ್ಲ. ಅವನ ಹಿಂದಣ ಅರಸರು ಕೇವಲ ರಾಯಚೂರಿನ ದೋಅಬ್‌ವರೆಗೆ (ಕೃಷ್ಣ–ತುಂಗಾಭದ್ರ ನಡುವಿನ ಪ್ರದೇಶ) ತಮ್ಮ ಹಿಡಿತ ಸಾಧಿಸುವಲ್ಲಿ ಮಾತ್ರ ಯಶಸ್ವಿಯಾಗಿದ್ದರು. ಆದರೆ ಬಹಮನಿ ಅರಸರ ಕದಂಭಬಾಹುಗಳಲ್ಲಿ ಬಂಧಿತವಾಗಿದ್ದ ಸಗರ ನಾಡನ್ನು ಬಿಡಿಸಿಕೊಳ್ಳುವಲ್ಲಿ ವಿಜಯನಗರ ಯಶಸ್ವಿಯಾಗಿರಲಿಲ್ಲವೆಂದೇ ಹೇಳಬಹುದು.

ಒಂದನೆಯ ದೇವರಾಯನು (1406–22) ತನ್ನ ಆಳ್ವಿಕೆ ಕಾಲದಲ್ಲಿ ಕೃಷ್ಣಾ ನದಿ ದಂಡೆಯನ್ನು ತನ್ನ ಸಾಮ್ರಾಜ್ಯದ ಈಶಾನ್ಯ ಗಡಿಯನ್ನಾಗಿ ಸ್ಥಾಪಿಸಿದ್ದ. ಆದರೆ ರಾಜ್ಯವನ್ನು ಆ ಕಡೆಗೆ ಇನ್ನಷ್ಟು ವಿಸ್ತರಿಸುವ ಪ್ರಯತ್ನದಲ್ಲಿ ಮಾತ್ರ ಯಶಸ್ವಿ ಆಗಲಿಲ್ಲ. ಅಲ್ಲದೇ ಆ ನಂತರದ ರಾಜರುಗಳು ಸಹ ಅಂಥ ಸಾಹಸ ಮಾಡಲಿಲ್ಲ. ಕಾರಣ ಆ ರಾಜರುಗಳಿಗೆ ಎಡದೊರೆ (ರಾಯಚೂರು ದೋಅಬ್) ಮತ್ತು ಸಗರನಾಡು ಪ್ರದೇಶಗಳಿಗಿಂತ ಪೂರ್ವ ಕರಾವಳಿಯ ಗೋದಾವರಿ ಮತ್ತು ವಿಶಾಖಪಟ್ಟಣ ಪ್ರದೇಶಗಳು ಹೆಚ್ಚು ಪ್ರಾಮುಖ್ಯತೆ ಪಡೆದವೆಂದು ತೋರುತ್ತದೆ. ಹಾಗಾಗಿ ರಾಜ್ಯ ವಿಸ್ತರಿಸುವ ಇಚ್ಚೆಗಳು ಕರಾವಳಿ ಪ್ರದೇಶಗಳ ಕಡೆಗೆ ತಿರುಗಿದವು ಹೊರತು ಸಗರ ಪ್ರದೇಶದ ಕಡೆಗೆ ವಾಲಲಿಲ್ಲವೆಂದು ಅಭಿಪ್ರಾಯಿಸಬಹುದು. ಪ್ರಾಯಶಃ ಇಂಥ ಅನಾಸಕ್ತಿಗಳಿಗೆ ಬಹುಮುಖ್ಯ ಕಾರಣಗಳೆಂದರೆ ವ್ಯಾಪಾರಿ ಮನೋಭಾವನೆಗಳಾಗಿರಬಹುದು. ವ್ಯಾವಹಾರಿಕ ಲಾಭದ ದೃಷ್ಟಿಯಿಂದ ಕಡಲ ತೀರಗಳು ವಿಜಯನಗರಕ್ಕೆ ಹೆಚ್ಚಿನ ಲಾಭ ತಂದುಕೊಡುವ ಆವಶ್ಯಕ ತಾಣಗಳಾಗಿದ್ದವು. ಆದ್ದರಿಂದಲೇ ಅಕ್ಕ–ಪಕ್ಕದ ನಾಡುಗಳ ಬಗೆಗೆ ಅವರು ಹೆಚ್ಚಿನ ಮುತುವರ್ಜಿ ವಹಿಸಲಿಲ್ಲವೆಂದು ಅಭಿಪ್ರಾಯಿಸಬಹುದು. ಆದರೂ ಕೆಲವೊಂದು ಪ್ರಸಂಗಗಳಲ್ಲಿ ಕರಾವಳಿ ಹೊರತುಪಡಿಸಿ ಬಯಲು ಪ್ರದೇಶಗಳಿಗೂ ವಿಸ್ತರಿಸುವ ಚಿಕ್ಕಪುಟ್ಟ ಪ್ರಯತ್ನ ಮಾಡಿರುವುದುಂಟು. ಉದಾಹರಣೆಗೆ ಹೇಳುವುದಾದರೆ ಎರಡನೆಯ ಬುಕ್ಕನ (1405–06) ಅಪ್ರತಿಮ ಅಧಿಕಾರಿ ಇರಗುಪ್ಪ ದಂಡನಾಯಕ ತೆಲಂಗಾಣದಲ್ಲಿ ಸ್ಥಳೀಯ ರೆಡ್ಡಿಗಳನ್ನು ಅದುಮಿಡುವ ಸಾಕಷ್ಟು ಪ್ರಯತ್ನವನ್ನು ಆ ಮೊದಲೇ ಮಾಡಿದ್ದ. ಆದರೂ ಆತನು ಕೂಡಾ ಒಂದೇ ಒಂದು ಸಲವೂ ಸಹ ಸಗರ ಪ್ರದೇಶವನ್ನು ಆಕ್ರಮಿಸುವಂಥ ಪ್ರಯತ್ನ ಮಾಡಲಿಲ್ಲವೆಂದೇ ಹೇಳಬಹುದು.

ಕದನ ಭೂಮಿ

ಪ್ರತಾಪದೇವರಾಯ, ಅಭಿನವ ವೀರದೇವ ಅಥವಾ ಪ್ರೌಢದೇವರಾಯ (1424–1446) ಬಿರುದಾಂಕಿತ ಎರಡನೆಯ ದೇವರಾಯನು ವಿಜಯನಗರ ಸಿಂಹಾಸನಾರೂಢನಾಗಿ ಕೆಲವೇ ದಿನಗಳಲ್ಲಿ ಬಹಮನಿಗಳ ವಿರುದ್ಧ ಹಲವು ನಿರ್ಣಾಯಕ ಕದನಗಳನ್ನು ಸಂಘಟಿಸಿದ. ಅಲ್ಲದೇ ಅದೇ ಕಾಲಕ್ಕೆ ಇಂಥದ್ದೇ ಬದಲಾವಣೆಗಳು ಬಹಮನಿ ರಾಜ್ಯದಲ್ಲಿಯೂ ನಡೆದವು. ಎರಡನೆಯ ಅಲ್ಲಾವುದ್ದೀನ್‌ನು (1436) ಬಹಮನಿ ರಾಜ್ಯದ ಗದ್ದುಗೆಯನ್ನೇರಿ ಮುಂದಿನ ತಯಾರಿಗಳನ್ನು ಭರದಿಂದಲೇ ರೂಪಿಸಿಕೊಂಡ. ಅವನೊಬ್ಬ ಅತೀ ಯುದ್ಧೋತ್ಸಾಹ ಹೊಂದಿದ್ದ ರಾಜನಾಗಿದ್ದ. ಹಾಗಾಗಿ ಅಧಿಕಾರ ಗ್ರಹಿಸಿದ ತತ್‌ಕ್ಷಣವೇ ಮುದಗಲ್ ಕೋಟೆಯ ಮೇಲೆ ದಾಳಿ ಮಾಡಿ ವಿಜಯನಗರದ ನಿದ್ದೆಗೆಡಿಸುವ ಕಾರ್ಯದಲ್ಲಿ ಯಶಸ್ವಿಯಾದ. ಈ ಸಂದರ್ಭದಲ್ಲಿ ಬಹುಶಃ ಅವನ ಸೈನ್ಯವು ಸಗರನಾಡಿನ ಪ್ರಮುಖ ಪ್ರದೇಶಗಳಾಗಿದ್ದ ಜೇವರ್ಗಿ, ಶಹಾಪುರ, ಗೋಗಿ, ಸುರಪುರ, ತಿಂಥಣಿ, ಲಿಂಗಸಗೂರು ಪ್ರದೇಶದ ಮೂಲಕ ದಾಳಿ ಮಾಡುತ್ತಾ ಮುದಗಲ್ ತಲುಪಿರಬಹುದು. ಈ ಘಟನೆಯೇ ಮುಂದಿನ ಕದನ ಕುತೂಹಲಗಳಿಗೆ ವೇದಿಕೆಯಾಯಿತು. ತಮ್ಮ ಹೋರಾಟಗಳಿಗೆ ಪ್ರಬಲ ಪೈಪೋಟಿ ನಿರೀಕ್ಷಿಸಿದ್ದ ಬಹಮನಿ ಸೈನ್ಯಕ್ಕೆ ಅಂಥ ಯಾವ ಪ್ರತಿರೋಧ ಕಂಡುಬರಲಿಲ್ಲ. ಕಾರಣ ಇದೇ ಸಂದರ್ಭದಲ್ಲಿ ದುರದೃಷ್ಟವಶಾತ್ ಅಪ್ರತಿಮ ಸಾಹಸಿಯಾಗಿದ್ದ ಎರಡನೆಯ ದೇವರಾಯ 1446ರಲ್ಲಿ ಮರಣಹೊಂದಿದ. ಹೀಗಾಗಿ ಬಲಾಢ್ಯ ವಿಜಯನಗರ ಸಾಮ್ರಾಜ್ಯವು ತತ್‌ಕ್ಷಣವೇ ಅಸ್ಥಿರಗೊಂಡಿತು. ಇದರ ಲಾಭ ಪಡೆಯಲು ಹವಣಿಸಿದ ಶತ್ರು ಸೈನ್ಯವು ನಿರಂತರವಾದ ದಾಳಿಗಳನ್ನು ಸಂಘಟಿಸಲಾರಂಭಿಸಿತು. ಈ ಎರಡು ರಾಜ್ಯಗಳಿಗೆ ರಾಯಚೂರ ದೋ ಅಬ್ (ಕೃಷ್ಣ ಮತ್ತು ತುಂಗಾಭದ್ರಾ ನಡುವಿನ) ಪ್ರದೇಶವು ಪ್ರತಿಷ್ಠಿತ ಕಣವಾಗಿ ಮಾರ್ಪಟ್ಟಿತು.

ಈ ಪ್ರದೇಶದಲ್ಲಿ ಮುಖ್ಯವಾಗಿ ಮಸ್ಕಿ, ಲಿಂಗಸೂರು, ಸಿಂಧನೂರು, ಹಚ್ಚೊಳಿ, ಕೋಸಗಿ, ಕಪ್ಪಗಲ್ಲು, ಮಾನ್ವಿ, ಕುರುಡಿ, ಕೊಟಕಲ್, ಯೆರಗೇರಾ, ಕಲ್ಲೂರು, ಕಲ್ಮಾಲ, ಸಿರವಾಳ, ಕವಿತಾಳ, ಕುಲಕುಂದಿ ಹಟ್ಟಿ, ಗುರಗುಂಟಾ, ಜಾಲಿಹಳ್ಳಿ, ನಾಗತಾಳ, ಹೀರಾ, ಅರಕೇರಿ, ದೇವದುರ್ಗ, ರಾಮದುರ್ಗ, ಗಬ್ಬೂರು, ದೇವಸೂಗೂರು ಮತ್ತು ಚಿಕ್ಕಸೂಗೂರು ಗ್ರಾಮಗಳು ಫಲವತ್ತಾದ ಕಪ್ಪು ಭೂಮಿಯನ್ನು ಹೊಂದಿರುವ ಸಂಪದ್ಭರಿತ ಪ್ರದೇಶಗಳಾಗಿದ್ದವು. ಈ ನೆಲವನ್ನು ಆಕ್ರಮಿಸುವುದೇ ಅವರಿಬ್ಬರ ಮುಖ್ಯ ಧ್ಯೇಯವಾಗಿತ್ತು. ಒಟ್ಟಿನಲ್ಲಿ ಪೂರ್ವ–ಪಶ್ಚಿಮವಾಗಿ ರಾಯಚೂರು ಮತ್ತು ಮುದಗಲ್ ಉತ್ತರ–ದಕ್ಷಿಣವಾಗಿ ದೇವದುರ್ಗ ಮತ್ತು ಸಿಂಧನೂರು ಅಲ್ಲದೇ ತಾವರಗೇರಿವರೆಗಿನ ಪ್ರದೇಶವು ಎರಡೂ ಪ್ರತಿಷ್ಠಿತ ರಾಜ್ಯಗಳ ನಡುವಿನ ಜಿದ್ದಾಜಿದ್ದಿನ ಹೋರಾಟದ ಕದನ ಭೂಮಿಯಾಗಿ ರೂಪುಗೊಂಡಿತು. ದುರದೃಷ್ಟಕರ ಸಂಗತಿಯೆಂದರೆ ಈ ಪ್ರದೇಶವೇ ಇವರಿಬ್ಬರ ಅವಸಾನಕ್ಕೂ ಕಾರಣವಾಯಿತು. ಸೈನಿಕ ಶಕ್ತಿಯಲ್ಲಿ ಮೇಲುಗೈ ಪಡೆದಿದ್ದ ವಿಜಯನಗರ ಸಾಮ್ರಾಜ್ಯದ ದಾಳಿಗಳಿಂದ ತಪ್ಪಿಸಿಕೊಳ್ಳಲು ಬಹಮನಿ ಅರಸರಿಗೆ ಸಗರ ದೋ ಅಬ್ (ಕೃಷ್ಣಾ–ಭೀಮಾ ನದಿಗಳ ನಡುವಿನ) ಪ್ರದೇಶವನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯವಾಗಿತ್ತು. ಅದೇ ವೇಳೆಗೆ ರಾಯಚೂರು ದೋಅಬ್ ಜೊತೆಗೆ ಸಗರ ದೋಅಬ್ ಪಡೆಯುವುದು ವಿಜಯನಗರಕ್ಕೆ ತುರ್ತಿನ ಸಂಗತಿಯಾಗಿತ್ತು.

ಈ ಪ್ರದೇಶದಲ್ಲಿ ಮುಖ್ಯವಾಗಿ ಸುರಪುರ, ಶಾಹಾಪುರ, ದೋರನಹಳ್ಳಿ, ಕೆಂಭಾವಿ, ಹುಣಸಗಿ, ಅಗ್ನಿ, ಹೆಮ್ಮಡಗಿ, ದೇವಪುರ, ಸಂಗಮ, ಕೋಡಾಲ, ಬೆಳಗುಂದಿ, ತುಮಕೂರು, ತಿಂಥಣಿ, ವನದುರ್ಗ, ಖಾನಾಪುರ, ಸಗರ, ಶಿರವಾಳ, ಮದ್ರಕಿ, ಮೂಡಬಾಳ, ಗೋಗಿ, ಕೊಡೆಕಲ್, ರಾಜನಕೊಳ್ಳೂರು, ಕಕ್ಕೇರಿ, ಹಗರಟಗಿ, ಜೇವರ್ಗಿ ತಾಲೂಕಿನ ಯಡ್ರಾಮಿ, ಇಜೇರಿ, ಅರಳಗುಂಡಗಿ, ಸಿಂದಗಿ ತಾಲೂಕಿನ ಗೋಲಗೇರಿ ಯೆಂಕಂಚಿ, ದೇವರಹಿಪ್ಪರಗಿ, ಗಬ್‌ಸಾವಳಗಿ, ಮೊರಟಗಿ, ರೂಗಿ, ಮುದ್ದೇಬಿಹಾಳ ತಾಲೂಕಿನ ನಲವತ್ತವಾಡ, ತಾಳಿಕೋಟೆ ಮತ್ತು ಢವಳಗಿ ಮುಂತಾದ ಗ್ರಾಮಗಳು ಈ

ನಾಡಿನಲ್ಲಿದ್ದವು. 14ನೇ ಶತಮಾನದ ಪೂರ್ವಪಾದದಿಂದಲೇ ಸಗರ ಪ್ರದೇಶವು ಬಹಮನಿ ಆಡಳಿತದ ಭದ್ರ ಹಿಡಿತದಲ್ಲಿತ್ತು. ಅಲ್ಲದೇ ಆ ರಾಜ್ಯಕ್ಕೆ ಹೇರಳವಾದ ಧನ-ಧಾನ್ಯಗಳ ಸಂಪತ್ತನ್ನು ನೀಡುವ ಫಲವತ್ತಾದ ಭೂಮಿಯನ್ನು ಹೊಂದಿತ್ತು. ಹೀಗಾಗಿ ಎಂಥ ಬೆಲೆಯನ್ನಾದರೂ ತೆತ್ತು ಸಗರನಾಡನ್ನು ಉಳಿಸಿಕೊಳ್ಳುವುದು ಬಹಮನಿಗಳಿಗೆ ಜರೂರಾದ ಸಂಗತಿಯಾಗಿತ್ತು. ಆದ್ದರಿಂದಲೇ ವಿಜಯನಗರ ಸೈನ್ಯವು ಕೃಷ್ಣಾ ನದಿ ದಾಟದಂತೆ ಸದಾ ಕಾಲ ತಡೆಗೋಡೆಯಾಗಿ ಬಹಮನಿ ಸೈನ್ಯವು ಹೋರಾಡುತ್ತಲೇ ಇತ್ತು.

ವಿಜಯನಗರ ರಾಜಕೀಯದಲ್ಲಾದ ಭಾರೀ ಬದಲಾವಣೆಗಳಿಂದ ಸಂಗಮರು ಅಸ್ತಂಗತರಾಗಿ ಸಾಳುವ ದೊರೆಗಳು ಅಧಿಕಾರ ಚುಕ್ಕಾಣಿ ಹಿಡಿದುಕೊಂಡರು. ಆದರೆ ರಾಜ್ಯ ವಿಸ್ತಾರದ ಅವರ ಅಭಿಲಾಷೆಗಳು ಸಹ ರಾಯಲ್‌ಸೀಮೆ ಮತ್ತು ತೀರ ದಕ್ಷಿಣ(ತಮಿಳು ನಾಡು) ಪ್ರದೇಶಗಳಿಗೆ ಮಾತ್ರ ಕೇಂದ್ರೀಕೃತವಾದವು. ಹೀಗಾಗಿ ಅವರು ತಮ್ಮ ಆಡಳಿತಾವಧಿಯಲ್ಲಿ ಸಗರ ದೋ ಅಬ್ ಪಡೆಯುವುದಿರಲಿ ತಮ್ಮದೇ ಆಗಿದ್ದ ರಾಯಚೂರ ದೋ ಅಬ್ ಪ್ರದೇಶವನ್ನು ಮರಳಿ ಪಡೆಯುವ ಸಣ್ಣದಾದ ಪ್ರಯತ್ನವನ್ನು ಸಹ ಮಾಡಲಿಲ್ಲವೆಂದೇ ಅಭಿಪ್ರಾಯಿಸಬಹುದು. ಆ ಸಂದರ್ಭದಲ್ಲಿ ಸಗರ ಮತ್ತು ರಾಯಚೂರು ದೋ ಅಬ್ ಪ್ರದೇಶಗಳು ಬಹಮನಿ ಸಾಮ್ರಾಜ್ಯಕ್ಕೆ ಒಳಪಟ್ಟವಲ್ಲದೇ ಅವು ಅವರ ಸಾಮ್ರಾಜ್ಯಕ್ಕೆ ಬಲವಾದ ರಕ್ಷಣಾತ್ಮಕ ಗೋಡೆಯಂತೆ ನಿರ್ಮಾಣಗೊಂಡವು. ಅತ್ಯಂತ ಕಡಿಮೆ ಅವಧಿಯ ಆಳ್ವಿಕೆ ಮಾಡಿದ ಸಾಳುವ ದೊರೆಗಳು ವಿಜಯನಗರ ರಾಜಕೀಯ ರಂಗನಾಟಕದಿಂದ ಬೇಗನೆ ಮರೆಯಾದರು. ಇದರ ಸಂಪೂರ್ಣ ಲಾಭ ಪಡೆದ ತುಳುವ ವಂಶಸ್ಥರು ವೇಗವಾಗಿಯೇ ವಿಜಯನಗರದ ಅಧಿಕಾರ ಹಿಡಿತವನ್ನು ತಮ್ಮ ತೋಳ ತೆಕ್ಕೆಗೆ ತೆಗೆದುಕೊಂಡರು. ಈಗಾಗಲೇ ಸೋಲುಂಡು ತತ್ತರಿಸಿದ್ದ ವಿಜಯನಗರದ ಸೈನ್ಯಕ್ಕೆ ಕೃಷ್ಣದೇವರಾಯ ದಂಡನಾಯಕನಾದ. ನಂತರ ಅದರ ದಿಕ್ಕೇ ಬದಲಾಯಿತು.

ಬಲಾಢ್ಯನು ಮತ್ತು ಆಡಳಿತದ ಒಳಸೂಕ್ಷ್ಮಗಳನ್ನು ಅರಿತಿದ್ದ ಕೃಷ್ಣದೇವರಾಯನು ಕೆಲವೇ ವರ್ಷಗಳಲ್ಲಿ ವಿಜಯನಗರ ಸಾಮ್ರಾಜ್ಯದ ಮೇರೆಗಳನ್ನು ದಶದಿಕ್ಕುಗಳಲ್ಲಿಯೂ ವಿಸ್ತರಿಸಲು ಸಫಲನಾದ. ಆದರೆ ಅವನು ಕೈಗೊಂಡ ಪ್ರಾರಂಭದ ಹೋರಾಟಗಳು ಸಹ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಿಗೆ ಮಾತ್ರ ಮೀಸಲಾದವು. ಅಧಿಕಾರ ಸ್ಥಾಪಿತನಾಗಿ ಒಂದು ದಶಕದ ನಂತರ ತನ್ನ ದಾಳಿಗಳನ್ನು ಬಹಮನಿಗಳ ಮೇಲೆ ಕೇಂದ್ರೀಕರಿಸಿ ಸಾಮ್ರಾಜ್ಯದ ಗಡಿರೇಖೆಗಳು ಮೇಲ್ಮುಖವಾಗಿ ಚಲಿಸುವಂತೆ ಮಾಡಿದ. ಪ್ರತಿಬಾರಿಯು ಅವನ ಸೈನ್ಯವು ಭಾರೀ ಯಶಸ್ಸು ಪಡೆಯುತ್ತಾ ಮುನ್ನುಗ್ಗಿತು. ಅವನಿಗೆ ದೊರೆತ ಸತತವಾದ ಗೆಲುವುಗಳು ರಾಜ್ಯಕ್ಕೆ ಬಹುದೊಡ್ಡ ಪ್ರಮಾಣದ ಸಂಪತ್ತನ್ನು ಶೇಖರಿಸುವಲ್ಲಿ ಸಹಾಯಕವಾದವು. ಆದ್ದರಿಂದ ತಂತಾನೆ ಸಾಮ್ರಾಜ್ಯವು ಸ್ಥಿರಗೊಂಡು ಗಟ್ಟಿಯಾಯಿತು.

ಸಾಳ್ವ ರಾಜರ ಆಡಳಿತಾವಧಿಯಲ್ಲಿ ತಲೆದೋರಿದ ರಾಜಕೀಯ ಅಸ್ಥಿರತೆಯ ಲಾಭ ಪಡೆದ ವಿಜಾಪುರದ ಯೂಸೂಫ್ ಆದಿಲ್‌ನ ಸೇನಾನಿ ಕಮಲ್‌ಖಾನ್‌ನು ಕ್ರಿ.ಶ. 1512ರಲ್ಲಿ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡ. ಆದರೆ ಅವನ ಮುಖ್ಯ ಅಧಿಕಾರಿಯಾದ ಇಸ್ಮಾಯಿಲ್‌ನಿಗೆ ಇದು ಸರಿಕಾಣಲಿಲ್ಲ. ಹಾಗಾಗಿ ಆತನನ್ನು (ಕಮಾಲಖಾನ) ಓಡಿಸಿ ತಾನೇ ರಾಯಚೂರನ್ನು ವಶಪಡಿಸಿಕೊಂಡು ತನ್ನ ಶಕ್ತಿಯನ್ನು ಇಮ್ಮಡಿಸಿಕೊಂಡ. ಇಂಥ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಕೃಷ್ಣದೇವರಾಯ ಅವಕಾಶ ಸಾಧಿಸಿ ಇಸ್ಮಾಯಿಲ್‌ನಿಂದ ರಾಯಚೂರ ಕೋಟೆಯನ್ನು ಕಿತ್ತುಕೊಂಡ.

ಈ ವಿಜಯವು ಬಹಳ ವರ್ಷಗಳ ನಂತರ ವಿಜಯನಗರ ರಾಜ್ಯವು ಹುರುಪುಗೊಳ್ಳುವಂತೆ ಮಾಡಿತು. ಈ ಸೋಲು ವಿಜಾಪುರಿ ಹಾಗೂ ಬಹಮನಿಯರಿಗೆ ನುಂಗಲಾರದ ತುತ್ತಾಯಿತು. ವಿಧಿಯಿಲ್ಲದೇ ಬಹಮನಿ ಅರಸನು ತನ್ನ ರಾಯಭಾರಿಯನ್ನು ವಿಜಯನಗರದ ಆಸ್ಥಾನಕ್ಕೆ ರಾಜಿ ಸಂಧಾನಕ್ಕೆ ಕಳುಹಿಸಿಕೊಟ್ಟ. ಆದರೆ ಈ ಘಟನೆಯನ್ನು ತುಂಬಾ ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡಿದ್ದ ಕೃಷ್ಣದೇವರಾಯನು ಷರತ್ತುಬದ್ಧ ಸಂಧಾನಕ್ಕೆ ಸಿದ್ಧನಾದ. ಪ್ರಯುಕ್ತ ಇಸ್ಮಾಯಿಲ್‌ನು

ಕೃಷ್ಣದೇವರಾಯನ ಪಾದಕಮಲಗಳಿಗೆ ಮುತ್ತಿಟ್ಟು ಗೌರವಿಸುವುದಾದ ಪಕ್ಷದಲ್ಲಿ ರಾಯಚೂರು ಕೋಟೆ ವಾಪಸ್ಸ್ ನೀಡುವುದಾಗಿ ವಾಗ್ದಾನ ಮಾಡಿದನು. ಆದರೆ ಈ ನಿರ್ಧಾರವು ಬಹಮನಿ ಅರಸನ ಆತ್ಮಗೌರವವನ್ನೇ ತೀವ್ರವಾಗಿ ಗಾಸಿಮಾಡಿತು. ಹೀಗಾಗಿ ಕ್ಷುಲ್ಲಕ ನೆವ ಮಾಡಿ ತಪ್ಪಿಸಿಕೊಳ್ಳುವ ಹವಣಿಕೆಯಲ್ಲಿ ಇಸ್ಮಾಯಿಲ್ ಓಡಾಡತೊಡಗಿದ. ಮಾಡಿಕೊಂಡ ಒಪ್ಪಂದದಿಂದ ವಿಮುಖಗೊಂಡಾಗ ಸಹಜವಾಗಿ ವಿಜಯನಗರ ರಾಜನು ಕ್ರೋಧಗೊಂಡ. ರಾಯಚೂರಿನಿಂದ ನೇರವಾಗಿ ಸುರಪುರ (ಶೋರಾಪುರ) ಮತ್ತು ಕೆಂಭಾವಿ ಕಡೆಗೆ ಬಲಿಷ್ಠ ಸೈನ್ಯವನ್ನು ತಿರುಗಿಸಿದ. ಇಂಥ ಹೊಡೆತವನ್ನು ನಿರೀಕ್ಷಿಸಿದ್ದ ಇಸ್ಮಾಯಿಲ್‌ನು ಕೆಂಬಾವಿ ಕೋಟೆಯಿಂದ ತಪ್ಪಿಸಿಕೊಂಡು ಗುಲಬರ್ಗಾದಲ್ಲಿ ಅವಿತುಕೊಂಡ. ಆದರೂ ಸೋಲು ತಪ್ಪಿಸಿಕೊಳ್ಳಲಾಗಲಿಲ್ಲ.

ಕೃಷ್ಣದೇವರಾಯನ ಸೈನ್ಯವು ಸುರಪುರ ಮತ್ತು ಕೆಂಭಾವಿಗಳಲ್ಲಿದ್ದ ಆತನ ಅಧಿಕಾರವನ್ನು ಛಿದ್ರಗೊಳಿಸಿ ಮತ್ತೆ ರಭಸವಾಗಿ ಗುಲಬರ್ಗಾ ಕೋಟೆಯ ಮೇಲೆ ನೇರವಾಗಿ ನುಗ್ಗಿತು. ಈ ಸಂದರ್ಭದಲ್ಲಿ ನಡೆದ ಬಲಾಬಲ ಪರೀಕ್ಷೆಯಲ್ಲಿ ವಿಜಯನಗರವು ಮೇಲುಗೈ ಪಡೆದು ವಿಜೃಂಭಿಸಿತು. ಮುಖ್ಯವಾಗಿ ಈ ಮಹತ್ವದ ವಿಜಯವು ಎರಡುನೂರು ವರ್ಷಗಳ ನಂತರ ಮೊದಲ ಬಾರಿಗೆ ಕೃಷ್ಣಾನದಿಯನ್ನು ಸೀಳಿಕೊಂಡು ಸಗರನಾಡನ್ನು ಆಕ್ರಮಿಸಿ ವಿಜಯ ಪತಾಕೆಯನ್ನು ಬಹಮನಿ ರಾಜ್ಯದಲ್ಲಿ ಹಾರಿಸಿತು. ಇಂಥ ಬಹುಮುಖ್ಯ ಘಟನೆಯ ಸಫಲತೆಯ ಕೀರ್ತಿಯು ಕೃಷ್ಣದೇವರಾಯನಿಗೆ ಸಲ್ಲುತ್ತದೆ. ಅಲ್ಲದೇ ವಿಜಾಪುರ ಅರಸರ ಬೆಂಬಲದಿಂದ ಆಳುತ್ತಿದ್ದ ಕಾಸೀಂ ಬರೀದ್‌ನನ್ನು (ಬರೀದಶಾಹಿ) ಬೀದರಿನಿಂದ ಹೊರಗಟ್ಟಿದ್ದ. ಆದಿಲ್‌ಷಾಹಿಗಳ ಪಿತೂರಿಯಿಂದಾಗಿಯೇ ಗೃಹಬಂಧನದಲ್ಲಿದ್ದ ಬಹಮನಿಯ ನಿಜವಾದ ವಾರಸುದಾರನಾದ ಮೂರನೆಯ ಮಹಮೂದ್ ಶಾಹಾನನ್ನು ಬಿಡುಗಡೆಗೊಳಿಸಿ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದ. ಇಂಥ ವಿಜಯೋತ್ಸಾಹದಿಂದ ವಿಜಯನಗರ ಅರಸ ಕೃಷ್ಣದೇವರಾಯನಿಗೆ ಯವಣ ರಾಜ್ಯ ಸ್ಥಾಪನಾಚಾರ್ಯನೆಂಬ ಬಿರುದು ಮುಡಿಗೇರಿತು ಎಂಬ ಅಭಿಪ್ರಾಯಗಳಿವೆ. ಆದರೆ ಇಂಥ ಬಿರುದು ಕೃಷ್ಣದೇವರಾಯನಿಗೆ ಆಗಲೇ ಪ್ರಾಪ್ತವಾಗಿದ್ದವುವೆಂಬ ಅಭಿಪ್ರಾಯಗಳು ಕೂಡಾ ಇವೆ. ಅಲ್ಲದೇ ವಿಜಯನಗರದ ವಿಜಯೋತ್ಸಾಹದಿಂದ ಕೆಂಭಾವಿಯ ನೆಲವೆಲ್ಲ ಶತ್ರು ಸೈನಿಕರ ರಕ್ತದಿಂದ ಕೆಂಪೇರಿತ್ತು ಎಂಬ ವಿವರಗಳು ಕೃಷ್ಣದೇವರಾಯನ ಅಮುಕ್ತಮಾಲ್ಯದಲ್ಲಿ ಕೃತಿಯಲ್ಲಿ ದಾಖಲಾಗಿವೆ ಎಂಬ ಉಲ್ಲೇಖಗಳು ಜನಮಾನಸದಲ್ಲಿ ಇಂದಿಗೂ ಉಳಿದುಬಂದಿವೆ.

ಸಹಜವಾಗಿ ನಿರೀಕ್ಷಿಸಲಾರದ ಜಯಪಡೆದ ವಿಜಯನಗರ ಸೈನ್ಯವು ಬಹುಶಃ ರಾಯಚೂರಿನಿಂದ ಗಬ್ಬೂರು, ಮೊಸರಕಲ್, ದೇವದುರ್ಗದ ಮೂಲಕ ಕೃಷ್ಣಾನದಿಯನ್ನು ಸೀಮೋಲ್ಲಂಘನೆಮಾಡಿ ಸುರಪುರ ತಾಲ್ಲೂಕಿನ ಹೆಮ್ಮಡಿಗೆ ಪರಿಸರದಲ್ಲಿ ಮೊದಲು ಪ್ರವೇಶ ಪಡೆದು ಆ ನಂತರವೇ ಸುರಪುರದ ಮೇಲೆ ದಾಳಿಗೈದಿರಬಹುದು. ವಿಜಯನಗರದ ಬಲವಾದ ಹೊಡೆತಕ್ಕೆ ಹೆದರಿದ ಇಸ್ಮಾಯಿಲ್‌ನು ತಪ್ಪಿಸಿಕೊಂಡು ಬಹುಶಃ ಸುರಪುರದಿಂದ ಕೆಂಭಾವಿಯ ಕಡೆಗೆ ಓಡಿಹೋಗಿರಬಹುದು. ಕಾರಣ ಆಗಲೇ ಈ ಸ್ಥಳವು ವಿಜಾಪುರ ಮತ್ತು ಬಹಮನಿ ಅರಸರ ಅಧಿಕಾರಿಗಳ ಹಿಡಿತದಲ್ಲಿತ್ತು. ಅಂಥ ಧೈರ್ಯದಿಂದಲೇ ಬಹುಶಃ ಆ ಕಡೆಗೆ ಹೋಗಿರಬಹುದು. ಆದರೆ ವಿಜಯನಗರ ಸೈನ್ಯದ ಎದುರು ಮಂಡಿಯೂರಿದ ಇಸ್ಮಾಯಿಲ್‌ನ ಸೈನ್ಯವು ದಿಕ್ಕು ಕಾಣದೇ ಗುಲ್ಬರ್ಗಾದ ಕಡೆಗೆ ಪಲಾಯನ ಮಾಡಿತು. ಹಾಗಾಗಿ ಆ ಕೋಟೆಯಲ್ಲಿ ಅವನು ಅವಿತುಕೊಂಡನು. ಆದರೆ ಏನೆಲ್ಲ ಪ್ರಯತ್ನ ಮಾಡಿದರೂ ಆಗಬಹುದಾಗಿದ್ದ ಸೋಲನ್ನು ಮಾತ್ರ ತಪ್ಪಿಸಿಕೊಳ್ಳಲಾಗಲಿಲ್ಲ. ಈ ಜಯದ ಮುಖ್ಯ ಪರಿಣಾಮವೆಂದರೆ ಸುಮಾರು ಒಂದು ದಶಕ ಕಾಲ ಸಗರನಾಡು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟು ಬಹುಮನಿಗಳನ್ನು ಹೆಚ್ಚಿನ ಆತಂಕಕ್ಕೆ ಒಳಗಾಗುವಂತೆ ಮಾಡಿತು.

ಮಾನ್ವಿ ತಾಲೂಕಿನ ಚೀಕಲಪರ್ವಿ ಗ್ರಾಮದ ಶಾಸನವು ಮುಖ್ಯವಾದ ವಿಷಯ ಉಲ್ಲೇಖಿಸುತ್ತದೆ. ಶಾಸನದ ಕಾಲ ಶಾಲಿವಾಹನ ಶಕವರ್ಷ 1443 ವೃಷಭ ಸಂವತ್ಸರ ಶ್ರಾವಣ ಶು.12 ಸೋಮವಾರವೆಂದಿದ್ದು ಅದು ಕ್ರಿ.ಶ.15-07-1521ಕ್ಕೆ

ಸರಿಹೊಂದುತ್ತದೆ (*ರಾಯಚೂರು ಜಿಲ್ಲೆಯ ಶಾಸನ ಸಂಪುಟ*, ಪು. 243). ಈ ಶಾಸನದಲ್ಲಿ ಕೃಷ್ಣದೇವರಾಯನು ರಾಯಚೂರು, ಆಲಂಪುರ, ಮಾನವೆ, ಹಾನಗಲ್ಲು ಮತ್ತು ಮಾಗಡೆ ದುರ್ಗಗಳನ್ನು ಗೆದ್ದು ಕೂಡಲೂರು ಸಂಗಮಕ್ಕೆ ಬಂದ, ಆ ಸಂಗಮವು ಕೃಷ್ಣವೇಣಿ ಮತ್ತು ಭೀಮಾನದಿಯ ಸಂಗಮವಾಗಿದ್ದು ಅಲ್ಲಿಯ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಲು ಬಯಸಿ, ತನ್ನ ಪತ್ನಿಯರುಗಳಾದ ಚಿಂನಾದೇವಿಯ ಕೈಯಲ್ಲಿ ಗೋದಾನವನ್ನು ತಿರುಮಲದೇವಿಯ ಕೈಯಲ್ಲಿ ಕನಕದಾನವನ್ನು ಮಾಡಿಸಿ ಮಾನುವೆ ಸೀಮೆಯ ಚೀಕಲಪರಿವಿಯನ್ನು ತಿರುವೆಂಗಳನಾಥ ದೇವರಿಗೆ ದಾನ ನೀಡುತ್ತಾನೆ ಎಂದು ಉಲ್ಲೇಖಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿತ ಈ ಸಂಗಮವು ಸಗರನಾಡಿನ ಶಹಾಪುರ ತಾಲೂಕಿನಲ್ಲಿರುವ ಪ್ರಾಚೀನ ಪ್ರಮುಖ ಅಗ್ರಹಾರ ಮತ್ತು ಕಾಳಾಮುಖ ಯತಿಗಳ ಕೇಂದ್ರವಾಗಿದ್ದ ಸಂಗಮವೇ ಆಗಿದೆ. ಇದು ಸಗರನಾಡಿನ ಬಹುಮುಖ್ಯ ಪ್ರದೇಶವಾಗಿತ್ತು.

ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಸುಮಾರು ಒಂದು ದಶಕ ಕಾಲ ವಿಜಯನಗರ ರಾಜ್ಯವು ಈ ಪ್ರದೇಶದಲ್ಲಿ ತನ್ನ ಪ್ರಾಬಲ್ಯ ಮೆರೆಯಿತೆಂಬುದನ್ನು ಹಲವು ಶಾಸನಗಳು ವಿವರಿಸುತ್ತವೆ. ಆದರೆ ಆ ನಂತರದ ಕಾಲದಲ್ಲಿ ವಿಜಯನಗರವು ಸಹ ತನ್ನ ಮೊದಲಿದ್ದ ಪ್ರಾಬಲ್ಯ ಕಳೆದುಕೊಂಡಿತೆಂದು ಭಾಸವಾಗುತ್ತದೆ. ಕಾರಣ ಮುಂದಿನ ದಿನಗಳಲ್ಲಿ ಈ ಪ್ರದೇಶಕ್ಕೆ ಸಂಬಂಧಿಸಿದ ಬೆರಳೆಣಿಕೆ ಶಾಸನಗಳಲ್ಲಿ ಮಾತ್ರ ವಿಜಯನಗರ ಆಡಳಿತ ಕುರಿತು ಕೆಲವು ಉಲ್ಲೇಖಗಳಿರುವುದನ್ನು ಗಮನಿಸಬಹುದು. ಆದರೆ ಅಂಥ ಮಾಹಿತಿಗಳು ಸಹ ಈ ಪ್ರದೇಶದಲ್ಲಿರುವ ಹನುಮಂತ ದೇವರ ದೇವಾಲಯಗಳಿಗೆ ದಾನ–ದತ್ತಿ ನೀಡಿರುವ ಉಲ್ಲೇಖಗಳನ್ನು ನೀಡುವ ಶಾಸನಗಳಾಗಿವೆ (ಏಕದಂಡಿ ಮಠ ಶಾಹಪುರ ಶಾಸನ) ಹೊರತು ಕದನಗಳನ್ನು ಗೆದ್ದು ಬೀಗಿರುವ ಬಗೆಗೆ ಉಲ್ಲೇಖಿಸುವ ಆಕರಗಳಾಗಿಲ್ಲ.

ಕೃಷ್ಣದೇವರಾಯನ ನಂತರ ಆಳ್ವಿಕೆಮಾಡಿದ ಅಚ್ಯುತರಾಯನ ಕಾಲದಲ್ಲಿ ವಿಜಯನಗರ ಅಧಿಪತ್ಯ ಮತ್ತೆ ಅದೇ ಕೃಷ್ಣೆಯವರೆಗೆ ಮಾತ್ರ ಸೀಮಿತಗೊಂಡಿತೆಂದು ಕಾಣುತ್ತದೆ. ಆದರೆ ಅಳಿಯ ರಾಮರಾಯನ ಕಾಲದಲ್ಲಿ ಈ ಸ್ಥಿತಿಯು ಹೊಸ ರೂಪಾಂತರ ಪಡೆಯಿತು. ಶಾಹಿ ಸುಲ್ತಾನರಲ್ಲಿಯೇ ಹುಟ್ಟಿಕೊಂಡ ಅನೈಕ್ಯತೆಯು ವಿಜಯನಗರಕ್ಕೆ ಮತ್ತೆ ತುಂಬ ವರದಾನವಾಗಿ ಪರಿಣಮಿಸಿತು. ಅಳಿಯ ರಾಮರಾಯನ ಹಿಡಿತವು ಸಡಿಲಗೊಳ್ಳುವವರೆಗೂ ಪ್ರಸ್ತುತ ಸಗರ ನಾಡು ವಿಜಯನಗರ ಸಾಮ್ರಾಜ್ಯದಲ್ಲಿಯೇ ಲೀನವಾಗಿತ್ತು. ಆದರೆ ಕ್ರಿ.ಶ. 1565ರ ತಾಳಿಕೋಟೆ ಅಥವಾ ರಕ್ಕಸಗಿ–ತಂಗಡಗಿಯ ನಿರ್ಣಾಯಕ ಯುದ್ಧದ ಪರಿಣಾಮಗಳು ಸಗರನಾಡಿನ ಚರಿತ್ರೆಯಲ್ಲಿಯೂ ಹೊಸ ಪುಟಗಳನ್ನು ತೆರೆಯಲು ಕಾರಣವಾದವು. ವಿಜಯನಗರ ಸೈನ್ಯ ಸೋಲುವವರೆಗೂ ಸಗರನಾಡು ವಿಜಯನಗರ ಅರಸರ ಸುಪರ್ದಿಯಲ್ಲಿಯೇ ಇತ್ತು. ಒಂದೆರಡು ಬಾರಿ ಭಾರೀ ಸೈನ್ಯದೊಂದಿಗೆ ಅಳಿಯ ರಾಮರಾಯರು ಸಗರವನ್ನು ವಶಪಡಿಸಿಕೊಂಡಿರುವ ಬಗೆಗೆ ವಿವರಗಳು ದಾಖಲಾಗಿದ್ದರೂ ಅವು ರಕ್ಕಸಗಿ–ತಂಗಡಗಿ ಯುದ್ಧದ ಪರಿಣಾಮಗಳಲ್ಲಿ ಕೊಚ್ಚಿಕೊಂಡು ಹೋದವು. ಅಲ್ಲದೇ ದಕ್ಷಿಣದಲ್ಲಿದ್ದ ಎರಡು ಪ್ರಬಲ ರಾಜ್ಯಗಳನ್ನು ರಾಜಕೀಯ ಇತಿಹಾಸ ಪುಟದಿಂದ ಅಸ್ತಂಗತವಾಗುವಂತೆ ಮಾಡಿತು. ಅದರ ಪರಿಣಾಮವೆಂಬಂತೆ ಸಗರನಾಡು ಮತ್ತೆ ಉತ್ತರ ಭಾರತದ ಮೊಗಲರ ಅಧಿಪತ್ಯಕ್ಕೆ ಒಳಗಾಗುವಂತಾಯಿತು.

ಗ್ರಂಥಋಣ

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ.), *ರಾಯಚೂರು ಜಿಲ್ಲೆಯ ಶಾಸನ ಸಂಪುಟ*, ಕವಿವಿ, ಹಂಪಿ.
2. ಪಾಟೀಲ ಎಂ.ಬಿ. (ಸಂ), *ಗುಲಬರ್ಗಾ ಗ್ಯಾಜಿಟಿಯರ್*, ಬೆಂಗಳೂರು.
3. ಕೃಷ್ಣ ಎ. (ಸಂ.), *ಸಗರನಾಡ ದರ್ಶನ*, ಮಹಾಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ.
4. ಪ್ರೊ.ಶಿವಣ್ಣ ಕೆ.ಎಸ್. (ಸಂ)., *ಕರ್ನಾಟಕ ಚರಿತ್ರೆ ಸಂಪುಟ* 3, ಕವಿವಿ, ಹಂಪಿ.
5. ಅಬ್ದುಲ್ ಕರೀಮ (ಸಂ.), *ಯಾದಗಿರಿ ಜಿಲ್ಲೆಯ ಶಾಸನ*, ಹನಿ ಪ್ರಕಾಶ, ಶಾಹಪುರ.

40. ವಿಜಯನಗರ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು

ಶ್ರೀ ರುದ್ರಕುಮಾರ್ ಎನ್.

ಪ್ರಸ್ತುತ ಪ್ರಬಂಧವು ವಿಜಯನಗರ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳ ಸ್ವರೂಪವನ್ನು, ಸ್ಥಿತಿಗತಿಗಳನ್ನು ಮತ್ತು ಅದರ ವಿವಿಧ ಹಂತಗಳನ್ನು ಕುರಿತು ಚರ್ಚಿಸುತ್ತದೆ. ಈ ಪ್ರಬಂಧವು ಒಳಗೊಳ್ಳುವ ಸುಮಾರು ನಾಲ್ಕು ಶತಮಾನಗಳ ಕಾಲಾವಧಿಯು ಕರ್ನಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ವವಾದ ಕಾಲವಾಗಿದೆ. ವಿಜಯನಗರ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಇತಿಹಾಸವು ಮೂರು ಸ್ಥೂಲ ವಿಭಾಗಗಳನ್ನು ಒಳಗೊಂಡಿದೆ. ಒಂದು ವಿಜಯನಗರದ ಸ್ಥಾಪನೆಯ ಪೂರ್ವಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳ ರೂಪುರೇಷೆ. ಅಂದರೆ ಕ್ರಿ.ಶ. ಹನ್ನೆರಡನೆಯ ಮತ್ತು ಹದಿನಾಲ್ಕನೆಯ ಶತಮಾನಗಳ ನಡುವಿನ ಕಾಲಾವಧಿಯ ಸಾಮಾಜಿಕ, ಧಾರ್ಮಿಕ ಚಳವಳಿಗಳು. ಎರಡು, ವಿಜಯನಗರದ ಸ್ಥಾಪನೆಯ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಇತಿಹಾಸದ ವೈಶಿಷ್ಟ್ಯ. ಅಂದರೆ ಕ್ರಿ.ಶ. ಹದಿನಾಲ್ಕನೆಯ ಮತ್ತು ಹದಿನೈದನೆಯ ಶತಮಾನಗಳ ನಡುವಿನ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಸಂಘರ್ಷಗಳ ಕಾಲ ಮತ್ತು ಮೂರು, ವಿಜಯನಗರ ಸ್ಥಾಪನೆಯ ಅನಂತರದ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳ ಬೆಳವಣಿಗೆ. ಅಂದರೆ ಕ್ರಿ.ಶ. ಹದಿನಾರನೆಯ ಮತ್ತು ಹದಿನೇಳನೆಯ ಶತಮಾನಗಳ ನಡುವಿನ ಸಾಮಾಜಿಕ, ಧಾರ್ಮಿಕ ಸಂಘರ್ಷಗಳ ಕಾಲ. ಈ ರೀತಿಯಾಗಿ ವಿಜಯನಗರ ಕಾಲದ ಸಾಮಾಜಿಕ, ಧಾರ್ಮಿಕ ಚಳವಳಿಗಳ ಇತಿಹಾಸ ಬಹಳ ದೀರ್ಘವಾಗಿದೆ.

ವಿಜಯನಗರ ಕಾಲದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿ-ಗತಿಗಳು ಸ್ವಾರಸ್ಯಕರವಾಗಿವೆ. ವಿಜಯನಗರ ಕಾಲದಲ್ಲಿ ವಿವಿಧ ಸಾಮಾಜಿಕ, ಧಾರ್ಮಿಕ, ಜಾತಿ, ಪಂಗಡ ಆಧಾರಿತ ಜಾತಿ/ವರ್ಗಗಳಿದ್ದವು. ಬ್ರಾಹ್ಮಣರಿದ್ದರು. ಮುಸ್ಲಿಮರಿದ್ದರು. ಪೋರ್ಚುಗೀಸ್ ಮತ್ತು ಗೋವಾದಿಂದ ಬಂದು ನೆಲೆಸಿದ ಕೊಂಕಣಿ ಮಾತಾಡುವ ಕ್ರಿಶ್ಚಿಯನ್ನರಿದ್ದರು. ಕರಾವಳಿ ಪ್ರದೇಶ ಹಾಗೂ ಮೈಸೂರು ಮತ್ತು ಹಾಸನ ಭಾಗಗಳಲ್ಲಿ ವಾಸವಾಗಿದ್ದ ಜೈನರಿದ್ದರು. ಕುಡಿಯರು ಮತ್ತು ಸೋಲಿಗರಂತಹ ವಿವಿಧ ಆದಿವಾಸಿ ಜನರು ಹಾಗೂ ಕೊಡವ ಮತ್ತು ಹಾಲಕ್ಕಿ ಒಕ್ಕಲುಗಳಂತಹ ಜನರು ಇದ್ದರು. ಆಫ್ರಿಕಾದಿಂದ ಬಂದ ಸಿದ್ಧಿಗಳು, ವಿಜಯನಗರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದರು. ಈ ಸಾಮಾಜಿಕ ವರ್ಗಗಳು ಅನುಕ್ರಮವಾದ ಒಂದು ಶ್ರೇಣಿಯಲ್ಲಿ ಜೋಡಣೆಗೊಂಡಿದ್ದವು. ಈ ಸನ್ನಿವೇಶದಲ್ಲಿಯೇ ಧಾರ್ಮಿಕ ಪಂಥಗಳಾದ, ವಚನ-ದಾಸ, ಶೈವ-ವೈಷ್ಣವ, ಶ್ರೀವೈಷ್ಣವ-ಜೈನ, ಜೈನ-ಬೌದ್ಧ, ಕ್ರೈಸ್ತ-ಇಸ್ಲಾಂ ಮೊದಲಾದ ಮತ-ಧರ್ಮಗಳ ವಿಚಾರಗಳು, ತಾತ್ವಿಕ ನಿಲುವುಗಳು (ಸಂಘರ್ಷವನ್ನೇ ಪ್ರಧಾನ ಧಾರೆಯನ್ನಾಗಿ ಪರಿಗಣಿಸುವಂಥವು) ಅಸ್ತಿತ್ವದಲ್ಲಿದ್ದವು. ಆದ್ದರಿಂದ ಅಂದಿನ ಧಾರ್ಮಿಕ ಸ್ಥಿತಿಗತಿಗಳನ್ನು ಅರಿಯುವುದಕ್ಕೆ ಮೊದಲು ಚಾಲ್ತಿಯಲ್ಲಿ ಇದ್ದ ಧರ್ಮ ಪಂಥಗಳ ಹಾಗೂ ಉಪಪಂಥಗಳ ಸ್ವರೂಪವನ್ನು ತಿಳಿದುಕೊಳ್ಳುವುದು ಮುಖ್ಯ. ಈ ಹಿನ್ನೆಲೆಯಲ್ಲಿ ಅಂದಿನ ಐದು ಪ್ರಮುಖ ಮತ ಧರ್ಮಗಳನ್ನು ವೈದಿಕ, ಜೈನ, ಬೌದ್ಧ, ಇಸ್ಲಾಂ ಹಾಗೂ ಕ್ರೈಸ್ತ ಎಂದು ಗುರುತಿಸಿಕೊಳ್ಳಬಹುದು. ಅಲ್ಲದೆ ಈ ಮತ ಧರ್ಮಗಳ ಆಂತರ್ಯದಲ್ಲಿಯೇ ಇದ್ದ ಅನೇಕ ಉಪವಿಭಾಗಗಳ ಸ್ವರೂಪ ತಾರತಮ್ಯಗಳನ್ನು ಸಹ ಗ್ರಹಿಸುವ ಅಗತ್ಯವಿದೆ.

ವಿಜಯನಗರ ಕಾಲದ ವೈದಿಕ ಧರ್ಮವು ಎರಡು ಪ್ರಮುಖ ಪಂಥಗಳಲ್ಲಿ ವಿಭಜಿತವಾಗಿತ್ತು. ಆರಾಧನೆಯ ನೆಲೆಯಲ್ಲಿ 'ಶೈವ' ಹಾಗೂ 'ವೈಷ್ಣವ' ಅನುಯಾಯಿಗಳೆಂಬ ಎರಡು ಪಂಥಗಳಿದ್ದವು. 'ಶಿವ'ನನ್ನು ಆರಾಧಿಸುವ ಶೈವರಿಗೂ, 'ವಿಷ್ಣು'ವನ್ನು ಆರಾಧಿಸುವ ವೈಷ್ಣವರಿಗೂ ಆಚಾರ ವಿಚಾರಗಳಲ್ಲಿ ತಾರತಮ್ಯಗಳಿದ್ದವು. ಈ ಎರಡೂ ಪಂಥೀಯರಲ್ಲಿಯೇ

ಉಪವಿಭಾಗ ಕ್ರಮಗಳು, ಆಚಾರ ಧೋರಣೆಗಳು ಇದ್ದವು. ಇವು ಸಂಘರ್ಷಗಳಾಗುವಷ್ಟರಮಟ್ಟಿಗೆ ಗಾಢವಾಗಿದ್ದವು. ಸಂಗಮರ ಕಾಲವು ಹೆಚ್ಚಿನ ಮಟ್ಟಿಗೆ ಶೈವ ಪಂಥ ಹಾಗೂ ಅದರ ತಾತ್ವಿಕ ವಿಚಾರಗಳ ಪಾಲನೆಯಲ್ಲಿ ಪ್ರಾಮುಖ್ಯತೆ ಪಡೆದಿತ್ತು. ಗಮನಾರ್ಹ ಅಂಶವೆಂದರೆ ಶೈವರಲ್ಲಿ ಲಕುಲೀಶ ಪಾಶುಪತ, ಕಾಳಮುಖ, ವೀರಶೈವ, ಅದ್ವೈತ, ಶ್ರೀಕಾಂತ ಶೈವಾಗಮ, ಶೈವ ಸಿದ್ಧಾಂತಿ ಮೊದಲಾದ ಉಪಶಾಖೆಗಳು ಇದ್ದವು. ವಿಜಯನಗರವನ್ನಾಳಿದ ಎರಡನೇ ಮನೆತನವಾದ ಸಾಳುವ ಕಾಲಕ್ಕೆ ವೈಷ್ಣವ ಪಂಥವು ಹೆಚ್ಚಿನ ಪ್ರಾಶಸ್ತ್ಯ ಪಡೆಯಿತು. ಅಂದರೆ ಅಲ್ಲಿಯವರೆಗೂ ಪ್ರಚಲಿತದಲ್ಲಿದ್ದ ಶೈವ ಪಂಥದ ಸ್ಥಾನವನ್ನು ಅದು ಅಲಂಕರಿಸಿತು. ಅಲ್ಲದೆ ಶೈವ ಪಂಥದಷ್ಟೆ ಜನಮನ್ನಣೆ ಗಳಿಸಿತು. ಶೈವ ಪಂಥೀಯರಲ್ಲಿ ಕಾಣಿಸಿಕೊಂಡ ಪ್ರಗತಿಪರ ನಿಲುವುಗಳು 'ವಚನ ಚಳವಳಿ' ರೂಪದಲ್ಲಿ ಹೊರಹೊಮ್ಮಿದರೆ; ವೈಷ್ಣವರಲ್ಲಿ ಅದು 'ದಾಸ ಚಳವಳಿ'ಯಾಗಿ ಅಭಿವ್ಯಕ್ತಗೊಂಡಿತು.

ವಿಜಯನಗರ ಸ್ಥಾಪನೆಯ ವೇಳೆಗೆ ಜೈನ ಧರ್ಮವು ಪ್ರವೇಶಿಸಿ ಪಸರಿಸಿತ್ತು. ವಿಜಯನಗರ ಅರಸರು ಜೈನಧರ್ಮಕ್ಕೆ ಹಾಗೂ ಅದರ ಅನುಯಾಯಿಗಳಿಗೆ ಪ್ರೋತ್ಸಾಹವನ್ನು ನೀಡಿದ್ದರು. ಅಲ್ಲದೆ ಇದರ ಮಾಂಡಲೀಕರಾಗಿದ್ದ ಚೌಟರು, ಅಜಿಲರು, ಬೈರರು (ಕಾರ್ಕಳ) ಜೈನಧರ್ಮಕ್ಕೆ ಆಶ್ರಯದಾತರಾಗಿ ಗುರುತಿಸಿಕೊಂಡಿದ್ದರು. ವಿಜಯನಗರವು ಅಸ್ತಿತ್ವಕ್ಕೆ ಬರುವ ಮೊದಲೇ ಬೌದ್ಧ ಧರ್ಮವು ಕರ್ನಾಟಕವನ್ನು ಪ್ರವೇಶಿಸಿ ಹರಡಿತ್ತು. ಆದರೆ ಜೈನಧರ್ಮದಷ್ಟು ಪ್ರಾಬಲ್ಯ ಪಡೆದಿರಲಿಲ್ಲ. ವಿಜಯನಗರ ಕಾಲದಲ್ಲಿ ಕಾಂಚಿಪುರಂ, ನಾಗಪಟ್ಟಣಂ ಹಾಗೂ ಕಲಾವತಿಗಳಲ್ಲಿ ಸ್ಮಾರಕಗಳನ್ನು ಕಾಣಬಹುದು. ಸಮಕಾಲೀನ ಶಾಸನಗಳು ಬುದ್ಧನ ಆರಾಧನೆಗಾಗಿ ದಾನ ದತ್ತಿಗಳಾಗಿ ನೀಡಿದ್ದ ಗ್ರಾಮಗಳ ಬಗ್ಗೆ ಮಾಹಿತಿಗಳನ್ನು ನೀಡುತ್ತದೆ. ಚಂದ್ರಗಿರಿಯ ಕೋದಂಡರಾಮಸ್ವಾಮಿ ದೇವಾಲಯದಲ್ಲಿನ ಮುಖಮಂಟಪವೊಂದರಲ್ಲಿ ಬುದ್ಧನ ಮೂರ್ತಿ ಇದೆ. ಕೃಷ್ಣದೇವರಾಯನು ತನ್ನ 'ಆಮುಕ್ತಮೌಲ್ಯದ' ಕೃತಿಯಲ್ಲಿ ಬುದ್ಧನನ್ನು ವಿಷ್ಣುವಿನ ಅವತಾರ ಎಂದು ಚಿತ್ರಿಸಿದ್ದಾನೆ.

ವಿಜಯನಗರದ ಅರಸರು ಮುಸ್ಲಿಮರಿಗೆ ಜಹಗೀರುಗಳನ್ನು ನೀಡಿದ್ದಾರೆ. ಅಲ್ಲದೆ ಮಸೀದಿ, ದರ್ಗಾಗಳನ್ನು ಕಟ್ಟಿಸಿಕೊಟ್ಟಿರುವುದು ತಿಳಿದುಬರುತ್ತದೆ. ಇದಕ್ಕೆ ಸಂಗಮರ ಕಾಲದಲ್ಲಿ ಒಬ್ಬ ಮುಸ್ಲಿಮ್ ಫಕೀರನಿಗಾಗಿ ಕಟ್ಟಿಸಲಾದ ಪೆನುಗೊಂಡಾದ ಬಾಬಯ್ಯನ ದರ್ಗಾವು ಒಳ್ಳೆಯ ಉದಾಹರಣೆ. ಎರಡನೇ ದೇವರಾಯನ ಕಾಲದಲ್ಲಿ ಇಸ್ಲಾಂ ಧರ್ಮಕ್ಕೆ ಹಾಗೂ ಮುಸ್ಲಿಮರಿಗೆ ಹೆಚ್ಚು ಪ್ರಾಶಸ್ತ್ಯ ದೊರೆತಿತ್ತು. ಇಸ್ಲಾಂ ಧರ್ಮಕ್ಕೆ ಮನ್ನಣೆ ನೀಡಿದ ಎರಡನೇ ದೇವರಾಯನು ತನ್ನ ಆಸನದ ಬಳಿಯೇ ಅವರ ಪವಿತ್ರ ಗ್ರಂಥವಾದ 'ಕುರಾನ್'ನ್ನು ಇರಿಸಿದ್ದನು. ವಿಜಯನಗರದ ಅರಸರು ಮುಸ್ಲಿಮರಿಗೆ ನೀಡಿದ್ದ ರಕ್ಷಣೆ ಪ್ರೋತ್ಸಾಹಗಳನ್ನೇ ಕ್ರೈಸ್ತರಿಗೂ ನೀಡಿದ್ದರು. ಅದರಲ್ಲೂ ಕಡಲತೀರದಲ್ಲಿದ್ದ ರೋಮನ್ ಕ್ಯಾಥೋಲಿಕ್ ಮಿಷನರಿಗಳಿಗೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲ.

ವಿಜಯನಗರದ ಸ್ಥಾಪನೆಯ ಮೊದಲು ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು ಸಾಂಪ್ರದಾಯಿಕವಾಗಿದ್ದವು. ಕ್ರಿ.ಶ. 12ನೆಯ ಮತ್ತು 14ನೆಯ ಶತಮಾನದ ನಡುವಣ ಅವಧಿಯ ಕರ್ನಾಟಕದ ಸಮಾಜವು ಯಾವ ರೀತಿಯಿಂದಲೂ ಏಕರೂಪದ್ದಾಗಿರಲಿಲ್ಲ. ಈ ಕಾಲದಲ್ಲಿ ಕರ್ನಾಟಕದ ಮೇಲೆ ಅಪಾರವಾಗಿ ಪ್ರಭಾವ ಬೀರಿದ ಮೂವರು ಆಚಾರ್ಯರ ಪೈಕಿ ಕೊನೆಯ ಪಕ್ಷ ಇಬ್ಬರ ಈ ಸಾಮಾಜಿಕ ಪರಿಸ್ಥಿತಿಯಿಂದ ಉದಯಿಸಿದವರು ಎನ್ನುವುದು ಮಹತ್ವದ ಸಂಗತಿಯಾಗಿದೆ. ಶಂಕರ, ರಾಮಾನುಜ, ಮಧ್ವ ಈ ಮೂವರು ಆಚಾರ್ಯರು ಮುನ್ನಡೆಸಿದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನಗಳು ಮೂಲತಃ ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲೇ ಉದಿಸಿದವು. ಸಾಮಾಜಿಕ ಪರಿವರ್ತನೆಯಲ್ಲದಿದ್ದರೂ ಸಮಾಜ ವಿಮರ್ಶೆಯು ಚಾಲಕ ಶಕ್ತಿಯಾಗಬಲ್ಲ ಕ್ರಾಂತಿಕಾರಕ ವಿಚಾರಗಳನ್ನು ಜನರ ಮುಂದಿಟ್ಟವು. ಅಲ್ಲದೆ, ಅವರು ಯಾರೂ ಪ್ರಚಲಿತ ಸಾಮಾಜಿಕ ವ್ಯವಸ್ಥೆಯನ್ನು ನಿಜವಾಗಿ ಪ್ರಶ್ನಿಸಲಿಲ್ಲ. ಶಂಕರ, ರಾಮಾನುಜ ಮತ್ತು ಮಧ್ವ ಈ ಮೂವರು ತಮ್ಮ ಬುದ್ಧಿಮತ್ತೆಯಿಂದಲೂ ದಿಟ್ಟವಾದ ಪಾರಲೌಕಿಕ ಚಿಂತನೆಗಳಿಂದಲೂ ಶಕ್ತಿಶಾಲಿಯಾದ ಧಾರ್ಮಿಕ ಆಂದೋಲನಗಳನ್ನು

ಎಬ್ಬಿಸಿದರೂ ಅವರು ಅದನ್ನು ಬ್ರಾಹ್ಮಣೀಯ ಸಾಂಪ್ರದಾಯಿಕತೆಯ ಚೌಕಟ್ಟಿನೊಳಗೇ ಮಾಡಿದರು. ಅವರ ತಾತ್ವಿಕ ನೆಲೆಗಳು ಗಮನಾರ್ಹವಾಗಿ ಸಾಮಾಜಿಕ ವಿಮರ್ಶೆಯನ್ನು, ಔದಾರ್ಯವನ್ನು ಸೂಚಿಸುತ್ತಿದ್ದಾಗಲೂ ಕೂಡ ಬೆಳೆಯುತ್ತಿದ್ದ ಬ್ರಾಹ್ಮಣ ಸಾಂಪ್ರದಾಯಿಕತೆಯನ್ನು ಅವರು ನಿರಾಕರಿಸಲಿಲ್ಲ. 12ನೆಯ ಶತಮಾನದ ವೀರಶೈವ ಆಂದೋಲನವು ಕರ್ನಾಟಕದಲ್ಲಿ ನಡೆದ ಅಧಿಕೃತ, ಸುವ್ಯವಸ್ಥಿತ ಸಾಮಾಜಿಕ, ಧಾರ್ಮಿಕ ಆಂದೋಲನವಾಗಿದೆ. ಸಾಮಾಜಿಕವಾಗಿ ಹಿಂದುಳಿದ ಧರ್ಮದವರಿಗೆ ಉನ್ನತವಾದ ಧರ್ಮವು ನಿಲುಕುತ್ತಿರದ ಪರಿಸ್ಥಿತಿಯನ್ನು ಅದು ಪ್ರತಿಭಟಿಸಿತು. ಬ್ರಾಹ್ಮಣ ಏಕಸ್ವಾಮ್ಯವು ಕಲ್ಪಿಸಿದ ಅನೇಕಾನೇಕ ಜಾತೀಯ ಕಟ್ಟುಪಾಡುಗಳ ಅನರ್ಹತೆಗಳನ್ನು ತಿರಸ್ಕರಿಸಿ ಧರ್ಮವನ್ನು ಎಲ್ಲ ಜನರಿಗೂ ಸಮಾನವಾಗಿ ತೆರೆದಿಡುವ ಕೆಲಸವನ್ನು ಬಹುದೊಡ್ಡ ಪ್ರಮಾಣದಲ್ಲಿ ಬಸವೇಶ್ವರರು ಮಾಡಿದರು.

ವಿಜಯನಗರ ಸ್ಥಾಪನೆಯ ಕಾಲಾವಧಿಯು ಕೂಡ ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಉತ್ಕೃಷ್ಟತೆಯ ಕಾಲ ಎಂದು ಹೇಳಬಹುದು. ಮೇಲ್ನೋಟಕ್ಕೆ ಕಾಣುವ ಹಾಗೆ ಉತ್ತರ ಭಾರತದ ಟರ್ಕೋ ಆಫ್ಘನ್ ದಾಳಿಗಳನ್ನು ತಡೆಯುವ ಉದ್ದೇಶದಿಂದ ವಿಜಯನಗರದ ಸ್ಥಾಪನೆಯಾಯಿತು ಎಂದು ಹೇಳಲಾಗುತ್ತದೆ. ವಿಜಯನಗರ ರಾಜ್ಯವು ಮಧ್ಯಯುಗೀನ ದಕ್ಷಿಣ ಭಾರತದ ಮುಸ್ಲಿಂರ ಧಾಳಿಗಳಿಗೆ ತಡೆಗೋಡೆಯಾಗಿ ನಿಂತಿತ್ತು, ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಿತು, ಸಂಸ್ಕೃತಿಯನ್ನು ಕಾಪಾಡಿತು ಎಂದು ಹೇಳಲಾಗುತ್ತದೆ. ಆದರೆ ಈ ವಾದಕ್ಕೆ ಪುಷ್ಟಿಕೊಡುವ ಪುರತಾತ್ವಿಕ ಮತ್ತು ಸಾಹಿತ್ಯಿಕ ಆಕಾರಗಳ ಕೊರತೆ ಇದೆ. ವಿಜಯನಗರ ಸ್ಥಾಪನೆಯ ಕಾಲಾವಧಿಯಲ್ಲಿ ಮುಸ್ಲಿಮರು ದಕ್ಷಿಣ ಭಾರತಕ್ಕೆ ಇನ್ನೂ ಬಂದಿರಲಿಲ್ಲ. ಅವರ ರಾಜ್ಯಗಳ ಸ್ಥಾಪನೆಯಾಗಿರಲಿಲ್ಲ. ಹಾಗೆಯೆ, ವಿಜಯನಗರದ ಸ್ಥಾಪನೆಗೆ ಮತ್ತು ಮುಸ್ಲಿನರ ದಾಳಿಗಳಿಗೆ ಯಾವುದೇ ಸಂಬಂಧವಿರಲಿಲ್ಲ. ವಿಜಯನಗರ ಕಾಲದ ಶಾಸನಗಳನ್ನು ಅಧ್ಯಯನ ಮಾಡಿದಾಗ ಈ ಶಾಸನಗಳಲ್ಲಿ, ವಿಶೇಷವಾಗಿ ಹದಿನಾಲ್ಕು-ಹದಿನೈದನೇ ಶತಮಾನಗಳ ಶಾಸನಗಳಲ್ಲಿ 'ಪೂರ್ವಮರ್ಯಾದೆ' ಎಂಬ ಪರಿಭಾಷೆ ಶಾಸನಗಳಲ್ಲಿ ಕಂಡುಬರುತ್ತದೆ. ಪೂರ್ವಮರ್ಯಾದೆ ಎಂದರೆ ಪ್ರಾಚೀನ ಪರಂಪರೆ, ಸಂಪ್ರದಾಯ, ಆಚಾರ ವಿಚಾರ. ಅಂದರೆ 'ವರ್ಣಾಶ್ರಮ ಧರ್ಮ'. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ವಿಜಯನಗರದ ಅರಸರು ಪೂರ್ವಮರ್ಯಾದೆಯನ್ನು ಕಾಪಾಡಿದರು ಎಂದರ್ಥ. ಆದರೆ ಪೂರ್ವಮರ್ಯಾದೆ ಮತ್ತು ಮುಸ್ಲಿಮರಿಗೆ ಯಾವುದೇ ಸಂಬಂಧವಿಲ್ಲ. ಭಾರತೀಯ ಸಾಮಾಜಿಕ ಧಾರ್ಮಿಕ ವಿಷಯಗಳಿಗೆ ಮುಸ್ಲಿಮರು ಕೈಹಾಕಲೇ ಇಲ್ಲ. ಅವರ ಅಧಿಕಾರ ಕೇವಲ ಮೇಲುಸ್ತರದ ಆಳ್ವಿಕೆಗೆ ಮಾತ್ರ ಸೀಮಿತವಾಗಿತ್ತು. ಭಾರತೀಯ ಆಂತರಿಕ ಸಮಸ್ಯೆಗಳಾದ ಸಮಾಜ ಮತ್ತು ಧರ್ಮಕ್ಕೆ ಅವರು ಕೈಹಾಕಲೇ ಇಲ್ಲ. ಒಂದು ವೇಳೆ ಅವರೇನಾದರೂ ಸಾಮಾಜಿಕ ಧಾರ್ಮಿಕ ವಿಷಯಗಳಲ್ಲಿ ಪ್ರವೇಶಮಾಡಿದ್ದರೆ, ಅವರು ಯಾವತ್ತೋ ಅಧಿಕಾರವನ್ನು ಕಳೆದುಕೊಳ್ಳಬೇಕಾಗಿತ್ತು.

ಆದರೆ ಮಧ್ಯಯುಗೀನ ಕರ್ನಾಟಕದ ವೈದಿಕರ ವರ್ಣಾಶ್ರಮ ಧರ್ಮಕ್ಕೆ ಕುತ್ತು ಯಾರಿಂದ ಬಂದಿತ್ತು? ನಾವು ಕರ್ನಾಟಕ ಚರಿತ್ರೆಯನ್ನು ಸಿಂಹಾವಲೋಕನ ಮಾಡಿದರೆ ಎಂಟು, ಒಂಭತ್ತು ಮತ್ತು ಹತ್ತನೆಯ ಶತಮಾನಗಳ ಕರ್ನಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಜೈನರು ಮತ್ತು ಬೌದ್ಧರು ಪ್ರಭಾವ ಬೀರಿದ್ದನ್ನು ಕಾಣುತ್ತೇವೆ. ಹದಿನಾಲ್ಕನೆಯ ಶತಮಾನದ ಹಿಂದಿನ ಕರ್ನಾಟಕದ ಇತಿಹಾಸವು ಬೌದ್ಧಮಯ ಮತ್ತು ಜೈನಮಯವಾಗಿತ್ತು. ಆದ್ದರಿಂದ ಕರ್ನಾಟಕದಲ್ಲಿ ವೈದಿಕರಿಗೆ ಅವರ ಸಾಮಾಜಿಕ, ಧಾರ್ಮಿಕ ಸಂಸ್ಥೆಗಳಿಗೆ ಬೌದ್ಧರಿಂದ ಅಥವಾ ಜೈನರಿಂದ ತೊಂದರೆಯಾಗಿರಬಹುದು. ಬೌದ್ಧರು ಮತ್ತು ಜೈನರು ಯಾವ ಕಾರಣಕ್ಕಾಗಿ ಕೂಡ ತಾವು ಹಿಂದುಗಳು ಎಂದು ಭಾವಿಸಿಕೊಂಡಿರಲಿಲ್ಲ. ಅವರು ವರ್ಣಾಶ್ರಮ ಧರ್ಮಕ್ಕೆ ಮತ್ತು ವೈದಿಕರಿಗೆ ವಿರುದ್ಧವಾಗಿದ್ದಂತಹವರು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ವೈದಿಕರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಜೈನ ಬೌದ್ಧರನ್ನು ವಾದಗಳಲ್ಲಿ ಅಥವಾ ಸಂಘರ್ಷಗಳಲ್ಲಿ ಸೋಲಿಸಿಯೋ ಅಥವಾ ಕೊಂದೋ ಅಥವಾ ರಾಜಾಶ್ರಯ

ಪಡೆದೋ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಿರಬಹುದೆಂದು. ವಿಜಯನಗರದ ಹರಿಹರ ಮತ್ತು ಬುಕ್ಕರಿಗೆ ಪುಸಲಾಯಿಸಿ ವಿಜಯನಗರ ರಾಜ್ಯವನ್ನು ಸ್ಥಾಪಿಸಿರಬಹುದು. ಈ ವಾದವನ್ನು ಪುಷ್ಟೀಕರಿಸುವ ಪುರಾತಾತ್ವಿಕ ಮತ್ತು ಸಾಹಿತ್ಯಿಕ ಆಕರಗಳು ದೊರೆಯುತ್ತವೆ. ಹಾಗೆಯೇ ವೈದಿಕರು ಸಾಮಾಜಿಕ, ಧಾರ್ಮಿಕ ಮೇಲುಗೈ ಸಾಧಿಸಲು ಅನೇಕ ಪುರಾಣಗಳನ್ನು ಸೃಷ್ಟಿಸುತ್ತಾರೆ. ಅದರಲ್ಲೊಂದು ವಿದ್ಯಾರಣ್ಯರ ದಂತಕತೆ. ವಿಜಯನಗರ ಸ್ಥಾಪನೆ ಕಾಲದಲ್ಲಿ ಶೃಂಗೇರಿಯ ಜಗದ್ಗುರುಗಳು ಆಗಿರದ ವಿದ್ಯಾರಣ್ಯರನ್ನು ವಿಜಯನಗರ ಸ್ಥಾಪನೆಗೆ ಪ್ರೋತ್ಸಾಹ ನೀಡಿದವರೆಂದು ಹೇಳಲಾಗುತ್ತದೆ. ಆದರೆ ವಿದ್ಯಾರಣ್ಯರು 1336ರಲ್ಲಿ ಕಾಶಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಅವರು ಶೃಂಗೇರಿಯ ಜಗದ್ಗುರುಗಳಾಗಿದ್ದುದು 1378ರಲ್ಲಿ. ಹೀಗೆ ಕ್ರಿ.ಶ. ಹನ್ನೆರಡನೇ ಮತ್ತು ಹದಿನಾಲ್ಕನೇ ಶತಮಾನಗಳ ನಡುವಣ ಕಾಲಾವಧಿಯಲ್ಲಿ ಜೈನ, ವೈಷ್ಣವ ಮತ್ತು ಶೈವ ಸಂಘರ್ಷಗಳನ್ನು ಉಲ್ಲೇಖಿಸುವ ಅನೇಕ ದೃಷ್ಟಾಂತಗಳನ್ನು ನೀಡಬಹುದು.

ವೃತ್ತವಿಲಾಸ ಎಂಬ ಜೈನ ಕವಿ ಬರೆದ ಚಂಪೂ ರೂಪದ ವಿಡಂಬನ ಕಾವ್ಯ ಧರ್ಮಪರೀಕ್ಷೆ. ಅದರ ಕಾಲ ಕ್ರಿ.ಶ. 1360. ವೃತ್ತವಿಲಾಸನಿಗೆ ಕಾವ್ಯವನ್ನು ಬರೆಯಲು ಎರಡು ಉದ್ದೇಶಗಳಿದ್ದವು. ಒಂದು ಪ್ರಾಚೀನ ವೈದಿಕ ಪೌರಾಣಿಕ ಕಥೆಗಳನ್ನು ವಿಮರ್ಶಾತ್ಮಕವಾಗಿ ನೊಡುವುದು. ಇನ್ನೊಂದು ಜೈನಧರ್ಮದ ಮೇಲ್ಮೈಯನ್ನು ಎತ್ತಿ ಹಿಡಿಯುವುದು. ವೃತ್ತವಿಲಾಸನು ಆ ಕಾಲದ ಹಿಂದೂ ಧಾರ್ಮಿಕ ನಂಬಿಕೆಗಳನ್ನೂ ಆಚರಣೆಗಳನ್ನು ವಿಮರ್ಶಿಸುತ್ತಾನೆ. ವೈದಿಕ ನಂಬಿಕೆಗಳ ಮೇಲೆ ವಿಡಂಬನೆಯ ಮೂಲಕ ಆಕ್ರಮಣ ಮಾಡಿದವರಲ್ಲಿ ವೃತ್ತವಿಲಾಸನು ಮೊದಲನೆಯವನೇನಲ್ಲ. ಕ್ರಿ.ಶ. 988ರಲ್ಲಿ ಹರಷೇಣನು ಧರ್ಮಪರೀಕ್ಷೆಯನ್ನು ಬರೆದಿದ್ದನು. ಬ್ರಹ್ಮಶಿವನ ಸಮಯ ಪರೀಕ್ಷೆಯು 1190ರಲ್ಲಿ ರಚಿತವಾಯಿತು. ವೃತ್ತವಿಲಾಸನ ಚಂಪೂಕಾವ್ಯದ ನಾಯಕ ಮನೋವೇಗ. ಅವನು ವೈಜಯಂತಿಯ ರಾಜನ ಮಗ. ಅವನು ವಿದ್ವಾಂಸರಾದ ಬ್ರಾಹ್ಮಣರಿಗೆ ಪೊಳ್ಳು ಕಥೆಗಳನ್ನು ಹೇಳಿ ಪುರಾಣ ಕಥೆಗಳು ಮತ್ತು ನಂಬಿಕೆಗಳ ಪೊಳ್ಳುತನವನ್ನು ತೋರಿಸಿಕೊಡುತ್ತಾನೆ. ಅಂತಿಮವಾಗಿ ಬ್ರಾಹ್ಮಣರನ್ನು ಸೋಲಿಸಿ ಅವರಿಂದ ಜಯಪತ್ರವನ್ನು ಪಡೆಯುತ್ತಾನೆ. ಕೊನೆಯಲ್ಲಿ ತಮ್ಮ ಧಾರ್ಮಿಕ ನಂಬಿಕೆಗಳ ಅರ್ಥಶೂನ್ಯತೆಯನ್ನು ಮನಗಂಡು ಅವರು ಜೈನರಾಗಿ ಪರಿವರ್ತಿತರಾಗುತ್ತಾರೆ.

ವಿಷ್ಣುವಿನ ಅವತಾರಗಳನ್ನು ಕುರಿತು ಮನೋವೇಗನು ಹೀಗೆ ಗೇಲಿ ಮಾಡುತ್ತಾನೆ: "ನಿಮ್ಮ ದೇವರು ಜನನ ಮರಣಗಳ ಬಂಧನದಿಂದ ಮುಕ್ತನು ಎಂದು ನೀವು ಹೇಳುತ್ತೀರಿ. ಆದರೆ ಅದೇ ದೇವರು, ಮೀನಾಗಿ, ಆಮೆಯಾಗಿ, ಹಂದಿಯಾಗಿ, ಸಿಂಹವಾಗಿ ಹುಟ್ಟಿದನು ಎಂದು ಹೇಳುತ್ತೀರಿ. ಅಂತಹ ಕೆಲಸಗಳೇನು ಬಹು ರಂಜನೀಯವಾಗಿರುತ್ತವೋ, ದಯವಿಟ್ಟು ಹೇಳಿ". ಈ ರೀತಿ ಮನೋವೇಗನು ಬ್ರಾಹ್ಮಣರ ಧಾರ್ಮಿಕ ನಂಬಿಕೆಗಳನ್ನು ಟೀಕಿಸುತ್ತಾನೆ. ಕಾವ್ಯದುದ್ದಕ್ಕೂ ವಿಡಂಬನೆ ಉಪಯೋಗವಾಗಿದೆ. ಧರ್ಮಪರೀಕ್ಷೆ ಒಂದು ಉತ್ತಮ ವಿಡಂಬನ ಕಾವ್ಯವಾಗಿದೆ.

14ನೆಯ ಶತಮಾನದ ಐತಿಹಾಸಿಕ ಸಂದರ್ಭದಲ್ಲಿ ವೃತ್ತವಿಲಾಸನ ಕೃತಿಗೆ ಮಹತ್ವವಿದೆ. ಅದು ವಿಜಯನಗರ ಸಾಮ್ರಾಜ್ಯದ ಉದಯಕಾಲ. ಹಿಂದೂ ಧಾರ್ಮಿಕ ಪಂಥಗಳು ಪ್ರತ್ಯಕ್ಷ್ಯವಾಗೋ ಪರೋಕ್ಷವಾಗೋ ಸಂಗಮ ರಾಜವಂಶದ ಆಶ್ರಯವನ್ನು ಪಡೆದವು. ವಿಜಯನಗರ ಪೂರ್ವಕಾಲಕ್ಕೆ ಹೋಲಿಸಿದ ಪಕ್ಷದಲ್ಲಿ ದಕ್ಷಿಣ ಕನ್ನಡ ಪ್ರದೇಶದಲ್ಲಿ ಅಲ್ಲಲ್ಲಿ ಕೇಂದ್ರೀಕೃತವಾಗಿದ್ದುದೇ ಹೊರತು ಜೈನ ಧರ್ಮವು ಒಟ್ಟಾರೆ ಕ್ಷೀಣಿಸಿದ್ದ ಕಾಲವದು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ವೃತ್ತವಿಲಾಸನ ವಿಡಂಬನ ಕಾವ್ಯವನ್ನು ಅಧ್ಯಯನ ಮಾಡಬೇಕು. 14ನೆಯ ಶತಮಾನವು ಜೈನ ವೈಷ್ಣವ ಸಂಘರ್ಷವನ್ನು ಕಂಡಿತು. ದಕ್ಷಿಣ ಕರ್ನಾಟಕದ ಜೈನ ಯಾತ್ರಾ ಕೇಂದ್ರದ ಹೃದಯ ಶ್ರವಣಬೆಳಗೊಳದಲ್ಲೇ ಈ ಪ್ರವೃತ್ತಿಯು ಬೆಳೆಯುತ್ತಿತ್ತು. ಅಲ್ಲಿನ ಕ್ರಿ.ಶ. 1368ರ ಒಂದು ಶಾಸನವು ಆ ಪ್ರದೇಶದ ಧಾರ್ಮಿಕ ಜೀವನದಲ್ಲಾದ ಈ ಬೆಳವಣಿಗೆಗೆ ಸ್ಪಷ್ಟ ಸೂಚನೆಗಳನ್ನು ಕೊಡುತ್ತದೆ. ಜೈನರಿಗೂ ಶ್ರೀವೈಷ್ಣವರಿಗೂ ನಡುವೆ ಎದ್ದಿದ್ದ ವ್ಯಾಜ್ಯವನ್ನು ಬಗೆಹರಿಸಲು ಚಕ್ರವರ್ತಿ ಮೊದಲನೆಯ ಬುಕ್ಕನೇ ಮಧ್ಯಪ್ರವೇಶ ಮಾಡಬೇಕಾಯಿತು ಎನ್ನುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ವಿಜಯನಗರ ಕಾಲದ ಸಾಮಾಜಿಕ ಧಾರ್ಮಿಕ ಚಳವಳಿಗಳ ಹದಿನಾರನೆಯ ಮತ್ತು ಹದಿನೇಳನೆಯ ಶತಮಾನಗಳ ಇತಿಹಾಸವು ಆಶ್ಚರ್ಯದಿಂದ ಕೂಡಿದೆ. ಸಾಂಪ್ರದಾಯಿಕ ಚರಿತ್ರೆಕಾರರು ವಿಜಯನಗರದ ಸಾಮ್ರಾಜ್ಯದ ಅವನತಿ ದಖನ್ನಿನ ಐದು ಷಾಹಿ ಸುಲ್ತಾನರಿಂದ ಆದದ್ದು ಎಂದು ಹೇಳಲಾಗುತ್ತದೆ. ಆದರೆ, ದಖನ್ನಿನ ಷಾಹಿ ಸುಲ್ತಾನರಾಗಲೀ ಅಥವಾ ಸೈನಿಕರಾಗಲೀ ವಿಜಯನಗರದ ರಾಜಧಾನಿಗೆ ಬರಲೇ ಇಲ್ಲ. ಅವರು ಹಂಪಿಯನ್ನು ಹಾಳುಮಾಡಲೇ ಇಲ್ಲ. ಅದು ಸಾಧ್ಯವೂ ಆಗಿರಲಿಲ್ಲ. ಇದರ ಬಗ್ಗೆ ಮಹಮ್ಮದ್ ಖಾಸಿಂ ಫರಿಸ್ತಾ ಮುಸ್ಲಿಮರ ಆಸ್ಥಾನದಲ್ಲಿದ್ದ ಒಬ್ಬ ಕವಿ ಒಬ್ಬ ಸೈನಿಕರ ಹೇಳಿಕೆಯನ್ನು ಈ ಕೆಳಗಿನಂತೆ ದಾಖಲಿಸುತ್ತಾನೆ. "ನಾವು ತಾಳಿಕೋಟೆಯಲ್ಲಿ ವಿಜಯನಗರದ ರಾಜರನ್ನು ಸೋಲಿಸಿದ ನಂತರ ಮರಳಿ ಬಿಜಾಪುರಕ್ಕೆ ಬಂದೆವು. ಅಷ್ಟರಲ್ಲಿ ನೆರೆಯ ಸುಲ್ತಾನರು ರಾಜ್ಯದ ಮೇಲೆ ಆಕ್ರಮಣವನ್ನು ಮಾಡಿದ್ದರು". ಅಂದರೆ ವಿಜಯನಗರ ವೈಭವಿತ ರಾಜಧಾನಿಯನ್ನು ಯಾರು ಹಾಳುಗೆಡವಿದರು. ಶಿವರಾಮಕಾರಂತರು ಮತ್ತು ಇತರೆ ವಿದೇಶಿ ಇತಿಹಾಸಕಾರರು ಹಂಪಿಯು ಹಾಳಾಗಲು ಶೈವ ಮತ್ತು ವೈಷ್ಣವ ಸಂಘರ್ಷಗಳು ಕಾರಣವೆಂದು ಅಭಿಪ್ರಾಯಪಡುತ್ತಾರೆ. ಇದಕ್ಕೆ ಪೂರಕವೆಂಬಂತೆ ಹಂಪಿಯಲ್ಲಿ ಶೈವರ ದೇವಾಲಯಗಳನ್ನು ಹೊರತುಪಡಿಸಿ ವೈಷ್ಣವರ ಎಲ್ಲಾ ದೇವಾಲಯಗಳು ನಾಶಗೊಂಡಿವೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಕಾಲದ ಸಾಮಾಜಿಕ, ಧಾರ್ಮಿಕ ಚಳವಳಿಗಳು ಸಂಕೀರ್ಣವಾದವುಗಳು. ವಿಜಯನಗರ ಸ್ಥಾಪನೆಯ ಕಾಲದಿಂದಲೇ ಇಲ್ಲಿ ಜೈನರ ವಿರುದ್ಧ ಶೈವರು, ಶೈವರ ವಿರುದ್ಧ ವೀರಶೈವರು, ಶೈವರ ವಿರುದ್ಧ ವೈಷ್ಣವರು ಸಂಘರ್ಷಕ್ಕೆ ಮತ್ತು ಹೋರಾಟಕ್ಕೆ ಇಳಿದಿದ್ದನ್ನು ನೋಡಬಹುದು. ಆರಂಭದ ಸಂಗಂ ದೊರೆಗಳ ಕಾಲದಲ್ಲಿ ಶೈವರು ಜೈನರು ಪ್ರಾಬಲ್ಯ ಪಡೆದರೆ, ಸಾಳ್ವ ಮತ್ತು ತುಳುವ ಮನೆತನಗಳ ಕಾಲದಲ್ಲಿ ವೈಷ್ಣವರು ಪ್ರಾಬಲ್ಯಕ್ಕೆ ಬರುತ್ತಾರೆ. ಹೀಗೆ ವಿಜಯನಗರ ಕಾಲದ ಈ ಸಾಮಾಜಿಕ ಧಾರ್ಮಿಕ ಜಾತಿ ವರ್ಗಗಳ ಮಧ್ಯೆ ನಿರಂತರವಾದ ಸಂಘರ್ಷಗಳಿದ್ದವು. ಇವರ ಉದ್ದೇಶ ರಾಜರನ್ನು ಓಲೈಸುವುದು ಮತ್ತು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು ಆಗಿತ್ತು. ಈ ಪ್ರಕ್ರಿಯೆಯಲ್ಲಿ ತೊಡಗಿದ್ದ ಸಾಮಾಜಿಕ ಧಾರ್ಮಿಕ ಜಾತಿ/ವರ್ಗಗಳು ಕೊನೆಗೆ ವಿಜಯನಗರದ ಅವನತಿ ಮತ್ತು ಪತನಕ್ಕೆ ಕಾರಣರಾದರು.

ಪರಾಮರ್ಶನ ಗ್ರಂಥಗಳು

1. ಮಹಾಲಿಂಗಂ ಟಿ.ವಿ., ಅಡ್ಮಿನಿಸ್ಟ್ರೇಷನ್ ಎಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ.
2. ರಾಬರ್ಟ್ ಸಿವೆಲ್, ಎ ಫರ್‌ಗಾಟನ್ ಎಂಪೈರ್, ನವದೆಹಲಿ, 1970.
3. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂ. 3, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ವೆಂಕಟರಮಣಯ್ಯ, ಎನ್. ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ದಿ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ, ಮದರಾಸು.
5. ರಾಘವೇಂದ್ರರಾವ್ ಕೆ (ಸಂ.), ಧರ್ಮಪರೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1982.
6. ಐಯಂಗಾರ್ ಎಸ್.ಕೆ, ದಿ ಸೋರ್ಸಸ್ ಆಫ್ ವಿಜಯನಗರ್ ಹಿಸ್ಟರಿ, ಮದ್ರಾಸ್, 1909.
7. ನೀಲಕಂಠಶಾಸ್ತ್ರಿ ಕೆ.ಎ. ಮತ್ತು ವೆಂಕಟರಮಣಯ್ಯ ಎನ್., (ಸಂ.), ಫರ್ದರ್ ಸೋರ್ಸಸ್ ಆಫ್ ವಿಜಯನಗರ್ ಹಿಸ್ಟರಿ, ಮದ್ರಾಸ್, 1946.
8. ಭಂಡಾರ್ಕರ್ ಆರ್.ಜಿ., ವೈಷ್ಣವಿಸಂ, ಶೈವಿಸಂ ಅಂಡ್ ಅದರ್ ಮೈನರ್ ರಿಲಿಜನ್ಸ್, ಪೂನಾ, 1938.
9. ದೇಸಾಯಿ, ಪಿ.ಬಿ., ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್, ಸೋಲಾಪುರ್, 1957.
10. ಕೃಷ್ಣಸ್ವಾಮಿ ಅಯ್ಯಂಗಾರ್, ಎಸ್., ಸೌತ್ ಇಂಡಿಯಾ ಅಂಡ್ ಹರ್ ಮಹಮದನ್ ಇನ್ವೇಡರ್ಸ್, ಮದ್ರಾಸ್, 1921.
11. ಪಂಚಮುಖಿ ಆರ್.ಎಸ್., ಹರಿದಾಸ್ ಸಾಹಿತ್ಯ ಆಫ್ ಕರ್ನಾಟಕ, ಬೆಂಗಳೂರು, 1957.

41. ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ವ್ಯವಸ್ಥೆ

ಡಾ. ಹೆಚ್.ಈ. ಬಸವರಾಜಪ್ಪ

ಭಾರತೀಯ ಇತಿಹಾಸ ರಚನಾಶಾಸ್ತ್ರದ ಸಂದರ್ಭದಲ್ಲಿ ನಾವು ಎರಡು ಬಗೆಯ ಅಧ್ಯಯನ ಕ್ರಮಗಳನ್ನು ಗಮನಿಸಬಹುದು. ಮೊದಲನೆಯದು ಸ್ಥೂಲಸ್ತರದ ಚರಿತ್ರೆಯಾದರೆ ಎರಡನೆಯದು ಸೂಕ್ಷ್ಮಸ್ತರದ ಚರಿತ್ರೆ. ಸ್ಥೂಲಸ್ತರದ ಚರಿತ್ರೆಯ ಅಧ್ಯಯನ ಕ್ರಮವೆಂದರೆ ದೊಡ್ಡ ಸಾಮ್ರಾಜ್ಯ ಹಾಗೂ ವಿಸ್ತಾರವಾದ ರಾಜ್ಯಗಳ ಚರಿತ್ರೆಯ ಅಧ್ಯಯನ ಕ್ರಮವಾಗಿದೆ. ಇಂತಹ ಅಧ್ಯಯನ ಕ್ರಮವು 18ನೇ ಶತಮಾನದಿಂದಲೂ ನಡೆಯುತ್ತಾ ಬಂದಿದೆ. ಆದರೆ ಸೂಕ್ಷ್ಮಸ್ತರದ ಅಧ್ಯಯನವು ಇದಕ್ಕಿಂತ ಭಿನ್ನವಾದುದು. ಒಂದು ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಇಂತಹ ಸೂಕ್ಷ್ಮಸ್ತರದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಘಟನೆಗಳು ಪ್ರಮುಖ ಪಾತ್ರವಹಿಸುತ್ತವೆ. ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಭೂಹಿಡುವಳಿ ವ್ಯವಸ್ಥೆಯ ಅಧ್ಯಯನದಿಂದ ಸಾಮಾನ್ಯ ಜನರ ಬದುಕು ಹಾಗೂ ಪ್ರಾದೇಶಿಕ ಸಂಸ್ಕೃತಿಯು ಬೆಳವಣಿಗೆಯನ್ನು ಗುರುತಿಸಬಹುದು. ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ರಾಜ್ಯದ ಸ್ಥಾಪನೆಯು ಒಂದು ಮೈಲಿಗಲ್ಲು. ಈ ರಾಜ್ಯವು ಒಂದು ಭಾಷಾ ಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ ಬಹುಮಟ್ಟಿಗೆ ಈಗಿನ ದಕ್ಷಿಣ ಭಾರತವನ್ನು ವ್ಯಾಪಿಸಿತ್ತು. ಕ್ರಿ.ಶ. 1336ರಿಂದ 1565ರ ವರೆಗೆ ಸುಮಾರು 229 ವರ್ಷಗಳ ಬಹುದೀರ್ಘವಾದ ಅವಧಿಯವರೆಗೆ ಈ ವಿಶಾಲವಾದ ರಾಜ್ಯವು ಅಸ್ತಿತ್ವದಲ್ಲಿತ್ತು.

ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. 1356ರ ಶಾಸನವು ವಿಜಯನಗರದ ಪ್ರತಿನಿಧಿಯಾಗಿ ಮಲ್ಲಿನಾಥ ಒಡೆಯನೆಂಬುವನು "ಬೆಮ್ಮತ ಕಲ್ಲು"ನಾಡನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದನೆಂಬುದನ್ನು ತಿಳಿಸುತ್ತದೆ.[1] ವಿಜಯನಗರ ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿದ್ದನು. ಅವುಗಳಲ್ಲಿ ಸೀಮೆ, ವೇಂಠೆ ಮತ್ತು ಚಾವಡಿ ಎಂಬ ವಿಭಾಗಗಳು ಪ್ರಮುಖವಾಗಿದ್ದವು. ಮೊದಲನೇ ಬುಕ್ಕನ ಕಾಲಾವಧಿಯಲ್ಲಿ ಹಲವು ಗ್ರಾಮಗಳನ್ನು ಒಳಗೊಂಡ ಪ್ರದೇಶವನ್ನು ಸೀಮೆ ಎಂದು ಕರೆಯುತ್ತಿದ್ದರು. ಭಾರತದ ಉಪಖಂಡದಲ್ಲೆಲ್ಲಾ ಸರ್ವೆಸಾಮಾನ್ಯವಾಗಿ ಭೂಹಿಡುವಳಿಯ ಸ್ವರೂಪವು ಹೆಚ್ಚು ಕಡಿಮೆ ಒಂದೇ ರೀತಿ ಇರುವುದನ್ನು ನಾವು ಗುರುತಿಸಬಹುದು. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಮತ್ತಿತರ ಕಾರಣಗಳಿಂದಾಗಿ ಭೂಹಿಡುವಳಿಗಳನ್ನು ರಾಜ್ಯವು ವ್ಯಕ್ತಿ ಮತ್ತು ಸಮುದಾಯಗಳಿಗೆ ಶತಮಾನಗಳಿಂದಲೂ ನೀಡುತ್ತಾ ಬಂದಿದೆ. ಚಿತ್ರದುರ್ಗ ಪ್ರದೇಶವೂ ಇದರಿಂದ ಹೊರತೇನಲ್ಲ. ಪ್ರತಿ ಪ್ರದೇಶದ ಸಮುದಾಯಗಳ ಸ್ಥಾನ-ಮಾನಗಳು ನಿರ್ಧಾರವಾಗಿರುವುದೇ ಕೃಷಿಗೊಳಪಟ್ಟ ಭೂಮಿಯ ಒಡೆತನದ ಆಧಾರದ ಮೇಲೆಯೇ. ಹೀಗಾಗಿ ಆಯಾಯ ಪ್ರದೇಶಗಳ ಸಾಮಾಜಿಕ ಸಂಬಂಧಗಳು ನಿರ್ಣಯಕ್ಕೆ ಒಳಪಡುವುದು ಕೃಷಿಗೆ ಒಳಪಟ್ಟ ಭೂಮಿಯ ಮೇಲೆ ಹೊಂದಿರುವ ಒಡೆತನದಿಂದ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ವಿಜಯನಗರ ಅರಸರ ಕಾಲಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ "ಅಗ್ರಹಾರ" ಮತ್ತು "ಮಹಾನಾಡು" ಎಂಬ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ವಿಜಯನಗರ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿದ್ದರೂ ಗ್ರಾಮ ಹಂತದಿಂದ ಪ್ರಾಂತಗಳವರೆಗೂ ಭೂಹಿಡುವಳಿಗಳ ಹಂಚಿಕೆಯಲ್ಲಿ ಪ್ರಾಂತ್ಯಾಧಿಕಾರಿಗಳು ಪ್ರಮುಖ ಪಾತ್ರವಹಿಸುತ್ತಿದ್ದರು. ಅದು ವಿಕೇಂದ್ರೀಕರಣದ ಒಂದು ಪ್ರಾಯೋಗಿಕ ಉದಾಹರಣೆಯಾಗಿದೆ. ವಿಜಯನಗರದ ಕಾಲಾವಧಿಯಲ್ಲಿ ಭೂಮಿ ಕುರಿತ ಅಭಿಪ್ರಾಯ ಸ್ಪಷ್ಟವಾಗಿ ಖಾಸಗಿ ಆಸ್ತಿಯ ಕಲ್ಪನೆ ರೂಪು ಪಡೆದಿತ್ತು. ಕ್ರಿ.ಶ. 1431ರ ಶಾಸನದಲ್ಲಿ ದೇವರಾಯ

ಮಹಾಪ್ರಧಾನಿಯಾದ ಹರಿಯಪ್ಪ ದಂಣಾಯಕ ಒಡೆಯರ ನಿರೂಪದಿಂದ ಮಂಗಳೂರು ರಾಜ್ಯವನ್ನು ಅಂಣಪ್ಪಗಳು ಆಳುತ್ತಿರುತ್ತಾರೆ. ಈ ಸಮಯದಲ್ಲಿ ಪುಳಿನಾನದಿ ತೀರದಿಂದ ಬಂದ ಕಣವೋಜಿ ಸುಬ್ಬಣ್ಣನಿಗೆ ದೇವರ ಪೂಜೆಗಾಗಿ ಪಾಂಡ್ಯಪ್ಪ ಅರಸನಾದ ಅವನು ಬಂಗಾರದ 233 ವರಹದ ಭೂಮಿಯನ್ನು ಕ್ರಯವಾಗಿ ಕೊಂಡು ದಾನವಾಗಿ ಬಿಟ್ಟ ವಿವರವನ್ನು ಶಾಸನ ತಿಳಿಸುತ್ತದೆ.[2] ಈ ಹಿನ್ನೆಲೆಯಲ್ಲಿ ಬರ್ಟನ್‌ಸ್ಟೀನ್‌ರವರು ವಿಜಯನಗರ ಸಾಮ್ರಾಜ್ಯವನ್ನು ತುಂಡು ರಾಜ್ಯಗಳ ಒಕ್ಕೂಟವೆಂದು ಹೇಳಿರುವುದನ್ನು ನಾವು ಗಮನಿಸಬೇಕು.[3] ರಾಜಕೀಯ ಪರಮಾಧಿಕಾರವು ತುಂಡು, ತುಂಡಾಗಿ ಒಡೆದು ಹೋಗಿರುವುದು ಕರ್ನಾಟಕದಲ್ಲಿ ಮಧ್ಯಯುಗದ ನಿಯಂತ್ರಣದ ಆಡಳಿತ ವ್ಯವಸ್ಥೆ ಉದಯಿಸಲು ದಾರಿ ಮಾಡಿಕೊಟ್ಟಿತು. ಇಂತಹ ಸ್ಥಳೀಯ ಆಡಳಿತ ಘಟಕಗಳು ಚಿತ್ರದುರ್ಗ ಪ್ರದೇಶದಲ್ಲಯೂ ಇದ್ದವು. ಆ ಬಗ್ಗೆ ಶಾಸನಗಳು ವಿವರವಾದ ಮಾಹಿತಿಯನ್ನು ನೀಡುತ್ತವೆ. ಹೀಗಾಗಿ ಕರ್ನಾಟಕದಾದ್ಯಂತ ಸಣ್ಣಪುಟ್ಟ ಪಾಳೆಯಗಾರರು ತಲೆ ಎತ್ತಿದ್ದರು. ಚಿತ್ರದುರ್ಗ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ನಾಯಕನಹಟ್ಟಿ, ಹರತಿ, ಮತ್ತೋಡು, ಸಂತೆಬೆನ್ನೂರು ಮುಂತಾದವರಲ್ಲಿ ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ಸುಮಾರು 211 ವರ್ಷಗಳ ಕಾಲ ಆಳ್ವಿಕೆ ನಡೆಸಿದರು.[4] ಕ್ರಿ.ಶ. 1552ರ ಶಾಸನವು ರಾಮಗಿರಿ ಸೀಮೆಯ ಆಡಳಿತವನ್ನು ಕರಣಿಕ ಪ್ರಭುಕಯ್ಯನ ಸೋದರ ಬಸಪ್ಪಯ್ಯ ನಡೆಸುತ್ತಿದ್ದನೆಂಬ ವಿವರ ನೀಡುತ್ತದೆ.[5] ಕ್ರಿ.ಶ. 1540ರ ಅಚ್ಯುತರಾಯನ ಕಾಲದ ಶಾಸನವು ಪೆನುಗೊಂಡೆಯ ವೀರಪ್ಪ ನಾಯಕನ ನಿರೂಪದ ಮೇರೆಗೆ ಜಾಜೂರು ಸೀಮೆಯನ್ನು ಹಿರಿಯ ಮಲ್ಲಪ್ಪಣ್ಣ ಅಯ್ಯನು ಆಳುತ್ತಿದ್ದನೆಂದು ತಿಳಿಸುತ್ತದೆ.[6] ಇವನು ಜಾಜೂರು ಸೀಮೆಯ ಮದುವೆಯ ಸುಂಕವನ್ನು ಸರ್ವಮಾನ್ಯ ಮಾಡಿದ ಉಲ್ಲೇಖವಿದೆ. ಕ್ರಿ.ಶ. 1533ರ ಶಾಸನದಲ್ಲಿ ದುಂಮಿಯ ಸೀಮೆಯ ಉಲ್ಲೇಖವಿದೆ. ಅಚ್ಯುತರಾಯ ಮಹಾರಾಯರ ದಕ್ಷಿಣ ಭೂದಂಡನಾದ ಕೃಷ್ಣಪ್ಪ ನಾಯಕನ ಕಾರ್ಯಕ್ಕೆ ಕರ್ತರಾದ ಮಲ್ಲರಸಯ್ಯನವರು ದುಂಮಿಯ ಸೀಮೆಯನ್ನು ಆಳುತ್ತಿದ್ದನೆಂದು ಶಾಸನವು ತಿಳಿಸುತ್ತದೆ.[7] ಇದೇ ಗ್ರಾಮದ ಕ್ರಿ.ಶ. 1527ರ ಕೃಷ್ಣದೇವರಾಯನ ಕಾಲದ ಒಂದು ಶಾಸನವು ದುಂಮಿಯ ಪಟ್ಟಣದ 18 ಗೌಡ ಪ್ರಜೆಗಳು ಸೇರಿ ಹಿಂದೆ ದುಂಮಿಯನ್ನು ಬಿಟ್ಟು ಹೋದ ಹಲವು ಕೃಷಿ ಒಕ್ಕಲುಗಳನ್ನು ಬರಮಾಡಿಕೊಂಡು ಭೂ ಹಿಡುವಳಿಗಳನ್ನು ಪುನಃ ಅವರಿಗೆ ಹಂಚಿದ ಬಗೆಗೆ ತಿಳಿಸುತ್ತದೆ. ಈ ಶಾಸನದಿಂದ ಮುಖ್ಯವಾಗಿ ಗ್ರಹಿಸಬಹುದಾದ ವಿಚಾರವೆಂದರೆ ಅಂದಿನ ಸಮಾಜದಲ್ಲಿ ಗ್ರಾಮದ ಗೌಡರು ಭೂಹಿಡುವಳಿಗಳ ಹಂಚಿಕೆಯಲ್ಲಿ ಮತ್ತು ಕಂದಾಯ ವಸೂಲಿಯ ವಿಚಾರದಲ್ಲಿ ರಾಜರಿಗೆ ಮಧ್ಯವರ್ತಿಗಳಾಗಿದ್ದರು. ಇದರಿಂದ ಗ್ರಾಮಗಳು ಸ್ವಾಯತ್ತ ಆಡಳಿತದ ಘಟಕಗಳಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. 1554ರ ಸದಾಶಿವರಾಯನ ಕಾಲದ ಶಾಸನವು ತಿಳಿಸುವಂತೆ ವಿಜಯನಗರದ ಪ್ರತಿನಿಧಿಯಾದ ವೀರಣ್ಣ ನಾಯಕ ಬಾಗೂರು ಸೀಮೆಯ ಪಾರುಪತ್ಯದ ತನ್ನ ಆಡಳಿತಾವಧಿಯಲ್ಲಿ ಸುಂಕದ ಅಧಿಕಾರಿಯಾಗಿದ್ದ ನರಸಿಂಹಯ್ಯನ ಭಿನ್ನವತ್ತಳೆಯ ಮೇರೆಗೆ ಅಲ್ಲಿನ ಗೌಡರಾದ ಲಿಂಗನಗೌಡ, ಶಾನುಭೋಗರಾದ ತಿಮ್ಮಪ್ಪ ಮತ್ತು ಇತರ ಪ್ರಜೆಗಳ ಸಮ್ಮುಖದಲ್ಲಿ ಪರ್ಯಾವಲೋಚನೆಯನ್ನು ಮಾಡಿ ಬಾಗೂರು ಸೀಮೆಯ ಹೊರಭಾಗದಲ್ಲಿ ಒಂದು ಪೇಟೆಯನ್ನು ಕಟ್ಟಿಸಿದನು. ಅದಕ್ಕೆ "ಕೃಷ್ಣಪುರ" ಎಂಬ ಹೆಸರನ್ನು ಇಟ್ಟು ಅಲ್ಲಿಗೆ ಹಲವು ಒಕ್ಕಲುಗಳನ್ನು ಬರಮಾಡಿಕೊಂಡು ಅಲ್ಲಿನ ಭೂಹಿಡುವಳಿಗಳನ್ನು ಒಂದು ವರ್ಷದವರೆಗೆ ತೆರಿಗೆ ಇಲ್ಲದೆ ಒಪ್ಪಂದದ ಮೂಲಕ ಕೃಷಿಗೊಳಪಡಿಸಲು ಅವಕಾಶ ಕಲ್ಪಿಸಿರುವುದು ಶಾಸನದಿಂದ ತಿಳಿದುಬರುತ್ತದೆ. ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ವಿಜಯನಗರ ಕಾಲದ ಅಧೀನ ಅಮರನಾಯಕರು ತಾವು ಆಡಳಿತ ನಡೆಸುವ ಸೀಮೆಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶವಿತ್ತು, ಹಾಗೆಯೇ ಸ್ಥಳೀಯ ಅಮರನಾಯಕರು ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಪೂರ್ವದಲ್ಲಿ ಗ್ರಾಮದ ಗೌಡರುಗಳ ಒಪ್ಪಿಗೆ ಪಡೆಯಬೇಕಾಗಿರುವುದು ಶಾಸನದಿಂದ ತಿಳಿದುಬರುತ್ತದೆ.

ಕ್ರಿ.ಶ. 1554ರ ಸದಾಶಿವರಾಯನ ಕಾಲದ ಶಾಸನದಲ್ಲಿ ಬೂದಿಹಾಳ ಸೀಮೆಯ ಆಡಳಿತ ನಡೆಸುತ್ತಿರುವ ವೇಳೆಯಲ್ಲಿ

ತಾನು ರಾಜನ ಪ್ರತಿನಿಧಿಯಾಗಿದ್ದಾನೆಂದು ಹೇಳಿಕೊಳ್ಳುತ್ತಾನೆ. ಬೂದಿಹಾಳ ಸೀಮೆಯ ಕೆರೆಯು ಕೆಳಭಾಗದ ಭೂಮಿಯನ್ನು ಕ್ಷೌರಿಕರಿಗೆ ತೆರಿಗೆ ರಹಿತವಾಗಿ ಕೊಟ್ಟ ವಿವರವಿದೆ. ಇದರಿಂದ ಅಂದಿನ ಸಮಾಜದಲ್ಲಿ ತೀರ ಕೆಳಸ್ತರದಲ್ಲಿರುವ ಕ್ಷೌರಿಕರು ಸಹ ಭೂಒಡೆತನವನ್ನು ಹೊಂದಿರುವ ಬಗ್ಗೆ ವಿವರವಿದೆ.[8] ಕ್ರಿ.ಶ. 1604ರಲ್ಲಿ ಮತ್ತೋಡು ವಂಶದ ಮೂಲಪುರುಷ ಚಿನ್ನದ ಗಿರಿಯಪ್ಪನಾಯಕನು ಆನೆಯನ್ನು ಪಳಗಿಸಿ ಪೆನುಗೊಂಡೆಯ ಅಧಿಪತಿ ವೆಂಕಟಪತಿರಾಯನಿಂದ ಲಕ್ವನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಬಳುವಳಿಯಾಗಿ ಪಡೆದಿದ್ದನು. ಕ್ರಿ.ಶ. 1526ರ ಕೃಷ್ಣದೇವರಾಯನ ಕಾಲದ ನಿಬಗೂರು ಶಾಸನವು ಅಂದಿನ ಜಗಳೂರು ಸೀಮೆಯಲ್ಲಿ ವಿಶ್ವನಾಥ ರಾಉತನ ಮಗ ರಂಗನನಾಥರಾಉತ ಆಡಳಿತ ನಡೆಸುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ. 1554ರ ಶಾಸನವು ಬಿಳಿಚೋಡು ಸೀಮೆಗೆ ದಮ್ಮಪ್ಪನಾಯಕನ ಪ್ರತಿನಿಧಿಯಾದ ಬೈರಪ್ಪನಾಯಕನ ಮಗ ಕೃಷ್ಣಪ್ಪನಾಯಕನು ಅಮರನಾಯಕನಾಗಿದ್ದುದಾಗಿ ಹೇಳುತ್ತದೆ. ಕ್ರಿ.ಶ. 1569ರ ಶಾಸನದಲ್ಲಿ ಹಿರಿಯೂರು ಸೀಮೆಯ ಹರತಿಯ ಓಬಣ್ಣ ನಾಯಕನಮಗ ಮಹಾನಾಯಕಾಚಾರ್ಯ ಕೆಂಚಯ್ಯ ನಾಯಕನು ನದಿಯ ಕೆಳಭಾಗದ ಗ್ರಾಮವನ್ನು ಅಮರಮಾಗಣಿಯಾಗಿ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಮನಿಂದ ಪಡೆದಿದ್ದನೆಂದು ಹೇಳಿದೆ.

ಕ್ರಿ.ಶ. 1654ರ ಶಾಸನದಲ್ಲಿ ಶ್ರೀಮನ್ಮಹಾನಾಯಕಾಚಾರ್ಯ ಕಸ್ತೂರಿ ನಾಯಕರು ಉರುವಕೊಂಡೆ ಬೋಮಯಗೆ ಸೊಕ್ಕೆ, ಬಂಟನಹಳ್ಳಿ, ಲಕ್ಷಮಾಪುರ, ಕ್ರಿಷ್ಣಪುರ, ಅಂಗುಟಿ ಬೆಂಚಿ; ಎಂಬ ಐದು ಗ್ರಾಮದ ಮಧ್ಯದಲ್ಲಿ ಕಣಕುಪೆ ದಳವಾಯಿ ಚಿಂನಯ ಪಾರುಪತ್ಯೆಗಾರರು, ತಿಂಮಪ ಬೊಮಯ್ಯಗೆ ಕೆಂಕೆ ಭೂಮಿ, ಬೊಂಮನ ಹಳ್ಳಿಯನ್ನು ಭೂದಾನ ನೀಡಿದ ವಿವರವಿದೆ. ಮೇಲಿನ ಅಧ್ಯಯನದಿಂದ ಸ್ಥಳೀಯ ಮಟ್ಟದ ನಾಯಕರುಗಳು ಭೂಹಿಡುವಳಿ ಹಂಚಿಕೆಯಲ್ಲಿ ಪ್ರಮುಖ ಪಾತ್ರವಹಿಸಿರುವುದು ಸ್ಪಷ್ಟವಾಗಿದೆ. ಭೂಹಿಡುವಳಿ ಖಾಸಗಿ ಆಸ್ತಿಯ ರೂಪದಲ್ಲಿ ವಿಜಯನಗರ ಕಾಲಕ್ಕೆ ಮಹತ್ವ ಪಡೆದಿತ್ತು. ಕೃಷಿ ಪ್ರಧಾನವಾದ ಸಮಾಜದಲ್ಲಿ ಭೂ ಒಡೆತನ ಭೂಮಾಲಿಕರಿಗೆ ಪ್ರತಿಷ್ಠೆಯ ಸಂಕೇತದ ಜೊತೆಗೆ ಆರ್ಥಿಕ ಸುಭದ್ರತೆಯ ಕುರುಹು ಆಗಿದ್ದಿತ್ತು. ಬಹುತೇಕ ಎಲ್ಲಾ ಸಮುದಾಯದವರು ಭೂ ಒಡೆಯರಾಗಿದ್ದರು. ಆದರೆ ಕೆಲವರು ಸ್ವಂತ ಕೃಷಿ ಮಾಡುತ್ತಿರಲಿಲ್ಲ. ಇದೇ ಪ್ರದೇಶದಲ್ಲಿ ಸಣ್ಣ ಭೂಹಿಡುವಳಿದಾರರು ಗೇಣಿಗೆದಾರರಾಗಿ ಅಥವಾ ಕೃಷಿ ಕೂಲಿಗಾಗಿ ದುಡಿಯುವ ವರ್ಗ ವಿಜಯನಗರದಲ್ಲಿತ್ತು. ಅದಕ್ಕೆ ಮಹನವಮಿದಿಬ್ಬದಲ್ಲಿರುವ ಹಲವು ಜನಪದ ಶಿಲ್ಪಗಳು ನಮ್ಮ ಗಮನ ಸೆಳೆಯುತ್ತವೆ. ಇವರ ಜೊತೆಗೆ ಇತರೆ ಕೆಳಹಂತದ ಜಾತಿಗಳು ಸೇರಿದ್ದವು. ಗೇಣಿದಾರರ ವರ್ಗವಲ್ಲದೆ ಅಗ್ರಹಾರ, ದೇವಾಲಯದ ಒಡೆತನದ ಭೂಮಿಗಳಲ್ಲಿ ಕೆಳಸ್ತರದ ಜಾತಿಗಳ ದುಡಿಯುವ ವರ್ಗವೇ ಇತ್ತು.[9] ವಿಜಯನಗರದ ಅರಸರ ಕಾಲದಲ್ಲೂ ವರ್ಣಾಶ್ರಮ ವ್ಯವಸ್ಥೆಯ ಬಗೆಗೆ ಗೌರವವಿತ್ತು. ಬಾರ್ಬೋಸ, ಪಾಯೇಸ್ ಮುಂತಾದವರ ಉಲ್ಲೇಖಗಳಿಂದ ಬ್ರಾಹ್ಮಣರಿಗೆ ಮುಖ್ಯಸ್ಥಾನವಿತ್ತೆಂದು ತಿಳಿದುಬರುತ್ತದೆ. ಶ್ರೀ ಕೃಷ್ಣದೇವರಾಯ ಬ್ರಾಹ್ಮಣರನ್ನು ಪೂಜಿಸಲು ಮಾಡಿದ ವೆಚ್ಚವನ್ನು ಖರ್ಚೆಂದು ಪರಿಗಣಿಸಬಾರದೆಂದು ಹೇಳಿದ್ದಾರೆ.[10] (ಆಮುಕ್ತ ಮೌಲ್ಯದ 5–262) ಇವರನ್ನು ಕುರಿತು, "ದಿನ ದಿನ ನೂಸಲೊಳು ತಿರುಮಣೆಯಿಟ್ಟರೆ ದೇವರಿಗೆ ತೃಪ್ತಿಯಾದೀತೆ" ಎಂದು ದಾಸರು ನಿರ್ಭಿಡೆಯಿಂದ ಪ್ರಶ್ನಿಸುತ್ತಾರೆ. ಕ್ರಿ.ಶ. 1526ರ ಕೃಷ್ಣದೇವರಾಯನ ಕಾಲದ ನಿಬಗೂರು ಶಾಸನವು ಅಂದಿನ ಜಗಳೂರು ಸೀಮೆಯಲ್ಲಿ ವಿಶ್ವನಾಥರಾಉತನ ಮಗ ರಂಗನಾಥ ರಾಉತ ಆಡಳಿತ ನಡೆಸುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ. 1554ರ ಶಾಸನವು ಬಿಳಿಚೋಡು ಸೀಮೆಗೆ ದಮ್ಮಪ್ಪನಾಯಕನ ಪ್ರತಿನಿಧಿಯಾದ ಬೈರಪ್ಪನಾಯಕನ ಮಗ ಕೃಷ್ಣಪ್ಪನಾಯಕನು ಅಮರನಾಯಕನಾಗಿದ್ದುದಾಗಿ ಹೇಳುತ್ತದೆ.

ಕ್ರಿ.ಶ. 1569ರ ಶಾಸನದಲ್ಲಿ ಹಿರಿಯೂರು ಸೀಮೆಯ ಹರತಿಯ ಓಬಣ್ಣ ನಾಯಕನಮಗ ಮಹಾನಾಯಕಾಚಾರ್ಯ ಕೆಂಚಯ್ಯ ನಾಯಕನು ನದಿಯ ಕೆಳಭಾಗದ ಗ್ರಾಮವನ್ನು ಅಮರಮಾಗಣಿಯಾಗಿ ಮಹಾಮಂಡಲೇಶ್ವರ ರಾಮರಾಜ

ತಿರುಮಲರಾಯನಿಂದ ಪಡೆದಿದ್ದನೆಂದು ಹೇಳಿದೆ. ಚಿತ್ರದುರ್ಗ ಪ್ರದೇಶದಲ್ಲಿದ್ದ ವಿಜಯನಗರ ಕಾಲದ ಭೂಹಿಡುವಳಿಗಳನ್ನು ಸಾಗುವಳಿಯಾದ ಹಾಗೂ ಸಾಗುವಳಿಯಾಗದ ಬೀಳು ಭೂಮಿ ಎಂಬುದಾಗಿ ಗುರುತಿಸಬಹುದು. ಬೀಳು ಭೂಮಿಯಲ್ಲಿ ಅರಣ್ಯ ಪ್ರದೇಶ, ಬಂಜರು ಭೂಮಿ, ಗುಡ್ಡ-ಬೆಟ್ಟಗಳು ಸೇರುತ್ತವೆ. ಸಾಗುವಳಿಯಾದ ಭೂಮಿ ಎರಡನೆಯದು. ಕೆಲವು ಉದ್ದೇಶಗಳಿಗಾಗಿ ದಾನ ನೀಡಿದ ಇನಾಮ್ ಭೂಮಿಯಾಗಿತ್ತು. ಈ ಪ್ರದೇಶದಲ್ಲಿ ರೂಢಿಯಲ್ಲಿದ್ದ ಭೂಹಿಡುವಳಿಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. 1) ಇನಾಂ ಭೂಮಿ, 2) ಸಾಮಾನ್ಯ ಭೂಮಿ. ಇನಾಂ ಭೂಹಿಡುವಳಿಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು.

ಮೊದಲನೆಯದರಲ್ಲಿ "ಉಪಕಾರಿ" ಭೂಹಿಡುವಳಿಗಳು ಸೇರಿವೆ. ಎರಡನೆಯದರಲ್ಲಿ "ಸೇವಾ" ಭೂಹಿಡುವಳಿಗಳು ಸೇರಿವೆ. ಉಪಕಾರಿ ಭೂಹಿಡುವಳಿಗಳನ್ನು 1) ಬ್ರಹ್ಮಾದಾಯ, 2) ದೇವಾದಾಯ, 3) ಮಠಪೂರ ಭೂಮಿ ಎಂದು ಮೂರು ವಿಧಗಳಲ್ಲಿ ಗುರುತಿಸಬಹುದು. ಈ ಬ್ರಹ್ಮಾದಾಯ ಭೂಹಿಡುವಳಿಗಳು ಬ್ರಾಹ್ಮಣರಿಗೆ ದಾನ ನೀಡಿದ ಭೂಹಿಡುವಳಿಗಳಾಗಿದ್ದವು. ಬ್ರಾಹ್ಮಣರು ಸಾಮಾನ್ಯವಾಗಿ ವೇದ ಉಪನಿಷತ್ತು, ಸೂತ್ರ, ಪುರಾಣ, ಮುಂತಾದ ಆರು ವಿಧದ ತತ್ವ ಶಾಸ್ತ್ರದಲ್ಲಿ ವಿದ್ವಾಂಸರಾಗಿದ್ದು ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದರು. ದೇವಾದಾಯ ಭೂಮಿಯು ದೇವಾಲಯಗಳ ಅಭಿವೃದ್ಧಿಗೋಸ್ಕರ ನೀಡಿದ ಭೂಹಿಡುವಳಿಗಳಾಗಿವೆ, ದೇವಾಲಯಕ್ಕೆ ದಾನ ನೀಡಿದ ಭೂಮಿಯಿಂದ ಬಂದ ಆದಾಯದಲ್ಲಿ ಪೂಜೆ, ಹಬ್ಬ, ಜಾತ್ರೆ, ಉತ್ಸವಗಳನ್ನು ನಡೆಸಲು ಉಪಯೋಗಿಸಲಾಗಿತ್ತು.

ಈ ಪ್ರದೇಶದಲ್ಲಿ ಅಗ್ರಹಾರ ಮತ್ತು ಮಹಾನಾಡು ಎಂಬ ಸ್ಥಳೀಯ ಸಂಸ್ಥೆಗಳಿದ್ದವು. ಅಗ್ರಹಾರಗಳು ಸಹ ಭೂ ಹಿಡುವಳಿಗಳನ್ನು ಹೊಂದಿರುವುದರ ಜೊತೆಗೆ ಅವುಗಳ ಅಭಿವೃದ್ಧಿಗೆ ಗಮನ ಹರಿಸಿದ್ದವು. ಮಹಾನಾಡು ಅನೇಕ ಗ್ರಾಮಗಳನ್ನೊಳಗೊಂಡ ಸ್ಥಳೀಯ ಸಂಸ್ಥೆಯಾಗಿತ್ತು. ಕೃಷಿ ವಿಸ್ತರಣೆಯ ಹೆಚ್ಚಳವನ್ನು ಪುರೋಹಿತ ಶಾಹಿ ಸಂಸ್ಥೆಗಳಾದ ಅಗ್ರಹಾರ, ಮಠ, ದೇವಸ್ಥಾನಗಳಿಂದಾಗಿ ಭೂಮಿಯನ್ನು ತೆರಿಗೆ ರಹಿತವಾಗಿ ಬಿಟ್ಟಿರುವುದು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. 15ನೇ ಶತಮಾನದ ಸಮಾಜದಲ್ಲಿ ದೇವಸ್ಥಾನಗಳು ರಾಜಕೀಯ ಶಕ್ತಿಯನ್ನು ನ್ಯಾಯಬದ್ಧಗೊಳಿಸುವ ಹಾಗೂ ರೈತರ ಅಧೀನತೆಯನ್ನು ಬಲವಂತವಾಗಿ ನೆಲೆಗೊಳಿಸುವ ಸಾಧನವಾಗಿದ್ದವು. ಹೀಗೆ ಮಠ, ದೇವಸ್ಥಾನಗಳು, ಬ್ರಾಹ್ಮಣರು ಭೂಮಾಲೀಕರಾಗಿ ಉತ್ಪಾದನಾ ಸಾಧನದ ಒಡೆಯರಾಗುವುದರಿಂದ ಯುದ್ಧ ಹಾಗೂ ಬೇರೆ ಕೆಲವು ಪ್ರಕ್ಷೋಭೆಗಳಿಂದ ಪಾರಾಗುವುದು ಅವರಿಗೆ ಸಾಧ್ಯವಿತ್ತು.

1. ಸಾಮಾನ್ಯ ಭೂಮಿ: ಚಿತ್ರದುರ್ಗ ಪ್ರದೇಶದಲ್ಲಿಯೂ ಸಾಗುವಳಿಯಾದ ಭೂಹಿಡುವಳಿಗಳನ್ನು ಗದ್ದೆ, ಬೆದ್ದಲು ಮತ್ತು ತೋಟ ಎಂಬುದಾಗಿ ವರ್ಗೀಕರಿಸಲಾಗಿತ್ತು. ಬಿತ್ತನೆಯ ಬೀಜದ ಪ್ರಮಾಣದ ಮೇಲೆ ಖಂಡುಗ, ಸಲಗೆ, ಮತ್ತರು ಇತ್ಯಾದಿ ಅಳತೆಗಳ ಆಧಾರದಲ್ಲಿ ಭೂಹಿಡುವಳಿಗಳ ಉತ್ಪಾದಕತೆಯನ್ನು ನಿರ್ಧರಿಸಲಾಗುತ್ತಿತ್ತು. ಚಿತ್ರದುರ್ಗ ಪ್ರದೇಶದಲ್ಲಿ ಪ್ರತಿ 8 ಅಥವಾ 16 ಹಳ್ಳಿಗೆ ಒಂದರಂತೆ ಸ್ಥಾಪನೆಯಾದ ಹೋಬಳಿಗಳು ಕೇವಲ ಆಡಳಿತಾತ್ಮಕ ವಿಭಾಗೀಕರಣವಲ್ಲದೆ, ಕಂದಾಯ ಸಂಗ್ರಹಣೆಯ ಘಟಕಗಳೂ ಆಗಿದ್ದವು. ಮಾಗಣೆ ಎನ್ನುವುದು ಒಂದು ಆಡಳಿತ ವಿಭಾಗ ಎಂಬುದು ತಿಳಿಯುತ್ತದೆ.

ಮೇಲಿನ ಅಧ್ಯಯನದಲ್ಲಿ ಸ್ಪಷ್ಟವಾಗುವಂತೆ ಚಿತ್ರದುರ್ಗ ಪ್ರದೇಶವು ವಿವಿಧ ರಾಜಕೀಯ ಪ್ರಭುತ್ವದ ಆಡಳಿತಕ್ಕೆ ಒಳಪಟ್ಟಿತ್ತು. ಈ ಪ್ರದೇಶವು ಆರ್ಥಿಕ ದೃಷ್ಟಿಯಿಂದ ಕೆಳದಿ ಇಲ್ಲವೇ ಕರಾವಳಿ ಪ್ರದೇಶದಷ್ಟು ಸಂಪದ್ಭರಿತವಾಗಿರಲಿಲ್ಲ. ಇಲ್ಲಿ ಆಡಳಿತ ನಡೆಸಿದ ಸ್ಥಳೀಯ ನಾಯಕರ ಕಾಲದಿಂದ ಸ್ವಾತಂತ್ರ್ಯದ ನಂತರವೂ ಹೆಚ್ಚಾಗಿ ಖುಷ್ಕಿ ಭೂಹಿಡುವಳಿಗಳನ್ನು ಒಳಗೊಂಡಿದೆ. ಚಿತ್ರದುರ್ಗ ಪ್ರದೇಶದ ಹಲವು ನಾಯಕರು ವಿಜಯನಗರದ ಅರಸರಿಂದ ಅಮರ ಮಾಗಣೆಯಾಗಿ

ಭೂಮಿ ಪಡೆದಿದ್ದರು. ಆ ಮೂಲಕ ರಾಜಕೀಯ ಅಸ್ತಿತ್ವ ಪಡೆದ ನಾಯಕರು ಇಲ್ಲಿನ ಭೂ ಸಂಬಂಧ ವಿಷಯಗಳ ಕಡೆಯೂ ಗಮನ ಹರಿಸಿದರು. ಖಾಸಗಿ ಭೂ ಒಡೆತನವನ್ನು ರಕ್ಷಿಸಿರುವುದರೊಂದಿಗೆ ಇನಾಂ ಭೂಹಿಡುವಳಿಗಳನ್ನು ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ನೀಡುವ ಮೂಲಕ ಅವುಗಳ ಮನ್ನಣೆಗೆ ಪಾತ್ರರಾಗಿದ್ದರು. ಈ ಮೂಲಕ ಅಂದಿನ ಸಮಾಜದ ಮೇಲೆ ನಿಯಂತ್ರಣವನ್ನು ಹೊಂದುವ ಉದ್ದೇಶವಿತ್ತು. ಉಳಿದಂತೆ ಇವರ ಕಾಲದಲ್ಲಿಯೂ ಖುಷ್ಕಿ, ತರಿ, ಬಾಗಾಯ್ತು ಎಂದು ಭೂಮಿಯನ್ನು ಅವುಗಳ ಗುಣಮಟ್ಟಕ್ಕನುಗುಣವಾಗಿ ವಿಭಾಗಿಸಿ ಭೂ ಕಂದಾಯ ಪಡೆಯುವ ಕ್ರಮ ಜಾರಿಯಲ್ಲಿತ್ತು.

ಅಡಿಟಿಪ್ಪಣಿಗಳು

1. *ಎಪಿಗ್ರಾಫಿಯ ಕರ್ನಾಟಿಕ*, ಸಂ. 11, ಚಿತ್ರದುರ್ಗ 3.
2. ಜ.ಎ.ಸೋ.ಇ., 63, 29, ಇ.ವಿ.ರೊ. 591.
3. ವಿಜಯ್ ಟಿ.ಪಿ. 1999, *ಬರ್ಟನ್ ಸ್ಟೇನ್ ಮತ್ತು ವಿಜಯನಗರ ಸಾಮ್ರಾಜ್ಯ, ರಹಮತ್ ತರೀಕೆರೆ* (ಸಂ.), ಕನ್ನಡ ಅಧ್ಯಯನ, ಬಿಸಿಲು ಸಂಚಿಕೆ ತ್ರೈಮಾಸಿಕ ಪತ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 10.
4. ಪುಟ್ಟಣ್ಣ ಎಂ.ಎಸ್. 1997, *ಚಿತ್ರದುರ್ಗ ಜಿಲ್ಲೆಯ ಪಾಳೆಯಗಾರರು*, ಕಾವ್ಯಾಲಯ ಪ್ರಕಾಶನ, ಮೈಸುರು, ಪು. 8.
5. ಅದೇ, ಹೊಳಲ್ಕೆರೆ 120.
6. ಅದೇ, ಹೊಳಲ್ಕೆರೆ, 62
7. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ *(ಎಂ.ಎ.ಆರ್.)*, 1939, ದುಮ್ಮಿ ಶಾಸನ, ಸಂ. 16.
8. *ಎಪಿಗ್ರಾಫಿಯ ಕರ್ನಾಟಿಕ*, ಸಂ. 11, ಹೊಳಲ್ಕೆರೆ, 112.
9. ವೆಂಕಟರತ್ನ, ಎ.ವಿ., 1972, *ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ವಿಜಯನಗರ ಎಂಪೈರ್*, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. 14.
10. ಆಮುಕ್ತ ಮೌಲ್ಯದ, 5–262.

ಆಧಾರ ಗ್ರಂಥಗಳು

1. ಕೃಷ್ಣಮೂರ್ತಿ, ಪಿ.ವಿ., *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು;* ಎಂ.ಎಂ. ಕಲಬುರ್ಗಿ (ಸಂ.), 1999, *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು*, ಭಾಗ–1, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಗೋಪಾಲ ಬಿ.ಆರ್. (ಸಂ.), *ವಿಜಯನಗರ ಇನ್ಸ್‌ಕ್ರಿಪ್ಷನ್ಸ್*, ಸಂಪುಟ–2; ರೈಸ್, ಬಿ.ಎಲ್., ಎ.ಕ., ಸಂಪುಟ 11.
3. ಸತ್ಯನ್ ಬಿ.ಎನ್. (ಸಂ.), 1962, *ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್*, ಬೆಂಗಳೂರು.

42. ಜಾಜೂರು ಸೀಮೆ – ಸಾಂಸ್ಕೃತಿಕ ವಿಶ್ಲೇಷಣೆ

ಡಾ. ಶಕುಂತಲ ಎನ್.

ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಒಂದು ಮೈಲಿಗಲ್ಲು. ಹಾಗೆಯೇ ಈ ಅರಸರುಗಳ ಆಳ್ವಿಕೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ದಕ್ಷಿಣದ ನಾಲ್ಕು ಭಾಷಾ ಪ್ರದೇಶಗಳ ಬಹುಭಾಗಗಳನ್ನು ಒಳಗೊಂಡಿದ್ದ ಈ ರಾಜ್ಯವು ಯಾವುದೇ ಒಂದು ಭಾಷಾ ಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ ಬಹುಮಟ್ಟಿಗೆ ಈಗಿನ ದಕ್ಷಿಣ ಭಾರತವನ್ನು ವ್ಯಾಪಿಸಿತ್ತು. ಕ್ರಿ.ಶ. 1336 ರಿಂದ ಕ್ರಿ.ಶ.1565 ರವರೆಗೆ ಸುಮಾರು 229 ವರ್ಷಗಳ ಬಹುದೀರ್ಘವಾದ ಅವಧಿಯವರೆಗೆ ಈ ವಿಶಾಲವಾದ ರಾಜ್ಯವು ಅಸ್ತಿತ್ವದಲ್ಲಿತ್ತು. ಇಂತಹ ಬೃಹತ್ ಸಾಮ್ರಾಜ್ಯ ರಾಜ್ಯದೆಲ್ಲೆಡೆಯಲ್ಲದೇ ಹೊರ ರಾಜ್ಯಗಳಲ್ಲೂ ತನ್ನ ಛಾಪನ್ನು ಮೂಡಿಸಿತ್ತು. ಹಾಗೆಯೇ ವಿಜಯನಗರದ ಅರಸರು ಏಷ್ಯಾಖಂಡದಲ್ಲೇ ಪ್ರಸಿದ್ಧಿಯಾಗಿರುವ ಹಾಗು ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರೆಂಬುದನ್ನು ಕ್ರಿ.ಶ. 1356ರ ಶಾಸನದಿಂದ ತಿಳಿಯಬಹುದಾಗಿದೆ.[1] ಈ ಶಾಸನದಲ್ಲಿ ವಿಜಯನಗರದ ಪ್ರತಿನಿಧಿಯಾಗಿ ಮಲ್ಲಿನಾಥ ಒಡೆಯನೆಂಬುವನು 'ಬೆಮ್ಮತ್ತನಕಲ್ಲು' ನಾಡನ್ನು ಕೇಂದ್ರವನ್ನಾಗಿಸಿಕೊಂಡು ಆಡಳಿತ ನಡೆಸುತ್ತಿದ್ದನೆಂಬುದು ಉಲ್ಲೇಖಿಸಲ್ಪಟ್ಟಿದೆ.

ಒಂದು ರಾಷ್ಟ್ರ ಅಥವಾ ದೇಶವೆಂಬುದು ಹಲವು ಪ್ರಾಂತ್ಯ ಅಥವಾ ರಾಜ್ಯಗಳ ಒಕ್ಕೂಟ. ಹಾಗೇ ರಾಜ್ಯ ಜಿಲ್ಲೆಗಳ, ಜಿಲ್ಲೆ ತಾಲ್ಲೂಕುಗಳ, ತಾಲ್ಲೂಕು ಹೋಬಳಿಗಳ, ಹೋಬಳಿ ಗ್ರಾಮಪಂಚಾಯಿತಿಗಳ, ಗ್ರಾಮಪಂಚಾಯಿತಿ ಹಲವು ಗ್ರಾಮಗಳನ್ನೊಳಗೊಂಡ ಆಡಳಿತ ಘಟಕಗಳಾಗಿರುವುದು ಇಂದು ನಾವು ಕಾಣುವ ಪ್ರಾದೇಶಿಕ ಆಡಳಿತ ಘಟಕಗಳ ಒಂದು ಸ್ಥೂಲ ಸ್ವರೂಪವಾಗಿದೆ. ಬಹುಪ್ರಾಚೀನ ಕಾಲದಿಂದಲೂ ನಮ್ಮ ಜನರು ತಮ್ಮ ವ್ಯವಹಾರಕ್ಕಾಗಿ, ಆಡಳಿತಗಾರರು ಅವರ ಆಳ್ವಿಕೆಗಾಗಿ ತಾವು ಆಳುವ ಪ್ರದೇಶಗಳನ್ನು ಅನೇಕ ವಿಭಾಗಗಳನ್ನಾಗಿ ಗುರುತಿಸಿಕೊಂಡಿದ್ದರೆಂಬುದಕ್ಕೆ ನಮ್ಮ ನಾಡಿನ ಸಾವಿರಾರು ಶಾಸನಗಳು ಆಧಾರ ಒದಗಿಸುತ್ತವೆ.[2] ಹಾಗಾಗಿ ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ ಆಡಳಿತ ವಿಭಾಗ ಅಥವಾ ಪ್ರಾಂತ್ಯಗಳನ್ನಾಗಿ ಮಾಡಿಕೊಳ್ಳುವುದು ಬಹುಪ್ರಾಚೀನ ಕಾಲದಿಂದಲೂ ಬಂದಿರುವ ಪರಂಪರೆ. ಈ ರೀತಿ ಭಾಗಗಳನ್ನು ಮಾಡುವಾಗ ಅನೇಕ ಆಧಾರಗಳನ್ನು ಇಟ್ಟುಕೊಳ್ಳಲಾಗುತ್ತಿತ್ತು. ಈ ಪ್ರಾಂತ್ಯಗಳು ರಾಜನ ಆಳ್ವಿಕೆಗೆ ಸೇರಿದ್ದರೂ ಅವುಗಳ ದೈನಂದಿನ ಆಡಳಿತಕ್ಕಾಗಿ ರಾಜ್ಯಪಾಲರು ಹಾಗೂ ಪ್ರಾಂತ್ಯಾಧಿಕಾರಿಗಳನ್ನು ನೇಮಿಸುತ್ತಿದ್ದರು. ಇವರು ರಾಜನ ಅಪ್ಪಣೆಗೆ ಒಳಪಟ್ಟು ಸಾಕಷ್ಟು ಆಡಳಿತ ಸ್ವಾತಂತ್ರ್ಯವನ್ನು ಹೊಂದಿದ್ದರು. ಪರಿಣಾಮವಾಗಿ ಕೇಂದ್ರಾಡಳಿತದ ಮೇಲೆ ಹೊರೆ ಕಡಿಮೆಯಾಗುತ್ತಿತ್ತು. ಜೊತೆಗೆ ವ್ಯವಸ್ಥಿತ ಆಡಳಿತವೂ ನಡೆಯುತ್ತಿದ್ದಿತು.

ಒಂದು ನಿರ್ದಿಷ್ಟವಾದ ಭೂಸ್ಥಿತಿ ಅಥವಾ ಒಂದು ನಿರ್ದಿಷ್ಟವಾದ ಬುಡಕಟ್ಟಿನ ಜನರ ವಾಸದ ಪ್ರದೇಶ, ಪ್ರಸಿದ್ಧ ವಾಣಿಜ್ಯ ಇಲ್ಲವೇ ಧಾರ್ಮಿಕ ಸ್ಥಾನದ ಪರಿಸರ ಅಥವಾ ಪ್ರಸಿದ್ಧ ರಾಜವಂಶವೊಂದರ ಆಳ್ವಿಕೆಯ ಪ್ರದೇಶ ಇತ್ಯಾದಿಗಳ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನ ಆಡಳಿತ ಘಟಕಗಳು ಬಹುಪ್ರಾಚೀನ ಕಾಲದಿಂದಲೂ ಗುರುತಿಸಲ್ಪಟ್ಟಿರುವುದು ನಮ್ಮ ಗಮನ ಸೆಳೆಯುತ್ತದೆ. ಅಂದರೆ ಅವೇ ಆಯಾ ಪ್ರದೇಶದ ಮುಖ್ಯ ಚಿಹ್ನೆಗಳಾಗಿದ್ದವು ಎನ್ನಬಹುದು. ಯಾವುದೊಂದು ಚಿಹ್ನೆಯಿಂದ ಯಾವುದೊಂದು ಪ್ರದೇಶವು ಕೂಡಿರುವುದೋ ಆ ಚಿಹ್ನೆಯ ಹೆಸರಿನಿಂದಲೇ ಆ ದೇಶವನ್ನು ಅಥವಾ ಪ್ರದೇಶವನ್ನು ಕರೆಯಬೇಕೆಂಬುದು ವಿದ್ವಾಂಸರ ಅಭಿಪ್ರಾಯ ಎಂಬ ಅರ್ಥದ ಶ್ಲೋಕವೊಂದು ಮಹಾಭಾರತದ ಆದಿಪರ್ವದಲ್ಲಿ ಉಕ್ತವಾಗಿದೆ.[3] ಈ ಹಿನ್ನೆಲೆಯಲ್ಲಿ ನಮ್ಮ ಅನೇಕ ಪ್ರಾಚೀನ ಆಡಳಿತ ಘಟಕಗಳು ರೂಪುಗೊಂಡಿವೆ ಎಂದರೆ ತಪ್ಪಾಗಲಾರದು.

ಅಂತೆಯೇ ಅವುಗಳಲ್ಲಿ ಹಲವು ಶಾಸನೋಕ್ತವಾಗಿರುವ ಕಾಲಕ್ಕಿಂತಲೂ ಬಹುಪೂರ್ವದಲ್ಲೇ ತಮ್ಮ ಅಸ್ತಿತ್ವವನ್ನು ಪಡೆದಿದ್ದವೆಂದು ಅಭಿಪ್ರಾಯಪಟ್ಟರೆ ಅದು ಅಸಾಧ್ಯ ಎನಿಸದು. ಹೀಗೆ ಪ್ರಾಚೀನ ಕರ್ನಾಟಕದಲ್ಲಿ ವಿವಿಧ ಕಾಲಗಳಲ್ಲಿ ಯಾವ ಯಾವ ಆಡಳಿತ ವಿಭಾಗಳಿದ್ದವೆಂಬುದು ಈ ರೀತಿಯಾಗಿದೆ. ಬನವಾಸಿಯ ಕಂದಂಬರ ಕಾಲದಲ್ಲಿ ವಿಷಯ, ರಾಜ್ಯ, ರಾಷ್ಟ್ರ ಮತ್ತು ನಾಡು; ಬಾದಾಮಿ ಚಾಲುಕ್ಯರ ಕಾಲದಲ್ಲಿ ರಾಷ್ಟ್ರ, ದೇಶ, ನಗರ, ಮಂಡಲ, ವಿಷಯ, ಭೋಗ, ಆಹಾರ, ಪುರ; ಗಂಗರ ಕಾಲದಲ್ಲಿ ರಾಷ್ಟ್ರ, ನಾಡು, ವಿಷಯ, ಪುರ, ಮಹಾನಗರ ಪಟ್ಟಣ; ರಾಷ್ಟ್ರಕೂಟರ ಕಾಲದಲ್ಲಿ ರಾಷ್ಟ್ರ, ವಿಷಯ, ಭುಕ್ತಿ, ಗ್ರಾಮ; ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಾಡು, ವಿಷಯ, ಕಂಪಣ; ಹೊಯ್ಸಳರ ಕಾಲದಲ್ಲಿ ನಾಡು, ವಿಷಯ, ಮಂಡಲ, ಸೀಮೆ; ಸೇವುಣರ ಕಾಲದಲ್ಲಿ ದೇಶ, ನಾಡು, ಕಂಪಣ, ವಿಷಯ ಇತ್ಯಾದಿ.[4]

ಎಲ್ಲಾ ರಾಜಮನೆತನಗಳಂತೆ ವಿಜಯನಗರ ಅರಸರು ಸಹ ತಮ್ಮ ಆಡಳಿತ ಪದ್ಧತಿಯಲ್ಲಿ ರಾಜ್ಯಾಡಳಿತ ಸುಸೂತ್ರವಾಗಿ ನಡೆಯಬೇಕೆನ್ನುವ ಅಭಿಲಾಷೆಯಿಂದ ತಮ್ಮ ಸಮಸ್ಯೆಗಳನ್ನು ಆಯಾಪ್ರದೇಶದವರೇ ತೀರ್ಮಾನಿಸಲೆಂದು ಅಧಿಕಾರ ವಿಕೇಂದಿರಕರಣದ ದೃಷ್ಟಿಯಿಂದ ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿ ಆಡಳಿತ ಯಂತ್ರವನ್ನು ಸುಸೂತ್ರಗೊಳಿಸಿದ್ದರು. ಅವರು ಈ ಪ್ರದೇಶಗಳನ್ನು ಆಳತೊಡಗಿದಾಗ ಆ ಹಿಂದೆ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗ ಅನುಕ್ರಮಗಳನ್ನು ಕ್ರೋಢೀಕರಿಸಿ ಒಂದು ಸಾಮಾನೀಕರಣಗೊಂಡ ಹಾಗೂ ಇಡೀ ಸಾಮ್ರಾಜ್ಯಕ್ಕೆ ಸೂಕ್ತ ಎನಿಸಬಹುದಾದ ಪದ್ಧತಿಯೊಂದನ್ನು ಜಾರಿಗೆ ತರಬೇಕಾದ ಅಗತ್ಯವಿದ್ದಿತು. ಈ ಹಿನ್ನೆಲೆಯಲ್ಲಿ ಮೂಡಿಬಂದ ಅವರ ಆಡಳಿತ ವಿಭಾಗಗಳೆಂದರೆ ದೇಶ, ರಾಜ್ಯ, ವಳಿತ, ವೇಂಠೆ, ಅಗ್ರಹಾರ, ಮಹಾನಾಡು ಮತ್ತು ಚಾವಡಿಗಳು ಮೇಲುಸ್ತರದ ಆಡಳಿತ ಘಟಕಗಳಾಗಿದ್ದು, ಸೀಮೆ/ನಾಡು ಎಂಬ ವಿಭಾಗಗಳು ಸಮಾನಾಂತರವಾದ ಮಧ್ಯಸ್ತರದ ಘಟಕಗಳಾಗಿದ್ದವೆಂದು ಗುರುತಿಸಬಹುದಾಗಿದೆ. 'ಸೀಮೆ' ಎಂಬ ವಿಭಾಗ ವಿಜಯನಗರ ಕಾಲದಲ್ಲಿ, ಅದರಲ್ಲೂ ಒಂದನೇ ಬುಕ್ಕರಾಯನ ಕಾಲದಲ್ಲಿ ಪ್ರಥಮವಾಗಿ ಬಳಕೆಯಾಯಿತು. ಚಾವಡಿ ಎಂಬುದು ವೇಂಠೆಗಿಂತ ದೊಡ್ಡದಾದ ಒಂದು ಆಡಳಿತಾತ್ಮಕ ವಿಭಾಗವಾಗಿ ವಿಜಯನಗರ ಕಾಲದ ಶಾಸನಗಳಲ್ಲಿ ಉಕ್ತವಾಗಿರುವುದು ಒಂದು ವಿಶಿಷ್ಟ ಸಂಗತಿಯಾಗಿದೆ. ವೇಂಠೆ ರಾಜ್ಯದೊಳಗಣ ಅಂತರ್ಭಾಗ. ಹಾಗೇ, ಸೀಮೆ/ನಾಡುಗಳು ವೇಂಠೆಯೊಳಗೆ ಅಂತರ್ಗತವಾಗಿರುತ್ತವೆ. ವೇಂಠೆ ಮತ್ತು ವಳಿತಗಳು ಅಭಿನ್ನವೆಂದೂ ಅಭಿಪ್ರಾಯಪಡಲಾಗಿದೆ. ಇನ್ನು ಮಧ್ಯಸ್ತರದ ಆಡಳಿತ ಘಟಕಗಳಾದ ನಾಡು/ ಸೀಮೆಗಳ ಬಗ್ಗೆ ಹೇಳುವುದಾದರೆ ನಾಡು ಎಂಬುದು ದ್ರಾವಿಡ ದೇಶಗಳ ಪ್ರಸಿದ್ಧವೂ ಬಹು ವ್ಯಾಪ್ತಿಯುಳ್ಳದ್ದು ಆದ ಪ್ರಾಚೀನ ಆಡಳಿತಾತ್ಮಕ ರಾಜಕೀಯ ವಿಭಾಗ. ನಾಡು ಪ್ರಾಚೀನ ಕರ್ನಾಟಕದ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಒಂದು ಸಭೆಯಾಗಿರುವಂತೆಯೇ ಹಲವಾರು ಸ್ಥಳಗಳನ್ನೊಳಗೊಂಡ ಪ್ರಾದೇಶಿಕ ವಿಭಾಗವೂ ಆಗಿತ್ತೆಂಬುದು ಗಮನಿಸಬೇಕಾದ ಸಂಗತಿ.[5]

ಸೀಮೆ ಎಂಬುದು ವಿಜಯನಗರ ಅರಸರ ಕಾಲದಲ್ಲೇ ನಾಡು ಎಂಬುದಕ್ಕೆ ಪರ್ಯಾಯವಾಗಿ ಬಳಕೆಗೆ ಬಂದ ಆಡಳಿತ ಘಟಕವಾಗಿದ್ದು ವ್ಯಾಪಕವಾಗಿ ಬಳಕೆಯಾಗಿದೆ. ಚಿತ್ರದುರ್ಗ ಜಿಲ್ಲಾ ಪ್ರದೇಶದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಕಂಡುಬರುವ ಮೇಲುಸ್ತರದ ಪ್ರಾದೇಶಿಕ ವಿಭಾಗಗಳಲ್ಲಿ ಪಾಂಡ್ಯದೇಶ, ಹೊಯ್ಸಳದೇಶ ಹಾಗೂ ಹಸ್ತಿನಾವತಿ ವಳಿತ ಎಂಬುವು ವಿಶಿಷ್ಟವಾದವುಗಳಾಗಿವೆ.[6] ಏಕೆಂದರೆ ಇವು ವಾಸ್ತವವಾಗಿ ಆಡಳಿತ ವಿಭಾಗಗಳೇ ಅಲ್ಲ. ಅವು ಆಯಾ ರಾಜವಂಶೀಯರು ಆಳಿದ ಪ್ರದೇಶಗಳನ್ನು ಅನಂತರದಲ್ಲಿ ಅಧಿಕಾರಕ್ಕೆ ಬಂದ ಅರಸರು ಆ ಪ್ರದೇಶಗಳನ್ನು ಗುರುತಿಸುವುದಕ್ಕಾಗಿ, ಇಲ್ಲವೇ ತಮ್ಮ ಪ್ರತಿಷ್ಠೆಯನ್ನು ಮೆರೆಸುವುದಕ್ಕಾಗಿ ಮಾತ್ರ ವ್ಯವಹಾರದಲ್ಲಿಟ್ಟುಕೊಂಡಂತಹ ಪ್ರಾದೇಶಿಕ ವಿಭಾಗಗಳಾಗಿದ್ದವು ಎಂಬುದು ಗಮನಾರ್ಹ ಸಂಗತಿ (ಪಾಂಡ್ಯ ದೇಶ, ಹೊಯ್ಸಳದೇಶ). ಇನ್ನು ಹಸ್ತಿನಾವತಿ ವಳಿತದ ವಿಚಾರವಾಗಿ ಪ್ರಸ್ತಾಪಿಸುವುದಾದರೆ ಸಾಮಾನ್ಯವಾಗಿ ವಳಿತ ಎಂಬ ರಾಜ್ಯ ವಿಭಾಗವು ರಾಜ್ಯ ಮತ್ತು ನಾಡು/ಸೀಮೆಗಳ ನಡುವೆ

ಸಂಪರ್ಕ ಕಲ್ಪಿಸುವ ಆಡಳಿತ ಘಟಕವಾಗಿ ವಿಜಯನಗರ ಕಾಲದಲ್ಲಿ ಶಾಸನಗಳಲ್ಲಿ ವಿಶೇಷವಾಗಿ ಅಸ್ತಿತ್ವವನ್ನು ಪಡೆದಿದೆ.[7] ಆದರೆ ಹಸ್ತಿನಾವತಿ ವಳಿತದ ವಿಚಾರದಲ್ಲಿ ಅದು ಅನ್ವಯವಾಗುವುದಿಲ್ಲ. ಏಕೆಂದರೆ ವಿಜಯನಗರ ಸಾಮ್ರಾಜ್ಯದ ಆರಂಭಿಕ ಹಂತದಲ್ಲಿ ಅಂದರೆ ಹಕ್ಕ–ಬುಕ್ಕರು ತಮ್ಮ ಆಡಳಿತವನ್ನು ಹಸ್ತಿನಾವತಿ ಅಂದರೆ ಆನೆಗೊಂದಿಯಿಂದ ಆರಂಭಿಸಿದಾಗ ಮೊದಲಿಗೆ ಅವರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳನ್ನೊಳಗೊಂಡಂತೆ ರೂಪುಗೊಂಡಿದ್ದಂತಹ ಸಾಕಷ್ಟು ವಿಶಾಲವಾದ ಒಂದು ವಿಶಿಷ್ಟವಾದ ಪ್ರಾದೇಶಿಕ ವಿಭಾಗವಾಗಿ ಹಸ್ತಿನಾವತಿ ವಳಿತವಿದ್ದಿತು. ಆಡಳಿತದಲ್ಲಿ ಉಚ್ಚಂಗಿ, ದೊರವಡಿ, ರಾಯದುರ್ಗ ಕೋಗಳಿ, ಮುರುಗಲ, ಪಾಂಡ್ಯ, ಚಂದ್ರಮಂಡಲ, ಕಂಪಿಲಿ, ಆನೆಗೊಂದಿ, ಮೂಡನಾಡುಗಳೇ ಮೊದಲಾದುವು ಅಂತರ್ಗತವಾಗಿದ್ದವು.[8]

ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶವು ವಿಜಯನಗರ ಅರಸರ ಆಡಳಿತಾವಧಿಯಲ್ಲಿ ಯಾವ ಯಾವ ರೀತಿಯ ಆಡಳಿತಾತ್ಮಕ ವಿಂಗಡಣೆಗಳನ್ನು ಹೊಂದಿದ್ದಿತೆಂಬುದನ್ನು ಸಂಕ್ಷಿಪ್ತವಾಗಿ ಕೆಳಕಂಡಂತೆ ತಿಳಿಸಲಾಗಿದೆ.

1. **ಕೊಟ್ಟೂರು ಚಾವಡಿ:–** ಚಿತ್ರದುರ್ಗ ಪ್ರದೇಶದ ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳು.

2. **ಯಗಟಿ ಚಾವಡಿ:–** ಚಿತ್ರದುರ್ಗ ಪ್ರದೇಶದ ಹೊಳಲ್ಕೆರೆ ತಾಲ್ಲೂಕು.

3. **ರಾಯದುರ್ಗ ಸೀಮೆ:–** ವಿಜಯನಗರ ಅರಸರ ಕಾಲಾವಧಿಯಲ್ಲಿ ರಾಯದುರ್ಗ ಸೀಮೆ. ಕರ್ನಾಟಕ ಮತ್ತು ಆಂಧ್ರಪ್ರದೇಶಗಳನ್ನೊಳಗೊಂಡ ವಿಶಾಲ ಪ್ರದೇಶವಾಗಿತ್ತು. ಆಂಧ್ರಪ್ರದೇಶದಲ್ಲಿ ವಿಶಾಲವಾದ ಆಡಳಿತ ವಿಭಾಗಗಳನ್ನು 'ಸೀಮೆ' ಎಂದು ಕರೆಯಲಾಗುತ್ತಿತ್ತು. ಈ ಭಾಗಕ್ಕೆ ಚಿತ್ರದುರ್ಗ ಪ್ರದೇಶದ ಮೊಳಕಾಲ್ಮೂರು, ಹಿರಿಯೂರು, ಮತ್ತು ಚಳ್ಳಕೆರೆ ತಾಲ್ಲೂಕುಗಳು ಸೇರಿದ್ದವು.[9]

ವಿಜಯಗರ ಅರಸರ ಕಾಲಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ ಅಗ್ರಹಾರ ಮತ್ತು ಮಹನಾಡು ಎಂಬ ಸ್ಥಳೀಯ ಸಂಸ್ಥೆಗಳು ಸಹ ಅಸ್ತಿತ್ವದಲ್ಲಿದ್ದವು. ವಿಜಯನಗರ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿದ್ದರೂ, ಗ್ರಾಮ ಹಂತದಿಂದ ಪ್ರಾಂತ್ಯಗಳವರೆಗೂ ಭೂಹಿಡುವಳಿಗಳ ಹಂಚಿಕೆಯಲ್ಲಿ ಪ್ರಾಂತ್ಯಾಧಿಕಾರಿಗಳು ಪ್ರಮುಖ ಪಾತ್ರ ವಹಿಸಿದ್ದರು. ಇದು ವಿಕೇಂದ್ರೀಕರಣದ ಒಂದು ಪ್ರಾಯೋಗಿಕ ಉದಾಹರಣೆ. ಈ ವಿನ್ನೆಲೆಯಲ್ಲಿ ಬರ್ಟಿನ್‌ಸ್ಟೀನ್‌ರವರು ವಿಜಯನಗರ ಸಾಮ್ರಾಜ್ಯವನ್ನು ತುಂಡು ರಾಜ್ಯಗಳ ಒಕ್ಕೂಟವೆಂದು ಉಲ್ಲೇಖಿಸಿರುವುದನ್ನು ಗಮನಿಸಬಹುದಾಗಿದೆ. ಹೀಗೆ ರಾಜಕೀಯ ಪರಮಾಧಿಕಾರ ತುಂಡು ತುಂಡಾಗಿ ಒಡೆದು ಹೋಗಿರುವುದು ಕರ್ನಾಟಕದಲ್ಲಿ ಮಧ್ಯಯುಗದ ನಿಯಂತ್ರಣದ ಆಡಳಿತ ವ್ಯವಸ್ಥೆ ಉದಯಿಸಲು ದಾರಿಮಾಡಿಕೊಟ್ಟಿತು. ಇಂತಹ ಸ್ಥಳೀಯ ಆಡಳಿತ ಘಟಕಗಳು ಚಿತ್ರದುರ್ಗ ಪ್ರದೇಶದಲ್ಲಿಯೂ ಇದ್ದವೆಂಬುದು ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಆ ಬಗ್ಗೆ ಶಾಸನಗಳು ವಿವರವಾದ ಮಾಹಿತಿಯನ್ನು ನೀಡುತ್ತವೆ.[10]

ಜಾಜೂರು ಸೀಮೆ

'ಸೀಮೆ' ಎಂಬುದು ಸಂಸ್ಕೃತದ ಸೀಮಾ ಪದವಾಗಿದೆ. ಕೈಫಿಯತ್ತುಗಳಲ್ಲಿ ಬರುವಂತೆ 'ಸೀಮೆ'ಯು ಒಂದು ನಿರ್ದಿಷ್ಟವಾದ ಆಡಳಿತ ಘಟಕವಾಗಿರುತ್ತಿತ್ತು. ವಿಜಯನಗರ ಅರಸರ ಕಾಲದಲ್ಲಿ 'ಸೀಮೆ'ಯು ಒಂದು ಆಡಳಿತ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ.ಶ. 1400 ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು ಎಲ್ಲೆ, ಮೇರೆ ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹವಾದ ಸಂಗತಿ. ಚಿತ್ರದುರ್ಗ ಪ್ರದೇಶದಲ್ಲಿದ್ದ ಹಲವು ಆಡಳಿತ ಘಟಕಕ್ಕೆ ಸೀಮೆ ಎಂದು ಕರೆಯಲಾಗಿತ್ತು. ಇವುಗಳೆಲ್ಲವೂ ಶಾಸನೋಕ್ತವಾಗಿವೆ.[11] ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಇತರ ಪ್ರದೇಶಗಳಂತೆ ಅವರ ಅಧೀನಕ್ಕೊಳಪಟ್ಟ ಚಿತ್ರದುರ್ಗ ಪ್ರದೇಶದಲ್ಲೂ ಮೂಡಿ

ಬಂದ ಆಡಳಿತ ವಿಭಾಗಗಳು ಸೀಮೆಗಳೇ ಆಗಿವೆ. ವಿಜಯನಗರ ಆಳ್ವಿಕೆ ಕಾಲದಲ್ಲಿದ್ದ ಚಿತ್ರದುರ್ಗ ಪ್ರದೇಶದ ಸೀಮೆಗಳೆಂದರೆ ರಾಮಗಿರಿಸೀಮೆ,[12] ಜಾಜೂರು ಸೀಮೆ,[13] ಚಿತ್ರಹಳ್ಳಿ ಸೀಮೆ,[14] ದುಮ್ಮಿಯ ಸೀಮೆ,[15] ಬಾಗೂರು ಸೀಮೆ,[16] ಬೂದಿಹಾಳು ಸೀಮೆ,[17] ಮತ್ತನಡುವಿನ ಸೀಮೆ, ಜಗಲೂರು ಸೀಮೆ,[18] ಬಿಳಿಚೋಡು ಸೀಮೆ,[19] ಹಿರಿಯೂರು ಸೀಮೆ,[20] ಬೇತೂರು ಸೀಮೆ, ಬಸವಪಟ್ಟಣ ಸೀಮೆ, ಗುಂಡನೂರು ಸೀಮೆ, ಬನ್ನಿಕೋಡು ಸೀಮೆ, ನವಬಕುವಾಡ ಸೀಮೆ, ಹರಿಹರ ಸೀಮೆ, ಕೊಡಗನೂರು ಸೀಮೆ, ಹೊರಕೆರೆದೇವರಪುರ ಸೀಮೆ ಮುಂತಾದವುಗಳು. ಇವುಗಳೆಲ್ಲವು ಶಾನೋಕ್ತವಾಗಿರುವ ಆಡಳಿತ ಘಟಕಗಳಾಗಿದ್ದವು.[21]

ಹೊಳಲ್ಕೆರೆ ತಾಲ್ಲೂಕಿನ ಮುಖ್ಯಸ್ಥಳ, ವ್ಯಾಪಾರ ಕೇಂದ್ರ ಹಾಗೂ ಶಾಸನಸ್ಥ ಗ್ರಾಮ ಈಗ ಮಂಡಲ ಪಂಚಾಯಿತಿಯನ್ನು ಹೊಂದಿರುವ ಚಿಕ್ಕಜಾಜೂರು ವಿಜಯನಗರ ಕಾಲದಿಂದ ಪಾಳೆಯಗಾರರ ಕಾಲದವರೆಗೆ "ಜಾಜೂರು ಸೀಮೆ" ಎಂದು ಉಲ್ಲೇಖಿಸಲ್ಪಟ್ಟು ಅವರ ಆಳ್ವಿಕೆಯ ಪ್ರಮುಖ ಕೇಂದ್ರವಾಗಿತ್ತು. ಆದರೆ ಮೊದಲು ಸೀಮೆಯಾಗಿದ್ದ ಜಾಜೂರು ಕ್ರಿ.ಶ. 1664ರ ನಂತರ ಸೀಮೆ' ಎಂಬ ವಿಸ್ತಾರ ಕಳೆದುಕೊಂಡು "ಜಾಜೂರು ಸ್ಥಳ" ಎಂಬ ಹೆಸರನ್ನು ಪಡೆಯಿತು.[22] ಕೆಳಸ್ತರದ ಆಡಳಿತ ಘಟಕಗಳಲ್ಲಿ "ಸ್ಥಳ" ಎಂಬುದು ವಿಜಯನಗರ ಅರಸರ ವಿಶಿಷ್ಟ ಕೊಡುಗೆಯಾಗಿದೆ ಎಂದರೆ ತಪ್ಪಾಗಲಾರದು. ಅನೇಕ ಗ್ರಾಮಗಳ ಸಮೂಹವೇ 'ಸ್ಥಳ'. ಒಂದು ಸ್ಥಳದಲ್ಲಿ 57 ಗ್ರಾಮಗಳಿರುವ ಉದಾಹರಣೆ ಈ ಜಿಲ್ಲೆಯ ಶಾಸನವೊಂದರಲ್ಲಿ ತಿಳಿದುಬರುತ್ತದೆ.[23] ಆದರೆ ಸಾಮಾನ್ಯವಾಗಿ 7–8 ಗ್ರಾಮಗಳು ಮಾತ್ರವೇ ಒಂದು 'ಸ್ಥಳ'ದಲ್ಲಿ ಸೇರಿರುವುದುಂಟು. "ಅಷ್ಟಗ್ರಾಮ ಸೀಮೆ" ಎಂಬುದು ಸ್ಥಳದ ಪರಿಮಿತಿಗೆ ಸಂಬಂಧಪಟ್ಟ ಹೇಳಿಕೆಯೆಂದು ತೋರುತ್ತದೆ. 'ಸ್ಥಳ'ಕ್ಕೆ ಪರ್ಯಾಯವಾಗಿ ಮುಂದೆ ಅರವೀಡು ವಂಶಿಯರ ಶಾಸನಗಳಲ್ಲಿ 'ಸಂಮತ' ಎಂಬುದು ಪ್ರಯೋಗವಾಗಿದೆ. ಚಿತ್ರದುರ್ಗ ಜಿಲ್ಲಾ ಪ್ರದೇಶದಲ್ಲಿ ಶಾಸನೋಕ್ತವಾಗಿರುವ ವಿಜಯನಗರ ಕಾಲದ ಸ್ಥಳಗಳು ಇಂತಿವೆ. ಅಣಜಿಸ್ಥಳ, ಜಾಜೂರು ಸ್ಥಳ, ಮಲಿಯನೂರು ಸ್ಥಳ ಮಧ್ಯಸಮುದ್ರ ಸ್ಥಳ, ರಟ್ಟಿಯಹಳ್ಳಿ ಸ್ಥಳ, ಹರತಿ ಸ್ಥಳ, ಇತ್ಯಾದಿ.[24]

ಹಾಗೆಯೇ ಕ್ರಿ.ಶ. 1560 ರ ವೇಳೆಗೆ ಚಿತ್ರದುರ್ಗ ಜಿಲ್ಲೆಯ ಮೇಲೆ ವಿಜಯನಗರದ ಅರಸರ ಆಡಳಿತ ಕೊನೆಗೊಂಡು ವಿಜಯನಗರೋತ್ತರ ಪಾಳೆಯಗಾರರಾದ ಕಾಮಗೇತಿ ಅರಸರ ಆಡಳಿತ ನೆಲೆಗೊಂಡಿತ್ತು. ಆಗ ವಿಜಯನಗರ ಕಾಲದಲ್ಲಿದ್ದ ಹಲವಾರು ಆಡಳಿತ ಘಟಕಗಳು ಹಾಗೇ ಮುಂದುವರೆದಿರುವುದು ಹಾಗೂ ಅನೇಕ ಹೊಸ 'ಸೀಮೆ', 'ಸ್ಥಳ'ಗಳು ಶಾಸನೋಕ್ತವಾಗಿರುವುದನ್ನು ಗಮನಿಸಬಹುದಾಗಿದೆ. ಅಂತಹ 'ಸೀಮೆ' ಮತ್ತು 'ಸ್ಥಳ'ಗಳ ಕೇಂದ್ರಸ್ಥಳಗಳು ಇಂದಿಗೂ ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಮುನ್ನೆಡೆದಿರುವುದನ್ನು ಕೂಡ ಕಾಣಬಹುದಾಗಿದೆ. ವಿಜಯನಗರ ಕಾಲದ ಕೆಲವು ನಾಡುಗಳು ಇವರ ಕಾಲದಲ್ಲಿ ಸೀಮೆಗಳಾಗಿ ಮುಂದುವರೆದಿದ್ದರೆ, ಕೆಲವು ಸ್ಥಳಗಳಾಗಿ ಪರಿವರ್ತನೆಗೊಂಡಿವೆ. ಕಾಮಗೇತಿ ಅರಸರ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ಮುಖ್ಯ ಸೀಮೆಗಳೆಂದರೆ ಚಿತ್ರದುರ್ಗ, ಚಿತ್ರಹಳ್ಳಿ, ಜಗಲೂರು, ಹಿರಿಯೂರು, ಗುಂಟನೂರು, ಮುತ್ತನಡುವಿನ, ಹೊಳಲ್ಕೆರೆ ಮತ್ತು ಹೊರಕೆರೆದೇವರಪುರ, ಹಾಗೇ ಸ್ಥಳಗಳಲ್ಲಿ ಅಣಬೂರು, ತವನಿಧಿ, ಅರಳಿಹಾಳ, ಕುರುಬರಹಳ್ಳಿ, ಗವುಡನಹಳ್ಳಿ, ನಂದನಸೋಮ, ಬಗ್ಗನಡುವಿನ, ಬಸವಾಪಟ್ಟಣ, ಯಿಕ್ಕನೂರು, ಲಕ್ಕಿಹಳ್ಳಿ, ಹರತಿ ಮತ್ತು ಹೊಸೂರು ಸ್ಥಳಗಳು ಶಾಸನೋಕ್ತವಾಗಿವೆ.[25]

ಜಾಜೂರು ವಿಜಯನಗರ ಅರಸರ ಕಾಲದಲ್ಲಿ 'ಸೀಮೆ' ಆಗಿತ್ತೆನ್ನುವುದನ್ನು ಕ್ರಿ.ಶ. 1540 ರ ಅಚ್ಚುತರಾಯನ ಶಾಸನವು ತಿಳಿಸುತ್ತದೆ. ಪೆನುಗೊಂಡೆಯ ವೀರಪ್ಪನಾಯಕನ ನಿರೂಪದ ಮೇರೆಗೆ ಜಾಜೂರು ಸೀಮೆಯನ್ನು ಹಿರಿಯಮಲ್ಲಪ್ಪಣ್ಣ ಅಯ್ಯನು ಆಳುತ್ತಿದ್ದನೆಂದು ಇದು ತಿಳಿಸುತ್ತದೆ.[26] ಇವನು ಜಾಜೂರು ಸೀಮೆಯ ಮದುವೆಯ ಸುಂಕವನ್ನು ಸಹ ಸರ್ವಮಾನ್ಯ ಮಾಡಿದ ಉಲ್ಲೇಖವೂ ಈ ಶಾಸನದಲ್ಲಿದೆ. ಈ ಸೀಮೆಗೆ ಸೇರಿದ ಗ್ರಾಮಗಳೆಂದರೆ ಕಡೂರು (ಕ್ರಿ.ಶ.

1517ರ ಶಾಸನದಲ್ಲಿ ಜಾಜೂರು ಸೀಮೆಯ ಕಡಲೂರು ಎಂದಿದೆ), ಕಾಮಸಮುದ್ರ, ಕೊಡಗವಹಳ್ಳಿ, ಕೋಟೆಹಾಳು, ಗುಂಜಿಗನೂರು, ಚನ್ನಪಟ್ಟಣ, ಚಿಕ್ಕಂದವಾಡಿ, ಚಿಕ್ಕಜಾಜೂರು, ಬಾಣಗೆರೆ, ಶೃಂಗೇರಿ ಹನುಮನಹಳ್ಳಿ, ಹನುಮನಕಟ್ಟೆ. ಒಟ್ಟಾರೆ ಈ ಸೀಮೆಯಲ್ಲಿ 14 ಗ್ರಾಮಗಳಿದ್ದವೆಂದು ತಿಳಿದುಬಂದಿದೆ.[27]

ಶಾಸನಗಳು:– ಈ ಸೀಮೆಯ ಬಗ್ಗೆ ಉಲ್ಲೇಖಿಸುವಂತಹ ಕೆಲವು ಶಾಸನಗಳು ಇಂತಿವೆ.

1. ತ್ಯಾಗದಹಳ್ಳಿಯ ಶಾಸನದಿಂದ ಶಕವರ್ಷ 1438ರಲ್ಲಿ ವಿಜಯನಗರದ ಶ್ರೀಕೃಷ್ಣದೇವರಾಯ ಮಹಾರಾಯರು ನಾಯಕತನ ಪಾಲಿಸಿದ್ದಕ್ಕಾಗಿ ಪ್ರಧಾನ ಮಲ್ಲರಸರು ಜಾಜೂರುಗವಿಯ ತಿರುಮಲ ದೇವರಿಗೆ ಜಾಜೂರು ಸೀಮೆಗೆ ಸಲ್ಲುವಂತ ತ್ಯಾಗದಹಳ್ಳಿಯನ್ನು ದತ್ತಿ ಬಿಟ್ಟಿದ್ದ ವಿಚಾರ ತಿಳಿದುಬರುತ್ತದೆ.[28] ಆದರೆ ಇಂದು ತ್ಯಾಗದಹಳ್ಳಿ ಬೇಚರಾಕ್ ಗ್ರಾಮವಾಗಿದೆ.

3. ಕ್ರಿ.ಶ. 1462ರಲ್ಲಿ ಮದುವೆ ಸುಂಕವನ್ನು ಮಾನ್ಯ ಮಾಡಿದ ವಿಚಾರವನ್ನು ಆಂಜನೇಯ ದೇವಾಲಯದ ಪ್ರಾಕಾರದ ಶಾಸನದಿಂದ ತಿಳಿಯಬಹುದು.[29]

2. ಕ್ರಿ.ಶ. 1664ರ ಶಾಸನದ ಪ್ರಕಾರ ಜಾಜೂರು ಹಾಗೂ ಕೋಟೆಹಾಳು ಗ್ರಾಮಗಳ ಗೌಡಿಕೆಯನ್ನು ಹೊಲತಿಹಾಳಿನ ಬಸವಣ್ಣ ದೇವರ ಪೂಜಾರಿ ಗುರುವಣ್ಣನವರಿಗೆ 200 ವರಹಗಳಿಗೆ ಕ್ರಯಪತ್ರವನ್ನು ಜಾಜೂರು ಗೌಡರು ಮಾಡಿಕೊಟ್ಟ ವಿಚಾರ, ಇದಕ್ಕೆ ಸುಮಾರು 50–60 ಜನರು ಸಾಕ್ಷಿ ಹಾಕಿದ ವಿಚಾರವನ್ನು ಸಿದ್ರಾಮೇಶ್ವರ (ಈಶ್ವರ) ದೇವಾಲಯದ ಶಾಸನದಿಂದ ತಿಳಿಯಬಹುದು.[30]

ದೇವಾಲಯಗಳು

ಜಾಜೂರಿನಲ್ಲಿ ಸಿದ್ರಾಮೇಶ್ವರ (ಈಶ್ವರ) ಮತ್ತು ಆಂಜನೇಯ ದೇವಾಲಯಗಳಿದ್ದು ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಪ್ರತೀಕಗಳಾಗಿವೆ. ಕಾಲದ ದೃಷ್ಟಿಯಿಂದ ಆಂಜನೇಯ ದೇವಾಲಯ ಪ್ರಾಚೀನವಾದುದಾಗಿದ್ದು ವಿಜಯನಗರದ ಅರಸರ (ಬಹುಶಃ ಕೃಷ್ಣದೇವರಾಯ) ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ಅಂದಾಜಿಸಬಹುದಾಗಿದೆ. ಏಕೆಂದರೆ ತ್ಯಾಗದಹಳ್ಳಿಯ ಶಾಸನ ಮತ್ತು ಇಲ್ಲಿನ ಆಂಜನೇಯ ದೇವಾಲಯದ ಶಾಸನಗಳನ್ನು ಒಬ್ಬರೆ ಹಾಕಿಸಿರುವುದರಿಂದ ಈ ತೀರ್ಮಾನಕ್ಕೆ ಬರಬಹುದಾಗಿದೆ. ಅಲ್ಲದೇ ಆಂಜನೇಯಸ್ವಾಮಿ ಆರಾಧನೆಯ ಪರಂಪರೆ ವಿಜಯನಗರ ಕಾಲದಲ್ಲಿ ಬಹುಜನಪ್ರಿಯವಾಗಿತ್ತು ಹಾಗೂ ಈ ದೇವಾಲಯವೂ ಸಹ ಸ್ವಲ್ಪ ಹೆಚ್ಚುಕಡಿಮೆ ವಿಜಯನಗರ ಶೈಲಿಯಲ್ಲಿದೆ. ಸಿದ್ರಾಮೇಶ್ವರ ದೇವಾಲಯದ ತುಂಬಾ ಸರಳವಾಗಿದ್ದು, ಬಹುಶಃ ವಿಜಯನಗರೋತ್ತರ ಕಾಲದ್ದಿರಬಹುದೆಂದು, ಅಂದರೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ಊಹಿಸಬಹುದಾಗಿದೆ. ಏಕೆಂದರೆ ಅಂತಹ ಹೇಳಿಕೊಳ್ಳುವಂತಹ ವಿಶಿಷ್ಟ ಶೈಲಿಯನ್ನು ಇಲ್ಲಿ ಕಾಣಲು ಸಾದ್ಯವಿಲ್ಲ. ದೇವಾಲಯದ ಕಂಬಗಳಲ್ಲಿನ ಪುಷ್ಪಬೋದಿಗೆಗಳನ್ನು ನೋಡಿ ವಿಜಯನಗರ ಶೈಲಿಯದೆಂದು ಗುರುತಿಸಿದರೂ, ನಂತರದಲ್ಲಿ ನಿರ್ಮಾಣವಾಗಿರಬೇಕೆಂದು ಅದರ ಸರಳ ವಾಸ್ತುಶೈಲಿಯಿಂದ ತಿಳಿಯಬಹುದಾಗಿದೆ. ಅಲ್ಲದೇ ಇಲ್ಲಿನ ಶಾಸನದ ಕಾಲವೂ ವಿಜಯನಗರದ ಅವಧಿಯ ನಂತರದ್ದು, ಇನ್ನೊಂದು ಅಂಶದ ಪ್ರಕಾರ ವಿಜಯನಗರದ ಆಳ್ವಿಕೆಯ ನಂತರ ಜಾಜೂರು ಸೀಮೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ 'ಸ್ಥಳ'ವಾಗಿ ರೂಪುಗೊಂಡಿತು. ಆದರೆ ಈ ಎರಡೂ ದೇವಾಲಯಗಳು ಇಂದು ಪುನರ್ ನಿರ್ಮಾಣಗೊಂಡಿದ್ದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಂಡಿವೆ. ಆದರೂ ಅಲ್ಲಲ್ಲಿ ಕಂಡುಬರುವ ಲಕ್ಷಣಗಳಿಂದ ನಾವು ಅವುಗಳ ಕಾಲ ಮತ್ತು ಶೈಲಿಯನ್ನು ತಿಳಿಯಬಹುದಾಗಿದೆ.

ಒಟ್ಟಾರೆ 'ಜಾಜೂರು ಸೀಮೆ' ವಿಜಯನಗರ ಅರಸರ ಕಾಲದಲ್ಲಿ ಹೆಚ್ಚು ಪ್ರಭಾವಿ ಸ್ಥಳವಾಗಿದ್ದು, ಚಿತ್ರದುರ್ಗದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿತ್ತು. ನಂತರದ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲೂ ಪ್ರಮುಖ ಆಡಳಿತ ಕೇಂದ್ರವಾಗಿ ರೂಪುಗೊಂಡಿತ್ತು. ಆದರೆ ಅಂದು ಅಷ್ಟು ಮಹತ್ವದ ಅದರಲ್ಲೂ ಕರ್ನಾಟಕದ ಬೃಹತ್ ಸಾಮ್ರಾಜ್ಯಗಳಲ್ಲಿ ಒಂದಾದ ವಿಜಯನಗರ ಸಾಮ್ರಾಜ್ಯದ ಆಡಳಿತದ ಕೇಂದ್ರಸ್ಥಾನವಾಗಿದ್ದ ಜಾಜೂರು ಇಂದು ಹೋಬಳಿ ಕೇಂದ್ರವಾಗಿದ್ದು ತನ್ನ ಹಿಂದಿನ ಮಹತ್ವವನ್ನು ಕಳೆದು ಕೊಂಡಿದೆ.

ಅಡಿಟಿಪ್ಪಣಿಗಳು

1. ಎಪಿಗ್ರಾಫಿಯಾ ಕರ್ನಾಟಿಕ, ಸಂ. 11. ಚಿತ್ರದುರ್ಗ, 3.
2. ಡಾ. ಜ್ಯೋತಿಬಾಯಿ, 2004, 'ನಾಯಕರ ಆಡಳಿತದಲ್ಲಿ ಚಿತ್ರದುರ್ಗ', ಗೋಪಾಲ ಬಾ.ರಾ. (ಸಂ), *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ. ಪು. 174.
3. ಯೇನಲಿಜೇನ ಯೋ ದೇಶೋ ಯುಕ್ತಃ ಸಮುಪಲಕ್ಷತೆ, ತೇನೈವ ನಾಮ್ನಾ ತಂ ದೇಶಂ ವಾಚ್ಯಮಾರ್ಹರ್ಮನೀಷಿಣಃ ಮಹಾಭಾರತ, ಆದಿಪರ್ವ 2–12.
4. ಮಹದೇವಯ್ಯ ಎಂ.ಪಿ., 2012, *ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು*, ಪು.176–183
5. ಗೋಪಾಲ ಬಾ.ರಾ., 2004, *ಪೂರ್ವೋಕ್ತ*, ಪು. 181.
6. ಡಾ. ಜ್ಯೋತಿಬಾಯಿ, 2004, *ಪೂರ್ವೋಕ್ತ*, ಪು. 179.
7. ಅದೇ, ಪು. 180.
8. ಡಾ. ಕೃಷ್ಣಮೂರ್ತಿ ಪಿ.ವಿ., 2000, 'ಆನೆಗೊಂದಿ ಪ್ರಭುಗಳ ಇತಿಹಾಸ, ಶಾಸನ ಮತ್ತು ಇತರ ಆಕರಗಳ ಹಿನ್ನೆಲೆಯಲ್ಲಿ ಒಂದು ಪರಿಶೀಲನೆ', *ಸೂರ್ಯಕೀರ್ತಿ*, ಡಾ. ಸೂರ್ಯನಾಥ್ ಕಾಮತ್‌ರ ಅಭಿನಂದನ ಗ್ರಂಥ, ಬೆಂಗಳೂರು, ಪು. 243–57.
9. ಬಸವರಾಜ ಎಚ್.ಇ. 2000, 'ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ಘಟಕಗಳು', ವಿಜಯನಗರ ಅಧ್ಯಯನ, ಸಂ. 5, ಪ್ರೊ. ಎಂ.ವಿ. ಕೃಷ್ಣಪ್ಪ ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. 115–118.
10 ಅದೇ, ಪು. 116.
11. ಅದೇ, ಪು. 117.
12. ಎ.ಕ. ಸಂ. 11, ಹೊಳಲ್ಕೆರೆ–120.
13. ಅದೇ, ಹೊಳಲ್ಕೆರೆ–62.
14. ಅದೇ, ಚಿತ್ರದುರ್ಗ–51.
15. ಅದೇ, ಹೊಳಲ್ಕೆರೆ–15.
16. ಅದೇ, ಹೊಳಲ್ಕೆರೆ–112.
17. *ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ*, 1946, ಸಂ. 2.
18. ಎ.ಕ., ಸಂ. 11, ಜಗಲೂರು–40.
19. ಅದೇ, ಜಗಲೂರು–2.
20. ಅದೇ, ಹೊಳಲ್ಕೆರೆ–78, 88, 94.
21. ಬಸವರಾಜ ಎಚ್.ಇ., 2000, *ಪೂರ್ವೋಕ್ತ*, ಪು. 117.
22. ಗಿರಿಜ ಟಿ., 1991, *ಚಿತ್ರದುರ್ಗ ಜಿಲ್ಲಾ ದರ್ಶಿನಿ*, ಪು. 206–207.

23. ಎ.ಕ. ಸಂ. 11, ಹಿರಿಯೂರು 88, ಮಸ್ಕಲ್ಲು ಕ್ರಿ.ಶ. 1589.
24. ಗೋಪಾಲ ಬಾ.ರಾ., 2004, *ಚಿತ್ರದುರ್ಗ ಜಿಲ್ಲಾ ಪ್ರದೇಶದ ಪ್ರಾಚೀನ ಸ್ಥಳೀಯ ಆಡಳಿತ ಘಟಕಗಳು*, ಪು. 182.
25. ಅದೇ, ಪು. 182.
26. ಎ.ಕ. ಸಂ-11, ಹೊಳಲ್ಕೆರೆ-62.
27. ಗಿರಿಜ ಟಿ., 1991, *ಪೂರ್ವೋಕ್ತ*, ಪು. 207.
28. ಅದೇ, ತ್ಯಾಗದಹಳ್ಳಿ (ಹೊಳ)-70.
29. ಅದೇ, ಹೊಳಲ್ಕೆರೆ-70, ಕ್ರಿ.ಶ. 1517.
30. ಅದೇ, ಹೊಳಲ್ಕೆರೆ-62, 63.

ಪರಾಮರ್ಶನ ಗ್ರಂಥಗಳು

1. ಕೃಷ್ಣಮೂರ್ತಿ ಪಿ.ವಿ., 1999, 'ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು' ಕಲ್ಬುರ್ಗಿ ಎಂ.ಎಂ.(ಸಂ) *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.*
2. ಕಲ್ಬುರ್ಗಿ ಎಂ.ಎಂ., 1994, *ಕರ್ನಾಟಕದ ಕೈಫಿಯತ್ತುಗಳು*, ಹಂಪಿ.
3. ಗಿರಿಜಾ. ಟಿ., 1991, *ಚಿತ್ರದುರ್ಗ ಜಿಲ್ಲಾ ದರ್ಶಿನಿ*, ದಾವಣಗೆರೆ
4. ಗೋಪಾಲ ಬಾ.ರಾ. (ಸಂ), ವಿಜಯನಗರ ಇನ್‌ಸ್ಕ್ರಿಪ್ಷನ್ಸ್, ಸಂ-2.
5. ಗೋಪಾಲ ಬಾ.ರಾ. 2004, *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.
6. ನರಸಿಂಹಮೂರ್ತಿ ಎ.ವಿ., 1971. ಕರ್ನಾಟಕದ ಸೇವುಣರ ಇತಿಹಾಸ.
7. ಪುಟ್ಟಣ್ಣ ಎಂ.ಎಸ್., 1997, *ಚಿತ್ರದುರ್ಗ ಪಾಳೆಯಗಾರರು*, ಮೈಸೂರು.
8. ರಂಗಸ್ವಾಮಿ ಡಿ.ಟಿ., 2007, 'ದೇವಾಲಯ ದರ್ಶಿನಿ', ಹೊಳಲ್ಕೆರೆ ತಾಲ್ಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹೊಳಲ್ಕೆರೆ.
9. ವೆಂಕಟರತ್ನಂ ಎಂ.ವಿ., 1974, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು
10. ಶ್ರೀಶೈಲ ಆರಾಧ್ಯ ಎಚ್., 1997, 'ವಿಜಯನಗರ ಅರಸರು ಮತ್ತು ಚಿತ್ರದುರ್ಗ ನಾಯಕರು', ವಿಜಯನಗರ ಅಧ್ಯಯನ, ಸಂ. 2, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
































43. ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಬೆಳಗಿದ ಹರಿದಾಸರು

ಡಾ. ಎಸ್.ಕೆ. ಜೋಷಿ

ಭಾರತದ ಭಕ್ತಿ ಪಂಥವು ಕ್ರಿ.ಶ. 1000ರಿಂದ ಕ್ರಿ.ಶ. 1800ರ ವರೆಗಿನ ಕಾಲಘಟ್ಟವನ್ನು ಆವರಿಸಿದ ಐತಿಹಾಸಿಕವಾದ, ಅಮೂಲ್ಯವಾದ ಕಾಲಘಟ್ಟ.

ಈ ಕಾಲಘಟ್ಟದಲ್ಲಿ ಉದಿಸಿ ಬೆಳಗಿದ ವಿಜಯನಗರ ಸಮ್ರಾಜ್ಯದ ಅವಧಿಯಲ್ಲಿಯೂ (ಕ್ರಿ.ಶ. 1336ರಿಂದ ಕ್ರಿ.ಶ. 1565), ಹರಿದಾಸರ ಚಿಂತನೆಯು ಬಹಳಷ್ಟು ಹಬ್ಬಿದೆ, ಹರಡಿದೆ, ಮೇರುವಾಗಿದೆ, ಘನವಾಗಿದೆ. ಕರ್ನಾಟಕದ ಹರಿದಾಸರ ಬದುಕು, ಬರಹ, ಮೇಲೆ ನಮೂದಿಸಿದಂತೆ ಸುಮಾರು 800 ವರ್ಷಗಳ ಕಾಲ ಅಬ್ಬಿದ್ದು ಅವರ ಅರಾಧ್ಯ ದೈವ ವಿಷ್ಣುವನ್ನು ಕೇಂದ್ರವಾಗಿ ಇರಿಸಿಕೊಂಡಿದೆ. ವಿಷ್ಣುಮಯತೆಯನ್ನು ಅವರ ಸಾಹಿತ್ಯ ಉದ್ಘೋಷಿಸುತ್ತಿದೆ.

ಹರಿದಾಸರ ಸಾಹಿತ್ಯವು ದೈವಿಕ ಚಿಂತನ, ದೈವಿಕ ಚಿತ್ರಣಗಳು, ಅಭಿಲಾಷೆಗಳು, ಆರಾಧ್ಯದೈವವಾದ ಶ್ರೀ ವಿಷ್ಣುವಿನ, ವಿಠಲನ ಸುತ್ತ ಹೆಣೆಯಲ್ಪಟ್ಟವು. ಹರಿದಾಸರ ಸಾಹಿತ್ಯದಲ್ಲಿ ಸಂಗೀತ, ಸ್ವಧರ್ಮ, ನಿಷ್ಠೆಗಳು ತ್ರಿವೇಣಿ ಸಂಗಮವಾಗಿ ಮಡುಗಟ್ಟಿದೆ. ಅವರ ಕೀರ್ತನೆಗಳ ಶಬ್ದಗಳಲ್ಲಿರುವ ವೈಚಿತ್ರ್ಯ, ಕಲ್ಪಕತೆ, ಲೋಕಾನುಭವ, ದೇವದರ್ಶನದ ಆಕಾಂಕ್ಷೆ, ಇತ್ಯಾದಿ ಲೋಕಜ್ಞಾನವನ್ನು ನೀಡುವ ತವನಿಧಿಯಾಗಿದೆ. ಹರಿದಾಸರ ಕೀರ್ತನೆಗಳು ಮಾನವ ಜನ್ಮದಲ್ಲಿರುವ ಶ್ರದ್ಧೆಯು ಹಾಗು ಸಾಹಿತ್ಯದ ಸತ್ವಗಳ ದ್ಯೋತಕವಾಗಿವೆ.

ಹರಿದಾಸರ ಸಾಹಿತ್ಯ ಬೆಳೆದು ಬರಲು ಕಾರಣಗಳು

ಹರಿದಾಸರ ಸಾಹಿತ್ಯ ಮೂಡಿಬರಲು ಐತಿಹಾಸಿಕ ಕಾರಣಗಳೂ ಇವೆ. 1) ವೀರಶೈವರ ಶರಣ ಸಾಹಿತ್ಯ ಪ್ರಭಾವಿಯಾದುದು, 2) ಮುಸ್ಲಿಂ ಆಡಳಿತ ಪ್ರಾರಂಭವಾಗಿ ಸೂಫೀ ಪಂಥದ ಸಾಹಿತ್ಯ ಪಸರಿಸತೊಡಗಿದುದು, 3) ಯಾವುದೇ ರಾಜಾಶ್ರಯವಿಲ್ಲದೇ ಕೇವಲ ದೇವಾಶ್ರಯದಿಂದ ಹರಿದಾಸರ ಸಾಹಿತ್ಯ ಬೆಳೆದು ಬಂದಿತು. ಕರ್ನಾಟಕದ ಹರಿದಾಸರ ಬದುಕು, ಬರಹಗಳು ಸುಮಾರು 800 ವರ್ಷಗಳ ಕಾಲ ಕ್ರಿ.ಶ. 1000ದಿಂದ ಕ್ರಿ.ಶ. 1800ರವರೆಗೆ ಇದರ ಹರಿವು. ಇವರ ಆರಾಧ್ಯದೈವ ಹರಿ–ವಿಷ್ಣು. ಎಲ್ಲಕಡೆಗೂ ವಿಷ್ಣುಮಯ ಹಬ್ಬಿಸಿದರು. ಹಾಗೂ ಜನಮಾನಸಕ್ಕೆ ಆ ದೈವದ ಸಾಹಿತ್ಯವನ್ನು ನೀಡಿದರು. ವ್ರಾತ್ಯ (ವ್ರತಸ್ಥ) ಬ್ರಾಹ್ಮಣ ಸಮಾಜದ ಕಕ್ಷೆಯಲ್ಲಿ ಬೆಳೆದು ಬಂದ ಈ ಇವರ ಸಾಹಿತ್ಯವು ಕನ್ನಡ ನಾಡಿಗೆ ಆಧ್ಯಾತ್ಮಿಕ ಹಾಗೂ ಭಕ್ತಿ ಸಂಪದವನ್ನು ನೀಡಿದೆ.

ಸಾಹಿತ್ಯದ ಗುಣ ಲಕ್ಷಣಗಳು:

ಈ ದಾಸಸಾಹಿತ್ಯವು ದೈವಿಕ ಚಿಂತನ ಹಾಗೂ ವ್ಯಾಪ್ತಿಗಳನ್ನು ಅವರ ಆರಾಧ್ಯದೈವವಾದ ವಿಷ್ಣುವಿನ ವಿಶೇಷವಾಗಿ ವಿಠ್ಠಲ ಎಂಬ ನಾಮದಿಂದ ಪ್ರಸಿದ್ಧವಾಗಿದೆ.

ಇವರ 'ದಾಸಸಾಹಿತ್ಯವೆಂದು' ಪ್ರತೀತಗೊಂಡ ಕೀರ್ತನೆಗಳು, ಉಗಾಭೋಗ ವಂತಿಗೆಗಳು, ಹರಿದಾಸ ಸಾಹಿತ್ಯದ ಪ್ರಕಾರಗಳಾಗಿವೆ. ಇವು ರಾಗ–ತಾಳಗಳ ಕಟ್ಟಿನಿಂದ ಚೆನ್ನಾಗಿ ಸಂಗೀತದಲ್ಲಿ ಹಾಡಲು ಹೆಣೆಯಲಾಗಿದೆ. ಇವು ಸ್ವರಪ್ರಧಾನ ಗೀತ, ಉದಹ, ಮೂಲಾಪ, ಧ್ರುವ ಅಂತರ ಆಭೋಗಗಳಿಗೆ ಕೆಲವು ರಾಗ–ತಾಳಗಳ ಅವಯವಗಳಾಗಿ ಬಹುಮಟ್ಟಿಗೆ ಅವುಗಳನ್ನು ಅಳವಡಿಸಿದರು. ಆದರೆ ಕೆಲವು ಸಮಯಗಳಲ್ಲಿ ಅವು ಶಿವಶರಣರ ವಚನಗಳಿಗೂ ಬಹುಮಟ್ಟಿಗೆ ಹೋಲುತ್ತವೆ ಹಾಗೂ ಸ್ವತಂತ್ರ ಇಷ್ಟೇ ಪಾದಗಳು ಇರಬೇಕೆಂದು ಭೇದವಿಲ್ಲ.

ಆಧ್ಯಾತ್ಮಿಕ ಸಾಹಿತ್ಯ ಸೃಷ್ಟಿ

ಅಥಾಂಗ ಸಾಹಿತ್ಯದ ಸೃಷ್ಟಿ ಮಾಡಿದ್ದಾರೆ ಕನ್ನಡ ನಾಡಿನ ಹರಿದಾಸರೆಲ್ಲ. ಅದು ಆಧ್ಯಾತ್ಮಿಕ ಸೃಷ್ಟಿ. ಅವರ ಸಾಹಿತ್ಯ ಗದ್ಯವಾಗಿರದೆ ಪದ್ಯವಾಗಿದೆ. ಗದ್ಯಕ್ಕೆ ನಿಯಮಿತ ಇಲ್ಲ. ಬಂಧನವಿಲ್ಲ. ಆದರೆ ಪದ್ಯಕ್ಕೆ ವಿಶೇಷ ಬಂಧನವಿದೆ, ಸೀಮಾರೇಖೆಯಿದೆ. ಆ ಸೀಮಾರೇಖೆಯಲ್ಲಿ ಅಧ್ಯಾಯವನ್ನು ಬಂಧಿಸಿ, ಸಂಗೀತ ರಾಗಗಳಿಗೆ ಲಹರಿ ವಿಭಾಗಿಸುವಂತೆ ಶಬ್ದಗಳನ್ನು ಪವಣಿಸಿದ್ದಾರೆ. ಆಧ್ಯಾತ್ಮವನ್ನು ಜನಮಾನಸಕ್ಕೆ ಒಯ್ದರು. ಸಂಗೀತ ಪ್ರಭಾವೀ ಮಾಧ್ಯಮ ಹಾಗೂ ಈ ಕೆಳಗಣ ದಾಸ ಸಾಹಿತಿಗಳಲ್ಲಿ ಆ ಪ್ರಯತ್ನ ಮಾಡಿದ್ದಾರೆ.

ಕರ್ನಾಟಕ ಕರಿದಾಸ ಸಂಕುಲ ಪಟ್ಟಿಕೆ

ಶ್ರೀಪಾದರಾಯರು, ಪುರಂದರದಾಸರು (1450), ಕನಕದಾಸರು (1500 ಬಾಡಗ್ರಾಮ), ವಿಜಯವಿಠ್ಠಲದಾಸರು (1682), ನವವೃಂದಾವನ ಗೋಪಾಲ ವಿಠ್ಠಲದಾಸರು, ಜಗನ್ನಾಥದಾಸರು (1727), ವಸಂತ ವಿಠ್ಠಲದಾಸರು, ವಿಠ್ಠಲರಾಯ ಕೀರ್ತಿದಾಸರು, ಶೇಷ ವಿಠ್ಠಲದಾಸರು, ಶ್ರೀಧರ ವಿಠಲದಾಸರು, ಶ್ರೀರಂಗ ವಿಠಲದಾಸರು, ನಾರಾಯಣರಂಗ ವಿಠಲದಾಸರು, ಪ್ರಾಣೇಶ ವಿಠಲದಾಸರು, ರಮಣೀಶ ವಿಠಲದಾಸರು, ವ್ಯಾಸರಾಯರು (1447), ವಾದಿರಾಜರು (1480, ಹೂವಿನಕೆರೆ), ಶ್ರೀ ಭಾಗಣ್ಯದಾಸರು, ತಿಮ್ಮಣ್ಣದಾಸರು, ಶ್ರೀ ವೇಣುಗೋಪಾಲದಾಸರು (ಆದವಾನಿ), ಹಂಪಿ ಮೋಹನದಾಸರು (ಆನೆಗೊಂದಿ), ಶ್ರೀ ಪ್ರಸನ್ನ ವೆಂಕಟದಾಸರು (ಬಾಗಲಕೋಟೆ).

ವಿಜಯನಗರಕಾಲೀನ ದಾಸರು

ಇದರಲ್ಲಿ, ವಿಜಯನಗರ ಕಾಲದ ಪ್ರಸಿದ್ಧರೆಂದರೆ ನರಹರಿ ದಾಸರು (1250–1335), ವ್ಯಾಸರಾಯರು (1447–1539), ವಾದಿರಾಜರು (1481–1600), ಪುರಂದರದಾಸರು (1484–1504). ಇವರೆಲ್ಲ ವಿಜಯನಗರ ಕಾಲದಲ್ಲಿ ಹರಡಿಕೊಂಡು, ದಾಸಸಾಹಿತ್ಯದ ಮಹಾಕಾರ್ಯವನ್ನು ಮಾಡಿರುತ್ತಾರೆ. ಅವರ ವಿಶೇಷತೆಯನ್ನು ಮುಂದಿನ ಪುಟಗಳಲ್ಲಿ ವಿವರಿಸಿದೆ.

ನರಹರಿ ದಾಸರು (1250–1335)

ಹರಿದಾಸ ಸಾಹಿತ್ಯದ ಉಗಮವಾಹಿನಿ ಇವರು. ಇವರು ಶ್ರೀ ವ್ಯಾಸರಾಯರ ಗುರುಗಳು. ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣ ತಾಲ್ಲೂಕಿನ ಅಬಲೂರು ಗ್ರಾಮದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಪೂರ್ವದ ಹೆಸರು ಲಕ್ಷ್ಮೀನಾರಾಯಣ. ಶ್ರೀರಂಗಮ್ ಮಠದಲ್ಲಿ ಅಭ್ಯಾಸ. ಅನೇಕ ತೀರ್ಥಯಾತ್ರೆ ಮಾಡಿ, ಪವಾಡಪುರುಷರೆನಿಸಿದ್ದಾರೆ. "ಶ್ರೀ ರಂಗವಿಠಲ" ಎಂಬ ಅಂಕಿತವಿದ್ದು, ಕನ್ನಡದಲ್ಲಿ ಮೊದಲಿಗೆ ಕೀರ್ತನೆಗಳನ್ನು ರಚಿಸಿದವರು. ಈ ಮೂಲಕ ಹರಿದಾಸ ಸಾಹಿತ್ಯ ಸಂಪ್ರದಾಯದ ಆದ್ಯ ಪ್ರವರ್ತಕರೆಂದು ಕರೆಯಲಾಗಿದೆ. ಈ ಮಹಿಮರ ಕೀರ್ತನೆಗಳಲ್ಲಿ ಹರಿ ಆರಾಧನ, ವಾತ್ಸಲ್ಯಭಾವ, ರುಕ್ಮಿಣಿ–ಸತ್ಯಭಾಮೆಯರ ಸಂವಾದ, ಮಾಧ್ವ ತತ್ವ ಪ್ರತಿಪಾದನೆಗಳನ್ನು ಕಾಣಬಹುದಾಗಿದೆ. "ಭಕ್ತಿ ಬೇಕು, ವಿರಕ್ತಿ ಬೇಕು, ಶಕ್ತಿ ಬೇಕು, ಮುಂದೆ ಮುಕ್ತಿ ಬಯಸುವವನಿಗೆ ..." ಎಂಬುದು ಇವರ ಆಧ್ಯಾತ್ಮಿಕ ನಿಲುವಾಗಿದೆ. ಇವರು ಧ್ರುವರಾಜನ ಅವತಾರ ಎಂದು ಹೇಳುತ್ತಾರೆ.

ವ್ಯಾಸರಾಯರು (1447–1539)

ಇವರು ಮೈಸೂರು ಜಿಲ್ಲೆಯ ಬನ್ನೂರು ಗ್ರಾಮದಲ್ಲಿ ಜನಿಸಿದರು. ತಂದೆ ಬಲ್ಲಣ್ಣ, ತಾಯಿ ಲಕ್ಕಮ್ಮ. ಶ್ರೀಪಾದರಾಜರಲ್ಲಿ ಶಿಷ್ಯವೃತ್ತಿ ಕೈಗೊಂಡು ಕಾವ್ಯ ನಾಟಕಾಲಂಕಾರ ಧರ್ಮಶಾಸ್ತ್ರದಲ್ಲಿ ನಿಪುಣರಾದರು. ಆರಂಭದಲ್ಲಿ 'ಯತಿ'ರಾಜ ಎಂದು

ಹೆಸರು ಪಡೆದು, ವಿಜಯನಗರ ಸಾಳ್ವ ಹಾಗೂ ತುಳುವ ಅರಸು ವಂಶಜರಲ್ಲಿ ಆರು ಮಂದಿ ಅರಸರುಗಳಿಗೆ ರಾಜಗುರುಗಳಾಗಿದ್ದರು.

ಇವರ ಶಿಷ್ಯ ಪರಂಪರೆಯಲ್ಲಿ ವಾದಿರಾಜ, ಪುರಂದರದಾಸರು, ಕನಕದಾಸರು, ಪ್ರಮುಖರು. ಸಂಸ್ಕೃತ ಭಾಷೆಯಲ್ಲಿ ತರ್ಕತಾಂಡವ, ನ್ಯಾಯಾಮೃತ ಚಂದ್ರಿಕಾ ಇತ್ಯಾದಿ ಗ್ರಂಥ ರಚಿಸಿದರು. ಇವರು ಚಂದ್ರಿಕಾ ಆಚಾರ್ಯರೆಂದೇ ಖ್ಯಾತರಾಗಿದ್ದಾರೆ. ಇವರ ಕೀರ್ತನೆಗಳ ಅಂಕಿತವು ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣವಾಗಿದ್ದು ವ್ಯಾಸರಾಯರಿಂದ ವ್ಯಾಸಪಂಥ ಹಾಗೂ ದಾಸ ಪಂಥಗಳು ಶ್ರೀಮಂತವಾದವು. ಇವರನ್ನು ಪ್ರಹ್ಲಾದನ ಸಂಭೂತರೆಂದು ಜನ ನಂಬಿರುತ್ತಾರೆ. ಇವರು ಶ್ರೀಕೃಷ್ಣದೇವರಾಯನನ್ನು ಕುಹಯೋಗದಿಂದ ಬದುಕಿಸಿದರು.

ವಾದಿರಾಜರು (1481–1600)

ಇವರು ವ್ಯಾಸರಾಯರ ಶಿಷ್ಯರಲ್ಲೊಬ್ಬರು. ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಜನ್ಮ ಕುಂದಾಪುರ ತಾಲ್ಲೂಕಿನ ಹೂವಿನಕೆರೆ. ತಂದೆ ರಾಮಾಚಾರ್ಯ, ತಾಯಿ ಸರಸ್ವತಿ. ವಾದಿರಾಜರ ಮೂಲ ಹೆಸರು ವರಹ. ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಪ್ರಭುತ್ವ ಪಡೆದಿದ್ದರು. ಇವರು 70 ಕೃತಿಗಳನ್ನು ರಚಿಸಿದ್ದಾರೆ. ದೀರ್ಘ ಕೃತಿಗಳಲ್ಲಿ ವೈಕುಂಠ ವರ್ಣನೆ, ಅವತಾರ ತ್ರಯ, ಮಧ್ವ ಸುವಲಾಲಿ, ಭ್ರಮರ ಗೀತೆ, ಸ್ವಪ್ನಪದ, ಲಕ್ಷ್ಮೀ ಸೋಬಾನೆ ಎಂಬ ಕೃತಿಗಳು ಪ್ರಮುಖವಾಗಿವೆ. ಇವರ ಕೀರ್ತನೆಗಳಲ್ಲಿ ಮಾನವ ಬದುಕು ಹಸನಾಗಬೇಕೆಂಬ ಹಂಬಲ ಇದೆ.

ಪುರಂದರದಾಸರು (1484–1504)

'ದಾಸರೆಂದರೆ ಪುರಂದರದಾಸರಯ್ಯಾ'. ಪುರಂದರರ ಬಗ್ಗೆ ಗುರು ವ್ಯಾಸರಾಯರ ನುಡಿ. ಕರ್ನಾಟಕದ ದಾಸ ಶ್ರೇಷ್ಠರು ಅವರು. ಸಂಗೀತ, ಸಂಸ್ಕೃತಿ ಮತ್ತು ಆಧ್ಯಾತ್ಮದಲ್ಲಿ ಅವರು ಚೆಲ್ಲಿದ ಬೆಳಕು ಅದ್ಭುತ.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಶೀಲಿಸಿದ್ದಾದರೆ, ಒಂದೊಂದರ ಪ್ರಕಾರಕ್ಕೂ ಶ್ರೇಷ್ಠ ಪ್ರತಿನಿಧಿ ಕಂಡುಬರುತ್ತಾರೆ. ಚಂಪುಗೆ ಪಂಪ, ರಗಳೆಗೆ ಹರಿಹರ, ಷಟ್ಪದಿಗೆ ಕುಮಾರವ್ಯಾಸ, ವಚನಕ್ಕೆ ಬಸವ ಇದ್ದಂತೆ ಹರಿದಾಸ ಕೀರ್ತನೆಗೆ ಪುರಂದರದಾಸರು. ವ್ಯಾಸರಾಯರ ಶಿಷ್ಯರಾಗಿ ಮಾಡಿದ ಪ್ರತಿಭೆಗಳು ಪುರಂದರದಾಸ ಹಾಗೂ ಕನಕದಾಸರು.

ಪುರಂದರ ದಾಸರ ಬದುಕು ಪ್ರಶ್ನೆಗಳ ತೊಡಕು. ಇವರ ಇಡೀ ಬದುಕು ಕ್ರಿ.ಶ. 1484ರಿಂದ 1564ರ ವರೆಗೆ ಹರಡಿಕೊಂಡಿದ್ದು, ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕ. ಪುರಂದರಗಡದ ವರದಪ್ಪನ ಮಗನಾಗಿ ಜನಿಸಿದರು. ತಂದೆಯಂತೆ 'ನವಕೋಟಿನಾರಾಯಣ' ಎಂದೆನಿಸಿಕೊಂಡು ಶ್ರೀಮಂತರಾಗಿದ್ದರು. ಹೆಂಡತಿ ಸರಸ್ವತಿ ಬಾಯಿ. ದೈವಭಕ್ತಳು, ದಂಡಿಗೆ ಬೆತ್ತ ಹಿಡಿಸಿದಳಯ್ಯ ಹೆಂಡತಿ ಸಂತತಿ ಸಾವಿರವಾಗಲಿ ಎಂಬ ಪರಿವರ್ತನೆ ಬದುಕಿನಲ್ಲಿ ಅಗಿ ವ್ಯಾಸರಾಯರ ಶಿಷ್ಯರಾದರು. ಪುರಂದರ ವಿಠಲ ಇವರ ಕಾವ್ಯನಾಮ.

ಇವರ ಕೃತಿಗಳು ಸಮಸ್ತವಾಗಿ 25 ಸಾವಿರ, ಬ್ರಹ್ಮಲೋಕ ಕೈಲಾಸ ದಿಕ್‌ಪಾಲಕರ ಮಹಿಮೆ 90 ಸಾವಿರ, ಭಗವದ್ ಭಕ್ತ ಕಥಾಸಾರ 50 ಸಾವಿರ, ಆಯಾ ದೇವತೆಗಳ ಮೂರ್ತಿಧ್ಯಾನ ಕೀರ್ತನ ಸಂಪದ, ಶಿಲಾಮೂರ್ತಿ, ಸಾಲಿಗ್ರಾಮ ತಕ್ಷಣ ಮಹಿಮೆ, ಸುಳಾದಿಗಳು 60 ಸಾವಿರ, ವೈಕುಂಠ ಮಹಿಮೆ – ಹೀಗೆ ಒಟ್ಟು 4 ಲಕ್ಷ 75 ಸಾವಿರ ಪದ್ಯಗಳು.

"ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ
ಪುರಂದರ ಗುರುಂ ವಂದೇ ದಾಸಶ್ರೇಷ್ಠ ದಯಾನಿಧಿಮ್'

ಕನಕದಾಸರು (ಕ್ರಿ.ಶ. 1488–1575)

ದಾಸ ಸಾಹಿತ್ಯದ ಅಶ್ವಿನಿ, ಕನ್ನಡ ಶ್ರೇಷ್ಠ ಸಂತ ಹಾಗೂ ಕವಿ; ಅನುಭಾವಿ ಕೀರ್ತನಕಾರರು. ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಬೀರಮ್ಮ ಹಾಗೂ ಬಚ್ಚಪ್ಪ ದಂಪತಿಗಳಿಂದ ಜನ್ಮ ತಳೆದರು.

ವಿಜಯನಗರ ಕಾಲದಲ್ಲಿ ಬಾಡ ಪ್ರದೇಶದ ತಿಮ್ಮಪ್ಪ ನಾಯಕನೆಂದು ಪ್ರತೀತಿ ಪಡೆದ ನಾಯಕ ಮನೆತನದವರು. ಬಾಡ ಗ್ರಾಮದಲ್ಲಿಯ ಆದಿಕೇಶವ ಮೂರ್ತಿಯನ್ನು ಕಾಗಿನೆಲೆಯಲ್ಲಿ ದೇವಾಲಯ ಕಟ್ಟಿಸಿ ಸ್ಥಾಪಿಸಿದರು. ಯುದ್ಧ ಸಮಯದಲ್ಲಿ ಹತಾಶನಾದ ಈತ ಜೀವನದಲ್ಲಿ ಪರಿವರ್ತನೆಯಾಗಿ, ವ್ಯಾಸರಾಯರಿಂದ ದೀಕ್ಷೆ ಪಡೆದು ದಾಸರಾದರು. ಶ್ರೀ ಪುರಂದರರ ಸಮಕಾಲೀನರಾದ ಇವರು ಕ್ರಾಂತಿಕಾರಿ ಮನೋಭಾವದ ಆಧ್ಯಾತ್ಮಿಕ ಸಮಾಜ ಸುಧಾರಕ, ಶ್ರೇಷ್ಠ ಭಾವ–ದೈವ ಸಾಹಿತ್ಯದ ಕರ್ತೃಗಳಾದರು.

ಇವರ ಮೋಹನ ತರಂಗಿಣಿ, ಹರಿಭಕ್ತಸಾರ, ನಳ ಚರಿತ್ರೆ, ರಾಮಧಾನ್ಯ ಚರಿತ್ರೆ ಮುಂತಾದ ಕಾವ್ಯಗಳು ಕನ್ನಡದ ಸಾಹಿತ್ಯಿಕ ಖಣಿಯಾಗಿವೆ. ಇವರ ಮುಂಡಿಗೆಗಳು ವಿಶಿಷ್ಠ ಸಾಹಿತ್ಯ ಪ್ರಕಾರ.

ನಿಮ್ನ ವರ್ಗದ ಈತ ಶ್ರೇಷ್ಠ ಬ್ರಹ್ಮಜ್ಞಾನಿಯಾದ ಬ್ರಾಹ್ಮಣನಾದನು ಎಂಬ ವಾಸ್ತವತೆಯನ್ನು ವ್ಯಾಸರಾಯರು ನುಡಿಮುತ್ತು, ದಾಸರ ಪದ್ಮವ್ಯೂಹ ಸೇರಿದ ಪರಮ ಬ್ರಾಹ್ಮಣ ವಿಶ್ವಮಾನವ, ಅದ್ವೈತನಿಧಿ, ಜಾತ್ಯತೀತ, ಹರಿಭಕ್ತಿಯ ಶ್ರೇಷ್ಠ ಪ್ರಭೆ, ಮಹಾನ್ ಚಿಂತಕ, ಎಷ್ಟೇ ವಿಶೇಷಣವೂ ಸಾಲದು.

ಕನಕ ಕಾವ್ಯಗಳಲ್ಲಿ 'ಮೋಹನ ತರಂಗಿಣಿ' – ಇದು ಶ್ರೇಷ್ಠ ಚರಿತೆಯಾಗಿ ಕಾವ್ಯವು ರಸವತ್ತಾಗಿದೆ. ನಳ ಚರಿತ್ರೆ ಅತ್ಯಂತ ರಮ್ಯ ಕಥನಕಾವ್ಯ – ಮಹಾಭಾರತದ ಒಂದು ಪ್ರಸಂಗ, ಭಾಮಿನಿ ಷಟ್ಪದಿಯಲ್ಲಿದೆ. ರಾಮಧಾನ್ಯ ಚರಿತೆ ಒಂದು ಖಂಡ ಕಾವ್ಯ – ರಾಗಿಯ ಹಿರಿಮೆಯನ್ನು ತಿಳಿಸಲಾಗಿದೆ. ದೈವಕ್ಕೆ ದೂರಾಗಿ ಆಡಂಬರದಿಂದ ಬಾಳುವವರಿಗೆ ಎಚ್ಚರ ನೀಡಿದೆ. ಇವರ ಹಾಡುಗಳಲ್ಲಿ ವ್ಯಂಗ್ಯೋಕ್ತಿ, ಚಾತುರ್ಯ, ಅಂಧಶ್ರದ್ಧೆಗಳ ತೆಗಳಿಕೆ ಎದ್ದು ಕಾಣುತ್ತದೆ.

ಇತ್ತೀಚೆಗೆ ಬಾಡದಲ್ಲಿ ಸಮಕಾಲೀನ ಇತಿಹಾಸಕಾರ ಪ್ರೊ. ಸಾಮಗ ಅವರು ಬಾಡಗ ಕನಕನ ಅರಮನೆಯನ್ನು ಉತ್ಖನನ ಮಾಡಿ ಅದರ ವಾಸ್ತು, ವಿನ್ಯಾಸದ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರಿಗೆ ಅಭಿನಂದನೆಗಳು.

ಉಪಸಂಹಾರ

ಮತ್ತೆ ಮತ್ತೆ ನೆನಪಿಗೆ ಬರುತ್ತಾರೆ ಕನ್ನಡದ ಹರಿದಾಸರು. ಜೈನ, ಶೈವ ಹಾಗೂ ಶಕ್ತಿ ಸಂಪ್ರದಾಯಗಳಂತೆ, ವೈಷ್ಣವ ಸಂಪ್ರದಾಯದ ಬಾಗಿಲುಗಳನ್ನು ಇವರು ತೆರೆದಿದ್ದಾರೆ. ಈ ಪ್ರಕ್ರಿಯೆಯು ಕ್ರಿ.ಶ. 1000ರಿಂದ 1800ರವರೆಗೆ ನಡೆಯಿತು.

ಹರಿದಾಸರು ಹರಿನಾಮ ಕೀರ್ತನೆಗಳನ್ನು ಹಾಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ಅದು ಏರುತ್ತ ಹೋಗಿ, ವಿಜಯನಗರ ಕಾಲಘಟ್ಟದಲ್ಲಿ ಮೇರು ಸ್ಥಿತಿ ಹೊಂದಿ ವಿಜಯನಗರೋತ್ತರ ಕಾಲದಲ್ಲಿ ಕ್ಷೀಣಿಸುತ್ತಾ ಹೋಯಿತು.

ದಾಸರು ಯಾವುದೇ ರಾಜಾಶ್ರಯವಿಲ್ಲದೆ ದೇವಾಶ್ರಯದಿಂದ ಬೆಳೆದ ಸಾಹಿತಿಗಳು. ಅವರು ಹರಿಯಲ್ಲಿ ಹರನನ್ನೂ, ಹರನಲ್ಲಿ ಹರಿಯನ್ನೂ, ಶ್ರೀಯಲ್ಲಿ ಶಿವೆಯನ್ನೂ, ಶಿವೆಯಲ್ಲಿ ಶ್ರೀಯನ್ನೂ ಕಂಡ ದರ್ಶನಿಕರು – ಆಧ್ಯಾತ್ಮಕ ನಾಡಿನ ಸೊತ್ತು ಅವರು.

ಆಧಾರ ಗ್ರಂಥಗಳು

1. ಪಂ॥ ಆರ್.ಎಸ್. ಪಂಚಮುಖಿ, *ಹರಿದಾಸ ಸಾಹಿತ್ಯ*, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ.
2. ವಿದ್ವಾನ್ ಶುಕ್ರಾಚಾರ್ಯ ಗಲಗಲಿ ಮತ್ತು ಶ್ರೀ ಅನಂತ ಜೋಶಿ, *ಶ್ರೀಮದ್ ಭಾಗವತ ಭಾವ ಮಂಜರಿ*, ಹೊಸ ಹುಬ್ಬಳ್ಳಿ, 2012.
3. ಡಾ॥ ಕಮಲಾ ಹೆಮ್ಮಿಗೆ, ಶಾರದಾ ಹೆಮ್ಮಿಗೆ – *ಬದುಕು ಬರಹ*, ಬೆಂಗಳೂರು.
4. ಡಾ॥ ರಂ.ಶ್ರೀ ಮುಗಳಿ, *ಕನ್ನಡ ಸಾಹಿತ್ಯ ಚರಿತ್ರೆ*, ಮೈಸೂರು, 1993.
5. ಡಾ॥ ಎಸ್.ಕೆ. ಜೋಶಿ, 'ಶಿವಶರಣರು ಹರಿದಾಸರು ಹಾಗೂ ಸೂಫಿ ಸಂತರು', *ಇತಿಹಾಸ ದರ್ಶನ*, ಬೆಂಗಳೂರು.
6. ಪ್ರೊ. ವಸಂತ ಕುಷ್ಟಗಿ ಮತ್ತು ಇಂ॥ ಭೀಮಸೇನ ಬಡಿಗೇರ, 'ಕರ್ನಾಟಕದ ಹರಿದಾಸರು', ಕಲ್ಯಾಣ ಕರ್ನಾಟಕ, ಗುಲಬರ್ಗಾ, 2011.
7. ಸ್ವರೂಪರಾಣಿ ಮಹಿಷಿ, *ಕರ್ನಾಟಕದಲ್ಲಿ ಬೆಳೆದು ಬಂದ ಹರಿದಾಸ ಪರಂಪರೆ*, ಹುಬ್ಬಳ್ಳಿ.
8. ಡಾ॥ ವಸಂತ ಕುಷ್ಟಗಿ ಮತ್ತು ಇಂ॥ ಭೀಮಸೇನ ಬಡಿಗೇರ, *ಮಹಾರಾಷ್ಟ್ರದ ಸಂತರು*.
9. ವಿಶೇಷ ಕೃತಜ್ಞತೆಗಳು: ಪ್ರೊ॥ ವಸಂತ ಕುಷ್ಟಗಿ ಹಾಗೂ ಲೇಖಕರು ಇಂಜಿನಿಯರ್ ಶ್ರೀ ಭೀಮಸೇನ ಬಡಿಗೇರ ಇವರ ದಾಸಕೃತಿಗಳು. ನನಗೆ ಬಹಳ ಆಕರಗಳನ್ನು ನೀಡಿದೆ. ಹಾಗಾಗಿ ಈ ಲೇಖಕನು ಅವರಿಗೆ ಹಾರ್ದಿಕವಾಗಿ ಕೃತಜ್ಞನಾಗಿರುತ್ತೇನೆ.

44. ವಿಜಯನಗರ ಇತಿಹಾಸ ಲೇಖನ ಕಲೆ

ಡಾ. ಬಿ.ಸಿ.ರಾಕೇಶ್

ಪ್ರಸ್ತುತ ನನ್ನ ಸಂಶೋಧನ ಲೇಖನವು ವಿಜಯನಗರ ಇತಿಹಾಸ ಲೇಖನಕಲೆ ಕುರಿತ ಲೇಖನವಾಗಿದೆ. ಲೇಖಕರು ತಮ್ಮ ಸಮಕಾಲೀನರ ಮತ್ತು ಭವಿಷ್ಯತ್‌ಕಾಲೀನ ತಿಳುವಳಿಕೆ ಮತ್ತು ಆತ್ಮೋನ್ನತಿಗಳಿಗಾಗಿ ಒಕ್ಕಣಿಸಿದ ಐತಿಹಾಸಿಕ ಘಟನೆಗಳ ಸಾಹಿತ್ಯಾತ್ಮಕ ರಚನೆಯೇ ಇತಿಹಾಸ ಲೇಖನ ಕಲೆ. ಇದು ಸಾಹಿತ್ಯ ಚರಿತ್ರೆಯಲ್ಲಿ ಅಥವಾ ಸಾಮಾಜಿಕ, ರಾಜಕೀಯ ನೈತಿಕ ಅಥವಾ ಸಾಂಸ್ಕೃತಿಕ ಕೃತ್ಯಗಳ ಚರಿತ್ರೆಯೂ ಅಲ್ಲ. ಇವೆಲ್ಲವೂ ಇದರಲ್ಲ ಕೂಡಿವೆ ಎಂಬುದೇನೋ ನಿಜ. ಇದು ಇತಿಹಾಸದ ತತ್ವ ಆಲೋಚನೆ ಹಾಗೂ ಘಟನೆ ಇವೆರಡರ ಮೊತ್ತ. ತತ್ವಶಾಸ್ತ್ರದಂತೆ ಇತಿಹಾಸಕ್ಕೂ ಆದಿಯಲ್ಲಿ ಆದರೆ ಮಾನವನ ಇತಿಹಾಸ ಲೇಖನಾಕಾರ್ಯ ಗ್ರೀಕರ ಕಾಲದಿಂದ ಪ್ರಾರಂಭವಾಯಿತು. ಗ್ರೀಕರು ಇತಿಹಾಸವನ್ನು ಒಂದು ಪ್ರಜ್ಞಾಪೂರ್ವ ಕಲೆಯಾಗಿ ಮಾಡಿದರು. ಭಾರತಕ್ಕೆ ಐರೋಪ್ಯರು ಬಂದಾಗ ಮೊದಲು ಅವರು ಚರಿತ್ರೆಯನ್ನು ಮತ, ಧರ್ಮ ಶಾಸ್ತ್ರದ ಒಂದು ಮುಖವೆಂದೇ ಪರಿಗಣಿಸಿದರು. ರಾಜಕೀಯವಾಗಿ ಮಹತ್ವವುಳ್ಳ ಕೃತಿಗಳನ್ನು ಪ್ರಕಟಿಸಿ ಸರಕಾರದ ಧ್ಯೇಯಧೋರಣೆಗಳ ಮೇಲೆ ಪ್ರಭಾವ ಬೀರತೊಡಗಿದರು. ಇದು ಚಿಂತನೆಯ ಅನೇಕ ಪಂಥಗಳ ಉಗಮಕ್ಕೆ ಕಾರಣವಾಯಿತು. ಕಳೆದ ಅರ್ಧ ಶತಮಾನದಲ್ಲಿ ಅನೇಕ ಚರಿತ್ರೆಕಾರರು ಭಾರತದ ಚರಿತ್ರೆಯನ್ನು ತಮ್ಮ ಮಾತೃಭಾಷೆಯಲ್ಲಿ ಮತ್ತು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಪ್ರೊ.ಆರ್.ಸಿ.ಮಜುಂದಾರ, ಎಸ್.ಎನ್.ಸೇನ ಇವರು ಎರಡು ಭಾಷೆಗಳಲ್ಲಿ ಧಾರಾಳವಾಗಿ ಬರೆದಿದ್ದಾರೆ. ಭಾರತಕ್ಕೆ ಸ್ವಾತಂತ್ರ ಬಂದಮೇಲೆ ಜನರಿಗೆ ತಾಯ್ನಾಡಿನ ಸಾಂಸ್ಕೃತಿಕ ಮಹತ್ವದ ಅರಿವಾಗಿದೆ. ದೆಹಲಿಯ ಸಾಹಿತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳ ಪ್ರಜ್ಞಾಪೂರ್ವ ರಾಷ್ಟ್ರೀಯ ನೀತಿಯಿಂದ ಬೆಂಬಲ ದೊರೆಯುತ್ತಿದೆ. ಮಾತೃಭಾಷೆಗಳಲ್ಲಿ ಚಾರಿತ್ರಿಕ ಬರವಣಿಗೆಗಳು ಬೌದ್ಧಿಕಾಂಶವನ್ನು ಹೆಚ್ಚು ಹೆಚ್ಚು ನಿಶ್ಚಿತಗೊಳಿಸುತ್ತದೆ. ಭಾರತದ ಕಿರಿಯ ಇತಿಹಾಸಕಾರರು ಪ್ರಾದೇಶಿಕ ಭಾಷೆಗಳಲ್ಲಿಯೇ ತಮ್ಮ ಕೃತಿಗಳನ್ನು ಬರೆದು ಪ್ರಕಟಿಸಲು ಹೆಚ್ಚು ಹೆಚ್ಚು ಬಯಸುತ್ತಾರೆ.

ವಿಜಯನಗರ ಇತಿಹಾಸವು ಬೆಳೆದು ಬಂದ ರೀತಿಯನ್ನು ನಾವು ನೋಡಬಹುದು. ಕ್ರಿ.ಶ.1810ರಲ್ಲಿ ಬ್ರಿಟಿಷ್ ನಿಯೋಗಿ ಮಾರ್ಕ್ಸ್‌ವಿಲ್ಸನನು ಮೈಸೂರು ಒಡೆಯರ ಆಸ್ಥಾನದಲ್ಲಿದ್ದನು. ಇವನು ಕರ್ನಾಟಕದ ಪ್ರಾದೇಶಿಕ ಇತಿಹಾಸವನ್ನು ಬರೆಯಲು ಪ್ರಯತ್ನಿಸಿದನು. ಅದಕ್ಕೆ ಅನುಕೂಲವಾಗುವಂತಹ ಶಾಸನಗಳು, ಕಡತಗಳನ್ನು ಸಂಗ್ರಹಿಸಿದನು. ಮುಂದೆ. ಕ್ರಿ.ಶ. 1815ರಲ್ಲಿ ಕರ್ನಲ್ ಮೆಕಂಜಿಯ ಹಸ್ತಪ್ರತಿಗಳು, ಶಾಸನಗಳು. ದಾಖಲೆಗಳು ಮತ್ತು ಕಡತಗಳನ್ನು ಸಂಗ್ರಹಿಸಿದನು. ಈ ಪ್ರಾಥಮಿಕ ಆಧಾರಗಳ ಸಹಾಯದಿಂದ ಪ್ರಾಚೀನ ದಕ್ಷಿಣ ಭಾರತದ ಇತಿಹಾಸವನ್ನು ಬರೆಯಲು ಸಹಾಯಕವಾಯಿತು. ಬರ್ಟನ್ ಸ್ಟೈನ್‌ರವರು ಮೆಕೆಂಜಿಯವರ ಸಂಗ್ರಹದಿಂದ ಮತ್ತು ಅವರ ಬರಹದಿಂದ ಭಾರತದ ಇತಿಹಾಸದಲ್ಲಿ ವಿಜಯನಗರವು ಸ್ವಂತಿಕೆಯನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ಅರಸು ಮನೆತನಗಳಲ್ಲಿ ಮೊದಲನೆಯದು ಸಂಗಮವಂಶ, ಎರಡನೆಯದು ಸಾಳವ ವಂಶ, ಮೂರನೆಯದು ತುಳುವ ವಂಶ, ನಾಲ್ಕನೆಯದು ಅರವಿಡು ವಂಶ. ಈ ವಂಶಗಳು ವಿಜಯಗರವನ್ನು ಕ್ರಮವಾಗಿ ಒಂದರ ನಂತರ ಒಂದಾಗಿ ಆಳಿದವು. ತುಳುವ ವಂಶದ ಆರಂಭವು ವಿಜಯನಗರದ ಇತಿಹಾಸದಲ್ಲಿ ಹಚ್ಚ ಹಸಿರಾಗಿದೆ. ಈ ವಂಶದ ಶ್ರೇಷ್ಠ ದೊರೆ ಕೃಷ್ಣದೇವರಾಯನು ದಕ್ಷಿಣ ಭಾರತದ ದೊರೆಗಳಲ್ಲಿ ಅತ್ಯಂತ ಶ್ರೇಷ್ಠನು. ವಿಜಯನಗರದ ಮತ್ತು ದಕ್ಷಿಣಭಾರತಕ್ಕೆ ಸಂಬಂಧಿಸಿದಂತೆ ಯಾರೇ ಇತಿಹಾಸ ಬರೆದರೂ ವಿಜಯನಗರ ಇತಿಹಾಸವನ್ನು ಮುಖ್ಯವಾಗಿ ಪ್ರತಿಬಿಂಬಿಸಿದ್ದಾರೆ. ವಿಜಯನಗರದ ಇತಿಹಾಸ ಲೇಖನ ಕಲೆಯು ನಿಯಮಿತವಾಗಿ ಪ್ರಾರಂಭವಾದದ್ದು

ಕ್ರಿ.ಶ 1900ರಲ್ಲಿ. ಹಂಪೆಯ (ಬಳ್ಳಾರಿ) ಪ್ರದೇಶದ ಕಲೆಕ್ಟರ್ ಆಗಿದ್ದ ರಾಬರ್ಟ್‌ಸಿವೆಲ್‌ರು ಅಲ್ಲಿರುವ ದೇವಾಲಯಗಳಿಗೆ ಮನಸೋತರು. ಸಿವೆಲ್, ಮಾರ್ಕ್ಸ್‌ವಿಲ್ಸ್, ಕರ್ನಲ್ ಮೆಕೆಂಜಿಯವರು ಸಂಗ್ರಹಿಸಿದ ಹಸ್ತ ಪ್ರತಿಗಳು, ಶಾಸನಗಳು, ದಾಖಲೆಗಳು ಅಷ್ಟೇ ಅಲ್ಲದೆ ಅಲ್ಲಿರುವ ದೇವಾಲಯಗಳನ್ನು ಬಳಸಿಕೊಂಡು ತಕ್ಕ ಮಟ್ಟಿಗೆ ವಿಜಯನಗರ ರಾಜಕೀಯ ಇತಿಹಾಸವನ್ನು ತಮ್ಮ ಕೃತಿ 'The Forgotten Empire' ದಲ್ಲಿ ಪ್ರಕಟಿಸಿದರು. ಈ ಕೃತಿಯು ವಿಜಯನಗರದ ಇತಿಹಾಸದ ಮೇಲೆ ಬೆಳಕು ಚಲ್ಲುತ್ತದೆ. ರಾಬರ್ಟ್ ಸಿವೆಲ್ ಅವರಿಂದ ಪ್ರಾರಂಭವಾದ ವಿಜಯನಗರ ಇತಿಹಾಸವು ವಿವಿಧ ಶಾಖೆಗಳನ್ನು ಕಂಡುಕೊಂಡಿತು. ಇವರು ಬರೆದ ಗ್ರಂಥದ ಸಹಾಯದಿಂದ ಮುಂದೆ ಬರುವ ಇತಿಹಾಸಕಾರರು ಇದನ್ನು ಅಧಾರವಾಗಿಟ್ಟುಕೊಂಡು ಇನ್ನು ಹೆಚ್ಚಿನ ಅಧ್ಯಾಯವನ್ನು ಮಾಡುತ್ತಿದ್ದಾರೆ. ಸಿವೆಲ್‌ರು ರಾಜಕೀಯ ವಿಷಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರು. ಈ ಗ್ರಂಥದಿಂದ ಪ್ರಾರಂಭವಾದ ಇತಿಹಾಸ ಲೇಖನ ಕಲೆಯು ಇಂದಿಗೂ ಸಹ ನಡೆದಿದೆ. ಇದು ವಿಜಯನಗರ ಇತಿಹಾಸ ಲೇಖನ ಕಲೆಗೆ ತಳಪಾಯವಾಗಿದೆ.

ರಾಬರ್ಟ್ ಸಿವೆಲ್‌ರ ನಂತರ ಇವರ ಪ್ರಭಾವಕ್ಕೆ ಒಳಗಾಗಿ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು ಸಿವೆಲ್‌ರ ಗ್ರಂಥ ಹಾಗೂ ಇನ್ನುಳಿದ ಅಧಾರಗಳ ಸಹಾಯದಿಂದ ಇವರು ಕ್ರಿ.ಶ. 1911ರಲ್ಲಿ ಪ್ರಕಟಿಸಿದ "Ancient India" ಮತ್ತು 1921ರಲ್ಲಿ ಪ್ರಕಟಿಸಿದ "South India And Her Mohammedan Invaders" ಈ ಕೃತಿಗಳಲ್ಲಿ ಹಿಂದೂ ಸಮ್ರಾಜ್ಯಶಾಹಿಯನ್ನು ಪ್ರತಿಪಾದಿಸಿದ್ದಾರೆ. ಬಿ.ಎ. ಸಾಲೆತೊರೆ ಇವರು ಕರ್ನಾಟಕ ಇತಿಹಾಸದಲ್ಲಿ ಆಸಕ್ತಿಯನ್ನು ಹೊಂದಿದ್ದರು. ಇವರು ಕ್ರಿ.ಶ. 1934ರಲ್ಲಿ "Social and Political Life in the Vijayanagar Empire" ಕೃತಿಗಳನ್ನು ಪ್ರಕಟಿಸಿದರು. ವಿಜಯನಗರದ ಅರಸರು ಮೂಲತಃ ಕರ್ನಾಟಕದವರು ಎಂದ ಇವರು ಮುಸ್ಲಿಂ ದಾಳಿಯಿಂದ ರಕ್ಷಿಸಲು ವಿಜಯನಗರವನ್ನು ಕರ್ನಾಟಕದಲ್ಲಿ ಸ್ಥಾಪಿಸಿದರು ಎಂದು ಅಭಿಪ್ರಾಯಪಟ್ಟಿರುತ್ತಾರೆ. ಹೆನ್ರಿ ಹೆರಾಸ್ ಅವರು ಕ್ರಿ.ಶ. 1927ರಲ್ಲಿ "The Aravidu Dynasty of Vijayanagar", ಎನ್. ವೆಂಕಟರಮಣಯ್ಯನವರು. ಕ್ರಿ.ಶ. 1933ರಲ್ಲಿ "Vijayanagar: Origins of the City and Empire ಮತ್ತು ಕ್ರಿ.ಶ. 1935ರಲ್ಲಿ 'Studies in the History of The Dynasty of Vijayanagar' ಇವರು ತಮ್ಮ ಕೃತಿಯಲ್ಲಿ ವಿಜಯನಗರದ ಅರಸರು ಆಂಧ್ರದವರು ಎಂದು ಅವರು ಕಾಕತೀಯರ ನಾಯಕರು ಆಗಿದ್ದರೆಂದು ವಾದಿಸಿದ್ದಾರೆ.

ಟಿ.ವಿ.ಮಹಾಲಿಂಗಂ ಅವರ 'South Indian Polity' ಎಂಬ ಕೃತಿ ಅಮರನಾಯಕರು ವಿಜಯನಗರದ ಕಾಲದಲ್ಲಿ ಯಾವ ರೀತಿ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರು ಎಂಬುದನ್ನು ಮತ್ತು ಕೆಳ ಮಟ್ಟದಲ್ಲಿ ಯಾವ ರೀತಿಯಲ್ಲಿ ಅಧಿಕಾರವು ಹಂಚಿಕೆಯಾಗಿತ್ತು ಎಂಬುದನ್ನು ತಿಳಿಸುತ್ತದೆ. ಇವರ ನಂತರ ಕೆ.ಎ. ನೀಲಕಂಠಶಾಸ್ತ್ರಿ ಅವರು ವಿಜಯನಗರದ ಇತಿಹಾಸವನ್ನು ಬರೆದಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದ ಮುಖ್ಯಸ್ಥರಾಗಿದ್ದ ಇವರು ಕ್ರಿ.ಶ. 1946ರಲ್ಲಿ ಮೂರು ಸಂಪುಟಗಳಲ್ಲಿ 'Further Sources of Vijayanagar History' ಕೃತಿಯನ್ನೂ ಎನ್.ವೆಂಕಟರಮಣಯ್ಯ ಅವರ ಸಹಯೋಗದೊಂದಿಗೆ ಪ್ರಕಟಿಸಿದರು. ಕ್ರಿ.ಶ. 1955ರಲ್ಲಿ 'A History of South India' ಇದರಲ್ಲಿ ವಿಜಯನಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾರೆ ಮತ್ತು ಕ್ರಿ.ಶ. 1964ರಲ್ಲಿ ಇವರ ಇನ್ನೊಂದು ಉತ್ತಮ ಕೃತಿ 'Tamil Country Under Vijayanagar' ಪ್ರಕಟಿಸಿದರು. ಇದರಲ್ಲಿ ಎ.ಕೃಷ್ಣಸ್ವಾಮಿ ಪಿಳ್ಳೈ ಅವರು ಊಳಿಗಮಾನ್ಯ ಪದ್ಧತಿಯ ಬಗ್ಗೆ ವಿವರಣೆ ನೀಡಿದ್ದಾರೆ.

ಬರ್ಟನ್ ಸ್ಟೈನವರು ಕ್ರಿ.ಶ. 1980ರಲ್ಲಿ 'Pesant State and Society in Medieval South India' ಗ್ರಂಥವನ್ನು ಪ್ರಕಟಿಸಿದರು. ಫ್ಯೂಡಲ್ ಪದ್ಧತಿಯ ಬಗ್ಗೆ ಅವರು ಇಲ್ಲಿ ವಿವರಣೆಯನ್ನು ನೀಡಿದ್ದಾರೆ. ಇವರ ಇನ್ನೊಂದು ಕೃತಿ 1994ರಲ್ಲಿ ಪ್ರಕಟವಾದ 'The New Cambridge History of India (Vijayanagar)'. ಇದರ ಪೀಠಿಕೆಯಲ್ಲಿ

ವಿಜಯನಗರದ ಇತಿಹಾಸ ಲೇಖನದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಡೆಲ್ಲಾ ಪಿಕ್ಕೋಲಾ, ಅನ್ನಾ ಲಿಬ್ರಾ 1985ರಲ್ಲಿ 'The Vijayanagar Urbanity Hospet' ಕೃತಿಯ ಮೂಲಕ ಹೊಸಪೇಟೆ ನಗರದ ಬಗ್ಗೆ ವಿವರಣೆ ನೀಡಿದ್ದಾರೆ. ದೀಕ್ಷಿತ ಜಿ.ಎಸ್. (ಸಂ), 1988ರಲ್ಲಿ 'Early Vijayanagar Studies in its History and Culture. Bangalore,' ಹೇರಾಸ ಅವರು 1980ರಲ್ಲಿ 'South India Under the Vijayanagar, Vol-1' ರಲ್ಲಿ ವಿಜಯನಗರದ ಇತಿಹಾಸ ಮತ್ತು ಅಧ್ಯಯನದ ವಿವರಣೆ ನೀಡಿದ್ದಾರೆ. ರಾಜಶೇಖರ ಎಸ್. 1985ರಲ್ಲಿ Masterpieces of Vijayanagar Art', ಕೃತಿಯಲ್ಲಿ ವಿಜಯನಗರದ ದೇವಾಲಯಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಶೆಟ್ಟರ್ ಎಸ್. 1990 'ಹಂಪಿ' ಕೃತಿಯಲ್ಲಿ ಹಂಪೆಯ ಬಗ್ಗೆ ವಿವರಣೆ ನೀಡಿದ್ದಾರೆ. ವೆಂಕಟರತ್ನಂ ಎ.ವಿ. 1972ರಲ್ಲಿ 'Local Self Government in Vijayanagar Empire, Mysore' ಸ್ಥಳೀಯ ಪ್ರಾಂತೀಯ ಆಡಳಿತದ ವಿವರಣೆಯನ್ನು ಒಳಗೊಂಡಿದೆ. ನಾಗೇಗೌಡ ಎಚ್.ಎಲ್. 1966ರಲ್ಲಿ 'ಪ್ರವಾಸಿ ಕಂಡ ಇಂಡಿಯಾ' ಇದರಲ್ಲಿ ವಿಜಯನಗರಕ್ಕೆ ಬಂದ ಪ್ರಾವಾಸಿಗರ ವಿವರಣೆಯನ್ನು ನಾವು ನೋಡಬಹುದು. ನಿರುಪಮಾ 1976ರಲ್ಲಿ 'ಕೃಷ್ಣದೇವರಾಯನ ಆಮುಕ್ತ ಮೌಲ್ಯದ' ಇದರ ವಿವರಣೆಯನ್ನು ಕಾಣಬಹುದು. ಭೂಸನೂರು ಮಠ ಸಂ.ಶಿ. 'ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ', 1988ರಲ್ಲಿ ಪ್ರಕಟಿಸಿದರು. ವಸುಂಧರಾ ಫಿಲಿಯೋಜಾ 1982ರಲ್ಲಿ 'ಆಳಿದುಳಿದ ಹಂಪೆ' ಬಗ್ಗೆ ತಿಳಿಸಿದ್ದಾರೆ. ಸದಾನಂದ ಕನವಳ್ಳಿ (ಅನು) 1992ರಲ್ಲಿ 'ಮರೆತು ಹೋದ ಮಹಾಸಾಮ್ರಾಜ್ಯ' ಅನುವಾದವನ್ನು ಮಾಡಿದ್ದಾರೆ. ಎ.ವಿ.ನರಸಿಂಹಮೂರ್ತಿಯವರ 'The Coins of Karnataka' Mysore, Geeta Book House, ಶಿವರಾಮಮೂರ್ತಿ ಸಿ. 'Vijayanagar Paintings', ಕೋಟೇಶ್ವರರಾವ್ ಟಿ. 'Amukta Malyada of Krishnadevaraya' (Hyderabad Thesis Submitted. Studies in Amukata Malyada, Osamnia, 1964 –66). ಇವುಗಳು ಅಷ್ಟೇ ಅಲ್ಲದೇ ಇನ್ನೂ ಹಲವು ಗ್ರಂಥಗಳನ್ನು ನಾವು ನೋಡಬಹುದು.

ವಿಜಯನಗರದ ಇತಿಹಾಸವನ್ನು ಬರೆಯಲು ಸಮಕಾಲೀನ ಅಂದರೆ ಕ್ರಿ.ಶ 1336ರಿಂದ 1570ರ ಅವಧಿಯಲ್ಲಿ ಅನೇಕ ಸಾಹಿತ್ಯಿಕ ಆಧಾರಗಳು ಸಿಕ್ಕಿವೆ. ಚಾವುಂಡಮಾದವನ ಸೂತ ಸಂಹಿತೆಯ ವ್ಯಾಖ್ಯಾನವಾದ 'ತಾತ್ಪರ್ಯ ದೀಪಿಕಾ', ಇಮ್ಮಡಿ ಪ್ರೌಡದೇವರಾಯನ 'ಬ್ರಹ್ಮ ಸೂತ್ರವೃತ್ತಿ', ಸಾಳುವ ನರಸಿಂಹರಾಯನ 'ರಾಮಾಭ್ಯದಯ', ರಾಜನಾಥ ಡಿಂಡಿಮನ 'ಸಾಳುವಭ್ಯುದಯಮ', ಅಯ್ಯಪ ದೀಕ್ಷಿತನ 'ಪರಿಮಳ ಮತ್ತು ಶಿವತತ್ವ ವಿವೇಕ', ಕುವಲಯಾನಂದನ 'ರಾಮಾಯಣ ತಾತ್ಪರ್ಯ ಸಂಗ್ರಹ', ಲಕ್ಕಣನ 'ಶಿವತತ್ವ ಚಿಂತಾಮಣಿ', ಚಾಮರಸನ 'ಪ್ರಭುಲಿಂಗಲೀಲೆ', ತೋಂಟದ ಸಿದ್ದೇಶ್ವರನ 'ಷಟ್ಸ್ಥಲ ಜ್ಞಾನಾಮೃತ', ತೊರವೆ ನರಹರಿಯ 'ತೋರವೆ ರಾಮಯಣ', ಗದುಗಿನ ನಾರಣಪ್ಪನ 'ಕುಮಾರವ್ಯಾಸ ಭಾರತ 10 ಪರ್ವಗಳು', ತಿಮ್ಮಣ್ಣಕವಿಯ 'ಗದುಗಿನ ಭಾರತದ 8 ಪರ್ವಗಳು', ಗಂಗಾದೇವಿಯ 'ಕಂಪಣರಾಯ ಚರಿತಂ' ಅಥವಾ 'ಮಧುರಾ ವಿಜಯಂ', ಕೃಷ್ಣದೇವರಾಯನ ಮಾದಲಸ ಚರಿತಂ, ರಸಮಂಜರಿ, ಜಾಂಬವತಿ ಪರಿಣಯಂ, ಉಷಾಪರಿಣಯಂ, ಆಮುಕ್ತಮೌಲ್ಯದ ಈ ಕಾಲದಲ್ಲಿ ರಚಿತವಾದ ಕೃತಿಯಾಗಿವೆ. ಅಲ್ಲಾಸಾನಿಪೆದ್ದಣ್ಣನ 'ಮನುಚರಿತಮು', ನಂದಿತಮ್ಮಣ್ಣನ 'ಪಾರಿಜಾತಾಪಹರಣಮು', ತೆನಾಲಿರಾಕೃಷ್ಣನ 'ಉಭಟಾರಾಧ್ಯ ಚರಿತಂ', ಶ್ರೀಪಾದರಾಯರ 'ವೇಣುಗೀತೆ' ಮತ್ತು 'ಗೋಪಾಲಗೀತೆ', ವ್ಯಾಸರಾಯರ 'ತರ್ಕತಾಂಡವ', 'ನ್ಯಾಯಾಮೃತ' ಕೀರ್ತನೆಗಳು, ವಾದಿರಾಜರ 'ತೀರ್ಥ ಪ್ರಬಂಧ', ಮಲ್ಲಣನ 'ರಾಜಶೇಖರ ಚರಿತಂ', ದೂರ್ಜಟನ 'ಕೃಷ್ಣರಾಜವಿಜಯಂ', ವಿರುಪರಾಜನ 'ತ್ರಿಭುವನತಿಲಕ', ನಂಜುಂಡನ 'ಕುಮಾರರಾಮ ಸಾಂಗತ್ಯ', ಲಿಂಗಮಂತ್ರಿಯ 'ಕಬ್ಬಿಗರ ಕನ್ನಡಿ', ಹರಿದಾಸರ 'ಇರುಸಮ ವಿಳಕ್ಕಂ', (ತಮಿಳು), 1ನೇ ರಾಜನಾದ ಡಿಂಡಿಮನ 'ಸಾಳುವಾಭ್ಯುದಯಂ' ಮತ್ತು 'ಅಚ್ಯುತರಾಯಾಭ್ಯುದಯಂ', ಇತ್ಯಾದಿ ಸಹ ಇದೇ ಅವಧಿಗೆ ಸೇರುತ್ತವೆ.


ಇವುಗಳ ಸಹಾಯದಿಂದ ವಿಜಯನಗರದ ಇತಿಹಾಸ ಲೇಖನ ಕಲೆಯು ಅತ್ಯಂತ ಉತ್ಕೃಷ್ಟವಾಗಿ ಬೆಳೆಯಿತು. ರಾಮರಾವ ಅವರ 'ಕೃಷ್ಣದೇವರಾಯ' (1971), ಹೇರಾಸ ಎನ್. ಅವರ 'Krishnadevarayas Conquest of Raichor', ತ್ರಿವಿಕ್ರಮ ಅವರ ಕೃಷ್ಣದೇವರಾಯ (1954), ಹೇರಾಸ ಅವರ ಇನ್ನೊಂದು ಕೃತಿ. 'South India Under the Vijayanagar Empire', ಕರ್ಮಾಕರ ಅವರ 'A Cultural History of Karnataka' ರಾಜಶೇಖರ ಎಸ್. ಅವರ 'Masterpieces of Vijayanagar Art', ಎನ್.ಆರ್. ಸಾಲೆತೊರೆ ಅವರ 'Vijayanagar Art', ಸೂರ್ಯನಾರಾಯಣರಾವ್ (1993) 'The Never to be forgotten Empire', ಇವುಗಳು ವಿಜಯನಗರದ ಕಾಲದಲ್ಲಿ ಸ್ಥಾಪನೆಯಾದ ದೇವಾಲಯಗಳ ಬಗ್ಗೆ ವಿವರಣೆಯನ್ನು ನೀಡುತ್ತವೆ. ಸೂರ್ಯನಾರಾಯಣರಾವ್ (1993) 'The Never to be Forgotten Empire' ಕೃತಿಯಲ್ಲಿ ಇತ್ತೀಚಿನ ಸಂಶೋಧನೆಗಳನ್ನು ತೆಗೆದುಕೊಂಡು ವಿಜಯನಗರದ ಬಗ್ಗೆ ಇನ್ನಷ್ಟು ಮಾಹಿತಿಯನ್ನು ತಿಳಿಸಿದ್ದಾರೆ. ವೆಂಕಟರತ್ನಂ ಅವರು 1972 ರಲ್ಲಿ ರಚಿಸಿದ Local Self Government in the Vijayanagar Empire' ಕೃತಿಯಲ್ಲಿ ಕೃಷ್ಣದೇವರಾಯನ ಆಡಳಿತ ಶಾಖೆಗಳು, ಅವುಗಳ ಭಾಗಗಳನ್ನು ತಿಳಿಸಿದ್ದಾರೆ. ಅಚಾರ್ಯ ಎ.ಎಸ್. 1983 'ಕೃಷ್ಣ ದೇವರಾಯನ ದಿನಚರಿ', ಬಿ. ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು, ಪಿ.ಬಿ. ದೇಸಾಯಿ ಅವರು 'ವಿಜಯನಗರ ಸಾಮ್ರಾಜ್ಯ' ಗ್ರಂಥಗಳಲ್ಲಿ ವಿಜಯನಗರದ ಆಡಳಿತ, ರಾಜಕೀಯ, ಕಲೆ ಮತ್ತು ವಾಸ್ತುಶಿಲ್ಪ ಸ್ಥಿತಿಗಳ ವಿವರಣೆ ನೀಡಿದ್ದಾರೆ. ವಂಸುಂಧರ ಫಿಲಿಯೋಜ ಅವರ 'ಅಳಿದುಳಿದ ಹಂಪೆ' ಕೃತಿಯಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಮತ್ತು ಅಚ್ಯುತರಾಯನ ಕಾಲದಲ್ಲಿ ಕಟ್ಟಲ್ಪಟ್ಟ ದೇವಾಲಯಗಳ ಬಗ್ಗೆ ವಿವರಣೆಯಿದೆ. ನಿರುಪಮಾ ಅವರ 1971ರ 'ಕೃಷ್ಣದೇವರಾಯನ ಆಮುಕ್ತಮೌಲ್ಯದ' ಶ್ರೀಪ್ರಕಾಶನ ಬೆಂಗಳೂರು, ಅಪ್ಪುತುರ್ರೈ ಕೆ. 'Krishnadevaraya A.D. 1509 -1529' ಬಿ.ಆರ್. ಗೋಪಾಲರವರ 'Vijayanagar Paintings', Studies in Karnataka History and Culture' Bharati Prakashan, Mysore, ಈ ಸಾಲಿಗೆ ಸೇರುವ ಇತರ ಕೃತಿಗಳಾಗಿವೆ.

ವಿಜಯನಗರದ ಅರಸರ ಮೂಲ ಯಾವುದು ಎಂಬುದನ್ನು ಮೇಲಿನ ಗ್ರಂಥಗಳಿಂದ ತಿಳಿಯಬಹುದು. ಇವರ ರಾಜಕೀಯ ಬೆಳವಣಿಗೆಯನ್ನು ಈ ಗ್ರಂಥಗಳು ತಿಳಿಸುತ್ತವೆ. ಅಲ್ಲದೇ ಅಂತಃ ಕಲಹಗಳು, ಸಾಮಂತರು ಮತ್ತು ಅಮರನಾಯಕರ ಬಗ್ಗೆ ವಿವರಣೆಯನ್ನು ನೀಡುತ್ತವೆ. ಅರಸರ ಆಡಳಿತ ಬಗ್ಗೆ ಮಂತ್ರಿ ಮಂಡಳ, ಪ್ರಧಾನಮಂತ್ರಿ, ಅರಸರ ಸಂಬಂಧಿಗಳು, ಅಲ್ಲಿನ ಆಡಳಿತ, ಸಾಮಾಜಿಕ ವ್ಯವಸ್ಥೆ, ಕಂದಾಯ ವ್ಯವಸ್ಥೆ, ತೆರಿಗೆ ಬಗ್ಗೆ ವಿವರಗಳಿವೆ. ದಂಡಯಾತ್ರೆಯನ್ನು ಕೈಗೊಂಡಾಗ ಪ್ರಾಂತ್ಯಾಧಿಕಾರಿಗಳು ಅರಸನಿಗೆ ಸೈನಿಕ ಸಹಾಯವನ್ನು ನೀಡಬೇಕಾಗಿತ್ತು ರಾಜ್ಯದಲ್ಲಿ ಆಡಳಿತವನ್ನು ಮಾಡಲು ಅಮರನಾಯಕರ ಪದ್ಧತಿ ಜಾರಿಯಲ್ಲಿತ್ತು. ಅದೇ ರೀತಿಯಾಗಿ ರಾಜರು ಕವಿಗಳ ಪೋಷಣೆ, ಸಾಮಾಜಿಕ ಕಾರ್ಯಗಳು, ದೇವಾಲಯಗಳು, ಕೋಟೆಗಳು, ಮಸೀದಿಗಳನ್ನು ಜೀರ್ಣೋದ್ಧಾರ ಮಾಡಿದರು. ಅಲ್ಲಿನ ಜನಜೀವನ, ಸಾಮಾಜಿಕ ವ್ಯವಸ್ಥೆ, ಕೇಂದ್ರೀಕೃತ ಆಡಳಿತ, ನಗರಾಡಳಿತ, ವಿದೇಶಗಳೊಂದಿಗಿನ ಸಂಬಂಧ, ವಿದೇಶಗಳಿಂದ ರಾಯಭಾರಿಗಳನ್ನು ಬರಮಾಡಿಕೊಳ್ಳುವುದು, ರಾಯಭಾರಿಗಳನ್ನು ವಿದೇಶಕ್ಕೆ ಕಳಿಸುವುದು, ಶಿಕ್ಷಣ, ಆಟಗಳು ಮನರಂಜನೆ, ಹಬ್ಬ-ಹರಿದಿನಗಳು ಇನ್ನು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಈ ಮೇಲೆ ಹೆಸರಿಸಿದ ಗ್ರಂಥಗಳು ನಿಖರವಾದ ಇತಿಹಾಸವನ್ನು ತಿಳಿಸುತ್ತವೆ. ಜೊತೆಗೆ ವಿಜಯನಗರ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಅರ್ಥಿಕ ಮತ್ತು ಕಲೆ ಹಾಗೂ ವಾಸ್ತು ಶಿಲ್ಪದ ಕುರಿತು ಮೇಲಿನ ಗ್ರಂಥಗಳು ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

ಆಕರ

1. ರಾಕೇಶ ಬಿ.ಸಿ., ವಿಜಯನಗರ ಕಾಲದ ಇತಿಹಾಸ ಲೇಖನ ಕಲೆ - ತುಳುವ ವಂಶ, ಅಪ್ರಕಟಿತ ಪಿ.ಹೆಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2008 .

ವಿಜಯನಗರ ಅಧ್ಯಯನ ಮಾಲಿಕೆ ಪ್ರಾರಂಭವಾಗಿ 19 ಸಂಚಿಕೆಗಳು ಈವರೆಗೆ ಪ್ರಕಟವಾಗಿದೆ. ಪ್ರತಿ ಸಂಪುಟದಲ್ಲೂ ಹೊಸ ಹೊಸ ವಿಚಾರಗಳು ನೂತನ ಶೋಧಗಳು ವಿಮರ್ಶೆಗಳು ಕಂಡುಬರುತ್ತಲೇ ಇವೆ. ಈ ಸಂಪುಟದಲ್ಲಿ ನಲವತ್ನಾಲ್ಕು ಲೇಖನಗಳನ್ನು ಅಳವಡಿಸಲಾಗಿದೆ. ಈ ಸಂಪುಟವು ಹಿಂದಿನಂತೆ, ನೂತನ ಶಾಸನಗಳು, ಸಾಮ್ರಾಜ್ಯದ ಸಾಮಾಜಿಕ ಆರ್ಥಿಕ ಸ್ಥಿತಿಯ ಬಗೆಗೆ ಸ್ಥಾನಿಕ ಪ್ರದೇಶಗಳ ಮೇಲೆ ಕೇಂದ್ರದ ನೀತಿಯ ಪ್ರಭಾವ ಇತ್ಯಾದಿ ಹಲವಾರು ವಿವರಗಳನ್ನು ಒಳಗೊಂಡಿವೆ. ಇವುಗಳನ್ನು ಆಧರಿಸಿ ವಿಜಯನಗರ ಸಾಮ್ರಾಜ್ಯದ ಬಗೆಗೆ ಹೊಸ ವಿಚಾರಗಳನ್ನು ಅರಿಯಲು ಸಹಾಯಕವಾಗುತ್ತದೆಂದು ಭಾವಿಸಬಹುದಾಗಿದೆ. ಸಂಪುಟವು ಒಳಗೊಂಡಿರುವ ಲೇಖನಗಳು ವಿಚಾರಪ್ರದವೂ, ಬೋಧಪ್ರದವೂ, ನೂತನ ಆವಿಷ್ಕಾರಗಳನ್ನು ಒಳಗೊಂಡವುಗಳೂ ಆಗಿ ಮೂಡಿಬಂದಿರುವುದು ಮಹತ್ವದ ವಿಷಯವಾಗಿದೆ.



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು